ಡಾ. ಅಶೋಕ ಆಳ್ವ

ಸಿರಿ ಕಾವ್ಯಾಲೋಕನ

ಸಿರಿ ಕಾವ್ಯಾಲೋಕನ

ಡಾ. ಅಶೋಕ ಆಳ್ವ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳುಭವನ, ಉರ್ವಸ್ಟೋರ್, ಮಂಗಳೂರು

SIRI KAVYALOKANA
A book about Siri Cult by
Dr. Ashok Alva
8-8/2,(26), 'Anaavarana'
Lord Krishna Estate, Iddya, Surathkal - 575 014
Mobile : 9449082759

Chief Editor
A.C. Bhandary
President, Karnataka Tulu Sahitya Academy

Publisher
Chandrahasa Rai B.
Registrar, Karnataka Tulu Sahitya Academy

Published by
Karnataka Tulu Sahitya Academy
Mangaluru - 575 006
Dakshina Kannada, Karnataka, INDIA
Tel : +91 824 2459389
Email : tulu.academy@yahoo.co.in

© Karnataka Tulu Sahithya Academy

First Impression : 2019
No. of copies : 500
Paper used : 80 gsm NS Maplitho   Size : Demy 1/8
Pages : 390   Price : Rs. 350

Cover Design : **Adve Purushothama**

Designed & printed at
Aakrithi Prints
Light House Hill Road, Mangaluru - 1
Phone : 0824 2443002

ಅಧ್ಯಕ್ಷರ ಮಾತು

ತುಳುನಾಡಿನ ಸಾಂಸ್ಕೃತಿಕ ಗುರುತನ್ನು ಉದ್ದೀಪಿಸುವ, ಗಟ್ಟಿಗೊಳಿಸುವ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕೆಲಸಗಳನ್ನು ಬಹಳ ಉಮೇದಿನಿಂದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ನಡೆಸಿಕೊಂಡು ಬರುತ್ತಿದೆ. ಹಲವು ದಶಕಗಳಿಂದ ನಮ್ಮ ಹಿರಿಯರು ನಮ್ಮ ನಾಡು ಮತ್ತು ಪರಂಪರೆಯ ಕುರಿತಂತೆ ಹತ್ತು ಹಲವು ಕೆಲಸಗಳನ್ನು, ಚಿಂತನೆಗಳನ್ನು ಮಾಡಿದ್ದಾರೆ. ಆದರೆ ಪ್ರಬಲ ಭಾಷೆ ಮತ್ತು ಸಂಸ್ಕೃತಿಗಳು ತುಳುವನ್ನು ಮಸುಕುಗೊಳಿಸುತ್ತಿರುವ ಈ ಸಂದರ್ಭದಲ್ಲಿ ನಮ್ಮ ಭಾಷೆ, ಸಂಸ್ಕೃತಿ, ಚರಿತ್ರೆಯ ಕುರಿತಂತೆ ಆದರಾಭಿಮಾನ ಮೂಡುವಂತೆ ಮಾಡುವ ಸಂಘಟನಾತ್ಮಾಕ ಕೆಲಸಗಳು, ಜೊತೆಗೆ ಈ ನಾಡಿನ ಸಾಂಸ್ಕೃತಿಕ ಅಸ್ತಿತ್ವವನ್ನು, ಅಸ್ಮಿತೆಯನ್ನು ನಿಖರವಾಗಿ ಗುರುತಿಸುವ ಅಧ್ಯಯನಗಳು ಹೆಚ್ಚು ಹೆಚ್ಚು ನಡೆಯಬೇಕಾದ ತುರ್ತು ಇವತ್ತು ಇದೆ. ಈ ವಿಶಾಲ ಮುನ್ನೋಟವನ್ನು ಇಟ್ಟುಕೊಂಡು ಅಕಾಡೆಮಿಯು, ಕಳೆದೆರಡು ವರ್ಷಗಳಿಂದ ವಿವಿಧ ತಾಲೂಕು, ಜಿಲ್ಲೆಗಳಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿಕೊಂಡು ಬಂದಿದೆ. ವಿವಿಧ ಗೋಷ್ಠಿಗಳನ್ನು, ಚಾವಡಿ ಕಾರ್ಯಕ್ರಮಗಳನ್ನು ಏರ್ಪಡಿಸಿದೆ. ಶಾಲಾ ಕಾಲೇಜು ಮಕ್ಕಳಿಗೆ ನಿರಂತರವಾಗಿ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದೆ. ಬೇರೆ ಬೇರೆ ಸಾಹಿತಿಗಳು, ವಿದ್ವಾಂಸರು ಬರೆದಿರುವ ಪುಸ್ತಕಗಳನ್ನು ಪ್ರಕಟಿಸಿ ಭಾಷೆ, ಸಮಾಜ, ಸಮುದಾಯವನ್ನು ಕಟ್ಟುವ ಕೆಲಸವನ್ನು ಮಾಡುತ್ತಿದೆ.

ಡಾ. ಅಶೋಕ ಆಳ್ವರು ಉಡುಪಿಯ ಕರ್ನಾಟಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದಲ್ಲಿ ಸಂಶೋಧಕರಾಗಿದ್ದಾಗಲೇ ಕರ್ಗಿ ಶೆಡ್ತಿಯವರಿಂದ ಸಿರಿ ಪಾಡ್ದನ ಹಾಡಿಸಿ ದಾಖಲಿಸಿ 2009ರಲ್ಲಿ 'ಸಿರಿ ಕಾವ್ಯಲೋಕ' ಎನ್ನುವ ಕೃತಿಯನ್ನು ಪ್ರಕಟಿಸಿದ್ದರು. ಈಗ ಅವರ 'ಸಿರಿ ಕಾವ್ಯಾಲೋಕನ' ಎನ್ನುವ ಕೃತಿಯನ್ನು ತುಳು ಸಾಹಿತ್ಯ ಅಕಾಡೆಮಿ ಪ್ರಕಟಿಸುತ್ತಿದೆ. ಈ ಕೃತಿಯಲ್ಲಿ ಶ್ರೀಮತಿ ಕರ್ಗಿ ಶೆಡ್ತಿಯವರು ಹಾಡಿರುವ ಕಾವ್ಯದ ಜೊತೆಗೆ ಈ ಮೊದಲೇ ಪ್ರಕಟಗೊಂಡಿರುವ ಮಾಚಾರು

ಗೋಪಾಲ ನಾಯ್ಕ, ಗಿಡಿಗೆರೆ ರಾಮಕ್ಕ ಮುಗ್ಗೇರ್ತಿ, ಅಮೃತ ಸೋಮೇಶ್ವರರು ಸಂಗ್ರಹ ಮಾಡಿರುವ ಸತ್ಯನಾಪುರದ ಸಿರಿ, ಪೊಳಲಿ ಶೀನಪ್ಪ ಹೆಗ್ಡೆಯವರು ಸಂಗ್ರಹಿಸಿರುವ ಅಕ್ಕೆರೆಸು ಪೂಂಜೆದಿ ಈ ಪಠ್ಯಗಳ ಜೊತೆಗೆ, ಜೇರಗುಡ್ಡೆಯ ಕುಮಾರ ಪಾತ್ರಿ ಶಾಮರಾಯ ಶೆಟ್ಟಿ, ಬೆಳ್ತಂಗಡಿ ಕುಂಬಾರಕೊಪ್ಪದ ಸಿರಿಪಾತ್ರಿ ರಾಮಕ್ಕ ಹಾಗೂ ಕಾರ್ಕಳ ಮಾಳದ ಅಬ್ಬಗ ದರ್ಶನಪಾತ್ರಿ ಲೀಲಾ ಶೆಟ್ಟಿ ಇವರು ಹಾಡಿರುವ ಅಪ್ರಕಟಿತ ಸಿರಿ ಪಠ್ಯಗಳನ್ನು ಜೊತೆ ಜೊತೆಗೆ ಇಟ್ಟುಕೊಂಡು ತೌಲನಿಕ ಅಧ್ಯಯನವನ್ನು ಡಾ. ಆಳ್ವರು ಮಾಡಿದ್ದಾರೆ. ತನ್ನ ಅಧ್ಯಯನದಲ್ಲಿ ಈ ಹಲವು ಪಠ್ಯಗಳಲ್ಲಿ ಇರುವ ಸಾಮ್ಯತೆಗಳನ್ನು ಮತ್ತು ಭಿನ್ನತೆಗಳನ್ನು ಶೋಧಿಸಿದ್ದಾರೆ. ಬೇರೆ ಬೇರೆ ವ್ಯಕ್ತಿಗಳು ಹಾಡುವ ಒಂದೇ ಪಠ್ಯ ಅವರವರ ಸಾಮಾಜಿಕ, ಪ್ರಾದೇಶಿಕ, ಆರ್ಥಿಕ ಬದುಕಿನ ವ್ಯತ್ಯಾಸದಲ್ಲಿ ಹೇಗೆ ಭಿನ್ನ ಭಿನ್ನ ಪಠ್ಯವಾಗಿ ರೂಪುಗೊಳ್ಳುತ್ತದೆ ಎನ್ನುವುದನ್ನು ಈ ಅಧ್ಯಯನ ತೋರಿಸಿಕೊಟ್ಟಿದೆ. ಹಾಗಾಗಿ ಮೌಖಿಕ ಪಠ್ಯಗಳಿಗೆ ಲಿಖಿತ ಪಠ್ಯಗಳಂತೆ ಒಂದೇ ಅವತರಣಿಕೆ ಇರುವುದಿಲ್ಲ. ಒಂದೇ ಪಠ್ಯ ವಿವಿಧ ಸನ್ನಿವೇಶ ಗಳಲ್ಲಿ ಆ ಸಂದರ್ಭದ ವಾಸ್ತವವನ್ನು ಕಟ್ಟಿಕೊಡುವ ಸೃಜನಶೀಲ ಪಠ್ಯವಾಗುತ್ತದೆ ಎನ್ನುವುದನ್ನು ಈ ಅಧ್ಯಯನದಿಂದ ತಿಳಿಯಬಹುದು. ಮಾತ್ರವಲ್ಲ ಹಿರಿಯರಿಂದ, ಪರಿಸರದಿಂದ, ಆಚರಣೆಗಳ ಸಂದರ್ಭದಿಂದ ರೂಪುಗೊಳ್ಳುವ ಪಾಡ್ದನ ಹಾಡುಗಾರರ ಮನಸ್ಸು, ತನ್ನ ಬದುಕಿನ ಕಥೆ, ಸ್ಥಿತಿ ಗತಿ, ಸಾಮಾಜಿಕ ಹಿನ್ನೆಲೆಯಲ್ಲಿ ಹಾಡು ಹೆಣೆಯುವ ಸೃಜನಶೀಲ ಪ್ರತಿಭಾಶಕ್ತಿಯನ್ನು ಹೇಗೆ ಗಳಿಸಿಕೊಳ್ಳುತ್ತದೆ ಎನ್ನುವ ಕಡೆಗೂ ಈ ಅಧ್ಯಯನ ಗಮನಹರಿಸಿದೆ. ಹಾಗಾಗಿ ಸಿರಿಯ ಪಠ್ಯಗಳ ಅಧ್ಯಯನ ಚರಿತ್ರೆಯ ಅಧ್ಯಯನ ಮಾತ್ರವಲ್ಲ, ಅದು ಚರಿತ್ರೆಯನ್ನು ವರ್ತಮಾನದಲ್ಲಿ ಮರುಕಳಿಸುವ ಸಾಮಾಜಿಕತೆಯ ಅಧ್ಯಯನವೂ ಹೌದು. ಜೊತೆಗೆ ಮೌಖಿಕ ಪಠ್ಯಜಾತಿ, ಲಿಂಗ, ಪ್ರದೇಶ, ಆರ್ಥಿಕತೆ, ಕಾಲ ಸಂದರ್ಭಗಳಲ್ಲಿ ಬಹುಪಠ್ಯವಾಗುವ ವಿಧಾನದ ಅಧ್ಯಯನವೂ ಹೌದು. ಇಂಥ ಮಹತ್ವದ ಅಧ್ಯಯನವನ್ನು ನಡೆಸಿರುವ ಅಶೋಕ ಆಳ್ವ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ. ಚಂದ್ರಹಾಸ ರೈ ಹಾಗೂ ಅಕಾಡೆಮಿಯ ಸರ್ವ ಸದಸ್ಯರನ್ನು ನೆನಪಿಸಿಕೊಳ್ಳುತ್ತೇನೆ ಹಾಗೂ ಈ ಪುಸ್ತಕವನ್ನು ಬಹಳ ಸುಂದರವಾಗಿ ಮುದ್ರಿಸಿದ ಆಕೃತಿ ಪ್ರಿಂಟ್ಸ್‌ನ ಕಲ್ಲೂರು ನಾಗೇಶ ಹಾಗೂ ಶ್ರೀಮತಿ ಭಾರತಿ, ಶ್ರೀಮತಿ ಗಾಯತ್ರಿ ಮತ್ತು ಕುಮಾರಿ ಸುಪ್ರೀತ ಇವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಮಂಗಳೂರು
4 ಮಾರ್ಚ್ 2019

ಎ.ಸಿ. ಭಂಡಾರಿ
ಅಧ್ಯಕ್ಷರು,
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಮುನ್ನುಡಿ

ಸಿರಿ ಶೋಧಕ್ಕೆ ಹಾಸಿದ ಹೊಸ ದಲ್ಯ

ತುಳು ಜನಪದ ಮಹಾಕಾವ್ಯ ಪರಂಪರೆಯಲ್ಲಿ 'ಸಿರಿ ಕಾವ್ಯ'ದ ಸಂಗ್ರಹ ಮತ್ತು ಪಠ್ಯ ದಾಖಲಾತಿ ಮತ್ತು ಅವುಗಳ ಪ್ರಕಟಣೆ ಸ್ವಲ್ಪ ತಡವಾಗಿಯೇ ಆರಂಭವಾದರೂ ಕಳೆದ ಮೂವತ್ತು ವರ್ಷಗಳಲ್ಲಿ ಸಿರಿಕೇಂದ್ರಿತವಾಗಿ ನಡೆದ ಬಹುಮುಖಿ ಕೆಲಸಗಳಿಂದಾಗಿ ಕಳೆದ ಮೂರು ದಶಕಗಳ ತುಳು ಜಾನಪದ ಅಧ್ಯಯನದ ಇತಿಹಾಸವು ಪ್ರಭುತ್ವಾತ್ಮಕವಾಗಿ 'ಸಿರಿ ಇತಿಹಾಸ' ಎಂದೇ ಪ್ರಸಿದ್ಧಿ ಪಡೆದಿದೆ. ಈ ವಿದ್ಯಮಾನದ ಹಿಂದೆ ಅನೇಕ ಸಂಗತಿಗಳು ಕೆಲಸಮಾಡಿವೆ. ಕನ್ನಡ ವಿಶ್ವವಿದ್ಯಾಲಯವು ಅಮೃತ ಸೋಮೇಶ್ವರರು ಸಂಪಾದಿಸಿದ 'ತುಳು ಪಾಡ್ದನ ಸಂಪುಟ'ವನ್ನು ಪ್ರಕಾಶನ ಮಾಡಿದೆ(1997). ಇದರಲ್ಲಿ ಅವರು ಬಹಳ ಹಿಂದೆಯೇ ಸಂಗ್ರಹಿಸಿದ 'ಸತ್ಯನಾಪುರದ ಸಿರಿ' ತುಳುಪಠ್ಯವು ಕನ್ನಡ ಅನುವಾದದೊಂದಿಗೆ ಸೇರ್ಪಡೆಯಾಗಿದೆ. ಫಿನ್ಲೆಂಡ್‌ನ ತುರ್ಕು ವಿಶ್ವವಿದ್ಯಾಲಯದ ಜಾನಪದ ಪ್ರಾಧ್ಯಾಪಕ ಲೌರಿ ಹಾಂಕೊ ಅವರು 1989ರಲ್ಲಿ ಫಿನ್ನಿಷ್ – ಇಂಡಿಯಾ ಜಾನಪದ ಕ್ಷೇತ್ರಕಾರ್ಯ ಶಿಬಿರ ಏರ್ಪಡಿಸಿದಾಗ ಉಜಿರೆ ಬಳಿಯ ಮಾಚಾರು ಗೋಪಾಲ ನಾಯ್ಕರ ಸಿರಿ ದಲ್ಯವನ್ನು ಕಂಡದ್ದು ಮತ್ತು ಅದರಿಂದ ಪ್ರಭಾವಿತರಾಗಿ 1990ರಲ್ಲಿ 'ಮೌಖಿಕ ಮಹಾಕಾವ್ಯ ಯೋಜನೆ'ಯಲ್ಲಿ ಗೋಪಾಲ ನಾಯ್ಕರ ಸಿರಿಕಾವ್ಯದ ಪಠ್ಯವನ್ನು ಬಹು ಮಾಧ್ಯಮಗಳ ಮೂಲಕ ದಾಖಲಾತಿ ಮಾಡಿದ್ದು, ಆ ಪಠ್ಯದ ಲಿಪ್ಯಂತರ ಮತ್ತು ಇಂಗ್ಲಿಷ್ ಅನುವಾದ ಮಾಡಿಸಿದ್ದು, ಜೊತೆಗೆ ಸಿರಿ ಆರಾಧನೆಯ ಬಹುರೂಪಗಳನ್ನು ಬಹುಮಾಧ್ಯಮಗಳಲ್ಲಿ ದಾಖಲಾತಿ ಮಾಡಿ ಅಧ್ಯಯನ ಮಾಡಿ, ಮೂಲ ಪಠ್ಯ ಹಾಗೂ ಇಂಗ್ಲಿಷ್ ಅನುವಾದದ ಎರಡು ಬೃಹತ್ ಸಂಪುಟಗಳನ್ನು ಮತ್ತು ದಾಖಲಾತಿ ಹಾಗೂ ಪಠ್ಯ ನಿರ್ಮಾಣದ ಅಧ್ಯಯನದ ಒಂದು ಸಂಪುಟವನ್ನು ಪ್ರಕಟಮಾಡಿದ್ದು ಸಿರಿ ಅಧ್ಯಯನದ ಮಹಾಯಾನದ ಹೆಬ್ಬಾಗಿಲು ಆಯಿತು(1998). ಲೌರಿ ಹೊಂಕೊ ಅವರ ಈ ಪ್ರಕಟಣೆಯಿಂದ ಆದ ಅನೇಕ ಮಹತ್ವದ ಬೆಳವಣಿಗೆಗಳಲ್ಲಿ ಮುಖ್ಯವಾದುದು: ಸಿರಿಕಾವ್ಯವನ್ನು ಹಾಡಿದವರ ಅಂದರೆ ಒಂದು ನಿರ್ದಿಷ್ಟ ಪಠ್ಯವನ್ನು ತಮ್ಮ ಪರಂಪರೆಯ ಸೊತ್ತು ಎಂದು

ಕಾಪಾಡಿಕೊಂಡು ಬಂದವರ ಹೆಸರಿನಲ್ಲಿ ಗುರುತಿಸುವ ಜನಪರ ದೃಷ್ಟಿಕೋನ. ಪ್ರೊ. ಎ.ವಿ. ನಾವಡ ಅವರು ಸಂಗ್ರಹಿಸಿ ಪ್ರಕಟಿಸಿದ 'ಗಿಡಿಕೆರೆ ರಾಮಕ್ಕ ಮುಗ್ಗೇರ್ತಿ ಕಟ್ಟಿದ ಸಿರಿ ಪಾಡ್ದನ'ದ ಪ್ರಕಟಣೆ ಈ ದೃಷ್ಟಿಯಿಂದ ಮುಖ್ಯವಾದುದು. ಇದನ್ನು ಪ್ರಕಾಶನ ಮಾಡಿದ್ದು ಕನ್ನಡ ವಿಶ್ವವಿದ್ಯಾಲಯ(1999). ಹೀಗೆ ತುಳು ಭಾಷೆಯ ಸಿರಿ ಕಾವ್ಯವು ತುಳುನಾಡಿನಿಂದ ಹೊರಗೆ ಕರ್ನಾಟಕದಲ್ಲಿ ಮತ್ತು ಹಾಂಕೊ ಅವರ ಪ್ರಯತ್ನದಿಂದ ಫಿನ್ಲೆಂಡ್ ಮತ್ತು ವಿದೇಶಗಳಲ್ಲಿ ಗಮನ ಸೆಳೆಯಿತು.

ಸಿರಿ ಕಾವ್ಯದ ಅಧ್ಯಯನಕ್ಕೆ ಉದ್ದೀಪನವಾದ ಇನ್ನೊಂದು ವಿದ್ಯಮಾನವೆಂದರೆ ಕಳೆದ ಶತಮಾನದ ಕೊನೆಯ ದಶಕಗಳಲ್ಲಿ ಮುನ್ನೆಲೆಗೆ ಬಂದ ಸ್ತ್ರೀವಾದಿ ಅಧ್ಯಯನ. ಈ ತಾತ್ವಿಕತೆ ಸಾಹಿತ್ಯದ ಅಧ್ಯಯನದ ಮೂಲಕ ಜಾನಪದ ಅಧ್ಯಯನಕ್ಕೂ ಪ್ರವೇಶ ಮಾಡಿದ ಕಾರಣ, ಸಹಜವಾಗಿಯೇ ಸ್ತ್ರೀಪ್ರಜ್ಞೆ ಕೇಂದ್ರವಾಗಿದ್ದ ಸಿರಿಕಾವ್ಯವು ಸಂಶೋಧಕರ ವಿಮರ್ಶಕರ ಮೆಚ್ಚಿನ ಪಠ್ಯವಾಯಿತು.

ಪ್ರೊ. ಲೌರಿ ಹಾಂಕೊ ಅವರು ಧರ್ಮಸ್ಥಳ – ಉಜಿರೆ ಪರಿಸರದಲ್ಲಿ 'ಫಿನ್ನಿಷ್-ಇಂಡಿಯ ಕ್ಷೇತ್ರಕಾರ್ಯ ತರಬೇತಿ ಶಿಬಿರ'ವನ್ನು 1989ರಲ್ಲಿ ನಡೆಸಿದಾಗ ಅಶೋಕ ಆಳ್ವರು ಹಾಂಕೊ ಅವರ ನೇತೃತ್ವದ ತುರ್ಕು ತಂಡದ ಸದಸ್ಯರಾಗಿ ಹತ್ತು ದಿನಗಳ ಪ್ರಾಯೋಗಿಕ ಅನುಭವನ್ನು ಪಡೆದಿದ್ದರು. ಆಗಲೇ ಅವರು ಗೋಪಾಲ ನಾಯ್ಕರ ಸಿರಿ ಕಾವ್ಯ ಮತ್ತು ದಲ್ಯದ ನೇರ ಸಂಪರ್ಕಕ್ಕೆ ಬಂದಿದ್ದರು. ಹಾಂಕೊ ಅವರ 'ಮೌಖಿಕ ಮಹಾಕಾವ್ಯ ಯೋಜನೆ'ಯ ಕೊನೆಯ ಹಂತದಲ್ಲಿ ಅಶೋಕ ಆಳ್ವರು ಅದರಲ್ಲಿ ಸಕ್ರಿಯವಾಗಿ ಪಾಲುಗೊಂಡು, ಹಾಂಕೊ ತಂಡದ ಜೊತೆಗೆ ಸೇರಿಕೊಂಡು ಧರೆಗುಡ್ಡೆಯ ಶ್ಯಾಮ ಶೆಟ್ಟಿ ಅವರ ಸಿರಿಕಾವ್ಯದ ದಾಖಲಾತಿಯಲ್ಲಿ ಪಾಲುಗೊಂಡರು. ಸಿರಿಕಾವ್ಯದಲ್ಲಿ ಉಲ್ಲೇಖಗೊಂಡ ಸ್ಥಳಗಳ ಪರಿಸರದಲ್ಲಿ ಕ್ಷೇತ್ರಕಾರ್ಯ ನಡೆಸಿದರು. ಈ ರೀತಿಯ ಸಿರಿ ಅಧ್ಯಯನದ ದರ್ಶನದ ಪ್ರಭಾವಲಯಕ್ಕೆ ಒಳಗಾದ ಡಾ. ಅಶೋಕ ಆಳ್ವರು ಬೆಳ್ತಂಗಡಿ ತಾಲೂಕಿನ ಕರ್ಗಿ ಶೆಡ್ತಿ ಅವರಿಂದ ಸಿರಿ ಕಾವ್ಯವನ್ನು ಸಂಗ್ರಹಿಸಿ ದಾಖಲಾತಿ ಮಾಡಿ, ಕನ್ನಡ ಅನುವಾದ ಸಹಿತ ಹೊರತಂದ 'ಸಿರಿ ಕಾವ್ಯಲೋಕ' ಗ್ರಂಥದ ಪ್ರಕಟಣೆ ಒಂದು ಮಹತ್ವದ ದಾಖಲೆ (ಪ್ರಾದೇಶಿಕ ಜನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ, 2009).

ಜರ್ಮನಿಯ ವ್ಯೂರ್ತ್ಸ್ ಬುರ್ಗ್ ವಿಶ್ವವಿದ್ಯಾಲಯದ ಇಂಡಾಲಜಿ ಪೀಠದಲ್ಲಿ ಪ್ರಾಧ್ಯಾಪಕಿಯಾಗಿದ್ದ ಹೈದ್ರೂನ್ ಬ್ರೂಕ್ನರ್ ಅವರು ತಮ್ಮ 'ಜನಪದ ಪರಂಪರೆಗಳು' ಎಂಬ ಸಂಶೋಧನಾ ಯೋಜನೆಯಲ್ಲಿ ತುಳು ಜನಪದ ಮಹಾಕಾವ್ಯಗಳನ್ನು ಕುರಿತ ಸಂಪ್ರಬಂಧಗಳ ಸಂಕಲನವೊಂದನ್ನು ಪ್ರಕಟಿಸಿರುವುದು ಸಿರಿ ಕಾವ್ಯದ ಪಠ್ಯಗಳ ತೌಲನಿಕ ಅಧ್ಯಯನದಲ್ಲಿ ಒಂದು ಪ್ರಮುಖ ಮೈಲಿಗಲ್ಲು : 'Oral Traditions in South India : Essays on Tulu Oral Epics' Edited by Heidrun Brueckner and B A Viveka Rai (Harrassowitz Verlag, Wiesbaden , 2017). ಈ ಸಂಕಲನದಲ್ಲಿ

ಸಿರಿ ಕಾವ್ಯಕ್ಕೆ ಸಂಬಂಧಪಟ್ಟ ಮೂರು ಲೇಖನಗಳಿವೆ: 'Siri Epic Texts :Perspectives of Understanding '(K.Chinnappa Gowda); 'Siri in the Poetic World of Kargi Shedti: Selected Episodes and Comparisons' (K. Ashok Alva); 'Three Unpublished Versions of the Siri Paddana : An Analysis' (Pauline Schuster -Loehlau).

ಅಶೋಕ ಆಳ್ವರು ಈ ಗ್ರಂಥಕ್ಕೆ ಬರೆದ ಲೇಖನದ ಅನುಭವದ ಹಿನ್ನೆಲೆಯಲ್ಲಿ ಇನ್ನಷ್ಟು ಸಿರಿ ಪಠ್ಯಗಳನ್ನು ಸೇರಿಸಿಕೊಂಡು, ಸಿರಿಕಾವ್ಯದ ಇನ್ನಷ್ಟು ಪ್ರಸಂಗಗಳನ್ನು ಆರಿಸಿಕೊಂಡು ತೌಲನಿಕ ಅಧ್ಯಯನದ ಹರಹನ್ನು ವಿಸ್ತರಿಸಿಕೊಂಡು 'ಸಿರಿ ಕಾವ್ಯಾಲೋಕನ' ಎಂಬ ಅಧ್ಯಯನ ಗ್ರಂಥವನ್ನು ರಚಿಸಿದ್ದಾರೆ.

ಆಳ್ವರು ಹೋಲಿಕೆಗಾಗಿ ಆಯ್ದುಕೊಂಡ ಸಿರಿಕಾವ್ಯಗಳಲ್ಲಿನ ಮುಖ್ಯ ಭಾಗಗಳು/ ಪ್ರಸಂಗಗಳು :

ಸತ್ಯನಾಪುರದ ಅಜ್ಜನವರ ಪೂರ್ವ ವೃತ್ತಾಂತ; ಲಂಕೆಲೋಕನಾಡಿನ ಜೀರ್ಣೋದ್ಧಾರ, ಸಿರಿಯ ಹುಟ್ಟು; ಬಸಲೂರ ಕಾಂತುಪೂಂಜನ ಜೊತೆಗೆ ಸಿರಿಯ ಮದುವೆಯ ಪ್ರಸ್ತಾವ, ಮದುವೆ; ಸಿರಿ ಋತುಮತಿಯಾಗುವುದು, ಗರ್ಭಿಣಿಯಾಗುವುದು, ಸೀಮಂತದ ಆಚರಣೆ; ಸತ್ಯನಾಪುರದ ಅಜ್ಜನ ಮರಣ; ಅಜ್ಜನ ಶವಸಂಸ್ಕಾರ, ಕಾಂತುಪೂಂಜನ ಮೋಸದ ಪಂಚಾತಿಕೆ, ಸಿರಿ ದೇಶಾಂತರ ಹೊರಡುವುದು; ಸಿರಿ ಬಸಲೂರ ಅರಮನೆ ಇಳಿದು ದೇಶಾಂತರ ಹೋಗುವುದು; ಬೋಲಬಾರಿ ಕ್ಷತ್ರಿಯರು; ಬೋಳದ ಕಾಡಲ್ಲಿ ಕುಮಾರ ಮತ್ತು ದಾರುವಿನ ಮಾಯ; ಕೊಟ್ಟರಾಡಿಯ ಕೊಡ್ಸರಾಳ್ವ; ಸಾಮು ಮತ್ತು ಸಿರಿಯ ಸತ್ಯದ ಪರೀಕ್ಷೆ; ಸಿರಿಯು ಗರ್ಭಿಣಿ, ಸೊನ್ನೆಯ ಹೆರಿಗೆ, ಸಿರಿಯ ಅಂತ್ಯ; ಸೊನ್ನೆಗಿಂಡೆಯರು; ಗಿಂಡೆಯ ಪ್ರಸ್ತಾವ; ಗುರುಮಾರ್ಲ ಜೊತೆಗೆ ಸೊನ್ನೆಯ ಮದುವೆ; ಗಿಂಡೆಯ ಮೈನೆರೆಯುವಿಕೆ; ಸೊನ್ನೆ ಮೈನೆರೆಯುವಿಕೆ ಮತ್ತು ಸೀಮಂತ; ಅಬ್ಬಯ ದಾರಯ; ಅಬ್ಬಯ ದಾರಯರ ಚೆನ್ನೆ ಆಟ; ಅಬ್ಬಯ ದಾರಯರ ಸಾವಿನ ನಂತರದ ಘಟನೆಗಳು; ನಂದೊಳಿಗೆ ನಾಲ್ಕು ಸ್ಥಾನ.

ಸಿರಿ ಕಾವ್ಯದ ಮೂರು ತಲೆಮಾರುಗಳ ಕಥೆಯ ಸಂವಿಧಾನದ ಒಳಗಿನ ಸಂರಚನೆಯ ಅವಯವಗಳನ್ನು ಬೇರ್ಪಡಿಸುವುದು ಬಹಳ ಸವಾಲಿನ ಕೆಲಸ. ಕಥಾಸಂವಿಧಾನಕ್ಕೆ ತಿರುವನ್ನು ಕೊಡುವ ಘಟನೆಗಳನ್ನು ಆಧರಿಸಿಕೊಂಡು ಆಯ್ಕೆ ಮಾಡುವುದು ಒಂದು ಕ್ರಮ. ಅಂತಹ ಅನೇಕ ಪ್ರಸಂಗಗಳು ಇಲ್ಲಿ ವಿಶ್ಲೇಷಣೆಗೆ ಒಳಗಾಗಿವೆ. ಕೆಲವೊಮ್ಮೆ ಸಂಘರ್ಷ ಕೇಂದ್ರಿತವಾದ ಸಂವಾದದ ಸನ್ನಿವೇಶಗಳನ್ನು ಆಯ್ದುಕೊಂಡು ಭಾಷಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ವಿವೇಚಿಸಬೇಕಾಗುತ್ತದೆ. ಅಂತಹ ಕೆಲವು ನಿದರ್ಶನಗಳು ಇಲ್ಲಿ ದೊರೆಯುತ್ತವೆ. ಆಖ್ಯಾನ / ಉಪಾಖ್ಯಾನ ರೂಪದ ಕಥಾಭಾಗಗಳನ್ನು ಕೂಡಾ ಇಲ್ಲಿ ತೌಲನಿಕವಾಗಿ ಚರ್ಚಿಸಲಾಗಿದೆ. ಕಾವ್ಯದಲ್ಲಿ ಕ್ರಿಯಾಶೀಲವಾಗಿರುವ ಕೆಲವು ಪಾತ್ರಗಳನ್ನು ಆಯ್ಕೆ ಮಾಡಿಕೊಂಡು ಬೇರೆ ಬೇರೆ ಪಠ್ಯಗಳಲ್ಲಿ ಆ ಪಾತ್ರಗಳ ನಿರ್ವಹಣೆ

ಹೇಗೆ ಎಂದು ತೋರಿಸಿಕೊಡಲಾಗಿದೆ. ತೌಲನಿಕ ಅಧ್ಯಯನಕ್ಕೆ ಇರುವ ಸವಾಲುಗಳು ಗೊತ್ತಾಗುವುದು ಇಂತಹ ಪ್ರಾಯೋಗಿಕ ಕೆಲಸಗಳ ಮೂಲಕವೇ.

ಜನಪದ ಮಹಾಕಾವ್ಯವೊಂದರ ಬೇರೆ ಬೇರೆ ಪಠ್ಯಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವಾಗ ಇರಬೇಕಾದ ಎಚ್ಚರವೆಂದರೆ ಈ ಎಲ್ಲವುಗಳೂ ಸ್ವತಂತ್ರ ಪಠ್ಯಗಳು, ಇವು ಪಾಠಾಂತರಗಳು ಅಲ್ಲ ಎನ್ನುವ ಪ್ರಾಥಮಿಕ ತಿಳುವಳಿಕೆ. ಸಿರಿಯಂತಹ ತುಳು ಜನಪದ ಮಹಾಕಾವ್ಯದ ಬೇರೆ ಬೇರೆ ಪ್ರಸಂಗಗಳು ಬೇರೆ ಬೇರೆ ಪಠ್ಯಗಳಲ್ಲಿ ಹೇಗೆ ಪ್ರಕಟವಾಗಿವೆ ಎನ್ನುವುದನ್ನು ಮಂಡಿಸುವಾಗ ಮತ್ತು ವಿವೇಚಿಸುವಾಗ ಈ ಪ್ರಜ್ಞೆ ಅವಶ್ಯಕ. ಒಂದು ಪ್ರಸಂಗವು ಯಾವ ಪಠ್ಯದಲ್ಲಿ ಸರಿಯಾಗಿದೆ, ಯಾವುದರಲ್ಲಿ ಸರಿಯಾಗಿ ಇಲ್ಲ ಎನ್ನುವುದು ಜನಪದ ಪಠ್ಯಗಳಲ್ಲಿ ಮೂಲರೂಪ ಎನ್ನುವುದು ಒಂದು ಇದೆ, ಸರಿಯಾದ ಒಂದು ಪಠ್ಯ ಇದೆ ಎನ್ನುವ ಅಪಕಲ್ಪನೆಯ ಪೂರ್ವಗ್ರಹದಿಂದ ಬರುತ್ತದೆ. ಒಬ್ಬೊಬ್ಬ ಹಾಡುಗಾರರ/ಕಲಾವಿದರ ಪಠ್ಯವು ಅದು ಅವರದ್ದು ಒಬ್ಬರದ್ದೇ ಆಗಿರುವುದಿಲ್ಲ. ಅದು ಅನೇಕ ತಲೆಮಾರುಗಳಿಂದ ಅನೇಕ ಹಾಡುಗಾರರ ಮೂಲಕ ಹರಿದು ಬಂದಿರುತ್ತದೆ. ಗೋಪಾಲ ನಾಯ್ಕ, ಕರ್ಗಿ ಶೆಡ್ತಿ, ಲೀಲಾ, ಶ್ಯಾಮ ಶೆಟ್ಟಿ, ರಾಮಕ್ಕ ಮುಗೇರ್ತಿ–ಇವರು ಪರಂಪರೆಯಿಂದ ತಮಗೆ ದೊರೆತ ಸಿರಿ ಪಠ್ಯಕ್ಕೆ ತಮ್ಮದೇ ಆದ ಕೆಲವು ನುಡಿಗಟ್ಟುಗಳನ್ನು ವಿವರಣೆಗಳನ್ನು ಸೇರಿಸಿರುತ್ತಾರೆ. ಹಾಗಾಗಿ ಅವರು ಹಾಡಿದ ಪಠ್ಯಕ್ಕೆ ಅವರೇ ಸಂಪೂರ್ಣ ಜವಾಬ್ದಾರರು ಅಲ್ಲ. ಆದರೆ ಅವರಲ್ಲಿ ಸಂಶೋಧಕರು ಪ್ರಶ್ನೆಗಳನ್ನು ಕೇಳಿದಾಗ ಅದಕ್ಕೆ ಸಮರ್ಪಕ ಉತ್ತರಗಳನ್ನು ಕೊಡಲು ಅವರು ಶಕ್ತರಾಗಿರುತ್ತಾರೆ ಎನ್ನುವುದೇ ಅಂತಹ ಜನಪದ ಕಲಾವಿದರ ಬೌದ್ಧಿಕತೆಯ ಬಗ್ಗೆ ನಮಗೆ ಗೌರವ ಉಂಟಾಗಲು ಕಾರಣ.

ಇಲ್ಲಿ ಕಾಣಿಸಿಕೊಳ್ಳುವ ಸಮಸ್ಯೆಯೆಂದರೆ ಇಂತಹ ಜನಪದ ಮಹಾಕಾವ್ಯಗಳನ್ನು ಅವುಗಳ ಒಳಗಿನ ಪಾತ್ರಗಳನ್ನು, ಆ ಪಾತ್ರಗಳ ನಡವಳಿಕೆಗಳನ್ನು ಮಾತುಗಳನ್ನು, ಕಾವ್ಯದಲ್ಲಿ ನಡೆಯುವ ಮಾನುಷ ಮತ್ತು ಅತಿಮಾನುಷ ಘಟನೆಗಳನ್ನು ಹೇಗೆ ನೋಡಬೇಕು, ಆ ಕಾವ್ಯಗಳ ಪರಂಪರೆಯ ವಕ್ತಾರರಾದ ಕಲಾವಿದರೊಂದಿಗೆ ಎಂತಹ ಪ್ರಶ್ನೆಗಳನ್ನು ಕೇಳಬೇಕು, ಯಾವ ರೀತಿಯ ಸಂವಾದಗಳನ್ನು ನಡೆಸಬೇಕು ಎನ್ನುವುದು. ಅನೇಕರು ಸಿರಿಕಾವ್ಯದ ಕತೆಯನ್ನು ಚಾರಿತ್ರಿಕ ಎಂದು ಭಾವಿಸಿ, ವಾಸ್ತವಿಕತೆಯ ನೆಲೆಯಲ್ಲಿ ಸಮಾಜ ಶಾಸ್ತ್ರೀಯ ನೆಲೆಯಲ್ಲಿ ವಿವರಿಸಲು ತೊಡಗುತ್ತಾರೆ. ಆದರೆ ಈ ಕಾವ್ಯದಲ್ಲಿ ಜನಪದ ಪುರಾಣದ ಸಹಜ ಲಕ್ಷಣಗಳು ಇವೆ ಎನ್ನುವುದನ್ನು ಮರೆಯಲು ಸಾಧ್ಯ ಇಲ್ಲ. ಜನಪದ ಪುರಾಣವೊಂದು ಚರಿತ್ರೆಯ ತುಣುಕುಗಳನ್ನು ಜೋಡಿಸುತ್ತಲೇ ಕಾಲ ಮತ್ತು ದೇಶವನ್ನು ಮೀರುತ್ತಲೇ ಆಚರಣೆಯ ಮೂಲಕ ಸಮಕಾಲೀನ ಆಗುವ ಪ್ರಕ್ರಿಯೆ ಕುತೂಹಲಕಾರಿ. ಈ ದೃಷ್ಟಿಯಿಂದ ಇಂತಹ ಪುರಾಣಪಠ್ಯಗಳ ಬಗ್ಗೆ ಕಲಾವಿದರ ಜೊತೆಗೆ ಸಂವಾದಕ್ಕೆ ಬಹಳ ಮಹತ್ವ ಇದೆ. ಇದರ ಒಂದು ಮಾದರಿಯನ್ನು ಪ್ರೊ. ಲೌರಿ ಹಾಂಕೊ ಅವರು ಸಿರಿಕಾವ್ಯದ ಪಠ್ಯದ ದಾಖಲೀಕರಣದಲ್ಲಿ ಗೋಪಾಲ ನಾಯ್ಕರ ಜೊತೆಗಿನ ಸಂವಾದದ ರೂಪದಲ್ಲಿ ಕೊಟ್ಟಿದ್ದಾರೆ.

ಈ ಹಿನ್ನೆಲೆಯಲ್ಲಿ ಅಶೋಕ ಆಳ್ವರು ಸಿರಿ ಕಾವ್ಯದ ಬಹುಪಠ್ಯಗಳನ್ನು ಆಧಾರವಾಗಿ ಇಟ್ಟುಕೊಂಡು, ಮೇಲೆ ಉಲ್ಲೇಖಿಸಿದ ಪ್ರಸಂಗಗಳು/ಸನ್ನಿವೇಶಗಳು/ಪಾತ್ರಗಳು–ಇವುಗಳ ಮೂಲಕ ತೌಲನಿಕ ಅಧ್ಯಯನದ ಪ್ರಯತ್ನವನ್ನು ಶ್ರದ್ಧಾಪೂರ್ವಕ ಮಾಡಿದ್ದಾರೆ. ಆಳ್ವರು ಅನೇಕ ಸಿರಿ ಪಠ್ಯಗಳನ್ನು ಮುಖಾಮುಖಿಯಾಗಿಸಿ, ಸನ್ನಿವೇಶಗಳನ್ನು ತುಲನೆ ಮಾಡಿರುವ ಕಾರಣ ಅಧ್ಯಯನದ ಹರಹು ವಿಶಾಲವಾಗಿದೆ ಮತ್ತು ಸಂಕೀರ್ಣವಾಗಿದೆ. ತುಳುವಿನ ಮೂಲ ಪಠ್ಯದ ಭಾಗಗಳನ್ನು ಕೊಟ್ಟು ಅವುಗಳ ಕನ್ನಡ ಅನುವಾದವನ್ನು ಕೂಡಾ ಕೊಟ್ಟಿರುವ ಕಾರಣ, ತುಳು ಮತ್ತು ಕನ್ನಡದ ಸಂಶೋಧಕರು ಈ ಗ್ರಂಥದ ಅಧ್ಯಯನದ ಪ್ರಯೋಜನವನ್ನು ಪಡೆಯಲು ಅವಕಾಶ ದೊರೆತಿದೆ. ಸಿರಿ ಕಾವ್ಯದಲ್ಲಿ ಬರುವ ಸಂಘರ್ಷದ ಸನ್ನಿವೇಶಗಳಿಗೆ ಕಲಾವಿದರು ಭಿನ್ನ ನೆಲೆಗಳಲ್ಲಿ ಸ್ಪಂದಿಸಿದ ಬಗೆಗಳು ಅಧ್ಯಯನ ಯೋಗ್ಯವಾಗಿವೆ. ಕರ್ಗಿ, ಲೀಲಾ, ಗಿಡಿಕೆರೆ ರಾಮಕ್ಕ, ಬೆಳ್ತಂಗಡಿ ರಾಮಕ್ಕ ಅವರ ಪ್ರತಿಕ್ರಿಯೆಗಳನ್ನು ಒಂದುಗೂಡಿಸಿ ಸ್ತ್ರೀವಾದಿ ದೃಷ್ಟಿಕೋನವೊಂದನ್ನು ರೂಪಿಸಲು ಸಾಧ್ಯವೇ ಎನ್ನುವ ದೃಷ್ಟಿಯಿಂದ ಇಲ್ಲಿನ ಚರ್ಚೆಗಳಿಗೆ ಮಹತ್ವ ಇದೆ. ಸಿರಿ ಮತ್ತು ಕಾಂತು ಪೂಂಜರ ಸಂಭಾಷಣೆ, ಸಿರಿಯ ಶಾಪದ ಬಗೆಗಳು, ಲೌಕಿಕ ಮತ್ತು ಪೌರಾಣಿಕ ಜಗತ್ತುಗಳ ನಡುವಿನ ಲೋಕದಲ್ಲಿ ಸಿರಿಯ ಇರುವಿಕೆ ಮತ್ತು ಆಗುವಿಕೆ – ಹೀಗೆ ಲೌಕಿಕ ಭಾಷೆಯೊಂದು 'ಮಾಂತ್ರಿಕ ಭಾಷೆ' ಆಗುವ ಪ್ರಕ್ರಿಯೆಯನ್ನು ಇಲ್ಲಿನ ನಿದರ್ಶನಗಳು ಮತ್ತು ಚರ್ಚೆಗಳು – ಇವುಗಳ ನೆರವಿನಿಂದ ಅವಲೋಕಿಸಬಹುದು.

ಹೀಗೆ ಬಹಳ ಸಮೃದ್ಧ ಮಾಹಿತಿಗಳು ಮತ್ತು ಭಿನ್ನ ದೃಷ್ಟಿಕೋನಗಳು ಇಲ್ಲಿ ದೊರೆಯುವ ಕಾರಣ, ಈ ಗ್ರಂಥವು ಮುಂದಿನ ಸಂಶೋಧನೆಗಳಿಗೆ ಮುಖ್ಯ ಆಕರವಾಗುವ ಶಕ್ತಿಯನ್ನು ಹೊಂದಿದೆ.

ಸಿರಿ ಜಾತ್ರೆ ಮತ್ತು ಅಲ್ಲಿನ ಸಿರಿಯ ಆಚರಣೆಗಳಿಗೆ ಸಂಬಂಧಿಸಿದಂತೆ ಡಾ.ಅಶೋಕ ಆಳ್ವ ಅವರು ಕವತ್ತಾರುವಿನಲ್ಲಿ ಕಂಡುಕೊಂಡ ಮಾಹಿತಿಗಳು ಮತ್ತು ಅವುಗಳ ಮೂಲಕ ಅವರು ಶೋಧಿಸಿದ ಸಂಗತಿಗಳು ಅಪೂರ್ವವಾಗಿವೆ ಮತ್ತು ಕುತೂಹಲಕಾರಿಯಾಗಿವೆ. ಸಿರಿಜಾತ್ರೆಯು ಸಾವಿನ ಆಚರಣೆಯಾಗಿರಬಹುದು ಎನ್ನುವುದಕ್ಕೆ ಅವರು ಕ್ಷೇತ್ರಕಾರ್ಯ ಆಧಾರಿತ ಮಾಹಿತಿಗಳನ್ನು ಕೊಡುತ್ತಾರೆ. ಸಿರಿ ಮಹಿಳೆಯರ ಜೊತೆಗಿನ ಸಂದರ್ಶನದ ಭಾಗಗಳು, ಸಿರಿ ಜಾತ್ರೆಯ ಕೆಲವು ವಿಶಿಷ್ಟ ಆಚರಣೆಗಳು ಉತ್ತರಕ್ರಿಯೆಯ ವಿನ್ಯಾಸಗಳನ್ನು ಕಟ್ಟಿಕೊಡುತ್ತವೆ. ಸಿರಿ ಜಾತ್ರೆಯನ್ನು ಕುರಿತ ಅಶೋಕ ಆಳ್ವರ ಈ ಪ್ರಮೇಯವನ್ನು ಇನ್ನಷ್ಟು ಶೋಧಿಸಲು ಅವಕಾಶ ಇದೆ.

ಅಶೋಕ ಆಳ್ವರು ಸಿರಿ ಕಾವ್ಯವನ್ನು ಹಾಡಿದವರ ಬದುಕು, ಅವರು ಕಾವ್ಯವನ್ನು ಪರಂಪರೆಯಿಂದ ಕಲಿತುಕೊಂಡ ಬಗೆ, ಅವರ ಮೌಖಿಕ ಪರಂಪರೆಯ ಶ್ರೀಮಂತಿಕೆ, ಅವರಿಗೆ ದೊರೆತ ಮನ್ನಣೆ ಮತ್ತು ಅವರ ಬದುಕಿನ ನಿಲುವುಗಳನ್ನು ವಿವರವಾಗಿ ಕಟ್ಟಿಕೊಟ್ಟಿದ್ದಾರೆ. ಕರ್ಗಿ ಶೆಡ್ತಿ, ಲೀಲಾ, ಮಾಚಾರು ಗೋಪಾಲ ನಾಯ್ಕ, ಗಿಡಿಕೆರೆ ರಾಮಕ್ಕ ಮುಗೇರ್ತಿ, ಉಜಿರೆ ಸಮೀಪದ ಕುಂಬಾರಕೊಪ್ಪದ ರಾಮಕ್ಕ, ದರೆಗುಡ್ಡೆಯ ಕುಮಾರ ಪಾತ್ರಿ ಶ್ಯಾಮ ಶೆಟ್ಟಿ ಇವರೆಲ್ಲರ ಬದುಕು, ಬವಣೆ, ಕಾವ್ಯಶಕ್ತಿ, ಸಮೂಹ

ಪ್ರೀತಿ–ಇವುಗಳ ಅದ್ಭುತ ಅನಾವರಣ ಇಲ್ಲಿ ದೊರೆಯುತ್ತದೆ. ಇವರೆಲ್ಲ ಜನಪದ ಲೋಕದ ನಮ್ಮ ಬೌದ್ಧಿಕ ಸಂಗಾತಿಗಳು. ಗೋಪಾಲ ನಾಯ್ಕರನ್ನು ಲೌರಿ ಹಾಂಕೊ ಜೊತೆಗೆ ಅನೇಕ ವರ್ಷಗಳ ಕಾಲ ಬೇರೆ ಬೇರೆ ಸಂದರ್ಭಗಳಲ್ಲಿ ನಾನು ಮಾತಾಡಿಸಿದ್ದೇನೆ. ಅಶೋಕ ಆಳ್ವರ ಜೊತೆಗೆ ಕರ್ಗಿ ಶೆಡ್ತಿ ಅವರನ್ನು ಮತ್ತು ಶ್ಯಾಮ ಶೆಟ್ಟಿ ಅವರನ್ನು ಪ್ರತ್ಯಪ್ರತ್ಯೇಕವಾಗಿ ಸಂದರ್ಶನ ಮಾಡಿದ್ದೇನೆ. ಸಿರಿಯ ನಿರ್ಧಾರಗಳ ಬಗ್ಗೆ ಕರ್ಗಿ ಶೆಡ್ತಿ ಅವರ ಸ್ಪಷ್ಟ ನೇರ ನುಡಿಗಳು ಎಲ್ಲ ಸ್ತ್ರೀವಾದಿ ನಿಲುವುಗಳಿಗಿಂತ ಉನ್ನತವಾಗಿವೆ. ಶ್ಯಾಮ ಶೆಟ್ಟಿ ಅವರನ್ನು ಧರೆಗುಡ್ಡೆಯ ಅವರ ಮನೆಯಲ್ಲಿ ಅಶೋಕ ಆಳ್ವ ಮತ್ತು ಜರ್ಮನ್ ಸಂಶೋಧನ ವಿದ್ಯಾರ್ಥಿನಿ ಪೌಲಿನೆ ಜೊತೆಗೆ ಗಂಟೆಗಟ್ಟಲೆ ಆರಾಮವಾಗಿ ಮಾತಾಡಿಸಿದ ನೆನಪು ಈಗಲೂ ಜೀವಂತವಾಗಿದೆ. ಒಮ್ಮೆ ಅವರನ್ನು ಸಮ್ಮಾನಿಸುವ ಭಾಗ್ಯ ನನ್ನ ಪಾಲಿಗೆ ಬಂದಿತ್ತು. ಅಂತಹ ಸೃಜನಶೀಲ ಕಲಾವಿದ ಶ್ಯಾಮ ಶೆಟ್ಟರು ಇಂದು ನಮ್ಮೊಂದಿಗೆ ಇಲ್ಲ ಎನ್ನುವ ವಿಷಾದ ಗಾಢವಾಗಿ ನನ್ನನ್ನು ಕಾಡುತ್ತಿದೆ.

ಸಿರಿ ಕಾವ್ಯದ ಪಠ್ಯ ಮತ್ತು ಸಿರಿ ಆಚರಣೆಯ ಪಠ್ಯ–ಇವು ಎರಡೂ ಒಂದೇ ಅಲ್ಲ, ಇವು ಬೇರೆ ಬೇರೆ ಆಗಿರಬಹುದು. ಯಾವುದೋ ಒಂದು ಕಾಲಘಟ್ಟದಲ್ಲಿ ಸಿರಿ ಆಚರಣೆಯು ಮೊದಲು ಮನೆಯ ಒಳಗಿನ ದಲ್ಯವಾಗಿ ಆರಂಭವಾದದ್ದು, ಮುಂದೆ ಊರಿನ ಗಣ್ಯರ/ದೈವಸ್ಥಾನಗಳ ಮುಖಂಡರ/ದೇವಾಲಯದ ಆಡಳಿತದವರ ಹಿಡಿತದಲ್ಲಿ ಸಾರ್ವಜನಿಕ ಸ್ಥಳದಲ್ಲಿ (ದೇವಾಲಯಗಳ ಪ್ರಾಂಗಣಗಳಲ್ಲಿ) ಜಾತ್ರೆಯ ರೂಪವನ್ನು ಪಡೆದಿರಬಹುದು. ಸಿರಿ ಕಾವ್ಯದ ಪೂರ್ಣ ಜ್ಞಾನ ಉಳ್ಳವರು ಕುಮಾರ ಮತ್ತು ಮುಖ್ಯ ಸಿರಿ ಹೆಣ್ಣಿನ ಪಾತ್ರವನ್ನು ನಿರ್ವಹಿಸಿರಬಹುದು. ಇವು ಊಹೆಗಳು ಮಾತ್ರ. ಆದರೆ ಸಂಶೋಧನೆಯಲ್ಲಿ ಊಹೆಗಳೇ ಮೊದಲು ಹುಟ್ಟಿಕೊಂಡು, ಶೋಧದ ಬೆನ್ನುಹತ್ತಿ ಪ್ರಮೇಯಗಳಾಗಿ, ಮುಂದೆ ಸಂಶೋಧನೆಯ ಫಲಿತಗಳು ದೊರೆಯಬಹುದು.

ಡಾ. ಅಶೋಕ ಆಳ್ವರ 'ಸಿರಿ ಕಾವ್ಯಾಲೋಕನ' ಗ್ರಂಥವು ಸಿರಿ ಕಾವ್ಯ ಮತ್ತು ಸಿರಿ ಆರಾಧನೆ ಆಚರಣೆಗಳ ಬಗ್ಗೆ, ಜನಪದ ಮಹಾಕಾವ್ಯ ಮತ್ತು ಅವುಗಳಿಗೆ ಸಂಬಂಧಪಟ್ಟ ಆಚರಣೆ ಜಾತ್ರೆಗಳ ಬಗ್ಗೆ ಅನೇಕ ಬಗೆಯ ಕುತೂಹಲಗಳನ್ನು ಪ್ರಶೆಗಳನ್ನು ಮರು ಚಿಂತನೆಗಳನ್ನು ಹುಟ್ಟುಹಾಕಿದೆ. ಒಳ್ಳೆಯ ಸಂಶೋಧನಾ ಗ್ರಂಥವು ಎಂದೂ ತೀರ್ಮಾನ ಗಳನ್ನು ಹೇಳುವುದಿಲ್ಲ; ಬದಲಾಗಿ ಅದು ಹತ್ತು ಮಂದಿ ಸಂಶೋಧಕರಿಗೆ ಬೌದ್ಧಿಕ ಆಹಾರವನ್ನು ಒದಗಿಸುತ್ತದೆ. ಡಾ. ಅಶೋಕ ಆಳ್ವರ ಈ ಗ್ರಂಥವು ಸಂಶೋಧನಾ ಸಿರಿಲೋಕದ ಹೊಸ ಸಿರಿಗಳು ಮತ್ತು ಹೊಸ ಕುಮಾರರು ನಿಲ್ಲಲು ಮತ್ತು ಮೈಯಲ್ಲಿ ದರ್ಶನ ಪಡೆಯಲು 'ಸಿರಿ ಶೋಧದ ಹೊಸ ದಲ್ಯ'ವಾಗಿ ತುಳುನಾಡಿನುದ್ದಕ್ಕೂ ಹರಡಲಿ ಎಂದು ಆಶಿಸುತ್ತೇನೆ.

ಮಂಗಳೂರು **ಪ್ರೊ. ಬಿ.ಎ. ವಿವೇಕ ರೈ**
5 ಮಾರ್ಚ್ 2019

ವಾಚಕನತ್ತಣಿಂದ......

ಡಾ. ಅಶೋಕ ಆಳ್ವರ 'ಸಿರಿ ಕಾವ್ಯಾಲೋಕನ' ಕೃತಿಯನ್ನು ಓದಿ ಮುಗಿಸಿದ ಮೇಲೆ ಏನು ಅಭಿಪ್ರಾಯವುಂಟಾಗುತ್ತದೆಂಬುದನ್ನು ಬರೆದು ಕೊಡುವಂತೆ ಅವರು ಕೇಳಿಕೊಂಡುದರಿಂದ ಈ ಕೆಲವು ಮಾತುಗಳನ್ನು ಬರೆದು ಮಿತ್ರಕಾರ್ಯವನ್ನು ಪೂರ್ತಿ ಮಾಡಲು ಹೊರಟಿದ್ದೇವೆ. 'ಸಿರಿ ಕಾವ್ಯಲೋಕ' ಎಂಬ ಹೆಸರಿನಿಂದ ಅವರು ಶ್ರೀಮತಿ ಕರ್ಗಿ ಶೆಡ್ತಿಯವರು ಹಾಡಿದ ಸಿರಿಕಾವ್ಯವನ್ನು ಸಂಪಾದಿಸಿ ಆ ತುಳುಪಠ್ಯವನ್ನು ಕನ್ನಡಕ್ಕೆ ಭಾಷಾಂತರಿಸಿ ವಿಸ್ತೃತವಾದ ಪ್ರಸ್ತಾವನೆಯೊಂದಿಗೆ ಪ್ರಕಟಿಸಿದ್ದಾರೆ. ಆ ಕೃತಿಯ ಮೊದಲಿಗೆ ಅವರ ಅಪೇಕ್ಷೆಯಂತೆ ಕೆಲವು ಮೊದಲ ಮಾತುಗಳನ್ನು ಬರೆದಿದ್ದೆ. ಇದೀಗ ಓದಿದ ಪುಸ್ತಕದ ಬಗೆಗೆ ಓದುಗನ ನೆಲೆಯಲ್ಲಿ ಪುಸ್ತಕದ ಕೊನೆಗೆ ಇರಿಸಿಕೊಳ್ಳಬಹುದಾದ ನಾಲ್ಕು ಮಾತುಗಳನ್ನು ಬರೆಯುತ್ತಿದ್ದೇನೆ.

'ಸಿರಿಕಾವ್ಯಾಲೋಕ' ಕೃತಿಯ ಪ್ರಸ್ತಾವನೆಯಲ್ಲಿ ಡಾ. ಅಶೋಕ ಆಳ್ವರು ಸಿರಿಪಾಡ್ದನಗಳ ಒಂದು ತುಲನಾತ್ಮಕ ವಿಶ್ಲೇಷಣೆಯ ಪ್ರಯತ್ನವನ್ನು ಮಾಡಿದ್ದರು. ಆ ಪ್ರಯತ್ನದ ಮುಂದುವರಿದ ರೂಪವೇ 'ಸಿರಿ ಕಾವ್ಯಾಲೋಕನ'. ಐದು ಪ್ರಕಟಿತ ಮತ್ತು ಮೂರು ಅಪ್ರಕಟಿತ ಸಿರಿಪಾಡ್ದನ ಪಠ್ಯಗಳನ್ನು ಈ ತುಲನಾತ್ಮಕವಾದ ಆಲೋಕನದಲ್ಲಿ ಪರಿಶೀಲಿಸಲಾಗಿದೆ. ಪ್ರಾಯಶಃ ಇದುವರೆಗೆ ಯಾವುದೇ ಪಾಡ್ದನವನ್ನು ಇಷ್ಟು ವಿಸ್ತೃತವಾಗಿ ಪಠ್ಯಗಳ ತುಲನೆಯ ಆಧಾರದಿಂದ ಅಧ್ಯಯನ ಮಾಡಿ ಬರೆಯದಿರುವುದು ಬೇರೆ ಇಲ್ಲವೆಂದು ತೋರುತ್ತದೆ. ಆ ದೃಷ್ಟಿಯಿಂದ ಇದು ಒಂದು ವಿಶಿಷ್ಟವಾದ ಮತ್ತು ಮುಖ್ಯವಾದ ಅಧ್ಯಯನ ಎಂದು ಹೇಳಬಹುದಾಗಿದೆ. ಪಾಡ್ದನಗಳ ತುಲನಾತ್ಮಕ ಅಧ್ಯಯನಕ್ಕೆ ಪೂರಕವಾಗಿ ಪಾಡ್ದನ ವಕ್ತೃಗಳು ಆ ಪಾಡ್ದನಗಳ ಘಟನೆಗಳ ಮತ್ತು ಕಥಾಸಂದರ್ಭಗಳ ಬಗೆಗೆ ನೀಡಿದ ಮಾಹಿತಿಗಳನ್ನು ಆಧಾರವಾಗಿ ತೆಗೆದುಕೊಂಡಿರುವುದು ಇಲ್ಲಿ ಗಮನಿಸಬೇಕಾದ ವಿಷಯ.

ಈಯೆಲ್ಲ ಸಿರಿ ಪಾಡ್ದನ ಪಠ್ಯಗಳ ತುಲನೆಯಿಂದ ಕಂಡುಬರುವ ಮುಖ್ಯಾಂಶವೆಂದರೆ ಸಿರಿಯ ಕಥೆಯ ಮುಖ್ಯಾಂಶದಲ್ಲಿ ಅಥವಾ

ಮುಖ್ಯಧಾರೆಯಲ್ಲಿ ಎಲ್ಲ ಪಠ್ಯಗಳು ಸಮಾನವಾಗಿ ಆಂತರಿಕ ವಿವರಗಳಲ್ಲಿ ವ್ಯತ್ಯಾಸಗಳನ್ನು ತೋರಿಸುತ್ತವೆ. ಈ ವ್ಯತ್ಯಾಸಗಳು ಸಂಭಾಷಣೆಗಳಲ್ಲಿ, ಘಟನೆಗಳ ಕೆಲವು ಆ ಅನುಪೂರ್ವಿಯಲ್ಲಿ, ಕೆಲವು ವಿವರಣೆಗಳಲ್ಲಿ ಕಂಡುಬರುವುದು ಮಾತ್ರವಲ್ಲ, ವ್ಯಕ್ತಿನಾಮ-ಸ್ಥಳನಾಮಗಳಲ್ಲೂ ಕಂಡುಬರುತ್ತವೆಂಬುದನ್ನು ಅಶೋಕ ಆಳ್ವರು ದಾಖಲಿಸಿದ್ದಾರೆ. ಆದರೆ ಈ ವ್ಯತ್ಯಾಸಗಳು ಕೂಡ ಸಾಂಸ್ಕೃತಿಕ ಅಧ್ಯಯನವನ್ನು ಮಾಡುವಲ್ಲಿ ಪೂರಕವೇ ಆಗಿವೆಯೆಂಬುದನ್ನೂ ಅವರು ಗುರುತಿಸಿದ್ದಾರೆ.

ತುಳುನಾಡಿನ ಆರಾಧನೆ ಮತ್ತು ಆಚರಣೆಯ ಪರಂಪರೆಗಳನ್ನು ಗುರುತಿಸಿದಾಗ ಅಲ್ಲಿ ಭೂತಾರಾಧನೆ ಮತ್ತು ನಾಗಾರಾಧಾನೆಗಳೊಂದಿಗೆ ಇತರ ಕೆಲವು ಆರಾಧನ ಪದ್ಧತಿಗಳನ್ನು ಕಾಣುತ್ತೇವೆ. ಭೂತಾರಾಧನೆಯೊಳಗೆ ವಿವಿಧ ಆರಾಧನಕ್ರಮ ವೈವಿಧ್ಯವಿದೆ. ನಾಗಾರಾಧನೆಯಲ್ಲಿಯೂ ವಿವಿಧ ಕ್ರಮಗಳಿವೆ; ಪದ್ಧತಿಗಳಿವೆ. ಅವುಗಳೊಂದಿಗೆ ಪೂರ್ತಿಯಾಗಿ ಭೂತಾರಾಧನೆಯಲ್ಲದ, ಆದರೆ ತುಳುನಾಡಿಗೆ ವಿಶಿಷ್ಟವಾದ ಭೂತಾವೇಶ ಮತ್ತು ದರ್ಶನದ ಮಾದರಿಯನ್ನು ಹೊಂದಿರುವ ಆರಾಧನೆಯ ಪದ್ಧತಿಗಳಿವೆ. ಸಿರಿಯ ಆರಾಧನೆ ಮತ್ತು ಆಚರಣೆ ಈ ರೀತಿಯಲ್ಲಿ ಒಂದಿಷ್ಟು ಭಿನ್ನವಾದುದಾಗಿದೆ. ಕೋಟಿ ಚೆನ್ನಯರ ಆರಾಧನೆಯೂ ಹೀಗೆ ಒಂದಿಷ್ಟು ಭಿನ್ನವಾದುದಾಗಿದೆ. ಕೋಟಿ ಚೆನ್ನಯರನ್ನು ಭೂತಗಳೆಂದು ಉಲ್ಲೇಖಿಸುವುದಿಲ್ಲ; ಪ್ರಾಯಶಃ ದೈವಗಳೆಂದೂ ಉಲ್ಲೇಖಿಸುವುದಿಲ್ಲ. ಅವರ ಆರಾಧನೆಯ ಕೇಂದ್ರಗಳು 'ಭೂತಸ್ಥಾನ'ಗಳಲ್ಲ, 'ಗರಡಿಗಳು'. ಆದರೆ ಗರಡಿಗಳಲ್ಲಿ ಕೋಟಿಚೆನ್ನಯರಲ್ಲದೆ ಇತರ ಭೂತಗಳಿಗೂ ಆಶ್ರಯವಿದೆ. ಕೋಟಿಚೆನ್ನಯರ 'ನೇಮ'ದೊಂದಿಗೆ ಇತರ ಭೂತಗಳಿಗೂ ಆರಾಧನೆ ನಡೆಯುತ್ತದೆ. ಕೋಟಿಚೆನ್ನಯರ ಆರಾಧನೆಯೆಂಬುದು ವೀರಾರಾಧನೆಯ ರೂಪವೆಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ. ಅವರ ಆರಾಧನೆಯ ಸ್ವರೂಪವು ಭೂತಾರಾಧನೆಯ ಕ್ರಮದಲ್ಲಿಯೇ ವಿನ್ಯಾಸಗೊಂಡಿರುವುದನ್ನು ನಾವು ಗಮನಿಸಬಹುದು. ವೇಷಭೂಷಣಗಳು, ಆಯುಧಗಳು, ದರ್ಶನಾವೇಶದ ಪದ್ಧತಿ-ಇತ್ಯಾದಿಗಳೆಲ್ಲಲ್ಲ ಭೂತಾರಾಧನೆಯ ಮಾದರಿಯೇ ಇರುವುದಲ್ಲದೆ ಭೂತಾರಾಧನೆಯಲ್ಲಿ ಬಳಸುವ 'ನೇಮ' ಎಂಬ ಪದವನ್ನು ಕೋಟಿಚೆನ್ನಯರ ಆರಾಧನೆಯಲ್ಲಿಯೂ ಬಳಸಲಾಗುವುದನ್ನು ಗಮನಿಸಬೇಕು.

ಸಿರಿಯ ಆರಾಧನಪದ್ಧತಿ ಭೂತಾರಾಧನೆಗಿಂತ ವಿಭಿನ್ನವಾದುದು. ಆವೇಶ ಮತ್ತು ಮೆಯ್ಯ ನಡುಕವೆಂಬುದು ಭೂತಾರಾಧನೆ- ನಾಗಾರಾಧನೆ-ಕೋಟಿಚೆನ್ನಯರ ಆರಾಧನೆ-ಸಿರಿಯ ಆರಾಧನೆ ಇವೆಲ್ಲವುಗಳಲ್ಲಿಯೂ ಸಮಾನ. ಆದರೆ ಆಚರಣೆಗಳಲ್ಲಿ ವೈವಿಧ್ಯವಿದೆ. ಕೋಟಿಚೆನ್ನಯರ ಆರಾಧನೆಯೆಂಬುದು ಭೂತಾರಾಧನೆಯ ಕ್ರಮವನ್ನು ಹೆಚ್ಚಿನ ಪಾಲು ಅನುಸರಿಸಿದೆ, ಸಿರಿ ಆರಾಧನೆಯು ಅಷ್ಟರ ಮಟ್ಟಿಗೆ ಅನುಸರಿಸಿಲ್ಲವೆಂಬುದು ಗಮನಿಸಬೇಕಾದ ಅಂಶ. ಭೂತಾರಾಧನೆಯಲ್ಲಿ ಆವೇಶ ಹೊಂದುವವರು ಪುರುಷರು ಮಾತ್ರವಾದರೆ ಸಿರಿ ಆರಾಧನೆಯಲ್ಲಿ ಆವೇಶ ಹೊಂದುವವರಲ್ಲಿ ಸ್ತ್ರೀ ಪುರುಷರಿಬ್ಬರೂ ಇದ್ದಾರೆ – ಅದರಲ್ಲೂ ಸ್ತ್ರೀಯರ ಸಂಖ್ಯೆಯೇ ಹೆಚ್ಚು. ಭೂತಾರಾಧನೆಯು ಭೂತಸ್ಥಾನ

ಗಳೆಂಬ ಕೇಂದ್ರಗಳಲ್ಲಿ ನಡೆಯುತ್ತವೆ. ಅವು ದೇವಸ್ಥಾನಗಳಿಗಿಂತ ಭಿನ್ನವಾಗಿವೆ. ದೇವಸ್ಥಾನಗಳಿಗೆ ಭೂತಗಳ ಭಂಡಾರ ಬಂದು ದೇವರ ಭೇಟಿ ಮತ್ತು ವಿವಿಧ ಆಚರಣೆಗಳಾಗುವುದುಂಟು. ದೇವಾಲಯಗಳಿಗೆ ಸಂಬಂಧಿಸಿದಂತೆ ಭೂತಾಲಯಗಳಿರುವುದು ಉಂಟು. ಕೆಲವು ದೇವಾಲಯಗಳ ಆವರಣದಲ್ಲಿಯೇ ಭೂತಗಳ ಭಂಡಾರವಿರುವುದೂ ಉಂಟು. ಆದರೆ ಸಿರಿ ಆರಾಧನೆ ನಡೆಯುವ ಸ್ಥಳಗಳನ್ನು ಸಾಮಾನ್ಯವಾಗಿ 'ಆಲಡೆ'ಗಳೆಂದು ಗುರುತಿಸಲಾಗುತ್ತದೆ. ಸಿರಿ ಆಲಡೆಗಳ ಬಗೆಗೆ ವಿಸ್ತೃತ ಕ್ಷೇತ್ರಕಾರ್ಯ ನಡೆಸಿ ಪ್ರೌಢಪ್ರಬಂಧವನ್ನು ಬರೆದು ಡಾ. ಎಸ್.ಆರ್. ಅರುಣಕುಮಾರ್ ಅವರು ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಅವರು ಆಲಡೆಗಳ ಬಗೆಗೆ ಪುಸ್ತಕಗಳನ್ನೂ ಬರೆದಿದ್ದಾರೆ. ಹೆಚ್ಚಿನ ಆಲಡೆಗಳು ಅಥವಾ ಮುಖ್ಯ ಆಲಡೆಗಳು ದೇವಸ್ಥಾನಕೇಂದ್ರಿತವೇ ಆಗಿರುವುದು ಗಮನಿಸಬೇಕಾದ ವಿಷಯ. ಭೂತಾರಾಧನೆಯೆಂಬುದು ಸಾಮಾನ್ಯವಾಗಿ ದೇವಸ್ಥಾನ ಕೇಂದ್ರಿತವಲ್ಲ. ಸಿರಿ ಆರಾಧನೆಯು ಮುಖ್ಯವಾಗಿ ದೇವಸ್ಥಾನ ಕೇಂದ್ರಿತವಾದ 'ಆಲಡೆ'ಗಳಲ್ಲಿ ನಡೆಯುತ್ತದೆ. ಮೊದಲಿಗೆ ಆಲಡೆಗಳಾಗಿದ್ದ ಈ ಕೇಂದ್ರಗಳು ಅನಂತರ ದೇವಾಲಯಗಳಾಗಿ ಪರಿವರ್ತಿತವಾದುವೂ ಇರಬಹುದು. ಬ್ರಹ್ಮಸ್ಥಾನವೆಂಬ ಹೆಸರಿನ ಆರಾಧನೆಯ ಕೇಂದ್ರಗಳು 'ಬ್ರಹ್ಮಲಿಂಗೇಶ್ವರ' ಎಂದು ಪರಿವರ್ತಿತವಾದುವೂ ಇರಬಹುದು. ಆದರೆ ಭೂತಸ್ಥಾನಗಳು ದೇವಸ್ಥಾನಗಳಾಗಿ ಪರಿವರ್ತಿತವಾಗಿಲ್ಲ; ಅವು ಹಾಗೆಯೇ ಉಳಿದಿವೆ. ಆಲಡೆಗಳು ದೇವಸ್ಥಾನಕೇಂದ್ರಿತವಾಗಿ ಪರಿವರ್ತಿತವಾಗಿವೆ. ಐತಿಹಾಸಿಕವಾಗಿ ಇವು ಯಾವಾಗ ಮತ್ತು ಹೇಗೆ ನಡೆದುವೆಂಬ ಬಗೆಗೆ ಹೆಚ್ಚಿನ ಸಂಶೋಧನೆ ಅವಶ್ಯವಿದೆ.

ಇನ್ನೊಂದು ಗಮನಿಸಬೇಕಾದ ವಿಷಯವೆಂದರೆ ಈ ರೀತಿ ಆಲಡೆ ಪರಿವರ್ತಿತ ದೇವಸ್ಥಾನಗಳಲ್ಲಿ ಸಿರಿ ಪರಿವಾರದ ಶಕ್ತಿಗಳು ದೇವರ ಗರ್ಭಗುಡಿಯೊಳಗೇ ಸ್ಥಾಪಿತವಾಗಿರುತ್ತದೆ. ಮುಖ್ಯವಾಗಿ ಅಬ್ಬಗ-ದಾರಗ (ಅಬ್ಬಯ-ದಾರಯ ಅಥವಾ ಅರ್ಭಕೇಶ್ವರಿ ಧಾರಕೇಶ್ವರಿ) ಎಂಬ ಸಿರಿಪರಿವಾರದ ಸ್ತ್ರೀಶಕ್ತಿಗಳು ಮಹಾಲಿಂಗೇಶ್ವರ ಮೊದಲಾದ ದೇವತಾ ಸಾನ್ನಿಧ್ಯದೊಂದಿಗೆ ಗರ್ಭಗುಡಿಯಲ್ಲಿರುವುದು ವಿಶೇಷವಾಗಿದೆ. ಇಂತಹ ಸಂದರ್ಭಗಳಲ್ಲಿ ವೈದಿಕ, ಆಗಮಿಕ, ತಾಂತ್ರಿಕ, ಜಾನಪದ ಆರಾಧನ ವಿಧಾನಗಳು ಸಂಮಿಶ್ರಗೊಂಡು ವಿಶಿಷ್ಟವಾದ ಪದ್ಧತಿಗಳು ಬೆಳೆದು ಬಂದಿರುವುದನ್ನು ಗಮನಿಸಬಹುದು.

ಪ್ರಾಚೀನ ತುಳುನಾಡಿನ ಆರಾಧನ ಪದ್ಧತಿಗಳು ತುಳುನಾಡಿನ ಬೇರೆ ಬೇರೆ ಭಾಗಗಳಲ್ಲಿ ವ್ಯಾಪಿಸಿಕೊಂಡ ರೀತಿಯನ್ನು ಕಂಡಾಗಲೂ ಆಶ್ಚರ್ಯವುಂಟಾಗುತ್ತದೆ. ಕೋಟಿಚೆನ್ನಯರೆಂಬ ವೀರರ ಸಂಚಾರ ಇಂದಿನ ಪುತ್ತೂರು ತಾಲೂಕಿನ ಪಡುಮಲೆಯಿಂದ ಇಂದಿನ ಸುಳ್ಯ ತಾಲೂಕಿನ ಪಂಜ-ಎಣ್ಮೂರುಗಳವರೆಗೆ ಮಾತ್ರವಾದರೂ ಅವರ ಆರಾಧನೆ ದೂರದ ಕಾರ್ಕಳ-ಬೆಳ್ತಂಗಡಿ ತಾಲೂಕುಗಳಲ್ಲಿ ದೊಡ್ಡ ಪ್ರಮಾಣದಲ್ಲಿದೆ. ಹೋಲಿಸಿದರೆ ಪುತ್ತೂರು-ಸುಳ್ಯ ತಾಲೂಕುಗಳಲ್ಲೇ ಅವರ ಆರಾಧನಕೇಂದ್ರಗಳು ಕಡಮೆ ಸಂಖ್ಯೆಯಲ್ಲಿವೆ. ಪ್ರಾಯಶಃ ಸಿರಿಯ ಆರಾಧನೆಯಲ್ಲಿ ಕೂಡ, ಸಿರಿ ಅಥವಾ

ಸಿರಿಪರಿವಾರದ ವ್ಯಕ್ತಿಗಳು ಸಂಚರಿಸದ ಸ್ಥಳಗಳಲ್ಲಿಯೂ ದೊಡ್ಡ ಪ್ರಮಾಣದ ಸಿರಿ ಆರಾಧನೆಗಳು ನಡೆಯುತ್ತಿವೆ. ಉದಾಹರಣೆಗೆ ಹಿರಿಯಡಕವು ಸಿರಿಯ ಆರಾಧನೆಯ ದೊಡ್ಡ ಕೇಂದ್ರ. ಅಲ್ಲಿಗೆ ಸಿರಿಯು ತನ್ನ ಸಂಚಾರದ ಸಂದರ್ಭದಲ್ಲಿ ಬಂದಂತೆ ಸಿರಿಯ ಕಥೆಯಲ್ಲಿ (ಪಾಡ್ದನದಲ್ಲಿ) ಕಂಡುಬರುವುದಿಲ್ಲ. ಆದರೆ ಹಿರಿಯಡಕದ ವೀರಭದ್ರ ದೇವಸ್ಥಾನದ ಗರ್ಭಗುಡಿಯಲ್ಲಿ ಅಬ್ಬಗ-ದಾರಗ ಸಾನ್ನಿಧ್ಯವಿದೆ. ಇಂತಹ ವಿಷಯಗಳ ಬಗೆಗೆ ಇನ್ನು ಸಂಶೋಧನೆ ನಡೆಯಬೇಕಿದೆ.

ಐತಿಹಾಸಿಕತೆಯು ವಿಹಿತವಾಗಿರುವ ಪಾಡ್ದನಗಳಲ್ಲಿ ಐತಿಹಾಸಿಕಾಂಶಗಳೊಂದಿಗೆ ಕಾಲ್ಪನಿಕ ಮತ್ತು ಇತರ ಅಂಶಗಳೂ ಬೆರೆಯುತ್ತಿರುತ್ತವೆ. ಅವುಗಳಿಂದ ಐತಿಹಾಸಿಕಾಂಶ ಗಳನ್ನು ಬಹಳ ಜೋಪಾನವಾಗಿ ವಿಂಗಡಿಸಿ ಗುರುತಿಸುವ ಕೆಲಸವೂ ಪಾಡ್ದನ ಸಂಶೋಧನೆ ಯಲ್ಲಿ ಮುಖ್ಯವೇ. ಈ ಕಥೆಗೆ ಡಾ. ಅಶೋಕ ಆಳ್ವರು ಒಂದಿಷ್ಟು ಗಮನಹರಿಸಿದ್ದಾರೆ. ಅವರು ಕೊಟ್ಟ ಸೂಚನೆಗಳನ್ನು ಮುಂದುವರಿಸಿ ಸಿರಿ ಸಂಚರಿಸಿದ ಸ್ಥಳಗಳನ್ನು ಪಾಡ್ದನಪಾಠಗಳ ಆಧಾರದಿಂದ ಖಚಿತವಾಗಿ ಗುರುತಿಸಲು ಸಾಧ್ಯವೇ ಎಂಬುದನ್ನು ಪುನಃ ಪರಿಶೀಲಿಸಿಬೇಕಿದೆ. ಆರ್ಯಬನ್ನಾಯ ಬಿರ್ಮಾಳುವನ ಸತ್ಯನಾಪುರ ಯಾವುದು? ಆತನ ಮೂಲಕ್ಕೆ ಸಂಬಂಧಿಸಿದ ಲಂಕೆ ಲೋಕನಾಡು ಯಾವುದು? ಇವನ್ನು ಖಚಿತವಾಗಿ ಗುರುತಿಸುವುದು ಸಾಧ್ಯವೇ ಎಂದು ಕೂಡ ಪರಿಶೀಲಿಸಬೇಕಾಗಿದೆ. ಸಿರಿಯ ಕಥೆಯಲ್ಲಿ ಐತಿಹಾಸಿಕತೆಯ ಹಿನ್ನೆಲೆಯಿರುವುದನ್ನು ಹೆಚ್ಚಿನ ಸಂಶೋಧಕರು ಮಾನ್ಯ ಮಾಡುತ್ತಾರೆ. ಸಿರಿಯನ್ನು ಮದುವೆ ಮಾಡಿರುವುದು ಬಸರೂರ ಕಾಂತುಪೂಂಜನಿಗೆ ಎಂದು ನಂಬಲಾಗಿದೆ. ಆದರೆ ಪಾಡ್ದನ ಪಾಠಗಳಲ್ಲಿರುವ 'ಬಸರೂರು' ಅಥವಾ 'ಬಸಲೂರು' ಇಂದಿನ ಬಸರೂರೇ ಬೇರೆಯೇ ಎಂಬುದನ್ನು ಖಚಿತಪಡಿಸಬೇಕಾದರೆ ಸತ್ಯನಾಪುರ-ಲಂಕೆ ಲೋಕನಾಡುಗಳು ಯಾವ ಸ್ಥಳಗಳೆಂದು ನಿಶ್ಚಯವಾಗಬೇಕು. ಇವು ಪೂರ್ತಿಯಾಗಿ ಕಾಲ್ಪನಿಕವಾದ ಸ್ಥಳಗಳೆನ್ನುವಂತಿಲ್ಲ. ಡಾ. ಆಳ್ವರು ಈ ಬಗೆಗೆ ಊಹಿಸಿ ಇಂದಿನ ಸಚ್ಚೇರಿಪೇಟೆಯೇ ಸತ್ಯನಾಪುರವಿರಬಹುದೇ – ಎಂಬ ಒಂದು ಸಂದೇಹಾತ್ಮಕವಾದ ಅಭಿಪ್ರಾಯವನ್ನು ಮುಂದಿರಿಸಿದ್ದಾರೆ. ಸಮೀಪದ ಸಿರಿ ಆರಾಧನ ಕೇಂದ್ರಗಳಲ್ಲಿ ಅಜ್ಜ ಬಿರ್ಮು ಆಳ್ವರ ದೂಪೆ ಇರುವುದನ್ನು ಗುರುತಿಸಿದ್ದಾರೆ. ಸಾಧಾರವಾಗಿ ನಿರೂಪಿಸಿದ ಈ ಊಹೆಯನ್ನು ಮುಂದುವರಿಸಿದರೆ ಲಂಕೆ ಲೋಕ ನಾಡು, ಕೂಡ ಈ ಪರಿಸರದಲ್ಲೇ ಇದ್ದಿರಬಹುದೆನ್ನಬಹುದಾಗಿದೆ. ಮೂಲ್ಕಿಗೆ 'ವಳಲಂಕೆ' ಎಂಬ ಹೆಸರಿರುವುದು ಪ್ರಸಿದ್ಧ: ಇದುವೇ ಒಂದು ಕಾಲದಲ್ಲಿ ಲಂಕೆಲೋಕನಾಡಾಗಿದ್ದಿರಬಹುದೇ ಎಂಬ ವಿಷಯದಲ್ಲಿ ಸಂಶೋಧನೆ ನಡೆಯಬಹುದಾಗಿದೆ. ಈ ಊಹೆಗೆ ಆಧಾರಗಳು ದೊರೆತರೆ 'ಬಸರೂರು' ಯಾವುದೆಂಬುದನ್ನೂ ಹುಡುಕಲು ಸುಲಭವಾಗಬಹುದು; ಅದು ಇಂದಿನ ಬಸರೂರು ಆಗಿಲ್ಲದೇ ಇರಬಹುದು; ಮೂಲ್ಕಿ ಪರಿಸರದ ಯಾವುದೋ ಊರು ಆಗಿರುವ ಸಾಧ್ಯತೆಯೂ ಇರಬಹುದು.

ಸಿರಿಯ ವ್ಯಕ್ತಿತ್ವವನ್ನು ಗುರುತಿಸುತ್ತಾ ಇದುವರೆಗಿನ ಸಂಶೋಧಕರು ಆಕೆ ಸ್ತ್ರೀಯ

ವ್ಯಕ್ತಿತ್ವದ ಮಹತ್ವವನ್ನು ಪ್ರತಿಪಾದಿಸಿದವಳೆಂಬುದನ್ನು ತಿಳಿಸಿ ತಾನು ಒಲ್ಲದ ಗಂಡನಿಗೆ ವಿಚ್ಛೇದನವನ್ನು ನೀಡಿದಳು ಮತ್ತು ಮರುಮದುವೆಯಾದಳೆಂಬುದನ್ನು ಉದಾಹರಿಸುತ್ತಾರೆ ಮತ್ತು ವಿಚ್ಛೇದನ ಮತ್ತು ಮರುಮದುವೆಯ ಪದ್ಧತಿಯನ್ನು ಆಕೆಯೇ ಮೊದಲು ಮಾಡಿ ಸ್ತ್ರೀಸ್ವಾತಂತ್ರ್ಯದ ಪ್ರತಿಪಾದನೆ ಮಾಡಿದಳೆಂಬಂತೆಯೂ ನಿರೂಪಿಸಿರುವುದು ಕಂಡುಬರುತ್ತದೆ. ಆದರೆ ಪಾಡ್ದನಗಳಲ್ಲಿ ಆಕೆಯಿಂದಲೇ ಈ ಪದ್ಧತಿ ಮೊದಲಾಯಿತೆಂಬ ಬಗೆಗೆ ಯಾವುದೇ ಉಲ್ಲೇಖವಿದ್ದಂತಿಲ್ಲ. ವಿಚ್ಛೇದನಕ್ಕೆ 'ಬರ' ಎಂಬ ಶಬ್ದ ತುಳುಭಾಷೆಯಲ್ಲಿ ಅದಾಗಲೇ ಇದ್ದಿತೆಂದು ತಿಳಿಯಬೇಕಾಗುತ್ತದೆ. ಈ ಪಾರಿಭಾಷಿಕ ಪದವನ್ನು ಪಾಡ್ದನಕಾರರು ಸೃಷ್ಟಿ ಮಾಡಿದ್ದಾಗಿರಲಿಕ್ಕಿಲ್ಲ. ಈ ಪಾರಿಭಾಷೆಯೂ ಈ ಪದ್ಧತಿಯೂ ತುಳು ಸಮಾಜದಲ್ಲಿ ಹಿಂದಿನಿಂದಲೇ ಇದ್ದಿರಬಹುದಾದುದರಿಂದಲೇ ಸಿರಿ ವಿಚ್ಛೇದನದ ಆಚರಣೆಗಳನ್ನು ನಡೆಸುವ ವಿವರಗಳು ಪಾಡ್ದನಗಳಲ್ಲಿ ದೊರಕುತ್ತವೆ. ಯಾವ ಪಾಡ್ದನಪಠ್ಯದಲ್ಲಿಯೂ ಸಿರಿ ಹೊಸದಾಗಿ ತೊಡಗಿದ ಪದ್ಧತಿ ಎಂಬ ಉಲ್ಲೇಖವಿರುವುದನ್ನು ಸಂಶೋಧನೆಯಲ್ಲಿ ಗುರುತಿಸಲಾಗಿಲ್ಲ. ಬರಿಯ ಊಹೆ ಮಾಡಲಾಗಿದೆಯೆಂಬುದನ್ನು ಇಲ್ಲಿ ಗಮನಿಸ ಬೇಕಾಗಿದೆ.

ಇದುವರೆಗೆ ಸಿರಿಪಾಡ್ದನ ಅಧ್ಯಯನಗಳು ನಡೆದ ದಾರಿಗಿಂತ ಭಿನ್ನವಾಗಿ ಯೋಚಿಸ ಬೇಕೆಂಬ ಡಾ. ಅಶೋಕ ಆಳ್ವರ ದೃಷ್ಟಿ ಸಂಶೋಧನೆಯ ಹಿನ್ನೆಲೆಯಲ್ಲಿ ಮುಖ್ಯವಾಗುತ್ತದೆ. ಸಿರಿಯ ಆರಾಧನೆಯು ಭೂತಾರಾಧನೆಗಿಂತ ಭಿನ್ನವೆಂಬುದನ್ನು ಅವರು ದಾಖಲಿಸಿದ್ದಾರೆ. ಆ ಆರಾಧನೆಯು ಆರ್ಯಬನ್ನಾಯ ಬಿರ್ಮಾಳುವ ಅಜ್ಜನ ಉತ್ತರಕ್ರಿಯೆಯ ಆಚರಣೆ ಯೆಂಬ ಊಹೆಯನ್ನು ಅವರು ಸಂಶೋಧಕರ ಮುಂದಿರಿಸಿದ್ದಾರೆ. ಇದಕ್ಕೆ ಆಚರಣೆಯ ಸಂದರ್ಭದ ಹಲವು ಸಾಕ್ಷ್ಯಗಳನ್ನು ಅವರು ಒದಗಿಸಿದ್ದಲ್ಲದೆ ಮಾಹಿತಿದಾರರ (ವಕ್ತೃಗಳ) ಅಭಿಪ್ರಾಯಗಳನ್ನು ಅವಲಂಬಿಸಿದ್ದಾರೆ. ಈ ವಿಷಯವು ಪ್ರಾಯಶಃ ಸಿರಿಯ ಅಧ್ಯಯನದಲ್ಲಿ ಹೊಸತೇ ಆದ ಒಂದು ಸಂಶೋಧನೆಯೆಂದು ತಿಳಿಯಬಹುದು. ಆಳ್ವರ ಈ ಊಹೆಯನ್ನು ಅವಲಂಬಿಸಿ ಮುಂದುವರಿದರೆ ಸಿರಿಪಾಡ್ದನದ ಅಧ್ಯಯನ ಸ್ವರೂಪವು ಬೇರೆಡೆಗೆ ಹೊರಳಿಕೊಳ್ಳುವ ಸಾಧ್ಯತೆಯೂ ಇದೆ. ಈ ಊಹೆ ಸಾಕಷ್ಟು ಪ್ರಬಲವಾಗಿದೆಯೆಂದು ಅವರ ಪ್ರತಿಪಾದನೆಯಿಂದ ತಿಳಿಯುತ್ತದೆ. ಈ ಬಗೆಗೆ ಇತರ ಸಂಶೋಧಕರು ಕೂಡ ಗಮನಿಸಬೇಕಿದೆ.

ಸಿರಿಯ ಆವೇಶ ಬರುವವರನ್ನು ಕುರಿತು ಪ್ರಯೋಗಿಸುವ ಒಂದು ವಿಶಿಷ್ಟ ಪದವನ್ನು ಈ ಸಂದರ್ಭದಲ್ಲಿ ನೆನಪಿಸಬಹುದು. ಅದು 'ಸೂಕೆ' ಎಂಬುದು. 'ಸೂಕೆ' ಯೆಂದರೆ 'ನೋಟ'ವೆಂಬುದು ಒಂದರ್ಥ. 'ದರ್ಶನಾವೇಶ' ಎಂಬುದು ಇನ್ನೊಂದರ್ಥ. ನೋಟವೆಂಬರ್ಥದಲ್ಲಿ 'ಚೂಕೆ' ಎಂಬ ಪ್ರಯೋಗ ತುಳುಭಾಗವತದಲ್ಲಿದೆ. ಈ ಪದವು ಇನ್ನೊಂದು ಮೂಲದಿಂದಲೂ ಬಂದಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. 'ಸೂ' ಅಥವಾ 'ತೂ' ಎಂದರೆ ಬೆಂಕಿ. ಸಿರಿದರ್ಶನಾನಂತರ ಆವೇಶಗೊಂಡವರು ಹಿಂಗಾರವನ್ನು ಬಿಟ್ಟು ಆವೇಶವನ್ನು ಕೊನೆಗೊಳಿಸುವುದು 'ಸುಡಲೆದ ಕಂಡ' (ಹೆಣವನ್ನು

ಸುಟ್ಟ ಗದ್ದೆ)ದಲ್ಲಿ ಎಂಬುದು ದಾಖಲಾಗಿದೆ. ಮಾಹಿತಿದಾರರೂ ಅದನ್ನು ತಿಳಿಸಿದ್ದಾರೆ. ಸಿರಿಜಾತ್ರೆಗಳ ಆಚರಣಪದ್ಧತಿ ಹಾಗಿರುವುದನ್ನು ಆಳ್ವರು ದಾಖಲಿಸಿದ್ದಾರೆ. ಹಾಗಿರುವಾಗ 'ಸೂಕೆ' ಎಂಬುದು ಬೆಂಕಿಯೆಂಬರ್ಥದ 'ಸೂ' ಎಂಬುದರಿಂದ ನಿಷ್ಪನ್ನವಾಗಿರಬಹುದೇ ಎಂಬ ಒಂದು ಊಹೆಯನ್ನೂ ಮುಂದಿರಿಸಲು ಅವಕಾಶವಿದೆ. ತುಳು ಭಾಷೆಯ ಹಿನ್ನೆಲೆಯಿಂದ ಈ ಊಹೆಯನ್ನು ಪರಿಶೀಲಿಸಬಹುದಾಗಿದೆ.

ಡಾ. ಆಳ್ವರು ದಾಖಲಿಸಿದ ಪಾಡ್ದನಗಳ ತುಲನಾತ್ಮಕ ಸಮೀಕ್ಷೆಯನ್ನು ಗಮನಿಸಿದಾಗ ಸಿರಿಯು ತನ್ನ ಹಟವನ್ನೇ ಸಾಧಿಸುವ ಹೆಣ್ಣಾಗಿರುವುದೂ ಆಕೆಯ ಮಗ ಮತ್ತು ಸೇವಕಿಯರೇ ಆಕೆಯ ಅಭಿಪ್ರಾಯಗಳಿಗೆ ಸಮ್ಮತಿಯ ಅಭಿಪ್ರಾಯವನ್ನು ನೀಡದಿರುವುದೂ ಕಂಡುಬರುತ್ತದೆ. ಸಿರಿಯ ಆಚರಣೆಗಳನ್ನು ಗಮನಿಸಿದರೆ ಇಡಿಯ ಆಚರಣೆಯು ಕುಮಾರನಿಂದ ನಿಯಂತ್ರಿಸಲ್ಪಡುವಂತೆ ತೋರುತ್ತದೆ. ಪಾಡ್ದನಪಾಠಗಳಲ್ಲಿಯೂ ಸಿರಿಯು ಕುಮಾರನನ್ನೇ ಅವಲಂಬಿಸಿರುವಂತೆ ಚಿತ್ರಣವಿದೆ. ಆದುದರಿಂದ ಸಿರಿಯ ಕಥೆಯು ಸ್ತ್ರೀಸ್ವಾತಂತ್ರ್ಯ ಮತ್ತು ಸ್ತ್ರೀಸಂವೇದನೆಯನ್ನು ಪ್ರತಿಪಾದಿಸುತ್ತವೆಂಬ ಒಂದೇ ನೆಲೆಯಿಂದ ಮಾಡಲಾಗುತ್ತಿರುವ ಅಧ್ಯಯನವು ಎಷ್ಟರಮಟ್ಟಿಗೆ ಸಾಧುವಾಗಬಹುದೆಂಬ ಪ್ರಶ್ನೆಯೂ ಮೂಡದಿರುವುದಿಲ್ಲ.

ದಲಿಯದಲ್ಲಿ ಸಿರಿ ಆವೇಶಗೊಂಡ ಸ್ತ್ರೀಯರು ನಡೆಸುವ ಕ್ರಿಯೆಗಳು, ಹೇಳುವ 'ನಾರಾಯಣ / ನಾರಾಯಿನ' ನಾಮಸ್ಮರಣೆಗಳು ಉತ್ತರಕ್ರಿಯೆಯ, ಶವದಹನದ ಸಂದರ್ಭವನ್ನೇ ನೆನಪಿಸುವಂತಿದ್ದು ಈ ಕ್ರಿಯಾಕಲಾಪವು ತನ್ನ ಸಿಟ್ಟಿನಿಂದಾಗಿ ಅಜ್ಜನವರಿಗೆ ಉತ್ತರಕ್ರಿಯೆ ಯೋಗ್ಯವಾಗಿ ನಡೆಯದುದಕ್ಕೆ ಸಿರಿಯು ಪಡುವ ಪಶ್ಚಾತ್ತಾಪವೋ ಎಂಬ ಸಂದೇಹವೂ ಮೂಡುವಂತಿದೆ. ಏನಿದ್ದರೂ ಆಳ್ವರ ಕ್ಷೇತ್ರಕಾರ್ಯಾಧಾರಿತವಾದ ಊಹೆಯ ಬಗೆಗೆ ಸಂಶೋಧಕರ ಹೆಚ್ಚಿನ ಗಮನ ಹರಿಯಬೇಕಿದೆ.

ಎಷ್ಟೋ ಭೂತಪಾಡ್ದನಗಳಲ್ಲಿ ವ್ಯಕ್ತಿಗಳು ಮಾಯವಾಗಿ ಭೂತಗಳಾದ ಸಂದರ್ಭ ಗಳಲ್ಲಿ ಯಾವುದೋ ಹಿಂಸೆ ನಡೆದುದಿರಬೇಕೆಂದೂ ವ್ಯಕ್ತಿಗಳು ಮಾಯವಾಗಿ ಭೂತ ಗಳಾಗಿ ಆರಾಧನೆಗೆ ಒಳಪಟ್ಟರೆಂದು ಆಮೇಲೆ ವೈಭವೀಕರಿಸಲಾಯಿತೆಂದೂ ಅಭಿಪ್ರಾಯ ಪಡಲಾಗಿದೆ. ಕಲ್ಕುಡ, ಕಲ್ಲುರ್ಟಿ, ಕೊರಗತನಿಯ ಪಾಡ್ದನವೇ ಮುಂತಾದುವುಗಳಲ್ಲಿ ಈ ತರದ ಘಟನೆಗಳಿವೆ. ಸಿರಿಯೂ ತನ್ನ ಮಗನನ್ನು ಮತ್ತು ಸೇವಕಿಯನ್ನು ಮಾಯ ಮಾಡುತ್ತಾಳೆ ಎಂದು ಪಾಡ್ದನ ತಿಳಿಸುತ್ತದೆ. ವಾಸ್ತವವಾಗಿ ಅದು ಏನು? ತಾನು ಮರು ಮದುವೆಯಾಗಿ ಬೇರೆ ಸಂಸಾರ ಹೂಡುವುದನ್ನು ವಿರೋಧಿಸಿದ ಕುಮಾರ ಮತ್ತು ಸೇವಕಿ ದಾರುವನ್ನು ಸಿರಿಯು ನಿಜವಾಗಿ ಮಾಡಿದ್ದೇನು? ಈ ಬಗೆಗೆ ವಾಸ್ತವ ದೃಷ್ಟಿ ಯಿಂದ ಚಿಂತಿಸಿದರೆ ಬರುವ ಫಲಿತಾಂಶವೇನು? ಆಗ ಸಿರಿಯ ಸ್ತ್ರೀಸ್ವಾತಂತ್ರ್ಯ ಮತ್ತು ಪ್ರತಿಭಟನೆ ಇತ್ಯಾದಿ ತತ್ತ್ವಪ್ರತಿಪಾದನೆಯನ್ನು ಅವಳ ಬಗೆಗೆ ಎಷ್ಟರಮಟ್ಟಿಗೆ ಅನ್ವಯಿಸ ಬಹುದು? ಎಂಬೆಲ್ಲ ಪ್ರಶ್ನೆಗಳು ಮೂಡುತ್ತವೆ. ಹಲವು ದುರಂತಗಳನ್ನು ಅನುಭವಿಸಿದ ಸಿರಿ-ಕುಮಾರ, ಸೊನ್ನೆ-ಗಿಂಡೆ, ಅಬ್ಬಗ-ದಾರಗ ಸಂಸಾರವನ್ನು ದೈವಿಕಗೊಳಿಸಿ ಸಾವಿನ ಆಚರಣೆಯನ್ನು ಜೊತೆಗೊಳಿಸಿ ಒಟ್ಟಿಗೆ ಪ್ರಾಣಬಿಟ್ಟ ಅಬ್ಬಗ-ದಾರಗರನ್ನು ದೇವರ

ಗರ್ಭಗುಡಿಯೊಳಗಿರಿಸಿ ಸ್ತ್ರೀ ಆವೇಶದ ಆಚರಣ ವಿಧಾನವನ್ನು ಅಳವಡಿಸಿಕೊಂಡಿರುವುದು ಇಡಿಯ ಪಾಡ್ದನ-ಆಚರಣೆಗಳನ್ನು ಒಟ್ಟಿಗಿರಿಸಿ ನೋಡಿದಾಗ ಕಂಡುಬರುತ್ತದೆ. ಇತರ ಪ್ರದೇಶಗಳ ಜನಪದ ಸ್ತ್ರೀ ದೇವತಾರಾಧನೆಗಳ ವಿಧಾನಗಳನ್ನೂ ಹೋಲಿಸಿ ಸಿರಿಯ ಅಧ್ಯಯನ ನಡೆಯಬೇಕಿದೆ.

ಭೂತಾರಾಧನೆಯಲ್ಲಿ ಗಂಡುಭೂತ ಅಥವಾ ಹೆಣ್ಣು ಭೂತದ ಆವೇಶವು ಪುರುಷ ಪಾತ್ರಿಯ ಮೇಲೆಯೇ ಬರುವುದು ಪದ್ಧತಿ. ಸ್ತ್ರೀಯರಿಗೆ ಭೂತಾವೇಶವಿಲ್ಲ. ಆವೇಶ ಸಂದರ್ಭದಲ್ಲಿ ಸ್ತ್ರೀಯು ಭೂತ ಪಾಡ್ದನವನ್ನು ಹೇಳಲು ಸಹಕರಿಸಿದರೂ ಆವೇಶದಲ್ಲಿ ಆಕೆಗೆ ಪಾಲಿಲ್ಲ. ಸಿರಿ ಆರಾಧನೆಯಲ್ಲಿ ಸಿರಿಪರಿವಾರದ ಹೆಣ್ಣುಗಳ ಆವೇಶ ಸ್ತ್ರೀಯರ ಮೆಯ್ಯ ಮೇಲೆಯೇ ಬರುತ್ತದೆ. ಕುಮಾರನ ಆವೇಶ ಪುರುಷ ವ್ಯಕ್ತಿಯ ಮೇಲೆಯೇ ಬರುತ್ತದೆ. ಇದು ಸಿರಿ ಆರಾಧನೆ ಭೂತಾರಾಧನೆಗಿಂತ ವಿಭಿನ್ನವಾಗಿ ನಿಲ್ಲುವ ಇನ್ನೊಂದಂಶ. ಈಯೆಲ್ಲ ಸಂದರ್ಭಗಳನ್ನು ಗಮನಿಸಿದಾಗ, ಶರೀರ ನಡುಗಿ ದರ್ಶನಾವೇಶ ಬಂದು ಆಚರಿಸುವ ಆಚರಣೆಯಲ್ಲಿ ಸ್ತ್ರೀಗೂ ಅವಕಾಶ ದೊರೆಯುವಂತೆ ಬಿರ್ಮಾಳುವನ ಉತ್ತರಕ್ರಿಯೆಯ ಕ್ರಿಯೆಯನ್ನು ಕೇಂದ್ರದಲ್ಲಿರಿಸಿ ದುರಂತಮಾಲಿಕೆಯಂತಿರುವ ಸಂಸಾರದ ಕಥೆಯನ್ನು ಮಾನಸಿಕವಾಗಿ ನೆನಪಿಸಿಕೊಂಡು, ದುಃಖಿಸುತ್ತಾ ದಲಿಯದಲ್ಲಿ ನಿಲ್ಲುವ ಆಚರಣೆಯ ಪದ್ಧತಿ ತುಳುನಾಡಿನಲ್ಲಿ ವಿಶಿಷ್ಟವಾಗಿ ಬೆಳೆದು ಬಂತೆಂದು ಹೇಳಬೇಕಾಗುತ್ತದೆ. ಈ ಪದ್ಧತಿ ಎಂದು ತೊಡಗಿತೆಂಬುದಕ್ಕೆ ಯಾವ ಆಧಾರಗಳೂ ದೊರೆಯುವಂತಿಲ್ಲ. ಇದರ ಐತಿಹಾಸಿಕತೆಯ ಬಗೆಗೆ ಇನ್ನಷ್ಟು ಸಂಶೋಧಿಸಿದರೆ ಕೆಲವು ಆಸಕ್ತಿ ಕೆರಳಿಸುವ ವಿವರಗಳು ದೊರೆಯಬಹುದು.

ಜನಪದ ಕಾವ್ಯರೂಪದಲ್ಲಿರುವ ಒಂದು ಪಠ್ಯದ ಇಷ್ಟು ರೂಪಗಳು ಅಥವಾ ಒಂದೇ ಕಥೆಯ ಇಷ್ಟು ಪಾಠಾಂತರಗಳು ದಾಖಲಾದುದಾಗಲಿ, ಅವುಗಳೊಳಗೆ ತುಲನಾತ್ಮಕ ಅಧ್ಯಯನ ನಡೆದುದಾಗಲಿ ಬೇರೆ ಉದಾಹರಣೆಯಿಲ್ಲವೆಂದು ತೋರುತ್ತದೆ. ಕನ್ನಡದ ಮಲೆಯ ಮಾದೇಶ್ವರ, ಜುಂಜಪ್ಪ ಮತ್ತು ಮಂಟೇಸ್ವಾಮಿ ಕಾವ್ಯಗಳ ಸಂದರ್ಭ ದಲ್ಲಿಯೂ ಇಷ್ಟು ಕ್ಷೇತ್ರಕಾರ್ಯ-ದಾಖಲಾತಿ ಮತ್ತು ಪಾಠಾಂತರಗಳ ಪ್ರಕಟನೆ ಅಧ್ಯಯನ ಗಳು ನಡೆದಂತಿಲ್ಲ. ಆ ದೃಷ್ಟಿಯಿಂದ ಡಾ. ಆಳ್ವರ ತುಲನಾತ್ಮಕ ಅಧ್ಯಯನವು ಗಮನಾರ್ಹ ವಾಗಿದೆ. ಡಾ. ಆಳ್ವರು ಉಡುಪಿಯ ಪ್ರಾದೇಶಿಕ ಜಾನಪದ ಅಧ್ಯಯನ ಕೇಂದ್ರ (ಆರ್.ಆರ್.ಸಿ)ದಲ್ಲಿ ಸಂಶೋಧಕರಾಗಿದ್ದಾಗ ಸಿರಿಯ ದಾಖಲಾತಿ, ಸಿರಿಪಠ್ಯಗಳ ಲಿಪ್ಯಂತರ ಇತ್ಯಾದಿಗಳನ್ನು ಮಾಡಿದವರು. ಆ ಆಧಾರಗಳೆಲ್ಲವನ್ನೂ ಬಳಸಿಕೊಂಡು, ತಮ್ಮ ಸ್ವಂತ ಟಿಪ್ಪಣಿಗಳನ್ನು ಉಪಯೋಗಿಸಿಕೊಂಡು ಉದ್ಯೋಗನಿವೃತ್ತಿಯ ಅನಂತರವೂ ಆ ವಿಷಯನ್ನು ಬೆಂಬತ್ತಿ ನಡೆದು 'ಸಿರಿಕಾವ್ಯಾಲೋಕನ'ವೆಂಬ ಅಧ್ಯಯನಪೂರ್ಣ ಕೃತಿಯನ್ನು ಹೊರತಂದಿರುವುದಕ್ಕೆ ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ.

ಉಡುಪಿ

ಪಾದೇಕಲ್ಲು ವಿಷ್ಣು ಭಟ್ಟ

1 ಮಾರ್ಚ್ 2019

ದಲಿಯ ಏರುವ ಮುನ್ನ...

ತುಳುನಾಡಿನ ಬಹುವಿಶಿಷ್ಟ ಹಾಗು ವಿಶೇಷವಾದ ಆರಾಧನೆ ಮತ್ತು ಆಚರಣೆಯ ರೂಪದ ಸಂಪ್ರದಾಯಗಳಲ್ಲಿ ಸಿರಿಜಾತ್ರೆಗೆ ಬಹಳ ಮಹತ್ವವಿದೆ. ತುಳುನಾಡಿನಾದ್ಯಂತ ಚದುರಿಕೊಂಡಿರುವ ಸುಮಾರು ಎಪ್ಪತ್ತಕ್ಕಿಂತಲೂ ಅಧಿಕ ಆಲಡೆಗಳಲ್ಲಿ ಸುಮಾರು ಮೂವತ್ತರಲ್ಲಿ ಫೆಬ್ರವರಿ ಹುಣ್ಣಿಮೆಯಿಂದ ಆರಂಭಿಸಿ ಮೇ ತಿಂಗಳ ವೃಷಭಸಂಕ್ರಮಣದವರೆಗೆ ಸಿರಿಜಾತ್ರೆ ಜರಗುತ್ತದೆ. ನೂರಾರು ಸಂಖ್ಯೆಯ ಸ್ತ್ರೀಯರ ಮೇಲೆ ಸಿರಿ ಹಾಗೂ ಪರಿವಾರದವರು (ಸಿರಿ, ಸೊನ್ನೆ, ಗಿಂಡೆ, ಅಬ್ಬಗ, ದಾರಗ, ಹಾಗು ಸಾಮು) ಹಾಗು ಪುರುಷರ ಮೇಲೆ ಕುಮಾರನೂ ಏಕಕಾಲದಲ್ಲಿ ಪ್ರಕಟಗೊಂಡು ನಡೆಸುವ ಸಾಮೂಹಿಕ ದರ್ಶನಾವೇಶವನ್ನು ಇಲ್ಲಿ ಕಾಣಬಹುದಾಗಿದೆ. ಮೂಲಕುಮಾರ ಹಾಗೂ ಮೂಲಸಿರಿಗಳಿಗೆ ದೇವರ ಎದುರು ಮೊದಲು ಹಿಂಗಾರವನ್ನು ನೀಡಿ ಜೋಗದಿಂದ ಮಾಯದ ದರ್ಶನವಾಗಬೇಕೆಂದು ಪ್ರಾರ್ಥಿಸಿಕೊಂಡಾಗ ಇವರ ಮೇಲೆ ಮೊದಲು ಸಿರಿ, ಕುಮಾರರು ಪ್ರಕಟಗೊಂಡು ಆ ಬಳಿಕ ದಲಿಯದಲ್ಲಿರುವ ಇತರರ ಮೇಲೆ ಸಿರಿ ಹಾಗೂ ಬಳಗದವರ ದರ್ಶನಾವೇಶ ಆರಂಭಗೊಳ್ಳುತ್ತದೆ. ಕೈಯಲ್ಲಿ ಹಿಂಗಾರವನ್ನು (ಪುರ್ಪ) ಹಿಡಿದುಕೊಂಡು ದರ್ಶನಾವೇಶ ಕ್ಕೊಳಗಾಗಿ ಸಿರಿಸಂಧಿಯನ್ನು ನಿರ್ದಿಷ್ಟ ಧಾಟಿಯಲ್ಲಿ ಹಾಡುತ್ತಾ ಇಡೀ ರಾತ್ರಿ ನಡೆಸುವ ಈ ಆಚರಣೆ ಒಂದು ಪ್ರತ್ಯೇಕ ಆಚರಣೆಯಾಗಿದೆ.

ಸಿರಿ ಆರಾಧನೆಯ ಸಂದರ್ಭ ಸಿರಿಗಳು ನೆಲದಮೇಲೆ ಬಿಳಿಯ ಬಟ್ಟೆಯೊಂದನ್ನು ಹಾಸಿ ಅದರ ಮೇಲೆ ನಿಂತು ಹಿಂಗಾರವನ್ನು (ತುಳುವಿನ ಪುರ್ಪ) ಕೈಯಲ್ಲಿ ಹಿಡಿದು ನಡೆಸುವ ದರ್ಶನಾವೇಶಕ್ಕೆ 'ದಲಿಯ' ಎಂದು ಹೆಸರು. ಹೆಣ್ಣೊಬ್ಬಳಿಗೆ ಸಿರಿಯ ಸದಸ್ಯತ್ವವನ್ನು ಮೊದಲ ಬಾರಿ ನೀಡಿ ಅಧಿಕೃತವಾಗಿ ಅವಳನ್ನು ಸಿರಿಗಳ ಸಾಲಲ್ಲಿ ನಿಲ್ಲಿಸುವ ಕ್ರಿಯೆಗೆ 'ದಲಿಯ ಕೊಡುವುದು' ಎಂದು ಹೆಸರು.

ಹೆಣ್ಣೊಬ್ಬಳಿಗೆ ಸಿರಿಯ ಚಹರೆಗಳು ಕಂಡು ಬಂದಾಗ ಅನುಭವಿ ಕುಮಾರನನ್ನು ಈಕೆಯ ಮನೆಗೆ ಕರೆಸಿ ಅನುಭವಿ ಸಿರಿಗಳ ಜೊತೆಗೆ ದರ್ಶನಾವೇಶ ಏರ್ಪಡಿಸಿ ಈಕೆಯ ಮೇಲೆ ಪ್ರಕಟಗೊಂಡಿರುವ ಸಿರಿ

ಬಳಗದ ಶಕ್ತಿ ಯಾವುದೆಂದು ತಿಳಿಯುವ ಕ್ರಿಯೆಗೆ 'ಇಲ್ಲೆಚ್ಚಿದ ದಲಿಯ' ಎಂದು ಹೆಸರು. ತುಳುವಿನಲ್ಲಿ 'ಇಲ್ಲ್' ಎಂದರೆ ಮನೆ. 'ಎಚ್ಚಿ' ಎಂದರೆ ಆವೇಶಗೊಳ್ಳುವುದು. ಮನೆಯಲ್ಲಿ ಏರ್ಪಡಿಸುವ ದರ್ಶನಾವೇಶಕ್ಕೆ ಈ ಹೆಸರು. ಸಿರಿಜಾತ್ರೆಯಲ್ಲಿ ಸಿರಿ ಬಳಗದವರು ದರ್ಶನಾವೇಶ ಮುಗಿಸಿ ಕೈಯಲ್ಲಿ ಹಿಡಿದಿರುವ ಹಿಂಗಾರವನ್ನು ನಿರ್ದಿಷ್ಟ ಜಾಗದಲ್ಲಿ ಬಿಡಲು ಹೊರಡುವ ಕ್ರಿಯೆಗೆ 'ದಲಿಯ ಇಳಿಯುವುದು' ಎಂದು ಹೆಸರು. ಹೀಗಾಗಿ ಸಿರಿಜಾತ್ರೆಯಲ್ಲಿ 'ದಲಿಯ' ಹೆಸರು ಬೇರೆ ಬೇರೆ ಸಂದರ್ಭಗಳಲ್ಲಿ ಬಳಕೆಯಾಗುತ್ತಿರುತ್ತದೆ. ಈ ಹೆಸರನ್ನು ನನ್ನ ಅಧ್ಯಾಯಗಳ ಬೇರೆ ಬೇರೆ ಸಂದರ್ಭಗಳಲ್ಲಿ ಬಳಸಿಕೊಂಡಿದ್ದೇನೆ.

ಸಿರಿಕಾವ್ಯಗಳಿಗೆ ಸಂಬಂಧಿಸಿ ತುಲನಾತ್ಮಕ ಅಧ್ಯಯನವನ್ನು ಸಂಕ್ಷಿಪ್ತವಾಗಿ ನನ್ನ 'ಸಿರಿ ಕಾವ್ಯಲೋಕ' ಕೃತಿಯಲ್ಲಿ ಮಾಡಿದ್ದೆ. ಈ ಸಂದರ್ಭದಲ್ಲಿ ನಾನು ದಾಖಲಿಸಿರುವ ಅಪ್ರಕಟಿತ ಪಠ್ಯಗಳನ್ನು ಗಮನಿಸಲಾಗದೆ ಹೆಚ್ಚು ವಿಸ್ತೃತವಾದ ಅಧ್ಯಯನ ನಡೆಸಲು ಸಾಧ್ಯವಾಗಿಲ್ಲ. ಪ್ರೊ. ಹೈಡ್ರೂನ್ ಬ್ರೂಕ್ನರ್ ಹಾಗು ಪ್ರೊ. ಬಿ.ಎ. ವಿವೇಕ ರೈಯವರು 2017ರಲ್ಲಿ ಸಂಪಾದಿಸಿ ಜರ್ಮನಿಯಿಂದ ಪ್ರಕಟಗೊಂಡ 'Oral Traditions in South India' ಕೃತಿಯ 'Siri in the Poetic World of Kargi Shedthi: Selected Episodes and Comparisons' ಎಂಬ ನನ್ನ ಲೇಖನದಲ್ಲಿ ಸಿರಿ ಕಾವ್ಯದಲ್ಲಿ ಬರುವ ಕೆಲವೇ ಕೆಲವು ಸಂದರ್ಭಗಳನ್ನು ಎತ್ತಿಕೊಂಡು ಈವರೆಗಿನ ಪ್ರಕಟಿತ ಹಾಗು ಶ್ಯಾಮರಾಯ ಶೆಟ್ಟಿಯವರ ಅಪ್ರಕಟಿತ ಒಂದು ಪಠ್ಯದ ಜೊತೆಗೆ ತೌಲನಿಕವಾಗಿ ನೋಡುವ ಪ್ರಯತ್ನವನ್ನು ಮಾಡಿದ್ದೆ. ಹೀಗಾಗಿ ಈವರೆಗಿನ ಪ್ರಕಟಿತ ಐದು ಸಿರಿಕಾವ್ಯಗಳ ಜೊತೆಗೆ ಮೂರು ಅಪ್ರಕಟಿತ ಪಠ್ಯಗಳನ್ನೂ ಸೇರಿಸಿ ಒಟ್ಟು ಎಂಟು ಪಠ್ಯಗಳ ತುಲನಾತ್ಮಕ ಅಧ್ಯಯನವೇ 'ಸಿರಿಕಾವ್ಯಾಲೋಕನ' ಕೃತಿ.

ಈ ಕೃತಿ ಪ್ರಕಟನೆಯ ಸಂದರ್ಭದಲ್ಲಿ ಇಬ್ಬರು ಗಣ್ಯರನ್ನು ನಾನು ಸ್ಮರಿಸಿಕೊಳ್ಳಲೇಬೇಕು. ಒಬ್ಬರು ಪ್ರೊ. ಕು.ಶಿ. ಹರಿದಾಸ ಭಟ್ಟರು. ಇನ್ನೊಬ್ಬರು ಫಿನ್ಲೆಂಡಿನ ತುರ್ಕು ವಿಶ್ವವಿದ್ಯಾಲಯದ ಕಲೇವಾಲ ಸಂಸ್ಥೆಯ ಪ್ರಾಧ್ಯಾಪಕರಾದ ಪ್ರೊ. ಲೌರಿ ಹಾಂಕೋ ಅವರು. ಉಡುಪಿಯ ಸಾಹಿತ್ಯ, ಸಾಂಸ್ಕೃತಿಕ ರಾಯಭಾರಿಯಾಗಿ ಮೆರೆದ ಪ್ರೊ. ಕು.ಶಿ. ಹರಿದಾಸ ಭಟ್ಟರು ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರವನ್ನು (ಆರ್.ಆರ್.ಸಿ.) ಸ್ಥಾಪಿಸಿ ಈ ಸಂಸ್ಥೆಗೆ ಜಾನಪದ ದಾಖಲಾತಿ, ಸಂರಕ್ಷಣೆ, ಸಂಶೋಧನೆ ಹಾಗೂ ಪ್ರಸಾರಕಾರ್ಯಗಳಲ್ಲದೆ ಅಂತಾರಾಷ್ಟ್ರೀಯ ಮಟ್ಟದ ಕಮ್ಮಟ, ವಿಚಾರಗೋಷ್ಠಿ ಗಳನ್ನು ನಡೆಸುವ ಮೂಲಕ ಜಾಗತಿಕ ಮನ್ನಣೆಯನ್ನು ತಂದುಕೊಟ್ಟವರು. ಈ ಸಂಸ್ಥೆಯ ಮೂಲಕ 1989ರ ಕಾಲದಲ್ಲೆ ಫಿನ್ನಿಶ್ ಇಂಡಿಯಾ ದಾಖಲಾತಿ ಯೋಜನೆಯ ಮೂಲಕ ಸಿರಿ ಅಧ್ಯಯನಕ್ಕೆ ಚಾಲನೆ ನೀಡಿ ಇದನ್ನು ನಿರಂತರ ಮುಂದುವರಿಸಿಕೊಂಡು ಹೋಗಲು ಅನುವು ಮಾಡಿಕೊಟ್ಟವರು. ಪ್ರೊ. ಲೌರಿ ಹೋಂಕೋ ಅವರು ಮೌಖಿಕ ಮಹಾಕಾವ್ಯಗಳ ಅಧ್ಯಯನದ ಮಹಾನಾಯಕ ಎಂದೇ ಪ್ರಸಿದ್ಧ

ರಾದವರು. ಬಹುಪಠ್ಯಗಳ ದಾಖಲಾತಿ ಮತ್ತು ಅಧ್ಯಯನದ ಅಗತ್ಯವನ್ನು ತಿಳಿದು ನಾಲ್ಕು ಸಿರಿಪಠ್ಯಗಳ ಸಂಗ್ರಹಕ್ಕೆ ಕಾರಣರಾದವರು. ಇವರು ಪ್ರೊ. ಕು.ಶಿ.ಯವರ ಸಹಕಾರದೊಂದಿಗೆ ಸಿರಿ ಮಹಾಕಾವ್ಯ ಹಾಗೂ ಆಚರಣೆಯ ದಾಖಲಾತಿಗೆ ನೀಡಿರುವ ಸಹಕಾರ ಹಾಗೂ ನನಗೆ ಈ ಯೋಜನೆಯಲ್ಲಿ ಕೆಲಸ ಮಾಡಲು ನೀಡಿರುವ ಅವಕಾಶದಿಂದಾಗಿ ಸಿರಿಯ ಬಗೆಗೆ ಒಂದಿಷ್ಟು ಕೆಲಸ ಮಾಡಲು ಸಾಧ್ಯವಾಯಿತು. ಈ ಇಬ್ಬರು ಹಿರಿಯ ವಿದ್ವಾಂಸರೂ ಇಂದು ನಮ್ಮ ನಡುವೆ ಇಲ್ಲ. ಈ ಎರಡು ದಿವ್ಯಾತ್ಮಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುವುದು ನನ್ನ ಪಾಲಿನ ಕರ್ತವ್ಯ ಎಂದು ಭಾವಿಸಿದ್ದೇನೆ.

2013ರಲ್ಲಿ ಜರ್ಮನಿಯ ವೂರ್ತ್ಸ್‌ಬೂರ್ಗ್ ವಿಶ್ವವಿದ್ಯಾಲಯ ಇಂಡಾಲಜಿ ವಿಭಾಗದ ಪ್ರಾಧ್ಯಾಪಕಿ ಪ್ರೊ. ಹೈಡ್ರೂನ್ ಬ್ರೂಕ್ನರ್ ಹಾಗೂ ಇದೇ ವಿಭಾಗದಲ್ಲಿ ಸಂದರ್ಶಕ ಪ್ರಾಧ್ಯಾಪಕರೂ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಹಾಗು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳೂ ಆಗಿರುವ ಪ್ರೊ. ಬಿ.ಎ. ವಿವೇಕ ರೈಯವರು ಜರ್ಮನ್ ಫೌಂಡೇಶನ್‌ನ ಆರ್ಥಿಕ ಅನುದಾನದಿಂದ ಜಂಟಿಯಾಗಿ ಹಮ್ಮಿಕೊಂಡ ಮೌಖಿಕ ಮಹಾಕಾವ್ಯ ಯೋಜನೆಯಲ್ಲಿ ನನ್ನನ್ನು ಹಾಗು ಇದೇ ವಿಭಾಗದ ಸಂಶೋಧನ ವಿದ್ಯಾರ್ಥಿನಿ ಪೌಲೀನೇ ಶೂಸ್ತರ್ ಲ್ಟೋಯೆಲೋ ಅವರನ್ನು ಸೇರಿಸಿಕೊಂಡರು. ಪೌಲೀನೆ ಅವರು ಪ್ರೊ. ಹೈಡ್ರೂನ್ ಬ್ರೂಕ್ನರ್ ಅವರ ಮಾರ್ಗದರ್ಶನದಲ್ಲಿ ಸಿರಿಯನ್ನು ಕುರಿತಾಗಿ ಸಂಶೋಧನೆ ಕೈಗೊಂಡಿದ್ದರು. ಇದಕ್ಕಾಗಿ 2013–2016ರ ವರೆಗೆ ತುಳುನಾಡಿಗೆ ಕ್ಷೇತ್ರಕಾರ್ಯಕ್ಕಾಗಿ ಬಂದಿದ್ದಾಗ ಪ್ರೊ. ವಿವೇಕ ರೈಯವರು ಮತ್ತು ನಾನು ಅನೇಕ ಬಾರಿ ಬೇರೆ ಬೇರೆ ಆಲಡೆಗಳಿಗೆ ಹೋಗಿ ಸಿರಿಜಾತ್ರೆಯನ್ನು ದಾಖಲಿಸಿಕೊಂಡಿದ್ದೇವೆ. ವಿವೇಕ ರೈಯವರಿಗೆ ಬಿಡುವಿಲ್ಲದಾಗ ನಾನು, ಪೌಲೀನೇ ಅನೇಕ ಸಿರಿಗಳು, ಕುಮಾರರು, ಸೊನ್ನೆ, ಗಿಂಡೆ, ಅಬ್ಬಯ ದಾರಯರನ್ನು ಸಂದರ್ಶನ ನಡೆಸಿದ್ದೇವೆ. 2015 ಮತ್ತು 2016ರಲ್ಲಿ ಈ ಯೋಜನೆಯ ಭಾಗವಾಗಿ ನನ್ನನ್ನೂ ಜರ್ಮನಿಗೆ ಎರಡು ಬಾರಿ ಕರೆಸಿಕೊಂಡಿದ್ದಾರೆ. ಈ ಸಂದರ್ಭಗಳಲ್ಲೆಲ್ಲ ಪ್ರೊ. ಹೈಡ್ರೂನ್ ಬ್ರೂಕ್ನರ್ ಹಾಗು ಪ್ರೊ. ಬಿ.ಎ. ವಿವೇಕ ರೈಯವರು ನನ್ನನ್ನು ತುಂಬ ಪ್ರೀತಿಯಿಂದ ವಿದ್ಯಾರ್ಥಿ ಸ್ನೇಹಿತನಂತೆ ನೋಡಿಕೊಂಡಿದ್ದಾರೆ. ಒಟ್ಟಿನಲ್ಲಿ ಈ ಎಲ್ಲ ಕೆಲಸಗಳು ಸಿರಿಯನ್ನು ಕುರಿತಾಗಿ ಮತ್ತೆ ಅಧ್ಯಯನ ನಡೆಸಲು, ಇನ್ನಷ್ಟು ವಿಸ್ತಾರವಾಗಿ ನೋಡಲು, ಭಿನ್ನ ದೃಷ್ಟಿಕೋನಗಳಿಂದ ಅರ್ಥೈಸಲು ನನಗೆ ಸಹಕಾರಿಯಾಯಿತು. ಗುರುಗಳಾದ ಪ್ರೊ. ಬಿ.ಎ. ವಿವೇಕ ರೈಯವರಲ್ಲಿ ಈ ಕೃತಿಗೆ ಮುನ್ನುಡಿಯನ್ನು ಬರೆದುಕೊಡಬೇಕೆಂದು ವಿನಂತಿಸಿಕೊಂಡಾಗ ಇಡೀ ಕೃತಿಯನ್ನು ಓದಿ ನೋಡಿ ಅನೇಕ ಕಡೆಗಳಲ್ಲಿ ಸೂಕ್ತ ಸಲಹೆಗಳನ್ನು ನೀಡಿ ಮೌಲಿಕ ಮುನ್ನುಡಿಯನ್ನು ಬರೆದು ನನ್ನನ್ನು ಹರಸಿದ್ದಾರೆ. ಪ್ರೊ. ಹೈಡ್ರೂನ್ ಬ್ರೂಕ್ನರ್ ಹಾಗು ಪ್ರೊ. ಬಿ.ಎ. ವಿವೇಕ ರೈ – ಇಬ್ಬರು ಪ್ರಾಧ್ಯಾಪಕರಿಗೂ ಗೌರವಪೂರ್ವಕ ಕೃತಜ್ಞತೆಗಳು. ಪೌಲೀನೇ ಜೊತೆಗಿನ ಸಿರಿಜಾತ್ರೆಗಳ ಕ್ಷೇತ್ರಾಧ್ಯಯನ ಹಾಗೂ ಸಂದರ್ಶನ, ಅನಂತರದ ಲಿಪೀಕರಣ ಹಾಗು ತರ್ಜುಮೆಯ ಕೆಲಸಗಳು ನನ್ನ ಬರವಣಿಗೆಗೆ ಬಹಳ ಉಪಯುಕ್ತ

ವಾದ ಮಾಹಿತಿಗಳನ್ನು ಒದಗಿಸಿವೆ. ಜರ್ಮನಿಯಲ್ಲಿ ಇದ್ದಷ್ಟು ದಿನ ನನಗೆ ಎಲ್ಲ ರೀತಿಯ ಸಹಕಾರವನ್ನೂ ನೀಡಿದ್ದಾರೆ. ಇವರ ಸಹಕಾರವನ್ನು ಬಹಳ ಪ್ರೀತಿಯಿಂದ ಸ್ಮರಿಸಿಕೊಳ್ಳುತ್ತೇನೆ.

ಡಾ. ಪಾದೇಕಲ್ಲು ವಿಷ್ಣು ಭಟ್ಟರಿಗೆ ಈ ಕೃತಿಯ ಕರಡನ್ನು ನೀಡಿ 'ಒಂದು ಬಾರಿ ಓದಿಕೊಡಿ ಸರ್' ಎಂದಾಗ ಬಿಡುವಿಲ್ಲದ ಕೆಲಸಗಳ ಮಧ್ಯೆಯೂ ಪುಟ ಪುಟಗಳಲ್ಲಿಯ ಅಕ್ಷರಕ್ಷರಗಳನ್ನು ಪರಿಶೀಲಿಸಿ ತಪ್ಪುಗಳು ಬಾರದಂತೆ ತಿದ್ದಿ ಇಡಿಯ ಅಧ್ಯಯನವನ್ನು ಕುರಿತು ಸೂಕ್ತ ಮುಕ್ತಾಯವನ್ನು ಬರೆಯಬೇಕೆಂಬ ಸಲಹೆಯನ್ನು ನೀಡಿದ್ದಲ್ಲದೆ ಈ ಕೃತಿಗೆ ಒಪ್ಪುವ ಶೀರ್ಷಿಕೆಯನ್ನೂ ಸೂಚಿಸಿದ್ದಾರೆ. ನನ್ನ ಕೇಳಿಕೆಯ ಮೇರೆಗೆ ಕೃತಿಯನ್ನು ಕುರಿತಾದ ಅವರ ಅಭಿಪ್ರಾಯಗಳನ್ನು ಬರೆದುಕೊಟ್ಟು ಈ ಕೃತಿಗೆ ಒಂದು ಚೌಕಟ್ಟನ್ನು ಹಾಕಿಕೊಟ್ಟಿದ್ದಾರೆ. ಇವರ ಸಹಕಾರಕ್ಕೆ ಕೃತಜ್ಞತೆಗಳು.

ಪ್ರೊ. ಅಮೃತ ಸೋಮೇಶ್ವರರು ತುಳುವಿನ ಕೆಲಸಕ್ಕೆ ಸಂಬಂಧಿಸಿದಂತೆ ನಮ್ಮ ನಡುವೆ ಇರುವ ದೊಡ್ಡ ಧೈರ್ಯಸ್ಥಾನ. ನನ್ನ ಮೇಲೆ ಎಲ್ಲ ಸಂದರ್ಭಗಳಲ್ಲಿ ಪ್ರೀತಿ ಮತ್ತು ಔದಾರ್ಯವನ್ನು ತೋರಿ ಹರಸಿದ್ದಾರೆ. ಅನೇಕ ಉಪಯುಕ್ತ ಸಲಹೆಗಳನ್ನು ನೀಡಿ ಆಶೀರ್ವದಿಸಿದ್ದಾರೆ. ಬರವಣಿಗೆಯ ಕೆಲಸಗಳಿಗೆ ಸದಾ ಪ್ರೋತ್ಸಾಹಿಸುತ್ತಾ ಶಕ್ತಿ ತುಂಬಿದ್ದಾರೆ. ಅವರು ತೋರಿದ ಪ್ರೀತಿಯನ್ನು ಎಂದಿಗೂ ಮರೆಯಲಾರೆ.

ನನ್ನ ಗುರುಗಳಾದ ಡಾ. ಚಿನ್ನಪ್ಪ ಗೌಡರು ಮಾಚಾರು ಗೋಪಾಲ ನಾಯ್ಕರ ಸಿರಿಕಾವ್ಯದ ಸಂಪಾದಕರಲ್ಲಿ ಒಬ್ಬರು. ಸಿರಿ ಆರಾಧನೆಯ ಬಗೆಗೆ ವ್ಯಾಪಕ ಕ್ಷೇತ್ರೀಯ ಅಧ್ಯಯನ ನಡೆಸಿದ ಹಿರಿಯ ವಿದ್ವಾಂಸರು. ಇವರು ಮಾಚಾರು ಗೋಪಾಲ ನಾಯ್ಕರ ಜೊತೆಗೆ ಕೋಟಿಚೆನ್ನಯ ಸಂಧಿಯನ್ನು ಕುರಿತಾಗಿ ನಡೆಸಿರುವ ಸಂದರ್ಶನದ ಕೆಲವು ಭಾಗವನ್ನು ನನ್ನ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡಿದ್ದೇನೆ. ಯಾವತ್ತೂ ನನ್ನನ್ನು ಪ್ರಿತಿಯಿಂದ ಮಾತನಾಡಿಸುತ್ತಾ ವಿದ್ಯಾರ್ಥಿ ನೆಲೆಯಲ್ಲಿ ಪ್ರೋತ್ಸಾಹಿಸುತ್ತಾ ಬಂದ ಇವರಿಗೆ ಕೃತಜ್ಞತೆಗಳು. ಕಾವ್ಯವನ್ನು ಹಾಡಿರುವ ಮಾಚಾರು ಗೋಪಾಲ ನಾಯ್ಕರಿಗೂ ಕೃತಜ್ಞತೆಗಳು.

ಕೃತಿಪ್ರಕಟನೆ ತುಂಬ ಕಷ್ಟದ ಕೆಲಸ. ಈ ಕಾರ್ಯಕ್ಕಾಗಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರನ್ನು ಬಹಳ ಸಂಕೋಚದಿಂದ ಕೇಳಿಕೊಂಡಾಗ ಮರುಮಾತನಾಡದೆ 'ನಿಮ್ಮ ಕೃತಿಯನ್ನು ತುಳು ಅಕಾಡೆಮಿಯಿಂದ ಪ್ರಕಟಿಸಲು ಸಂತೋಷ ಅಣ್ಣ' ಎಂದು ಹೇಳುತ್ತಾ ಪ್ರಕಟನೆಗೆ ಬೇಕಾದ ಎಲ್ಲ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ. ನನಗೆ ಇದಕ್ಕಿಂತ ದೊಡ್ಡ ಸಂತೋಷ ಬೇರೆ ಇಲ್ಲ. ಅಧ್ಯಕ್ಷರಾದ ಎ.ಸಿ. ಭಂಡಾರಿಯವರು ನೀಡಿರುವ ಎಲ್ಲ ಸಹಕಾರಕ್ಕೆ ಗೌರವಪೂರ್ವಕ ಕೃತಜ್ಞತೆಗಳು. ಅಕಾಡೆಮಿಯ ರಿಜಿಸ್ಟ್ರಾರ್ ಚಂದ್ರಹಾಸ ರೈಯವರು ಮತ್ತು ಸರ್ವಸದಸ್ಯರು ಕೃತಿ ಪ್ರಕಟನೆಯಿಂದ ಹಿಡಿದು ಎಲ್ಲ ಸಂದರ್ಭಗಳಲ್ಲಿ ಅಗತ್ಯ ಸಹಕಾರಗಳನ್ನು ನೀಡಿದ್ದಾರೆ. ಇವರೆಲ್ಲರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಎ.ವಿ. ನಾವಡರು ಹಿರಿಯ ಜಾನಪದ ವಿದ್ವಾಂಸರು. ಶ್ರೀಮತಿ 'ಗಿಡಿಕೆರೆ

ರಾಮಕ್ಕ ಮುಗ್ಗೇರ್ತಿಯವರು ಕಟ್ಟಿದ ಸಿರಿಪಾಡ್ದನ'ದ ಸಂಪಾದಕರು. ಈ ಪಾಡ್ದನವನ್ನು ನನ್ನ ಅಧ್ಯಯನದಲ್ಲಿ ಬಳಸಿಕೊಂಡಿದ್ದೇನೆ. ಪ್ರೊ. ಎ.ವಿ. ನಾವಡ ಹಾಗು ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಹಿರಿಯ ಲೇಖಕಿ, ಸಂಶೋಧಕಿಯಾದ ಡಾ. ಇಂದಿರಾ ಹೆಗ್ಗಡೆಯವರು ಸಿರಿ ಆರಾಧನೆ, ಆಚರಣೆಗಳ ಬಗೆಗೆ ಬಹುವಾಗಿ ಕ್ಷೇತ್ರೀಯ ಅಧ್ಯಯನ ನಡೆಸಿದ ವಿದ್ವಾಂಸರಲ್ಲಿ ಒಬ್ಬರು. ಸಿರಿ ಆಚರಣೆಯ ಬಗೆಗೆ ಇವರ ಅಭಿಪ್ರಾಯಗಳನ್ನು ಬಳಸಿಕೊಂಡಿದ್ದೇನೆ. ಇವರಿಗೆ ಕೃತಜ್ಞತೆಗಳು.

ಸ್ನೇಹಿತರೂ, ಹಿರಿಯ ವಿದ್ವಾಂಸರೂ, ಸಂಶೋಧಕರೂ ಆಗಿರುವ ಶ್ರೀಯುತ ಕೆ.ಎಲ್. ಕುಂಡಂತಾಯ, ಡಾ. ವೈ.ಎನ್. ಶೆಟ್ಟಿ ಹಾಗು ಡಾ. ರಾಘವ ನಂಬಿಯಾರ್ ಇವರು ನನ್ನ ಬರವಣಿಗೆಯ ಸಂದರ್ಭದಲ್ಲಿ ಅಮೂಲ್ಯ ಸಲಹೆ, ಸಹಕಾರಗಳನ್ನು ನೀಡಿ ನನ್ನನ್ನು ಪ್ರೋತ್ಸಾಹಿಸಿದ್ದಾರೆ. ಇವರ ಪ್ರೀತಿಗೆ ಕೃತಜ್ಞನಾಗಿದ್ದೇನೆ. ಸ್ನೇಹಿತ ಡಾ. ಅರುಣ್ ಕುಮಾರ್ ಎಸ್.ಆರ್. ಅವರು ನನ್ನ ಕೋರಿಕೆಯ ಮೇರೆಗೆ ಕೆಲವೊಂದು ಮಾಹಿತಿಗಳನ್ನು ಒದಗಿಸಿದ್ದಾರೆ. ಇವರು ನೀಡಿರುವ ಸಹಕಾರವನ್ನು ಇಲ್ಲಿ ಸ್ಮರಿಸಿ ಕೊಳ್ಳುತ್ತೇನೆ.

ಆರ್.ಆರ್.ಸಿ. ಸಂಸ್ಥೆಯಲ್ಲಿ ನಾನು 1995ರಿಂದ 2018 ಮೇ 31ರ ವರೆಗೆ ಸಂಶೋಧಕನಾಗಿ, ಸಹ ಸಂಯೋಜನಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದೆ. ಈ 23 ವರ್ಷಗಳಲ್ಲಿ ಆರ್.ಆರ್.ಸಿ.ಯ ಮೂಲಕ ಕರ್ನಾಟಕ ಜಾನಪದಕ್ಕೆ ಸಂಬಂಧಿಸಿದ ಮಹತ್ವದ ದಾಖಲಾತಿಗಳನ್ನು ನಡೆಸಿದ್ದೇವೆ. ಇದೊಂದು ತಂಡದ ಕೆಲಸವಾದುದರಿಂದ ನನ್ನ ಜೊತೆ ಕೈಜೋಡಿಸಿದವರು ನನ್ನ ಸಹೋದ್ಯೋಗಿ ಮಿತ್ರರಾದ ಶ್ರೀಯುತ ಎಸ್.ಎ. ಕೃಷ್ಣಯ್ಯ, ಕು.ಶಿ. ಹರ್ಷವರ್ಧನ ಭಟ್ ಹಾಗು ಲಚ್ಚೇಂದ್ರ ಇವರು. 1999 – 2000 ಇಸವಿಯಲ್ಲಿ ದರೆಗುಡ್ಡೆಯ ಶ್ಯಾಮರಾಯ ಶೆಟ್ಟಿ, ಅತ್ರಿಜಾಲಿನ ಕರ್ಗಿ ಶೆಡ್ತಿ ಹಾಗೂ ಬೆಳ್ತಂಗಡಿ ಕುಂಬಾರಕೊಪ್ಪದ ರಾಮಕ್ಕ – ಈ ಮೂವರು ವಕ್ತೃಗಳು ಹಾಡಿರುವ ಸಿರಿಪಠ್ಯಗಳನ್ನು ಸಂಗ್ರಹಿಸಿರುತ್ತೇವೆ. ನಾನು ಈ ಸಂಸ್ಥೆಯಿಂದ ನಿವೃತ್ತನಾಗುವ ಒಂದು ತಿಂಗಳ ಮೊದಲು ಕಾರ್ಕಳ ಮಾಳದ ಲೀಲಾ ಶೆಡ್ತಿಯವರ ಪಠ್ಯವನ್ನು ಲಚ್ಚೇಂದ್ರ ಅವರ ಸಹಕಾರದೊಂದಿಗೆ ಸಂಗ್ರಹಿಸಿದ್ದೇನೆ. ಆರ್.ಆರ್.ಸಿ.ಯಲ್ಲಿರುವ ಸಿರಿಕಾವ್ಯಗಳ ಸಂಗ್ರಹ, ಲಿಪೀಕರಣ ಇತ್ಯಾದಿ ಕೆಲಸಗಳಲ್ಲಿ ನಾನೇ ತೊಡಗಿಸಿಕೊಂಡಿರುವ ಆ ಕಾಲದಲ್ಲಿ ನಾನು ಮಾಡಿಕೊಂಡಿರುವ ಟಿಪ್ಪಣಿಗಳಿಂದ ಮಾಹಿತಿಗಳನ್ನು ಪಡೆದುಕೊಂಡು ಈ ಕೃತಿರಚನೆಯ ಸಂದರ್ಭ ಬಳಸಿಕೊಳ್ಳಲು ನನಗೆ ಅನುಕೂಲವಾಯಿತು. ನನ್ನ ಜೊತೆ ಈ ಎಲ್ಲ ಕೆಲಸಗಳಲ್ಲಿ ಕೈ ಜೋಡಿಸಿರುವ ಮಿತ್ರರಾದ ಶ್ರೀ ಎಸ್.ಎ. ಕೃಷ್ಣಯ್ಯ, ಕೆ.ಎಸ್. ಹಷವರ್ಧನ ಭಟ್ ಹಾಗೂ ಲಚ್ಚೇಂದ್ರ ಇವರ ಸಹಕಾರಕ್ಕೆ ಕೃತಜ್ಞನಾಗಿದ್ದೇನೆ. ಶ್ರೀಮತಿ ಭಾರತಿ ಹಾಗೂ ಗೋವಿಂದ ಪೈ ಸಂಶೋಧನ ಕೇಂದ್ರದ ಗ್ರಂಥಪಾಲಕರಾದ ವೆಂಕಟೇಶ ನಾಯ್ಕರ ಸಹಕಾರವನ್ನು ಸ್ಮರಿಸಿಕೊಳ್ಳುತ್ತೇನೆ.

ಸಿರಿಆಚರಣೆಯಲ್ಲಿ ಪಾಲ್ಗೊಂಡು ಜೋಗದಿಂದ ಮಾಯ, ಮಾಯದಿಂದ ಜೋಗಕ್ಕೆ ಬಂದು ಸಿರಿಕಾವ್ಯವನ್ನು ನಮಗಾಗಿ ದಿನಗಟ್ಟಲೆ ಹಾಡಿ ಅನೇಕ ಸಂದರ್ಭಗಳಲ್ಲಿ ಸಂದರ್ಶನದ ಮೂಲಕ ಉಪಯುಕ್ತ ಮಾಹಿತಿಗಳನ್ನು ನೀಡಿ ಸಿರಿಯನ್ನು ಭಿನ್ನ ನೆಲೆಯಿಂದ ಅರ್ಥೈಸಲು ಸಹಕರಿಸಿ ಸಂಶೋಧನೆಯ ಭಾಗವಾಗಿ ಉಳಿದವರು ನನ್ನ ವಕ್ತೃಗಳಾದ ಶ್ರೀಮತಿ ಕರ್ಗಿ ಶೆಡ್ತಿ, ಶ್ಯಾಮರಾಯ ಶೆಟ್ಟಿ, ಶ್ರೀಮತಿ ರಾಮಕ್ಕ ಹಾಗು ಲೀಲಾ ಶೆಡ್ತಿಯವರು. ಇವರಲ್ಲಿ ಶ್ಯಾಮರಾಯ ಶೆಟ್ಟಿಯವರು 2017ರಲ್ಲಿ ನಮ್ಮನ್ನಗಲಿ ಹೋಗಿದ್ದಾರೆ. ಈ ನಾಲ್ವರು ವಕ್ತೃಗಳು ನೀಡಿರುವ ಅಮೂಲ್ಯ ಮಾಹಿತಿಗಳನ್ನು ಆಧರಿಸಿ ಈ ಕೃತಿಯನ್ನು ರಚಿಸಿದ್ದೇನೆ. ಇವರ ಸಹಕಾರವನ್ನು ಇಲ್ಲಿ ಗೌರವದಿಂದ ಸ್ಮರಿಸಿಕೊಳ್ಳುತ್ತೇನೆ.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯರಾದ ಶ್ರೀಯುತ ಬೆನೆಟ್ ಅಮ್ಮಣ್ಣ ಅವರು ಈ ಕೃತಿಯ ಕರಡು ತಿದ್ದುವಲ್ಲಿ ನನಗೆ ಬಹುವಾಗಿ ಸಹಕಾರ ನೀಡಿದ್ದಾರೆ. ಅವರ ಸಹಕಾರಕ್ಕೆ ಕೃತಜ್ಞತೆಗಳು.

ನನ್ನನ್ನು ಸದಾ ಪ್ರೋತ್ಸಾಹಿಸುತ್ತಾ ಬರವಣಿಗೆಗೆ ಶಕ್ತಿತುಂಬಿದ ನನ್ನ ಆತ್ಮೀಯ ವೈದ್ಯರಾದ ಡಾ. ನೀತಾ ಅವರಿಗೆ ಕೃತಜ್ಞತೆಗಳು.

'ಸಿರಿ ಕಾವ್ಯಾಲೋಕನ'ದ ಒಳಪುಟಗಳ ಸೊಗಸಾದ ವಿನ್ಯಾಸವನ್ನು ಮಾಡಿ ಈ ಕೃತಿಗೆ ಅಂದವನ್ನು ತಂದುಕೊಟ್ಟವರು ಶ್ರೀ ಕಲ್ಲೂರು ನಾಗೇಶ. ಶ್ರೀ ನಾಗೇಶ್, ಶ್ರೀಮತಿ ಭಾರತಿ ಹಾಗು ಆಕೃತಿ ಬಳಗದವರ ಸಹಕಾರಕ್ಕೆ ಪ್ರೀತಿಯ ಕೃತಜ್ಞತೆಗಳು.

ಈ ಕೃತಿಗೆ ಒಪ್ಪುವ ಸೊಗಸಾದ ಮುಖಪುಟವನ್ನು ವಿನ್ಯಾಸಗೊಳಿಸಿ ಕೃತಿಯ ಸೌಂದರ್ಯವನ್ನು ಹೆಚ್ಚಿಸಿದವರು ಯುವ ಕಲಾವಿದ ಶ್ರೀ ಅಡ್ವೆ ಪುರುಷೋತ್ತಮ ಅವರು. ಬರವಣಿಗೆ ಸಂದರ್ಭ ನನಗೆ ಎಲ್ಲ ರೀತಿಯ ಸಹಕಾರಗಳನ್ನು ನೀಡಿದವರು ನನ್ನ ಸಂಶೋಧನ ವಿದ್ಯಾರ್ಥಿ ಸ್ನೇಹಿತ ಪೃಥ್ವಿರಾಜ್ ಕವತ್ತಾರು ಅವರು. ಈ ಇಬ್ಬರು ಸ್ನೇಹಿತರಿಗೂ ಕೃತಜ್ಞತೆಗಳು.

ತುಳುಸಾಹಿತ್ಯ, ಸಂಸ್ಕೃತಿ ಸಂಬಂಧಿಯಾದ ನನ್ನ ಎಲ್ಲ ಕೆಲಸಗಳಿಗೆ ಸದಾ ಪ್ರೋತ್ಸಾಹ ನೀಡುತ್ತಾ ಬಂದ ನನ್ನ ಮಡದಿ ನಮಿತಾ, ಮಗಳು ವರ್ಣಾ, ಅಳಿಯ ಭಗವಾನ್‌ದಾಸ್ ಇವರ ಪ್ರೋತ್ಸಾಹವನ್ನು ಇಲ್ಲಿ ಪ್ರೀತಿಯಿಂದ ಸ್ಮರಿಸಿಕೊಳ್ಳುತ್ತೇನೆ.

ಮಂಗಳೂರು **ಡಾ. ಅಶೋಕ ಆಳ್ವ**

1 ಮಾರ್ಚ್ 2019

ಕಾವ್ಯಾಲೋಕದಲ್ಲಿ

ಅಧ್ಯಕ್ಷರ ಮಾತು 5

ಸಿರಿ ಶೋಧಕ್ಕೆ ಹಾಸಿದ ಹೊಸ ದಲ್ಯ 7

ವಾಚಕನತ್ತಣಿಂದ...... 13

ದಲಿಯ ಏರುವ ಮುನ್ನ... 20

ಕಾವ್ಯಾಲೋಕದಲ್ಲಿ 26

ಅರ್ಪಣೆ 29

ದಲಿಯದೊಳಗೆ 31

- ಸಿರಿ ಆಲಡೆಗಳು 38
- ಸಿರಿಜಾತ್ರೆ 40
- ದರ್ಶನಕ್ಕೆ ಪರ್ಯಾಯ ಕೈಪರಕೆ 43
- ಹೊಸ ಸಿರಿಗಳ ಸೇರ್ಪಡೆ ಹಾಗೂ ಇಲ್ಲೆಚ್ಚಿದ ದಲಿಯ 44
- ದಲಿಯ ಜಪ್ಪುನಿ ಅಥವಾ ಒಲಿಮದೆಗುಂಡ ಜಪ್ಪುನಿ ಹಾಗೂ ಪುರ್ಪೊ ಬುಡ್ಪುನಿ 46
- ಸಿರಿ ಸಂಧಿ 48
- ಸಿರಿ ಬಳಗದ ಕುಮಾರನಿಗೆ ಮಾಂಸಾಹಾರದ ಎಡೆ ಹಾಕುವ ವಿಶಿಷ್ಟ ಆಚರಣೆ 'ಮಂಜ' 50

ಸಿರಿ ಕಾವ್ಯಗಳ ಅವಲೋಕನ 55

- ಸತ್ಯನಾಪುರದ ಅಜ್ಜನವರ ಪೂರ್ವ ವೃತ್ತಾಂತ 56
- ಲಂಕೆಲೋಕನಾಡಿನ ಜೀರ್ಣೋದ್ಧಾರ, ಸಿರಿಯ ಹುಟ್ಟು 59
- ಬಸಲೂರ ಕಾಂತುಪೂಂಜನ ಜೊತೆಗೆ ಸಿರಿಯ ಮದುವೆ ಪ್ರಸ್ತಾವ, ವಿವಾಹ 70
- ಸಿರಿ ಋತುಮತಿಯಾಗುವುದು, ಇದರ ಆಚರಣೆ, ಗರ್ಭವತಿಯಾಗುವುದು, ಸೀಮಂತ ಇತ್ಯಾದಿ 84

- ಕುಮಾರನ ಜನನ 98
- ಸತ್ಯನಾಪುರದ ಅಜ್ಜನವರ ಮರಣ 106
- ಅಜ್ಜನವರ ಶವ ಸಂಸ್ಕಾರ, ಕಾಂತುಪೂಂಜನಿಂದ ಮೋಸದ ಪಂಚಾಯತಿ, ಸಿರಿ ದೇಶಾಂತರ ಹೊರಡುವುದು ಇತ್ಯಾದಿ 109
- ಸಿರಿ ಬಸಲೂರ ಅರಮನೆಗೆ, ಕಾಂತುಪೂಂಜನಿಗೆ ಬರ (ವಿಚ್ಛೇದನ) ಹೇಳುವುದು 133
- ಸಿರಿ ಬಸಲೂರ ಅರಮನೆ ಇಳಿದು ದೇಶಾಂತರ ಹೋಗುವ ಸಂದರ್ಭ 148
- ಬೋಲಬಾರಿ ಚತ್ತೇರಿಗಳು/ ಸತ್ತಿರಿಕುಲು 160
- ಬೋಲದ ಕಾಡಲ್ಲಿ ಕುಮಾರ, ದಾರುವಿನ ಮಾಯ 161
- ಕೊಟ್ಟರಾಡಿಯ ಕೊಡ್ಸರಾಳ್ವ, ಸಿರಿಯ ಎರಡನೆಯ ವಿವಾಹ 183
- ಸಾಮು ಹಾಗೂ ಸಿರಿಯ ಸತ್ಯದ ಪರೀಕ್ಷೆ 204
- ಸಿರಿಯು ಗರ್ಭವತಿಯಾಗಿ ಸೊನ್ನೆಯ ಹೆರಿಗೆ, ಸಿರಿಯ ಅಂತ್ಯ ಇತ್ಯಾದಿ 205
- ಸೊನ್ನೆ ಗಿಂಡೆಯರು 225
- ಗಿಂಡೆಯ ಪ್ರಸ್ತಾವ 228
- ಸೊನ್ನೆಯ ಮದುವೆ 240
- ಗಿಂಡೆಯ ನೀರ ಪೆರತ್ತ (ಋತುಮತಿಯಾದುದರ ಆಚರಣೆ) 245
- ಸೊನ್ನೆಯ ಋತುಮತಿಯಾದುದರ ಆಚರಣೆ ಹಾಗೂ ಸೀಮಂತದ ಮದುವೆ 262
- ಅಬ್ಬಯ ದಾರಯರು (ಅಬ್ಬಗ ದಾರಗರು) 267
- ಅಬ್ಬಯ ದಾರಯರ ಚೆನ್ನೆ ಆಟ 270
- ಅಬ್ಬಯ ದಾರಯರ ಸಾವಿನ ಅನಂತರದ ಘಟನೆಗಳು 284
- ನಂದೊಲಿಗೆ ನಾಲ್ಕುಸ್ಥಾನ 297
- ಬೊಲ್ಯೊಟ್ಟು ಸ್ಥಾನದಲ್ಲಿ 299

ದಲಿಯ ಇಳಿಯುವ ಮುನ್ನ.... 306
- ಸಿರಿ ಆಚರಣೆ ಒಂದು ಸಾವಿನ ಆಚರಣೆಯೇ? 336

● ತಲವು ಲಪ್ಪುನಿ (ತಲಬು ಅಳೆಯುವುದು) 340
● ಪೇರೂರು ಆಲಡೆಯಲ್ಲಿ 'ತಲವು ಲಪ್ಪುನಿ' 342
● ಗಡಿ ದೀಪುನು ಅಥವಾ ಕುಕ್ಕುದ ಮರ ಕಡ್ಪುನು
(ಗಡಿ ಇಡುವುದು ಅಥವಾ ಮಾವಿನ ಮರ ಕಡಿಯುವುದು) 344
● ಚೀಂಕ್ರಿ ಪಾಡುನು 345
● ಅಗೆಲ್ ಬಲಸುನು (ಎಡೆ ಹಾಕುವುದು) 345
● ಎರುಕೋಲ/ಕಾಲೇಕೋಲ 348
● ಅಂಬಿದ ವರಸರಿ 349

ಸಿರಿಕಾವ್ಯಾಲೋಕನದ ವಕ್ತೃಗಳು 351
● ಪಾಡ್ದನಗಾರ್ತಿ ಕರ್ಗಿ ಶೆಡ್ತಿಯವರ ಬದುಕು, ಹಿನ್ನೆಲೆ 351
● ಸಿರಿಕಾವ್ಯದ ಹಾಡುಗಾರ್ತಿ, ಅಬ್ಬಗ ದರ್ಶನ ಪಾತ್ರಿ ಲೀಲಾ 355
● ಕುಮಾರ ಪಾತ್ರಿ ಮಾಚಾರು ಗೋಪಾಲ ನಾಯ್ಕ 363
● ಗಿಡಿಕೆರೆ ರಾಮಕ್ಕ ಮುಗ್ಗೇರ್ತಿ 371
● ಸಿರಿದರ್ಶನ ಪಾತ್ರಿ ರಾಮಕ್ಕ 373
● ಹಿರಿಯ ಕುಮಾರ ಪಾತ್ರಿ ಶ್ಯಾಮರಾಯ ಶೆಟ್ಟಿ 377

ಪರಾಮರ್ಶನ ಸಾಹಿತ್ಯ 381

ಸಾಂಸ್ಕೃತಿಕ ಪದಕೋಶ 384

ಅರ್ಪಣೆ



ಅರಿವಿನ ಸಿರಿ ಮೂಡಿಸಿ
ಅಬ್ಧಿಯ ಧಾರೆಯಂತೆ ವಾತ್ಸಲ್ಯ ಹರಿಸಿ ಪೋಷಿಸಿದ
ಅಪ್ಪ
ಕೇಪು ವಿಶ್ವನಾಥ ಆಳ್ವ ಮತ್ತು
ಅಮ್ಮ
ಲಲಿತಾ ಆಳ್ವ

ಇವರ ಪುಣ್ಯ ಆತ್ಮಗಳನು
ಭಕ್ತಿಪೂರ್ವಕ ನೆನೆದು.

ದಲಿಯದೊಳಗೆ

ತುಳುನಾಡಿನ ಅಗ್ರಮಾನ್ಯ ಪಾಡ್ದನಗಳಲ್ಲಿ ಸಿರಿ ಬಹಳ ಮಹತ್ವದ್ದು. ಬೇರೆ ಬೇರೆ ಕಾರಣಗಳಿಂದಾಗಿ ಸಿರಿಪಾಡ್ದನವು ವಿದ್ವತ್ ವಲಯಗಳಲ್ಲಿ ಮತ್ತೆ ಮತ್ತೆ ಚರ್ಚೆಗೆ ಒಳಗಾಗುತ್ತಾ ಬಂದಿದೆ. ತುಳುನಾಡಿನಲ್ಲಿ ಗುರುತಿಸಲ್ಪಟ್ಟಿರುವ ಸುಮಾರು 70ಕ್ಕಿಂತಲೂ ಹೆಚ್ಚು ಆಲಡೆಗಳಲ್ಲಿ ಸುಮಾರು 30 ಆಲಡೆಗಳಲ್ಲಿ ವಾರ್ಷಿಕವಾಗಿ ನಡೆಯುವ ಸಿರಿಜಾತ್ರೆಗಳಲ್ಲಿ ಸಿರಿಪಠ್ಯವು ಮತ್ತೆ ಮತ್ತೆ ನವೀಕರಣಗೊಳ್ಳುತ್ತಾ ಬರುತ್ತಿದೆ. ಅಗರಿ ಶ್ರೀನಿವಾಸ ಭಾಗವತ, ನಾರಂಪಾಡಿ ಸುಬ್ಬಯ್ಯ ಶೆಟ್ಟಿ, ಡಿ.ವಿ. ಹೊಳ್ಳ, ಶೇಣಿ ಗೋಪಾಲಕೃಷ್ಣ ಭಟ್ಟ ಮತ್ತು ಮಲ್ಪೆ ರಾಮದಾಸ ಸಾಮಗ ಹಾಗೂ ಸೀತಾನದಿ ಗಣಪಯ್ಯ ಶೆಟ್ಟಿ ಅವರುಗಳು ಬರೆದ 'ತುಳುನಾಡ ಸಿರಿ' (ತುಳುನಾಡ ಸಿರಿದೇವಿ) ಯಕ್ಷಗಾನಪ್ರಸಂಗಗಳು ರಂಗದ ಮೇಲೆ ಚರಿತ್ರೆಯನ್ನೆ ನಿರ್ಮಿಸಿ ಆಗೊಮ್ಮೆ ಈಗೊಮ್ಮೆ ಈಗಲೂ ಪ್ರದರ್ಶನ ಕಾಣುತ್ತಿವೆ. ಆ ಮೇಲಿನ ದಿನಗಳಲ್ಲಿ ಶ್ರೀಗಳಾದ ಪೊಳಲಿ ಶೀನಪ್ಪ ಹೆಗ್ಡೆ (1991), ಅಮೃತ ಸೋಮೇಶ್ವರ (1997), ಎ.ವಿ. ನಾವಡ (1999) ಅವರು ತುಂಬ ಭಿನ್ನ ಅನ್ನಬಹುದಾದ ಸಿರಿಯ ಪಠ್ಯಗಳನ್ನು ಸಂಪಾದಿಸಿ ಕೊಟ್ಟರು. ಅಮೇರಿಕಾದ ಕ್ಯಾಲಿಫೋರ್ನಿಯಾದ ಹೇವರ್ಡ್ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಪೀಟರ್ ಕ್ಲಾಸ್ ಅವರು ಕರ್ಗಿ ಮುಂಡಾಲ್ದಿ, ತಂಬೆರ್ ಪೂಜಾರ್ತಿ ಹಾಗೂ ಚೆನ್ನಯ ಪೂಜಾರಿ ಅವರಿಂದ ಸಂಗ್ರಹಿಸಿದ ಸಿರಿ ಪಠ್ಯದ ಜೊತೆಗೆ ಸಿರಿ ಪಾಡ್ದನದ ವಸ್ತು ಮತ್ತು ಕಾರ್ಯದ ಬಗೆಗೆ ಪ್ರೌಢವಾದ ಲೇಖನವನ್ನು ಬರೆದರು. ಕೆ.ಜೆ. ಶೆಟ್ಟಿ ಕಡಂದಲೆ ಇವರು 1973ರಲ್ಲಿ ಹಾಗು 1984ರಲ್ಲಿ ಶ್ರೀ ಎನ್.ವಿ. ರಾವ್ ಇವರು ಸಿರಿ ಕತೆಯನ್ನು ಆಧರಿಸಿ ರಚಿಸಿದ ಕಾದಂಬರಿ 'ತುಳುನಾಡ ಸಿರಿ' ಪ್ರಕಟವಾಯಿತು.

2008ರಲ್ಲಿ ಬೋಳ ಚಿತ್ತರಂಜನದಾಸ್ ಶೆಟ್ಟಿಯವರ 'ಬಿನ್ನೆದಿ-ತಮ್ಮಲೆ ಅರ್ವತ್ತ ಕಟ್ಟ್ ಸಿರಿ ಪಾಡ್ದನ' ತುಳುವಿನಲ್ಲಿ ಸಿರಿಕತೆಯನ್ನು ಆಧರಿಸಿ ಪಾಡ್ದನ ಶೈಲಿಯಲ್ಲಿ ರಚಿಸಿರುವ ಕೃತಿ ಪ್ರಕಟವಾಯಿತು. ಇವಕ್ಕೆಲ್ಲ ಕಿರೀಟಪ್ರಾಯವಾಗಿ 1999ರಲ್ಲಿ ಬೆಳ್ತಂಗಡಿ ತಾಲೂಕಿನ ಉಜಿರೆ ಗ್ರಾಮದ ಬೆಳಾಲು ಮಾಚಾರಿನ ಮಾಪಲ ಮನೆಯ ಹಿರಿಯ ಅನುಭವಿ ಕುಮಾರ ದರ್ಶನಪಾತ್ರಿ ಶ್ರೀ ಗೋಪಾಲ ನಾಯ್ಕ ಇವರು ಹಾಡಿರುವ 'Siri Epic as performed by Gopal Naik' ಎಂಬ ಗ್ರಂಥ ಎರಡು ಸಂಪುಟಗಳಲ್ಲಿ ಹಾಗೂ ಇದರ ಪಠ್ಯೀಕರಣ ಪ್ರಕ್ರಿಯೆ ಹಾಗೂ ಸಿರಿ ಪಠ್ಯದ ಮಹತ್ವವನ್ನು ಹಲವು ಆಯಾಮಗಳಿಂದ ವಿವೇಚಿಸುವ ಒಂದು ಸಂಪುಟ – ಹೀಗೆ ಮೂರು ಬೃಹತ್ ಸಂಪುಟಗಳು ಪ್ರಕಟಗೊಂಡವು. ಸುಮಾರು 2000 ಪುಟಗಳ 15,681 ಸಾಲುಗಳನ್ನೊಳಗೊಂಡ ಈ ಸಂಪುಟಗಳಲ್ಲಿ ಸಿರಿಸಂಧಿಯ ಮೂಲ ಪಠ್ಯವನ್ನು ಅಂತಾರಾಷ್ಟ್ರೀಯವಾಗಿ ಸ್ವೀಕೃತವಾದ ಪರಿಷ್ಕೃತ ರೋಮನ್ ಲಿಪಿಯಲ್ಲಿ ನೀಡಿ ಇದರ ಇಂಗ್ಲಿಷ್ ಅನುವಾದವನ್ನು ಮೂಲಪಠ್ಯದ ಸಾಲು, ಧಾಟಿ ಹಾಗು ಆಶಯಗಳಿಗೆ ಧಕ್ಕೆಯಾಗದ ರೀತಿಯಲ್ಲಿ ಫಿನ್ಲೆಂಡಿನ ಅಕಾಡೆಮಿ ಆಫ್ ಕೌನ್ಸಿಲಿನ ರಾಷ್ಟ್ರೀಯ ಪ್ರಾಧ್ಯಾಪಕ ಪ್ರೊ. ಲೌರಿ ಹೋಂಕೋ, ಇವರ ಮಡದಿ ಭಾಷಾತಜ್ಞೆ, ಕಂಪ್ಯೂಟರ್ ತಜ್ಞೆ ಅನೇಲಿ ಹೋಂಕೋ ಹಾಗು ಮಂಗಳೂರು ವಿಶ್ವವಿದ್ಯಾನಿಲಯದ ಹಿರಿಯ ವಿದ್ವಾಂಸರಾದ ಪ್ರೊ. ಬಿ.ಎ. ವಿವೇಕ ರೈ, ಡಾ. ಚಿನ್ನಪ್ಪ ಗೌಡ ಇವರು ಸಂಪಾದಿಸಿ ಕೊಟ್ಟರು.

ಈ ಕೃತಿ ಪ್ರಕಟನೆಯ ಬೆನ್ನಲ್ಲೆ ಪ್ರೊ. ಲೌರಿ ಹೋಂಕೋ ಅವರ ಮನಸ್ಸಲ್ಲಿ ಹೊಸ ಯೋಜನೆಯೊಂದು ರೂಪತಾಳಿತು. ಬಂಟ ಮಹಿಳೆಯಾದ ಸಿರಿಯ ಕಥೆಯನ್ನು ಬಂಟ ಮಹಿಳೆ, ಬಂಟ ಪುರುಷ, ಬಂಟೇತರ ಮಹಿಳೆ ಹಾಗು ಪುರುಷ ಹೇಗೆ ಹಾಡುತ್ತಾರೆ ಎಂಬುದಾಗಿ ಅಧ್ಯಯನ ನಡೆಸಲು ಬೇರೆ ಬೇರೆ ಪ್ರದೇಶ ಹಾಗು ಜನಾಂಗಗಳಿಗೆ ಸಂಬಂಧಿಸಿದಂತೆ ಭಿನ್ನ ಪಠ್ಯಗಳನ್ನು ದಾಖಲಿಸಿಕೊಳ್ಳುವುದರ ಜೊತೆಗೆ ಇದರ ಪಠ್ಯೀಕರಣವನ್ನು ಗೋಪಾಲ ನಾಯ್ಕರ ಪಠ್ಯದ ರೀತಿಯಲ್ಲಿಯೇ ಪ್ರಕಟಿಸಬೇಕೆಂಬುದು ಅವರ ಮಹದಾಸೆಯಾಗಿತ್ತು. ಈ ಬಗೆಗೆ ಆರ್.ಆರ್.ಸಿ.ಯ ನಿರ್ದೇಶಕರಾಗಿದ್ದ ಪ್ರೊ. ಕು.ಶಿ. ಹರಿದಾಸ ಭಟ್ಟರಲ್ಲಿ ಚರ್ಚಿಸಿದಾಗ ಅವರು ಆರ್.ಆರ್.ಸಿ.ಯ ದಾಖಲಾತಿ ತಂಡ ಈ ಕೆಲಸವನ್ನು ನಿರ್ವಹಿಸಬಹುದೆಂದು ಒಪ್ಪಿಕೊಂಡರು. ಹೀಗಾಗಿ ನನ್ನ ನೇತೃತ್ವದಲ್ಲಿ ಶ್ರೀ ಎಸ್.ಎ. ಕೃಷ್ಣಯ್ಯ, ಹರ್ಷವರ್ಧನ ಭಟ್ ಹಾಗೂ ಲಚ್ಚೇಂದ್ರ ಅವರನ್ನೊಳಗೊಂಡ ತಂಡವು 1999–2000ನೇ ಇಸವಿಯ ಒಂದು ವರ್ಷದ ಅವಧಿಯಲ್ಲಿ ಮೂರು ಮುಖ್ಯ ಸಿರಿಪಠ್ಯಗಳನ್ನು ದಾಖಲಿಸಿಕೊಂಡೆವು. ಜೇರಗುಡ್ಡೆ ಎಂದೇ ಪ್ರಸಿದ್ಧವಾಗಿರುವ ಧರೆಗುಡ್ಡೆಯ ಕುಮಾರ ಪಾತ್ರಿ ಶ್ರೀ ಶ್ಯಾಮರಾಯ ಶೆಟ್ಟಿಯವರು ಹಾಡಿರುವ ಬಂಟ ಪುರುಷ ಪಠ್ಯ, ಅತ್ರಿಜಾಲ್ ಆಲಡೆಯ ಮುಖ್ಯ ಸಿರಿಪಾತ್ರಿ ಕರ್ಗಿ ಶೆಡ್ತಿಯವರು ಹಾಡಿರುವ ಬಂಟ ಮಹಿಳಾ ಪಠ್ಯದ ಜೊತೆಗೆ ಬಂಟೇತರ ಮಹಿಳೆಯಾದ ಬೆಳ್ತಂಗಡಿ ತಾಲೂಕಿನ ಉಜಿರೆಯ ಕುಂಬಾರ ಕೊಪ್ಪದ ಶ್ರಿಮತಿ ರಾಮಕ್ಕ ಹಾಡಿರುವ ಸಿರಿಪಠ್ಯಗಳನ್ನು

ದಾಖಲಿಸಿಕೊಂಡೆವು. ಹೀಗೆ ದಾಖಲಿಸಿಕೊಳ್ಳಲಾದ ಪಠ್ಯಗಳ ಲಿಪೀಕರಣದ ದೊಡ್ಡ ಸವಾಲಿನ ಕೆಲಸ ನಮ್ಮ ಮುಂದೆ ಇತ್ತು. ಈ ಮೂರೂ ಪಠ್ಯಗಳ ಲಿಪೀಕರಣವನ್ನು ಪರಿಷ್ಕೃತ ರೋಮನ್ ಲಿಪಿಯಲ್ಲಿ ಆದಷ್ಟು ಶೀಘ್ರವಾಗಿ ಮುಗಿಸಿ ಕೊಡಬೇಕೆಂದು ಕು.ಶಿ.ಯವರು ನನಗೆ ಒಪ್ಪಿಸಿದರು. ಕು.ಶಿ.ಯವರ ಮೇಲಿನ ಗೌರವದಿಂದ ಆಯಿತು ಎಂದು ಒಪ್ಪಿಕೊಂಡೆ. ಆದರೆ ನನ್ನ ಮುಂದೆ ಇದ್ದುದು ಸುಮಾರು ಐವತ್ತು ಘಂಟೆಗಳಿಗೆ ಮೇಲ್ಪಟ್ಟ ಮೂರು ಭಿನ್ನ ಪಠ್ಯಗಳು. ಆರು ತಿಂಗಳುಗಳ ಅತ್ಯಂತ ಕಡಿಮೆ ಅವಧಿಯಲ್ಲಿ ಮೂರೂ ಪಠ್ಯಗಳನ್ನು ಪರಿಷ್ಕೃತ ರೋಮನ್‌ಲಿಪಿಯಲ್ಲಿ ಲಿಪೀಕರಿಸಿ ಹೋಂಕೋ ಅವರ ಕೈಗಿತ್ತೆ. ಅತ್ಯಂತ ಕಡಿಮೆ ಅವಧಿಯಲ್ಲಿ ಈ ಕೆಲಸ ನಿರ್ವಹಿಸಿದ್ದಕ್ಕೆ ಹೋಂಕೋ ಅವರು ಮೆಚ್ಚುಗೆಯನ್ನು ಸೂಚಿಸಿ ಪತ್ರ ಬರೆದಿದ್ದರು. ಮುಂದೆ ಇದರ ಅನುವಾದದ ಕೆಲಸವಾಗಬೇಕಿತ್ತು. ಈ ಸಂದರ್ಭ 2000ನೇ ಇಸವಿಯಲ್ಲಿ ಪ್ರೊ. ಕು.ಶಿ.ಯವರು ಆಕಸ್ಮಿಕವಾಗಿ ನಿಧನ ಹೊಂದಿದರು. ಅಲ್ಲಿಗೆ ಸಿರಿ ಯೋಜನೆಯ ವೇಗ ಸ್ವಲ್ಪಮಟ್ಟಿಗೆ ಕಡಿಮೆಯಾಯಿತು. ಆದರೆ ಪ್ರೊ. ಲೌರಿ ಹೋಂಕೋ ಈ ಯೋಜನೆಯನ್ನು ಆದಷ್ಟು ಮಟ್ಟಿಗೆ ಮುಂದುವರಿಸಿಕೊಂಡು ಹೋಗಬೇಕೆಂದು ಬಯಸಿದ್ದರು. 2002ರಲ್ಲಿ ಅವರೂ ತೀರಿಕೊಂಡ ಕಾರಣ ಸಿರಿಕಾವ್ಯಗಳ ಸಂಪಾದನೆಯ ಬೃಹತ್ ಯೋಜನೆಗೆ ದೊಡ್ಡ ತೊಡಕಾಯಿತು. ಅನಂತರದಲ್ಲಿ ಈ ಮೂರು ಪಠ್ಯಗಳಲ್ಲಿ ಕರ್ಗಿ ಶೆಡ್ತಿಯವರು ಹಾಡಿರುವ ಸಿರಿಕಾವ್ಯವನ್ನು ತುಳುಪಠ್ಯ ಹಾಗೂ ಕನ್ನಡಾನುವಾದದೊಂದಿಗೆ ನಾನು 2009ರಲ್ಲಿ ಸಂಪಾದಿಸಿ ಕೊಟ್ಟೆ. ಇದರ ಪ್ರಕಟನೆಯನ್ನು ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದ ಮೂಲಕ ನಿರ್ದೇಶಕರಾಗಿದ್ದ ಪ್ರೊ. ಹೆರಂಜೆ ಕೃಷ್ಣ ಭಟ್ಟರು 'ಸಿರಿ ಕಾವ್ಯಲೋಕ' ಹೆಸರಲ್ಲಿ ಪ್ರಕಟಿಸಿದರು. ಇದಲ್ಲದೆ ಬಹುಕಾಲದಿಂದ ದಾಖಲಿಸಿಕೊಳ್ಳಬೇಕೆಂದು ಯೋಚಿಸಿದ್ದ ಕಾರ್ಕಳ ತಾಲೂಕಿನ ಮಾಳ ನಿವಾಸಿಯಾಗಿರುವ ಶ್ರೀಮತಿ ಲೀಲಾ ಶೆಡ್ತಿಯವರು ಹಾಡಿರುವ ಬಂಟ ಮಹಿಳಾ ಪಠ್ಯವನ್ನು 2018ರಲ್ಲಿ ಆರ್.ಆರ್.ಸಿ. ಮೂಲಕ ದಾಖಲಿಸಿ ಕೊಂಡೆವು. ಹೀಗಾಗಿ ಆರ್.ಆರ್.ಸಿ.ಯಲ್ಲಿ ಶ್ರೀ ಗೋಪಾಲ ನಾಯ್ಕ ಹಾಗು ಶ್ರೀಮತಿ ಕರ್ಗಿ ಶೆಡ್ತಿಯವರ ಎರಡು ಪ್ರಕಟಿತ ಹಾಗು ದರೆಗುಡ್ಡೆಯ ಶ್ಯಾಮರಾಯ ಶೆಟ್ಟಿ, ಬೆಳ್ತಂಗಡಿ ತಾಲೂಕಿನ ಕುಂಬಾರಕೊಪ್ಪದ ರಾಮಕ್ಕ ಹಾಗು ಕಾರ್ಕಳ ಮಾಳದ ಲೀಲಾ ಶೆಡ್ತಿಯವರು ಹಾಡಿರುವ ಮೂರು ಅಪ್ರಕಟಿತ ಪಠ್ಯಗಳ ಅಮೂಲ್ಯಸಂಗ್ರಹ ಇದೆ.

ಪ್ರೊ. ಲೌರಿ ಹೋಂಕೋ ಅವರು ಬಹುಪಠ್ಯಗಳ ದಾಖಲಾತಿ ಮತ್ತು ಅಧ್ಯಯನವೇ ಜನಪದದ ಜೀವಾಳ ಮತ್ತು ಅನನ್ಯತೆ ಎಂಬುದನ್ನು ತಿಳಿದೇ ಈ ರೀತಿಯ ಬಹುಪಠ್ಯಗಳ ಅಧ್ಯಯನಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದರು. ಡಾ. ಪೀಟರ್ ಕ್ಲಾಸ್ ಅವರೂ ತಮ್ಮ "Future Research in Tulu Culture" ಎಂಬ ಲೇಖನದಲ್ಲಿ ತುಳುನಾಡಿನ ಪಾಡ್ದನಗಳ ಸಂಶೋಧನೆಯನ್ನು ಕುರಿತು ತಿಳಿಸುತ್ತಾ ಬಹುಪಠ್ಯಗಳ ಅಧ್ಯಯನದ ಆವಶ್ಯಕತೆಯನ್ನು ಕುರಿತು ಹೇಳಿದ್ದಾರೆ. ತುಳು ಪಾಡ್ದನಗಳನ್ನು Form (ಬಂಧ), Formulae (ಸೂತ್ರಾತ್ಮಕತೆ), ಮತ್ತು Story (ಕಥೆ) ಈ ಮೂರು ಸ್ತರಗಳಲ್ಲಿ ಅಧ್ಯಯನ ನಡೆಸಬಹುದಾಗಿದೆ ಎಂಬುದನ್ನು

ತಿಳಿಸಿ ಇವುಗಳಲ್ಲಿ ಬಹುಮುಖ್ಯವಾದದ್ದು ಕಥೆ (Story)ಯನ್ನು ಕುರಿತು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. "The most important element of a paaDdana is the story. It is by far the most difficult element to understand. If we take it as that which remains constant throughout all of the versions, we encounter certain difficulties. There is variation which cannot be accounted for on the basis of variability in Form, formulae, or performance context. The story itself is variable. In fact it is so variable it is sometimes hard to say in what sense two paaDdana which are said to be the same are the same" (Future Research in Tulu Culture. Peter J. Claus, ವಿಶ್ವ ತುಳು ಸಮ್ಮೇಳನೊ, 2009). ಪಾಡ್ದನಗಳಲ್ಲಿನ ಕಥೆಗಳಲ್ಲಿ ಆಗುವ ವ್ಯತ್ಯಾಸಗಳನ್ನು ಕುರಿತು ಪೀಟರ್ ಕ್ಲಾಸ್ ಅವರು ಈ ಲೇಖನದಲ್ಲಿ ಚರ್ಚಿಸುತ್ತಾರೆ. ಹೀಗಾಗಿ ಈ ಅಧ್ಯಯನದಲ್ಲಿ ಸಿರಿಯನ್ನು ಕುರಿತಾದ ಬಹುಪಠ್ಯಗಳನ್ನು ಇಟ್ಟುಕೊಂಡು ಅವುಗಳ ಬಹುಮುಖ್ಯವಾದ ಕಥಾಭಾಗಗಳಲ್ಲಿ ಬರುವ ಸಾಮ್ಯ ಮತ್ತು ವ್ಯತ್ಯಾಸವನ್ನು ಗುರುತಿಸುವ ಕೆಲಸವನ್ನು ಮಾಡಲು ಪ್ರಯತ್ನಿಸಿದ್ದೇನೆ.

ಸಿರಿಯನ್ನು ಕುರಿತಾಗಿ ನಡೆದಷ್ಟು ಅಧ್ಯಯನಗಳು ತುಳುವಿನ ಬೇರೆ ಯಾವುದೇ ಪ್ರಕಾರಗಳಲ್ಲಿ ನಡೆಯಲಿಲ್ಲ ಎನ್ನಬಹುದು. 2003ರಲ್ಲಿ ಪ್ರಕಟವಾದ ಡಾ. ಚಿನ್ನಪ್ಪ ಗೌಡರ 'ಸಂಸ್ಕೃತಿ ಸಿರಿ' ಜಾನಪದದ ವಿಭಿನ್ನ ವಸ್ತು ಮತ್ತು ವಿಷಯಗಳನ್ನೊಳಗೊಂಡ ಸುಮಾರು 22 ಲೇಖನಗಳನ್ನೊಳಗೊಂಡ ಬೃಹತ್ ಕೃತಿ. ಇದರ ಮೊದಲ ಲೇಖನ 'ಸಿರಿ–ಅನನ್ಯ ಆಯಾಮಗಳು' ಸುಮಾರು 70 ಪುಟಗಳ ಸುದೀರ್ಘ ಲೇಖನ. ಇದರಲ್ಲಿ ಸಿರಿಜಾತ್ರೆಯ ಸಾಮಾನ್ಯ ವಿವರಣೆಯಿಂದ ತೊಡಗಿ ಅದರ ಸಾಮಾಜಿಕ ಹಿನ್ನೆಲೆ, ಪ್ರಸರಣ, ನಿಡ್ಗಲ್ ಸಿರಿ ಜಾತ್ರೆಯ ಹಿನ್ನೆಲೆ, ಗೋಪಾಲ ನಾಯ್ಕರು ಕುಮಾರ ಪಾತ್ರಿಯಾಗಿ ನಿರ್ವಹಿಸುವ ಆಚರಣೆಯ ವಿವರಗಳು, ಹೊಸದಾಗಿ ಹೆಣ್ಣೊಬ್ಬಳನ್ನು ಸಿರಿ ಬಳಗಕ್ಕೆ ಸೇರಿಸಿಕೊಳ್ಳುವ ಆಚರಣೆಯಾದ ಇಲ್ಲೆಚ್ಚಿದ ದಲಿಯ, ಸಿರಿಸಂಧಿ ದಾಖಲಾತಿ ಯೋಜನೆಯ ಮಹತ್ವವನ್ನು ತಿಳಿಸುವ ವಿವರಗಳು, ಗೋಪಾಲ ನಾಯ್ಕರಿಂದ 1986 ರಲ್ಲಿ ಹೇಳಿ ಬರೆಯಿಸಿದ ಸಿರಿಪಠ್ಯ ಹಾಗೂ ಸಿರಿಕಾವ್ಯ ದಾಖಲಾತಿ ಯೋಜನೆಯಲ್ಲಿ ಪ್ರೊ. ಲೌರಿ ಹೋಂಕೋ, ಪ್ರೊ. ಬಿ.ಎ. ವಿವೇಕ ರೈ ಹಾಗೂ ಡಾ. ಚಿನ್ನಪ್ಪ ಗೌಡರು ಹಾಡಿಸಿದ ಪಠ್ಯಗಳನ್ನಿಟ್ಟುಕೊಂಡು ತೌಲನಿಕವಾಗಿ ಬಹುಬಗೆಯಿಂದ ಚರ್ಚಿಸಿದ ರೀತಿ ಇವೆಲ್ಲ ಈವರೆಗೆ ಬಂದಿರುವ ಸಿರಿಯ ಅಧ್ಯಯನಕ್ಕಿಂತ ಬೇರೆ ರೀತಿಯ ವಿವರಗಳನ್ನು ನೀಡುತ್ತದೆ.

ಡಾ. ಗಾಯತ್ರಿ ನಾವಡರು 'ಸಿರಿಪಂಥ– ಮಹಿಳಾ ಸಬಲೀಕರಣ ಸಮಾಜೋ ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದ ಮೇಲೆ ಸಂಶೋಧನೆಯನ್ನು ನಡೆಸಿದ್ದಾರೆ. 2004ರಲ್ಲಿ ಉಡುಪಿಯ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದ

ಮೂಲಕ ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ) ಸ್ವಾಯತ್ತ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿರುವ ಈ ಮಹಾಪ್ರಬಂಧದಲ್ಲಿ ಮುಖ್ಯವಾಗಿ ಸಿರಿಕಾವ್ಯದ ಪ್ರದರ್ಶನದ ಸಂದರ್ಭ, ಸಿರಿಪಾಡ್ದನದಲ್ಲಿ ವೀರತ್ವದ ಪರಿಕಲ್ಪನೆ, ಸಿರಿಪಾಡ್ದನ ಲೋಕ ಮತ್ತು ಸ್ತ್ರೀತ್ವದ ನಿರ್ವಚನ, ನಿರೂಪಕರ ಲಿಂಗ ಮತ್ತು ಪಠ್ಯಸ್ವರೂಪ, ಸಿರಿ ಮೈದುಂಬುವಿಕೆಯ ಪರಿಕಲ್ಪನೆ ಮತ್ತು ಪ್ರಕ್ರಿಯೆ, ಇಲ್ಲೆಚ್ಚಿದ ದಲಿಯ – ಹೀಗೆ ಸಿರಿಯನ್ನು ಆರಾಧನಾ ಪರಂಪರೆ ಮತ್ತು ಸಬಲೀಕರಣದ ಸೈದ್ಧಾಂತಿಕ ನೆಲೆಯಿಂದ ಅಧ್ಯಯನ ನಡೆಸಲು ಪ್ರಯತ್ನಿಸಿದ್ದಾರೆ. ಹೆಣ್ಣೊಬ್ಬಳು ಸಿರಿ ಪಂಥಾನುಯಾಯಿಯಾಗುವುದ ರಿಂದ ಅವಳ ಬದುಕಿಗೆ, ಮನಸ್ಸಿಗೆ ಈ ಆರಾಧನೆ ತಂದುಕೊಡುವ ಸಬಲೀಕರಣದ ಪರಿಕಲ್ಪನೆ ಏನು ಮತ್ತು ಯಾವ ಹಂತದ್ದು ಎನ್ನುವುದರ ಬಗೆಗೆ ಕ್ಷೇತ್ರೀಯ ಅಧ್ಯಯನದ ದಾಖಲೆಗಳ ಮೂಲಕ ಈ ಸಂಶೋಧನೆಯಲ್ಲಿ ಕಂಡುಕೊಳ್ಳುವ ಪ್ರಯತ್ನವನ್ನು ಮಾಡಿದ್ದಾರೆ.

ಡಾ. ಅರುಣ್ ಕುಮಾರ್ ಎಸ್.ಆರ್. ಅವರು 2011ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಲ್ಲಿಸಿದ ಸಂಶೋಧನ ಮಹಾಪ್ರಬಂಧ 'ಸಿರಿ ಆಲಡೆಗಳು ಮತ್ತು ಆಚರಣೆಗಳು– ಸಾಂಸ್ಕೃತಿಕ ಅಧ್ಯಯನ'. ಈ ಸಂಶೋಧನೆಯಲ್ಲಿ ಅವರು ಸಿರಿ ಆಲಡೆಗಳ ಇತಿಹಾಸ, ಆಲಡೆಗಳ ರಚನಾವಿಧಾನ, ಅಲ್ಲಿನ ಆರಾಧನಾಕ್ರಮ, ಆಲಡೆಗಳ ಸಾಂಸ್ಕೃತಿಕ ಹಿನ್ನೆಲೆ ಇತ್ಯಾದಿಯನ್ನು ಕ್ಷೇತ್ರಾಧ್ಯಯನದ ಮೂಲಕ ದಾಖಲಿಸಿಕೊಂಡು ಉಭಯ ಜಿಲ್ಲೆಗಳಲ್ಲಿನ ಆರಾಧನಾಭಿನ್ನತೆಯೊಂದಿಗೆ ಕನ್ನಡ ಪ್ರದೇಶಗಳಲ್ಲೂ ಈ ಆರಾಧನೆ ಭಿನ್ನ ರೀತಿಯಲ್ಲಿ ಇರುವುದನ್ನು ಕಂಡುಕೊಂಡಿದ್ದಾರೆ. ಆಲಡೆಗಳ ವಾಸ್ತುಶೈಲಿ, ಆಲಡೆಗಳ ಚಿತ್ರಗಳ ಜೊತೆ ರೇಖಾ ಚಿತ್ರಗಳನ್ನೂ ನೀಡಿ ಸಿರಿಯ ಹುಟ್ಟಿನಿಂದ ಹಿಡಿದು ಆಕೆಯ ಅಂತ್ಯದವರೆಗಿನ ಸ್ಥಳನಿರ್ಣಯಗಳನ್ನು ಮಾಡಲು ಪ್ರಾಮಾಣಿಕವಾಗಿ ಪ್ರಯತ್ನಸಿದ ಅಧ್ಯಯನ ಇದಾಗಿದೆ. 2015ರಲ್ಲಿ ಈ ಮಹಾಪ್ರಬಂಧದ ಆಂಶಿಕ ಭಾಗವನ್ನು ಇಟ್ಟುಕೊಂಡು 'ಉಡುಪಿ ಜಿಲ್ಲೆಯ ಸಿರಿ ಆಲಡೆಗಳು' ಕೃತಿಯನ್ನು ಹೊರತಂದಿದ್ದಾರೆ. ಕೇವಲ ಉಡುಪಿ ಜಿಲ್ಲೆಯ ಆಲಡೆಗಳ ಕುರಿತಾಗಿ ಮಾತ್ರ ಬೆಳಕುಚೆಲ್ಲುವ ಈ ಕೃತಿಯಲ್ಲಿ ಅನೇಕ ಸೂಕ್ಮ ಅಂಶಗಳನ್ನು ದಾಖಲಿಸಲು ಪ್ರಯತ್ನಿಸಿದ್ದಾರೆ. ಇಲ್ಲಿನ ಆಚರಣೆ, ಆರಾಧನೆಗಳಲ್ಲಿ ಭಿನ್ನತೆಯನ್ನು ಗುರುತಿಸುವ ಇವರು ಇಲ್ಲಿನ ನಾಗಾರಾಧನೆಯ ತಾಣಗಳಾದ ಸ್ವಾಮಿ ಮನೆ, ಚಿತ್ತೇರಿ ಇವುಗಳಲ್ಲಿ ಕೆಲವು ಚಿತ್ತೇರಿಗಳು ಆಲಡೆಗಳೂ ಆಗಿವೆ ಎಂಬುದನ್ನು ಕಂಡುಕೊಂಡಿದ್ದಾರೆ. ಇಲ್ಲಿನ ಆಲಡೆಗಳು, ಭಾಷೆ, ಆಲಡೆಗಳ ರಚನೆ, ವಾಸ್ತು ರೀತಿ, ಆವೇಶದ ಕ್ರಮ ಹಾಗೂ ಇನ್ನಿತರ ಸಾಂಸ್ಕೃತಿಕ ಅಂಶಗಳ ವಿಭಿನ್ನತೆಯಿಂದಾಗಿ ತುಳು ಪ್ರದೇಶದ ಆಲಡೆ ಗಳಿಗಿಂತ ಬಿನ್ನವಾಗಿರುವುದನ್ನು ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಡಾ. ಇಂದಿರಾ ಹೆಗ್ಗಡೆಯವರು 'ತುಳುವರ ಮೂಲತಾನ ಆದಿ ಆಲಡೆ–ಪರಂಪರೆ ಮತ್ತು ಪರಿವರ್ತನೆ' (2012) ಕೃತಿಯಲ್ಲಿ ಕ್ಷೇತ್ರಾಧ್ಯಯನದ ಮೂಲಕ ಆದಿ ಆಲಡೆಯ ಮೂಲವನ್ನು ಕೇಂದ್ರೀಕರಿಸಿ ಆಲಡೆಗಳ ದೈವೀಶಕ್ತಿಗಳಾದ ಬೆರ್ಮೆರ್, ನಾಗಶಕ್ತಿಗಳ

ವಿಕಾಸ, ಮೂಲ ಇತಿಹಾಸವನ್ನು ಅನ್ವೇಷಿಸುವ ಕೆಲಸವನ್ನು ಮಾಡಿದ್ದಾರೆ. ಇದಕ್ಕಾಗಿ ಹತ್ತಾರು ಕಡೆ ಸುತ್ತಿದ್ದಾರೆ. ನೂರಾರು ವಕ್ತೃಗಳನ್ನು ಸಂದರ್ಶನ ನಡೆಸಿ ಆಲಡೆಗಳಲ್ಲಿ ನೆಲೆಸಿರುವ ದೈವೀಶಕ್ತಿಗಳು ಹಾಗೂ ಅವುಗಳ ಆರಾಧನಾ ಕಾರ್ಯಗಳ ಕುರಿತು ಸವಿವರವಾದ ಮಾಹಿತಿಗಳನ್ನು ಕಲೆಹಾಕಿದ್ದಾರೆ. ಕವತಾರು ಆಲಡೆಗಳಲ್ಲಿ ಕ್ಷೇತ್ರಕಾರ್ಯ ನಡೆಸಿ ಅಲ್ಲಿನ ಚೇಂಕ್ರಿಪಾಡುನು, ತಲಾವು ಲಪ್ಪುನು, ಭಂಡಾರದ ಅಂಡೆಯ ಸಿಂಗಾರ, ಜಲ್ಲ ಪಾಡುನು, ಆಲಡೆಗಳಲ್ಲಿ ಪಿತೃಗಳಿಗೆ ಅಗೆಲು, ಆಲಡೆಗಳಲ್ಲಿ ಸಿರಿ ಜಾತ್ರೆಯಂದು ನಿರ್ಮಿಸುವ ಪಜಿಮಡಲ ಗುಂಡ ಹಾಗು ಸಾವಿನ ಸಂದರ್ಭ ನಿರ್ಮಿಸುವ ನೀರ್‌ನಿರೆಲ್‌ನ ಸಾಮ್ಯತೆ ಮುಂತಾದ ಅಪೂರ್ವ ದಾಖಲೆಗಳನ್ನು ಇಟ್ಟುಕೊಂಡು ಆಲಡೆಯ ಆಚರಣೆಗಳಿಗೂ ಸಾವಿನ ಆಚರಣೆಗಳಿಗೂ ಇರುವ ಸಾಮ್ಯತೆಯನ್ನು ಶೋಧಿಸುವ ಪ್ರಯತ್ನವನ್ನು ಮಾಡಿದ್ದಾರೆ. ಮೂಲತಾನ ಆದಿಆಲಡೆಗಳು, ಚಿತ್ತೇರಿಗಳು ಒಂದು ಕಾಲದ ರುದ್ರಭೂಮಿ ಎಂಬ ಅಭಿಪ್ರಾಯವನ್ನು ಮಂಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ಇದಲ್ಲದೆ ದೆಯ್ಯೊಲು–ನಾಗಕನ್ನಿಕೆಯರು–ಸಿರಿಗಳು, ಕುಮಾರ–ನಾಗ ಸಂಬಂಧವನ್ನು ಇನ್ನಷ್ಟು ಸೂಕ್ಷ್ಮವಾಗಿ ಅಧ್ಯಯನ ನಡೆಸಲು ಪ್ರಯತ್ನಿಸಿದ್ದಾರೆ.

ಹಿರಿಯ ವಿದ್ವಾಂಸರೂ, ಸಂಶೋಧಕರೂ ಆಗಿರುವ ಕೆ.ಎಲ್. ಕುಂಡಂತಾಯ ಇವರು ನಂದಳಿಕೆ, ಉರ್ಕಿದೊಟ್ಟು, ಮುಜಿಲೊಟ್ಟು, ಹಿರಿಯಡ್ಕ, ಆದಿಶಕ್ತಿ ವೀರಭದ್ರ ಬ್ರಹ್ಮಲಿಂಗ ದೇವಸ್ಥಾನ ಕಲ್ಯಾಣಪುರ, ಉದ್ಯಾವರ ಶಂಭು ಶೈಲೇಶ್ವರ ದೇವಾಲಯ, ಶಿರ್ವ ಬಳಿಯ ಮಾಣಿಬೆಟ್ಟು ದೇವಸ್ಥಾನ, ಜಲಂಚಾರು ದೇವಾಲಯ ಮತ್ತು ಮಜೂರು ದೇವಾಲಯ, ಬೊಲ್ಯೊಟ್ಟು ಆಲಡೆ, ಪಾಂಗಾಳದ ಆದಿ ಆಲಡೆ, ಉಚ್ಚಿಲದ ಆಲಡೆ, ಕಂಡೇವು ಕ್ಷೇತ್ರ ಹಾಗು ಪೇರೂರು ಆಲಡೆಗಳಲ್ಲಿ ದೊರೆಯುವ 'ಸಿರಿಯ ಆರಾಧನಾ ವಿಧಾನಗಳ' ಕುರಿತು ಕ್ಷೇತ್ರಕಾರ್ಯ ಆಧರಿಸಿ ಲೇಖನಗಳನ್ನು ಬರೆದಿರುತ್ತಾರೆ.

ಡಾ. ಯೋಗಿತಾ ಶೆಟ್ಟಿಯವರು ಕರ್ಗಿಶೆಡ್ತಿಯವರು ಹಾಡಿರುವ ಸಿರಿಕಾವ್ಯದ ಕಥಾಸಾರವನ್ನು 'Satyamalokada siri – An Introduction, (Indian Literature, Vol LVIII, no.4,2015, Sahitya Academy, ISSN 00195804,pg 157-181.) ಇಂಗ್ಲಿಷ್ ಭಾಷೆಗೆ ಅನುವಾದಿಸಿ ಪ್ರಕಟಿಸಿದ್ದಾರೆ. ನನ್ನ ಲೇಖನ Is 'Siri Jatre' the Women's Mass Possession Tradition Of Tulunadu-a Death Rite? ಉಜಿರೆಯ ಡಾ. ಹಾಮಾನಾ ಸಂಶೋಧನ ಕೇಂದ್ರದಿಂದ ಪ್ರಕಟವಾಗುವ ನಿಯತಕಾಲಿಕ, ಸಂಪುಟ 7, ಸಂಚಿಕೆ 2, 2018ರಲ್ಲಿ ಯೋಗಿತಾ ಶೆಟ್ಟಿಯವರ ಇಂಗ್ಲಿಷ್ ಅನುವಾದದೊಂದಿಗೆ ಪ್ರಕಟಗೊಂಡಿದೆ. ಈ ಲೇಖನದಲ್ಲಿ ಇಡೀ ಸಿರಿಜಾತ್ರೆಯನ್ನು ಈವರೆಗೆ ನಡೆದಿರುವ ಅಧ್ಯಯನಗಳಿಗಿಂತ ಭಿನ್ನ ರೀತಿಯಲ್ಲಿ ಕಾಣುವ ಪ್ರಯತ್ನವನ್ನು ಮಾಡಿದ್ದೇನೆ. ಸಿರಿಜಾತ್ರೆಯ ಒಟ್ಟು ಉದ್ದೇಶ ಸತ್ಯನಾಪುರದ ಅಜ್ಜನವರಿಗೆ ನಡೆಸುವ ಸಾವಿನ ಆಚರಣೆಯೇ ಎಂಬುದಕ್ಕೆ ಕ್ಷೇತ್ರೀಯ ಅಧ್ಯಯನದ ಮಾಹಿತಿಗಳ ಆಧಾರದೊಂದಿಗೆ ಚರ್ಚಿಸಿದ್ದೇನೆ. ಈ ಸಂದರ್ಭದಲ್ಲಿ ಡಾ. ಇಂದಿರಾ ಹೆಗ್ಗಡೆಯವರು ಹಾಗೂ ಡಾ. ಅರುಣ್ ಕುಮಾರ್

ಎಸ್.ಆರ್. ಅವರ ಪೂರಕ ಅಭಿಪ್ರಾಯಗಳನ್ನೂ ಗಮನಿಸಿಕೊಂಡಿದ್ದೇನೆ. ಈ ಎಲ್ಲ ಮಾಹಿತಿಗಳ ಆಧಾರದಿಂದ ಸಿರಿಜಾತ್ರೆಯನ್ನು ಭಿನ್ನ ಆಯಾಮದಿಂದ ನೋಡುವ ಪ್ರಯತ್ನ ಇದಾಗಿದೆ.

2017ರಲ್ಲಿ ಜರ್ಮನ್ ರೀಸರ್ಚ್ ಫೌಂಡೇಶನ್‌ನ ಮೂರು ವರ್ಷಗಳ ಅನುದಾನ ದಿಂದ ನಡೆದ ಸಂಶೋಧನೆಯ ಫಲಶ್ರುತಿಯಾಗಿ ಹೈಡ್ರೂನ್ ಬ್ರೂಕ್ನರ್ ಹಾಗೂ ಬಿ.ಎ. ವಿವೇಕ ರೈಯವರ ಸಂಪಾದಕತ್ವದಲ್ಲಿ ಪ್ರಕಟಗೊಂಡ ಆಂಗ್ಲ ಕೃತಿ 'Oral Traditions in South India – Essays on Tulu Oral Epic' ಇದರಲ್ಲಿ 5 ಪ್ರಮುಖ ಲೇಖನಗಳಿವೆ. ಮೊದಲ ಎರಡು ಲೇಖನಗಳು ಕೋಟಿ ಚೆನ್ನಯ ಮಹಾಕಾವ್ಯಕ್ಕೆ ಸಂಬಂಧಿಸಿದ್ದಾದರೆ ಕೊನೆಯ ಮೂರು ಲೇಖನಗಳು ಸಿರಿಕಾವ್ಯಕ್ಕೆ ಸಂಬಂಧಿಸಿದ್ದಾಗಿವೆ. ಡಾ. ಚಿನ್ನಪ್ಪ ಗೌಡರ 'Siri Epic Texts- Perspectives of understanding' ಲೇಖನದಲ್ಲಿ ಈವರೆಗೆ ಪ್ರಕಟಗೊಂಡಿರುವ ಎಲ್ಲ ಸಿರಿ ಸಂಬಂಧಿ ಕಾವ್ಯಗಳು, ಕಾದಂಬರಿ ಗಳು, ನಾಟಕಗಳು ಹಾಗೂ ವಿವಿಧ ರೀತಿಯ ಬರವಣಿಗೆಗಳನ್ನು ಪರಾಮರ್ಶಿಸಿ ಸಿರಿಯನ್ನು ಹೇಗೆ ಕಂಡರಿಸಲಾಗಿದೆ ಎಂಬುದನ್ನು ದಾಖಲಿಸಿದ್ದಾರೆ. ಬಂಟ ಸಮಾಜದ ಮಹಿಳೆಯಾದ ಸಿರಿಯ ಬದುಕಿನ ಮೂರು ತಲೆಮಾರುಗಳ ಏಳುಬೀಳಿನ ಕತೆಯನ್ನು ಆರಾಧನೆಯ ಸಂದರ್ಭ ಹಾಡುತ್ತಾ.ತೀರ ಅಪರಿಚಿತರಾಗಿರುವ ಮಹಿಳೆಯರು ಅಲೌಕಿಕ ಜಗತ್ತಿನ ಸಿರಿ, ಸೊನ್ನೆ, ಗಿಂಡೆ, ಅಬ್ಬಯ ದಾರಯರಾಗಿ ಸಿರಿಬಳಗದ ಸದಸ್ಯೆಯರಾಗಿ ಆತ್ಮೀಯತೆಯಿಂದ ವರ್ತಿಸುತ್ತಾ ಲೌಕಿಕ ಬದುಕಿನ ಅನ್ಯಾಯ ಅವಮಾನಗಳನ್ನು ಆವೇಶ, ಸಂಭಾಷಣೆಗಳ ಮೂಲಕ ಹಂಚಿಕೊಂಡು ಆವೇಶಗೊಳ್ಳುತ್ತಾ ಕುಟುಂಬದ ಇತರರ ಮನ್ನಣೆ ಗೌರವಗಳಿಗೆ ಪಾತ್ರರಾಗುವಂಥ ಈ ಆರಾಧನಾ ಪದ್ಧತಿಯು ಒಂದು ವಿಶಿಷ್ಟ ಲೋಕವಾಗಿದೆ ಎಂಬುದನ್ನು ಕಂಡುಕೊಂಡಿದ್ದಾರೆ. ಫಿನ್ಲೆಂಡಿನ ಪ್ರೊ.ಲೌರಿ ಹೋಂಕೊ, ಶ್ರೀಮತಿ ಅನೇಲಿ ಹೋಂಕೊ, ಪ್ರೊ. ಬಿ.ಎ. ವಿವೇಕ ರೈ ಹಾಗು ಡಾ. ಚಿನ್ನಪ್ಪ ಗೌಡರು ಮೌಖಿಕ ಮಹಾಕಾವ್ಯ ಯೋಜನೆಯಡಿ ಮಾಚಾರು ಗೋಪಾಲ ನಾಯ್ಕರು ಹಾಡಿರುವ 15,683 ಗೆರೆಗಳನ್ನೊಳಗೊಂಡ 2 ಸಂಪುಟಗಳ ಸಿರಿಕಾವ್ಯ ತುಳು ಪಠ್ಯದ ಜೊತೆ ಇಂಗ್ಲಿಷ್ ಅನುವಾದದೊಂದಿಗೆ ಸಂಪಾದಿಸಿ ಪ್ರಕಟಿಸಿದ್ದು ತುಳು ಮಹಾಕಾವ್ಯದ ಅಧ್ಯಯನಕ್ಕೆ ಒಂದು ಹೆಬ್ಬಾಗಿಲು ಎಂಬುದನ್ನು ತಿಳಿಸಿದ್ದಾರೆ.

ಇಲ್ಲಿನ ಎರಡನೇ ಲೇಖನ ಡಾ. ಅಶೋಕ ಆಳ್ವರ 'Siri in the Poetic World of Kargi Shedthi- Selected Episodes and Comparisons'. ಈ ಲೇಖನದಲ್ಲಿ ಕರ್ಗಿ ಶೆಡ್ತಿಯವರು ಹಾಡಿರುವ ಸಿರಿಕಾವ್ಯದಲ್ಲಿ ಬರುವ ಸತ್ಯನಾಪುರದ ಅಜ್ಜನವರ ಮಕ್ಕಳಿಲ್ಲದ ಕೊರಗು, ಸಿರಿಯ ನಿಶ್ಚಿತಾರ್ಥ ಹಾಗು ಮದುವೆ, ಸಿರಿಯ ಬಯಕೆಯ ಆಚರಣೆ, ಸಿರಿಯ ವಿಚ್ಛೇದನ ಹಾಗೂ ದೇಶಾಂತರ ಹೋಗುವ ಸಂದರ್ಭ, ಚೆನ್ನೆ ಆಟ ಹಾಗೂ ಅಬ್ಬಯ ದಾರಯರ ದುರಂತ ಸಾವು, ಸಾವಿನ ಅನಂತರ ಮತ್ತೆ ಉರ್ಕಿದೊಟ್ಟಿಗೆ ಅಬ್ಬಯ ದಾರಯರ ಆಗಮನ ಮತ್ತು ಮಾಯದ ಮದುವೆ – ಹೀಗೆ

ವಿವಿಧ ಘಟನಾವಳಿಗಳನ್ನು ಈವರೆಗಿನ ಪ್ರಕಟಿತ ಹಾಗೂ ಶ್ಯಾಮರಾಯ ಶೆಟ್ಟಿಯವರ ಅಪ್ರಕಟಿತ ಸಿರಿಕಾವ್ಯಗಳ ಜೊತೆ ತೌಲನಿಕವಾಗಿ ನೋಡಿ ಅಲ್ಲಿನ ಸಾಮ್ಯ ಹಾಗೂ ವ್ಯತ್ಯಾಸವನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ಜರ್ಮನಿಯ ಸಂಶೋಧನಾ ವಿದ್ಯಾರ್ಥಿನಿಯಾಗಿರುವ ಪೌಲೀನೇ ಶೂಸ್ತರ್ ಲ್ಹೋಯೆಲಾ ಅವರು 'Three Unpublished Versions Of the Siri PaDdana : An Analysis' ಲೇಖನದಲ್ಲಿ ಡಾ. ಪೀಟರ್ ಕ್ಲಾಸ್ ಅವರ ಸಂಗ್ರಹದ ಕರ್ಗಿ ಮುಂಡಾಲ್ದಿ, ತಂರ್ಬೆ ಪೂಜಾರ್ತಿ ಹಾಗು ಚೆನ್ನಯ ಪೂಜಾರಿ ಇವರು ಹಾಡಿರುವ ಮೂರು ಅಪ್ರಕಟಿತ ಸಿರಿಕಾವ್ಯಗಳನ್ನು ಇಟ್ಟುಕೊಂಡು ಸಿರಿಯ ಬದುಕಿನ ಬೇರೆ ಬೇರೆ ಘಟನಾವಳಿಗಳ ಜೊತೆಗೆ ತೌಲನಿಕವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಿದ್ದಾರೆ. ಮೇಲಿನ ಮೂರೂ ಲೇಖನಗಳು ಸಿರಿಯ ತೌಲನಿಕ ಅಧ್ಯಯನ ದೃಷ್ಟಿಯಿಂದ ಮಹತ್ವದ್ದಾದವು ಎನ್ನಬಹುದು.

ಸಿರಿ ಆಲಡೆಗಳು

ಸಿರಿಗಳ ಆರಾಧನಾಸಂಕೀರ್ಣವನ್ನು 'ಸಿರಿ ಆಲಡೆ' ಎಂದು ಕರೆಯುತ್ತಾರೆ. ಸಾಮಾನ್ಯ ವಾಗಿ ದೇವರು, ಬ್ರಹ್ಮ, ನಾಗ ಹಾಗೂ ಇತರ ದೈವಗಳಿರುವ ಜಾಗ ಇದು. ಕನ್ನಡ ಪ್ರದೇಶಗಳಲ್ಲಿ ಸ್ವಾಮಿಮನೆ, ಚಿತ್ತೇರಿ, ದೈವದಮನೆ, ಗರೊಡಿಗಳ ಜೊತೆ ಸಿರಿಗಳಿರುತ್ತವೆ. ಇಲ್ಲಿ 'ಆಲಡೆ'ಗಳೆಂಬ ಹೆಸರಿನಿಂದ ಇವನ್ನು ಕರೆಯುವುದಿಲ್ಲ. 'ಆಲಡೆ' ಎಂಬುದಕ್ಕೆ ಬ್ರಹ್ಮ, ನಾಗ, ನಂದಿಗೋಣ, ರಕ್ತೇಶ್ವರಿ, ಕ್ಷೇತ್ರಪಾಲ ಮುಂತಾದ ಪಂಚದೈವಗಳನ್ನೊಳ ಗೊಂಡ ತಾಣವೆಂದೂ ಇದುವೇ ತುಳುವರ 'ಬ್ರಹ್ಮಸ್ಥಾನ'ವೆಂದೂ ತಿಳಿಯಲಾಗಿದೆ. 'ಸಿರಿ ಆಲಡೆ'ಯೆಂದರೆ ದೇವರು, ಬ್ರಹ್ಮ, ನಾಗ ಮತ್ತು ಇತರ ಪರಿವಾರ ದೈವಗಳೊಂದಿಗೆ ಸಿರಿ ಬಳಗ ಎಂದರೆ ತಾಯಿ ಅಕ್ಕೆ ಸಿರಿ, ಈಕೆಯ ಮಗ ಕುಮಾರ, ಮಗಳು ಸೊನ್ನೆ, ಸಾಕುಮಗಳು ಗಿಂಡೆ, ಹಾಗೂ ಸೊನ್ನೆಯ ಅವಳಿ ಮಕ್ಕಳಾದ ಅಬ್ಬಯ ದಾರಯರು, ಸಾಮು ಹಾಗು ನಂದಿಗೋಣ ಇವು ನೆಲೆನಿಂತ ತಾಣ ಎಂಬುದಾಗಿ ತಿಳಿಯಬಹುದಾಗಿದೆ. ತುಳುವರು ನಾಗನಿಗೆ ಸಂಬಂಧಿಸಿದಂತೆ 'ಮೂಲ' ಎಂದು ಕರೆದರೆ ಸಿರಿಗೆ ಸಂಬಂಧಿಸಿ ದಂತೆ ಆಲಡೆಯನ್ನು 'ಆದಿ' ಎಂದು ಕರೆಯುತ್ತಾರೆ. ಆಲಡೆ ಎಂಬುದನ್ನು ಕೆಲವು ವಿದ್ವಾಂಸರು ಈ ರೀತಿಯಲ್ಲಿ ಅರ್ಥೈಸಲು ಪ್ರಯತ್ನಿಸಿದ್ದಾರೆ. ಸಾಮಾನ್ಯವಾಗಿ 'ಆಲ್', 'ಆರ್' ಪೂರ್ವಪದಗಳು ನೀರಿನ ಹರಿವು, ನೀರಿನ ಸೆಲೆಯಿರುವ ಜಾಗ, ತಂಪು ಜಾಗವನ್ನು ಕುರಿತು ಸೂಚಿಸುವುದರಿಂದ ಹಾಗೂ ಆಲಡೆ, ಬ್ರಹ್ಮಸ್ಥಾನಗಳ ಭೌಗೋಳಿಕ ಪರಿಸರವೂ ಈ ಮೇಲಿನಂತೆಯೇ ಇರುವುದರಿಂದ ಈ ಹೆಸರು ಬಂದಿರಬಹುದೆಂದು ತಿಳಿಯಬಹುದಾಗಿದೆ. ತುಳುನಾಡಿನ ಇತಿಹಾಸವನ್ನು ಕುರಿತು ಅಧ್ಯಯನ ನಡೆಸಿರುವ ಪ್ರಸಿದ್ಧ ವಿದ್ವಾಂಸರಾದ ಗುರುರಾಜ ಭಟ್ಟರು 'ದೊಡ್ಡ ಮರ ಬಳ್ಳಿಗಳಿಂದ ಕೂಡಿರುವ ಕಾಡು ಪ್ರದೇಶಕ್ಕೆ 'ಆಲು' ಎಂಬ ಹೆಸರಿದ್ದು ಇಲ್ಲಿರುವ ಬ್ರಹ್ಮಸ್ಥಾನವನ್ನೇ ಆಲಡೆ ಎನ್ನುತ್ತಾರೆ ಎಂದಿದ್ದಾರೆ (ಪ್ರೊ. ಎಚ್. ಕೃಷ್ಣ ಭಟ್, ಮುರಳೀಧರ ಉಪಾಧ್ಯಾಯ,

(ಸಂ) ಗೋವಿಂದ ಪೈ ಸಂಶೋಧನ ಸಂಪುಟ, ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ. ಪುಟ–607). ಪು. ಶ್ರೀನಿವಾಸ ಭಟ್ ಅವರು 'ಆಲ' ಎಂಬುದು ನೀರು ಹಾಗೂ ವೃಕ್ಷ ನಾಮಸೂಚಕಪದವಾಗಿದೆ ಎಂದು ಹೇಳಿ ಹೆಚ್ಚಿನ ಆಲಡೆಗಳು ಜಲ ಸಾಮೀಪ್ಯದಲ್ಲಿವೆ. ಇವುಗಳೆಲ್ಲ ಒಂದು ವೃಕ್ಷದಡಿ ಸ್ಥಾಪನೆಗೊಂಡಿರಬೇಕು. ಆಲವೆಂದರೆ ಗೋಳಿಮರದ ಇನ್ನೊಂದು ಹೆಸರು. ಮುಂದುವರಿದು ಆಲ್ ಎಂದರೆ ಆಲಯದ ಹ್ರಸ್ವರೂಪವಾಗಿರಲೂಬಹುದು. ಅರಂತಡೆ (ಅರಮನೆ), ದೇಂತಡೆ (ದೇವಾಲಯವಿರುವ ಪ್ರದೇಶ) ಪದಗಳಂತೆ ಆಲಡೆಯೂ ಬಂದಿರಬಹುದೆನ್ನುತ್ತಾರೆ (ಪು. ಶ್ರೀನಿವಾಸ ಭಟ್, 2009, ಆಲಡೆ–ಆದಿ ಆಲಡೆಗಳು, ಸ್ವಾತಂತ್ರ್ಯೋತ್ಸವ ವಿಶೇಷಾಂಕ. ಯುಗಪುರುಷ ಪ್ರಟನಾಲಯ, ಕಿನ್ನಿಗೋಳಿ). ದಿವಂಗತ ಮಂಜೇಶ್ವರ ಗೋವಿಂದ ಪೈಯವರು ತಮ್ಮ ಸಂಶೋಧನಾ ಲೇಖನವೊಂದರಲ್ಲಿ ನೀರು ಹಾವಿಗೆ ಸಂಸ್ಕೃತದಲ್ಲಿ ಆಲುಕ ಎಂದೂ ತಮಿಳಿನಲ್ಲಿ ವಿಷಕ್ಕೆ ಆಲ್, ಆಲಂ ಎಂದೂ ಸರ್ಪಕ್ಕೆ ಆಲವಾಯಿ ಎಂಬ ಹೆಸರಿದೆ ಎಂದು ತಿಳಿಸಿ ಆಲಡೆ ನಾಗನ ಹಾಗೂ ಬ್ರಹ್ಮರ ಸ್ಥಾನವಿರಬೇಕೆಂದು ಹೇಳಿದ್ದಾರೆ. ಎಲ್ಲಿ ಬ್ರಹ್ಮರಿದ್ದಾರೋ ಅಲ್ಲಿ ನಾಗ ಸನ್ನಿಧಿ. ಎಲ್ಲಿ ನಾಗಸನ್ನಿಧಿ ಇದೆಯೋ ಅಲ್ಲಿ ಬ್ರಹ್ಮ ಸನ್ನಿಧಿ. ಬ್ರಹ್ಮನಿಗೆ ಆಲಯವಿರುವುದಿಲ್ಲ. ವನದಲ್ಲಿ ಆರಾಧನೆಗೊಳ್ಳುವ ದೈವಸಾನ್ನಿಧ್ಯಗಳಿವು. ಆದುದರಿಂದ ಆಲಡೆಗಳು ದೇಗುಲರೂಪದಿಂದಿರುವವುಗಳಲ್ಲ. ಬೆರ್ಮೆರ್ ದೈವಗಳ ಒಡೆಯನಾದುದರಿಂದ ಹಲವಾರು ದೈವಗಳ ಕೂಡುಕಟ್ಟು ಆಯಿತು. ಮುಖ್ಯವಾಗಿ ಅವನ ಉಪದೈವಗಳಾಗಿ ನಂದಿಗೋಣ, ಕ್ಷೇತ್ರಪಾಲ, ರಕ್ತೇಶ್ವರಿ ಮುಂತಾದ ದೈವಗಳು ಸೇರಿಕೊಂಡವು. ಬೆರ್ಮರು ವರದಿಂದ ಹುಟ್ಟಿದ ಸಿರಿ ಹಾಗೂ ಅವಳ ಬಳಗವೂ ಸಹಜವಾಗಿ ಅಲ್ಲಿ ಸ್ಥಾನ ಪಡೆದು ಆರಾಧನೆಗೊಂಡವು (ಉದ್ಧೃತ: ಎಸ್.ಆರ್. ಅರುಣ್ ಕುಮಾರ್, ಸಿರಿ ಆಲಡೆಗಳು ಮತ್ತು ಆಚರಣೆಗಳು ಒಂದು ಸಾಂಸ್ಕೃತಿಕ ಅಧ್ಯಯನ, 2010, ಅಪ್ರಕಟಿತ ಸಂಶೋಧನ ಪ್ರಬಂಧ, ಪುಟ 65). ಸಿರಿ ಪಾಡ್ದನದಲ್ಲಿ ಸತ್ಯನಾಪುರದ ಅಜ್ಜನವರು ತನಗೆ ಸಂತಾನದ ಕುಡಿ ಇಲ್ಲ ಎಂಬುದಾಗಿ ದುಃಖಿಸುತ್ತಿರುವಾಗ ಮೇಲು ಲೋಕದಲ್ಲಿರುವ ದೇವರು ಬೆರ್ಮೆರ್‌ಗೆ ಇದು ಗೊತ್ತಾಗಿ ಅವರು ಬ್ರಾಹ್ಮಣ ಮಾಣಿಯ ವೇಷದಲ್ಲಿ ಭಿಕ್ಷೆ ಬೇಡುತ್ತಾ ಬಂದು ಅಜ್ಜನವರ ದುಃಖವನ್ನು ಕುರಿತು ವಿಚಾರಿಸುತ್ತಾರೆ. ಅಜ್ಜನವರು ನಿಜ ವಿಚಾರ ತಿಳಿಸಲು ನಿನ್ನ ಆದಿ ಆಲಡೆ ಎಲ್ಲಿ, ಮೂಲಸ್ಥಾನ ಎಲ್ಲಿ, ದೇವರು ಬೆರ್ಮರು ಎಲ್ಲಿ ಎಂದು ಕೇಳಲು ಅಜ್ಜನವರು ಅದು ನನಗೆ ತಿಳಿಯದು ಎನ್ನುತ್ತಾರೆ. ಆಗ ಬ್ರಾಹ್ಮಣಮಾಣಿ ಅದು ಲಂಕೆಲೋಕನಾಡು. ಸಂಪೂರ್ಣ ಜೀರ್ಣಾವಸ್ಥೆ ಯಲ್ಲಿದೆ. ಅದನ್ನು ಜೀರ್ಣೋದ್ಧಾರ ಮಾಡಿದರೆ ಸಂತಾನದ ಫಲ ಸಿಗುತ್ತದೆ ಎಂದು ತಿಳಿಸುವ ವಿವರಗಳಿವೆ. ಅನಂತರ ಇವರ ವರಪ್ರಸಾದದಿಂದ ಸಿರಿ ಹುಟ್ಟುವ ವಿವರಗಳಿವೆ. ಹೀಗಾಗಿ ಆದಿ ಆಲಡೆಗಳಲ್ಲಿ ಬೆರ್ಮೆರ್, ನಾಗ ಮತ್ತು ಪರಿವಾರ ದೈವಗಳಿದ್ದು ಸಿರಿಯ ಸೇರ್ಪಡೆ ಅನಂತರನೇ ಆಗಿರಬೇಕೆಂದು ತಿಳಿಯಬಹುದಾಗಿದೆ. ತುಳುವರು ವರ್ಷಕ್ಕೆ ಒಂದು ಬಾರಿ ಯಾದರೂ ತಮ್ಮ ಆದಿ ಮೂಲಸ್ಥಾನಕ್ಕೆ ಹೋಗಿ ಹರಕೆ ಸಲ್ಲಿಸಬೇಕೆಂಬುದು ಕ್ರಮ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕು, ಬಂಟ್ವಾಳ ತಾಲೂಕಿನ ಕೆಲವು ಕಡೆ, ಕರಾವಳಿಯ ಉದ್ದಗಲಕ್ಕೆ ಹಾಗೂ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕು, ಉಡುಪಿ ಸುತ್ತುಮುತ್ತ ಹಾಗೂ ಕುಂದಾಪುರ ತಾಲೂಕಿನಲ್ಲಿ ಈ ಸಿರಿ ಆಲಡೆಗಳು ಚದುರಿಕೊಂಡಿವೆ. ಸಿರಿ ಆಲಡೆಗಳು ಹಾಗೂ ಆಚರಣೆಗಳ ಕುರಿತು ಅಧ್ಯಯನ ನಡೆಸಿರುವ ಡಾ. ಎಸ್.ಆರ್. ಅರುಣ್ ಕುಮಾರ್ ಅವರು ತುಳು ಹಾಗು ಕನ್ನಡ ಮಾತನಾಡುವ ಪ್ರದೇಶಗಳಲ್ಲಿ ಈವರೆಗೆ ಸುಮಾರು 74 ಆಲಡೆಗಳಿರುವುದನ್ನು ಗುರುತಿಸಿದ್ದಾರೆ. ಇವುಗಳಲ್ಲಿ ಬಹು ಮುಖ್ಯವಾದುವುಗಳೆಂದರೆ ನಿಡ್ಗಲ್ಲು, ಕುತ್ರೊಟ್ಟು, ಉರುಂಬಿದೊಟ್ಟು, ಅತ್ರಿಜಾಲ್, ನಂದೊಲಿಗೆ, ಕಬತಾರು, ಹಿರಿಯಡ್ಕ, ದೈಲೊಟ್ಟು, ಜೇರಗುಡ್ಡೆ (ದರೆಗುಡ್ಡೆ), ಮಾಲಾಡಿ, ಪೇರೂರು, ಪಾಂಗಾಳ, ಸಿರಿಗುಂಡದಪಾಡಿ, ಪಾಜೊಟ್ಟು, ಹೆಜಮಾಡಿ, ಬೊಲ್ಯೊಟ್ಟು, ಕಂಡೇವು, ಉರ್ಕಿದೊಟ್ಟು ಇತ್ಯಾದಿ. ಈ ಆಲಡೆಗಳಲ್ಲಿ ಎಂದಿನಂತೆ ಪ್ರತಿವರ್ಷ ಸಿರಿಜಾತ್ರೆಗಳು ನಡೆದರೆ ಕೆಲವು ಆಲಡೆಗಳಲ್ಲಿ ಸಿರಿ ಆರಾಧನೆ ಈಗಾಗಲೇ ನಿಂತುಹೋಗಿವೆ. ಕೆಲವು ಆಲಡೆಗಳು ಆಯಾ ಕುಟುಂಬ ದವರಿಗೆ ಸಂಬಂಧಿಸಿ ಇರುವುದಾದರೆ ಕೆಲವು ಆಲಡೆಗಳು ಒಂದೇ ವರ್ಗ, ಜಾತಿಗೆ ಸೀಮಿತವಾಗಿ ಇದ್ದಂತಿಲ್ಲ. ಇಲ್ಲಿನ ಬಂಟರು, ಬಿಲ್ಲವರು, ಕುಲಾಲರು, ಮಡಿವಾಳರ ಜೊತೆಗೆ ಇಲ್ಲಿನ ಮೂಲ ನಿವಾಸಿಗಳಾದ ಕೊರಗ, ಮುಂಡಾಲ, ಮೇರರೂ ಒಂದಲ್ಲ ಒಂದು ಆಲಡೆಯ ಮೂಲಕ ತಮ್ಮ ಆದಿಯನ್ನು ಗುರುತಿಸಿ ಕೊಂಡಿರುತ್ತಾರೆ. ಕೆಲವು ಆಲಡೆಗಳು ನಿರ್ದಿಷ್ಟ ಬಳಿಯವರಿಗೆ ಮಾತ್ರ ಆದಿಯಾಗಿರುತ್ತದೆ. ಎಸ್.ಆರ್. ಅರುಣ್ ಕುಮಾರ್ ಅವರು ಸುರತ್ಕಲ್ ಸಮೀಪದ ಕಟ್ಲಬೀಡು ಆಲಡೆ ಗುಜರಣ್ಣ ಬಳಿಯವರ ದ್ದೆಂದೂ, ಮಂಡೇಡಿಯ ನಾಗಬ್ರಹ್ಮಸ್ಥಾನ ಆಲಡೆ ಪಾಂಗಾಳಣ್ಣ ಬಳಿಯವರಿಗೆ ಹಾಗೂ ನಂದಬೆಟ್ಟು ಆಲಡೆ ಬಾಗ್ಯೆಟ್ಟೆ ಬನ್ನಾಯ ಬಳಿಯವರಿಗೆ ಆದಿ ಆಗಿರುತ್ತದೆ ಎಂಬುದನ್ನು ಗುರುತಿಸಿದ್ದಾರೆ (ಸಿರಿ ಆಲಡೆಗಳು ಮತು ಆಚರಣೆಗಳು. ಒಂದು ಸಾಂಸ್ಕೃತಿಕ ಅಧ್ಯಯನ, ಪುಟ 90). ಈ ಆಲಡೆಗಳಿಗೆ ಆದಿಯೆಂದು ಬರುವ ಭಕ್ತಾದಿಗಳು, ದರ್ಶನಕ್ಕಾಗಿ ಬರುವ ಸಿರಿಗಳು, ಕುಮಾರರು ಆಯಾ ಬಳಿಯವರೇ ಆಗಿರುತ್ತಾರೆ ಎಂಬುದು ವಿಶೇಷ. ಆದರೆ ಉಡುಪಿಯ ಉತ್ತರಕ್ಕಿರುವ ಕನ್ನಡ ಮಾತನಾಡುವ ಪ್ರದೇಶಗಳಲ್ಲಿ ಆದಿ, ಮೂಲದ ಕಲ್ಪನೆಗಳಿವೆಯೇ ಹೊರತು ಬಳಿ, ಗೋತ್ರಗಳಿಗೆ ಸಂಬಂಧಿಸಿದ ನಿಯಮಗಳಿರುವುದು ಕಂಡುಬರುವುದಿಲ್ಲ.

ಸಿರಿಜಾತ್ರೆ

ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳ ಪ್ರಮುಖ ಆರಾಧನಾ ಕೇಂದ್ರಗಳಲ್ಲಿ ಸಿರಿಜಾತ್ರೆಯು ವಾರ್ಷಿಕವಾಗಿ ಜರಗುತ್ತದೆ. ಫೆಬ್ರವರಿ ತಿಂಗಳಿಂದ ಆರಂಭಿಸಿ ಮೇ ತಿಂಗಳುಗಳ ನಡುವೆ ಈ ಸಿರಿಜಾತ್ರೆ ನಡೆಯುತ್ತದೆ. ಸಾಮಾನ್ಯವಾಗಿ ಸಿರಿಜಾತ್ರೆ ಹುಣ್ಣಿಮೆ ಯಂದು ನಡೆಯುವುದು ವಾಡಿಕೆ. ಹುಣ್ಣಿಮೆ, ಅಮಾವಾಸ್ಯೆಗಳಂಥ ನಿಸರ್ಗದ

ಸಂಧಿಸ್ಥಿತಿಗಳಿಗೂ ಮನಸ್ಸಿನ ಸ್ಥಿತ್ಯಂತರಗಳಿಗೂ ಸಂಬಂಧವಿರುವುದರಿಂದ ನಮ್ಮ ಅನೇಕ ಆಚರಣೆಗಳು ಅಂದು ನಡೆಯುವುದನ್ನು ಗಮನಿಸಬಹುದಾಗಿದೆ. ಹುಣ್ಣಿಮೆಗೆ ಕಡಲು ಉಕ್ಕೇರಿ ಬರುವುದು, ಅಮಾವಾಸ್ಯೆಯಂದು ಔಷಧೀಯ ಸಸ್ಯಗಳಲ್ಲಿ ಔಷಧೀಯ ಗುಣಗಳು ಸೇರಿಕೊಳ್ಳುತ್ತವೆ ಎಂಬ ತುಳುವರ ನಂಬಿಕೆಯ ಹಿನ್ನೆಲೆಯಲ್ಲಿ ಈ ದಿನಗಳಿಗೆ ವಿಶೇಷ ಮಹತ್ವ ಪ್ರಾಪ್ತವಾಗಿದೆ. ಕೆಲವು ಆಲಡೆಗಳಲ್ಲಿ ಹುಣ್ಣಿಮೆಯ ಮುನ್ನಾ ದಿನ ಅಂದರೆ ತುಳುವಿನ ಪೂವೆಯಂದು (ಉಡುಪಿಯ ಪಾಂಗಾಳ ಆಲಡೆ) ಸಿರಿ ಜಾತ್ರೆ ನಡೆಯುವುದಿದೆ. ಮಂಗಳೂರು ತಾಲೂಕಿನ ಕಂಡೇವು ಆಲಡೆಯಲ್ಲಿ ವೃಷಭ ಸಂಕ್ರಮಣ ದಂದು ಸಿರಿಜಾತ್ರೆ ನಡೆಯುತ್ತದೆ. ಉಡುಪಿಯಿಂದ ಉತ್ತರಕ್ಕೆ ಕನ್ನಡ ಭಾಷಾವಲಯದಲ್ಲಿ ಕಂಡುಬರುವ ಆಲಡೆಗಳಂತಹ ರಚನೆಗಳನ್ನು 'ಚಿತ್ತೇರಿ' ಎಂಬ ಹೆಸರಿನಿಂದ ಗುರುತಿಸುತ್ತಾರೆ. ಸಾಮಾನ್ಯವಾಗಿ ನಾಗ, ಬ್ರಹ್ಮ, ಹಾಯ್ಗುಳಿ, ಚಿಕ್ಕು, ಕ್ಷೇತ್ರಪಾಲ, ಕಲ್ಕುಡ, ಚೌಂಡಿ, ನೆತ್ತೆರ್ ಹಾಯ್ಗುಳಿ ಮುಂತಾದ ಹಲವು ದೈವಗಳ ಸಂಕೀರ್ಣ ಇದು. ಕೆಲವು ಕಡೆ ಈ ಸಂಕೀರ್ಣಗಳಲ್ಲಿ ಅಬ್ಬಗ ದಾರಗರು (ಅರ್ಭಕೇಶ್ವರಿ ಧಾರಕೇಶ್ವರಿ ಎಂದೂ ಕರೆಯುತ್ತಾರೆ) ಇರುವ ಕ್ರಮವೂ ಇದೆ. ಇಲ್ಲಿ ಸಿರಿ ಜಾತ್ರೆಯಂಥ ಉತ್ಸವಳಿಲ್ಲದೆ ಕೆಂಡ ಸೇವೆಯಂಥ ಆಚರಣೆಗಳಿದ್ದು ಹೆಂಗಸರು ಹಾಗೂ ಗಂಡಸರಿಗೆ ಆವೇಶ ಬರುವುದಿದೆ. ಇದನ್ನು 'ಶ್ಯಾವಿಸೇವೆ' ಎಂದು ಕರೆಯುತ್ತಾರೆ.

ಆಯಾ ಆಲಡೆಗಳಿಗೆ ಸಂಬಂಧಿಸಿ ಪರಂಪರೆಯಿಂದ ಸೇವೆ ಸಲ್ಲಿಸುತ್ತಾ ಬಂದ ನೂರಾರು ಮಂದಿ ಸ್ತ್ರೀ ಪುರುಷರು (ಸಿರಿ ಕುಮಾರರು) ಸಾಯಂಕಾಲವಾಗುತ್ತಿದ್ದಂತೆ ನಿಗದಿತ ದಿನದಂದು ಜಾತ್ರೆ ನಡೆಯುವ ಸ್ಥಳಕ್ಕೆ ಬಂದು ಸೇರುತ್ತಾರೆ. ಹರಿಕೆಯನ್ನು ಸಲ್ಲಿಸುವ ಉದ್ದೇಶವನ್ನಿಟ್ಟುಕೊಂಡು ಬಂದಿರುವುದರಿಂದ ಹರಿಕೆಯ ವಸ್ತುಗಳನ್ನು ತಮ್ಮ ಜೊತೆಗೆ ತಂದಿರುತ್ತಾರೆ. ಸಿರಿ ದರ್ಶನದವರಾದರೆ ಸ್ನಾನ ಮಾಡಿ ಉಡಲು ಬಿಳಿಯ ಸೀರೆ ರವಿಕೆ, ಮುಡಿಯಲು ಹೂ ಹಾಗೂ ಇನ್ನಿತರ ಅಲಂಕಾರ ಸಾಮಗ್ರಿಗಳು, ಕೈಯಲ್ಲಿ ಹಿಡಿದುಕೊಳ್ಳಲು ಹಿಂಗಾರದ ಹಾಳೆ, ದಲಿಯ (ನೆಲಕ್ಕೆ ಹಾಸುವ ಬಿಳಿಯ ಬಟ್ಟೆ) ಹಾಕಲು ಬಿಳಿಬಟ್ಟೆ ಇವನ್ನು ತರುತ್ತಾರೆ. ಕುಮಾರ ಪಾತ್ರಿಗಳಾದರೆ ಕಚ್ಚೆಹಾಕಿ ಉಡಲು ಕೆಂಪು ಪಟ್ಟೆ, ಸೊಂಟಕ್ಕೆ ಬಿಗಿಯಲು ಬಿಳಿಯ ಜಟ್ಟಿ, ಹಾಗೂ ಕೈಯಲ್ಲಿ ಹಿಡಿದುಕೊಳ್ಳಲು ಹಿಂಗಾರದ ಹಾಳೆ ಇವಿಷ್ಟನ್ನು ತರುತ್ತಾರೆ. ಆವೇಶ ಹೊಂದುವ ಸ್ತ್ರೀಯರ ಜೊತೆ ಅವರ ಗಂಡಂದಿರು, ಮದುವೆಯಾಗದ ಹುಡುಗಿಯರ ಜೊತೆ ಅವರ ಹೆತ್ತವರು ಇರುತ್ತಾರೆ. ಕುಮಾರನಿಗೆ ಹೆಜ್ಜೆ ಹೆಜ್ಜೆಗೆ ಸಹಾಯಕ್ಕಾಗಿ ಅನುಭವಿ ಸಹಾಯಕರಿರುತ್ತಾರೆ.

ಪ್ರತಿ ಆಲಡೆಗೆ ಸಂಬಂಧಿಸಿದಂತೆ ಒಬ್ಬ ಮೂಲ ಕುಮಾರ ಹಾಗೂ ಸ್ಥಳ ಕುಮಾರ ಮತ್ತು ಒತ್ತು ಕುಮಾರರು ಇರುತ್ತಾರೆ. ಇವರ ಗುಂಪಲ್ಲಿ ಪರಂಪರೆಯಿಂದ ಸೇವೆ ಸಲ್ಲಿಸುತ್ತಾ ಬಂದ ಅನೇಕ ಅನುಭವಿ ಸಿರಿಗಳು ಇರುತ್ತಾರೆ. ಕೆಲವು ಆಲಡೆಗಳಲ್ಲಿ ಬಂಟ, ಬಿಲ್ಲವ, ಕುಲಾಲ ಹಾಗೂ ಹರಿಜನ ಹೀಗೆ ಜಾತಿ ಆಧಾರಿತವಾದ ಬೇರೆ ಬೇರೆ

ಗುಂಪುಗಳಿರುತ್ತವೆ. ಇವರು ದರ್ಶನಾವೇಶಕ್ಕೆ ನಿಲ್ಲುವ ಸ್ಥಳಗಳೂ ಜಾತಿ ಆಧಾರಿತವಾಗಿ ಪ್ರತ್ಯೇಕವಾಗಿಯೇ ಇರುತ್ತವೆ. ಬಂಟರು ಗರ್ಭಗುಡಿಗೆ ಹತ್ತಿರವಾಗಿ ಇದ್ದರೆ, ಇವರ ಹಿಂದೆ ಬಿಲ್ಲವರು ಇರುತ್ತಾರೆ. ಇವರಿಗೆ ಸ್ವಲ್ಪ ಹಿಂದೆ ಕುಲಾಲರು ಇದ್ದರೆ, ಪರಿಶಿಷ್ಟ ವರ್ಗದವರು ದೇವಸ್ಥಾನದ ಹೊರಗೆ ಇರುತ್ತಾರೆ. ಪ್ರತಿಯೊಂದು ಗುಂಪಿಗೂ ಪ್ರತ್ಯೇಕ ಕುಮಾರರು ಇರುತ್ತಾರೆ. ಕೆಲವು ಆಲಡೆಗಳಲ್ಲಿ ಪರಿಶಿಷ್ಟ ವರ್ಗದವರನ್ನು ಹೊರತು ಪಡಿಸಿ ಉಳಿದ ಎಲ್ಲ ಜಾತಿಗಳ ಒಂದೇ ಗುಂಪು ಇರುವ ಕ್ರಮವೂ ಇದೆ. ಪೇರೂರು ಆಲಡೆಯಲ್ಲಿ ನಾನು ಇತ್ತೀಚೆಗೆ ಗಮನಿಸಿದಂತೆ ಎಲ್ಲ ಜಾತಿಯವರಿಗೂ ಸಮಾನ ಸ್ಥಾನಮಾನ ನೀಡಲಾಗಿ, ಎಲ್ಲರೂ ದೇವಸ್ಥಾನದ ಒಳಗೇ ಸೇವೆ ಸಲ್ಲಿಸುವುದನ್ನು ಕಂಡುಕೊಂಡಿದ್ದೇನೆ.

ಸಿರಿದರ್ಶನಾವೇಶಕ್ಕೆ ನಿಲ್ಲುವವರು ತಿಂಗಳು, ವಾರದ ಮೊದಲೇ ಶೌಚದಲ್ಲಿರಬೇಕು. ಹಿಂದಿನ ಕಾಲದಲ್ಲಿ ಮೂರು ದಿನ ಮುಂಚಿತವಾಗಿ ಹಸಿ ಮಡಲನ್ನು ತೊಳಸಿಕಟ್ಟೆಯ ಪಕ್ಕದಲ್ಲಿ ಹಾಸಿ ಅದರಲ್ಲಿ ಮಲಗುತ್ತಿದ್ದರಂತೆ. ಕೆಲವರು ಧರ್ಮಸ್ಥಳ ಮುಂತಾದ ಕ್ಷೇತ್ರಗಳಿಗೆ ಹೋಗಿ ತೀರ್ಥಸ್ನಾನ ಮಾಡಿ ಬರುವ ಕ್ರಮವೂ ಇದೆ. ಜಾತ್ರೆಯಂದು ರಾತ್ರಿ ಎಲ್ಲರೂ ಮಿಂದು ಬಂದು ದಲಿಯದಲ್ಲಿ ನಿಲ್ಲಲು ಸಿದ್ಧತೆ ನಡೆಸುತ್ತಾರೆ. ಸಿರಿ ದರ್ಶನದವರು ಬಿಳಿಯ ಸೀರೆ ರವಿಕೆ ಉಟ್ಟು ತಲೆ ಬಾಚಿ ಹೂ ಮುಡಿದು ಅಲಂಕಾರ ಮಾಡಿಕೊಂಡರೆ, ಕುಮಾರ ಪಾತ್ರಿಗಳು ಕೆಂಪು ಪಟ್ಟೆಯ ಕಚ್ಚೆ ಹಾಕಿ ಸೊಂಟಕ್ಕೆ ಕೆಂಪು/ಬಿಳಿಯ ಜಟ್ಟಿಯೊಂದನ್ನು ಬಿಗಿದು ಕುತ್ತಿಗೆಗೆ ಮಲ್ಲಿಗೆಯ ಮಾಲೆ ಹಾಕಿ ಕೊಂಡಿರುತ್ತಾರೆ. ಮೂಲ ಕುಮಾರ ಗುಡಿಯ ಎದುರು ದರ್ಶನಾವೇಶಕ್ಕೆ ನಿಂತರೆ ಉಳಿದ ಗುಂಪು ತಮಗೆ ನಿಗದಿತವಾದ ಜಾಗದಲ್ಲಿ ಬಿಳಿಯ ವಸ್ತ್ರ ನೆಲದಲ್ಲಿ ಹಾಸಿ ಕೈಯಲ್ಲಿ ಹಿಂಗಾರದ ಹಾಳೆ ಹಿಡಿದುಕೊಂಡು ಸಾಲಾಗಿ ಅಥವಾ ವೃತ್ತಾಕಾರವಾಗಿ ನಿಲ್ಲುತ್ತಾರೆ. ಸಿರಿಗಳಿಗೆ ನಿಂತಲ್ಲಿಯೇ ದರ್ಶನಾವೇಶ ಬರುವುದರಿಂದ ಅವರು ಬಿಳಿಯ ವಸ್ತ್ರ ಹಾಸಿ ನಿಲ್ಲುತ್ತಾರೆ. ಕುಮಾರ ಎಲ್ಲ ಸಿರಿಗಳ ಬಳಿಗೆ ಆಚೀಚೆ ಹೋಗ ಬೇಕಾಗಿರುವುದ ರಿಂದ ಈತ ತಾನು ನಿಲ್ಲುವ ಜಾಗಕ್ಕೆ ದಲಿಯ (ಬಟ್ಟೆ) ಹಾಕುವುದಿಲ್ಲ.

ರಾತ್ರಿಯಾಗುತ್ತಿದ್ದಂತೆ ದೇವಸ್ಥಾನದಲ್ಲಿ ದೇವರ ಬಲಿಉತ್ಸವ ಆರಂಭವಾಗುತ್ತದೆ. ನಿಗದಿತ ಸಮಯಕ್ಕೆ ಸರಿಯಾಗಿ ಮೂಲಕುಮಾರನಿಗೆ ಗುಡಿಯೆದುರು ದರ್ಶನ ನೀಡುವ ಕ್ರಿಯೆ ಆರಂಭವಾಗುತ್ತದೆ. ಅರ್ಚಕರು ದೇವರ ಪ್ರಸಾದ ನೀಡಿ ಕೈಗೆ ಹಿಂಗಾರವನ್ನು ಕೊಟ್ಟು ನೆರೆದ ಎಲ್ಲರ ಸಮ್ಮುಖ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತಿದ್ದಂತೆ ವಾಲಗದ ಧ್ವನಿ ಜೋರಾಗಿ ಮೊಳಗುತ್ತದೆ. ಮೂಲ ಕುಮಾರ ನಿಧಾನವಾಗಿ ದರ್ಶನಾವೇಶಕ್ಕೆ ಒಳಗಾಗಿ ಈ ಕ್ರಿಯೆ ಜೋರಾಗುತ್ತಿದ್ದಂತೆ ಕೈಯಲ್ಲಿನ ಹೂವಿನಿಂದ ತನ್ನ ಮುಖವನ್ನು ಉಜ್ಜಿಕೊಂಡು ಮುಂದಕ್ಕೆ ಹಿಂದಕ್ಕೆ ಚಲಿಸಿ ಹಿಂಗಾರದಿಂದ ತನ್ನ ಬೆನ್ನಿನ ಎರಡೂ ಬದಿಯಿಂದ ಹೊಡೆದುಕೊಂಡು ತನ್ನ ಬಾಯಿಯಿಂದ ನಾರಾಯಣಾ... ನಾರಾಯಣಾ... ಎನ್ನುತ್ತಾ ಸಿರಿ ಸಂಧಿಯನ್ನು ಆರಂಭಿಸುತ್ತಾನೆ. ಈ ಕ್ರಿಯೆ ಜರಗುತ್ತಿದ್ದಂತೆ ಹೊರಗೆ

ನಿಂತಿರುವ ಕುಮಾರ ಹಾಗೂ ಅನುಭವಿ ಸಿರಿಗಳಿಗೆ ದರ್ಶನಾವೇಶ ಆರಂಭವಾಗುತ್ತದೆ. ಇವರ ಮಾರ್ಗದರ್ಶನ ಹಾಗೂ ನಿರ್ದೇಶನದಂತೆ ಉಳಿದ ಸಿರಿ ಕುಮಾರರು ಆವೇಶ ಹೊಂದಿ ಸಿರಿ ಸಂಧಿಯನ್ನು ಹಾಡುತ್ತಾ, ಕುಮಾರನಲ್ಲಿ ಸಂಭಾಷಣೆಯಲ್ಲಿ ತೊಡಗುತ್ತಾ, ಕೆಲವೊಂದು ಬಾರಿ ಸಿರಿಕುಟುಂಬದವರಾಗಿ ಆತ್ಮೀಯತೆಯಿಂದ ತಮ್ಮೊಳಗೇ ಪರಸ್ಪರ ಸಂಭಾಷಣೆಯಲ್ಲಿ ತೊಡಗುತ್ತಾ, ನಿಂತಲ್ಲಿಂದಲೇ ತಲೆ ಸೊಂಟವನ್ನು ತಿರುಗಿಸುತ್ತಾ, ಮೈ ಕೈ ಸೆಟೆದು ಕಣ್ಣು ತಿರುಗಿಸುತ್ತಾ, ನೆಲಕ್ಕೆ ಹೊರಳುತ್ತಾ, ಪಾಡ್ದನದ ಹಾಡುವಿಕೆ ತೀವ್ರತೆಯನ್ನು ಪಡೆದುಕೊಂಡು ಆವೇಶ ಜೋರಾಗುತ್ತಿದ್ದಂತೆ ಎಲ್ಲರೂ ಒಂದೇ ಧ್ವನಿಯಲ್ಲಿ ಸೋ... ಎನ್ನುತ್ತಾರೆ. ಈ ಕ್ರಿಯೆ ಇಡೀ ರಾತ್ರಿ ಜರಗುತ್ತಿರುತ್ತದೆ. ದರ್ಶನಾವೇಶ, ಪಾಡ್ದನದ ಹಾಡುವಿಕೆ ಹಾಗೂ ಬಿಡುಗಡೆ ಇವು ಆವರ್ತದ ಹಲವು ಹಂತಗಳಲ್ಲಿ ನಡೆಯುತ್ತಿರುತ್ತದೆ. ಹೀಗೆ ನೂರಾರು ಸ್ತ್ರೀಯರಿಗೆ ಸಿರಿ ಬಳಗದ ಶಕ್ತಿಗಳೂ, ಕೆಲವು ಪುರುಷರಿಗೆ ಕುಮಾರನೂ ಏಕಕಾಲದಲ್ಲಿ ಮೈದುಂಬಿ ಬರುವುದು ಈ ಉತ್ಸವದ ವಿಶೇಷವಾಗಿದೆ.

ದರ್ಶನಕ್ಕೆ ಪರ್ಯಾಯ ಕೈಪರಕೆ

ಇತ್ತೀಚಿನ ದಿನಗಳಲ್ಲಿ ಸಿರಿ ಜಾತ್ರೆಗೆ ಸಿರಿಗಳ ಸಂಖ್ಯೆ ಗಣನೀಯವಾಗಿ ಕಡಿಮೆ ಯಾಗುತ್ತಿದೆ. ನೂರಾರು ಸಂಖ್ಯೆಯ ಸಿರಿಗಳು, ಕುಮಾರರು ಸೇರುತ್ತಿದ್ದ ಆಲಡೆಗಳಲ್ಲಿ ಬೆರಳೆಣಿಕೆಯ ಜನ ಉಳಿದುಕೊಂಡಿದ್ದಾರೆ. ಇದಕ್ಕೆ ಕಾರಣ ಸಿರಿಗಳು ಆಲಡೆಗಳಲ್ಲಿ ದರ್ಶನಕ್ಕೆ ನಿಲ್ಲದೆ ಕೈಪರಕೆ (ದೇವರಿಗೆ ಹರಕೆ) ಹಾಕಿ ಹೋಗುವ ಪದ್ಧತಿ ಬೆಳೆದು ಬಂದಿದೆ. ಹಳೆಯ ತಲೆಮಾರಿನ ಹೆಂಗಸರು ಮಾತ್ರ ದಲಿಯದಲ್ಲಿ ಹೆಚ್ಚು ಕಾಣಿಸುತ್ತಾರೆ. ಕೆಲವು ಕಡೆ ಬೇರೆ ಆಲಡೆಗಳಿಂದ ದರ್ಶನಾವೇಶಕ್ಕೆ ಹಿರಿಯ ಅನುಭವಿ ಸಿರಿಗಳನ್ನು ಕರೆಸುವ ಪದ್ಧತಿ ಇದೆ. ಹೀಗೇ ಪರಿಸ್ಥಿತಿ ಮುಂದುವರಿದರೆ ಮುಂದೊಂದು ದಿನ ಸಿರಿ ಜಾತ್ರೆಗಳು ನಿಂತುಬಿಡಬಹುದೇನೋ ಎಂಬ ಸಂದೇಹ ಮೂಡುತ್ತದೆ. ಹಿರಿಯ ಅನುಭವಿ ಸಿರಿಗಳಲ್ಲಿ ಈ ಕುರಿತು ವಿಚಾರಿಸಿದಾಗ ಈಗಿನ ತಲೆಮಾರಿನ ಹುಡುಗಿಯರಿಗೆ ದರ್ಶನ ಸೇವೆ (ತುಳುವಿನ ಕುಂಬರುನಿ) ಸಾರ್ವಜನಿಕವಾಗಿ ನಡೆಸಲು ನಾಚಿಕೆಯಾಗುತ್ತದೆ. ಆದುದರಿಂದ ಇವರು ನಾನಾ ಕಾರಣಗಳನ್ನು ಹೇಳಿ ಕುಮಾರನಲ್ಲಿ ದರ್ಶನಾವೇಶದಿಂದ ಮುಕ್ತಿಗೊಳಿಸುವಂತೆ ಕೇಳಿ ದೇವರಿಗೆ ಕೈಪರಕೆ (ಹರಕೆ) ಹಾಕುವ ಪರ್ಯಾಯ ಮಾರ್ಗ ವನ್ನು ಕಂಡುಕೊಂಡದ್ದನ್ನು ತಿಳಿಸುತ್ತಾರೆ. ಆದರೆ ಈ ಕುರಿತು ಇವರೇ ಪ್ರತಿಕ್ರಿಯಿಸುತ್ತಾ ಈ ಕೈಪರಕೆ ತಾತ್ಕಾಲಿಕವಾದ ಪರಿಹಾರವೇ ಹೊರತು ಇದು ಖಾಯಂ ಆದ ಒಂದು ವ್ಯವಸ್ಥೆ ಅಲ್ಲ. ಸಿರಿಯ ಸೂಕೆ(ದೃಷ್ಟಿ) ಒಂದು ಬಾರಿ ಒಬ್ಬಳಿಗೆ ಬಂತೆಂದರೆ ಅದು ಅವಳು ಸತ್ತು ಹೋಗಬೇಕಲ್ಲದೆ ಜೀವಂತವಾಗಿರುವಾಗ ಅದನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಒಂದಲ್ಲ ಒಂದು ದಿನ ಅದು ಮತ್ತೆ ಅವಳ ಮೇಲೆ ಪ್ರಕಟಗೊಂಡು ತೊಂದರೆ ಕೊಡಬಹುದು. ಕೊಟ್ಟೇ ಕೊಡುತ್ತದೆ. ಆಗ ಮತ್ತೆ ಅವಳು ದಲಿಯಕ್ಕೆ ಬರಲೇಬೇಕು. ಒಂದು ವೇಳೆ ಬಾರದೇ ಹೋದಲ್ಲಿ ಅದು ಕುಟುಂಬದ ಇನ್ನೊಬ್ಬರ

ಮೇಲೆ ಪ್ರಕಟಗೊಂಡು ತೊಂದರೆ ಕೊಡಬಹುದು. ಆದುದರಿಂದ ಒಂದು ಬಾರಿ ದಲಿಯಕ್ಕೆ ಪ್ರವೇಶ ಪಡೆದ ಅನಂತರ ಪ್ರತಿ ವರ್ಷ ಸೇವೆ ಸಲ್ಲಿಸುವುದೇ ಸೂಕ್ತ ಎನ್ನುತ್ತಾರೆ. ಪ್ರಾಯದಲ್ಲಿ ಹಿರಿಯ ಹೆಂಗಸರೂ ದರ್ಶನದಿಂದ ನಿವೃತ್ತಿ ಪಡೆಯಬಹುದೆಂದು ಬಯಸಿದರೆ ಅದು ಕುಟುಂಬದ ಇನ್ಯಾರನ್ನೋ ಮತ್ತೆ ಹಿಡಿಯಬಹುದು ಎಂಬ ಭಯದಿಂದ ಆರೋಗ್ಯ ಇರಲಿ ಇಲ್ಲದಿರಲಿ ಸಾಧ್ಯವಾದಷ್ಟು ದಿನ ಸಿರಿಯ ಸೇವೆ ಸಲ್ಲಿಸುವುದು ಸೂಕ್ತ ಎಂಬ ತೀರ್ಮಾನಕ್ಕೆ ಬರುತ್ತಿದ್ದಾರೆ. ಕರ್ಗಿ ಶೆಡ್ತಿ, ಲೀಲಾ ಶೆಡ್ತಿ, ಶ್ಯಾಮರಾಯ ಶೆಟ್ಟಿ, ಮುತ್ತಪ್ಪ ಕುಲಾಲ್ – ಇವರಂಥ ಹಿರಿಯ ತಲೆಮಾರಿನ ದರ್ಶನಪಾತ್ರಿಗಳು 'ಸಿರಿ ತುಳುನಾಡು ಉಂಟಾಗುವಾಗಲೇ ಉಂಟಾದವಳು. ತುಳುನಾಡಲ್ಲಿ ಅವಳ ಕಥೆ ಉಳಿಯಬೇಕೆಂದು ದೇವರೇ ಅವಳನ್ನು ಕಳುಹಿಸಿಕೊಟ್ಟಿದ್ದಾರೆ. ಹೀಗಾಗಿ ತುಳುನಾಡು ಅಳಿಯುವಾಗಲೇ ಇದು ಅಳಿಯಬೇಕಲ್ಲದೆ ಅಷ್ಟು ಸುಲಭದಲ್ಲಿ ಈ ಕಲೆ ಅಳಿಯಲು ಸಾಧ್ಯವಿಲ್ಲ. ಸಿರಿಗಳ ಸಂಖ್ಯೆ ಕಾಲಕ್ಕೆ ಅನುಗುಣವಾಗಿ ಬದಲಾಗುತ್ತಿದೆ ಅಷ್ಟೆ. ಆದರೆ ಸಿರಿಯ ಪ್ರಭಾವ ಏನೂ ಕಮ್ಮಿ ಆಗಿಲ್ಲ. ಅವಳಿಗೆ ಬೇಕೆಂದರೆ ಯಾರ ಮೇಲೂ ನೋಟ ಇಡಬಹುದು. ಕರ್ಗಿ ಶೆಡ್ತಿಯವರು ಒಂದು ಹೆಜ್ಜೆ ಮುಂದೆ ಹೋಗಿ ಸಿರಿಯ ಆಚರಣೆ ತುಳುನಾಡಿನಲ್ಲಿ ನಿಲ್ಲುವ ಸಂಭವ ಬಂದರೆ ಬೇಲಿಯ ತೂನಕ್ಕಾದರೂ ದರ್ಶನ ಬಂದೇ ಬರುತ್ತದೆ. ಈ ಮಾತನ್ನು ನೀವು ತಾಮ್ರದ ಪಟ್ಟೆಯಲ್ಲಿ ಬೇಕಾದರೆ ಬರೆದಿಡಿ. ಅಂಥ ಸಂದರ್ಭ ಬಂದರೆ ಇದು ನಡೆದೇ ನಡೆಯುತ್ತದೆ. ಹೀಗಾಗಿ ಸಿರಿಯ ಪ್ರಭಾವ ತುಳುನಾಡಲ್ಲಿ ಕಡಿಮೆಯಾಗಲು ಸಾಧ್ಯವೇ ಇಲ್ಲ ಎನ್ನುತ್ತಾರೆ.

ಹೊಸ ಸಿರಿಗಳ ಸೇರ್ಪಡೆ ಹಾಗೂ ಇಲ್ಲೆಚ್ಚಿದ ದಲಿಯ

ಸಿರಿ ಜಾತ್ರೆಯಲ್ಲಿ ಹೊಸ ಸಿರಿಗಳ ಸೇರ್ಪಡೆ ಒಂದು ಪ್ರಮುಖ ಭಾಗ. ಹೆಣ್ಣೊಬ್ಬಳು ಸಿರಿಯಾಗುವ ಪ್ರಕ್ರಿಯೆ ಈ ರೀತಿ ಇರುತ್ತದೆ. ಒಬ್ಬಾಕೆಯಲ್ಲಿ ದೈಹಿಕ ಅಥವಾ ಮಾನಸಿಕ ಅಸ್ವಸ್ಥತೆಯ ಚಹರೆಗಳು ಕಂಡುಬಂದಾಗ ಮೊದಲು ಇದು ದುಷ್ಟಶಕ್ತಿಗಳ ತೊಂದರೆ ಅಥವಾ ಸಂದುಹೋದ ಕುಟುಂಬದ ಪ್ರೇತಾತ್ಮಗಳ ತೊಂದರೆಯಿರಬೇಕೆಂದು ತಿಳಿದು ನಾನಾ ಪರಿಹಾರೋಪಾಯಗಳನ್ನು ನಡೆಸಲಾಗುತ್ತದೆ. ಇದರಲ್ಲಿ ಏನೂ ಪ್ರಯೋಜನ ಕಂಡುಬಾರದಿದ್ದಾಗ ಕೊನೆಗೆ ಬಲ್ಯಾಯ(ಜ್ಯೋತಿಷಿ)ನ ಮೊರೆ ಹೋಗಲಾಗುತ್ತದೆ. ಈತನ ನಿರ್ದೇಶನದಂತೆ ಪರಿಹಾರಗಳನ್ನು ಕಂಡುಕೊಳ್ಳಲಾಗುತ್ತದೆ. ಕೆಲವೊಂದು ಬಾರಿ ಹೆಣ್ಣೊಬ್ಬಳ ಅಸ್ವಸ್ಥತೆಯ ಮೇಲ್ಮೈ ಲಕ್ಷಣದಿಂದಲೇ (ಉದಾಹರಣೆಗೆ ವಾಲಗ, ಬೇಂಡಿನ ಶಬ್ದ ಕೇಳುವಾಗ ಮೈದುಂಬಿ ಬರುವುದು ಇತ್ಯಾದಿ ಲಕ್ಷಣಗಳು) ಇದು ಸಿರಿಯ ಸೂಕೆ (ದೃಷ್ಟಿ) ಇರಬೇಕೆಂದು ತಿಳಿದು ಆಕೆಯನ್ನು ಸಿರಿಜಾತ್ರೆಗೆ ಕರೆ ತರಲಾಗುತ್ತದೆ. ಮೂಲ ಕುಮಾರ ಸಾಮಾನ್ಯವಾಗಿ ಈ ರೀತಿಯ ಸಮಸ್ಯೆಗಳನ್ನು ಪರಿಹರಿಸುವವನಾಗಿರುತ್ತಾನೆ. ದರ್ಶನದ ಮಧ್ಯೆ ಊರವರು ಅನೇಕ ಮಂದಿ ತಮ್ಮ ಸಮಸ್ಯೆಗಳನ್ನು ಹೇಳಿ ಅದಕ್ಕೆ ಕುಮಾರನಿಂದ ಪರಿಹಾರವನ್ನು ಕಂಡುಕೊಳ್ಳುವ ಒಂದು ಸಂದರ್ಭ ಇದೆ. ಈ ಹೊತ್ತು

ಅಸ್ವಸ್ಥ ಹುಡುಗ/ಹುಡುಗಿಯನ್ನು ಕುಮಾರನೆದುರು ನಿಲ್ಲಿಸಿದಾಗ ಮನೆಯವರಲ್ಲಿ ಮೊದಲು ಈಕೆ/ಈತನ ತೊಂದರೆಗಳ ಬಗೆಗೆ ವಿಚಾರಿಸಿ ನೀವೇನಾದರೂ ತೊಂದರೆ ಕೊಟ್ಟಿದ್ದೀರೇ ಎಂದು ಕೇಳುತ್ತಾನೆ. ಅನಂತರ ನಿಧಾನವಾಗಿ ಅಸ್ವಸ್ಥ ಹುಡುಗಿಯಲ್ಲಿ ಸಂಭಾಷಣೆಗೆ ತೊಡಗಿ ನೀವು ಯಾರು? ನನ್ನ ತಾಯಿಯವರೇ, ನನ್ನ ತಂಗಿಯೇ, ನನ್ನ ಸೊಸೆಯಂದಿರೇ? ದಯವಿಟ್ಟು ಸಮಯ ತೆಗೆಯದೆ ಬಾಯಿಬೀಗ ತೆಗೆದು ಬೇಗ ಹೇಳಿ ಎಂದು ಪಾಡ್ದನದ ಶೈಲಿಯಲ್ಲಿಯೇ ಮಾತನಾಡಿಸುತ್ತಾನೆ. ಸಾಮಾನ್ಯವಾಗಿ ಕುಮಾರನ ಮಾತಿಗೆ ಸ್ಪಂದಿಸುತ್ತಾ ನಾನು ನಿನ್ನ ತಾಯಿಯೆಂದೋ (ಸಿರಿ), ತಂಗಿಯೆಂದೋ (ಸೊನ್ನೆ ಅಥವಾ ಗಿಂಡೆ), ಸೊಸೆಯಂದಿರಲ್ಲಿ ಒಬ್ಬರೆಂದೋ (ಅಬ್ಬಗ/ದಾರಗ) ತಿಳಿಸುತ್ತಾಳೆ. (ಒಂದು ವೇಳೆ ಬಾಯಿ ಬಿಡದಿದ್ದಲ್ಲಿ ಆಕೆಯ ಜುಟ್ಟನ್ನು ಗಟ್ಟಿಯಾಗಿ ಎಳೆದು ತನ್ನ ಕೈಯಲ್ಲಿರುವ ಹಿಂಗಾರದ ಹೂವಿನಿಂದ ರಪರಪನೆ ಬಡಿದು ಬಲಪ್ರಯೋಗಿಸಿ ಬಾಯಿ ಬಿಡಿಸುವ ಕ್ರಮಗಳು ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿವೆ. ಈ ರೀತಿಯ ಕ್ರಿಯೆಗಳನ್ನು ಅನುಭವಿ ಸಿರಿ ಕುಮಾರರಾದ ಕರ್ಗಿಶೆಡ್ತಿ, ಗೋಪಾಲ ನಾಯ್ಕರು ವಿರೋಧಿಸುತ್ತಾರೆ). ಹೀಗೆ ಅಂತಿಮವಾಗಿ ಸಿರಿ ಬಳಗದ ನಿರ್ದಿಷ್ಟ ಸದಸ್ಯೆಯಾಗಿ ಆಕೆ ನಾಮಕರಣ ಹೊಂದಿದ ಅನಂತರ ಆಕೆಯನ್ನು ಮುಂದೆ ಪ್ರತಿವರ್ಷ ದಲಿಯದಲ್ಲಿ ನಿಲ್ಲುವಂತೆ ಸೂಚಿಸಲಾಗುತ್ತದೆ. ಈ ಒಟ್ಟು ಕ್ರಿಯೆಗೆ 'ಬಾಯಿ ಬುಡ್ಪಾವುನಿ ಅಥವಾ ಬಾಯಿಬೀಗೊ ಜಪ್ಪಾವುನಿ' (ಬಾಯಿ ಬಿಡಿಸುವುದು ಅಥವಾ ಬಾಯಿ ಬೀಗ ತೆಗೆಸುವುದು) ಎಂದು ಹೆಸರು.

ಅಲ್ಲದೆ ಅಸ್ವಸ್ಥ ಹುಡುಗಿಯ ಮನೆಯಲ್ಲಿ ಅನುಭವಿ ಕುಮಾರ ಹಾಗೂ ಸಿರಿಗಳ ಸೇರುವಿಕೆಯಲ್ಲಿ ದಲಿಯ ಸೇವೆ ಏರ್ಪಡಿಸುವುದೂ ಇದೆ. ಇದಕ್ಕೆ 'ಇಲ್ಲೆಚ್ಚಿದ ದಲಿಯ' ಎಂದು ಹೆಸರು. ತುಳುವಿನಲ್ಲಿ 'ಇಲ್ಲ್' ಎಂದರೆ ಮನೆ. 'ಎಚ್ಚಿ' ಎಂದರೆ ದರ್ಶನ. ಮನೆಯಲ್ಲಿ ದಲಿಯ ಹಾಕಿಸಿ ನಡೆಸುವ ದರ್ಶನಸೇವೆ ಇದು. ಅಸ್ವಸ್ಥ ಹುಡುಗಿಯ ಪರಿಸ್ಥಿತಿಯನ್ನು ಹೊಂದಿಕೊಂಡು (ಜಾತ್ರೆಯವರೆಗೆ ಕಾಯಲಾಗದಿದ್ದ ಸಂದರ್ಭ) ಮನೆಯಲ್ಲಿ ನಡೆಸುವ ದರ್ಶನಸೇವೆಯನ್ನು ಕುಮಾರನಲ್ಲಿ ವಿಮರ್ಶಿಸಿ ನಿರ್ಧರಿಸಲಾಗುತ್ತದೆ. ದಲಿಯ ಆಚರಣೆಗೆ ಬೇಕಾದ ಎಲ್ಲ ಪೂರ್ವಸಿದ್ಧತೆಯನ್ನು ಮುಖ್ಯ ಕುಮಾರನು ಮೊದಲೇ ಮಾಡಿರುತ್ತಾನೆ. ಸಾಯಂಕಾಲವಾಗುತ್ತಿದ್ದಂತೆ ಮುಖ್ಯ ಕುಮಾರನು ಭಾಗವಹಿಸುವ ಎಲ್ಲ ಸಿರಿ ಕುಮಾರರಿಗೆ ಎಣ್ಣೆ ನೀಡುತ್ತಾನೆ. ತಾರೀಕು 26.02.2016ರಂದು ಮಂಗಳೂರು ತಾಲೂಕಿನ ಗುರುಪುರ ಸಮೀಪದ ಸಾಲೆ ಎಂಬಲ್ಲಿ ಬಿಲ್ಲವರ ಮನೆಯಲ್ಲಿ ಹೆಂಗಸೊಬ್ಬರ ಅಸ್ವಸ್ಥತೆಯ ಸಲುವಾಗಿ ನಡೆಸಿರುವ ಇಲ್ಲೆಚ್ಚಿದ ದಲಿಯದಲ್ಲಿ ಕಂಡುಕೊಂಡಂತೆ ಎಣ್ಣೆ ಕೊಡುವಾಗಲೇ ಅಸ್ವಸ್ಥ ಹೆಂಗಸನ್ನು ಕುಮಾರನು ವಿಚಾರಿಸಿ ಆಕೆ ಸೊನ್ನೆ ಎಂಬುದನ್ನು ಬಾಯಿ ಬಿಡಿಸಿ ಖಚಿತಪಡಿಸಿಕೊಂಡ ಬಳಿಕ ಆಕೆಗೆ ಎಣ್ಣೆ ಹಾಗೂ ಸೀರೆಯನ್ನು ನೀಡುತ್ತಾರೆ. ಎಣ್ಣೆ ಸ್ವೀಕರಿಸಿದ ಈಕೆ ಅದನ್ನು ತಲೆ ಹಾಗೂ ದೇಹದ ಮುಖ್ಯ ಭಾಗಗಳಿಗೆ ಲೇಪಿಸಿ ಸ್ನಾನ ಮಾಡಿ ಬಂದು ಮಡಿಯುಡುತ್ತಾಳೆ.

ಅಲಂಕಾರ ಮುಗಿಸಿ ದಲಿಯಕ್ಕೆ ಬರುವಾಗ ಮುಖ್ಯ ಕುಮಾರ ಅಂಗಳದ ಒಂದು ಬದಿಯಲ್ಲಿ ದೇವರ ಹೆಸರಿನ ಗದ್ದಿಗೆ (ಪವಿತ್ರ ಕಲಶ) ಸ್ಥಾಪಿಸಿ ಅದರ ಎದುರು ನಿಂತುಕೊಂಡು ಸಿರಿಸಂಧಿಯನ್ನು ಹಾಡುತ್ತಾ ದರ್ಶನಾವೇಶಕ್ಕೆ ಒಳಗಾಗುತ್ತಾನೆ. ಈ ಸಂದರ್ಭ ದಲಿಯದಲ್ಲಿ ನಿಂತ ಉಳಿದ ಸಿರಿಗಳೂ ದರ್ಶನಾವೇಶಕ್ಕೆ ಒಳಗಾಗುತ್ತಾರೆ. ತಾವೆಲ್ಲ ಒಂದೇ ಕುಟುಂಬದ ಸದಸ್ಯರೆಂಬ ಭಾವನೆಯನ್ನು ಆವೇಶದ ಸಂದರ್ಭದಲ್ಲಿ ತಾಳುತ್ತಾರೆ. ಈ ಸಂದರ್ಭ ತೊಂದರೆಗೊಳಗಾದ ಹೆಣ್ಣಿಗೆ ಕುಮಾರನು ಮನೆಯವರು ಹಾಗೂ ಕುಟುಂಬದವರನ್ನು ಒಂದೇ ಕಡೆ ನಿಲ್ಲಿಸಿ ಆಕೆಗೆ ಪುರ್ಪ (ಹಿಂಗಾರ) ನೀಡಬಹುದೇ ಎಂದು ವಿಚಾರಿಸಿ ಅವರ ಒಪ್ಪಿಗೆಯನ್ನು ಪಡೆದು ಅವರು ಒಟ್ಟಾಗಿ ಪುರ್ಪ ತೆಗೆದು ಕುಮಾರನ ಕೈಗೆ ನೀಡಿದ್ದನ್ನು ಕುಮಾರನು ಆಕೆಗೆ ನೀಡಿ ಗದ್ದುಗೆಗೆ ಒಂದು ಸುತ್ತು ಬಂದು ಆಕೆಯನ್ನು ಬಲಗಾಲು ಮುಂದಿರಿಸಿ ದಲಿಯಕ್ಕೆ ಸೇರಿಸುತ್ತಾನೆ. ಅಂದಿನಿಂದ ಆಕೆ ಸಿರಿ ಕುಟುಂಬದ ಓರ್ವ ನಿರ್ದಿಷ್ಟ ಸದಸ್ಯೆಯಾಗಿ ನೇಮಕವಾಗುತ್ತಾಳೆ.

ದಲಿಯ ಜಪ್ಪುನಿ ಅಥವಾ ಒಲಿಮದೆಗುಂಡ ಜಪ್ಪುನಿ ಹಾಗೂ ಪುರ್ಪೊ ಬುಡ್ಪುನಿ

ಸಿರಿ ಜಾತ್ರೆಯಲ್ಲಿ ಹಿಂಗಾರ ಹಿಡಿಯುವುದು (ಪುರ್ಪ ಪತ್ತುನಿ) ಹಾಗೂ ಹಿಂಗಾರವನ್ನು ವಿಧಿವತ್ತಾಗಿ ಬಿಡುವುದು (ಪುರ್ಪೊ ಬುಡ್ಪುನಿ) ಆಚರಣೆಯ ಪ್ರಧಾನ ವಿಧಿಗಳಲ್ಲಿ ಒಂದು. ಪುರ್ಪ ಹಿಡಿಯುವ ಮೂಲಕ ಸಿರಿ ಲೋಕಕ್ಕೆ ಒಬ್ಬಾತ ಅಥವಾ ಒಬ್ಬಾಕೆ ಪ್ರವೇಶವನ್ನು ಪಡೆದರೆ ಪುರ್ಪ ಬಿಡುವ ಮೂಲಕ ಆವೇಶದಿಂದ ಬಿಡುಗಡೆಯನ್ನು ಪಡೆಯುತ್ತಾನೆ/ಳೆ. ಈಗಾಗಲೇ ತಿಳಿಸಿರುವಂತೆ ಸಾಮಾನ್ಯವಾಗಿ ಎಲ್ಲ ಆಲಡೆಗಳಿಗೆ ಸಂಬಂಧಿಸಿ ಮೂಲ ಕುಮಾರ ಹಾಗೂ ಸ್ಥಳದ ಕುಮಾರ ಇರುತ್ತಾನೆ. ಈತನ ನಿಯಂತ್ರಣದಲ್ಲಿಯೇ ಒಟ್ಟು ಸಿರಿ ಜಾತ್ರೆ ನಡೆಯುತ್ತದೆ. ಸಿರಿ ಜಾತ್ರೆಯಂದು ಜೋಗದಿಂದ ಮಾಯಾಲೋಕಕ್ಕೆ ಮೊದಲು ಪ್ರವೇಶಿಸುವವನು ಇವನೇ. ಅನಂತರ ಉಳಿದವರು ದರ್ಶನಾವೇಶ ಹೊಂದಬಹುದಾಗಿದೆ. ಈತ ದರ್ಶನಾವೇಶವನ್ನು ಪಡೆಯುವ ಕ್ರಿಯೆ ಹೀಗಿರುತ್ತದೆ. ನಿಗದಿತ ಸಮಯಕ್ಕೆ ಸರಿಯಾಗಿ ಈತ ಸರ್ವಸಿದ್ಧತೆಗಳೊಂದಿಗೆ ಬೆರ್ಮೆರ್ ದೇವರ ಗುಂಡದ ಎದುರು ನಿಂತಿರುತ್ತಾನೆ. ಅರ್ಚಕರು ದೇವಸ್ಥಾನಕ್ಕೆ ಸಂಬಂಧಿಸಿದ ಯಜಮಾನರುಗಳ ಜೊತೆ ಬಂದು ಕುಮಾರನಿಗೆ ದೇವರ ತೀರ್ಥಪ್ರಸಾದ ನೀಡಿ ಹಿಂಗಾರವನ್ನು ಕೈಗೆ ನೀಡಿ ಅರ್ಚಕರು ಕುಮಾರ ಮೈದುಂಬಿ ಬರಬೇಕೆಂದು ಬೆರ್ಮೆರ್‌ರನ್ನು ಪ್ರಾರ್ಥಿಸುತ್ತಿದ್ದಂತೆ ಕುಮಾರ ಪಾತ್ರಿ ಜೋರಾಗಿ ದರ್ಶನಾವೇಶಕ್ಕೆ ತೊಡಗಿ ನಾರಾಯಣ... ನಾರಾಯಣ ಎನ್ನುತ್ತಾ ಸಿರಿಸಂಧಿಯನ್ನು ಆರಂಭಿಸುತ್ತಾನೆ. ಈತನನ್ನನುಸರಿಸಿ ಹೊರಗೆ ದಲಿಯದಲ್ಲಿ ನಿಂತಿರುವ ಸಿರಿ ಕುಮಾರರೂ ಒಬ್ಬೊಬ್ಬರಾಗಿ ಆವೇಶಕ್ಕೊಳಗಾಗುತ್ತಾರೆ. ಇಡೀ ರಾತ್ರಿ ದರ್ಶನಾವೇಶ, ಸಿರಿ ಸಂಧಿಯ ಹಾಡುವಿಕೆ, ತಮ್ಮ ತಮ್ಮೊಳಗೆ ತಾಯಿ ಮಗ, ಮಾವ ಸೊಸೆಯಂದಿರು, ಅಣ್ಣ ತಂಗಿ, ತಾಯಿ ಮಕ್ಕಳು – ಈ ರೀತಿಯ ಸಂಬಂಧಗಳನ್ನು ಸ್ಥಾಪಿಸಿಕೊಂಡು ಪರಸ್ಪರ ನಡೆಸುವ

ಸಂಭಾಷಣೆ, ದಲಿಯಕ್ಕೆ ಹೊಸಬರ ಸೇರ್ಪಡೆ, ತಮ್ಮ ಅನೇಕ ಕಷ್ಟಗಳಿಗೆ ಸಿರಿ ಕುಮಾರರು ನೀಡುವ ಪರಿಹಾರ – ಇವೆಲ್ಲ ಕ್ರಿಯೆಗಳ ಅನಂತರ ಬೆಳಗಾಗುತ್ತಿದ್ದಂತೆ ದಲಿಯ ಇಳಿದು ಪುರ್ಪ ಬಿಡಲು ಮೂಲ ಕುಮಾರನ ಅನುಮತಿಯನ್ನು ಕೇಳುತ್ತಾರೆ. ಈತ ಒಪ್ಪಿಗೆ ನೀಡುತ್ತಿದ್ದಂತೆ ಒಂದೊಂದೇ ಗುಂಪುಗಳು ಕುಮಾರನನ್ನು ಮುಂದಿರಿಸಿಕೊಂಡು ದೇವಾಲಯದಿಂದ ಹೊರಗೆಬಂದು ಗದ್ದೆಯಲ್ಲಿ ಹಸಿ ಮಡಲಿನಿಂದ ನಿರ್ಮಿಸಿದ ತಾತ್ಕಾಲಿಕ ತಿಕೋನಾಕೃತಿಯ ರಚನೆ (ಒಲಿಮದೆ ಗುಂಡ)ಕ್ಕೆ ಮೂರು ಸುತ್ತು ಅಪ್ರದಕ್ಷಿಣೆ ಬಂದು ಆಯಾ ತಂಡದ ಕುಮಾರನ ಸಮ್ಮುಖ ಒಬ್ಬೊಬ್ಬರೇ ತಮ್ಮ ವಾಕ್ಯವನ್ನು (ಅಜ್ಜೇರುವಿನಿಂದ ಹಿಡಿದು ತಮ್ಮ ಬದುಕಿನ ವೃತ್ತಾಂತವನ್ನು ಸಂಕ್ಷಿಪ್ತವಾಗಿ ವೇಗವಾಗಿ ಜೋರು ದರ್ಶನಾವೇಶದೊಂದಿಗೆ ಹೇಳಿ) ಪುರ್ಪವನ್ನು ಬಿಡುತ್ತಿದ್ದಂತೆ ಇವರು ಸ್ಮೃತಿ ಕಳೆದುಕೊಳ್ಳುತ್ತಾರೆ. ಅವರನ್ನು ಅಲ್ಲಿಂದ ಎತ್ತಿಕೊಂಡು ಹೋಗಲಾಗುತ್ತದೆ. ಹೀಗೆ ಪ್ರತಿಯೊಬ್ಬರು ಸರದಿಯಲ್ಲಿ ಪುರ್ಪ ಬಿಡುತ್ತಾರೆ. ಮೂಲ ಕುಮಾರ ಮಾತ್ರ ಹೇಗೆ ಬೆರ್ಮೆರ್ ಗುಂಡದ ಎದುರು ಪುರ್ಪ ಹಿಡಿದನೋ ಅದೇ ರೀತಿಯಲ್ಲಿ ಅರ್ಚಕರ ಸಮ್ಮುಖವೇ ಗುಡಿಯೆದುರು ಪುರ್ಪ ಬಿಡುತ್ತಾನೆ.

ನನ್ನ ವಕ್ತೃ ಕರ್ಗಿ ಶೆಡ್ತಿಯವರು ಈ ಬಗೆಗೆ ತಿಳಿಸುತ್ತಾ ಇಡೀ ಸಿರಿ ಆಚರಣೆಯೇ ಸತ್ಯನಾಪುರದ ಅಜ್ಜನವರಿಗೆ ನಡೆಸುವ ಸಾವಿನ ಆಚರಣೆ ಎನ್ನುತ್ತಾರೆ. ಇದಕ್ಕೆ ಇವರು ನೀಡುವ ವಿವರಣೆಯೆಂದರೆ ಅಜ್ಜನವರು ಸತ್ತಾಗ ಅವರನ್ನು ಸಿರಿ ಒಬ್ಬಳೇ ಹೊತ್ತು ಕಾಷ್ಠದಲ್ಲಿಟ್ಟು ಸುಟ್ಟು ಭಸ್ಮ ಮಾಡಿ ಸತ್ಯನಾಪುರದ ಅರಮನೆ ಬಿಟ್ಟು ಹೊರಡುತ್ತಾಳೆ. ಹೀಗಾಗಿ ಅಜ್ಜನವರಿಗೆ ಸಾವು (ಉತ್ತರಕ್ರಿಯೆ) ಆಗಲಿಲ್ಲ. ಆದುದರಿಂದ ಇಡೀ ಸಿರಿ ಆಚರಣೆಯನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಇದಕ್ಕೆ ಪೂರಕವೆಂಬಂತೆ ಕಬತಾರು ಆಲಡೆಯಲ್ಲಿ ಸಿರಿ ಜಾತ್ರೆಗೆ ಹದಿನೈದು ದಿನ ಮುಂಚಿತವಾಗಿ ಊರ ಆಚಾರಿ ಬಂದು ವಿಧಿವತ್ತಾಗಿ ಮಾವಿನ ಮರ ಕಡಿಯುವ ಕ್ರಮ ಇದೆ. ಅಲ್ಲದೆ ಜಾತ್ರೆಯಂದು ಕಬತಾರು ಹಾಗೂ ಪೇರೂರು ಆಲಡೆಗಳಲ್ಲಿ ರಾತ್ರಿ 'ತಲವು ಲಪ್ಪುನಿ' ಎಂಬ ಆಚರಣೆಯು ನಡೆಯುತ್ತದೆ ಹಾಗೂ ಮನೆಯ ಚಾವಡಿಯಲ್ಲಿ ಎಡೆ ಹಾಕುವ ಆಚರಣೆ ಇದೆ. ಈ ತಲವು ಹಾಗೂ ಅಗೆಲುಗಳನ್ನು ಮೂಲದ ಕೊರಗ, ಮನ್ಸ, ಮೇರ ಜಾತಿಯವರಿಗೆ ವಿತರಿಸುತ್ತಾರೆ. ಆಚಾರಿ ಬಂದು ಮಾವಿನ ಮರ ಕಡಿಯುವುದು, ತಲವು ಅಳೆಯುವುದು ಮತ್ತು ಊರ ಕೊರಗ, ಮನ್ಸ ಹಾಗೂ ಇನ್ನಿತರರಿಗೆ ಎಡೆವಿತರಿಸುವುದು ಇವೆಲ್ಲ ಬಂಟರಲ್ಲಿ ಗಡಿಹಿಡಿದ ಯಜಮಾನ ಸತ್ತಾಗ ನಡೆಸುವ ಸಾವಿನ ಆಚರಣೆಯಾಗಿದೆ.(ಈ ಬಗೆಗೆ ವಿವರವಾದ ಒಂದು ಭಾಗ ಅಧ್ಯಯನದ ಕೊನೆಗೆ ಇರುವುದರಿಂದ ಇಲ್ಲಿ ಹೆಚ್ಚು ವಿಸ್ತರಿಸುವುದಿಲ್ಲ).

ಈ ಮೇಲಿನ ಹೇಳಿಕೆಗೆ ಪೂರಕವಾಗಿ ಡಾ. ಗಾಯತ್ರಿ ನಾವಡ ಅವರ ಮಾತುಗಳನ್ನು ನೋಡಬಹುದು. 'ಸಿರಿ ಕಾವ್ಯದುದ್ದಕ್ಕೂ ನೂರಾರು ಬಾರಿ ಕೇಳಿಬರುವ ಪದವೆಂದರೆ ನಾರಾಯಣಾ... ನಾರಾಯಣಾ ಎಂಬುದು. ಈ ಪದ ತುಳುವ ಸಂಸ್ಕೃತಿಯಲ್ಲಿ ಬ್ರಾಹ್ಮಣರ

ಶವಸಂಸ್ಕಾರದ ಸಂದರ್ಭದಲ್ಲಿ ಕೇಳಿಬರುವಂತಹುದು. ಅಂದರೆ ದುರಂತ ಅಥವಾ ಶೋಕ ಸನ್ನಿವೇಶದೊಂದಿಗೆ ಈ ಪದ ಸಾಹಚರ್ಯವನ್ನು ಪಡೆದಿದೆ. ಪಾಡ್ದನದ ಗಾಯಕರು ದುಃಖ, ಹತಾಶೆ, ಯಾತನೆಯನ್ನು ನಿರೂಪಿಸಬೇಕಾದಾಗಲೆಲ್ಲ 'ನಾರಾಯಣಾ' ಪದವನ್ನು ಬಳಸುತ್ತಾರೆ. ಇಡಿಯ ಸಿರಿಕಾವ್ಯ ಒಂದು ಕುಟುಂಬದ ಸುತ್ತ ವಿಸ್ತರಿಸಿದ್ದು ಶವಸಂಸ್ಕಾರ, ಸೀಮಂತ, ಶಿಶು ಜನನ, ಮದುವೆ, ಮೈ ನೆರೆಯುವ ಆಚರಣೆ ಮುಂತಾದ ಪರಿವರ್ತನ ವಿಧಿಗಳ ಸಂದರ್ಭಗಳಲ್ಲಿ ಕುಟುಂಬದ ಸದಸ್ಯರು ನಿಯತಿಯನ್ನು ಮೀರಿದಾಗ ಕ್ರಿಯೆ ದುರಂತೆಡೆಗೆ ಸಾಗುತ್ತದೆ.' (ಸಿರಿ ಪಂಥ ಮಹಿಳಾ ಸಬಲೀಕರಣ – ಸಮಾಜೋಸಾಂಸ್ಕೃತಿಕ ಅಧ್ಯಯನ, 2004, ಪುಟ 58).

ಸಿರಿ ಸಂಧಿ

ತುಳುನಾಡಿನ ಪುರಾಣ ಲೋಕದ ದೇಸೀಯ ಸಾಂಸ್ಕೃತಿಕ ಲೋಕದ ವೀರರ, ವೀರ ರಮಣಿಯರ ಸುತ್ತ ಹೆಣೆದ ದುರಂತ ವಸ್ತು ವಿನ್ಯಾಸವುಳ್ಳ ಮೌಖಿಕ ಸಂಪ್ರದಾಯದ ಹಾಡುಗಳನ್ನು ಸಂಧಿ ಅಥವಾ ಪಾಡ್ದನಗಳೆಂದು ಕರೆಯುತ್ತಾರೆ. ಸಂಧಿ ಅಥವಾ ಪಾಡ್ದನ ಎನ್ನುವ ಹೆಸರು ವಿದ್ವಾಂಸರ ಕೊಡುಗೆಗಳು. ಜನಪದರು ಇದನ್ನು 'ಸಂದ್' ಅಥವಾ 'ಪಾರ್ದನೆ' ಎಂಬ ಹೆಸರಿನಿಂದ ಕರೆಯುವುದಿದೆ. (ಬಂಟ್ವಾಳ ತಾಲೂಕಿನ ಕಾಪುಮಜಲಿನ ಭೂತನರ್ತಕ ಜತ್ತು ಪರವ 'ಪಾರ್ದನೆ ಪನ್ಪುನೆ' ಹಾಗೂ 'ಸಂದ್ ಪನ್ಪುನೆ' ಎಂದೇ ಬಳಸುತ್ತಿದ್ದರು). ತುಳುನಾಡಿನಲ್ಲಿ ಅಲೌಕಿಕ ನೆಲೆಯಲ್ಲಿ ಆರಾಧನೆಗೊಳ್ಳುವ ಭೂತಗಳ ಹುಟ್ಟು, ಕಾರಣಿಕಪ್ರದರ್ಶನ ಹಾಗೂ ಪ್ರಸರಣ ಇವನ್ನು ಸಾರುವ ಭಾಗಗಳು ಪಾರ್ದನೆಗಳು. ಭೂತಾರಾಧನೆಯ ವಿವಿಧ ಹಂತಗಳಾದ ಎಣ್ಣೆಬೂಳ್ಯ ಹಿಡಿಯುವುದು, ಬಣ್ಣಗಾರಿಕೆ, ಅಣಿ ಹಾಕಿ ಮುಗ ಏರುವುದು – ಹೀಗೆ ವಿವಿಧ ಹಂತಗಳಲ್ಲಿ ಇವನ್ನು ಪ್ರಾರ್ಥನಾ ರೂಪದಲ್ಲಿ ತೆಂಬರೆಯ ಹಿಮ್ಮೇಳದೊಂದಿಗೆ ಭೂತನರ್ತಕರು ಹಾಡುತ್ತಾರೆ. ಹೀಗೆ ಹಾಡುವುದರಿಂದ ಭೂತಾರಾಧನೆಯ ರಂಗ ಕ್ರಿಯೆಗೆ ಅಗತ್ಯವಾದ ವಾತಾವರಣವು ನಿರ್ಮಾಣವಾಗುತ್ತದೆ ಎಂದು ತಿಳಿಯಲಾಗುತ್ತದೆ. ಈ ಪಾರ್ದನೆಯು ಕೆಲವೊಂದು ಬಾರಿ ದೀರ್ಘವಾಗಿದ್ದು ಸಣ್ಣ ಸಣ್ಣ ಅಧ್ಯಾಯಗಳಿಂದ ಕೂಡಿರುವುದುಂಟು. ತುಳುವಿನಲ್ಲಿ ಇದನ್ನು 'ಸಂದ್' ಎಂದು ಕರೆಯುತ್ತಾರೆ ಎಂಬುದಾಗಿ ಅಮೃತ ಸೋಮೇಶ್ವರರೂ ಈ ಬಗೆಗೆ ಪ್ರಸ್ತಾಪಿಸಿದ್ದಾರೆ (ತುಳು ಪಾಡ್ದನ ಸಂಪುಟ, ಪುಟ 4). ಇಂಥ ವಿಭಿನ್ನ 'ಸಂದ್'ಗಳನ್ನೊಳಗೊಂಡ ಪೂರ್ಣಪಾಠವೇ ಪಾರ್ದನೆ. ಉದಾಹರಣೆಗೆ ಭೂತದ ಒಂದು ಸಮಗ್ರ ಪಾರ್ದನೆಯಲ್ಲಿ ಎಣ್ಣೆ ಬೂಳ್ಯ ಪಡೆಯುವ ಸಂದರ್ಭ ಹಾಡುವುದನ್ನು 'ಓಸಯೊ ಸಂದ್' ಎನ್ನುತ್ತಾರೆ. ಬಣ್ಣಗಾರಿಕೆಯ ಸಂದರ್ಭ ಇಡೀ ಪಠ್ಯದಿಂದ ಇನ್ನೊಂದು ಭಾಗ ಅಥವಾ ಸಂದ್‌ನ್ನು ಹಾಡಲಾಗುತ್ತದೆ. ಸಿರಿ ಕಾವ್ಯಕ್ಕೆ ಸಂಬಂಧಿಸಿ ಹೇಳುವುದಾದರೆ ಇದನ್ನು ಸಂದಿ ಎಂದೇ ಕರೆಯಲಾಗುತ್ತದೆ. ಉದಾಹರಣೆಗೆ ಅಜ್ಜೇರು ಸಂದಿ, ಸಿರಿಯ ಹುಟ್ಟಿನ ಸಂದಿ, ಸಿರಿಯ ಮದುವೆ ಸಂದಿ, ಸಿರಿಯ ಬಯಕೆಯ ಸಂದಿ, ಕುಮಾರನ

ಜನನದ ಸಂದಿ, ಅಜ್ಜನವರ ಸಾವಿನ ಸಂದಿ, ಕೂಟದ ಕಳಕ್ಕೆ ಹೋಗುವ ಸಂದಿ, ಸತ್ಯನಾಪುರದ ಅರಮನೆ ಸುಡು ಸೂಕರಿ ಆಗುವ ಸಂದಿ, ಕಾಂತು ಪೂಂಜನಿಗೆ ಬರ ಹೇಳುವ ಸಂದಿ, ಬೋಳದ ಕಾಡಿಗೆ ಹೋಗುವ ಸಂದಿ... ಹೀಗೆ ಅನೇಕ ಸಂದಿಗಳನ್ನು ಇಡಿಯ ಕಾವ್ಯದಲ್ಲಿ ಕಾಣಬಹುದಾಗಿದೆ. ಇಡಿಯ ಪಠ್ಯದಿಂದ ಸಂದರ್ಭಾನುಸಾರ ಒಂದೊಂದೇ ಸಂಧಿಯನ್ನು ಹೆಕ್ಕಿ ಹಾಡಲಾಗುತ್ತದೆ. ಆಗ ಇದು ಒಂದು ಸಂದ್ ಹೇಳುವುದು ಎಂದಾಗುತ್ತದೆ. ಮದುವೆಯ ಮದರಂಗಿ ಆಚರಣೆಯ ಸಂದರ್ಭ ಸಾಧಾರಣವಾಗಿ ಸಿರಿಯ ಮದುವೆ ಸಂದರ್ಭದ ಸಂಧಿಯನ್ನು ಹಾಡುವಂತೆ ಜನ ಕೇಳಿ ಕೊಳ್ಳುತ್ತಾರೆ. ಆಗ ಒಂದು ಸಂದಿ ಹಾಡುತ್ತೇವೆ ಎಂದು ಕರ್ಗಿ ಶೆಡ್ತಿಯವರು ತಮ್ಮ ಸಂದರ್ಶನದಲ್ಲಿ ತಿಳಿಸಿದ್ದಿದೆ. ತುಳುವಿನಲ್ಲಿ 'ಸಂದ್' ಎಂದರೆ ಜೋಡಿಸು ಎಂದರ್ಥ. ಒಂದಕ್ಕೆ ಒಂದನ್ನು ಜೋಡಿಸುತ್ತಾ 'ಸಂದ್‌ಗ್ ಸಂದ್ ಪಾಡುನಿ' ಒಂದಕ್ಕೆ ಒಂದನ್ನು ಜೋಡಿಸುತ್ತಾ ಹೋಗುವುದು ಎಂಬರ್ಥದಲ್ಲಿ ಇದು ಬಳಕೆಯಾಗಿರಬೇಕು. (ಪಾಡ್ದನ ಪದಪ್ರಯೋಗದ ಬಗೆಗೆ ಈಗಾಗಲೇ ಅನೇಕ ವಿದ್ವಾಂಸರು ಚರ್ಚಿಸಿದ್ದಾರೆ. ಹೆಚ್ಚಿನ ವಿವರಗಳಿಗೆ ನೋಡಿ ಗೋವಿಂದ ಪೈ, 1949, ಡಾ. ಬಿ.ಎ. ಸಾಲೆತ್ತೂರು, 1936, ಡಾ. ಬಿ.ಎ. ವಿವೇಕ ರೈ, 1985, ಪೀಟರ್ ಜೆ. ಕ್ಲಾಸ್, 1991, ಅಮೃತ ಸೋಮೇಶ್ವರ, 1997).

ಕೆಲವು ಪಾಡ್ದನಗಳು ಸುದೀರ್ಘತೆ, ಕಥಾಕುತೂಹಲ, ಕಾವ್ಯಸ್ವರೂಪ, ಶೈಲಿ, ದುರಂತ ಚಿತ್ರಣಗಳಿಂದಾಗಿ ಜನಪದಮಹಾಕಾವ್ಯಗಳಿಗೆ ಹತ್ತಿರವಾಗಿರುವುದು ಕಂಡು ಬರುತ್ತದೆ. ತುಳುವಿನಲ್ಲಿ ಇಂಥ ಎರಡು ಮಹಾಕಾವ್ಯಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಇವುಗಳಲ್ಲಿ 1. ಬಂಟೆರೆ ಸಂಧಿ ಎಂದು ಕರೆಯಲ್ಪಡುವ ಕೋಟಿ ಚೆನ್ನಯ 2. ಸಿರಿ ಕಾವ್ಯ. ಈ ಎರಡೂ ಕಥಾನಕಗಳಿಗೆ ತುಳು ಸಾಹಿತ್ಯವಲಯದಲ್ಲಿ ಸಾಕಷ್ಟು ಪ್ರಾಶಸ್ತ್ಯ ಲಭ್ಯವಾಗಿದೆ. ಮಾತೃಮೂಲೀಯ ಕುಟುಂಬದ ತುಳು ಮಾತೃಭಾಷೆಯ, ಕೃಷಿನಿರತವಾದ, ದೈವತ್ವೀಕರಣ ಹೊಂದಿದ ಬಂಟ ಜಾತಿಯ ಕುಟುಂಬವೊಂದರ ನಾಲ್ಕು ತಲೆಮಾರಿನ ದುರಂತ ಬದುಕಿನ ಸುತ್ತ ಸಿರಿಯ ಕಥೆ ಹೆಣೆದಿದೆ. ಈ ಕಥಾನಕ ತುಳುನಾಡಿನ ಸಾವಿರಾರು ಮಂದಿಯ ನಾಲಗೆಗಳಲ್ಲಿ ನಲಿಯುತ್ತದೆ. ಇಲ್ಲಿ ಸಿರಿಗಳಾಗಿ ಪಾಲ್ಗೊಳ್ಳುವವರು ಬಹಳವಾಗಿ ಮಹಿಳೆಯರೇ ಆಗಿರುತ್ತಾರೆ. ಇವರು ಸಿರಿಜಾತ್ರೆಯಂದು ಸಿರಿಸಂದಿಯನ್ನು ಹಾಡುತ್ತಾ ದೈವಾವೇಶಕ್ಕೊಳಗಾಗುವುದನ್ನು ಕಾಣಬಹುದಾಗಿದೆ.

ಬಂಟ ಸಮಾಜದವರಿಗೆ ಸಿರಿ ಹಾಗು ಆಕೆಯ ಪೀಳಿಗೆಯು ಅತ್ಯಂತ ಮಹತ್ವದ ದೈವಗಳಾಗಿವೆ. ಆಕೆಯನ್ನು ತಮ್ಮ ಸಮಾಜದ ಮೂಲ ಸ್ತ್ರೀಯೆಂದು ನಂಬುತ್ತಾರೆ. ಜೊತೆಗೆ ಆಕೆಯು ದೇವರ ಕೊಡುಗೆಯೆಂದೂ, ಆಕೆಯಿಂದಲೇ ತಮ್ಮ ಮಾತೃವಂಶೀಯ ಸಂತಾನವು ಬೆಳೆದು ಬಂದುದಾಗಿಯೂ ಭಾವಿಸುತ್ತಾರೆ. ಮಾತೃವಂಶೀಯ ಪದ್ಧತಿಯನ್ನು ಆಚರಿಸುವ ಇತರ ಜಾತಿಯವರ ನಡುವೆಯೂ ಈಕೆಯು ದೈವವಾಗಿ ವಿಶಿಷ್ಟ ಗೌರವವನ್ನು ಪಡೆಯುತ್ತಾಳೆ. ಆಕೆ ಪ್ರತಿಷ್ಠಿತ ಬಂಟ ಮನೆತನಕ್ಕೆ ಸೇರಿದವಳಾದುದರಿಂದ

ಇತರ ಜಾತಿಯವರು ಆಕೆಯನ್ನು ತಮ್ಮಲ್ಲಿ ಆವೇಶ ಹೊಂದುವುದರಿಂದ ಅವರಿಗೆ ಹೊಲೆ ತಟ್ಟುವುದಿಲ್ಲ. ಹೀಗಾಗಿ ಯಾವುದೇ ಮಾತೃ ವಂಶೀಯರು ಈಕೆಯ ಸೇವೆ ಮಾಡುವುದಕ್ಕೆ ಆಕ್ಷೇಪವಿಲ್ಲ. ಇತರ ಮಾತೃವಂಶೀಯ ವರ್ಗಗಳು ಬಂಟರ ಈ ಪದ್ಧತಿಯನ್ನು ಆದರ್ಶವಾಗಿ ಭಾವಿಸಿದಂತಿದೆ (ಪೀಟರ್ ಜೆ. ಕ್ಲಾಸ್, ತುಳುವ ದರ್ಶನ, ಕನ್ನಡ ಅನುವಾದ: ಎ.ವಿ. ನಾವಡ, ಸುಭಾಶ್ಚಂದ್ರ, ಪು 96, 1987).

ಸಿರಿ ಬಳಗದ ಕುಮಾರನಿಗೆ ಮಾಂಸಾಹಾರದ ಎಡೆ ಹಾಕುವ ವಿಶಿಷ್ಟ ಆಚರಣೆ 'ಮಂಜ'

ಈವರೆಗೆ ಸಿರಿಯ ಬಗೆಗೆ ನಡೆದ ಅಧ್ಯಯನಗಳಲ್ಲಿ ಎಲ್ಲಿಯೂ ಸಿರಿಬಳಗದ ಶಕ್ತಿಗಳಿಗೆ ಮಾಂಸಾಹಾರದ ಎಡೆಹಾಕಿ ನಡೆಸುವ 'ಮಂಜ' ಆಚರಣೆಯ ಬಗೆಗೆ ದಾಖಲೆಗಳಿಲ್ಲ. ಮೊತ್ತಮೊದಲ ಬಾರಿಗೆ ನಾನು, ಎಸ್.ಎ. ಕೃಷ್ಣಯ್ಯ ಹಾಗು ಲಚ್ಚೇಂದ್ರ ಇವರನ್ನೊಳಗೊಂಡ ಆರ್.ಆರ್.ಸಿ. ತಂಡ ಇಂಥದ್ದೊಂದು ಆಚರಣೆಯನ್ನು ಪತ್ತೆಹಚ್ಚಿ ಮಾರ್ಚ್ ತಿಂಗಳ 12, 2003ರಲ್ಲಿ ದಾಖಲಿಸಿಕೊಂಡೆವು. ಈ ಆಚರಣೆ ಬಹು ಅಪೂರ್ವವೆಂಬಂತೆ ಉಡುಪಿ ತಾಲೂಕಿನ ಪಾಂಗಾಳದ ಶ್ರೀ ಬ್ರಹ್ಮಲಿಂಗೇಶ್ವರ ಆದಿ ಆಲಡೆ ಎಂದು ಕರೆಯಲ್ಪಡುವ ಎರಡೂ ಆಲಡೆಗಳಲ್ಲಿ ನಡೆಯುತ್ತದೆ. ಮಾತ್ರವಲ್ಲ ಬೆಳಪು ಬರ್ಪಾಣಿಯ ಆಲಡೆಯಲ್ಲಿಯೂ ಇಂಥಾದ್ದೊಂದು ಆಚರಣೆ ಇರುವುದು ಕ್ಷೇತ್ರೀಯ ಅಧ್ಯಯನದ ಸಂದರ್ಭ ತಿಳಿದುಬಂತು.

ಪಾಂಗಾಳ ಶ್ರೀ ಬ್ರಹ್ಮಲಿಂಗೇಶ್ವರ ಆದಿ ಆಲಡೆ ಎಂಬುದಾಗಿ ಕರೆಯಲ್ಪಡುವ ಎರಡು ಆಲಡೆಗಳು ಉಡುಪಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಪಕ್ಕ ಉಡುಪಿ ಯಿಂದ ಸುಮಾರು ಎಂಟು ಕಿ.ಮೀ ದೂರದ ಪಾಂಗಾಳದ ಸೇತುವೆಯ ಸಮೀಪ ಎಡಗಡೆಗೆ ಒಂದೂವರೆ ಕಿ.ಮೀನಷ್ಟು ಸಂಚರಿಸಿದಾಗ ಎದುರಾಗುತ್ತವೆ. ಈ ಆಲಡೆಗಳನ್ನು ಕೆಳ ಹಾಗು ಮೇಲಿನ ಆಲಡೆಎಂಬುದಾಗಿಯೂ ಕರೆಯುತ್ತಾರೆ. ಈ ಎರಡೂ ಆಲಡೆಗಳಲ್ಲಿ ಆರಾಧನೆಗೊಳ್ಳುವ ದೇವರು, ದೈವಗಳು ಒಂದೇ ಆಗಿವೆ. ಇಲ್ಲಿನ ಪ್ರಧಾನದೇವರು ಬ್ರಹ್ಮಲಿಂಗೇಶ್ವರ. ಇದರ ಸಮೀಪವೇ ಭೂತರಾಜನ ಗುಡಿ ಇದೆ. ಪಶ್ಚಿಮದ ಕಡೆಗೆ ಮುಖಮಾಡಿ ಸಿರಿಗಳ ಕೊಟ್ಟಗೆಯಲ್ಲಿ ಸಿರಿಗಳು, ಕೋಟಿಕುಮಾರ, ನಂದಿಗೋಣನ ಪ್ರಾಚೀನ ಕಾಷ್ಠಶಿಲ್ಪಗಳಿವೆ. ಅಬ್ಬಗದಾರಗರ ಪ್ರತ್ಯೇಕ ಗುಡಿಯಿದ್ದು ಇದರೊಳಗಡೆ ಉಯ್ಯಾಲೆಯಲ್ಲಿ ಚೆನ್ನೆಮಣೆಯನ್ನು ಸಾಂಕೇತಿಕವಾಗಿ ಇರಿಸಲಾಗಿದೆ. ರಕ್ತೇಶ್ವರಿ ಹಾಗು ಅಡ್ಕತ್ತಾಯಿಯ ಸಾನ್ನಿಧ್ಯವಿದೆ. ಇವಲ್ಲದೆ ಪಿಲಿಚಾಮುಂಡಿ, ಜುಮಾದಿ. ಬಾಗಿಲು ಬೊಬ್ಬರ್ಯ, ಗೆಜ್ಜೆತ್ತಿರಾವಳ, ದುಗ್ಗೇಡಿ ಮೊದಲಾದ ಪರಿವಾರ ದೈವಗಳ ಸಾನ್ನಿಧ್ಯವಿದೆ. ಕುಮಾರನಿಗೆ ಪ್ರತ್ಯೇಕವಾದ ಗುಡಿಯಿದ್ದು ಕೆಳ ಆಲಡೆಯಲ್ಲಿ ಮಂಚದ ಮೇಲೆ ಕಂಚಿನ ಕೋಳಿಗಳನ್ನು ಇರಿಸಲಾಗಿದೆ. ಮೇಲಿನ ಆಲಡೆಯಲ್ಲಿ ಕುಮಾರಮೂರ್ತಿ ಹಾಗು ಕ್ಷೇಮಕಲ್ಲ ಪಂಜುರ್ಲಿಯ ಸ್ಥಾನವಿದೆ. ಪ್ರತ್ಯೇಕವಾದ ಭಂಡಾರ ಚಾವಡಿಯಿದ್ದು ಇಲ್ಲಿ ಖಡ್ಗೇಶ್ವರ, ಖಡ್ಗೇಶ್ವರಿಯನ್ನು ಆರಾಧಿಸುತ್ತಾರೆ. ಉಳಿದಂತೆ ವೀರಭದ್ರ, ಮರ್ಲ್

ಜುಮಾದಿಯ ಸ್ಥಾನವಿದೆ. ಇಲ್ಲಿ ಎರಡೂ ಆಲಡೆಗಳ ಸಿರಿಜಾತ್ರೆ ಮಾಯಿ ಹುಣ್ಣಿಮೆಯಂದು ಏಕಕಾಲದಲ್ಲಿ ನಡೆಯುತ್ತದೆ. ಇದಲ್ಲದೆ ಇವೆರಡು ಆಲಡೆಗಳಿಗೆ ಆದಿಯೋ ಎಂಬಂತೆ ಇನ್ನೊಂದು ಆಲಡೆ ಇದೆ. ಇದನ್ನು 'ಅಡ್ಕ ಆಲಡೆ' ಎಂದು ಕರೆಯುತ್ತಾರೆ. ಇದು ಸಂಪೂರ್ಣ ಜೀರ್ಣಾವಸ್ಥೆಯಲ್ಲಿದ್ದು ಅಜ್ಜನವರು ಲಂಕೆಲೋಕನಾಡು ಆಲಡೆಯನ್ನು ಜೀರ್ಣೋದ್ಧಾರಗೊಳಿಸುವ ಮೊದಲಿನ ಸ್ಥಿತಿಯನ್ನು ನೆನಪಿಸುವಂತಿದೆ. ಸುತ್ತ ಮರಗಳು ಸುತ್ತುವರಿದು ಪೊದೆಗಿಡಗಳಿಂದ ತುಂಬಿಹೋಗಿದೆ. ಇದರೊಳಗಡೆ ಕಷ್ಟಪಟ್ಟು ಒಳಹೋಗಿ ಇಣುಕಿದಾಗ ಇತರ ಆಲಡೆಗಳಲ್ಲಿ ಇರುವಂತೆ ಬ್ರಹ್ಮಲಿಂಗೇಶ್ವರನ ಗುಡಿ, ಭೂತರಾಜನ ಗುಡಿ, ಸಿರಿಗಳ ಕೊಟ್ಟಿಗೆ, ಅಬ್ಬಗದಾರಗರ ಗುಡಿಗಳ ಕುರುಹುಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಮಂಡೇಡಿ ಗ್ರಾಮದ ಒಂದು ಮನೆತನದವರಿಗೆ ಸಂಬಂಧಿಸಿದ ಈ ಆಲಡೆ ಪಾಳುಬಿದ್ದು ಎಷ್ಟೋ ನೂರು ವರ್ಷಗಳಾಗಿವೆ ಎನ್ನುವುದನ್ನು ಸ್ಥಳೀಯರೊಬ್ಬರು ತಿಳಿಸಿದರು.

ಇಲ್ಲಿನ ಸಿರಿ ಜಾತ್ರೆಯನ್ನು ಕುರಿತು ಮಾಯಿಹುಣ್ಣಿಮೆಗೆ ಪಾಂಗಾಳ, ಸುಗ್ಗಿ ಹುಣ್ಣಿಮೆಗೆ ನಂದೊಳ್ಗೆ, ಪಗ್ಗು ಹುಣ್ಣಿಮೆಗೆ ಪೆರಡ್ಕ ಜಾತ್ರೆ ಎಂಬುದು ಸಾಮಾನ್ಯ ಲೆಕ್ಕಾಚಾರ. ಸಿರಿಜಾತ್ರೆಗೆ 15 ದಿವಸ ಮುಂಚಿತವಾಗಿ ಬರುವ ಅಮವಾಸ್ಯೆಯಂದು ಈ ಎರಡೂ ಆಲಡೆಗಳ ಕುಟುಂಬಸ್ತರು ಕುಮಾರನಿಗೆ ಮಾಂಸಾಹಾರದ ಎಡೆಬಡಿಸಿ ಮಂಜ ಸೇವೆಯನ್ನು ನೆರವೇರಿಸಿ ಕುಮಾರನನ್ನು ಪ್ರಾರ್ಥಿಸಿಕೊಂಡು ಸಿರಿಜಾತ್ರೆಯ ತನಕ ಇಡೀ ಗ್ರಾಮದವರು ಮಾಂಸಾಹಾರ ಸೇವನೆಯನ್ನು ನಿಷೇಧಿಸುತ್ತಾರೆ. ಅಲ್ಲದೆ ಅಕ್ಕಿಯಿಂದ ಅರೆದು ಮಾಡಿದ ತಿಂಡಿಗಳನ್ನೂ ನಿಷೇಧಿಸುತ್ತಾರೆ. ಸಿರಿಜಾತ್ರೆ ಮುಕ್ತಾಯಗೊಂಡು ಕೊಡಿ (ಧ್ವಜ) ಇಳಿಸಿದ ಮರುದಿನ ಮತ್ತೆ ಕುಮಾರನಿಗೆ ಇದೇ ರೀತಿಯಲ್ಲಿ ಮಂಜದ ಮೂಲಕ ಮಾಂಸಾಹಾರದ ಎಡೆ ಒಪ್ಪಿಸಿ ತಮ್ಮ ದಿನನಿತ್ಯದ ಆಹಾರಶೈಲಿಗೆ ಮರಳುತ್ತಾರೆ. ಮೊದಲ ಎರಡು ಮಂಜಸೇವೆ ಆಯಾ ಆಲಡೆಗಳ ಕುಟುಂಬದವರಿಂದಲೇ ನಡೆಯುತ್ತದೆ. ಉಳಿದ ಸೇವೆಗಳು ಹರಕೆ ಬಂದಂತೆ ನಡೆಯುತ್ತವೆ. ಯಾವುದೇ ರೀತಿಯ ಹರಕೆಗಳಾದರೂ ಅದನ್ನು ಆಯಾ ಕುಟುಂಬದ ಮುಕ್ಕಾಲ್ದಿಯೇ (ಆಚರಣೆಯನ್ನು ನಡೆಸಿ ಕೊಡುವ ಮುಖ್ಯಸ್ಥ) ನಡೆಸಿಕೊಡಬೇಕು. ಈ ಮಂಂಜದ ದಿನವನ್ನು ನಿರ್ಧರಿಸುವವನೂ ಇವನೇ.

ಸಾಮಾನ್ಯವಾಗಿ ಮಂಜ ಹರಕೆಯನ್ನು ಜನರು ತಮ್ಮ ಬದುಕಿನ ನಾನಾ ಕಷ್ಟಗಳ ಪರಿಹಾರಕ್ಕಾಗಿ ಹೇಳಿಕೊಳ್ಳುತ್ತಾರೆ. ಹುಡುಗಿಯರ ವಿವಾಹ ಸಂಬಂಧಗಳಿಂದ ಹಿಡಿದು, ಸಂತಾನಭಾಗ್ಯ, ವ್ಯಾಪಾರದಲ್ಲಿನ ಕಷ್ಟನಷ್ಟಗಳು, ಭೂ ವ್ಯವಹಾರಗಳು–ಹೀಗೆ ನಾನಾ ಕಾರಣಗಳಿಗಾಗಿ ಹೇಳಿಕೊಳ್ಳುತ್ತಾರೆ. ಇವರ ಇಷ್ಟಾರ್ಥ ನೆರವೇರಿದ ಅನಂತರ ಈ ಹರಕೆಯನ್ನು ಸಲ್ಲಿಸುತ್ತಾರೆ.

ಮಂಜಸೇವೆಯಲ್ಲಿ ಎರಡು ವಿಧ. 1. ಮಂಜ ಅಥವಾ ತಂಬಿಲ ಸೇವೆ 2. ಜುವಾದಿ ಒಪ್ಪಿಸುವುದು. ಜುವಾದಿ ಒಪ್ಪಿಸುವುದೆಂದರೆ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ

ಕುಮಾರನ ಹೆಸರಲ್ಲಿ ಕೋಳಿಯೊಂದನ್ನು ಬಿಡುವುದು. ಅದು ನೆರವೇರಿದ ಅನಂತರ ಈ ಕೋಳಿಯನ್ನು ತಂದು ಆಲಡೆಯ ಮುಕ್ಕಾಲ್ದಿಗೆ ಒಪ್ಪಿಸುವುದು. ಬೇರೆ ಮಂಜ ಹರಕೆಗಳು ನಡೆಯುವಾಗ ಈ ಕೋಳಿಯನ್ನು ಅದರ ಜೊತೆ ಸೇರಿಸಿಕೊಳ್ಳಲಾಗುತ್ತದೆ. ಈ ರೀತಿಯಲ್ಲಿ ಜುವಾದಿ ಹರಕೆಯ ಮೂಲಕ ವರ್ಷಕ್ಕೆ 100ಕ್ಕಿಂತಲೂ ಅಧಿಕ ಕೋಳಿಗಳು ಬರುತ್ತವೆಯಂತೆ. ಹರಕೆಯ ಮಂಜ ತಿಂಗಳಿಗೆ ಎರಡರಿಂದ ಮೂರು ನಡೆಯುವುದು ವಾಡಿಕೆ. ಸಾಮಾನ್ಯವಾಗಿ ಮಂಜ ಹರಕೆಯ ದಿನವನ್ನು ಹರಕೆ ಹೇಳಿ ಕೊಂಡವರ ಅನುಕೂಲಕ್ಕೆ ತಕ್ಕಂತೆ ಮುಕ್ಕಾಲ್ದಿ ನಿರ್ಧರಿಸುತ್ತಾನೆ. ಮಂಜದ ವಿಧಿವಿಧಾನಗಳು ಈ ರೀತಿ ಇವೆ.

ಸಾಯಂಕಾಲವಾಗುತ್ತಿದ್ದಂತೆ ಮುಕ್ಕಾಲ್ದಿ ಮಡಿಯಲ್ಲಿ ಬಂದು ಕುಮಾರ ಗುಡಿಯ (ತುಳುವಿನಲ್ಲಿ ಇದನ್ನು ಕುಮಾರಕೊಟ್ಯ ಎಂದು ಕರೆಯುತ್ತಾರೆ) ಬಾಗಿಲು ತೆರೆದು ದೀಪ ಉರಿಸುತ್ತಾನೆ. ಗುಡಿಯ ಒಂದು ಮೂಲೆಯಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿದ ಒಲೆಯ ಮೇಲೆ ಅನ್ನಕ್ಕೆ ನೀರು ಇಡುತ್ತಾನೆ. ನೀರು ಕುದಿಯುತ್ತಾ ಬರುವಾಗ 7 ಸೇರು ಕುಚ್ಚಲಕ್ಕಿಯನ್ನು ತೊಳೆದು ಹಾಕುತ್ತಾನೆ. ಮಂಜದ ಕ್ರಮದಂತೆ ಜನ ಸೇರಲಿ ಬಿಡಲಿ 7 ಸೇರು ಕುಚ್ಚಲಕ್ಕಿಯ ಅನ್ನ, 7 ತೆಂಗಿನಕಾಯಿಯ ಮಸಾಲೆ ಮಂಜದ ಅಡುಗೆಗೆ ಆಗಲೇಬೇಕು.

ಅನಂತರ ಮುಕ್ಕಾಲ್ದಿಯು ಕುಮಾರ ಗುಡಿಯ ಹೊರಗೆ ಒಂದು ಬಾಳೆಯ ತುದಿ ಎಲೆಯಲ್ಲಿ ಚರುವಿನ ಜೊತೆ ಕೋಲುಬತ್ತಿಗಳನ್ನು ಇಟ್ಟು ಜೊತೆಗೆ ಸಣ್ಣಪಾತ್ರೆಯಲ್ಲಿ ಕುರಿ (ಅರಶಿನ ಮಿಶ್ರಿತ) ನೀರನ್ನು ಇಟ್ಟು ಕೋಲುಬತ್ತಿ ಹಾಗೂ ಚರುವಿನ ಮೇಲೆ ಕೋಳಿಗಳ ತಲೆಗಳನ್ನು ಕತ್ತರಿಸಿ ಚರುವಿನ ಮೇಲೆ ರಕ್ತಬೀಳುವಂತೆ ಮಾಡುತ್ತಾನೆ. ಮಂಜಕ್ಕೆ ಒಂದು ಹುಂಜ, ಒಂದು ಹೇಂಟೆ ಆಗಲೇಬೇಕು. ಇದಾದ ಅನಂತರ ಹರಕೆ ಯಾಗಿ ಬಂದ ಜುವಾದಿ (ಕೋಳಿ)ಗಳನ್ನು ಸೇರಿರುವ ಜನರಿಗನುಗುಣವಾಗಿ ಬಲಿ ಕೊಡುತ್ತಾರೆ. ಬಲಿಗೊಂಡ ಕೋಳಿಗಳನ್ನು ಅಲ್ಲೆ ಹೊರಗೆ ಸ್ವಚ್ಛಗೊಳಿಸಿ ಮಾಂಸವಾಗಿ ಕತ್ತರಿಸುತ್ತಾರೆ. ಆ ಹೊತ್ತಿಗೆ ಮುಕ್ಕಾಲ್ದಿಯ ಮನೆಯ ಹೆಂಗಸರು ಶುದ್ಧದಿಂದ ಪದಾರ್ಥಕ್ಕೆ ಬೇಕಾಗುವ ಮಸಾಲೆಯನ್ನು ಅರೆದು ಕೊಡುತ್ತಾರೆ. ಮುಕ್ಕಾಲ್ದಿಯು ಕೋಳಿ ಪದಾರ್ಥವನ್ನು ತಯಾರಿಸಿದ ಅನಂತರ ಹಸಿಮೀನಿನ ಪದಾರ್ಥವನ್ನು ತಯಾರಿಸುತ್ತಾನೆ. ಮಂಜಕ್ಕೆ ಹಸಿಮೀನಿನ ಪದಾರ್ಥ ಆಗಲೇಬೇಕು.

ಮಂಜದ ಅಡುಗೆಯ ತಯಾರಿ ನಡೆಯುತ್ತಿದ್ದಂತೆ ಹರಕೆ ಹೇಳಿಕೊಂಡವರು, ಅವರ ಮನೆಯವರು, ಊರವರು – ಹೀಗೆ ಜನ ಸೇರುತ್ತಾರೆ. ಮಂಜಕ್ಕೆ ಪ್ರತ್ಯೇಕ ಹೇಳಿಕೆ ಕೊಡುವ ಕ್ರಮ ಇಲ್ಲ. ಅಂದು ಯಾರು ಎದುರಿಗೆ ಸಿಗುತ್ತಾರೋ ಅವರಲ್ಲಿ ಇಂದು ಸಂಜೆ ಮಂಜ ಇದೆ, ಬನ್ನಿ ಎಂದು ಆಹ್ವಾನಿಸುವ ಕ್ರಮ ಇದೆಯಷ್ಟೆ. ಎಲ್ಲ ಸಿದ್ಧತೆಗಳ ಅನಂತರ ಮುಕ್ಕಾಲ್ದಿಯು ಕುಮಾರ ಮಂಚ ಹಾಗೂ ಕ್ಷೇಮಕಲ್ಲ ಪಂಜುರ್ಲಿಯ ಮಂಚದ ಮೇಲೆ ಒಂದೊಂದು ತುದಿ ಬಾಳೆಎಲೆಯನ್ನು ಹಾಕಿ ಅದರ ಮೇಲೆ

ಅವಲಕ್ಕಿಯ ಕಜ್ಜಾಯವನ್ನು ಬಡಿಸುತ್ತಾನೆ. ಕುಮಾರ ಮಂಚದ ಕೆಳಗೆ ಸಾಲಲ್ಲಿ ಐದು ಎಲೆಗಳಿಗೆ ಅನ್ನ, ಕೋಳಿ ಹಾಗು ಹುಡಿ ಮೀನಿನ ಪದಾರ್ಥವನ್ನು ಬಡಿಸಿ ಇದಕ್ಕೆ ಅಡ್ಡವಾಗಿ ಇನ್ನೊಂದು ಎಲೆಯನ್ನು ಹಾಕಿ ಅದಕ್ಕೂ ಅನ್ನ, ಕೋಳಿ ಮೀನಿನ ಪದಾರ್ಥ ವನ್ನು ಬಡಿಸುತ್ತಾನೆ. ಎಲ್ಲರ ಕೈಗೆ ಹಿಂಗಾರದ ಹೂವಿತ್ತು ಮುಕ್ಕಾಲ್ದಿ ಹರಕೆ ಹೇಳಿಕೊಂಡವರನ್ನು ಮುಂದಿರಿಸಿಕೊಂಡು (ದಾಖಲಾತಿ ನಡೆಸುವ ದಿನ ಅಣ್ಣು ಮುಕ್ಕಾಲ್ದಿ ಕುಟುಂಬದವರ ಸೇವೆ) ಕುಮಾರನನ್ನು ಕುರಿತು 'ಇಂಥ ಸಂದರ್ಭದಲ್ಲಿ ಈ ಹರಕೆಯನ್ನು ಹೇಳಿಕೊಂಡು ಅದು ನೆರವೇರಿದ್ದಕ್ಕೆ ಇಂದು ಈ ಸೇವೆಯನ್ನು ನಿನಗೆ ಭಕ್ತಿಯಿಂದ ಒಪ್ಪಿಸುತ್ತಿದ್ದಾರೆ. ಕೊಟ್ಟ ಸೇವೆಯಲ್ಲಿ ಅಟ್ಟಡುಗೆಯಲ್ಲಿ ಏನಾದರೂ ದೋಷಗಳಿದ್ದರೆ ನಿನ್ನ ಕಾಲಬುಡಕ್ಕೆ ಹಾಕಿಕೊಂಡು ಈ ಸೇವೆಯನ್ನು ಸಂತೋಷದಿಂದ ಸ್ವೀಕರಿಸಿ ನಿನ್ನ ಕಲೆಕಾರಣಿಕವನ್ನು ಈ ಜಾಗದಲ್ಲಿ ಪ್ರಕಟಿಸಿ ನಂಬಿದ ಭಕ್ತರ, ಕುಟುಂಬಿಕರ ಬೆನ್ನ ಸಹಾಯಕ್ಕೆ ನಿಂತು ಅವರು ಹೋದಲ್ಲಿ ಬಂದಲ್ಲಿ ಅವರ ಇಷ್ಟಾರ್ಥ ನೆರವೇರಿಸಿ ಕೊಡಬೇಕೆಂದು ನಮ್ಮ ಪ್ರಾರ್ಥನೆ, ಸ್ವಾಮಿಕುಮಾರ' ಎಂದು ಹೇಳಿ ಹೂವನ್ನು ಮಂಚದ ಮೇಲೆ ಹಾಕಿ ಎಲ್ಲರೂ ಅಡ್ಡಬೀಳುತ್ತಾರೆ. ಈ ಎಲ್ಲ ಕ್ರಿಯೆಗಳ ಅನಂತರ ಅಡ್ಡ ಹಾಕಿರುವ ಒಂದುಎಡೆಯನ್ನು (ಇದು ದಾರುವಿಗೆ ಹಾಕಿದ ಎಡೆ ಎಂಬುದನ್ನು ಇಲ್ಲಿನ ಮುಕ್ಕಾಲ್ದಿ ತಿಳಿಸಿದರು) ಮುಕ್ಕಾಲ್ದಿ ತೆಗೆದುಕೊಂಡು ಹೋಗಿ ಹೊರಗೆ ಹಲಸಿನ ಮರದಡಿ ಒಂದು ಕಲ್ಲಿನ ಮೇಲೆ ಇಟ್ಟು ನೀರು ಚಿಮುಕಿಸಿ ಬರುತ್ತಾರೆ. ಹಿಂತಿರುಗಿ ಬಂದು ಕುಮಾರ ಗುಡಿಯ ಬಾಗಿಲು ಎಳೆದುಕೊಂಡು ಸ್ವಲ್ಪ ಹೊತ್ತು ಎಲ್ಲರೂ ತಿರುಗಿ ನಿಲ್ಲುತ್ತಾರೆ. ಅನಂತರ ಬಾಗಿಲು ತೆರೆದು ಎಡೆಗಳಿಗೆ ನೀರು ಚಿಮುಕಿಸಿ ಎಡೆಗಳನ್ನು ತೆಗೆಯುತ್ತಾರೆ. ಆ ನಂತರ ಎಲ್ಲರಿಗೂ ಪ್ರಸಾದ ರೂಪದ ಸಾಮೂಹಿಕ ಭೋಜನ ನಡೆಯುತ್ತದೆ. ನಾಟಿಕೋಳಿಯ ಪದಾರ್ಥವಾದುದರಿಂದ ನಮಗೂ ಈ ಭೋಜನ ಬಿಟ್ಟು ಬರುವ ಮನಸ್ಸಾಗಲಿಲ್ಲ.

ತುಳುನಾಡಿನಲ್ಲಿ ಆರಾಧನೆಗೊಳ್ಳುವ ಮುಗ್ಗೆರ್ಲು ದೈವಗಳಿಗೂ ಈ ರೀತಿಯ ಮಂಜ ಆಚರಣೆ ನಡೆಯುವ ಬಗೆಗೆ ಡಾ. ಅಭಯಕುಮಾರ್ ಕೌಕ್ರಾಡಿಯವರು ತಮ್ಮ ಸಂಶೋಧನ ಪ್ರಬಂಧ 'ಮುಗೇರರು–ಜನಾಂಗ ಜಾನಪದ ಅಧ್ಯಯನ'ದಲ್ಲಿ ದಾಖಲಿಸಿ ದ್ದಾರೆ. ಈ ಬಗೆಗೆ ವಿವರಿಸುತ್ತಾ 'ಮುಗೇರರು ಸಾಂಸ್ಕೃತಿಕ ವೀರರ ಆರಾಧನೆಯಲ್ಲಿ 'ಮುಗ್ಗೆರ್ತಿ ಕೋಲ' ಮತ್ತು 'ಮಂಜ' ಎಂಬ ಎರಡು ವಿಧಗಳಿವೆ. ಮುಗ್ಗೆರ್ತಿ ಕೋಲ ವಾರ್ಷಿಕ ಆಚರಣೆಯಾದರೆ ಮಂಜ ವರ್ಷದಲ್ಲಿ ಹಲವು ಬಾರಿ ಆಚರಣೆಗೊಳ್ಳುವಂಥದ್ದು. ಮದುವೆಯಂತಹ ಮಂಗಳಕಾರ್ಯಗಳು, ಗೃಹಪ್ರವೇಶ, ದನಗಳ ಮೇಲಿನ ಉಣ್ಣಿಯ ನಿವಾರಣೆ – ಹೀಗೆ ಬೇರೆ ಬೇರೆ ಕಾರಣಗಳಿಗಾಗಿ ಮಂಜವನ್ನು ನೆರವೇರಿಸುತ್ತಾರೆ. ಮುಗ್ಗೆರ್ಲು ದೈವಗಳ ಆಯುಧಗಳನ್ನು ಕೊಟ್ಟಿಗೆಯಿಂದ ಹೊರಗಿರಿಸಿ ಪನಿಯಾರ ಬಡಿಸಿಟ್ಟು ಹತ್ತು ಜನ ಸ್ವಜಾತಿ ಬಾಂಧವರು ಸೇರಿ ಮುಗ್ಗೆರ್ತಿ ಪಾರಿಯನ್ನು ಹೇಳಿ ತಮ್ಮನ್ನು ರಕ್ಷಿಸಬೇಕೆಂದು ಕೈಮುಗಿದು ಬೇಡಿಕೊಳ್ಳುವ ಆಚರಣೆಯನ್ನು ಮಂಜ ಎನ್ನುತ್ತಾರೆ

(1997, ಪುಟ 142). 'ಮಂಜ' ಎಂಬ ಶಬ್ದರೂಪಕ್ಕೆ ತುಳು ನಿಘಂಟುವಿನಲ್ಲಿ 'ಸಂಜೆ' (Evening), ಕತ್ತಲು (darkness) ಎಂಬರ್ಥಗಳನ್ನು ನೀಡಿದ್ದಾರೆ. ತುಳು ಪಾಡ್ದನಗಳಲ್ಲಿ 'ಸಂಜೆ ಪೋದು ಮಂಜ ಆನಗ' ಎಂಬ ಸಾಲುಗಳು ಬರುತ್ತವೆ. ಇದು ಸಂಜೆ ಹೋಗಿ ಕತ್ತಲು (ಮುಸ್ಸಂಜೆ) ಆವರಿಸುತ್ತಾ ಬರುವ ಹೊತ್ತು ಎನ್ನುವುದನ್ನು ಸೂಚಿಸುತ್ತದೆ. ಹೀಗಾಗಿ ಸಂಜೆ ಕಳೆದು ಕತ್ತಲು ಆವರಿಸು ಈ ಮಂದ (ಮಂಜು) ಬೆಳಕಿನ ಹೊತ್ತಲ್ಲಿ ಆಚರಿಸುವ ಈ ವಿಧಿಯನ್ನು ಮಂಜ ಎಂಬ ಹೆಸರಿನಿಂದ ಕರೆದಿರಬೇಕು. ಸಿರಿ ಬಳಗದ ಕುಮಾರನಿಗೆ ಈ ರೀತಿಯ ಆಚರಣೆ ಇರುವುದು ವಿಶೇಷವಾಗಿದೆ.

ಸಿರಿ ಕಾವ್ಯಗಳ ಅವಲೋಕನ

ಪ್ರಕೃತ ಅಧ್ಯಯನದಲ್ಲಿ ಈವರೆಗೆ ಪ್ರಕಟವಾಗಿರುವ ಸಿರಿಕಾವ್ಯಗಳಾದ ಪೊಳಲಿ ಶೀನಪ್ಪ ಹೆಗ್ಗಡೆ ಸಮಗ್ರ ಸಾಹಿತ್ಯದಲ್ಲಿನ 'ಅಕ್ಕೆರಸು ಪೂಂಜೆದಿ', ಪ್ರೊ. ಲೌರಿ ಹೋಂಕೋ, ಡಾ. ಚಿನ್ನಪ್ಪ ಗೌಡ, ಅನ್ನೇಲಿ ಹಾಂಕೋ ಹಾಗು ಪ್ರೊ. ವಿವೇಕ ರೈಯವರು ಸಂಪಾದಿಸಿರುವ ಉಜಿರೆಯ ಮಾಚಾರು ಗೋಪಾಲ ನಾಯ್ಕರು ಹಾಡಿರುವ 'The Siri Epic as Performed by Gopala Naika' ಕಾವ್ಯ, ಪ್ರೊ. ಎ.ವಿ. ನಾವಡರು ಸಂಪಾದಿಸಿರುವ 'ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರು ಕಟ್ಟಿದ ಸಿರಿಪಾಡ್ದನ', ಡಾ. ಅಶೋಕ ಆಳ್ವರು ಸಂಪಾದಿಸಿರುವ ಶ್ರೀಮತಿ ಕರ್ಗಿ ಶೆಡ್ತಿಯವರು ಹಾಡಿರುವ 'ಸಿರಿಕಾವ್ಯಲೋಕ', ಪ್ರೊ. ಅಮೃತ ಸೋಮೇಶ್ವರರ ತುಳು ಪಾಡ್ದನ ಸಂಪುಟದಲ್ಲಿನ 'ಸತ್ಯನಾಪುರತ್ತ ಸಿರಿ' – ಹೀಗೆ ಐದು ಪ್ರಕಟಿತ ಪಠ್ಯಗಳ ಜೊತೆಗೆ ದರೆಗುಡ್ಡೆಯ ಶ್ಯಾಮರಾಯ ಶೆಟ್ಟಿಯವರ ಸಿರಿಕಾವ್ಯ, ಉಜಿರೆ ಕುಂಬಾರಕೊಪ್ಪದ ರಾಮಕ್ಕ ಅವರು ಹಾಡಿರುವ ಸಿರಿಕಾವ್ಯ ಹಾಗೂ ಕಾರ್ಕಳ ಮಾಳದ ಲೀಲಾ ಶೆಡ್ತಿಯವರು ಹಾಡಿರುವ ಸಿರಿಕಾವ್ಯ– ಹೀಗೆ ಮೂರು ಅಪ್ರಕಟಿತ ಕಾವ್ಯಗಳು ಸೇರಿ ಒಟ್ಟು ಎಂಟು ಸಿರಿಕಾವ್ಯಗಳ ಜೊತೆ ತೌಲನಿಕವಾಗಿ ಅಧ್ಯಯನ ನಡೆಸುವ ಪ್ರಯತ್ನವೇ 'ಸಿರಿ ಕಾವ್ಯಾಲೋಕನ' ಕೃತಿ. ಇದರ ಜೊತೆಗೆ ನಾನು ಕಳೆದ 25 ವರ್ಷಗಳಿಂದ ನಡೆಸುತ್ತಾ ಬಂದ ಸಿರಿಜಾತ್ರೆಯನ್ನು ಕುರಿತಾದ ಕ್ಷೇತ್ರೀಯ ಅಧ್ಯಯನ ಹಾಗು ವಿವಿಧ ಸಂದರ್ಭಗಳಲ್ಲಿ ನಡೆಸಿರುವ ಸಂದರ್ಶನದ ಮಾಹಿತಿಗಳನ್ನೂ ಇಟ್ಟುಕೊಂಡು ಸಿರಿಯನ್ನು ಇನ್ನಷ್ಟು ವಿಸ್ತೃತವಾಗಿ ನೋಡುವ ಪ್ರಯತ್ನವನ್ನು ಈ ಕೃತಿಯಲ್ಲಿ ಮಾಡಿದ್ದೇನೆ.

ಸತ್ಯನಾಪುರದ ಅಜ್ಜನವರ ಪೂರ್ವ ವೃತ್ತಾಂತ

ಎಲ್ಲ ಸಿರಿಕಾವ್ಯಗಳೂ ಸಾಮಾನ್ಯವಾಗಿ ಸತ್ಯನಾಪುರದ ಅರಮನೆಯ ಆರ್ಯ ಬನ್ನಾಯ ಬಿರ್ಮಾಳುವ ಅಜ್ಜನವರ ಆಡಳಿತದೊಂದಿಗೆ ಆರಂಭವಾಗುತ್ತವೆ. ಸತ್ಯನಾಪುರದ ಅರಮನೆಯ ವೈಭವ ಹೇಗಿತ್ತೆಂಬುದನ್ನು ಕರ್ಗಿಯವರ ಪಠ್ಯ ಈ ರೀತಿಯಲ್ಲಿ ತಿಳಿಸುತ್ತದೆ.

ತುಳುಪಠ್ಯ

ಇನಿಯಾಂಡಲ ಸತ್ಯನಪುರದರಮ್ಮನೆಡ್ ಉಂತುದು ಸಾವಿರ ವೊರ್ಸೊ ಪಟ್ಟ ಆಲಿಯೆ
ಪಟ್ಟಸೂಡ ಮಂಚಾವುಡು ಕುಲ್ಲುದು ಮುನ್ನೂದು ವೊರ್ಸೊ ಪಟ್ಟ ಆಲಿಯೆ
ಇನಿಮುಟ್ಟ ಎಂಕ್ ಎರ್ಮೆಡ್ ಏರಲಾತ್ ಪೆತ್ತಡ್ ಪೇರಲಾತ್ ಕಲಸೆಡ್ ಲಪ್ಪಲಾತ್
ಬಿಜಂಟ್ (ಮೊಜಟ್ಟೆ) ಗೋರಲಾತ್ ಇತ್ತ್‌ಂಡ್‌ಗೆನ
ಸತ್ಯನಾಪುರದರಮ್ಮನೆಡ್ ಬಂಜಿ ತೂಯಿನಾಯಗ್ ಅನ್ನದಾನ ಮಲ್ತೆ,
ಒಕ್ಕ ತೂಯಿನಾಯಗ್ ವಸ್ತ್ರದಾನ ಮಲ್ತೆ, ಅಂಗೈ ತೂಯಿನಾಯಗ್ ಪಣವು ದಾನ ಮಲ್ತೆ
ನೆತ್ತಿ ತೂಯಿನಾಯಗ್ ಎಣ್ಣೆದಾನ ಮಲ್ತೆ ಒಂಜಿ ಪಾಪೊ ಪುಣ್ಯೊನೆ ಕಡೆಸ್‌ಜೆಂಕ್

ಕನ್ನಡಾನುವಾದ

ಇಂದಾದರೋ ಸತ್ಯನಾಪುರದರಮನೆಯಲ್ಲಿ ನಿಂತು ಸಾವಿರ ವರ್ಷ ಪಟ್ಟ ಆಳಿದೆ
ಪಟ್ಟಸೂಡ ಮಂಚದಲ್ಲಿ ಕುಳಿತು ಮುನ್ನೂರುವರ್ಷ ಪಟ್ಟ ಆಳಿದೆ
ಇಂದಿನವರೆಗೆ ನನ್ನಲ್ಲಿ ಎಮ್ಮೆಯಲ್ಲಿ ಹೇರುವಷ್ಟು ದನದಲ್ಲಿ ಹೊರಿಸುವಷ್ಟು ಕಳಸಿಗೆಯಲ್ಲಿ ಅಳೆಯುವಷ್ಟು
ಮೊಜ (ಮೊರ)ದಲ್ಲಿ ಬಾಚುವಷ್ಟು ಸಂಪತ್ತು ತುಂಬಿತ್ತು
ಸತ್ಯನಾಪುರದರಮನೆಯಲ್ಲಿ ಹಸಿದವನಿಗೆ ಅನ್ನದಾನ ಮಾಡಿದೆ
ಸೊಂಟನೋಡಿ ವಸ್ತ್ರದಾನ ಮಾಡಿದೆ ಅಂಗೈನೋಡಿದನಿಗೆ ದುಡ್ಡು ದಾನ ನೀಡಿದೆ
ನೆತ್ತಿನೋಡಿ ಎಣ್ಣೆ ದಾನ ಮಾಡಿದೆ. ನನಗೆ ಯಾವ ಪಾಪ ಪುಣ್ಯವೂ ಒದಗಿಬರಲಿಲ್ಲ

ಎಂಬುದಾಗಿ ದುಃಖಿಸುವ ಚಿತ್ರಣ ಇದೆ. ಲೀಲಾ ಶೆಡ್ತಿ ಅವರ ಪಠ್ಯವೂ ಇದೇ ವಿಚಾರವನ್ನು ತಿಳಿಸುತ್ತದೆ. ತಮ್ಮ ಅರಮನೆಯಲ್ಲಿ ಎಲ್ಲ ರೀತಿಯ ದಾನಧರ್ಮಗಳನ್ನು ಮಾಡುತ್ತಿದ್ದರೂ ಸಂತಾನವಿಲ್ಲದ ದುಃಖ ಸಹಜವಾಗಿ ಅವರನ್ನು ಆವರಿಸಿಕೊಂಡಿರುತ್ತದೆ. ಇದರಿಂದ ಅವರು ಬಲು ದುಃಖಿತರಾಗಿ ಮನೆಯ ಚಾಕರಿಯ ಹೆಣ್ಣು ದಾರುವನ್ನು ಕರೆದು ಧರ್ಮದ ಆನೆಬಾಗಿಲನ್ನು ಮುಚ್ಚಿ, ಕರ್ಮದ ಕಿರುಬಾಗಿಲನ್ನು ತೆರೆಯುವಂತೆ ಸೂಚಿಸಿ ತಾವು ಹೋಗಿ ಏಳು ಅಂತರದ ಕತ್ತಲೆ ಕೋಣೆಯಲ್ಲಿ ಮಣ್ಣಹಾಸಿಗೆಯಲ್ಲಿ ಕವಚಿ ಮಲಗಿ ಚಿಂತೆಯಿಂದ ದುಃಖಿಸುವ ಚಿತ್ರಣವಿದೆ. ಗೋಪಾಲ ನಾಯ್ಕರ ಪಠ್ಯ ಅಜ್ಜನವರಿಗೆ ಬಂದೊದಗಿದ ಕಷ್ಟ ಬರಿಯ ಸಂತಾನವಿಲ್ಲದ ಕಷ್ಟ ಮಾತ್ರವಲ್ಲ ಜೊತೆಗೆ

ತಮ್ಮ ಅರಮನೆಯ ಸಕಲಸೌಭಾಗ್ಯವೂ ಇಲ್ಲದಂತಾದುದರ ಚಿಂತೆಯನ್ನು ಕುರಿತು ತಿಳಿಸುತ್ತದೆ.

ತುಳುಪಠ್ಯ

ಸತ್ಯನಾಪುರದ ಎರಮನೆ ಪನ್ಪುನ ಬವುವೊಂಜಿ ಮಲ್ಲ ಓ ಎರಮ್ಮನೆ
ಬವುವೊಂಜಿ ಮಲ್ಲ ಓ ಮಡಸ್ತನದ ಎರಮ್ಮನೆ
ಸಾವಿರಕಟ್ಟ ಓ ಬೆದ್ರ್ ಪಾಡ್‌ಬಿ ಎರಮ್ಮನೆ ಕೇಂಡಾರೋ ಈರ್ ಬೆರಮ್ಮನಾ
ಸಾವಿರಕಟ್ಟ ಮಡಲ್, ಸಾವಿರಕಟ್ಟ ಮುಲಿ ಪಾಡ್‌ಬಿ ಎರಮಾನೆ ಕೇಂಡಾರೊ ಈರ್
ಸಾವಿರೊ ತುಂಡು ಬೆದ್ರ್ ಪಾಡ್‌ಬಿ ಎರಮ್ಮಾನೆಗ್ ದಿಕ್ಕ್ ದಿವಾನೊ ಇದ್ಯಾಂದಿ ಕಾಲೊ ಬತ್ತ್ಂಡ್
ಸಾವಿರಕಟ್ಟ ಮಡಲ್ ಪಾಡ್‌ಬಿ ಎರಮ್ಮಾನೆಗ್ ಸಾವಿರ ಚೀತ್ ಮಡಲ್ ಪಾಡ್‌ಬಿ ದಿಕ್ಕ್ ದಿವಾನೊ ದಾಂತೆ ಪೋಂಡು ಬೆರಮ್ಮನಾ
ಸಾವಿರಕಟ್ಟ ಮುಲಿ ಪಾಡ್‌ಬಿ ಸತ್ಯನಾಪುರದ ಎರಮ್ಮಾನೆಗ್ ಸಾವಿರಕಂಜಿ ಮುಲಿ ಪಾಡ್‌ಬಿ ದಿಕ್ಕ್ ದಿವಾನೊ ದಾಂತೆ ಪೋಂಡು ಬೆರಮ್ಮಾನಾ
ಸತ್ಯನಾಪುರೊದರಮ್ಮನೆಡ್ ಇಂಚಿತ್ತಿ ಕಷ್ಟೊ ಬತ್ತ್ ದ್ ಪೋಂಡತ್ತೋ....

ಕನ್ನಡಾನುವಾದ

ಸತ್ಯನಾಪುರದರಮನೆ ಎನ್ನುವಂಥದ್ದು ಬಹಳ ದೊಡ್ಡ ಅರಮನೆ ಅದು
ಬಹಳ ದೊಡ್ಡ ಮಡಸ್ತನದ (ಗೌರವ, ಮರ್ಯಾದೆ) ಅರಮನೆ ಅದು
ಸಾವಿರಕಟ್ಟು ಬಿದಿರು ಹಾಕುವ ಬೃಹತ್ ಅರಮನೆ ಅದು ಕೇಳಿದಿರೋ ಬ್ರಾಹ್ಮಣ
ಸಾವಿರಕಟ್ಟು ಮಡಲು ಸಾವಿರ ಕಟ್ಟು ಮುಳಿಹುಲ್ಲು ಹಾಸುವ ದೊಡ್ಡ ಅರಮನೆ ಅದು ಕೇಳಿದಿರೇ ನೀವು
ಇಂಥ ಅರಮನೆಗೆ ದಿಕ್ಕುದೆಸೆ ಇಲ್ಲದ ಕಾಲ ಒದಗಿ ಬಂತು
ಸಾವಿರಕಟ್ಟ ಮಡಲು ಹಾಸುವ ಅರಮನೆಗೆ ಸಾವಿರ ಸೀಳು ಮಡಲು ಹಾಸುವ ಗತಿಯಿಲ್ಲದಾಯಿತು
ಸಾವಿರ ಕಟ್ಟ ಮುಳಿ ಹಾಸುವ ಅರಮನೆಗೆ ಸಾವಿರಸೂಡಿ ಮುಳಿ ಹಾಸುವ ದಿಕ್ಕಿಲ್ಲದಾಯಿತು ಬ್ರಾಹ್ಮಣಾ
ಸತ್ಯನಾಪುರದರಮನೆಯಲ್ಲಿ ಇಂಥ ಕಷ್ಟ ಬಂದು ಹೋಯಿತಲ್ಲಾ.... (ಪುಟ 87–88).

ರಾಮಕ್ಕ ಮುಗ್ಗೇರ್ತಿಯವರ ಪಾಡ್ದನದಲ್ಲಿಯೂ ಬಹುತೇಕವಾಗಿ ಅಜ್ಜನವರ ಅರಮನೆಯ ಸ್ಥಿತಿ ಇದೇ ರೀತಿ ಇದ್ದು ಕಾಲಾಂತರದಲ್ಲಿ ಬಡತನ ಬಂದಿರುವುದನ್ನು ತಿಳಿಸುತ್ತದೆ. ಒಂದು ಕಾಲದ ಶ್ರೀಮಂತಿಕೆ ಹೇಗಿತ್ತೆಂದರೆ 'ಸತ್ಯನಾಪುರದರಮ್ಮನೆಡ್‌ಗೆನ

ಬಂಗಾರಿನ್ನ ಮೊಟ್ಟುಕಲ್ಲ್ ಜತ್ತೊನು ಬರುವರ್‌ಗೆನಾ' (ಬಂಗಾರದ ಮೆಟ್ಟಿಲು ಇಳಿದು ಬರುತ್ತಾರೆ) ಎಂಬ ಮಾತನ್ನು ನೋಡಿದಾಗ ಅಜ್ಜನವರ ಅರಮನೆಯ ಅಂತಸ್ತು ಹೇಗಿತ್ತು ಎಂಬುದು ತಿಳಿಯುತ್ತದೆ. ಶ್ಯಾಮರಾಯ ಶೆಟ್ಟಿಯವರ ಕಾವ್ಯದಲ್ಲಿ 'ಉಣ್ಪಿನ ಗಂಜಿಡ್ ದಪ್ಪಿನ ಎರುಟ್ಟು ತತ್ವಾರಾದ್ ಬತ್ತ್‌ಂಡ್' (ಉಣ್ಣುವ ಅನ್ನದಲ್ಲಿ ಉಳುವ ಎತ್ತಿನಲ್ಲಿ ಕೊರತೆ ಕಂಡುಬಂತು) ಎಂಬುದಾಗಿ ಬರುತ್ತದೆ. ಹೀಗಾಗಿ ಕರ್ಗಿ, ಲೀಲಾ ಅವರ ಕಾವ್ಯಗಳು ಅಜ್ಜನವರ ಸತ್ಯನಾಪುರದ ಅರಮನೆಯಲ್ಲಿ ಎಲ್ಲ ವೈಭೋಗಗಳೂ ಇದ್ದು ಎಲ್ಲ ರೀತಿಯ ದಾನಧರ್ಮಗಳನ್ನೂ ಮಾಡಿದರೂ ತನಗೆ ಸಂತಾನವಿಲ್ಲ ಎಂಬ ಕೊರಗನ್ನು ವ್ಯಕ್ತಪಡಿಸಿದರೆ ಗೋಪಾಲ ನಾಯ್ಕ, ರಾಮಕ್ಕ ಮುಗ್ಗೇರ್ತಿ ಹಾಗೂ ಶ್ಯಾಮರಾಯ ಶೆಟ್ಟಿಯವರ ಕಾವ್ಯಗಳು ಅಜ್ಜನವರಿಗೆ ಒಂದು ಕಾಲದಲ್ಲಿ ಬಹುದೊಡ್ಡ ಶ್ರೀಮಂತಿಕೆ ಇದ್ದು ಬಳಿಕ ಎಲ್ಲವೂ ಹೋಗಿ ಬಲುಬಡತನ ಬಂದು ಉಣ್ಣಲು ಅನ್ನ, ಉಳಲು ಎತ್ತು ಇಲ್ಲದೆ ಜೊತೆಗೆ ಸಂತಾನವೂ ಇಲ್ಲದಂತಾಗಿ ಕೊರಗುವ ಸಂದರ್ಭ ಒದಗಿ ಬಂದುದನ್ನು ಕುರಿತು ತಿಳಿಸುತ್ತವೆ.

ಈ ಎಲ್ಲ ಕಾವ್ಯಗಳಿಗಿಂತ ಸ್ವಲ್ಪ ಭಿನ್ನ ವಿಚಾರ ಪೊಳಲಿ ಶೀನಪ್ಪ ಹೆಗ್ಗಡೆಯವರ 'ಅಕ್ಕೆರಸು ಪೂಂಜೆದಿ' ಕತೆಯಲ್ಲಿ ಲಭಿಸುತ್ತದೆ. ಸತ್ಯನಾಪುರದರಸು ಆರ್ಯ ಬನ್ನಾಯ ಬಿರ್ಮು ಆಳ್ವ ಅಜ್ಜನವರ ಪೂರ್ವ ವೃತ್ತಾಂತವನ್ನು ಇಲ್ಲಿ ಸ್ವಲ್ಪ ಮಟ್ಟಿಗೆ ಕೊಡಲಾಗಿದೆ.

ತುಳುನಾಡಿನ ಬಡಗಣ ಸೀಮೆಯ ಬಸರೂರಿನ ಅರಸಿಯ ಮಗಳು ಹೆಣ್ಣು ಹೋಗಿ ಹೆಂಗಸಾದಳು. ಅವಳಿಗೆ ಕಲಶಾಭಿಷೇಕವಾಯಿತು. ಅವಳ ಬಂಧುಗಳು ಈಕೆಗೆ ಮದುವೆ ಮಾಡಬೇಕೆಂದು ಅನುರೂಪನಾದ ಗಂಡಿನ ಹುಡುಕಾಟಕ್ಕಾಗಿ ನಾಲ್ಕು ದಿಕ್ಕುಗಳಿಗೂ ಹೊರಟರು. ತೆಂಕುದಿಕ್ಕಿಗೆ ಬಂದವರು ಹುಡುಕುತ್ತಾ ಹುಡುಕುತ್ತಾ ಮುಜಲೊಟ್ಟು ಎಂಬಲ್ಲಿಗೆ ಬಂದರು. ಅಲ್ಲಿ ಒಂದು ಕಡೆ ಯುವಕರೆಲ್ಲ ಸೇರಿ 'ತಾರಾಯಿದ ತಪ್ಪಂಗಾಯಿ' ಎಂಬ ವಿನೋದದ ಜನಪದ ಆಟವನ್ನು ಆಡುತ್ತಿದ್ದರು. ಆ ಗುಂಪಿನಲ್ಲೊಬ್ಬ ಸುಂದರ ದೃಢಕಾಯನಾದ ಯುವಕನೊಬ್ಬನಿದ್ದ. ಆತ ಪಂಥಕ್ಕಾಗಿ ಇರಿಸಿದ್ದ ಹದಿನೈದು ಕಾಯಿಗಳಲ್ಲಿ ಹತ್ತನ್ನು ಒಬ್ಬನೇ ಗೆದ್ದ. ಈತನನ್ನು ನೋಡಿ ತಮ್ಮ ರಾಣಿಯ ಮಗಳಿಗೆ ಈತನೇ ಅನುರೂಪನಾದ ವರನೆಂದು ನಿಶ್ಚೈಸಿದರು. ಅವನ ಬಳಿಗೆ ಬಂದು ನಾವು ಬಡಗಣ ಬಸರೂರು ಸೀಮೆಯವರು ಎಂದು ತಿಳಿಸಿ ಆತನನ್ನು ನೀನು ಯಾವ ಸೀಮೆಯವನು, ನಿನ್ನ ಕುಲ ಗೋತ್ರಗಳೇನೆಂದು ವಿಚಾರಿಸಿದರು. ಅದಕ್ಕೆ ಆತ ನಾನು ಮುಜಲೊಟ್ಟು ಬೀಡಿನ ಮುಜಲೊಟ್ಟು ಆಲಡೆಯವನು. ಆರ್ಯಬನ್ನಾಯ ಬಳಿ (ಗೋತ್ರ), ಒಕ್ಕೆತ್ತಿ (ಬಂಟ) ಜಾತಿಯವನು ಎಂದು ತಿಳಿಸಿ ನೀವು ಬಹಳ ದೂರದಿಂದ ಬಂದಿದ್ದೀರಿ. ಹೊತ್ತು ಮುಳುಗುವ ಹೊತ್ತಾಯಿತು. ನಮ್ಮ ಬೀಡು ಇಲ್ಲೆ ಸಮೀಪವಿದೆ. ಬನ್ನಿ ಎಂದು ಕರೆದುಕೊಂಡು ಹೋಗುತ್ತಾನೆ.

ಈತನ ಗುಣನಡತೆಯನ್ನು ಕಂಡ ಬಸರೂರಿನವರು ನಮ್ಮ ಅರಸು ಕುವರಿಗೆ ಈತನೇ ಯೋಗ್ಯನಾದ ವರನೆಂಬುದನ್ನು ನಿಶ್ಚೈಸಿ ತಾವು ಬಂದ ಉದ್ದೇಶವನ್ನು

ಯುವಕನ ತಾಯಿ, ಮಾವ ಹಾಗೂ ಅಣ್ಣನಲ್ಲಿ ತಿಳಿಸಿ ಈ ಸಂಬಂಧವನ್ನು ಒಪ್ಪುವಂತೆ ಕೇಳಿಕೊಳ್ಳುತ್ತಾರೆ. ಮುಜಲೊಟ್ಟು ಬೀಡಿನವರು ತಮ್ಮೊಳಗೆ ಮಾತನಾಡಿಕೊಂಡು ಮದುವೆಗೆ ಮಾತು ಕೊಡುತ್ತಾರೆ. ನೂರು ವರಹ ಕೊಡಬೇಕೆಂದು ಹೇಳಿದರು. ಅದಕ್ಕೆ ಹುಡುಗನೂ, ಬಂದವರೂ ಒಪ್ಪಿದರು. ಮರುದಿನ ಅವನ ಅಣ್ಣನೂ ಬಂದವರ ಒಟ್ಟಿಗೆ ಬಸರೂರಿಗೆ ತೆರಳಿದನು. ಬಸರೂರಿನಲ್ಲಿ ವಿಷಯವನ್ನು ರಾಣಿಗೆ ವಿವರವಾಗಿ ನಿವೇದಿಸಿದರು. ಯುವಕನನ್ನು ರಾಣಿಯೂ, ಮಗಳೂ ಮೆಚ್ಚಿದರು. ಅವರಿಗೆ ನೂರು ವರಹಗಳಿನ್ನಿತ್ತರು. ಅದನ್ನು ಅಣ್ಣನು ಸ್ವೀಕರಿಸಿದ ಮೇಲೆ ಸಂಭ್ರಮದಿಂದ ಮದುವೆಯು ನೆರವೇರಿತು. ರಾಣಿಯು ತನ್ನ ಆಡಳಿತದ ಸಮಸ್ತ ಅಧಿಕಾರವನ್ನು ಅಳಿಯನಿಗೆ ಒಪ್ಪಿಸಿದಳು.

ಆ ಯುವಕನೇ ಬಿರ್ಮಾಳ್ವ. ಈತನ ಪತ್ನಿಯೇ ಸಾಂತಕ್ಕ. ಇವರು ಸತಿಪತಿಗಳಾದ ಮೇಲೆ ಸುಖ ಸಂತೋಷದಿಂದ ಬಾಳಿದ್ದಲ್ಲದೆ ವಸುಪುರ (ಬಸರೂರು)ದ ಆಡಳಿತವನ್ನು ವ್ಯವಸ್ಥಿತವಾಗಿ ನಡೆಸಿ ಎಲ್ಲರ ಗೌರವಕ್ಕೆ ಪಾತ್ರರಾದರು. ಬಿರ್ಮಾಳ್ವನು ತನಗೂ ಪತ್ನಿಗೂ ಇರಲಿಕ್ಕಾಗಿ ಪ್ರತ್ಯೇಕವಾದ ಒಂದು ಅರಮನೆಯನ್ನು ಕಟ್ಟಿಸಿದನು. ಇದಕ್ಕೆ ಸತ್ಯಂದರಮನೆ (ಸತ್ಯನಾಪುರದ ಅರಮನೆ) ಎಂದು ಹೆಸರಿಟ್ಟನು. ಮದುವೆಯಾಗಿ ಹಲವಾರು ವರ್ಷಗಳು ಕಳೆದ ಮೇಲೆ ಸಾಂತಕ್ಕ ಹೆಣ್ಣುಮಗುವೊಂದನ್ನು ಹೆತ್ತಳು. ಆದರೆ ಮಗುವು ಬಹಳ ದಿನ ಬಾಳಲಿಲ್ಲ. ಮುಂದೆ ಹೆಂಡತಿಯೂ ತೀರಿಕೊಂಡಳು. ಇದರಿಂದ ಬಿರ್ಮಾಳ್ವನ ದುಃಖಕ್ಕೆ ಪಾರವೇ ಇಲ್ಲ. ಸಾಂತಕ್ಕೆಯ ಮೇಲೆ ಅವನಿಗಿದ್ದ ಪ್ರೀತಿಯನ್ನು ಎಂದೂ ಮರೆಯದ ಅವನು ಎರಡನೆಯ ವಿವಾಹವಾಗಲು ಒಪ್ಪಲಿಲ್ಲ (ಪುಟ 293–294). ಹೀಗೆ ಬಿರ್ಮಾಳ್ವನು ಸತ್ಯನಾಪುರದ ಅರಮನೆಯಲ್ಲಿ ಕಣ್ಣೀರಿನ ಕಷ್ಟವನ್ನೇ ಅನುಭವಿಸುತ್ತಿದ್ದನು.

ಗೋಪಾಲ ನಾಯ್ಕರ ಪಠ್ಯದಲ್ಲಿ ಮಾತ್ರ ಈ ವಿಚಾರ ಸ್ವಲ್ಪ ಮಟ್ಟಿಗಿದ್ದು ಬಿರ್ಮು ಪಾಲವರ ಹೆಂಡತಿ ಸೋಮಕ್ಕು ಎಂಬುದಾಗಿ ತಿಳಿಸಿ, ಇವರು ಸತ್ತು ಇಪ್ಪತ್ತೈದು ವರ್ಷವಾಯಿತು ಎಂಬ ಪ್ರಸ್ತಾವವಿದೆಯೇ ಹೊರತು ಬೇರೆ ಯಾವ ಪಠ್ಯಗಳೂ ಈ ವಿಚಾರವನ್ನು ತಿಳಿಸುವುದಿಲ್ಲ.

ಲಂಕೆ ಲೋಕನಾಡಿನ ಜೀರ್ಣೋದ್ಧಾರ, ಸಿರಿಯ ಹುಟ್ಟು

ಉಳಿದ ಎಲ್ಲ ಸಿರಿಪಠ್ಯಗಳೂ ಸತ್ಯನಾಪುರದ ಅರಮನೆ (ರಾಮಕ್ಕ ಅವರ ಪಠ್ಯದಲ್ಲಿ ಸತ್ಯನಾಪುರದರಮನೆಯನ್ನು ಸಂಚನಂಗಡಿ ಜಲ್ಮಬೂಮಿ ಎಂದೂ, ಲೀಲಾ ಅವರ ಪಠ್ಯದಲ್ಲಿ ಸತ್ಯನಾಪುರ ಜಲ್ಮಭೂಮಿ ಎಂಬುದಾಗಿ ಬಂದಿದೆ)ಯಲ್ಲಿ ಅಜ್ಜನವರು ದೇವರು ಸಂತಾನದ ಕುಡಿಯೊಂದನ್ನು ಕರುಣಿಸಲಿಲ್ಲವಲ್ಲಾ ಎಂದು ದುಃಖಿಸಿ ಕತ್ತಲೆಯ ಕೋಣೆಯಲ್ಲಿ ಹೋಗಿ ಮಲಗುವಲ್ಲಿಂದ ಆರಂಭಗೊಂಡು ಇವರ ಕಣ್ಣೀರು ಮೇಲಿನ ಲೋಕದಲ್ಲಿರುವ ದೇವರು ಬೆರ್ಮೆರ್ ಪಾದದ ಮೇಲೆ ಹೋಗಿಬೀಳುತ್ತದೆ. ಇದು ಸತ್ಯನಾಪುರದ ಅಜ್ಜನವರ ಕಣ್ಣೀರು, ಯಾತಕ್ಕಾಗಿ ದುಃಖಿಸುತ್ತಾರೆ ಎಂದು ಬೆರ್ಮೆರ್

ಯೋಚಿಸಿ ತನ್ನ ನಿಜರೂಪ ಬಿಟ್ಟು ಬಡ ಬ್ರಾಹ್ಮಣನ ರೂಪ ತಾಳಿ ಸತ್ಯನಾಪುರದರಮನೆಗೆ ಭಿಕ್ಷೆ ಬೇಡುತ್ತಾ ಬರುತ್ತಾರೆ. ಇವರಿಗೆ ಕೆಲಸದ ಹೆಣ್ಣು ದಾರು ಭಿಕ್ಷೆ ನೀಡುತ್ತಾಳೆ. ಭಿಕ್ಷೆಯನ್ನು ಸ್ವೀಕರಿಸದೆ ಬ್ರಾಹ್ಮಣ ಮಾಣಿಯು ಸ್ವತಃ ಅಜ್ಜನವರೇ ಭಿಕ್ಷೆ ನೀಡಬೇಕೆಂದು ತಿಳಿಸುತ್ತಾನೆ. ಲೀಲಾ ಅವರ ಪಠ್ಯದಲ್ಲಿ ಬ್ರಾಹ್ಮಣ ಮಾಣಿಯು 'ಆರ್ಯಬನ್ನಾರ್ ಓಡೆ ಪೋತೆರ್, ಆರೆಡ ಮೂಜಿ ಪಾತೆರೊ ಎಂಕ್ ಪಾತೆರ್ಯೆರೆ ಉಂಡು, ಎನಡ ಮೂಜಿ ಪಾತೆರೊ ಆರೆಗ್ ಪಾತೆರ್ಯೆರೆ ಉಂಡು (ಆರ್ಯಬನ್ನಾರ್ ಎಲ್ಲಿಗೆ ಹೋಗಿದ್ದಾರೆ, ಅವರಲ್ಲಿ ಮೂರು ಮಾತು ನನಗೆ ಮಾತನಾಡಲು ಇದೆ, ನನ್ನಲ್ಲಿ ಮೂರು ಮಾತು ಅವರಿಗೆ ಮಾತನಾಡಲು ಇದೆ') ಎನ್ನುತ್ತಾನೆ. ಈ ವಿಚಾರವನ್ನು ದಾರು ಹೋಗಿ ಅಜ್ಜನವರಿಗೆ ತಿಳಿಸಲು ಅವರೇ ಕತ್ತಲೆ ಕೋಣೆಯಿಂದೆದ್ದು ಬ್ರಾಹ್ಮಣ ಮಾಣಿಗೆ ಬಂದು ಭಿಕ್ಷೆ ನೀಡಲು ಅಜ್ಜನವರ ದುಃಖವನ್ನು ಕುರಿತು ಕೇಳುತ್ತಾನೆ. ಆಗ ಅಜ್ಜನವರು ತಮಗೆ ಎಲ್ಲವೂ ಇದ್ದು ಮಕ್ಕಳಿಲ್ಲದ ಕೊರಗಿನ ಬಗೆಗೆ ತಿಳಿಸಲು ಬ್ರಾಹ್ಮಣ ಮಾಣಿಯು ನಿನ್ನ ಆದಿ ಆಲಡೆ ಬಡಗಣ ಲಂಕೆಲೋಕನಾಡು. ಅದು ಜೀರ್ಣಾವಸ್ಥೆಯಲ್ಲಿದೆ. ಅದನ್ನು ಮೊದಲು ಜೀರ್ಣೋದ್ಧಾರ ಮಾಡು. ಆಗ ನಿನಗೆ ಸಂತಾನದ ಫಲ ದೊರೆಯುತ್ತದೆ ಎಂದು ಹೇಳಿ ಮಾಯವಾಗುತ್ತಾನೆ. ಈ ಕೆಲಸವನ್ನು ಅಜ್ಜನವರು ಹೇಗೆ ಮಾಡಿಸಿದರು ಎಂಬ ವಿಚಾರ ಕರ್ಗಿ ಶೆಡ್ತಿಯವರ ಕಾವ್ಯದಲ್ಲಿ ಈ ರೀತಿ ಇದೆ.

ತುಳುಪಠ್ಯ

'ಮಾನ್ಯೆರ್ ಮಕ್ಕಳೆರೆನ್ ಲೆಪ್ಪಾವೊನುದುಗೆನ ಇನಿ
ಬೇಲೆದ ಆಲುಲೆನ್ ಪತ್ತೊಂಡೆರ್‌ಗೆನ ಇನಿ
ಬಡೆಕಾಯಿ ಲಂಕೆಲೋಕನಾಡ್‌ಗ್ ಪೋಯೆರ್ಗೆನ ಇನಿ
ಬೂರುಡು ಗಿರಿಗಿರಿಯಂತರ ಆಯಿನೆನ್ ತೂಯೆರ್ಗೆನ ಇನಿ ಆರ್ಯಬನ್ನಾರ್ ಬಿರ್ಮುಮಾಲವೆರ್
ಬಲ್ಲೆಬೂರು ಪರಿಪ್ಪಯೆರ್ಗೆನ ತುಂಬೆನೆಕ್ಕಿ ಪೊರಿಪ್ಪಯೆರ್ಗೆನ ಇನಿ
ದೇವೆರೆಗ್ ದೇವಸ್ಥಾನೊ ಬೂತೊಲೆಗ್ ಬದಿಮಾಡ ಆವೊಡುಂದು ಪಂಡೆರ್ಗೆನ

ಕನ್ನಡಾನುವಾದ

ಆಳುಮಕ್ಕಳನ್ನು ಕರೆಸಿಕೊಂಡರಂತೆ ಇಂದು
ಕೂಲಿಯಾಳುಗಳನ್ನು ಕರೆದುಕೊಂಡು ಇಂದು
ಬಡಗಣ ಲಂಕೆಲೋಕನಾಡಿಗೆ ಹೋದರಂತೆ ಇಂದು
ಬಿಳಲುಗಳಿಂದ ಹೊದ್ದುಕೊಂಡಿರುವುದನ್ನು ನೋಡಿದರಂತೆ ಆರ್ಯಬನ್ನಾಯ ಬಿರ್ಮುಮಾಲವರು
ಪೊದರು ಬಿಳಲುಗಳನ್ನು ತೆಗೆಸಿದರಂತೆ ತುಂಬೆಲಕ್ಕಿ ಗಿಡಗಳನ್ನು ಕೀಳಿಸಿದರಂತೆ ಇಂದು

ದೇವರಿಗೆ ದೇವಸ್ಥಾನ ಭೂತಗಳಿಗೆ ಬದಿಮಾಡ (ಗುಡಿ) ಆಗಬೇಕೆಂದರಂತೆ
(ಕರ್ಗಿಶೆಡ್ತಿ - ಪುಟ 20)

ಶೀನಪ್ಪ ಹೆಗ್ಗಡೆಯವರ ಸಮಗ್ರ ಸಾಹಿತ್ಯ ಈ ಕೃತಿಯಲ್ಲಿ ಈ ವಿವರಗಳು ಹೀಗಿವೆ. "ಅಜ್ಜನವರು ಒಕ್ಕಲು ಆಳುಗಳು ಹಾಗೂ ಮಂದೆ ಮಾರ್ಬಲ ಸೇರಿಸಿಕೊಂಡು ಲಂಕೆಲೋಕನಾಡಿಗೆ ಹೋಗಿ ಅಲ್ಲಿನ ಜನರ ಸಹಾಯದಿಂದ ಆಲಡೆಯಿದ್ದ ಜಾಗವನ್ನು ಪತ್ತೆ ಮಾಡಿದ ವಿಚಾರವಿದೆ. ಕೆಲಸದವರನ್ನು ಬಿಟ್ಟು ಬೆಳೆದಿದ್ದ ತೆಂಡೆ, ಸೀಗೆ ಬಲ್ಲೆಗಳನ್ನು ಕಡಿಸಿ ಸಮತಟ್ಟು ಮಾಡಿಸುತ್ತಾರೆ. ಆಗ ಮೊದಲು ದೇವರು ಬೆರ್ಮೆರ್ ಗುಡಿ ಸಿಗುತ್ತದೆ. ಎರಡನೆಯ ಬಾರಿ ಸಮತಟ್ಟುಗೊಳಿಸುವಾಗ ದೇವರ ಲಿಂಗ ಕಾಣಸಿಗುತ್ತದೆ. ಸುತ್ತಮುತ್ತಲ ಮಣ್ಣು ಅಗೆದು ಸಮತಟ್ಟುಗೊಳಿಸುವಾಗ ಸಾರಮಾನ್ಯ ದೈವಗಳ ಕೈಕಡ್ತಲೆ, ಕೂಚಿಮಣಿ, ಮುಗಮೂರ್ತಿ ಮೊದಲಾದುವುಗಳು ದೊರೆಯುತ್ತವೆ. ಅಲ್ಲದೆ ಒರಿ ಉಲ್ಲಾಯ, ಕುಮಾರ ಸ್ವಾಮಿ ಗುಂಡದ ಜಾಗ, ಲೆಕ್ಕೆಸಿರಿಯ ಸ್ಥಾನ, ನಂದಿ, ಆಲಡೆ, ಮೈಸಂದಾಯ ಸ್ಥಾನದ ಅಡಿಗಟ್ಟುಗಳೂ ಅವುಗಳ ಬೆಳ್ಳಿ ಬಂಗಾರ ಹಾಗೂ ಕಂಚಿನ ಸಾಮಾನುಗಳೂ ದೊರೆತ ವಿವರಗಳಿವೆ.

ಅಲ್ಲಿ ದೊರೆತ ಸಾಮಾಗ್ರಿಗಳನ್ನೆಲ್ಲ ಪ್ರತ್ಯೇಕವಾಗಿ ತೆಗೆದಿರಿಸಿ ಹುಣ್ಸೆಯಡಿ ತಾಳ ತಂಬೂರಿ ನಾಗೋಜಿ ಬಾಹ್ಮಣರನ್ನು ಕರೆಸಿ ಭೂಶುದ್ಧಿ, ಕಲ್ಲುಮುಹೂರ್ತ, ಮರ ಮುಹೂರ್ತಗಳನ್ನು ಮಾಡಿಸಿ ಬಿರ್ಮಾಳ್ವರು ತಾನೂ ಅಲ್ಲಿಯೇ ನಿಂತು ಕೆಲಸದ ಪ್ರಗತಿಗಳನ್ನು ನೋಡುತ್ತಿದ್ದರು. ನಾಗನಿಗೆ ನಾಗಕಲ್ಲು, ದೇವರಿಗೆ ದೇವಸ್ಥಾನ, ಬ್ರಹ್ಮರಿಗೆ ಬ್ರಹ್ಮಸ್ಥಾನ, ಕುಮಾರಸ್ವಾಮಿಗೆ ಮುಖಮಂಟಪ, ರಕ್ತೇಶ್ವರಿಗೆ ಮೇಲ್‌ಗುಂಡ, ಸಾರಮಾನ್ಯ ದೈವಗಳಿಗೆ ದೈವಸ್ಥಾನ, ನಂದಿಗೋಣ ಮೈಸಂದಾಯನಿಗೆ ಆಲಡೆ, ಐಯ್ಯೆರ್ ದೈವಗಳಿಗೆ ಮಾಡಗಳನ್ನು ನಿರ್ಮಿಸಿದರು. ಎಲ್ಲ ಕೆಲಸಗಳೂ ಪೂರ್ಣಗೊಂಡ ಮೇಲೆ ನಾಗೋಜಿ ಬ್ರಾಹ್ಮಣನನ್ನು ಕರೆಸಿ ದೈವ ದೇವರುಗಳಿಗೆ ಕಲಶಾಭಿಷೇಕ ಮಾಡಿಸಿದರು. ಕೆಲಸದವರಿಗೆ ಉಡುಗೊರೆ ಬಹುಮಾನಗಳನ್ನು ನೀಡಿದರು. ನಿತ್ಯ ನೈವೇದ್ಯ ಬಲಿ ಪೂಜಾದಿಗಳಿಗೆ ಹುಣ್ಸೆಯಡಿ ತಂಬೂರಿ ಬ್ರಾಹ್ಮಣನನ್ನು ನೇಮಿಸಿದರು. ಕೆಲಸಗಳೆಲ್ಲ ಮುಗಿದು ಮನಸ್ಸಿಗೆ ಶಾಂತಿಯಾಯಿತು. ಬಿರ್ಮಾಳುವನು ಅರಮನೆಗೆ ಹೋಗಿ ಹೂ ಹಿಂಗಾರ ಹಣ್ಣು ಕಾಯಿಗಳನ್ನು ಹಿಡಿದುಕೊಂಡು ದೈವ ದೇವರುಗಳಿಗೆ ಅರಳು, ಬೆಲ್ಲ, ತೆಂಗಿನಕಾಯಿ, ಸೀಯಾಳಗಳನ್ನು ಹೊರೆಯಾಳುಗಳೊಡನೆ ಹೊರಿಸಿ ದೇವಸ್ಥಾನಕ್ಕೆ ಕಳುಹಿಸಿಕೊಟ್ಟನು.

ಸುಗ್ಗಿ ಹುಣ್ಣಿಮೆಯ ಹಿಂದಿನ ದಿನ ಎದ್ದು ಲೋಕನಾಥ ದೇವಸ್ಥಾನಕ್ಕೆ ಹೋದನು. ಬ್ರಾಹ್ಮಣರಲ್ಲಿ ಶ್ರೇಷ್ಠನಾದ ನಾಗೋಜಿ ಬ್ರಾಹ್ಮಣನಲ್ಲಿ ದೇವಸ್ಥಾನದ ಸರ್ವಸೇವೆಗಳನ್ನು ಮಾಡಬೇಕೆಂದನು. ಬ್ರಾಹ್ಮಣನಿಗೆ ಉಂಬಳಿ ಉತ್ತಾರಗಳನ್ನು ಬಿಟ್ಟನು. ಬ್ರಾಹ್ಮಣನಿಂದ ನಾಗನಿಗೆ ತನುತಂಬಿಲ, ದೇವಸ್ಥಾನದಲ್ಲಿ ಪೂಜೆ, ದೈವಗಳಿಗೆ ಧೂಪಗಳಿಂದ ಅರ್ಚಿಸಲು ವ್ಯವಸ್ಥೆ, ನಂದಿಗೋಣ ಮೈಸಂದಾಯನಿಗೆ ಹುರುಳಿ ಒಪ್ಪಿಸಲು ಎಲ್ಲ ವ್ಯವಸ್ಥೆ ಮಾಡಿದನು.

ಬಿರ್ಮಾಳುವನು ಮುತ್ತಿನ ತಾವರೆ ಕೆರೆಗೆ ಹೋಗಿ ಎರಡು ಮೆಟ್ಟಿಲು ಇಳಿದು ಮೂರು ಬಾರಿ ಮುಳುಗೆದ್ದು ಮೇಲೆ ಬಂದನು. ಮೈಲೆ ಬಿಚ್ಚಿ ಮಡಿ ಉಟ್ಟನು. ಭಸ್ಮಗಂಧ ಹಚ್ಚಿಕೊಂಡನು. ದೇವಸ್ಥಾನಕ್ಕೆ ಮೂರು ಬಾರಿ ಪ್ರದಕ್ಷಿಣೆ ಬಂದನು. ದೈವ ದೇವರುಗಳಿಗೆ ಕೈ ಮುಗಿದು ತನ್ನ ಆಪತ್ತುಗಳನ್ನು ನಿವೇದಿಸಿಕೊಂಡನು.

ಆಗ ದೇವರು ಬೆರ್ಮರು ಮೇಲೆ ಮೇಲ್ಲೋಕದಲ್ಲಿರುವ ಕೈಲಾಸಕ್ಕೆ ಹೋಗಿ ವಿಶ್ವನಾಥ ದೇವರಿಗೆ ವಂದಿಸಿಕೊಂಡರು "ಸ್ವಾಮೀ, ತಮ್ಮ ಆಜ್ಞಾನುಸಾರ ನಾನು ನಾಗಲೋಕವನ್ನು ರಕ್ಷಿಸಿಕೊಂಡು ಬರುತ್ತಿದ್ದೇನೆ. ಆದರೆ ನನ್ನ ಭಕ್ತನಾದ, ಸತ್ಯವನ್ನೇ ನಂಬಿ ಬಾಳುತ್ತಿರುವ ಬಿರ್ಮಾಳುವನಿಗೆ ಸಂತತಿಯಿಲ್ಲದೆ ಹೋಯಿತು. ಅವನು ಸತ್ಯವನ್ನೇ ಅವಲಂಬಿಸಿದವನು. ಈಗ ತನ್ನ ಕಷ್ಟವನ್ನೆಲ್ಲ ಸತ್ಯದ ಮುಂದೆ ಕಣ್ಣೀರು ಹಾಕಿ ನಿವೇದಿಸುತ್ತಿದ್ದಾನೆ. ಅವನ ಕಷ್ಟವನ್ನು ನೋಡಲು ನನ್ನಿಂದ ಸಾಧ್ಯವಾಗುತ್ತಿಲ್ಲ. ಆದುದರಿಂದ ನಿಮ್ಮ ಬಳಿಯಿರುವ ಏಳು ಮಂದಿ ಕನ್ನಿಕೆಯರಲ್ಲಿ ಒಬ್ಬಳನ್ನು ನನ್ನ ವಶವಿತ್ತು ಅವನಿಗೆ ಸಂತತಿಯಾಗಿ ಅನುಗ್ರಹಿಸುವಂತೆ ಕರುಣಿಸಬೇಕು" ಎಂದು ಪ್ರಾರ್ಥಿಸಿದರು. ವಿಶ್ವನಾಥ ದೇವರು ಸಂಪ್ರೀತಿಗೊಂಡು ಪಾರ್ವತಿ ದೇವಿಯ ಮುಖ ನೋಡಿದರು. ಅವರ ಸಮ್ಮತಿಯಿಂದ ಒಬ್ಬಳು ಕನ್ನಿಕೆಯನ್ನೂ ಅವಳ ರಕ್ಷಣೆಗೆ ಬೇಕಾದ ಪರಿವಾರವನ್ನೂ ಬ್ರಹ್ಮರ ವಶ ನೀಡಿದರು.

ಹೀಗೆ ದೇವರ ಬಲಭಾಗದಲ್ಲಿ, ಬೆರ್ಮರ ಎಡಭಾಗದಲ್ಲಿ, ರಕ್ತೇಶ್ವರಿಯ ಎದುರಿನಲ್ಲಿ, ಆನೆಕಲ್ಲಿನ ಬಳಿಯಲ್ಲಿ, ದಂಬೆ ಕಲ್ಲಿನ ಬುಡದಲ್ಲಿ, ಕೊಡಿಮರದ ನೆರಳಲ್ಲಿ, ಹೋಮಕುಂಡದ ಹತ್ತಿರ ಸೆರಗೊಡ್ಡಿ ನಿಂತಿದ್ದಾನೆ ಬಿರ್ಮಾಳುವ. ಆಗ ದೇವರು ಬೆರ್ಮರು ಪ್ರತ್ಯಕ್ಷವಾಗಿ ಬಂದು ಬಿರ್ಮಾಳುವನನ್ನು ಕುರಿತು ನೀನು ಸತ್ಯಕ್ಕೆ ಸರಿಯಾಗಿ ನಡೆದು, ಸತ್ಯವನ್ನೇ ನಂಬಿದ ನಿನಗೆ ಸಂತತಿಯನ್ನು ಅನುಗ್ರಹಿಸುತ್ತೇನೆ ಇಗೋ ಎಂದು ಹೇಳಿ ಹಿಂಗಾರದ ಹಾಳೆಯನ್ನು ಅವನ ಸೆರಗಿಗೆ ಹಾಕಿದರು" (ಪುಟ– 298– 299). ಈ ರೀತಿಯಾಗಿ ಸಿರಿ ಹುಟ್ಟನ್ನು ಇಲ್ಲಿ ತಿಳಿಸಲಾಗಿದೆ.

ಶ್ಯಾಮರಾಯ ಶೆಟ್ಟಿಯವರ ಅಪ್ರಕಟಿತ ಪಠ್ಯದಲ್ಲಿ ಸತ್ಯನಾಪುರದ ಅಜ್ಜನವರಾದ ಬೆರ್ಮಾಳ್ವರ ಹೆಸರನ್ನು ಕರಿಯ ಮಾಲವ ಮಗ ಬೆರ್ಮುಮಾಲವ ಎಂದು ಕರೆಯಲಾಗಿದೆ. ಈ ಪಠ್ಯದಲ್ಲಿಯೂ ಸಿರಿಯ ಹುಟ್ಟನ್ನು ಕುರಿತ ವಿವರಗಳು ಸ್ವಲ್ಪ ಭಿನ್ನ ರೀತಿಯಲ್ಲಿ ಲಭ್ಯವಿವೆ. ಅಜ್ಜನವರು ನಾನು ಜೀರ್ಣೋದ್ಧಾರದ ಕೆಲಸಗಳನ್ನು ಸರಿಯಾದ ರೀತಿಯಲ್ಲಿ ಮಾಡಿದೆ. ಆದರೆ ಏನೂ ಪ್ರಯೋಜನವಿಲ್ಲದಾಯಿತೆಂದು ದುಃಖಿಸಲು–

ತುಳುಪಠ್ಯ

ದೇವೆರ್ ಬೆರ್ಮೆರ್ ಪರಿಸೋದನೆ ಮಲ್ತೆರೊಡೋ
ಎಂಕಲೆ ದೇವೆರ್ ಬೆರ್ಮೆರ್ ದೇವಲೋಕೊಡ್ದು ಏಳ್ವೆರೆಡ್ ಒರ್ತೀ ಸತ್ಯೊದ ಸಿರಿನ್
ಪನ್ಪೆರೊಡೋ ನಾರಾಯಿನ ಸಿರಿಯೇ

ನರಲೋಕೊಡು ಬಲುಬಡತನ ಬತ್ತ್‌ದ್ ಪೋತ್‌ಂಡ್
ಬೆರ್ಮುಮಾಲವಗ್ ದಿಕ್ಕ್ ಮುತ್ತ್‌ದ್‌ಂಡ್ ದಿಸೆಲರಿದ್‌ಂಡ್
ಈ ಕಾಲ ಬುಡ್ದು ನನೊಂಜಿ ಕಾಲೊಗು ಪೋಪಿನ ಕಾಲ ಬತ್ತ್‌ಂಡ್
ದೇವಲೋಕೊ ಬುಡ್ಲ ಸಿರಿಯೇ ನರಲೋಕೊಗು ಪೋಲಂದ್‌ದ್
ದೇವಲೋಕೊಡ್ದು ಏಳ್ವೆರೆಡ್ ಒರ್ತಿ ಸಿರಿನ್
ನರಲೋಕೊ ಪರಿಸೋದನೆ ಆವೊಡುಂದು ಪನ್ವೆರ್ ದೇವೆರ್ ಬೆರ್ಮೆರ್

ಕನ್ನಡಾನುವಾದ

ದೇವರು ಬೆರ್ಮೆರ್ ಪರಿಶೋಧನೆ ಮಾಡಿದರು
ನಮ್ಮ ದೇವರು ಬೆರ್ಮೆರ್ ದೇವಲೋಕದಿಂದ ಏಳ್ವರಲ್ಲಿ ಒಬ್ಬಳು ಸತ್ಯದ ಸಿರಿಯನ್ನು
ಹೇಳುತ್ತಾರೆ ನಾರಾಯಣ ಸಿರಿಯೇ
ನರಲೋಕದಲ್ಲಿ ಬಲುಬಡತನ ಬಂದೊದಗಿದೆ
ಬೆರ್ಮುಮಾಲವನಿಗೆ ದಿಕ್ಕು ಕಾಣದಾಗಿದೆ ದೆಸೆ ಅಳಿದಿದೆ
ಈ ಕಾಲಬಿಟ್ಟು ಇನ್ನೊಂದು ಕಾಲಕ್ಕೆ ಹೋಗುವ ಸಂದರ್ಭ ಬಂದೊದಗಿದೆ
ದೇವಲೋಕ ಬಿಡು ಸಿರಿಯೇ ನರಲೋಕಕ್ಕೆ ಹೋಗೆಂದು
ದೇವಲೋಕದಿಂದ ಏಳ್ವರಲ್ಲಿ ಒಬ್ಬಳು ಸಿರಿಯನ್ನು
ನರಲೋಕ ಪರಿಶೋಧನೆ ಆಗಬೇಕೆಂದು ಕಳುಹಿಸಿಕೊಡುತ್ತಾರೆ. (ಪುಟ- 19)

ಹೀಗೆ ಬೆರ್ಮೆರ್ ದೇವರು ದೇವಲೋಕದಲ್ಲಿ ಪರಿಶೋಧನೆ ಮಾಡಿ ಏಳುಜನ ಸಿರಿಗಳಲ್ಲಿ ಒಬ್ಬಳಾದ 'ಸತ್ಯದ ಸಿರಿ'ಯನ್ನು ಕರೆದು ಬಿರ್ಮಾಳುವನ ಸಂತತಿಯ ಹಂಬಲದ ಕುರಿತು ತಿಳಿಸಿ ಆಕೆಯನ್ನು 'ನರಲೋಕೊಗು ಪೋವೊಡುಂದು ಕಡಾದ್ ಕೊರ್ಪೆರ್, ನರಲೋಕೊ ಪರಿಸೋದನೆ ಆವೊಡುಂದು ಪನ್ವೆರ್ ದೇವೆರ್ ಬೆರ್ಮೆರ್' (ನರಲೋಕಕ್ಕೆ ಹೋಗಬೇಕೆಂದು ಕಳುಹಿಸಿ ಕೊಡುತ್ತಾರೆ. ನರಲೋಕ ಪರಿಶೋಧನೆ ಆಗಬೇಕೆಂದು ಹೇಳುತ್ತಾರೆ ದೇವರು ಬೆರ್ಮೆರ್'). ಅಲ್ಲಿ ನಿನಗೆ ಏನಾದರೂ ಕಷ್ಟ ಒದಗಿ ಬಂದರೆ ಏನು ಮಾಡಬೇಕೆಂಬುದನ್ನೂ ತಿಳಿಸಿಕೊಡುತ್ತಾರೆ.

ತುಳುಪಠ್ಯ

ಆತ್ ಮಲ್ಲ ಕಷ್ಟ ಬತ್ತ್‌ಂಡ ಸಿರಿಯೇ
ಅಡ್ ಉಣ್ಪೆ ಅಟಿಲ್ ಪೋಪಿನ ಕಾಲ ಬತ್ತ್‌ಂಡ
ಪಂಡ್ ಕೊರಿ ಪಾತೆರ ಕಟ್ಟ್ ಕೊರಿ ಪೊದಿಕೆ ಬತ್ತ್‌ಂಡೋ ಸಿರಿಯೇ
ಪಿರ ಬಲ್ಲಂದ್ ದೇವೆರ್ ಬೆರ್ಮೆರ್ ಪನ್ನಗದೇ

ಕನ್ನಡಾನುವಾದ
ನಿನಗೆ ಅಷ್ಟು ದೊಡ್ಡ ಕಷ್ಟ ಬಂದರೆ ಸಿರಿಯೇ
ಅಟ್ಟುಣ್ಣುವಂಥ ಕಷ್ಟದ ಕಾಲ ಒದಗಿ ಬಂದರೆ
ಹೇಳಿ ಕೊಟ್ಟ ಮಾತು ಕಟ್ಟಿಕೊಟ್ಟ ಬುತ್ತಿ ಒದಗಿ ಬಂದರೆ ಸಿರಿಯೇ
ಹಿಂತಿರುಗಿ ಬಾ ಎಂದು ದೇವರು ಬೆರ್ಮೆರ್ ತಿಳಿಸಲು, ಆಗ ಸಿರಿ

ತುಳು ಪಠ್ಯ
ಏರ್‌ಯಾ ದೇವೆರ್ ಬೆರ್ಮೆರೆ ಉರಿಬೆರ್ಮೆ ಕೇನ್‌ಲಾ
ಊರ್ಯಾಯ ಮಡೆ ತಿಂದಿ ಬೊಕ್ಕ ಅನ್ಯಮಾನ್ಯ ಕೈ ಸೇರಿ ಬೊಕ್ಕ
ಬೊಕ್ಕೊರ್ಯೆಗ್ ದಾರೆ ದಂಗಾಯಿ ಬೊಕ್ಕ ಇರ್ವರ ಬರಾಯೆ
ನರಲೋಕೊಗು ಪೋಯೆಂಡ ನರಲೋಕೊ ಅಲಿಯಾಂತ್ರ ಆನೇಟ
ಎನ್ನ ಸಗ್ತಿದ ಪರಬಲೊ ದಿಂಜಿದ್ ಬರೊಡುಂದು ವರೊ ಕೊರ್ಪಲ್ ಸಿರಿ

ಕನ್ನಡಾನುವಾದ
ಯಾರು ದೇವರು ಬೆರ್ಮೆರೇ ಉರಿ ಬೆರ್ಮೆರೇ ಕೇಳಿ
ಅನ್ಯರ ಎಂಜಲು ತಿಂದ ಬಳಿಕ ಅನ್ಯಮಾನ್ಯರ ಕೈ ಸೇರಿದ ಬಳಿಕ
ಪರರಿಗೆ ಧಾರೆ ಎರೆದ ಬಳಿಕ ತಿರುಗಿ ಬಾರೆನು
ನರಲೋಕಕ್ಕೆ ಹೋದರೆ ಅದು ಅಳಿಯುವವರೆಗೆ
ನನ್ನ ಶಕ್ತಿಯ ಪ್ರಭಾವ ತುಂಬಿ ಬರಬೇಕೆಂದು ವರ ಕೊಡುತ್ತಾಳೆ ಸಿರಿ.
(ಶ್ಯಾಮರಾಯ ಶೆಟ್ಟಿ – ಪುಟ 19–20)

ನಾನು ಹೇಗೆ ನರಲೋಕಕ್ಕೆ ಹೋಗಬೇಕೆಂದು ಕೇಳುತ್ತಾಳೆ ಸತ್ಯದ ಸಿರಿ, ಅದಕ್ಕೆ ಬೆರ್ಮೆರ್

ತುಳುಪಠ್ಯ
ಬೆರ್ಮೆಮಾಲವೆ ಕಡೆಕಣ್ಣ್‌ಡ್ ಕೊಡಿದುಃಖ ದೆಪ್ಪುವೆರ್
ಆನೆಕಲ್ಲ ಅಡ್ಡೊಡು ಕುದ್ರೆಕಲ್ಲ ನೀಟೊಡು
ಕೊಡಿಮರತ್ತ ಕರಿ ನಿರೆಲ್‌ಡ್, ಕೆಂಪುಲಜೆ ಮಲೆಟ್ಟ್, ಕೆಮ್ಮಡೆ ಕರಿಯಡ್
ಗಂಡೊದ ಗುಲಿಗೆಡ್ ಓಮೊದ ಗುರಿಟ್ಟ್ ಉಂತುದುಲ್ಲೇ
ತಾವರಿನ್ನ ಕೆದುಟ್ಟು ಅಡಿಯಾರ ಕಂತ್ಯೆ ಮೇಲಾರ ನೆಗತ್ತೆ
ಸುದ್ದೊ ಮಂಡಲೊಡು ಬತ್ತ್‌ದ್ ಗರ್ಬೊ ಗುಂಡೊದ ಬಾಕಿಲ್‌ಡ್ ಉಂತ್‌ದೇ
ಪಿಂಗಾರೊದ ಪಾಲೆಡ್ ಅಜ್ಜೆರೆ ಕಚ್ಚೆದ ಮುನ್ನಿಗ್ ಬೂರ್‌ಲಾ
ಸೆರಂಗ್‌ದ ಕೋಡಿಗ್ ಬೂರ್‌ಲಂದ್ ಪನ್ಪೆರ್ ದೇವೆರ್ ಬೆರ್ಮೆರ್

ಕನ್ನಡಾನುವಾದ

ಬೆರ್ಮೆರ್‌ಮಾಲವ ಕಡೆಕಣ್ಣಲ್ಲಿ ದುಃಖಿಸುತ್ತಾನೆ
ಆನೆಕಲ್ಲ ಅಡ್ಡದಲ್ಲಿ ಕುದ್ರೆಕಲ್ಲ ನೇರಕ್ಕೆ
ಕೊಡಿಮರದ ಕರಿನೆರಳಲ್ಲಿ, ಕೆಂಪುಲಜೆ ಮಲೆ, ಕೆಮ್ಮಡೆ ಕರಿಯದಲ್ಲಿ
ಗಂಧದ ಗುಳಿಗೆ ಹೋಮದ ಗುಳಿಯ ಬಳಿ ನಿಂತಿದ್ದಾನೆ
ತಾವರೆ ಕೆರೆಯಲ್ಲಿ ಅಡಿವರೆಗೆ ಮುಳುಗಿ ಮೇಲಿಂದ ಕಾಣಿಸಿಕೊಂಡು
ಶುದ್ಧ ಮಂಡಲದಲ್ಲಿ ಬಂದು ಗರ್ಭಗುಡಿಯ ಬಾಗಿಲಲ್ಲಿ ಬಂದು ನಿಂತಿದ್ದಾನೆ
ಹಿಂಗಾರದ ಹಾಳೆಯಲ್ಲಿ ಅಜ್ಜನವರ ಕಚ್ಚೆಯ ತುದಿಗೆ ಹೋಗಿ ಬೀಳು
ಸೆರಗಿನ ತುದಿಗೆ ಹೋಗಿ ಬೀಳೆಂದು ಹೇಳುತ್ತಾರೆ ದೇವರು ಬೆರ್ಮೆರ್ (ಪುಟ 20).

ಈ ಅಡಿಕೆಯ ಹಿಂಗಾರವನ್ನು ಲಂಕೆಲೋಕನಾಡಿನ ದೇವಸ್ಥಾನಕ್ಕೆ ಒಂಭತ್ತು ಸುತ್ತು ಬಲಿ ತೆಗೆದುಕೊಂಡು ಹೋಗಿ ಅಜ್ಜನವರು ಸತ್ಯನಾಪುರದ ಅರಮನೆಗೆ ತಂದು ಕಲ್ಲಕಲೆಂಬಿ (ಕಲ್ಲಿನ ದಾಸ್ತಾನು ಪೆಟ್ಟಿಗೆ)ಯ ಮಸ್ಕತ್ತಿ ಅಕ್ಕಿಯ (ಒಂದು ವಿಧದ ಭತ್ತದ ತಳಿ) ಮೇಲೆ ತಂದು ಇರಿಸುತ್ತಾರೆ. ಇದರಿಂದ ಹೆಣ್ಣುಮಗುವಿನ ಜನನ ಆಗುತ್ತದೆ. ಇದರಿಂದ ಸಂತೋಷಗೊಂಡ ಅಜ್ಜನವರು ಹತ್ತು ಕಡೆಯ ಪಾಲವರಿಗೆ (ಮುಖಂಡ), ಜಾತಿ ಸಂಗತರಿಗೆ, ಕೆಳಗಿನ ಕರೆಯ, ಮೇಲಿನ ಕರೆಯ ಪಾಲವರಿಗೆ ಹೆಣ್ಣು ಮಗುವಿಗೆ ಹೆಸರಿಡುವಂತೆ ಕೇಳಿಕೊಳ್ಳುತ್ತಾರೆ. ಅವರೆಲ್ಲ ಸೇರಿ'ಯೋಗ್ಯದ ಅರಮನೆಗೆ ಭಾಗ್ಯದ ಸಿರಿ' ಎಂಬ ಹೆಸರಿಡುತ್ತಾರೆ. ಹೀಗೆ ಸಿರಿ ಉದಯವಾಗುತ್ತಾಳೆ.

ಈ ಮೇಲಿನ ವಿಚಾರಗಳಿಂದ ತಿಳಿದು ಬರುವುದೇನೆಂದರೆ ಬೆರ್ಮೆರ್ ದೇವರು ಈಶ್ವರದೇವರ ಅಪ್ಪಣೆಯಂತೆ ಪಾರ್ವತಿಯ ಒಪ್ಪಿಗೆ ಪಡೆದು ದೇವಲೋಕದಿಂದ ಏಳ್ವರಲ್ಲಿ ಒಬ್ಬಳು ಸತ್ಯದ ಸಿರಿಯನ್ನು ಸತ್ಯನಾಪುರದ ಸತ್ಯದರಸನಾದ ಬಿರ್ಮಾಳುವನಿಗೆ ಲಂಕೆಲೋಕನಾಡಿನ ಜೀರ್ಣೋದ್ಧಾರದ ನೆಪದಲ್ಲಿ ಹಿಂಗಾರದ ಹೂವಿನ ರೂಪದಲ್ಲಿ ಹೆಣ್ಣುಸಂತಾನವನ್ನು ನೀಡುತ್ತಾರೆ. ಅಲ್ಲಿ ನಿನಗೆ ಕಷ್ಟ ಒದಗಿ ಬಂದರೆ ಹೊರಟು ಬಾ ಎಂಬ ಮಾತನ್ನೂ ಹೇಳುತ್ತಾರೆ. ಅದಕ್ಕೆ ಸಿರಿ ಇನ್ನೊಬ್ಬರ ಕೈಸೇರಿದ ಬಳಿಕ, ಇನ್ನೊಬ್ಬರಿಗೆ ಧಾರೆ ಎರೆದುಕೊಟ್ಟ ಬಳಿಕ ತಿರುಗಿಬಾರೆನು ಎನ್ನುತ್ತಾಳೆ. ಒಂದು ಬಾರಿ ನರಲೋಕಕ್ಕೆ ಹೋದ ನಂತರ ನರಲೋಕ ಅಳಿಯುವ ತನಕ ತನ್ನ ಶಕ್ತಿಯ ಪ್ರಭಾವವನ್ನು ತೋರಿಸುವೆನು ಎನ್ನುತ್ತಾಳೆ. ಈ ಮೂಲಕ ತುಳುನಾಡಿನಲ್ಲಿ ಆರಾಧನೆಗೊಳ್ಳುವ ಭೂತಗಳನ್ನು ಶೈವಗಣಗಳು ಎಂದು ಪರಿಗಣಿಸುವಂತೆ ಸಿರಿಗೂ ಶೈವಸಂಬಂಧವನ್ನು ಕಲ್ಪಿಸಿ ಆಕೆಯನ್ನು ದೈವತ್ವಕ್ಕೆರಿಸಿದ್ದು ತಿಳಿದುಬರುತ್ತದೆ.

ಕರ್ಗಿಯವರ ಸಿರಿ ಕಾವ್ಯದಲ್ಲಿಯೂ ಸೂಕ್ಷ್ಮವಾಗಿ ಈ ವಿವರಗಳು ನುಸುಳಿವೆ. ಅಜ್ಜನವರು ಲಂಕೆಲೋಕ ನಾಡನ್ನು ಜೀರ್ಣೋದ್ಧಾರ ಮಾಡಿ ಪ್ರಾರ್ಥಿಸುವಾಗ–

ತುಳುಪಠ್ಯ

ಒಕೆತ್ತಿರಿ ಒಂಸೊ ಪಾರ್ವತಿ ಜನನೊ ಈಸ್ವರೊ ತುಡೆ ಸರೀರೊಡ್ದು
ಬಲಿರ್‌ದ್ ಬತ್ತ್‌ದ್ ಓ ಬಂಗರ್‌ದ ಪಿಂಗಾಣಿಗ್ ಪಿಂಗರದ ಎಸಲ್‌ಡೇ
ಕುಂಕುಮೊದ ಪರೆಲಾದೇ ಓ ಅಜ್ಜೇರೆ ಪಚ್ಚಡೆದ ಕೋಡಿಗ್
ಉದ್ಯಾ ಉದಿಪಾನೋ ಓ ಆತ್‌ಂಡಪ್ಪೋ -----

ಕನ್ನಡಾನುವಾದ

ಒಕ್ಕೆತ್ರಿ (ಬಂಟ)ವಂಶ ಪಾರ್ವತಿ ಜನನ ಈಶ್ವರನ ತೊಡೆಶರೀರದಿಂದ
ಉದಯವಾಗಿ ಓ ಬಂಗಾರದ ಪಿಂಜಣಿಗೆ ಹಿಂಗಾರದ ಎಸಳಲ್ಲಿ
ಕುಂಕುಮದ ಹರಳಾಗಿ ಓ ಅಜ್ಜನವರ ಹಚ್ಚಡೆಯ ತುದಿಗೆ
ಉದಯ ಓ ಆಗಿದೆಯಪ್ಪಾ....... (ಸಿರಿಕಾವ್ಯ ಲೋಕ-ಪುಟ 26)

ಎಂಬ ವಿವರಗಳು ಬರುತ್ತವೆ. ಈ ಮೇಲಿನ ಸಾಲುಗಳಿಂದ ತಿಳಿಯುವಂತೆ ಅಜ್ಜನವರು ಲಂಕೆಲೋಕನಾಡನ್ನು ಜೀರ್ಣೋದ್ಧಾರಗೊಳಿಸಿದ್ದಕ್ಕಾಗಿ ಈಶ್ವರನ ತೊಡೆ ಶರೀರದಿಂದ ಪಾರ್ವತಿಯ ಮೂಲಕ ಬಂಟ ಕುಲದವಳಾಗಿ ಬಂಗಾರದ ಪಿಂಗಾಣಿಗೆ ಹಿಂಗಾರದ ಎಸಳಲ್ಲಿ ಕುಂಕುಮದ ಹರಳಿನಂತೆ ಅಜ್ಜನವರ ಹಚ್ಚಡದ ತುದಿಗೆ ಬಿದ್ದು ಉದಯವಾದವಳು ಎಂದಿದೆ. ಹೀಗಾಗಿ ಈಶ್ವರನ ಅಂಶದಿಂದಲೇ ಪಾರ್ವತಿಯ ಮೂಲಕ ಸಿರಿ ಜನಿಸಿದ್ದು ಎಂಬುದನ್ನು ಈ ಪಠ್ಯವೂ ಸೂಚಿಸುತ್ತದೆ.

ಲೀಲಾ ಅವರ ಪಠ್ಯವೂ ಸ್ವಲ್ಪಮಟ್ಟಿಗೆ ಈ ಕಡೆಗೇ ಬೊಟ್ಟು ಮಾಡುತ್ತದೆ. ಬೆರ್ಮೆರ್ ದೇವರು ಬ್ರಾಹ್ಮಣ ಮಾಣಿಯಾಗಿ ಸತ್ಯನಾಪುರದರಮನೆಗೆ ಬಂದು 'ಬಡೆಕ್ಕಾಯಿ ಲಂಕೆಲೋಕನಾಡ್ ಪಾರಿ ಪಡಿಲ್ ಬೂರ್ದ್‌ಂಡ್. ದೇವೆರೆಗ್ ದೇವಸ್ಥಾನ ಇದ್ದಿ, ನಾಗಗ್ ನಾಗಕಲ್ಲ್ ಇದ್ದಿ, ಸೂಲೆಲೆಗ್ ಸುತ್ತು ಗುಡಿ ಇದ್ದಿ. ಬೂತೊಲೆಗ್ ಪಜಿಮಡಲ ಗುಂಡೊ ಇದ್ದಿ ಪಂಡೆರ್'. (ಬಡಗಣ ಲಂಕೆಲೋಕನಾಡು ಸಂಪೂರ್ಣ ಜೀರ್ಣಾವಸ್ಥೆಯಲ್ಲಿದೆ. ದೇವರಿಗೆ ದೇವಸ್ಥಾನವಿಲ್ಲ, ನಾಗನಿಗೆ ನಾಗಕಲ್ಲು ಇಲ್ಲ, ಸೂಳೆಯರಿಗೆ ಸುತ್ತುಗುಡಿ ಇಲ್ಲ, ಬೂತಗಳಿಗೆ ಹಸಿ ಮಡಲಿನ ಗುಡಿ ಇಲ್ಲವಾಗಿದೆ ಎನ್ನುತ್ತಾನೆ). ಇದನ್ನು ಜೀರ್ಣೋದ್ಧಾರ ಮಾಡಿಸಿದರೆ ನಿನಗೆ 'ಆಣಡ ಅಳಿಯ ಸಂತಾನ ಪೊಣ್ಣಡ ಪುತ್ರಾಡಿದ ಫಲ ತಿಕುಂಡು' (ಗಂಡಿನಲ್ಲಿ ಅಳಿಯಸಂತಾನ ಹೆಣ್ಣಿನಲ್ಲಿ ಪುತ್ರಾಡಿ ಸಂತಾನದ ಫಲ ದೊರೆಯುತ್ತದೆ) ಎಂದು ಹೇಳಿ ಅಜ್ಜನವರ ಕೈಯಿಂದ ಬಂಗಾರದ ಹರಿವಾಣದಲ್ಲಿ ಭಿಕ್ಷೆ ಪಡೆದು ಮಾಯವಾಗುತ್ತಾನೆ. ಇದನ್ನು ತಿಳಿದ ಅಜ್ಜನವರು ಇದು ಜೋಗದ (ಸಹಜ) ಬ್ರಾಹ್ಮಣ ಮಾಣಿಯಲ್ಲ, ಇದು ಮಾಯದ ಬ್ರಾಹ್ಮಣ ಎಂಬುದನ್ನು ತಿಳಿದು ಸತ್ಯನಾಪುರದ ಜಲ್ಮಭೂಮಿಯಿಂದ ಆಳುಗಳನ್ನು ಬಡಗಣ ಲಂಕೆಲೋಕನಾಡಿಗೆ ಕರೆದು ಕೊಂಡು ಹೋಗಿ ಜೀರ್ಣೋದ್ಧಾರದ ಕೆಲಸಗಳನ್ನು ಮಾಡಿಸುವ ಸಂದರ್ಭ ಮೊದಲಿಗೆ

ದೇವರ ಮುಗುಳಿ ಕಾಣಿಸುತ್ತದೆ, ಅನಂತರ ದೇವರ ಪೀಠ ದೊರೆಯುತ್ತದೆ. ಬೆರ್ಮೆರ್ ದೇವರ ಬ್ರಹ್ಮಸ್ಥಾನ, ಕ್ಷೇಮಕಲ್ಲ ಪಂಜುರ್ಲಿಯ ಕಲ್ಲು, ಸುತ್ತು ಪಂಜುರ್ಲಿಯ ಕಲ್ಲು, ಸೂಳೆಯರ ಸುತ್ತುಗುಡಿಯ ಕುರುಹು, ನಾಗನ ಕಲ್ಲು ಮುಂತಾದುವು ದೊರೆಯುತ್ತದೆ. ಅಜ್ಜನವರು ಮೊದಲು ದೇವರಿಗೆ ದೇವಸ್ಥಾನ ಮಾಡಿಸಿ ಆನಂತರ ಬೆರ್ಮೆರ್‌ಗೆ ಬ್ರಹ್ಮಸ್ಥಾನ, ಸೂಳೆಯರಿಗೆ ಸುತ್ತು ಗುಡಿ, ಭೂತಗಳಿಗೆ ಹಸಿಮಡಲಿನ ಗುಡಿ, ನಾಗನಿಗೆ ಕಲ್ಲು ಹಾಕಿಸಿ, ಧ್ವಜಕಂಭ ಸ್ಥಾಪಿಸಿ, ದಂಬೆಕಲ್ಲು ನಿಲ್ಲಿಸಿ, ಕ್ಷೇಮಕಲ್ಲ ಪಂಜುರ್ಲಿ ಹಾಗೂ ಸುತ್ತಿನ ಪಂಜುರ್ಲಿಗೆ ಕಲ್ಲು ಹಾಕಿಸಿ ಪುಣ್ಕೆದಡಿ ತಾಳತಂಬೂರಿ ಬ್ರಾಹ್ಮಣನಿಗೆ ಉತ್ತಾರ ಉಂಬಳಿ ಬಿಟ್ಟು ಪೂಜೆಗೆ ನೇಮಿಸುತ್ತಾರೆ. ಅಜ್ಜನವರು ಮತ್ತೆ ಸತ್ಯನಾಪುರದ ಅರಮನೆಗೆ ಬಂದು ಲಂಕೆಲೋಕನಾಡಲ್ಲಿ ಪೂಜೆ ಮಾಡಲು ಮೂರು ದಿನದ ಉಪವಾಸ ಫಲಾಹಾರ ವನ್ನು ನಡೆಸುತ್ತಾರೆ. ಹಸಿಮಡಲಿನಲ್ಲಿ ಮಲಗುತ್ತಾರೆ. ಮೂರನೆ ದಿನ ದಂಡಿಗೆ(ಪಲ್ಲಕ್ಕಿ) ಸಿಂಗರಿಸಿ ಲಂಕೆಲೋಕನಾಡಿಗೆ ಹೋಗುತ್ತಾರೆ. ಲಂಕೆಯಿಂದ ರಾವಣ ಬರುವ ಹೊತ್ತಲ್ಲಿ ಅಜ್ಜನವರು ಆನೆಕಲ್ಲ ಅಡ್ಡ, ದಂಬೆಕಲ್ಲ ನೇರಕ್ಕೆ, ಧ್ವಜಮರದ ಅಡಿಯಲ್ಲಿ, ಹೋಮದ ಕುಳಿಯಲ್ಲಿ, ಗಜಕಂಭದ ಬುಡದಲ್ಲಿ ಸೆರಗೊಡ್ಡಿ ನಿಂತಿದ್ದಾರೆ. ಆ ಹೊತ್ತಿಗೆ ಏಳುಕೋಲು ಆಳದಲ್ಲಿ ಏಳ್ವರು ಸಿರಿಗಳನ್ನು ಜಯಲ್ಲ ಬೆರ್ಮೆರ್ ದೇವರು ಕರೆದರು. ಸತ್ಯನಾಪುರದ ಅರಮನೆಯಲ್ಲಿ ಮಕ್ಕಳಿಲ್ಲ, ಸಂತಾನವಿಲ್ಲ. ನೀವು ಏಳ್ವರಲ್ಲಿ ಒಬ್ಬಳಾದ ಮೈಯಗೆ ಸಿರಿ ಸತ್ಯನಾಪುರದರಮನೆಗೆ ಮಾಯಬಿಟ್ಟು ಕಾಯಕ್ಕೆ (ಲೌಕಿಕ) ಹೋಗಬೇಕೆಂದರು. ಸತ್ಯನಾಪುರದರಮನೆಗೆ ಸಂತಾನವಾಗಬೇಕು. ಅಲ್ಲಿ ನಿನಗೆ ಕಷ್ಟ ಒದಗಿಬಂದ ಕಾಲಕ್ಕೆ ನಾವು ಏಳ್ವರು ಅಕ್ಕಂದಿರನ್ನು ನೆನೆ. ನಿನಗೆ ಏಳು ಸತ್ಯ ತೋರಿಸುತ್ತೇವೆ ಎಂದು ಹೇಳುತ್ತಾರೆ. ಹೀಗೆ ಬಂಗಾರದ ಹರಳಾಗಿಸಿ ಗಂಧದ ಗುಳಿಗೆಯಲ್ಲಿರಿಸಿ ಹಿಂಗಾರದ ಹೂವನ್ನು ಬಂಗಾರದ ಹರಿವಾಣದಲ್ಲಿರಿಸಿ ಅಜ್ಜನವರ ಹಚ್ಚಡದ ತುದಿಗೆ ಸಂತಾನವಾಗಿ ಹಾಕುವ ವಿವರ ಇದೆ.

ತುಳುಪಠ್ಯ

ನಾರಾಯಿನ ಸಿರಿಯೇ ಸತ್ಯನಾಪುರದ ಜಲ್ಮಭೂಮಿಡ್ ಅಜ್ಜೆರೆಗೆ ಬಾಲೆಲಿದ್ದಿ ಬಪ್ಪುಲಿದ್ದಿ
ಈ ಮಾಯೊ ಬುಡ್ದು ಕಾಯೊಗು ಪೋಲಮ್ಮ ಮೈಯಗೆ ಸಿರಿಯೇ
ಸತ್ಯನಾಪುರದರಮನೆಗ್ ಸಂತಾನ ಪರಾಂಬರಿ ಆಲ
ಸತ್ಯನಾಪುರದರಮನೆಡ್ ನಿಕ್ಕ್ ಕಷ್ಟ ತಿಕ್ಕ್‌ಂಡ ಎಂಕುಲು ಏಳ್ ಸತ್ಯ ಬೆನ್ಪಂದ್ ಪಂಡೆರ್
ಸತ್ಯನಾಪುರೊಗು ಸಿರಿನ್ ಬಂಗಾರ್‌ದ ಪರೆಲಾದ್ ಗಂಧೊದ ಗುಳಿಗೆಡ್ ಪಿಂಗಾರೊದ ಪುರ್ಪೊಡು
ಬಂಗಾರ್‌ದ ಅರಿವಾಣೊಡು ಜಯಲ್ಲ ಬೆರ್ಮೆರ್ ಧೀಯೆರ್
ಈ ಪೋಲಮ್ಮ ಮೈಯಗೆ ಸಿರಿ ಸತ್ಯನಾಪುರದ ಜಲ್ಮಬೂಮಿಗ್ ಪೋಲಮ್ಮಂದ್ ಪಂಡೆರ್
ಅಜ್ಜೆರೆನ ಪಚ್ಚಡೆದ ಕೋಡಿಗ್ ಪಾಡ್ಯೆರ್.

ಕನ್ನಡಾನುವಾದ

ನಾರಾಯಣ ಸಿರಿಯೇ ಸತ್ಯನಾಪುರದ ಜಲ್ಮಭೂಮಿಯಲ್ಲಿ ಅಜ್ಜನವರಿಗೆ ಮಕ್ಕಳಿಲ್ಲ ಸಂತಾನವಿಲ್ಲ
ನೀನು ಮಾಯಬಿಟ್ಟು ಕಾಯಕ್ಕೆ ಹೋಗಬೇಕಮ್ಮ ಮೈಯಗೆ ಸಿರಿಯೇ
ಸತ್ಯನಾಪುರದರಮನೆಗೆ ಸಂತಾನವಾಗಿ ಹೋಗು
ಸತ್ಯನಾಪುರದರಮನೆಯಲ್ಲಿ ನಿನಗೆ ಕಷ್ಟ ಎದುರಾದರೆ ನಾವು ಏಳು ಜನ ಸತ್ಯ ಮೆರೆಯುತ್ತೇವೆ ಎಂದರು
ಸತ್ಯನಾಪುರದರಮನೆಗೆ ಸಿರಿಯನ್ನು ಬಂಗಾರದ ಹರಳಾಗಿಸಿ ಗಂಧದ ಗುಳಿಗೆಯಲ್ಲಿರಿಸಿ ಹಿಂಗಾರದ ಪುಷ್ಪದಲ್ಲಿ ಬಂಗಾರದ ಹರಿವಾಣದಲ್ಲಿ ಜಯಲ್ಲ ಬೆರ್ಮೆರ್ ಇರಿಸಿದರು
ನೀನು ಹೋಗಮ್ಮ ಮೈಯಗೆ ಸಿರಿ ಸತ್ಯನಾಪುರದ ಜಲ್ಮಭೂಮಿಗೆ ಹೋಗೆಂದರು
ಅಜ್ಜನವರ ಹಚ್ಚಡದ ತುದಿಗೆ ಹಾಕಿದರು.

(ಲೀಲಾ ಶೆಡ್ತಿಯವರ ಅಪ್ರಕಟಿತ ಪಠ್ಯದಿಂದ).

ಕರ್ಗಿ ಶೆಡ್ತಿ, ಶ್ಯಾಮರಾಯ ಶೆಟ್ಟಿ ಹಾಗೂ ಲೀಲಾ ಶೆಡ್ತಿ ಈ ಮೂವರ ಕಾವ್ಯಗಳೂ ಸಿರಿಯ ಹುಟ್ಟನ್ನು ಹೆಚ್ಚುಕಮ್ಮಿ ಪೊಳಲಿಯವರ ಸಂಗ್ರಹದ ಕಾವ್ಯದಲ್ಲಿ ವಿವರಿಸಿದ್ದಕ್ಕೆ ಸಮನಾಗಿ ಹೇಳಿದೆ. ಸಿರಿಯನ್ನು ಬೆರ್ಮೆರ್ ಆಶಯದಂತೆ ಮೇಗಿಮಲೋಕದಿಂದಲೇ ತುಳುನಾಡಿಗೆ ಕಳುಹಿಸುವ ಮೂಲಕ ಸಿರಿಶಕ್ತಿಯನ್ನು ಮತ್ತಷ್ಟು ದೈವೀಕರಿಸಲಾಗಿದೆ. ಆ ಮೂಲಕ ಸಿರಿಗೆ ವಿಶೇಷತೆಯನ್ನು ತಂದು ಕೊಡಲಾಗಿದೆ.

ರಾಮಕ್ಕ ಅವರ ಅಪ್ರಕಟಿತ ಪಠ್ಯವು ಸಂಚನಂಗಡಿ ಜಲ್ಮಭೂಮಿಯ ಅರಮನೆಯಲ್ಲಿ ಆರ್ಯಬನ್ನಾರ್ ಬಿರ್ಮುಮಾಲವರಿಗೆ ಬಲುಬಡತನ ಬಂದುದನ್ನು ತಿಳಿಸುತ್ತದೆ. ಅಜ್ಜನವರ ಬಡತನ ಯಾವ ರೀತಿ ಇತ್ತೆಂದರೆ 'ಸತ್ಯನಾಪುರದ ಅರಮನೆ ಪಾರ್ ಪಡಿಲ್ ಬೂರ್ದ್ ಪೋದು ಕಕ್ಕೆಕರು ಇಂಚೆಡ್ದ್ ಪೊಗ್ಗುದು ಅಂಚೆಡ್ದ್ ಪಿದಡೊನು ಇತ್ತ್ಂಡ್' (ಸತ್ಯನಾಪುರದರಮನೆ ಪಾಳುಬಿದ್ದುಹೋಗಿ ಅರಮನೆಯ ಮುಖ್ಯ ದ್ವಾರದಿಂದ ಹೊಕ್ಕ ಕಾಗೆ ಗಿಡುಗ ಹಿಂದಿನ ದ್ವಾರದ ಮೂಲಕ ಹೊರ ಹೋಗುತ್ತಿತ್ತು) ಎಂಬ ವಿವರ ಇದೆ. ಅಜ್ಜನವರಿಗೆ ಬಡತನ ಬಂದಿರುವ ವಿಚಾರ ಯಾವುದೇ ಪಠ್ಯಗಳಲ್ಲಿ ಇಲ್ಲ. ಸಂತಾನದ ಸಿರಿಫಲ ಇಲ್ಲ ಎಂದು ದುಃಖಿಸುವ ಪ್ರಸಂಗ ಹಾಗೂ ಇವರ ದುಃಖ ವನ್ನು ತಿಳಿದ ಬೆರ್ಮೆರ್ ಬಡಬ್ರಾಹ್ಮಣ ಮಾಣಿಯಾಗಿ ಬಂದು ಸಂತೈಸುವ ವಿವರ ಇತರ ಪಠ್ಯಗಳಲ್ಲಿ ಬಂದರೆ ಇಲ್ಲಿ ಬಾಲ ಬೆರಮ್ಮನಮಾಣಿಯಾಗಿ (ಸಣ್ಣ ಬ್ರಾಹ್ಮಣ ಹುಡುಗ) ಬರುವ ವಿಚಾರ ಇದೆ. ಇವನು ತಿಳಿಸುವಂತೆ ಅಜ್ಜನವರು ಒಕ್ಕಲುಗಳನ್ನು ಕರೆದುಕೊಂಡು ಬಡಗಣ ಲಂಕೆಲೋಕನಾಡಿಗೆ ಜೀರ್ಣೋದ್ಧಾರಕ್ಕೆ ಹೋಗುವ ವಿಚಾರ ಇತರ ಪಠ್ಯಗಳಲ್ಲಿ ಬಂದರೆ ರಾಮಕ್ಕ ಅವರ ಪಠ್ಯದಲ್ಲಿ 'ಲೋಕನಾಡ ಗರಡಿ'ಗೆ ಹೋದರು ಎಂದಿದೆ. ಜೀರ್ಣೋದ್ಧಾರದ ಕಾರ್ಯಗಳನ್ನು ಮಾಡಿದ ಅಜ್ಜನವರಿಗೆ ಬಾಲ ಬ್ರಾಹ್ಮಣ

ಮಾಣಿಯು ಪ್ರಸಾದವನ್ನು ನೀಡಿ ಇದನ್ನು ಯಾರಿಗೂ ತೋರಿಸಬೇಡ, ದಾರಿ ಮಧ್ಯೆ ಬಿಡಿಸಬೇಡ ಎಂದು ಹೇಳಿ ಕಳುಹಿಸುತ್ತಾನೆ. ಅಜ್ಜನವರು ಅದನ್ನು ಬಹಳ ಜಾಗ್ರತೆಯಿಂದ ತಂದು ಕಲ್ಲ ಕಲೆಂಬಿಯಲ್ಲಿ ಇಡುತ್ತಾರೆ. ಏಳನೇ ದಿವಸಕ್ಕೆ ಕಲ್ಲ ಕಲೆಂಬಿಯಲ್ಲಿ ಮಗು ಅಳುವ ಮೂಲಕ ಸಂತಾನದ ಫಲ ದೊರೆಯುವ ವಿಚಾರ ಇದೆ. ಮಗು ಹುಟ್ಟಿದೊಡನೆ ಅಜ್ಜನವರನ್ನು ಕುರಿತು ಈ ರೀತಿ ಹೇಳುತ್ತದೆ. 'ತುಳುಕಟ್ಟ್‌ಡ್ ಒಕ್ಕೆತ್ರಿಪಾಲ್‌ಡ್ ಸೆಟ್ಟಿಮಗೆ ಸೇನವನ ಜನನೊಗು ಯಾನ್ ಬೈದೆಜ್ಜೆರೋ' (ತುಳುವ ಕಟ್ಟಿನಂತೆ ಬಂಟವಂಶದಲ್ಲಿ ಸೆಟ್ಟಿಮಗ ಸೇನವನ ಜನನಕ್ಕೆ ನಾನು ಬಂದೆ ಅಜ್ಜನವರೇ). ಮುಂದುವರಿದು ಮಗು

ತುಳುಪತ್ಯ

ನಾರಾಯಿನಜ್ಜೆರೇ ತುಳುಕಟ್ಟ್‌ಡ್ ಒಕ್ಕೆತ್ರಿ ಪಾಲ್‌ಡ್ ಜನನೊಗು ಬತ್ತೆ
ಸೆಟ್ಟಿಮಗೆ ಸೇನವೇ ಬಂಟ ಮಗೆ ಬಾರಗೇ ಗುತ್ತುಗು ಬತ್ತೆಜ್ಜೆರೋ

ಕನ್ನಡಾನುವಾದ

ನಾರಾಯಣ ಅಜ್ಜನವರೇ ತುಳುಕಟ್ಟಿನ ಬಂಟಕುಲದಲ್ಲಿ ಜನನವಾದೆ
ಸೆಟ್ಟಿಮಗ ಸೇನವ ಬಂಟಮಗ ಬಾರಗನ ಗುತ್ತು ಮನೆತನಕ್ಕೆ ಬಂದೆ ಅಜ್ಜನವರೇ........
(ರಾಮಕ್ಕ ಅಪ್ರಕಟಿತ ಪತ್ಯ)

ಎಂದು ಹೇಳುವ ಮೂಲಕ ತಾನು ತುಳುವ ಕಟ್ಟಿನ ಬಂಟಕುಲದ ಗುತ್ತುಮನೆತನಕ್ಕೆ ಬಂದೆ ಎಂಬುದನ್ನು ಮಗುವೇ ತಿಳಿಸುವ ವಿವರಗಳಿವೆ. ಈ ಮೂಲಕ ತಾನು ಬಂಟ ಕುಲದವಳು ಎಂಬುದನ್ನು ಈ ಪತ್ಯ ತಿಳಿಸುತ್ತದೆ.

ತುಳುಪತ್ಯ

ಯಾನಾಂಡ ಅಜ್ಜೆರೇ ಒತ್ತರೊಡು ಬಾರಿನಾಲತ್ತ್ ಇರ್ವರೊಡು ಬಾರಿನಾಲತ್ತಜ್ಜೆರೇ
ಮುತ್ತರೊಡು ಮೂಜಿಕರೆ ಬಾರಿನಾಲತ್ತಜ್ಜೆರೇ
ನಾರಾಯಿನ ಅಜ್ಜೆರೇ ಒಕ್ಕೆತ್ತಿರಿ ಪೊಣ್ಣು ಪಂಡ ಯಾನೇ ಅಜ್ಜೆರೇ
ಬಾರಿನಾಲ್ ಬಾಲಕ್ಕೆ ಸಿರಿ ಪಂಡ ಯಾನೇ..

ಕನ್ನಡಾನುವಾದ

ನಾನಾದರೋ ಅಜ್ಜನವರೇ ಒಂದು ಬಾರಿ ಆಳಿದವಳಲ್ಲ ಎರಡು ಬಾರಿಯಲ್ಲ
ಮೂರು ಬಾರಿ ಮೂರು ಕರೆ ಆಳಿದವಳು ಅಲ್ಲವೇ ಅಜ್ಜನವರೇ
ನಾರಾಯಣ ಅಜ್ಜನವರೇ ಒಕ್ಕೆತ್ತಿರಿ ಹುಡುಗಿ ಎಂದರೆ ನಾನೇ ಅಜ್ಜನವರೇ
ಆಳಿದವಳು ಬಾಲಕ್ಕೆ ಸಿರಿ ಎಂದರೂ ನಾನೇ (ರಾಮಕ್ಕ)

ಎಂಬುದಾಗಿ ಸಿರಿ ಉದಯವಾಗುತ್ತಲೆ ತಾನು ಗುತ್ತುಮನೆತನದ ಬಂಟಕುಲಕ್ಕೆ ಸೇರಿದವಳು ಮತ್ತು ಆಳ್ವಿಕೆ ನಡೆಸಬಲ್ಲಂಥ ಸಿರಿ ನಾನೇ ಎಂಬುದನ್ನು ತಿಳಿಸುತ್ತಾಳೆ. ಈ ವಿವರಗಳು ಬೇರೆ ಪಠ್ಯದಲ್ಲಿ ಲಭ್ಯವಿಲ್ಲ.

ಸತ್ಯನಾಪುರದ ಅಜ್ಜನವರಿಗೆ ಹೆಣ್ಣುಮಗುವಿನ ಜನನದಿಂದ ಬಹಳ ಸಂತೋಷವಾಗುತ್ತದೆ. ಇವರು ಆಚಾರಿ ಕೊಟ್ಟಿಗೆಗೆ ಹೋಗಿ ಮಗುವಿಗೆ ಬೆಳ್ಳಿಯ ತೊಟ್ಟಿಲು ಮಾಡಿಸಿ ಮಗುವಿಗೆ ಬೇಕಾದ ಆಭರಣಗಳನ್ನು ಮಾಡಿಸಿ 16ನೇ ದಿನದಂದು ಊರು ಸೇರಿಸಿ ಜಾನುವಾರುಗಳು ಹಟ್ಟಿ ಸೇರುವ ಹೊತ್ತು ಗೋಧೂಳಿ ಲಗ್ನದಲ್ಲಿ ಮಗುವನ್ನು ತೊಟ್ಟಿಲಿಗೆ ಹಾಕಿಸಿದರು. 'ಸತ್ಯದ ಮಗಳು ಸತ್ಯಮಾಲೋಕಂದ ಸಿರಿ' ಎಂದು ನಾಮರಣ ಮಾಡಿಸಿದರು. ಮಗು ಬೆಳೆದು ಒಂದು ವರ್ಷ ಪ್ರಾಯವಾದುದನ್ನು ಕುರಿತು ತಿಳಿಸುತ್ತದೆ.

ಬಸಲೂರ ಕಾಂತುಪೂಂಜನ ಜೊತೆಗೆ ಸಿರಿಯ ಮದುವೆ ಪ್ರಸ್ತಾವ, ವಿವಾಹ

ಸಿರಿ ಹುಟ್ಟಿದ ವಾರ್ತೆಯನ್ನು ಕೇಳಿ ಬಸಲೂರ ಸಂಕರು ಪೂಂಜೆದಿಯ ಮಗ ಕಾಂತು ಪೂಂಜ ಸತ್ಯನಾಪುರದರಮನೆಗೆ ಬಂದು ಸಿರಿಯ ಮೇಲೆ ಅನ್‌ಸೀರೆ (ಪಟ್ಟೆಸೀರೆ)ಯನ್ನು ಹೊದಿಸಿ ಇವಳನ್ನು ಮುಂದೆ ತಾನು ಮದುವೆಯಾಗುವೆನು. ಇನ್ನೊಬ್ಬರ ಕೈಗೆ ನೀಡಬೇಡಿ ಎಂಬುದಾಗಿ ತನ್ನ ಇಚ್ಛೆಯನ್ನು ಪ್ರಕಟಿಸುತ್ತಾನೆ. ಆಗ ಅಜ್ಜನವರು 'ಈ ಮಾನ್ಯ ಕೆರಿಯ ಮಗಾ, ಬೆರ್ಮೆತಿ ಬೆಂದನೆಂದು' (ನೀನು ನರಹತ್ಯೆ ಮಾಡಿದೆ ಮಗಾ, ಬ್ರಹ್ಮಹತ್ಯೆ ಮಾಡಿದೆ) ಎಂದು ಉದ್ಗರಿಸುತ್ತಾರೆ. ಇದು ಕಾಂತು ಪೂಂಜನ ಕುರಿತು ಅಜ್ಜನವರಿಗೆ ಎಂಥ ಅಭಿಪ್ರಾಯ ಇತ್ತು ಎನ್ನುವುದನ್ನು ತಿಳಿಸುತ್ತದೆ. ಈ ವಿಚಾರ ಶ್ಯಾಮರಾಯ ಶೆಟ್ಟಿಯವರ ಸಂಧಿಯಲ್ಲಿ ಹೀಗಿದೆ. ಸಿರಿ ಹುಟ್ಟಿದ ಸುದ್ದಿ 'ಪೊಣ್ಣುಲೆ ಮರ್ಲೆ ಪೊಣ್ಣುಲೆ ಚೋರೆ ಆಳ್ವಗ್ ತೆರಿಯುಂಡು' (ಸಿರಿ ಹುಟ್ಟಿದ ಸುದ್ದಿ ಹೆಣ್ಣು ಚೋರ, ಹೆಣ್ಣು ಮರುಳನಾದ ಆಳ್ವನಿಗೆ ತಿಳಿಯುತ್ತದೆ) ಎಂದಿದೆ. ಸ್ವತಃ ಸಿರಿಯ ಕುರಿತು ತಾಯಿಯವರಲ್ಲಿ ಈ ವಿಚಾರ ತಿಳಿಸಲು ಆಕೆ 'ನಾರಾಯಣ ಮಗ ಆಳ್ವಾ ಪೊಣ್ಣುಲೆ ಚೋರಾ, ಆಡೆಮುಟ್ಟ ಪೋಯನ ಮಗಾಂದ್ ಕೇನುವೊಲುಡೋ' (ನಾರಾಯಣ ಮಗ ಆಳ್ವಾ ಹೆಣ್ಣು ಚೋರಾ ಅಲ್ಲಿಯವರೆಗೆ ತಲಪಿದೆಯಾ?) ಎಂದು ಪ್ರಶ್ನಿಸುತ್ತಾಳೆ (ಪುಟ 30). ಈ ಮಾತುಗಳು ಕಾಂತುಪೂಂಜ ಸಿರಿಯನ್ನು ಮದುವೆಯಾಗುವ ಮೊದಲೇ ಹೆಣ್ಣುಮರುಳನಾಗಿದ್ದನೇ ಎಂಬುದರ ಕಡೆಗೆ ಅನುಮಾನ ಮೂಡುವಂತೆ ಮಾಡುತ್ತದೆ.

ಗೋಪಾಲ ನಾಯ್ಕರ ಪಠ್ಯದಲ್ಲಿ ಬಸಲೂರ ಸೆಟ್ಟಿ ಪೇಟೆಯಲ್ಲಿ ಸತ್ಯನಾಪುರದ ಅರಮನೆಯಲ್ಲಿ ಮಗು ಅಳುವ ಸದ್ದು ಕೇಳುತ್ತದೆ ಎಂಬ ಸುದ್ದಿಯನ್ನು ಕಾಂತುಪೂಂಜ ಕೇಳಿ ಮಗುವನ್ನು ನೋಡಬೇಕೆಂದು ಸತ್ಯನಾಪುರದರಮನೆಗೆ ಬರುತ್ತಾನೆ. ಬರುವಾಗಲೇ ಮೂವತ್ತು ಮೊಳ ಬಾರಪಟ್ಟೆ (ಹೊದ್ದುಕೊಳ್ಳುವ ರೇಶ್ಮೆ ಪಟ್ಟೆ)ಯನ್ನು ಹೊದ್ದುಕೊಂಡು ಬರುತ್ತಾನೆ. ಈವರೆಗೆ ಬಾರದವ ಏನು ಬಂದಿ ಎಂದು ಅಜ್ಜನವರು ಕೇಳಲು

ಸತ್ಯನಾಪುರದರಮನೆಯಲ್ಲಿ ಮಗು ಹುಟ್ಟಿದೆಯಂತೆ. ನನಗೊಮ್ಮೆ ನೋಡಬೇಕೆಂದು ಹೇಳುತ್ತಾನೆ. ಅಜ್ಜನವರು ಒಳಗೆ ಕರೆದುಕೊಂಡುಹೋಗಿ ಮಗುವನ್ನು ತೋರಿಸಲು ಕಾಂತುಪೂಂಜನು ತನ್ನ ಮೈಮೇಲಿನ ಮೂವತ್ತು ಮೊಳ ಪಟ್ಟೆಸೀರೆಯನ್ನು ಮಗುವಿನ ಮೇಲೆ ಹೊದಿಸಿ ಈ ಮಗುವನ್ನು ನನಗೆ ಕೊಡಬೇಕು ಅಜ್ಜನವರೇ ಎನ್ನುತ್ತಾನೆ. ತಾಯಿಯಲ್ಲಿ ಈ ವಿಚಾರವನ್ನು ತಿಳಿಸಲು ನಿನಗಾಗುವ ಸಂಬಂಧ ನನ್ನ ಕಿವಿಯಲ್ಲಿ ಕೇಳಿದ್ದರಲ್ಲಿ ಇಲ್ಲ ಎನ್ನುತ್ತಾಳೆ. ನಿಮಗೆ ತಿಳಿಯದಿದ್ದರೆ ನನಗೆ ತಿಳಿದಿದೆ. ಸತ್ಯನಾಪುರದ ಅರಮನೆಯಲ್ಲಿ ಇದೆ ಎನ್ನುತ್ತಾನೆ ಕಾಂತುಪೂಂಜ. ಹೀಗಾಗಿ ಸಂಕರುಪೂಂಜೆದಿ ಸತ್ಯನಾಪುರಕ್ಕೆ ತನ್ನ ಅಣ್ಣನಾದ ಬಿರ್ಮಾಳ್ವರಲ್ಲಿ ಮದುವೆ ಸಂಬಂಧ ಮಾತನಾಡಲು ಬರುತ್ತಾಳೆ. ಬಂದು ನಿಮ್ಮ ಮೊಮ್ಮಗಳನ್ನ ನನ್ನ ಮಗನಿಗೆ ಕೊಡಬೇಕೆಂದು ಕೇಳುತ್ತಾಳೆ. ಆಗ ಅಜ್ಜನವರು

ತುಳುಪಠ್ಯ

ಎನ್ನ ಇನಿಗ್ ಆಣ್ ಜೋಕುಲು ಇದ್ಯಾಂದಿ ಇಲ್ಲ್ ಮಗಾ
ಪಟ್ಟೊಗು ಮಾನಿ ಆವೊಡಾಪುಂಡು
ಭೂಮಿ ಸೀಮೆನ್ ತೂಪಿನ ಮಾನಿ ಆವೊಡು
ಸತ್ಯನಾಪುರದರಮ್ಮನೆ ಮಾಡಾಬಿ ಬಾಲೆ ಆವೊಡಾಪುಂಡು

ಕನ್ನಡಾನುವಾದ

ನನ್ನದು ಗಂಡು ಮಕ್ಕಳಿಲ್ಲದ ಅರಮನೆ ಮಗಾ
ಪಟ್ಟಕ್ಕೆ ಯಜಮಾನ ಆಗಬೇಕಾಗುತ್ತದೆ
ಭೂಮಿ ಸೀಮೆಯನ್ನೂ ನೋಡುವ ಜನ ಆಗಬೇಕು
ಸತ್ಯನಾಪುರವನ್ನು ಸರಿದೂಗುವ ಮಗು ಬೇಕಾಗುತ್ತದೆ

(ಗೋಪಾಲ ನಾಯ್ಕ ಪುಟ 264)

ಎನ್ನುತ್ತಾರೆ ಅಜ್ಜನವರು. ಅದಕ್ಕೆ ಸಂಕರು ಪೂಂಜೆದಿ

ತುಳುಪಠ್ಯ

ಈರ್ ಬಯೊ ಮಲ್ಪಡೆ ಅಣ್ಣೆರೆ
ಪಟ್ಟೊಗು ಮಾನಿ ಎನ್ನ ಮಗನ್ ಮಲ್ಪ್ಪೆ
ಬೇಲೆಕಾಲೆ ಎನ್ನ ಮಗಟ್ಟ ಮಲ್ಪಾವೆ ಅಣ್ಣೆರೆ
ಈರೆನ ಆರೊ ಬಾರೊ ಎನ್ನ ಮಗಟ್ಟ ತುಂಬಾಡ್ಡುವೆ........
ಕಾಲ್ತೆ ಎನ್ನ ಮಗೆ ಬಸಲೂರು ಮಾಡಾಯೆಂಡ ಓ ಅಣ್ಣೆರೇ
ಬೊಲ್ಪುಗು ಓ ಸತ್ಯನಾಪುರ ಮಾಡಾವೆ ಮಾಡಾವೆ........

ಕನ್ನಡಾನುವಾದ

ನೀವು ಭಯಪಡಬೇಡಿ ಅಣ್ಣನವರೇ
ಪಟ್ಟಕ್ಕೆ ಯಜಮಾನ ನನ್ನ ಮಗನನ್ನು ಮಾಡುವೆನು
ಎಲ್ಲ ಕೆಲಸಗಳನ್ನು ನನ್ನ ಮಗನ ಕೈಯಲ್ಲಿ ಮಾಡಿಸಿಯೇನು ಅಣ್ಣನವರೇ
ನಿಮ್ಮ ಜವಾಬ್ದಾರಿಯನ್ನು ನನ್ನ ಮಗನಲ್ಲಿ ಹೊರಿಸಿಯೇನು........
ರಾತ್ರಿ ನನ್ನ ಮಗ ಬಸಲೂರನ್ನು ಆಳಿದರೆ ಓ ಅಣ್ಣನವರೇ
ಬೆಳಿಗ್ಗೆ ಸತ್ಯನಾಪುರವನ್ನು ಸರಿದೂಗಿಸಿಕೊಂಡು ಹೋಗಿಯಾನು

(ಗೋಪಾಲ ನಾಯ್ಕ ಪುಟ 265)

ಎಂದು ಅಜ್ಜನವರಿಗೆ ಮಾತು ಕೊಡುತ್ತಾಳೆ. ಇದಕ್ಕೆ ಅಜ್ಜನವರು ಒಪ್ಪಿ ಮದುವೆ ನಡೆಯುವ ವಿವರಗಳಿವೆ. ಬಾರೀ ಸಂಭ್ರಮದ ಮದುವೆ ವಿಧಿಗಳೆಲ್ಲ ಮುಗಿದು ಹೆಣ್ಣೊಪ್ಪಿಸಿಕೊಡುವ ಹೊತ್ತಿಗೆ ಅಜ್ಜನವರು ಹೇಳುತ್ತಾರೆ 'ಓ ಸಂಕರು ಪೂಂಜೆದಿ, ಈವರೆಗೆ ನನ್ನ ಮೊಮ್ಮಗಳು ಸಿರಿಯ ಸುಖಕಷ್ಟ, ಒಳಿತು ಕೆಡುಕು, ಆರಭಾರ ನಾನು ನೋಡಿದೆ. ಇನ್ನು ಮುಂದಕ್ಕೆ ಅವಳ ಸುಖಕಷ್ಟ, ಉರಿಸಿರಿ (ಸುಖಕಷ್ಟಗಳು)ಯನ್ನು ನೀನು ನೋಡುಮಗಾ' ಎಂದು ಹೇಳಿ ಒಪ್ಪಿಸುತ್ತಾರೆ. ಇದು ಎಲ್ಲ ಕಡೆ ಹೆಣ್ಣೊಪ್ಪಿಸಿ ಕೊಡುವಾಗ ಇರುವ ಕ್ರಮ. ಆದರೆ ಗೋಪಾಲ ನಾಯ್ಕರ ಪತ್ಯದಲ್ಲಿ ಸಂಕರು ಪೂಂಜೆದಿಯೂ ಅಜ್ಜನವರನ್ನು ಕುರಿತು 'ನಾರಾಯಣ ಅಣ್ಣನವರೇ, ಇಂದಿನವರೆಗೆ ನನ್ನ ಮಗ ಕಾಂತು ಪೂಂಜನ ಆರಭಾರ ಓ ಉರಿಸಿರಿಯನ್ನು ನಾನು ನೊಡುತ್ತಿದ್ದೆ, ಇನ್ನು ಮುಂದಕ್ಕೆ ಅವನ ಆರಭಾರ, ಉರಿಸಿರಿಯನ್ನು ನೀವು ನೋಡಿ ಅಣ್ಣನವರೇ' ಎಂದು ಹೇಳುವ ವಿವರಗಳಿವೆ. ಹೀಗಾಗಿ ಕಾಂತುಪೂಂಜನ ಸರ್ವ ಜವಾಬ್ದಾರಿಯನ್ನೂ ಅಜ್ಜನವರಿಗೆ ತಾಯಿ ಒಪ್ಪಿಸಿಕೊಡುವ ವಿವರಗಳು ಈ ಪತ್ಯವನ್ನು ಹೊರತುಪಡಿಸಿ ಬೇರೆ ಪತ್ಯಗಳಲ್ಲಿ ಇಲ್ಲ. ಹೆಣ್ಣೊಪ್ಪಿಸಿ ಕೊಡುವ ಹಾಗೆ ಗಂಡೊಪ್ಪಿಸಿ ಕೊಡುವ ಸಂಪ್ರದಾಯವೂ ಇತ್ತು ಎಂಬುದು ಈ ಮೇಲಿನ ವಿವರಗಳಿಂದ ತಿಳಿಯುತ್ತದೆ.

ಮುಂದೆ ಸಿರಿ ಬೆಳೆದು 11 ವರ್ಷವಾಗುವಾಗ ಸಂಕರು ಪೂಂಜೆದಿ ತನ್ನವರನ್ನು ಕೂಡಿಕೊಂಡು ಸತ್ಯನಾಪುರದರಮನೆಗೆ ಬಂದು ಅಜ್ಜನವರಲ್ಲಿ ಮದುವೆಯ ವಿಚಾರವನ್ನು ಪ್ರಸ್ತಾವಿಸುತ್ತಾಳೆ. ಆದರೆ ಶೀನಪ್ಪ ಹೆಗ್ಗಡೆಯವರ ಗದ್ಯಪತ್ಯದಲ್ಲಿ ಕಾಂತುಪೂಂಜನ ಚಿಕ್ಕಪ್ಪ ಮಂಜುಪೂಂಜರು ಬಂದು ಮದುವೆ ಪ್ರಸ್ತಾವ ಮಾಡುವ ವಿಚಾರ ಇದೆ. ಇದಕ್ಕೆ ಅಜ್ಜನವರು ಒಪ್ಪದಿದ್ದಾಗ ಕೊನೆಗೆ ಸಂಕರು ಪೂಂಜೆದಿಯು ಸತ್ಯನಾಪುರದ ಮೇಲ್ವಿಚಾರಣೆಯನ್ನು ಕಾಂತುಪೂಂಜ ವಹಿಸುವನೆಂಬ ಆಶ್ವಾಸನೆಯೊಂದಿಗೆ ಮದುವೆಗೆ ಒಪ್ಪುತ್ತಾರೆ.

ಶ್ಯಾಮರಾಯ ಶೆಟ್ಟಿಯವರ ಪತ್ಯದಲ್ಲಿ ಸಿರಿಯನ್ನು ನೋಡಿದ ಕಾಂತುಪೂಂಜ ತನ್ನರಮನೆಗೆ ಹೋಗಿ ತನ್ನ ತಾಯಿಯವರಲ್ಲಿ ಹೀಗೆ ಹೇಳುತ್ತಾನೆ.

ತುಳುಪಠ್ಯ
ಇನಿತ್ತ ದಿನೊ ಬುಡೊಡು ಎಲ್ಲೆದ ದಿನೊ ಪೋವೊಡುಗೆನ
ಎನ್ನ ಕೈಕ್ಕ್ ಉಂಗಿಲೊ ದೀವೊಡು ಎನ್ನ ಕೈಡ್ದ್ ದೆಪ್ಪೊಡಪ್ಪೆರೇ
ಬಾಲೆದ ಕೈಕ್ಕ್ ಉಂಗಿಲೊ ಪಾಡೊಡು ಬರೊಡುಂದು ಆಳ್ವೇ ಪನ್ಪಿನೊಡೋ

ಕನ್ನಡಾನುವಾದ
ಇಂದಿನ ದಿನಬಿಡಬೇಕು ನಾಳೆಯ ದಿನ ಹೋಗಬೇಕು
ನನ್ನ ಕೈಗೆ ಉಂಗುರ ಇಡಬೇಕು ನನ್ನ ಕೈಯಿಂದ ತೆಗೆಯಬೇಕು ತಾಯಿಯವರೇ
ಮಗುವಿನ ಕೈಗೆ ಉಂಗುರ ಹಾಕಬೇಕು ನೀವು ಬರಬೇಕು ಎಂದು ಆಳ್ವ ಹೇಳುತ್ತಾನೆ.

ಹೀಗೆ ಮರುದಿನ ಉಂಗುರ ತೆಗೆದುಕೊಂಡು ಸತ್ಯನಾಪುರದರಮನೆಗೆ ಬಂದ ಸಂಕರು ಪೂಂಜೆದಿ ಅಜ್ಜನವರಲ್ಲಿ 'ನಿನಡ ಪುಲ್ಲಿ ಎನಡ ಮಗೆ ಕೋಡೆ ಬತ್ತ್‌ದ್ ಪೋಯೆಗೆ (ನಿನ್ನ ಮೊಮ್ಮಗ ನನ್ನ ಮಗ ನಿನ್ನೆ ಬಂದು ಹೋದನಂತೆ)ಎನ್ನುತ್ತಾಳೆ. ಮಗುವನ್ನು ಕೈಯಲ್ಲಿ ಹಿಡಿದು

ತುಳುಪಠ್ಯ
ಬಾಲೆನ್ ದೆತ್ತ್‌ದ್ ಅಡ್ಡಾಡುವೊಲು ಮುದ್ದಾಡುವೊಲು
ಸೆರಂಗ್ ಗಿಚ್ಚಾವೊಲು ಮುತ್ತು ಮುದ್ರೆದ ಉಂಗಿಲೊ
ಬಾಲೆದ ಎಡತ್ತ ಕೈತ್ತ ನಡುಬಿರೆಲ್‌ಗ್ ಸಂಕರು ಪೂಂಜೆದಿ ದೀಪೊಲು

ಕನ್ನಡಾನುವಾದ
ಮಗುವನ್ನು ಹಿಡಿದು ಅಡ್ಡಾಡುತ್ತಾಳೆ ಮುದ್ದಾಡುತ್ತಾಳೆ
ಸೆರಗು ಬಿಚ್ಚುತ್ತಾಳೆ ಮುತ್ತು ಮುದ್ರೆಯ ಉಂಗುರ
ಮಗುವಿನ ಎಡದ ಕೈಯ ನಡುಬೆರಳಿಗೆ ಸಂಕರು ಪೂಂಜೆದಿ ತೊಡಿಸುತ್ತಾಳೆ. ಹೀಗೆ ಉಂಗುರ ತೊಡಿಸಿ ಅಜ್ಜನವರಲ್ಲಿ ಈ ಮಾತುಗಳನ್ನಾಡುತ್ತಾಳೆ.

ತುಳುಪಠ್ಯ
ಪೊಣ್ಣ ಜಲ್ಮೊಗು ಬತ್ತಿಬೊಕ್ಕ ಮರ ತೂವೊಡುಯಾ ಬೂರು ನಡೊಡು
ಕಂಡೊ ತೂವೊಡು ದೈ ನಡೊಡು ಕಿದೆ ತೂವೊಡು ಮುಂಬು ಕಟ್ಟೊಡು
ಇಲ್ಲ್ ತೂವೊಡು ಪೊಣ್ಣು ಕೊನೊವೊಡು ಎನ್ನುತ್ತಾಳೆ.

ಕನ್ನಡಾನುವಾದ

ಹೆಣ್ಣು ಜನ್ಮಕ್ಕೆ ಬಂದ ನಂತರ ಮರ ನೋಡಬೇಕು ಬಳ್ಳಿ ನೆಡಬೇಕು
ಗದ್ದೆ ನೋಡಿ ಸಸಿ ನೆಡಬೇಕು ಹಟ್ಟಿನೋಡಿ ದನ ಕಟ್ಟಬೇಕು
ಮನೆನೋಡಿ ಹೆಣ್ಣು ಕೊಂಡುಹೋಗಬೇಕು ...

ಎನ್ನುತ್ತಾಳೆ. ಇದು ಮೊದಲು ಬಂದ ನೆಂಟತನ. ಇದನ್ನು ಹಿಂದೆ ಹಾಕಬೇಡ ಬೆರ್ಮರ್ಮಾಲವಾ ಎನ್ನುತ್ತಾಳೆ. ಇದಕ್ಕೆ ಅಜ್ಜನವರು ಇದು ನನ್ನಿಚ್ಛೆಯಲ್ಲ, ದೇವರ ಇಚ್ಛೆ ಎನ್ನುತ್ತಾರೆ. ರಾತ್ರಿ ಅಜ್ಜನವರಿಗೆ ಬಂದ ಸಂಬಂಧವನ್ನು ಹಿಂದೆ ಹಾಕಬೇಡ ಎಂದು ಉರಿಬೆರ್ಮೆರ್ ಸ್ವಪ್ನದಲ್ಲಿ ತಿಳಿಸುತ್ತಾರೆ. ಹೀಗೆ ಅಜ್ಜನವರು ಮದುವೆಯನ್ನು ಮುಂದುವರಿಸುವ ಬಗೆಗೆ ಒಪ್ಪಿಗೆ ನೀಡುತ್ತಾರೆ. ಸಿರಿಗೆ ಉಂಗುರ ತೊಡಿಸಿ ಮದುವೆ ಪ್ರಸ್ತಾವ ನಡೆಸುವ ವಿವರಗಳು ಬೇರೆ ಪಠ್ಯಗಳಲ್ಲಿ ದೊರೆಯುವುದಿಲ್ಲ.

ರಾಮಕ್ಕ ಅವರ ಅಪ್ರಕಟಿತ ಪಠ್ಯದಲ್ಲಿ ಬೈಲಲ್ಲೆ ಬಂದ ಕಾಂತು ಪೂಂಜ ಮಗು ಅಳುವುದನ್ನು ಕೇಳಿ ಸತ್ಯನಾಪುರದ ಅರಮನೆಗೆ ಬಂದು ಕಲ್ಲ ಕಲೆಂಬಿಯ(ಕಲ್ಲಿನ ದಾಸ್ತಾನು ಪೆಟ್ಟಿಗೆ) ಸಮೀಪ ಬಂದು ಮಗುವನ್ನು ನೋಡುತ್ತಾನೆ.

ತುಳುಪಠ್ಯ

'ಪುಗೆಲ್‌ದ ಎಲತ್ರೊ ದೆತ್ತ್‌ದ್ ತೊಟಿಲ್ಗ್ ಪಾಡ್ಬೆಜ್ಜೆರೇ
ಏರ್ ಬತ್ತ್‌ಂಡಲಾ ಈ ಪೊಣ್ಣನ್ ಕೊರಡೆಜ್ಜೆರೇ'

ಕನ್ನಡಾನುವಾದ

'ಹೆಗಲಿನ ಎಲೆವಸ್ತ್ರ ತೆಗೆದು ತೊಟ್ಟಿಲಿಗೆ ಹಾಸುತ್ತೇನೆ ಅಜ್ಜನವರೇ
ಯಾರು ಬಂದರೂ ಈ ಹೆಣ್ಣನ್ನು ಕೊಡಬೇಡಿ ಅಜ್ಜನವರೇ'

ಎನ್ನುತ್ತಾನೆ. ಆಗ ಅಜ್ಜನವರು ನನಗೆ ಮುಂದೆ ಯಾರು ಗತಿಗೋತ್ರ ಎನ್ನಲು ಕಾಂತು ಪೂಂಜ ಈ ರೀತಿ ಉತ್ತರಿಸುತ್ತಾನೆ:

ತುಳುಪಠ್ಯ

ನಾರಾಯಿನ ಬಯೊ ಮಲ್ಪಡೆಲಜ್ಜೆರೇ ಈರೆಗ್
ಸೈತಿ ಸಾವುಲಜ್ಜೆರೇ ಇತ್ತಿ ಲೇಸ್‌ಲಜ್ಜೆರೇ ಬಾಕೀ ಮದಿಮ್ಮೆಲಜ್ಜೆರೇ
ಅರಿಸುಡಲೆಗ್‌ಲಜ್ಜೆರೇ ಈರೆನ್ ಕಕ್ಕೆಕರು ತಿಂದ್‌ದ್ ಪೋಯೆರೆ ಬುಡಯೆಜ್ಜೆರೇ
ಓ ಅಜ್ಜೆರೇ ಮಣ್ಣ್‌ಲಾ ಪೊಣ್ಣ್‌ಲಾಂದ್‌ಪಂಡ್‌ದ್
ದಂಗ್‌ದಾರೆ ದತ್ತ್ ಮಲ್ತ್ ಕೊರೊಡು ಅಜ್ಜೆರೇ ಉಂದೊಂಜಿ ಬಾಲೆನ್

ಕನ್ನಡಾನುವಾದ

ನಾರಾಯಣ ಅಜ್ಜನವರೇ ಭಯಪಡಬೇಡಿ ನಿಮಗೆ
ಸತ್ತರೆ ಉತ್ತರಕ್ರಿಯೆಯನ್ನು, ಇದ್ದರೆ ಶುಭಕಾರ್ಯಗಳನ್ನು, ಉಳಿದ ಮದುವೆಯನ್ನು ಅಜ್ಜನವರೇ ನಿಮ್ಮನ್ನು ಸುಟ್ಟಜಾಗದಲ್ಲಿ ಕ್ರಿಯಾದಿಗಳನ್ನು ಮಾಡಿ ನೀವು ಕಾಗೆ ಗಿಡುಗ ತಿಂದು ಹೋಗಲು ಬಿಡೆನು ಅಜ್ಜನವರೇ
ಓ ಅಜ್ಜನವರೇ ಮಣ್ಣನ್ನೂ ಹೆಣ್ಣನ್ನೂ
ಧಾರೆ ಎರೆದು ಕೊಡಬೇಕು ಅಜ್ಜನವರೇ ಈ ಮಗುವನ್ನು ಎನ್ನುತ್ತಾನೆ.

(ರಾಮಕ್ಕ ಅಪ್ರಕಟಿತ ಪಠ್ಯ)

ಲೀಲಾ ಅವರ ಪಠ್ಯವು ಈ ಎಲ್ಲ ಪಠ್ಯಗಳಿಗಿಂತ ಸ್ವಲ್ಪ ಭಿನ್ನ ವಿಚಾರವನ್ನು ತಿಳಿಸುತ್ತದೆ. ಸಿರಿ ದೊಡ್ಡವಳಾಗುತ್ತಾ ಏಳು ಏಳೂವರೆ ಪ್ರಾಯದವಳಾಗಿ ಬೆಳೆಯಲು ಆಕೆಗೆ ಮನದಲ್ಲಿ ಅಸೆಯೊಂದು ಮೂಡುತ್ತದೆ. ನನಗೆ ಸತ್ಯನಾಪುರದರಮನೆಯ ಹೂವಿನ ತೋಟ ತಿರುಗಬೇಕು, ತಾವರೆಯ ಕೆರೆಯಲ್ಲಿ ಸ್ನಾನ ಮಾಡಬೇಕೆಂಬ ಬಯಕೆಯನ್ನು ದಾರುವಿನಲ್ಲಿ ವ್ಯಕ್ತಪಡಿಸುತ್ತಾಳೆ. ಅಜ್ಜನವರಿಗೆ ವಿಷಯ ತಿಳಿಸಿ ದಾರು ಕರೆದುಕೊಂಡು ಹೋಗುತ್ತಾಳೆ. ಸಿರಿ ಮನಬಂದಂತೆ ನೀರಜಲಕವಾಡುತ್ತಾಳೆ. ಮೈಲೆ ಕಳೆದು ಮಡಿಯುಟ್ಟು ನಂದನವನದಲ್ಲಿ ಹೂವಿನ ಅಂದ ನೋಡುತ್ತಿರಲು ಬಸಲೂರ ಕಾಂತುಪೂಂಜ ಬರಹದ ಶಾಲೆಯಿಂದ ಹಿಂತಿರುಗುವವ ಹೂತೋಟದಲ್ಲಿ ಸಿರಿಯ ಅಂದ ನೋಡುತ್ತಾನೆ. ಮನಸ್ಸಿಗೆ ತುಂಬ ಹಚ್ಚಿ ಕೊಳ್ಳುತ್ತಾನೆ. ಮನೆಗೆ ಬಂದು ಬೇಸರದಿಂದ ಕವುಚಿ ಮಲಗುತ್ತಾನೆ. ತಾಯಿ ಹುಡುಕುತ್ತಾ ಬಂದು ಮಗನಲ್ಲಿ ವಿಷಯ ತಿಳಿದುಕೊಂಡು ಸತ್ಯನಾಪುರಕ್ಕೆ ಹೊರಟು ಹೋಗುತ್ತಾಳೆ. ಅಜ್ಜನವರು ಸಹಜವಾಗಿಯೇ ಸಂಕರು ಹೆಂಗಸಿಗೆ ಸಿರಿಯನ್ನು ತೋರಿಸುತ್ತಾರೆ. ಸಿರಿಯನ್ನು ನೋಡಿದ ಸಂಕರು ಅಜ್ಜನವರಲ್ಲಿ ನಾವು ಸತ್ಯನಾಪುರದಿಂದ ಬಸಲೂರಿಗೆ ಕಾಲುಸಂಕ(ಪಾಪು) ಹಾಕೋಣವೇ ಎಂದು ಕೇಳುತ್ತಾಳೆ. ನನಗೂ ಒಬ್ಬನೇ ಮಗ. ನಿಮಗೂ ಒಬ್ಬಳೇ ಮೊಮ್ಮಗಳು. ಧರ್ಮಧಾರೆ ಎರೆದು ಕೊಡಿ ಎಂದು ಕೇಳುತ್ತಾಳೆ. ಬಸಲೂರನ್ನುಬಾಳಿಸಿದರೆ ಸತ್ಯನಾಪುರವನ್ನೂ ಬಾಳಿಸಿಯಾನು ಎಂಬ ಮಾತಿನಂತೆ ಮದುವೆಗೆ ಅಜ್ಜನವರು ಒಪ್ಪಿಗೆ ಸೂಚಿಸುತ್ತಾರೆ. ಸಂಕರುಪೂಂಜೆದಿ ತನ್ನ ಬಲದ ಕೈಯ ಮುತ್ತು ಮುದ್ರೆಯ ಉಂಗುರ ತೆಗೆದು ಸಿರಿಯ ಕೈಗೆ ತೊಡಿಸುವ ವಿವರಗಳಿವೆ.

ರಾಮಕ್ಕ ಮುಗ್ಗೇರ್ತಿಯವರ ಪಠ್ಯದಲ್ಲಿ ಸತ್ಯನಾಪುರದ ಅಜ್ಜನವರಿಗೆ ಮಗುವೊಂದು ದೊರೆತಿದೆ ಎಂಬ ಸುದ್ದಿ ನಾಲ್ಕು ಊರು, ನಾಲ್ಕು ದೇಶಗಳಿಗೆ ಹರಡುತ್ತದೆ. ಹೀಗಾಗಿ ಬಸಲೂರ ಸಂಕರುಪೂಂಜೆದಿಯೇ (ಇವಳನ್ನು ಸತ್ಯನಾಪುರದಜ್ಜೆರೆ ಸಂಗಡಿ (ತಂಗಿ) ಎಂದು ಕರೆಯಲಾಗಿದೆ) ನನ್ನ ಮಗನಾದ ಕಾಂತನಾಳ್ವನಿಗೆ ಸಿರಿಯನ್ನು ತರಬೇಕೆಂದು ನಿರ್ಧರಿಸುತ್ತಾಳೆ.

ತುಳುಪತ್ಯ

ಮಗೇನೆ ಕಾಂತಾಲ್ವಗ್ ಸಿರಿನ್ ಕೊನವೊಡು
ಮಾಲೋಕೊಗು ಕೊರಿಯೆರೆ ಆವಂದ್ ಮಗಾ
ಎನ ಸಗೆನ ಮಗಲ್ ಮಗಾ ಸತ್ಯಮಲೋಕಂದ ಸಿರಿ
ಪೊರ್ಲು ಪೊಲಿಕೆದ ಬಾಲೆನ್ ನಮ ಎರಮನೆಗ್ ಕೊನವೊಡು ಮಗಾ

ಕನ್ನಡಾನುವಾದ

ಮಗ ಕಾಂತಾಳ್ವನಿಗೆ ಸಿರಿಯನ್ನು ತರಬೇಕು
ಮಾಲೋಕಕ್ಕೆ ಕೊಡಬಾರದು ಮಗಾ
ನನ್ನ ಅಣ್ಣನ ಮಗಳು ಮಗಾ ಸತ್ಯಮಲೋಕಂದ ಸಿರಿ
ಅಂದಚಂದದಲ್ಲಿ ಮಗುವನ್ನು ನಮ್ಮ ಅರಮನೆಗೆ ತರಬೇಕು ಮಗಾ

ಎಂದು ಸಂಕರು ಪೂಂಜೆದಿಯು ಮದುವೆಯ ಪಸ್ತಾವವನ್ನು ತನ್ನ ಅಣ್ಣನಾದ ಸತ್ಯನಾಪುರದ ಅಜ್ಜನವರಲ್ಲಿ ಮಾಡುವ ವಿವರ ಇದೆ. ಎಲ್ಲ ಪತ್ಯಗಳು ಸಿರಿಯನ್ನು ಅಜ್ಜನವರ ಪುಲ್ಲಿ (ಮೊಮ್ಮಗಳು) ಎಂದು ಕರೆದರೆ ರಾಮಕ್ಕ ಮುಗ್ಗೇರ್ತಿ ಅವರ ಪತ್ಯವು ಸಿರಿಯನ್ನು ಅಜ್ಜನವರ ಮಗಳು ಎಂಬುದಾಗಿ ಕರೆದಿದೆ. ಮುಂದುವರಿದು

ತುಳುಪತ್ಯ

ಎನ ಅಣ್ಣೇರ್ ಇನಿ ಯಾನ್ ಕೇಂಡೆಡ ಪೊಣ್ಣು ಕೊರುವೆರ್ ಮಗಾ
ಯಾನ್ ಪೋಯಿನಾಲ್ ಮಗಾ ಸಿರಿನ ಬರಿಬಂದ್ರ ಕೇಣುವೆಗೆನಾ ಪಟ್ಟೀನೆ ಪಗತ್ತ್‌ದ್ ಬರ್ಪೆ

ಕನ್ನಡಾನುವಾದ

ನನ್ನ ಅಣ್ಣ ಇಂದು ನಾನು ಹೆಣ್ಣು ಕೇಳಿದರೆ ಕೊಟ್ಟಾರು ಮಗಾ
ನಾನು ಹೋದವಳು ಮಗಾ ಸಿರಿಯ ಬಳಿಬಂದ್ರ (ವಂಶಮೂಲ) ಕೇಳಿ ತಾಂಬೂಲ ಬದಲಾಯಿಸಿ ಬರುವೆ.

ಹೀಗೆ ಅಜ್ಜನವರಲ್ಲಿಗೆ ಹೋಗಿ ನನಗೂ ಒಬ್ಬ ಮಗ, ನಿಮಗೂ ಒಬ್ಬಳು ಮಗು ಸಿರಿ. ನನ್ನ ಮಗನಿಗೆ ಮದುವೆ ಮಾಡಿಕೊಡಬೇಕು. ಸಿರಿಯ ಬಳಿಬಂದ್ರ(ವಂಶಮೂಲ) ತಿಳಿಸಬೇಕು ಎಂದು ಕೇಳುತ್ತಾಳೆ. ಹಿಂದಿನ ಕಾಲದ ಪದ್ಧತಿ ಇದು. ಮೊದಲು ಸೋದರಿಕೆಯಲ್ಲಿ ಸಂಬಂಧ ಬೆಳೆಸುವುದು ಪದ್ಧತಿ. ಅದೂ ಕೂಡ ತುಳುವಿನ 'ಮರ ತೂದು ಬೂರು ನಡ್' (ಮರ ನೋಡಿ ಬಳ್ಳಿ ನೆಡು) ಎಂಬ ಮಾತಿನಂತೆ ಮನೆತನ

ನೋಡಿ ಸಂಬಂಧ ಹಿಡಿಯುತ್ತಿದ್ದರು. ಗುತ್ತು ಗುತ್ತುಗಳ ನಡುವೆ ಸಂಬಂಧ ಸ್ಥಾಪಿಸುತ್ತಿದ್ದರು. ಮೊದಲು ಹೆಣ್ಣಿನ ಕಡೆಯಿಂದಲೇ ಈ ಸಂಬಂಧದ ಪ್ರಸ್ತಾವವಾಗುತ್ತಿತ್ತು. ಆ ನಂತರ ಹೆಣ್ಣಿನ ವಂಶಮೂಲ (ಬರಿಬಂದ್ರ) ತಿಳಿದುಕೊಳ್ಳುವ ಕ್ರಮ ಇತ್ತು. ಒಂದೇ ಬಳಿಯ ನಡುವೆ ಮದುವೆಗಳು ನಡೆಯುತ್ತಿರಲಿಲ್ಲ. ಈ ಕಟ್ಟನ್ನು ಸಂಕರುಪೂಂಜೆದಿ ಪಾಲಿಸಿದ್ದು ತಿಳಿಯುತ್ತದೆ.

ಸಂಕರು ಪೂಂಜೆದಿಯ ಈ ಪ್ರಸ್ತಾವಕ್ಕೆ ಅಜ್ಜನವರು ಮೊದಲು ಒಪ್ಪಿಗೆ ಸೂಚಿಸುವುದಿಲ್ಲ.

ತುಳುಪಠ್ಯ

ಇನಿ ಯಾನ್ ಪೊಣ್ಣು ಕೊರಾಯೆ ಪೊದು ಪತ್ತಾಯೆ
ಯಾನ್ ತತ್ತಿ ಕಾಲೊಗುಗೆನಾ ಸತ್ಯನಾಪುರದ ಎರಮ್ಮನೆಡ್‌ಗೆನಾ ಆಣತೂನ ಇಜ್ಜಿಗೆನಾ
ಸತ್ಯನಾಪುರದ ಎರಮನೆದ ಪಟ್ಟ ಆಳ್ಯೊಡುಗೆನಾ
ಎನ ಪಟ್ಟೊದುಂಗಿಲೊ ದೀವೊಡುಗೆನಾ
ಎನ ಸತ್ಯನಾಪುರದರಮ್ಮನೆಡ್ ಪಟ್ಟನೆ ಆಳಿಯುನ ಬಂಟೆ ಬರೊಡುಂದು ಪನ್ಪೆರಾ ಅಜ್ಜೆರ್

ಕನ್ನಡಾನುವಾದ

ಇಂದು ನಾನು ಹೆಣ್ಣು ಕೊಡೆನು ಸಂಬಂಧ ಹಿಡಿಯೆನು
ನಾನು ತಪ್ಪಿದ ಕಾಲಕ್ಕೆ ಸತ್ಯನಾಪುರದ ಅರಮನೆಗೆ ಗಂಡುಬಲ ಇಲ್ಲದಾಗಿದೆ
ನನ್ನ ಸತ್ಯನಾಪುರದ ಪಟ್ಟ ಆಳಬೇಕು ನನ್ನ ಪಟ್ಟದುಂಗುರ ಇಡಬೇಕು

ನನ್ನ ಸತ್ಯನಾಪುರದ ಅರಮನೆಯ ಪಟ್ಟ ಆಳುವಂಥ ಬಂಟ ಬರಬೇಕೆಂದು ಹೇಳಿದರು ಅಜ್ಜನವರು (ರಾಮಕ್ಕ ಮುಗ್ಗೇರ್ತಿ ಪುಟ 27–28). ಸತ್ಯನಾಪುರದ ದೇಕ್ ರಕೋಲೆ (ಆಡಳಿತ) ನೋಡುವಂಥ ಬಂಟನಿಗೆ ಮಾತ್ರ ನಾನು ಸಂಬಂಧ ಕೊಡುವುದೆಂದು ಸಂಕರು ಪೂಂಜೆದಿಗೆ ತಿಳಿಸುತ್ತಾರೆ ಅಜ್ಜನವರು. ನೀವು ತಪ್ಪಿದ ಕಾಲಕ್ಕೆ ಕಾಂತಾಳ್ವನೇ ಸತ್ಯನಾಪುರ ಆಳುತ್ತಾನೆ. ಪಟ್ಟದುಂಗುರ ಅವನಿಗೆ ಇಡಿ. ಪಟ್ಟ ಅರಸ್ತನ ಆಳುತ್ತಿರುತ್ತಾನೆ ಎಂದು ಸಂಕರು ಪೂಂಜೆದಿ ಹೇಳಲು ಅಜ್ಜನವರು ನೀನು ಹೆಣ್ಣು ಕೇಳುವುದು ದೊಡ್ಡದಲ್ಲ, ನನ್ನ ಮದಿಪು (ಮಾತು) ದೊಡ್ಡದಲ್ಲ. ಹೆಣ್ಣು ಕೊಡುತ್ತೇನೆ, ಸಂಬಂಧ ಹಿಡಿಯುತ್ತೇನೆ ಎಂದು ಹೇಳಿ ಸಿರಿಯ ಬಳಿ (ವಂಶಮೂಲ) ಯನ್ನು ತಿಳಿಸುತ್ತೇನೆ ಎಂದು,

ತುಳುಪಠ್ಯ
ಇನಿ ಎನ್ನ ಮುತ್ತು ಮೋವ ಮೋಕೆಂದ ಮಗಲ್‌ಗೆನಾ
ಸಿರಿ ಆಲ್ ಪುತ್ತೂರ ಬನ್ನಾಯಗೆನಾ
ನಿನ್ನ ಮಗೆಗೆನಾ ಬಸಲೂರುದ ಕಾಂತಾಲ್ವೆಗೆನಾ ಆರಿಯ ಬನ್ನಾಯೆಗೆನಾಂದ್ ಪನ್ನಗ
ಲಾವಾ ಪೊಣ್ಣಗಾ ಆಣಗಾ ತಾರ್ಕಣೆನೆ ಆಪುಂಡುದು
ಸಂಕರು ಪೂಂಜೆದಿ ಮದಿಪುವೆರತ್ತೋ

ಕನ್ನಡಾನುವಾದ
ನನ್ನ ಮುದ್ದು ಮೋಹದ ಮಗಳು ಸಿರಿ
ಅವಳು ಪುತ್ತೂರ ಬನ್ನಾಯಳು
ನಿನ್ನ ಮಗ ಬಸಲೂರ ಕಾಂತಾಳ್ವ ಆರಿಯ ಬನ್ನಾಯ ಎಂದು ಅಜ್ಜನವರು ಹೇಳಲು
ಗಂಡು ಹೆಣ್ಣಿಗೆ ತಾರ್ಕಣೆ (ಹೊಂದಿಕೆ) ಆಗುತ್ತದೆ ಎಂದು
ಸಂಕರು ಪೂಂಜೆದಿ ಮದಿಪು ಹೇಳುತ್ತಾರೆ (ಪುಟ 29).

ಈವರೆಗಿನ ಎಲ್ಲ ಪಠ್ಯಗಳು ಆರ್ಯ ಬನ್ನಾಯ ಬಳಿಯವಳಾದ ಸಿರಿಯನ್ನು ಪುತ್ರ ಬನ್ನಾಯ ಬಳಿಯವನಾದ ಕಾಂತುಪೂಂಜನಿಗೆ ಮದುವೆ ಮಾಡಿಕೊಡುವ ವಿಚಾರಗಳನ್ನು ತಿಳಿಸುತ್ತವೆ. ರಾಮಕ್ಕ ಮುಗ್ಗೇರ್ತಿಯ ಪಠ್ಯ ಮಾತ್ರ ಸಿರಿ ಪುತ್ರ ಬನ್ನಾಯ ಬಳಿಯವಳು ಎಂದಿದೆ. ಅಜ್ಜನವರ ತಂಗಿ ಬಸಲೂರ ಸಂಕರು ಪೂಂಜೆದಿ ಹೌದಾದರೆ ಅವಳೂ ಅವಳ ಮಗನಾದ ಕಾಂತುಪೂಂಜನೂ ಆರ್ಯ ಬನ್ನಾಯ ಬಳಿಯವರಾಗಬೇಕು. ಹಾಗಾದರೆ ಒಂದೇ ಬಳಿಯ ನಡುವೆ ವಿವಾಹ ಸಂಬಂಧಗಳು ಏರ್ಪಡಲು ಸಾಧ್ಯವಿಲ್ಲ. ರಾಮಕ್ಕ ಮುಗ್ಗೇರ್ತಿಯ ಪಠ್ಯವು ಅಜ್ಜನವರು ಸಿರಿಯನ್ನು ಮಗಳು ಎಂದು ಸಾಕಿರುವುದರಿಂದ ಅವಳ ಬಳಿಯೂ ಆರ್ಯಬನ್ನಾಯವೇ ಆಗಬೇಕು. ಪುತ್ರ ಬನ್ನಾಯವಾಗಲು ಸಾಧ್ಯವಿಲ್ಲ. ಹೀಗಾಗಿ ಈ ಪಠ್ಯದಲ್ಲಿ ಬಳಿಯ ಬಗೆಗಿನ ಗೊಂದಲ ಹಾಗೆಯೇ ಉಳಿದುಕೊಂಡಿದೆ. ಆದರೆ ರಾಮಕ್ಕ ಮುಗ್ಗೇರ್ತಿಯವರ ಪಠ್ಯವು ಒಂದೇ ಬಳಿಯ ನಡುವೆ ವಿವಾಹ ನಡೆಯದ ಕಾರಣಕ್ಕೆ ಎಲ್ಲ ಪಠ್ಯಗಳಿಗಿಂತ ಭಿನ್ನ ರೀತಿಯಲ್ಲಿ ಹೇಳಿದ್ದು ಇಲ್ಲಿ ಎದ್ದು ಕಾಣಿಸುತ್ತದೆ.

ಹೀಗೆ ಮದುವೆ ಸಂಬಂಧವನ್ನು ಖಚಿತಪಡಿಸಿಕೊಂಡ ಸಂಕರು ಪೂಂಜೆದಿ ಅಜ್ಜನವರ ಕೇಳಿಕೆಯಂತೆ ತನ್ನವರನ್ನು ಸೇರಿಸಿಕೊಂಡು ಕಾಂತಾಳ್ವನ ಜೊತೆ ಮದುವೆಯ ನಿಶ್ಚಿತಾರ್ಥಕ್ಕೆ ಸತ್ಯನಾಪುರದರಮನೆಗೆ ಬರುತ್ತಾಳೆ. ಈ ಸಂದರ್ಭ ಆಳ್ವ ಹೊರಡುವ ವಿವರಗಳು ಈ ರೀತಿ ಇದೆ.

ತುಳುಪಠ್ಯ
ಬಂದಿಕಟ್ಟಿ ಜೋತ್ರ ಪಾಡುವೆರ್‌ಗೆನ
ಪುಲ್ಲೆ ಬಣ್ಣದ ತರೆತ್ರಗೆನಾ ರಾಮಕೆಂಪುಗೆನಾ
ಕಣ್ಣ್‌ಗ್ ಕೋಲುಮ್ಮೈ ಕೊಯಿಸೆರಂಗ್‌ಗೆನಾ
ಅಂಗೈ ಸರಪೊಲಿ ಮುಂಗೈ ಬಲೆನೇ ದೀಪೆರ್‌ಗೆತ್ತಾ ಓ ಆಲ್ವೆರ್
ಇನಿ ಬಲತ ಕೈತ ನಡುಬಿರೆಲ್‌ಗ್ ದೀಪೆರ್‌ಗೆನಾ ಮುತ್ತು ಮುದ್ರೆದ ಉಂಗಿಲ
ಐತಸಿಂಗಾರ ಪೆರಿಯ ಬಲ್ಮಾನ ಆಪೆರ್ಗ್ಗೆನಾ (ರಾಮಕ್ಕ ಮುಗೇರ್ತಿ)
ಆಣ್‌ಂಜೋವೆ ಪದ್ದೈ ಓ ಅಂಗೈ ಬಳೆಗೇ ಓ ಮುಂಗೈ ಸರಪೊಲೀ
ಗಾಲಿಪೆಂಟಿಗೆ ಓ ಪರೆಂಗಿ ಕೊಡೆಗೇ ಓ ಬೊಳ್ಳಿಕಟ್ಟಿ ಬೀಸತ್ತೀ
ಓ ಆಣ್‌ಂಜೋವೆ ಪದ್ದಯಿಂದ್ ಪಂಡೆರ್ ಅಜ್ಜೆರ್(ಕರ್ಗಿ ಶೆಡ್ತಿ)

ಕನ್ನಡಾನುವಾದ
ಬಂದಿಕಟ್ಟಿ ಧೋತ್ರ ಹಾಕುತ್ತಾರಂತೆ
ಜಿಂಕೆ ಬಣ್ಣದ ತರೆತ್ರ (ಮುಂಡಾಸು)ವಂತೆ ರಾಮ ಕೆಂಪಂತೆ
ಕಣ್ಣಿಗೆ ಕೋಲು ಮಯಿ ಕೊಯಿ ಸೆರಂಗಂತೆ
ಅಂಗೈ ಸರಪಳಿ ಮುಂಗೈ ಬಳೆ ಇಡುತ್ತಾರೆ ಓ ಆಳ್ವರು
ಬಲದ ಕೈಯ ನಡುಬೆರಳಿಗೆ ಇಡುತ್ತಾರೆ ಮುತ್ತು ಮುದ್ರೆಯ ಉಂಗುರ
ಐತ ಸಿಂಗಾರ ಪೆರಿಯ ಬಲ್ಮಾನ ಆಗುತ್ತಾರಂತೆ (ರಾಮಕ್ಕ ಮುಗ್ಗೇರ್ತಿ).

ಕರ್ಗಿಯವರ ಪಠ್ಯದಲ್ಲಿ
ಗಂಡಸಿನ ಆಭರಣ ಓ ಅಂಗೈ ಬಳೇ ಓ ಮುಂಗೈ ಸರಪಳಿ
ಗಾಲಿ ಪೇಂಟಿ ಓ ಫರಂಗಿ ಕೊಡೆ ಓ ಬೆಳ್ಳಿಕಟ್ಟಿದ ಬೀಸುಕತ್ತಿ
ಓ ಗಂಡಸಿನ ಆಭರಣವೆಂದರು ಅಜ್ಜನವರು.

ಈ ಮೇಲಿನ ಸಾಲುಗಳಿಂದ ಆ ಕಾಲದ ಬಂಟ ಯಜಮಾನನ ಉಡುಗೆ ತೊಡುಗೆಗಳು ಹೇಗಿತ್ತು ಎಂಬುದು ತಿಳಿಯುತ್ತದೆ. ಇನ್ನಿತರ ಆಭರಣಗಳ ಜೊತೆ ಸೊಂಟದಲ್ಲಿ ಬೆಳ್ಳಿ ಕಟ್ಟಿದ ಬೀಸುಕತ್ತಿಯೂ ಇತ್ತು ಎಂಬುದು ತಿಳಿಯುತ್ತದೆ. ಬಂಟರಲ್ಲಿ ಕ್ಷಾತ್ರತ್ವದ ಸಂಕೇತವಾದ ಸೊಂಟದಲ್ಲಿ ಕತ್ತಿ ಇಡುವ ಕ್ರಮ ತೀರ ಇತ್ತೀಚಿನವರೆಗೆ ಇತ್ತು ಎಂಬುದನ್ನು ಹಿರಿಯ ತಲೆಮಾರಿನವರು ನೆನಪಿಸಿಕೊಳ್ಳುತ್ತಾರೆ. ಬಂಟರ ಮದುವೆಗಳಲ್ಲಿ ಮದುಮಗ ಸೊಂಟದಲ್ಲಿ ಸಣ್ಣ ಚೂರಿಯನ್ನು ಇಟ್ಟು ಕೊಳ್ಳುತ್ತಿದ್ದುದು ತೀರ ಇತ್ತೀಚಿನವರೆಗೆ ಇತ್ತು.ಈಗ ಇದು ಇತಿಹಾಸ ಸೇರಿಹೋದ ವಿಚಾರವಾಗಿದೆ.

ಬಲ್ಯಾಯನಲ್ಲಿ ದಿನಕೇಳಿ ಮದುವೆಗೆ ದಿನ ನಿಶ್ಚಯಿಸುವ ವಿಚಾರ ಕರ್ಗಿಯವರ

ಪತ್ಯದಲ್ಲಿದ್ದರೆ ಶ್ಯಾಮ ಶೆಟ್ಟಿಯವರ ಕಾವ್ಯದಲ್ಲಿ ಪುಣ್ಕೆದಡಿ ತಂಬೂರಿ ಬ್ರಾಹ್ಮಣನಲ್ಲಿ ದಿನಮಾನ ಕೇಳಿದಾಗ ಅವರು "ನಾರಾಯಣ ಬೆರ್ಮೆರ್ಮಾಲವಾ ಪೊದು ಪತ್ತೊರಿ ಸಂಬಂಧ ನಡತ್ತ್ ಬರ್ಪುಜತ್ತೋ? (ನೆಂಟಸ್ತಿಕೆ ಮಾಡಬಹುದು ಆದರೆ ಸಂಬಂಧ ಬಹಳ ಕಾಲ ಉಳಿಯುವುದಿಲ್ಲವಲ್ಲಾ?) ಎಂದು ಅನುಮಾನಿಸುವ ವಿವರಗಳಿವೆ. ಅಜ್ಜನವರು ಮತ್ತೂ ವಿಮರ್ಶಿಸಿ ನೋಡಲು 'ಬಾಲೆ ಪೆದ್ದುವೊಲು ತೊಟ್ಟಿಲ್ ಕಟ್ಟುವೊಲು ಬೊಕ್ಕ ಪೊದು ರಡ್ಡಾಪುಂಡು (ಮಗು ಹೆರುತ್ತಾಳೆ ತೊಟ್ಟಿಲು ಕಟ್ಟುತ್ತಾಳೆ. ಆದರೆ ನೆಂಟಸ್ತಿಗೆ ಮುರಿಯುತ್ತದೆ– ಪುಟ. 38) ಎನ್ನುವ ವಿಚಾರ ಇದೆ. ಮುಂದೆ 9 ಮಾಗಣೆ 9 ಗ್ರಾಮದವರಿಗೆ ಹೇಳಿಕೆ ಮಾಡಿಸಿ ವಿಜೃಂಭಣೆಯಿಂದ ಸತ್ಯನಾಪುರದಲ್ಲಿಯೇ ಮದುವೆ ಕಾರ್ಯ ನಡೆಯುತ್ತದೆ. ಕರ್ಗಿ ಶೆಡ್ತಿಯವರ ಕಾವ್ಯದಲ್ಲಿ ಬಂಟ ಮದುವೆಗೆ ಸಂಬಂಧಿಸಿದ ವಿವರಗಳಾದ ಮದುವೆಗೆ ದಿನ ನೋಡುವುದು, ಮದುವೆಯ ಸಿದ್ಧತೆ, ಮದುವೆಗೆ ಲೆಪ್ಪು ಅಥವಾ ಕರೆಯುವುದು, ಹೆಣ್ಣ ದಿಬ್ಬಣ ಹೋಗುವುದು, ಮದುಮಕ್ಕಳ ಅಲಂಕಾರ, ಮದುಮಗ ಮದುಮಗಳ ಆಭರಣ ವಿಶೇಷಗಳು, ಮದುವೆಯ ಕ್ರಮ ಇವೆಲ್ಲವುಗಳ ಸುದೀರ್ಘ ವಿವರಗಳಿವೆ. ರಾಮಕ್ಕ ಮುಗೇರ್ತಿಯ ಸಂಧಿಯಲ್ಲಿ ಹಿಂದಿನ ಕಾಲದ ಮದುವೆಯ ಆಚರಣೆಯ ವಿವರಗಳು ದೊರೆಯುತ್ತವೆ. ಒಕ್ಕಲುಗಳನ್ನು ಕರೆಸಿ ಮದುವೆಗೆ ಮೇಲು ಚಪ್ಪರದ ತಯಾರಿ, ಅಡುಗೆಗೆ ಅಡ್ಕಳದ ಸಿದ್ಧತೆ, ಸಾಯೆತಿ ಸನ್ನಾಯದ (ಇತರ ಅಗತ್ಯ ಪರಿಕರಗಳ) ತಯಾರಿ, ನಾಲ್ಕು ತಾಯ ಮಕ್ಕಳನ್ನು ಕರೆದು ಒಂದೂ ಮನೆ ಬಿಡದಂತೆ ಅಡಿಕೆತಾಂಬೂಲ ಕೊಟ್ಟು ಮುಹೂರ್ತಕ್ಕೆ ಕರೆಯಲು ಹೇಳುವುದು, ಮದುಮಗಳ ಶೃಂಗಾರ ಹಾಗೂ ಮುಹೂರ್ತ, ಮದುಮಗನ ಮುಹೂರ್ತ, ಮೋಂದಲೆ ದೇಸೆ (ಮುಖ ಕ್ಷೌರದ ಸೇಸೆ) ಪೇರ್ ಮಂಜೊಲು (ತೆಂಗಿನ ಹಾಲು, ಅರಶಿಣ) ಮೈಗೆ ಹಚ್ಚುವುದು, ಮದುಮಗನ ಶೃಂಗಾರ, ಬಂಗಾರ ಬೆಳ್ಳಿಯ ಆಭರಣಗಳನ್ನು ತೊಡಿಸಿ ಸತ್ಯ ದಂಡಿಗೆಯಲ್ಲಿ ಕುಳ್ಳಿರಿಸಿ ಮದುಮಗನ ದಿಬ್ಬಣ ಸತ್ಯನಾಪುರದರಮನೆಗೆ ಹೊರಡುವುದು ಇತ್ಯಾದಿ ಇದೆ. ಈ ಪತ್ಯದಲ್ಲಿ ಮಾತ್ರ ಸತ್ಯನಾಪುರದ ಅರಮನೆ ಹಾಗೂ ಕಾಂತು ಪೂಂಜನ ಅರಮನೆ – ಹೀಗೆ ಎರಡೂ ಕಡೆ ವಿಜೃಂಭಣೆಯಿಂದ ಮದುವೆ ನಡೆಯುವುದನ್ನು ತಿಳಿಸುತ್ತದೆ. ಮದುವೆಯಲ್ಲಿ ಕಂಚು ಇರಿಸುವುದು, ಚಪ್ಪರ ಇಳಿಸುವ ಕ್ರಮ, ಊಟೋಪಚಾರ, ಹೆಣ್ಣೊಪ್ಪಿಸಿ ಕೊಡುವುದು – ಹೀಗೆ ಅನೇಕ ಸೂಕ್ಷ್ಮ ವಿಧಿಗಳನ್ನು ಈ ಪತ್ಯ ತಿಳಿಸುತ್ತದೆ. ಬಸಲೂರ ಅರಮನೆಗೆ ಬಂದ ದಿಬ್ಬಣ ಮತ್ತೆ ಅಲ್ಲಿ ಕಂಚಿ ಇಟ್ಟು ಸೇಸೆ, ಮುತ್ತನಲ್ಲಿ ಆರತಿ ಎಲ್ಲ ನಡೆದು ಊಟೋಪಚಾರವಾಗಿ ಮತ್ತೆ ಬಂದ ಹೆಣ್ಣನ್ನು ಎಲ್ಲರು ಸೇರಿ ಹೆಣ್ಣು ಇಳಿಸಿ (ಪೊಣ್ಣು ಜಪುಡಾದ್) ಕೊಡುತ್ತಾರೆ. ಸಿರಿಯ ದಂಡಿಗೆ ಮತ್ತೆ ಸತ್ಯನಾಪುರಕ್ಕೆ ಹೋಗುತ್ತದೆ. ಹಿಂದಿನ ಕಾಲದಲ್ಲಿ ಹೆಣ್ಣು ಹೋಗಿ ಹೆಂಗಸಾಗುವ ಮೊದಲೇ (ಋತಿಮತಿಯಾಗುವ) ಮದುವೆ ನಡೆಯುತ್ತಿದ್ದುದು ಸಾಮಾನ್ಯವಾಗಿತ್ತು. ಸಿರಿಯ ಮದುವೆಯೂ ಇದೇ ರೀತಿಯಲ್ಲಿ ಆಯಿತು. ಹೀಗೆ ಮದುವೆ ನಡೆದಾಗ ಹೆಣ್ಣೊಪ್ಪಿಸಿ ಕೊಟ್ಟ ಅನಂತರ ಹೆಣ್ಣನ್ನು ಗಂಡಿನ ಮನೆಗೆ ಕಳುಹಿಸಿ

ಅಂದೇ ಅವಳನ್ನು ತವರುಮನೆಗೆ ಕರೆದುಕೊಂಡು ಹೋಗುತ್ತಿದ್ದರು. ತವರುಮನೆಯಲ್ಲಿ ಅವಳು ಋತಿಮತಿಯಾದ ಅನಂತರ ಅವಳ ಗಂಡನಿಗೆ ಹೇಳಿ ಕಳುಹಿಸುತ್ತಿದ್ದರು. ಹೀಗಾಗಿ ತನ್ನವರನ್ನು ಕೂಡಿಕೊಂಡು ಆತ ಅತ್ತೆಯ ಮನೆಗೆ ಬರುವ ಸಂದರ್ಭವೇ 'ಮಾಮಿಸೂಕೆ' ಅಥವಾ 'ತೊಡಮನೆ'. 'ಮಾಮಿಸೂಕೆ' ಅಥವಾ 'ತೂಕೆ' ಅಂದರೆ ಅತ್ತೆಯನ್ನು ಅಳಿಯ ಮದುವೆಯ ಅನಂತರ ಮೊದಲ ಬಾರಿ ಕಾಣಲು ಬರುವುದು ಎಂದರ್ಥ. 'ತೊಡಮನೆ' ಅಥವಾ 'ತುಡಮಾನ' ಅಂದರೆ ಅಳಿಯನಿಗೆ ಈ ಸಂದರ್ಭ ಅತ್ತೆ ಕೊಡುವ ಮೊದಲ ಉಡುಗೊರೆ. ಇದು ಸಾಮಾನ್ಯವಾಗಿ ಚಿನ್ನದ್ದು ಆಗಿರುತ್ತದೆ. ಅಂದು ಅಳಿಯನಿಗೆ ಅತ್ತೆಯ ಮನೆಯಲ್ಲಿ ಬಾರೀ ಗೌಜಿಯ ಔತಣ ನಡೆಯಬೇಕು. ಸಾಮಾನ್ಯವಾಗಿ ಮಾಂಸಾಹಾರದ ಅಡುಗೆಯೇ ಇರುತ್ತದೆ. ಮಾಮಿಸಿಕೆ ಆಗದೆ ಅಳಿಯ ಅತ್ತೆಯ ಮನೆಗೆ ಹೋಗಬಾರದೆಂಬ ನಿಷೇಧ ಇದೇ ಕಾರಣಕ್ಕೆ ಬಂದಿದೆ. ಲೀಲಾ ಅವರ ಪಠ್ಯದಲ್ಲಿ ಸಂಕರುಪೂಂಜೆದಿಯು ಸಿರಿಯ ದಿಬ್ಬಣವನ್ನು ಬಸಲೂರಿಗೆ ತರುವಂತೆ ಹೇಳಿ ಬಸಲೂರಲ್ಲಿ ಮದುವೆ ನಡೆಯುವ ವಿವರಗಳನ್ನು ನೀಡುತ್ತದೆ.

ಮದುವೆಯ ಸಂದರ್ಭ ಅಜ್ಜನವರು ಬಹಳ ದುಃಖಿಸುತ್ತಾರೆ. ದಿಕ್ಕುದೆಸೆ ಇಲ್ಲದವ ನಾನು. ಸತ್ಯನಾಪುರದ ಹೆಣ್ಣನ್ನೂ ಮಣ್ಣನ್ನೂ ಧಾರೆಯೆರೆದು ಕೊಟ್ಟಿದ್ದೇನೆ. ಓ ಸತ್ಯನಾಪುರದರಮನೆ ಬಾಳಿಸಿದರೆ ಬಸಲೂರಿನರಮನೆಯನ್ನು ಬೆಳಗಿಸಬೇಕು. ಬಸಲೂರಿನರಮನೆಯನ್ನು ಬಾಳಿಸಿದರೆ ಸತ್ಯನಾಪುರದರಮನೆಯನ್ನು ಬೆಳಗಿಸಬೇಕು ಕಾಂತು ಪೂಂಜ ಎಂದರು. ಸಿರಿಯ ಸರ್ವ ರಕ್ಕೋಲೆಯನ್ನು ನಿಮಗೆ ಒಪ್ಪಿಸಿದ್ದೇನೆ ಎಂದು ಸಂಕರು ಪೂಂಜೆದಿಗೆ ಹೇಳಲು ಅಜ್ಜನವರು ಸ್ಮೃತಿ ತಪ್ಪುವ ವಿಚಾರ ಕರ್ಗಿಯವರ ಪಠ್ಯದಲ್ಲಿದೆ.

ಶ್ಯಾಮರಾಯ ಶೆಟ್ಟಿಯವರ ಕಾವ್ಯದಲ್ಲಿ ಸಿರಿಗೆ ಎರಡನೇ ಮದುವೆಯ ಯೋಗವಿದೆ ಎಂದು ಜ್ಯೋತಿಷ್ಯದಲ್ಲಿ ತಿಳಿದುಬಂದಿರುವುದರಿಂದ ಇದಕ್ಕೆ ಪರಿಹಾರವಾಗಿ ಹಾಗೂ ಹೆಣ್ಣು ಮೈ ನೆರೆಯುವ ಮೊದಲೇ ಮದುವೆ ಮಾಡುತ್ತಿರುವುದರಿಂದ ಇದರ ದೋಷವನ್ನು ತೆಗೆಯಲು ಹೆಣ್ಣಿಗೂ ಮಣ್ಣಿಗೂ ದಾರೆ ಹಾಗೂ ಗಂಡಿಗೂ ಬಾಳೆಗೂ ದಾರೆ (ಮದುವೆ) ನಡೆಸುವ ವಿವರಗಳು ಈ ಕೆಳಗಿನಂತಿದೆ.

ತುಳುಪಠ್ಯ

ನಾರಾಯಿನ ದೇವೆರೆ ಬೆರ್ಮೆರೇ ಈರ್ ಕೊರಿ ಗಂಟ್
ಆಣಗ್ಲಾ ಪೊಣ್ಣಗ್ಲಾ ದಾರೆ ಮೈತ್‌ಜೆನೇ
ಮಣ್ಣ್‌ಗಾ ಪೊಣ್ಣಗಾ ದಾರೆ ಮೈತ್‌ನೆದೇ
ಆಣಗಾ ಬಾರೆಗಾ ದಾರೆ ಮೈತ್‌ನೆದೇ
ಪೊಣ್ಣ್ ಪೋತ್‌ಜಿ ಪೊಣ್ಜೊವು ಆತ್‌ಜಿದೋ
ಅಯಿತ್ತ ದಸದೋಸೊಗು ಮಲ್ತಿ ಕಟ್ಟ್‌ಂದ್ ಅಜ್ಜೆರ್ ಪನ್ಪಿನೊದೋ

ಕನ್ನಡಾನುವಾದ

ನಾರಾಯಣ ದೇವರು ಬೆರ್ಮರೇ, ನೀವು ಕೊಟ್ಟ ಗಂಟು ಇದು
ಗಂಡಿಗೂ ಹೆಣ್ಣಿಗೂ ಧಾರೆ ಎರೆಯಲಿಲ್ಲ
ಮಣ್ಣಿಗೂ ಹೆಣ್ಣಿಗೂ ಧಾರೆ ಎರೆದೆನಲ್ಲಾ
ಗಂಡಿಗೂ ಬಾಳೆಗೂ ಧಾರೆ ಎರೆದೆನಲ್ಲಾ
ಹೆಣ್ಣುಹೋಗಿ ಹೆಂಗಸಾಗದಿರುವ (ಋತಿಮತಿಯಾಗದಿರುವ)

ದಶದೋಷಕ್ಕೆ ಮಾಡಿರುವ ಕಟ್ಟು ಇದು ಎಂದು ಅಜ್ಜನವರು ಹೇಳುತ್ತಾರೆ (ಶ್ಯಾಮರಾಯ ಶೆಟ್ಟಿ, ಪುಟ-40). ಈ ರೀತಿಯ ಪರಿಹಾರದಿಂದ ಸಿರಿ ಮುಂದೆ ಬೇಗನೆ ಋತುಮತಿಯಾಗುತ್ತಾಳೆ. ರಾಮಕ್ಕ ಅವರ ಪಠ್ಯವು ಹೆಣ್ಣಿನ ಮನೆಯಾದ ಸತ್ಯನಾಪುರದರಮನೆಯಲ್ಲಿ ಸಿರಿಯ ಮದುವೆ ನಡೆಯುವುದನ್ನು ತಿಳಿಸುತ್ತದೆ. ಈ ಸಂದರ್ಭ ಅಜ್ಜನವರು ನನಗೆ 'ಆಣಾಂಡಲಾ ಈಯೆ ಮಗಾ ಪೊಣ್ಣಾಂಡಲಾ ಈಯೆ' (ಗಂಡಾದರೂ ನೀನೆ ಮಗಾ ನನಗೆ ಹೆಣ್ಣಾದರೂ ನೀನೆ) ಎಂದು ಹೇಳಿ ಕಾಂತಾಳ್ವನಿಗೆ ಧಾರೆಯೆರೆದು ಕೊಡುತ್ತಾರೆ. ಈ ಸಂದರ್ಭ ಅಜ್ಜನವರು ದುಃಖಿಸಿ

ತುಳುಪಠ್ಯ

ಎನ್ನ ಕೊಂಡಾಟೊದ ಪುಲ್ಲಿ ಕೇನ್‌ಲಾ
ಹಕ್ಕ್ ಬಾರಾಂದ್ ಪನ್ಪುನ ಈ ಇಲ್ಲಗ್ ಹಕ್ಕ್‌ಬಾರಲಾಂಡ್
ನಿನ್ನ ಅರಮನೆ ಆದಿ ಬಸಲೂರುಲಾಂಡ್
ಅರ್ದಾಂಡ್ ಮಗಾ ರಡ್ಡಿಲ್ಲ್‌ಲಾ ಪಾಲಾಂಡ್ ನಿಕ್ಕ್‌ಂದ್ ಪಂಡೆರ್

ಕನ್ನಡಾನುವಾದ

ನನ್ನ ಕೊಂಡಾಟದ ಮೊಮ್ಮಗಳು ನೀನು ಕೇಳು
ಹಕ್ಕುಬಾರ ಎನ್ನುವುದು ಈ ಮನೆಯಲ್ಲಿ ನಿನಗೆ ಹಕ್ಕು ಬಾರವೂ ಆಯಿತು
ನಿನ್ನ ಅರಮನೆ ಆದಿ ಬಸಲೂರೂ ಆಯಿತು
ಅರ್ಧವಾಯಿತು ಮಗ ಎರಡು ಮನೆಯೂ ಪಾಲಾಯಿತು ನಿನಗೆಂದರು.

ಆಮೇಲೆ ಸಿರಿ ಋತುಮತಿಯಾಗುತ್ತಾಳೆ. ಋತುಮತಿಯಾದುದರ ಆಚರಣೆಯ ವಿಧಿಯ ವಿವರಗಳು ಇಲ್ಲಿ ಸುದೀರ್ಘವಾಗಿ ಬಂದಿದೆ.

ಅಮೃತ ಸೋಮೇಶ್ವರರ ಸಂಗ್ರಹದ ಪಠ್ಯದಲ್ಲಿ ಸಿರಿಯನ್ನು ಸ್ವತಃ ಅತ್ತೆ ಸಂಕರು ಪೂಂಜೆದಿಯೇ ಬಂದು ತನ್ನ ಮಗನಿಗೆ ಮದುವೆ ಮಾಡಿಕೊಡುವಂತೆ ಪ್ರಸ್ತಾವಿಸುವ ವಿವರಗಳಿವೆ. ಮದುವೆಯ ನಿಶ್ಚಿತಾರ್ಥವಾಗಿ ವೀಳ್ಯ ಅಡಿಕೆ ಬದಲಾಯಿಸಿಕೊಂಡ

ಅನಂತರ ಮದುವೆಗೆ ದಿನ ಇಡುತ್ತಾರೆ. ಈ ದಿನ ಹೇಗಿದೆಯೆಂದರೆ ಸಾಮಾನ್ಯವಾಗಿ ನಿಷೇಧದ ದಿನವಾಗಿದೆ.

ತುಳು ಪಠ್ಯ

ಮದಿಮೆಗ್ ಅದಿಕುದಿ ದೀವೊಂಡೆರ್
ಬಾರೊಡು ಬಾರ ಅಂಗಾರೆ ಬಾರೊಡು ಸಿಂಗಂದ ರಾಸಿಡ್
ಅಮಾಸೆದ ಫಲೊಟ್ಟು ಘಳಿಗೆ ಮೂರ್ತೊಗು
ಕೈಮುಟ್ಟು ಕೈಧಾರೆ ಮೆಯಿಮುಟ್ಟು ಮೆಯಿ ದೇಸೆಂದ್
ದಿನ ಮೂರ್ತ ದೀಯೆರ್

ಕನ್ನಡಾನುವಾದ

ಮದುವೆಗೆ ದಿನ ಮುಹೂರ್ತ ಇಟ್ಟುಕೊಂಡರು
ವಾರದಲ್ಲಿ ಶುಭ ವಾರವಾದ ಮಂಗಳವಾರದಂದು ಸಿಂಹ ರಾಶಿಯಲ್ಲಿ
ಅಮವಾಸ್ಯೆಯ ಫಲದಲ್ಲಿ ಗಳಿಗೆ ಮುಹೂರ್ತದಲ್ಲಿ
ಕೈಮುಟ್ಟಿ ಕೈದಾರೆ ಮೆಯಿ ಮುಟ್ಟಿ ಮೆಯಿ ಸೇಸೆಗೆ
ದಿನ ಮುಹೂರ್ತ ಇಟ್ಟರು.

ಮಂಗಳವಾರ, ಅಮವಾಸ್ಯೆಯ ಫಲಗಳಲ್ಲಿ ಸಾಮಾನ್ಯವಾಗಿ ವಿವಾಹದಂತಹ ಮಂಗಳ ಕಾರ್ಯಗಳು ನಡೆಯುವುದಿಲ್ಲ. ಸಿರಿಯ ಮದುವೆಗೆ ಜ್ಯೋತಿಷಿ ಈ ರೀತಿಯ ನಿಷೇಧದ ಮುಹೂರ್ತವನ್ನೇ ನೀಡಬೇಕಾದರೆ ಇವಳ ವೈವಾಹಿಕ ಬದುಕು ಮುಂದೆ ಮುರಿದು ಬೀಳುವ ಸೂಚನೆಯೇ? ಅಮೃತರ ಪಠ್ಯದಲ್ಲಿ ಮದುವೆಯ ಕಾರ್ಯ ಮುಗಿಸಿ ಹೆಣ್ಣೊಪ್ಪಿಸಿ ಕೊಡುವ ವಿವರಗಳು ಈ ರೀತಿ ಇವೆ.

ತುಳುಪಠ್ಯ

ಅರಿಯ ಬನ್ನಾಕುಲೆ ಬರಿತ ಸತ್ಯಮಲೋಕಂದ ಬಾಲಕ್ಕೆ ಸಿರಿನ್
ಬಸಲೂರ ಬತ್ತಕೇರಿದ ಎರಮನೆದ ಪುತ್ರ ಬನ್ನಾಕುಲೆ ಬರಿತ
ಬಾಲೆ ಕಾಂತುಪೂಂಜೆರೆಗ್ ಪೊಣ್ಣು ಒಚ್ಚಿದ್ ಕೊರ್ಯೆರ್

ಕನ್ನಡಾನುವಾದ

ಅರಿಯಬನ್ನಾಯ ಬಳಿಯ(ವಂಶ ಮೂಲದ) ಸತ್ಯಮಲೋಕದ ಬಾಲಕ್ಕೆ ಸಿರಿಯನ್ನು ಬಸಲೂರ ಬತ್ತಕೇರಿಯ ಅರಮನೆಯ ಪುತ್ರ ಬನ್ನಾಯ ಬಳಿಯ(ವಂಶ ಮೂಲದ) ಮಗು ಕಾಂತುಪೂಂಜನಿಗೆ ಹೆಣ್ಣು ಒಪ್ಪಿಸಿಕೊಟ್ಟರು.

ಬಹುಶಃ ಹಿಂದಿನ ಕಾಲದಲ್ಲಿ ನಿಶ್ಚಿತಾರ್ಥಕ್ಕೆ ಮೊದಲು ಗಂಡು ಹೆಣ್ಣಿನ ಬಳಿ (ವಂಶಮೂಲ) ತಿಳಿದುಕೊಳ್ಳುವುದು ಕ್ರಮ. ಮದುವೆಯ ಅನಂತರ ಹೆಣ್ಣೊಪ್ಪಿಸಿ ಕೊಡುವಾಗಲೂ ಗಂಡು ಹೆಣ್ಣಿನ ಬಳಿಗಳನ್ನು ತಿಳಿಸಿ ಕೊಡುವುದು ವಿವಾಹ ಸಂಬಂಧ ಗಳಲ್ಲಿ ಬಳಿಯ ಪ್ರಾಮುಖ್ಯತೆ ಎಷ್ಟಿತ್ತೆಂಬುದನ್ನು ತಿಳಿಸುತ್ತದೆ. ಅಮೃತರ ಪಠ್ಯದಲ್ಲಿ ಮಾತ್ರ ಇದು ಪ್ರಸ್ತಾವವಾಗಿರುವುದನ್ನು ಕಾಣುತ್ತೇವೆ.

ಸಿರಿ ಋತುಮತಿಯಾಗುವುದು, ಇದರ ಆಚರಣೆ, ಗರ್ಭವತಿಯಾಗುವುದು, ಸೀಮಂತ ಇತ್ಯಾದಿ

ಕರ್ಗಿಯವರ ಕಾವ್ಯ ಸಿರಿ ಮದುವೆಯ ಅನಂತರ ಒಂದುದಿನ ದನದ ಕೊಟ್ಟಿಗೆಗೆ ಹಾಲು ಕರೆಯಲು ಹೋದಲ್ಲಿ ಋತುಮತಿಯಾಗುವುದನ್ನು ತಿಳಿಸಿ ಅಕ್ಕಪಕ್ಕದ ಹೆಂಗಸರು ಹಾಗೂ ಮಡಿವಾಳಗಿತ್ತಿ ಚೆಲುವೆಯನ್ನು ಅಜ್ಜನವರು ಬರಹೇಳಿ ಮೆಯಿನೆರೆದ ಆಚರಣೆಯನ್ನು ಮಾಡಿಸಿದ ವಿವರಗಳನ್ನು ನೀಡುತ್ತದೆ. (ಇದೀಗ ಬಂಟರಲ್ಲಿ ಇತಿಹಾಸ ಸೇರಿಹೋದ ಇಂತಹ ಆಚರಣೆಗಳ ವಿವರಗಳನ್ನು ಕರ್ಗಿಯವರು ನೀಡುತ್ತಾರೆ). ಆ ನಂತರ ಅಜ್ಜನವರು ಸಿರಿಯನ್ನು ಸತ್ಯನಾಪುರದ ಅರಮನೆಗೆ ಕರೆದುಕೊಂಡು ಹೋಗುತ್ತಾರೆ. ಸಿರಿ ಲಂಕೆಲೋಕನಾಡಿಗೆ ಹೋಗಿ ದೇವರಿಗೆ ಹಣ್ಣುಕಾಯಿ ಮಾಡಿಸಿ ಕ್ಷೇಮಕಲ್ಲ ಪಂಜುರ್ಲಿ ದೈವದ ಗುಡಿಗೆ ಹೋಗಿ ಪ್ರಸಾದ ಸ್ವೀಕರಿಸಿ ಬರುತ್ತಾಳೆ. ಕಾಂತುಪೂಂಜ ಬಂದು ಸಿರಿಯನ್ನು ಬಸಲೂರಿಗೆ ಕರೆದುಕೊಂಡು ಹೋಗುತ್ತಾನೆ. ಅತ್ತೆ ಸತ್ಯನಾಪುರದ ಯೊಗಕ್ಷೇಮ ವಿಚಾರಿಸಿ ಬಸಲೂರ ಬತ್ತಕೇರಿ ಮಕ್ಕಳಿಲ್ಲದ ಮನೆ ಎಂದು ಸಂತಾನದ ಕುಡಿ ಬೇಕೆಂದು ದೇವರು ಬೆರ್ಮೆರನ್ನು ಪ್ರಾರ್ಥಿಸಿ ಹರಕೆ ಹೇಳಿ ಕೊಳ್ಳುತ್ತಾಳೆ. ಕಾಂತು ಪೂಂಜನ ಹೆಣ್ಣು ಮರುಳುತನದ ಬಗೆಗೂ ತಾಯಿ ಎಚ್ಚರಿಸುತ್ತಾಳೆ.

ತುಳುಪಠ್ಯ

ಕಾಲ್ತೆ ಪೋಯಂಡ ಮಗಾ ಬೈಯ್ಯಗ್ ಬರ್ಪಾ
ಬಯ್ಯಡ್ ಪೋಯಂಡ ಮಗಾ ಕಾಲ್ತೆಡ್ ಬರ್ಪನೇ ಓ ಕಾಂತಾಲ್ವಾ
ಓಡೆಗ್ ಪೋಪನೇ ಒಲ್ತುಡ್ದು ಬರ್ಪನೇ ಈ --------

ಕನ್ನಡಾನುವಾದ

ಬೆಳಗ್ಗೆ ಹೋದರೆ ಮಗಾ ನೀನು ಸಂಜೆ ಬರುತ್ತೀಯಾ
ಸಂಜೆ ಹೋದರೆ ಬೆಳಗ್ಗೆ ಬರುತ್ತೀಯಾ ಓ ಕಾಂತಾಳ್ವಾ
ಎಲ್ಲಿಗೆ ಹೋಗಿ ಎಲ್ಲಿಂದ ಬರುತ್ತಿಯಾ ನೀನು

ಎಂಬುದಾಗಿ ತಾಯಿ ಎಚ್ಚರಿಸುತ್ತಾಳೆ.

ಆಗ ಕಾಂತಾಳ್ವ ತಾಯಿಯವರೇ, ಇದು ನಿಮ್ಮ ಸ್ವಂತ ಆಲೋಚನೆಯಲ್ಲಿ ಕೇಳುವುದೇ ಅಥವಾ ನಿಮ್ಮ ಸೊಸೆಯು ನಿಮ್ಮಿಂದ ಈ ಮಾತನ್ನು ಹೇಳಿಸುವುದೇ ಎನ್ನಲು ಸಿರಿ ಅತ್ತೆಯವರೆ ಅಂಥ ಮಾತನ್ನು ಕೇಳ ಬೇಡಿ. ಅವರು ಎಲ್ಲಿ ಹೋಗಿ ಎಲ್ಲಿಂದ ಬಂದರೂ ನನ್ನ ಸತ್ಯ ನನ್ನನ್ನು ಬಿಡದು ಎಂದು ಹೇಳಿ ಸಿರಿ ಗಂಡನನ್ನು ಕುರಿತು ಸುಮ್ಮನೆ ನನ್ನನ್ನು ಅನುಮಾನಿಸಬೇಡಿ ಎನ್ನುತ್ತಾಳೆ.

ಹೀಗಿರಲು ಒಂದು ದಿನ ಸಿರಿ ಗರ್ಭವತಿಯಾಗುತ್ತಾಳೆ. ಗರ್ಭ ಬೆಳೆದು ಏಳು ತಿಂಗಳು ತುಂಬಲು ಅಜ್ಜನವರು ಹಾಗು ಕಾಂತಾಳ್ವ ಸೀಮಂತಕ್ಕೆ ಒಳ್ಳೆಯ ದಿನಕೇಳಲು ಬಲ್ಯಾಯ(ಜ್ಯೋತಿಷಿ)ನಲ್ಲಿಗೆ ಹೋಗುತ್ತಾರೆ. ಹಿಂತಿರುಗುವ ವೇಳೆ ಕಡೆರಿಕಾರ್ಕಳದ ಕೊಂಕಣಿಯ ಅಂಗಡಿಯಿಂದ ಸೀಮಂತಕ್ಕೆ ಒಳ್ಳೆಯ ಪಟ್ಟೆಸೀರೆಯನ್ನು ಖರೀದಿಸಿ ಕಾಂತುಪೂಂಜನ ಕೈಯಲ್ಲಿ ಅಜ್ಜನವರು ನೀಡಿ "ಎಲ್ಲೂ ನೆಲದ ಮೇಲೆ ಇಡಬೇಡ, ಅರಮನೆಗೆ ತೆಗೆದುಕೊಂಡು ಹೋಗಿ ಕಲ್ಲಕಲೆಂಬಿ (ಕಲ್ಲಿನ ದಾಸ್ತಾನು ಪೆಟ್ಟಿಗೆ)ಯ ಒಳಗೆ ಬೀಗದೊಳಗೆ ಇಡು, ಯಾರ ಕಣ್ಣಿಗೂ ತೋರಿಸಬೇಡ" ಎಂದು ಹೇಳಿ ಕೊಡುತ್ತಾರೆ. ಕಾಂತಾಳ್ವ ಬಸಲೂರ ದಾರಿ ಹಿಡಿದು ಹೊರಟು ಬರುತ್ತಾನೆ.

ಕಾಂತುಪೂಂಜ ಬಸಲೂರ ದಾರಿಹಿಡಿದು ಬರುತ್ತಿರಲು ಸೂಳೆಸಿದ್ದು ಕಾಂತುಪೂಂಜ ನನ್ನು ಕಣ್ಣಸನ್ನೆಯಿಂದ ಕರೆಯುತ್ತಾಳೆ. ಕಾಂತು ಪೂಂಜ ಅವಳ ಮನೆಗೆ ಹೋಗಲು ಅವನನ್ನು ಉಪಚರಿಸುತ್ತಾಳೆ. ಆಯಾಸಗೊಂಡ ದೇಹಕ್ಕೆ ನಿದ್ದೆ ಆವರಿಸಲು ಸೂಳೆಸಿದ್ದು ಸಿರಿಯ ಸೀಮಂತದ ಸೀರೆಯನ್ನು ಉಟ್ಟು ಕಾಂತುಪೂಂಜನ ಬಳಿಗೆ ಬಂದು 'ನಿಮ್ಮ ಪತ್ನಿ ಚಂದವೇ ನಾನು ಚಂದವೇ' ಎಂದು ಕೇಳುತ್ತಾಳೆ. ಇದರಿಂದ ವಿಚಲಿತನಾದ ಕಾಂತುಪೂಂಜ ಆ ಸೀರೆಯನ್ನು ಹಾಗೆಯೇ ಮಡಚಿ ಮೆಲ್ಲನೆ ತಂದು ಮನೆಯೊಳಗೆ ಇಡುತ್ತಾನೆ. ಆದರೆ ರಾಮಕ್ಕ ಮುಗ್ಗೇರ್ತಿಯವರ ಪಾಡ್ದನದಲ್ಲಿ ಸೀಮಂತಕ್ಕೆ ಸೀರೆ ತೆಗೆದುಕೊಂಡು ಬರುತ್ತಿದ್ದ ಕಾಂತುಪೂಂಜ ಸೂಳೆ ಸಿದ್ದುವನ್ನು ಆಮಂತ್ರಿಸಲೆಂದು ಅವಳ ಮನೆಗೇ ಹೋಗುವ ವಿವರಗಳಿದ್ದರೆ ಗೋಪಾಲ ನಾಯ್ಕ ಹಾಗೂ ಪೊಳಲಿ ಶೀನಪ್ಪ ಹೆಗ್ಗಡೆಯವರ ಪಠ್ಯದಲ್ಲಿ ಕಾಂತು ಪೂಂಜನನ್ನು ಸೂಳೆಯೇ ಕರೆಯುವ ವಿವರಗಳಿವೆ. ಹೆಚ್ಚಿನ ಪಠ್ಯಗಳು ಈಕೆಯ ಹೆಸರನ್ನು ಸೂಳೆಸಿದ್ದು ಎಂಬುದಾಗಿ ಹೆಸರಿಸಿದರೆ ಶೀನಪ್ಪ ಹೆಗ್ಗಡೆಯವರ ಪಠ್ಯದಲ್ಲಿ ಕಿಣ್ಣಿಲ್ಲ ಸೂಳೆ ಎಂದಿದೆ.

ಕರ್ಗಿಶೆಡ್ತಿ, ರಾಮಕ್ಕ ಮುಗ್ಗೇರ್ತಿ ಹಾಗೂ ಗೋಪಾಲ ನಾಯ್ಕರ ಕಾವ್ಯಗಳಲ್ಲಿ ಸಿರಿಯ ಸೀಮಂತವು ಬಸಲೂರ ಅರಮನೆಯಲ್ಲಿ ನಡೆದುದರ ಕುರಿತು ತಿಳಿಸಿದರೆ ಅಮೃತ ಸೋಮೇಶ್ವರರ ಪಠ್ಯವು ಸಿರಿ ಸತ್ಯನಾಪುರದಲ್ಲೇ ಇದ್ದು ಸೀಮಂತ ಅಲ್ಲೇ ನಡೆದ ಕುರಿತು ತಿಳಿಸುತ್ತದೆ. ಪೊಳಲಿ ಶೀನಪ್ಪ ಹೆಗ್ಗಡೆಯವರ ಪಠ್ಯದಲ್ಲಿ ಸೀಮಂತವನ್ನು ಸತ್ಯನಾಪುರದ ಅರಮನೆಯಲ್ಲಿ ಮಾಡೋಣ. ನೀವು ದಿಬ್ಬಣ ಬನ್ನಿರಿ ಎಂದು ಅಜ್ಜನವರು ತಿಳಿಸಲು ಕಾಂತು ಪೂಂಜ ಇದಕ್ಕೆ ನನ್ನ ತಾಯಿಯವರು ಒಪ್ಪುವುದಿಲ್ಲ. ಮದುವೆಯನ್ನು ಹೇಗೂ ನೀವೇ ಮಾಡಿದ್ದೀರಿ. ಸೀಮಂತವನ್ನು ಬಸಲೂರ ಬೀಡಿನಲ್ಲಿ ತಾಯಿಯವರು

ಮಾಡಿಸುತ್ತಾರೆ ಎನ್ನುತ್ತಾನೆ (ಪುಟ– 305).

ಶ್ಯಾಮರಾಯ ಶೆಟ್ಟಿಯವರ ಪಠ್ಯವು ಸ್ವಲ್ಪ ಭಿನ್ನ ವಿವರಗಳನ್ನು ನೀಡುತ್ತವೆ. ಮದುವೆಯಾಗಿ ಸಿರಿ ದಂಡಿಗೆ (ಪಲ್ಲಕ್ಕಿ)ಯಲ್ಲಿ ಕುಳಿತು ಬಸಲೂರ ಅರಮನೆಗೆ ಹೋಗುತ್ತಾಳೆ. ಬಸಲೂರ ಬತ್ತಕೇರಿಯ ಬಾಳೆ ಹಾಕಿರುವ ಬಾಕಿಮಾರು ಗದ್ದೆಯ ಹೂ ಹಾಕಿರುವ ಪುದ್ವಾರ್ ಕಂಬಳ (ತುಳುವಿನಲ್ಲಿ 'ಪುದ್ವಾರ್' ಎಂಬುದಾಗಿ ಹೊಸ ಅಕ್ಕಿ ಊಟಕ್ಕೆ ಹೆಸರು)ದ ಬದುವಲ್ಲೆ ಸಾಗುವಾಗ ಸಿರಿಯ ಹೊಟ್ಟೆಗೆ 'ಸೂಲ ಬೂರ್‌ದ್ ಪೋಂಡ್' (ಋತುಮತಿಯಾಗುವ ಸೂಚನೆಯ ನೋವು ಕಾಣಿಸಿಕೊಂಡಿತು). ಸಿರಿಯ ದಂಡಿಗೆಯನ್ನು ಇಳಿಸಿ ಆಕೆಗೆ ಕೈ ನೀಡಲು ಆಕೆ ಕೈಕೊಡಲು ಒಪ್ಪುವುದಿಲ್ಲ. ತಾನೇ ನಡೆದುಕೊಂಡು ಅರಮನೆಗೆ ಹೋಗುತ್ತಾಳೆ. ಅಲ್ಲಿ ಒಂದು ವರ್ಷ ಒಂದು ತಿಂಗಳಾಗು ವಾಗ ಋತುಮತಿಯಾಗುತ್ತಾಳೆ. ಮಡಿವಾಳ ಚೆಲುವೆ ಬಂದು ಅಜ್ಜನವರಿಗೆ ವಿಷಯ ತಿಳಿಸಲು ಅವರು ಸಂತೋಷಗೊಂಡು ಆಕೆಗೆ ದನಕರು, ತಾಮ್ರದ ಬಟ್ಟಲು, ಉಡಲು ವಸ್ತ್ರ ಇತ್ಯಾದಿ ದಾನ ಕೊಟ್ಟು ಕಳುಹಿಸುತ್ತಾರೆ. ಅಜ್ಜನವರು ಬಸಲೂರಿಗೆ ಬಗೆ ಬಗೆಯ ಸಾಮಾನುಗಳನ್ನು ಕಳುಹಿಸಿಕೊಡುತ್ತಾರೆ. ಸಂಕರು ಪೂಂಜೆದಿ ಇದನ್ನೆಲ್ಲ ಒಳಗೆ ತೆಗೆದಿಡಲು ನನಗೆ ಪುರುಸೋತ್ತು ಇಲ್ಲ ಎಂದು ಗೊಣಗುತ್ತಾಳೆ. ಇದರಿಂದ ಅತ್ತೆಗೆ ಸೊಸೆಯ ಮೇಲೆ ಸಮಾಧಾನವಿಲ್ಲದಿರುವುದು ತಿಳಿಯುತ್ತದೆ. ಸಿರಿ ತಾನೊಬ್ಬಳೇ ಇದೆಲ್ಲವನ್ನೂ ತೆಗೆದಿರಿಸುತ್ತಾಳೆ. ಹೀಗಿರಲು ಒಂದು ದಿನ ಸಿರಿ ಗರ್ಭವತಿಯಾಗುತ್ತಾಳೆ. ಅಂಗಳ ಗುಡಿಸುವ ಸಂದರ್ಭ ಅತ್ತೆಗೆ ಈ ವಿಚಾರ ತಿಳಿದು ಸಿರಿಯನ್ನು ವಿಚಾರಿಸಲು ತನಗೀಗ ಏಳು ತಿಂಗಳು ಕಳೆದು ಏಳು ದಿನವಾಯಿತು ಎನ್ನುತ್ತಾಳೆ. ಮಗ ಕಾಂತುಪೂಂಜ ನನ್ನು ಕರೆದು ಸಿರಿಗೆ ಸೀಮಂತ ಮಾಡಬೇಕೆಂದು ತಿಳಿಸುತ್ತಾಳೆ. ಕಾಂತು ಪೂಂಜನನ್ನು ಸೀಮಂತಕ್ಕೆ ದಿನ ಕೇಳಲು ಅಜ್ಜನವರಲ್ಲಿಗೆ ಕಳುಹಿಸುತ್ತಾಳೆ. ಸಿರಿ ಗರ್ಭಿಣಿಯಾದ ಸುದ್ದಿ ತಿಳಿದ ಅಜ್ಜನವರು ಸಂತೋಷಗೊಂಡು

ತುಳುಪಠ್ಯ

ದೇವೆರ್ ಪಂಡಿಲೆಕ ಎನ್ನ ಆದ್ ಬತ್ತ್ಂಡ್
ಸಂತಾನ ಕೊಡಿದ್ ಬರ್ಪುಂಡು ಸಂಸಾರ ದಿಂಜುಂಡುಂದು
ದೇವೆರ್ ಬೆರ್ಮೆರ್ ಪಂಡೆರ್ ಅಂಚನೇ ಆದ್ ಬತ್ತ್ಂಡ್

ಕನ್ನಡಾನುವಾದ

ದೇವರು ಹೇಳಿದಂತೆ ನನ್ನದು ನಡೆದು ಬಂತು
ಸಂತಾನ ಮೊಳೆತು ಬರುತ್ತದೆ ಸಂಸಾರ ತುಂಬುತ್ತದೆ ಎಂದು
ದೇವರು ಬೆರ್ಮೆರ್ ಹೇಳಿದ್ದರು, ಅಂತೆಯೇ ನಡೆದುಬಂತು (ಪುಟ 48).

ಅಜ್ಜನವರು ಸತ್ಯನಾಪುರದಿಂದ ಬಸಲೂರಿಗೆ ಸೀಮಂತಕ್ಕೆ ಹೊರೆ ಕಳುಹಿಸಬೇಕೆಂದು ಹೇಳುತ್ತಾರೆ. ಅದು ಹೇಗಿರಬೇಕೆಂದರೆ 'ಸತ್ಯನಾಪುರದರಮನೆಡ್ ಕಡೆ ಆವೊಡು, ಬಸ್ಲೂರುದ ಎರಮನೆಡ್ ಕೊಡಿ ಆವೊಡು, ಆತ್ ಪುದೆ ನಮ್ಮ ರಾಜ್ಯೊಡ್ದು ಪೋವೊಡು' (ಸತ್ಯನಾಪುರದ ಅರಮನೆಯಿಂದ ಆರಂಭಗೊಂಡು ಬಸಲೂರಿನ ಅರಮನೆಯಲ್ಲಿ ಅದರ ತುದಿ ಇರಬೇಕು. ಅಷ್ಟು ಹೊರೆ ನಮ್ಮ ರಾಜ್ಯದಿಂದ ಹೋಗಬೇಕೆನ್ನುತ್ತಾರೆ). ಕಾಂತು ಪೂಂಜ ಹಾಗೂ ಅಜ್ಜನವರು ಒಟ್ಟಾಗಿ ಹೋಗಿ ಸೀಮಂತಕ್ಕೆ ದಿನಮಾನ ಇಡುವುದು, ಸೀರೆ ತೆಗೆಯಲು ಕಡೆರಿ ಕಾರ್ಕಳದ ಬೊಲಿಯ ಸಂದ್ರಾಮು ಸೆಟ್ಟಿಯ ಅಂಗಡಿಗೆ ಹೋಗುವ ವಿಚಾರ ಎಲ್ಲ ಪಠ್ಯಗಳಂತೆ ಇದೆ. ಸೀರೆ ಹಿಡಿದುಕೊಂಡು ಬಸಲೂರ ದಾರಿಯಾಗಿ ಬರುತ್ತಿರಲು ಏಳು ಮಾಳಿಗೆಯ ಮೇಲೆ ಕುಳಿತು ಕೆಳಗಡೆ ಫಲಕ (Board) ಹಾಕಿ ಕುಳಿತಿದ್ದಾಳೆ ಸೂಳೆ ಸಿದ್ದು.

'ಮೀಸೆಕೊಂಡು ಪುಟ್ಟಿನಾಯೆ ಆಣ ಜಲ್ಮೊಗು ಬತ್ತಿನಾಯೆ ಎನಡ ಪಾತೆರ್ದ್ ಪೋವೊಡುಂದುದು ಸೂಲೆಸಿದ್ದು ಸಾದಿಸಾದಿ ಗೊಂಬೆರಾಟ ಮಲ್ಪೊದೊಲು' (ಮೀಸೆಯಿದ್ದು ಗಂಡುಜನ್ಮದಲ್ಲಿ ಹುಟ್ಟಿದವ ನನ್ನಲ್ಲಿ ಮಾತನಾಡಿ ಹೋಗಬೇಕೆಂದು ಸೂಳೆಸಿದ್ದು ದಾರಿದಾರಿಯಲ್ಲಿ ದೊಂಬರಾಟ ಮಾಡಿಸಿದ್ದಾಳೆ). ಇಷ್ಟು ಠೇಂಕಾರದ ಹೆಣ್ಣು ಯಾರೆಂದು ನೋಡಬೇಕೆಂದು ಆಳ್ವ ಅಲ್ಲಿಗೆ ಹೋಗುವ ವಿವರ ಇದೆ. ಉಳಿದ ವಿಚಾರಗಳು ಎಲ್ಲ ಪಠ್ಯಗಳಂತೆ ಸೀಮಂತದ ಸೀರೆಯನ್ನು ಸೂಳೆ ಸಿದ್ದು ಉಡುವುದು, ಆಳ್ವ ನನ್ನ ಮಾನ ತೆಗೆದೆ, ಮರ್ಯಾದೆ ತೆಗೆದೆ ಎಂದು ಹೇಳಿ ಮಡಚಿ ತಂದು ಕಲ್ಲ ಕಲೆಂಬಿಯಲ್ಲಿ ಇಡುವ ಚಿತ್ರಣ ಇದೆ.

ಇತ್ತ ಸೀಮಂತಕ್ಕೆ ದಿನ ಹತ್ತಿರ ಬಂದರೂ ತನ್ನ ಗಂಡ ಎಲೆಮರೆ ಕಾಯಿಮರೆ ಆಗುತ್ತಾನೆಯೇ ವಿನಃ ಸೀಮಂತದ ಏನೊಂದೂ ತಯಾರಿ ನಡೆಸದಿರುವುದನ್ನು ಕಂಡು ತಾಯಿ ವಿಚಾರಿಸಲು ಆಳ್ವ ಈ ರೀತಿ ಉತ್ತರಿಸುತ್ತಾನೆ.

ತುಳುಪಠ್ಯ

ಬಯಕ್ಕೆಗ್ ಸಬೆಸಾವಿರಾಲ್ ಕೂಡಾವುಜಿ ನಾರಾಯಿನಪ್ಪೆರೆ
ಮುಪ್ಪ ಮುಡಿ ಬಾಕಿಯಾರ್‌ದ ಬತ್ತ ಲತ್ತ್ ದ್ ಪೋವು
ಮುಪ್ಪ ಮುಡಿ ಕಂಬ್ಲದ ಅರಿಬಾರ್ ಇತ್ತ್‌ಂಡ ಉಂಡುದು ಪೋವುಯೆಲಪ್ಪೆರೋ
ಬಯಕೆ ಪಾಡ್ದ್ ಕಡಪುಂಡಲಾವಂದ್‌ಯೆಪ್ಪೆರೆಂದ್ ಆಲ್ವೆ ಅಪ್ಪೆಗ್ ಸಾಂತ್ ಸಮಾದಾನೊ ಪನ್ಪೆನೆ

ಕನ್ನಡಾನುವಾದ

ಸೀಮಂತಕ್ಕೆ ಸಭೆ ಸಾವಿರಾಳು ಸೇರಿಸಲಾರೆ ನಾರಾಯಣ ತಾಯಿಯವರೇ
ಮೂವತ್ತುಮುಡಿ ಬಾಕಿಮಾರು ಗದ್ದೆಯ ಭತ್ತ ಕೂಲಿ ಅಳೆದು ಹೋದೀತು

ಮೂವತ್ತು ಮುಡಿ ಕಂಬಳ ಗದ್ದೆಯ ಭತ್ತ ಅಕ್ಕಿ ಇದ್ದರೆ ಅದು ಉಂಡು ಹೋದೀತು ತಾಯಿಯವರೇ
ಸೀಮಂತ ಹಾಕಿಸಿ ಕಳುಹಿಸಿದರೆ ಸಾಲದು ತಾಯಿಯವರೇ ಎಂದು ಆಳ್ವ ತಾಯಿಗೆ ಶಾಂತಿ ಸಮಾಧಾನ ಹೇಳುತ್ತಾನೆ. (ಪುಟ 63).

ಈ ರೀತಿಯಲ್ಲಿ ತಾಯಿಯವರಲ್ಲಿ ಹೇಳುವ ಮಾತನ್ನು ಕೇಳಿದ ಸಿರಿ ಅಜ್ಜನವರೇ ಬಂದು ಬಸಲೂರಿನಲ್ಲಿ ಸೀಮಂತದ ಏರ್ಪಾಡು ಮಾಡುವಂತೆ ಹೇಳಿ ಕಳುಹಿಸುತ್ತಾಳೆ ಮಾತ್ರವಲ್ಲ ಸತ್ಯನಾಪುರದಿಂದ ಸಾಮಾನುಗಳ ಹೊರೆ ತಂದ ಆಳುಗಳಿಗೆ ಬಸಲೂರಿನಲ್ಲಿ ಬತ್ತ (ಸಂಭಾವನೆ) ತೆಗೆದು ಕೊಳ್ಳದಂತೆಯೂ ಸೂಚಿಸುತ್ತಾಳೆ.

ತುಳುಪಠ್ಯ

ಬಸ್ಲೂರುದ ಎರಮನೆಡ್ ನೀರ್ ಮುಟ್ಟಡೆ ಮಗಾ ನಿಕುಲು ತೆಲಿಕ್ಕ್ ಉಂತಡೆ ಗಂಜಿಗ್ ಕುಲ್ಲಡೆ
ನುಪ್ಪು ಉನಡೆ ಬತ್ತ ಪತ್ತಡೆ ಎನ್ನ ಚಾಕಿರಿದ ಜೋಕುಲಾಂಡ ಮಗಾ
ಪುದೆ ಜಾಲೆ ಪಿರ ಪೋಲೆ.

ಕನ್ನಡಾನುವಾದ

ನೀವು ಬಸಲೂರ ಅರಮನೆಯಲ್ಲಿ ನೀರು ಮುಟ್ಟಬೇಡಿ ಮಗಾ ಗಂಜಿಯ ತಿಳಿಗೆ ಕಾಯಬೇಡಿ
ಗಂಜಿಗೂ ಕಾಯಬೇಡಿ, ಅನ್ನಕ್ಕೂ ಕಾಯಬೇಡಿ
ನೀವು ನನ್ನ ಚಾಕರಿಯ ಆಳುಗಳಾದರೆ ಹೊರೆ ಇಳಿಸಿ ಹಿಂದಕ್ಕೆ ಹೋಗಿ (ಪುಟ 66)

ಎಂಬುದಾಗಿ ತನ್ನ ಕೂಲಿಯಾಳುಗಳಿಗೆ ಸಿರಿ ಕಠೋರವಾಗಿ ಹೇಳುತ್ತಾಳೆ. ಮುಂದುವರಿದು ಸಂಕರು ಪೂಂಜೆದಿಯು ಅಜ್ಜನವರಿಗೆ ಬರಿಯ ನಾಲಿಗೆ ಖರ್ಚು ಮಾಡಿದರಾಯಿತು. ಹೊರೆ ರಾಶಿ ಬಂದು ಸೇರುತ್ತದೆ. ನಮಗೆ ಹಾಗಲ್ಲ. ನಾವು ಬೆಳೆದದ್ದನ್ನು ಅವರಿಗೆ ಅಳೆಯಬೇಕೆನ್ನುತ್ತಾಳೆ. ಈ ಮೂಲಕ ಸಿರಿ, ಕಾಂತುಪೂಂಜ ಹಾಗೂ ಅತ್ತೆಯ ನಡುವಿನ ಸಂಬಂಧ ಸೀಮಂತಕ್ಕೆ ಮೊದಲೇ ಹಾಳಾಗಿತ್ತೆಂಬುದು ತಿಳಿಯುತ್ತದೆ. ಹೀಗಾಗಿ ಬಸಲೂರಲ್ಲಿ ಅಜ್ಜನವರೇ ಸಿರಿಯ ಸೀಮಂತಕ್ಕೆ ಎಲ್ಲವನ್ನೂ ಸಿದ್ಧಗೊಳಿಸುತ್ತಾರೆ.

ಸಿರಿಯ ಸೀಮಂತದ ಸಿದ್ಧತೆ ನಡೆಯುತ್ತದೆ. ಸಿರಿಯನ್ನು ಸ್ನಾನ ಮಾಡಿಸಿ ಕರೆದುಕೊಂಡು ಬಂದು ನಿತ್ಯದ ಸೀರೆ ಉಡೆಂದು ಹೇಳಲು ಸಿರಿ ಈ ರೀತಿ ಉತ್ತರಿಸುತ್ತಾಳೆ.

ತುಳುಪಠ್ಯ
ನಾರಾಯಿನ ಅಜ್ಜೆರೇ ಸತ್ಯನಾಪುರೊಡ್ದು ಬನ್ನಗ ಪೆಟ್ಟಿಗೆ ನಿಲಿಕ್ಕೆ ಸೀರೆ ಕೊಂಡೊ ಬೈದೆ
ನಿಚ್ಚಸೀರೆ ಇನಿಮುಟ್ಟ ಕಂಡನಿಲ್ಲಲ್ ಯಾನ್ ಪತ್ತ್‌ನಿಜ್ಜಿ
ಯಾನ್ ಒಕ್ಕೊಗು ಪಾಡ್‌ನಿಜ್ಜಿ ಅಜ್ಜೆರೆ ಓ
ನನಗ್ ಎಂಕ್ ಅಕೇರಿದ ಕಾಲೊಗು ಸೀರೆ ಬೋಡಾಂದ್ ಕೇನುವಲಜ್ಜೆರೆಡ

ಕನ್ನಡಾನುವಾದ
ನಾರಾಯಣ ಅಜ್ಜನವರೇ ಸತ್ಯನಾಪುರದಿಂದ ಬರುವಾಗ ಪೆಟ್ಟಿಗೆ ತುಂಬ ಸೀರೆ ತಂದಿದ್ದೇನೆ
ನಿತ್ಯ ಉಡುವ ಸೀರೆ ಇಂದಿನವರೆಗೆ ಗಂಡನ ಮನೆಯಲ್ಲಿ ನಾನು ಹಿಡಿಯಲಿಲ್ಲ
ನನ್ನ ಸೊಂಟಕ್ಕೆ ಹಾಕಲಿಲ್ಲ ಅಜ್ಜನವರೇ
ಕೊನೆಯ ಕಾಲಕ್ಕೆ ಗಂಡನ ಮನೆಯ ಸೀರೆ ಬೇಕೇ ಎಂದು ಕೇಳುತ್ತಾಳೆ ಅಜ್ಜನವರಲ್ಲಿ
(ಪುಟ 69)

ಸೀಮಂತದ ಮುಹೂರ್ತ ಸಮೀಪಿಸಿದಾಗ ಸಿರಿಗೆ ಹೂಸೀರೆ ಕೊಡುತ್ತಾರೆ. ಸಿರಿ ಇದಕ್ಕೆ ಕೈ ಕೊಡುವುದಿಲ್ಲ. ಆಗ ಅಜ್ಜನವರು ನನ್ನ ಸತ್ಯನಾಪುರದ ಮಾನ ತೆಗೆಯುತ್ತಿಯಾ ಎಂದು ಕೇಳಲು ಸೂಳೆ ತನ್ನ ಸೊಂಟಕ್ಕೆ ಸುತ್ತಿದ ಸೀರೆಯನ್ನು ಉಡಲಾರೆ ಎನ್ನುತ್ತಾಳೆ ಸಿರಿ. ಕೊನೆಗೆ ಅಜ್ಜನವರೇ ಸತ್ಯನಾಪುರದಲ್ಲಿ ತೆಗೆದ ಸೀರೆ ಹಾಗೂ ತಂದಿರುವ ಆಭರಣಗಳನ್ನು ತೊಟ್ಟು ಸೀಮಂತದ ಕಾರ್ಯ ನಡೆಯುತ್ತದೆ. ಎಲ್ಲರ ಊಟೋಪಚಾರ ವಾಗಿ ಸತ್ಯನಾಪುರದರಮನೆಗೆ ಹೊರಡಲು ಪಲ್ಲಕಿ ಸಿದ್ಧವಾಗಿ ನಿಂತಿದೆ. ಆ ಹೊತ್ತಿಗೆ ಕಾಂತುಪೂಂಜ ಎಲೆಮರೆ ಕಾಯಿಮರೆ ಆಗುತ್ತಾ ಇದ್ದಾನೆ. ಅಜ್ಜನವರು ನಾವು ಹೊರಡುತ್ತೇವೆ ಆಳ್ವಾ ಎಲ್ಲಿದ್ದಿ ಎಂದು ಕರೆಯಲು ಏಳು ಮಾಳಿಗೆಯ ಮೇಲೆ ಹೋಗಿ ಕವುಚಿ ಮಲಗುತ್ತಾನೆ. ನಾವು ಹೊರಡುವ ಹೊತ್ತಾಯಿತು. ನೀನು ಬಂದು ಸಿರಿಗೆ ಆಶೀರ್ವಾದ ಮಾಡು ಎನ್ನುತ್ತಾರೆ. ಆಗ ಕಾಂತು ಪೂಂಜ ಯಾರ ಹೆಂಡತಿಗೆ ನಾನು ಆಶೀರ್ವಾದ ಮಾಡುವುದು ಎಂದು ಕೇಳುತ್ತಾನೆ. ಸ್ವತಃ ಸಿರಿಯೇ ಬಂದು ಗಂಡನ ಕಾಲಿಗೆ ನಮಸ್ಕರಿಸಲು ಆಕೆಯನ್ನು ತಿರಸ್ಕರಿಸಿ ಮತ್ತೆ ಎದ್ದು ಏಳು ಮಾಳಿಗೆಗೆ ಹೋಗುತ್ತಾನೆ. ಕೊನೆಗೆ ಪಲ್ಲಕಿ ಸಿದ್ಧಪಡಿಸಿ ಹೊರಡಲು ಅನುದಾಗ ಕಾಂತುಪೂಂಜನನ್ನು ಕುರಿತು ಅಜ್ಜನವರು,

ತುಳುಪಠ್ಯ
ಬಂಜಿನಾಲ್ ಪಿದಡುನ ಏಲ್ಯ ಬತ್ತ್‌ಂಡ್
ಬಂಜಿನಾಲೆನ್ ಜಪುಡಾವೊಂದು ಪೋಪೆ ಯಾನ್

ಕನ್ನಡಾನುವಾದ
ಬಸುರಿಯನ್ನು ಹೊರಡಿಸುವ ಹೊತ್ತಾಯಿತು
ಆಕೆಯನ್ನು ಇಳಿಸಿಕೊಂಡು ಹೋಗುತ್ತೇನೆ ನಾನು

ಎನ್ನುತ್ತಾರೆ ಅಜ್ಜನವರು. ಕೊನೆಗೂ ಕಾಂತುಪೂಂಜ ಬಾರದಿದ್ದಾಗ ಸಿರಿಯನ್ನು ದಂಡಿಗೆಯಲ್ಲಿ ಕುಳ್ಳಿರಿಸಿ ಬೋವಿಗಳು ದಂಡಿಗೆ ಎತ್ತಲು ದಂಡಿಗೆ ಏಳುವುದಿಲ್ಲ. ಇದೇನೆಂದು ಆಶ್ಚರ್ಯಪಟ್ಟರು. ಬೋವಿಗಳು ಅಜ್ಜನರಿಗೆ ವಿಷಯ ತಿಳಿಸಿದರು. ಅಜ್ಜನವರು ಸಿರಿಯನ್ನು ವಿಚಾರಿಸಲು ಆಕೆ

ತುಳುಪಠ್ಯ
ನಾರಾಯಿನ ಅಜ್ಜೆರೇ ಈರೆ ಪುಲ್ಲಿ ಎನ್ನ ಮದಿಮ್ಮಾಯೆ ಬರೊಡು
ಆರೆ ಅಪ್ಪೆ ಎನ್ನ ಮಾಮಿನಾರ್ ಬರೊಡು
ದಂಡಿಗೆ ಅಡಿ ಲಕ್ಕೊಡು ಪನ್ಪೆರ್ ಸಿರಿಯೇ

ಕನ್ನಡಾನುವಾದ
ನಾರಾಯಣ ಅಜ್ಜನವರೇ ನಿಮ್ಮ ಮೊಮ್ಮಗ ಬರಬೇಕು ನನ್ನ ಅತ್ತೆಯವರೂ ಬರಬೇಕು
ದಂಡಿಗೆ ಅಡಿಯಿಂದ ಏಳಬೇಕು ಎನ್ನುತ್ತಾಳೆ ಸಿರಿ (ಪುಟ 75).

ಅಜ್ಜನವರು ಮತ್ತೆ ಏಳು ಮಾಳಿಗೆಯ ಮೇಲೆ ಹೋಗಿ ಕಾಂತುಪೂಂಜನನ್ನು ಕುರಿತು,

ತುಳುಪಠ್ಯ
ನಾರಾಯಿನ ಮಗ ಆಳ್ವಾ, ಮಣ್ಣ್‌ಗಾ ಪೊಣ್ಣಗಾ ದಾರೆ ಮೈತ್ ಕೊರ್ತೆ ಮಗಾ
ಸತ್ಯನಾಪುರೊಡು ಕುಂದುಕೋರೆ ಬತ್ತ್‌ಂಡ ಬಸಲೂರುಡ್ದು ಕೊಂಡೊ ಪೋವೊಡು
ಬಸಲೂರುಡು ಕುಂದುಕೋರೆ ಬತ್ತ್‌ಂಡ ಸತ್ಯನಾಪುರೊಡ್ದು ಕೊಂಡೊದು ಬರೊಡುಂದು
ಪಂಡ್‌ದ್ ಮಗಾ
ಮಣ್ಣ್ ಗಾ ಪೊಣ್ಣಗಾ ದಾರೆ ಮೈತ್ ಕೊರ್ತೆ ಮಗಾ
ಬಾರೆಗಾ ನಿಕ್ಕಾ ದಾರೆ ಮೈತ್‌ದ್‌ಯಾನ್
ಆನಿ ತರೆ ಇನಿ ಮುದೆಲ್ ಮುಟ್ಟ ಪೂರ ದೀಜನೆ ಮಗಾಂದ್ ಪನ್ನಗಾ
ಏಲ್ ಮಾಲಿಗೆ ಜತ್ತೊನು ಆಲ್ವೆ ಬರುವೇ

ಕನ್ನಡಾನುವಾದ
ನಾರಾಯಣ ಮಗ ಆಳ್ವಾ ಮಣ್ಣಿಗಾ ಹೆಣ್ಣಿಗಾ ಧಾರೆ ಎರೆದು ಕೊಟ್ಟಿದ್ದೇನೆ ಮಗಾ

ಸತ್ಯನಾಪುರದಲ್ಲಿ ಕುಂದುಕೊರತೆ ಬಂದರೆ ಬಸಲೂರಿಂದ ಕೊಂಡು ಹೋಗಬೇಕು
ಬಸಲೂರಲ್ಲಿ ಕುಂದುಕೊರತೆ ಬಂದರೆ ಸತ್ಯನಾಪುರದಿಂದ ತರಬೇಕೆಂದು ಹೇಳಿ ಮಗಾ
ಮಣ್ಣಿಗಾ ಹೆಣ್ಣಿಗಾ ಧಾರೆ ಎರೆದು ಕೊಟ್ಟಿದ್ದೇನೆ ಮಗಾ
ಬಾಳೆಗಾ ನಿನಗಾ ಧಾರೆ ಎರೆದುಕೊಟ್ಟಿದ್ದೇನೆ ನಾನು
ಅಂದು ಆರಂಭ ಇಂದು ಅಂತ್ಯದವರೆಗೆ ಪೂರ್ತಿ ಯಾವುದನ್ನೂ ಇಟ್ಟುಕೊಳ್ಳಲಿಲ್ಲವಲ್ಲಾ
ಮಗಾ ಎನ್ನಲು
ಏಳು ಮಾಳಿಗೆ ಇಳಿದು ಆಳ್ವ ಬರುತ್ತಾನೆ (ಪುಟ 76).

ಆತ ಬಂದ ಕೂಡಲೇ ಸಿರಿ ಗಂಡನನ್ನು ಕುರಿತು

ತುಳುಪಠ್ಯ
ಈರೆಗ್ ಕೈ ಕೊರಿ, ಮರ್ಗಿಲ್ ಕೊರಿ ದೋಸೊಗು
ದಂಡಿಗೆದ ಕೊಂಬುಗು ಕೈ ಕೊರ್ಲೆ ಅಡ್‌ಂಜೋವೆ

ಕನ್ನಡಾನುವಾದ
ನಿಮ್ಮ ಕೈ ಹಿಡಿದ, ನಿಮಗೆ ದೇಹವನ್ನು ಒಪ್ಪಿಸಿದ ದೋಷಕ್ಕಾದರೂ
ದಂಡಿಗೆಯ ಕೊಂಬಿಗೆ ಕೈಕೊಡಿ ಗಂಡಸೇ

ಎನ್ನುತ್ತಾಳೆ. ಈ ಘಳಿಗೆಯಲ್ಲೂ ಅತ್ತೆ ಹಾಗೂ ತನ್ನ ಪತಿ ಬಂದು ತನ್ನನ್ನು ಪ್ರೀತಿಯಿಂದ ಕಳುಹಿಸಿ ಕೊಡಬಹುದೆಂದು ಭಾವಿಸುತ್ತಾಳೆ ಸಿರಿ. ಆದರೆ ಆತ ದಂಡಿಗೆಗೆ ಕೈ ಕೊಡುವುದಿಲ್ಲ. ಇದರಿಂದ ಸಿರಿ ಕೆಂಡಾಮಂಡಲವಾಗಿ ದಂಡಿಗೆಯನ್ನೇ ಮಾಯ ಮಾಡುತ್ತಾಳೆ. ಕೊನೆಗೆ ತನ್ನ ಗಂಡನನ್ನು ಕುರಿತು

ತುಳುಪಠ್ಯ
ನಾರಾಯಿನ ಅಣ್‌ಂಜೋವೆ ದಂಡಿಗೆನೆಂಚ ಕಲ್ಲ್‌ಮಲ್ತೆನೋ
ಕೈಕೊರಿ ದೋಸೊಂದು ತೂಡ್ಡಯೆನಣ್‌ಂಜೋವೆ ಕಲ್ಲ್ ಮಲ್ತುರ್ವೆ‌ನ್
ಹಾಂಕಾರದ ಆಣ್‌ಂಜೋವೆ ಈರ್ ಮೀಸೆ ಕೊನೊದು ಪುಟ್ಟಿನಣ್‌ಂಜೋವಾಂಡ
ಎದೆಟ್ಟ್ ಮಿರೆ ಕೊನೊದು ಪುಟ್ಟಿ ಮಗಲ್ ಯಾನ್‌ಲಾ (ಪುಟ 76–77) ಎನ್ನುತ್ತಾಳೆ.

ಕನ್ನಡಾನುವಾದ
ನಾರಾಯಣ ಗಂಡಸೇ ದಂಡಿಗೆಯನ್ನು ಹೇಗೆ ಕಲ್ಲು ಮಾಡಿದೆನೋ
ನಿಮ್ಮನ್ನು ಕೈ ಹಿಡಿದವರೆಂದು ನೋಡೆನು ಕಲ್ಲು ಮಾಡಿಯೇನು ಗಂಡಸೇ

ಅಹಂಕಾರದ ಗಂಡಸೇ, ನೀವು ಮುಖದಲ್ಲಿ ಮೀಸೆ ಹೊಂದಿರುವ ಗಂಡಸಾದರೆ ಎದೆಯಲ್ಲಿ ಮೊಲೆಯನ್ನು ಹೊಂದಿರುವ ಮಗಳು ನಾನೂ ಕೂಡಾ (ಪುಟ 76-77)

ಎಂಬುದಾಗಿ ನಿಮ್ಮನ್ನು ಪತಿಯಾಗಿ ಪಡೆದಿದ್ದೇನೆಂದು ಕಾಯದೆ ಪಲ್ಲಕ್ಕಿಯನ್ನು ಕಲ್ಲು ಮಾಡಿದಂತೆ ನಿಮ್ಮನ್ನೂ ಕಲ್ಲು ಮಾಡಿಯೇನು. ಮೀಸೆ ಇರುವ ಗಂಡಸೆಂಬ ಅಹಂಕಾರ ನಿಮಗಾದರೆ ಮೊಲೆಯಿರುವ ಹೆಂಗಸು ಎಂಬ ಅಹಂಕಾರ ನನಗೂ ಎನ್ನುವಲ್ಲಿಗೆ ಸಿರಿಯು ನಿನಗೆ ಎಲ್ಲದರಲ್ಲಿ ಸರಿಸಮಾನಳು ಎನ್ನುವುದನ್ನು ತೋರಿಸುತ್ತಾಳೆ. ಅಲ್ಲದೆ ಬಸಲೂರಿನಿಂದ ಹೊರಟವಳು ಮತ್ತೆ ಮಗು ಹಿಡಿದುಕೊಂಡು ಬರುವೆನೆಂದು ನಿಮಗೆ ಕೊಡುವ ಉತ್ತರ ಇದು. ಆದರೆ ನೀವೂ ಸತ್ಯನಾಪುರದರಮನೆಗೆ ಬೆನ್ನು ಹಾಕಿ ಹೊರಟವರು ಹೊಟ್ಟೆ ಹಾಕಿ ಹೊಕ್ಕರೆ ಮಾತ್ರ ನೀವು ಗಂಡ ನಾನು ಹೆಂಡತಿ. ಇಲ್ಲದಿದ್ದರೆ ನೀವು ಗಂಡನೂ ಅಲ್ಲ ನಾನು ನಿಮ್ಮ ಹೆಂಡತಿಯೂ ಅಲ್ಲ. ಇದು ನಿಮಗೆ ಪ್ರಶ್ನೆಗೆ ಪ್ರಶ್ನೆ ಉತ್ತರಕ್ಕೆ ಉತ್ತರ ಎಂದು ತಿಳಿಯಿರಿ ಎನ್ನಲು ಕಾಂತುಪೂಂಜ ಓಡಿ ಬಂದು ದಂಡಿಗೆಗೆ ಕೈ ಕೊಡುತ್ತಾನೆ. ದಂಡಿಗೆ ಏಳುತ್ತದೆ. ಸಿರಿ ಸತ್ಯನಾಪುರಕ್ಕೆ ಹೊರಡುತ್ತಾಳೆ. ಈ ಸಂದರ್ಭ ಅತ್ತೆ ಬಂದು ತಣ್ಣೀರು ಮುಟ್ಟಬೇಡ ಮಗಾ, ತಣ್ಣೀರು ಸ್ನಾನ ಮಾಡಬೇಡ ಇತ್ಯಾದಿ ಜಾಗ್ರತೆ ಹೇಳಲು ಸಿರಿ ನನಗಲ್ಲ ಅತ್ತೆಯವರೇ, ನಿಮ್ಮ ಮಗನಿಗೆ ಸ್ವಲ್ಪ ಜಾಗ್ರತೆ ಹೇಳಿ ಎನ್ನುತ್ತಾಳೆ. ಮುಂದುವರಿದು ನಾನು ಸತ್ಯನಾಪುರಕ್ಕೆ ಹೋದ ಮೂರರಲ್ಲಿ ನೀವಿಬ್ಬರೂ ನನ್ನನ್ನು ನೋಡಲು ಬಂದರೆ ನೀವು ಗಂಡ ಮತ್ತು ಅತ್ತೆ ಎಂದು ತಿಳಿದೇನು. ಒಂದು ವೇಳೆ ನೀವು ಬಾರದೇ ಹೋದಲ್ಲಿ ನೀವು ಅನ್ಯರೆಂದು ಭಾವಿಸಿಯೇನು ಎನ್ನುತ್ತಾಳೆ.

ಗೋಪಾಲ ನಾಯ್ಕರ ಪಠ್ಯದಲ್ಲಿ ಸಂಕರು ಪೂಂಜೆದಿ ಹಾಗೂ ಕಾಂತುಪೂಂಜ ಸಿರಿಯನ್ನು ತುಂಬ ಆದರದಿಂದ ಸತ್ಯನಾಪುರಕ್ಕೆ ಕಳುಹಿಸಿಕೊಡುವ ವಿವರಗಳಿವೆ.

ತುಳುಪಠ್ಯ

ಪೋಯಿಮಗಾ ಪೋಯಿಮಗ ಸಿರಿಯೇ ಬಲಮಗಂದ್ ಆರ್ಯಬನ್ನಾರ್ ಪನ್ನಾಗ

ಸಿರಿನ ಮೋನೆಡ್ ಕಣ್ಣ್‌ಡ್ ಕಣನೀರ್ ಜಪ್ಪುಂಡೆ ದಾನೆ

ದುಕ್ಕಿದುಕ್ಕಿದ್ ಬುಲ್ತೊನು ಉಲ್ಲೆರ್ ಸತ್ಯಮಲೋಕಂದ ಸಿರಿ. ಆಗ ಅತ್ತೆ ಮತ್ತು ಗಂಡ ಬಂದು ಸಮಾಧಾನ ಹೇಳುತ್ತಾರೆ

ಏಪ ಬರ್ಪರ್ ಮಾಮಿನಾರೆ ಏಪ ಬರ್ಪರ್ ಮದಿಮ್ಮಯಂದ್ ಸಿರಿ ಕೇನ್ನಗ
ಬಯ್ಯಡೆ ಕಾಂತುಪೂಂಜೆ ಬರ್ಪೆ, ಬೊಲ್ಪುಗು ಯಾನ್ ಬರ್ಪೆ ಮಗಾ
ಬತ್ತೊನು ಪೋವೊನು ಎಂಕುಲು ಉಲ್ಲೋ ಎನ್ನುತ್ತಾಳೆ.

ಕನ್ನಡಾನುವಾದ

ಹೊರಡುವ ಮಗ ಸಿರಿಯೇ ಬಾ ಮಗ ಎಂದು ಆರ್ಯ ಬನ್ನಾರ್ ಕರೆಯಲು
ಸಿರಿಯ ಮುಖದಲ್ಲಿ ಕಣ್ಣೀರು ಇಳಿಯುತ್ತದೆ
ದುಃಖಿಸಿ ದುಃಖಿಸಿ ಅಳುತ್ತಿದ್ದಾಳೆ ಸತ್ಯಮಲೋಕಂದ ಸಿರಿ. ಆಗ ಗಂಡ ಅತ್ತೆ ಬಂದು
ಈ ರೀತಿಯಲ್ಲಿ ಸಮಾಧಾನಿಸುತ್ತಾರೆ.
ಎಂದು ಬರುತ್ತೀರಿ ಅತ್ತೆಯವರೇ, ಎಂದು ಬರುತ್ತೀರಿ ಮದುಮಗಾ ಎಂದು ಸಿರಿ ಕೇಳಲು
ಸಂಜೆ ಕಾಂತುಪೂಂಜ ಬರುತ್ತಾನೆ, ಬೆಳಿಗ್ಗೆ ನಾನು ಬರುತ್ತೇನೆ ಮಗಾ
ಹೋಗುತ್ತಾ ಬರುತ್ತಾ ನಾವು ಇರುತ್ತೇವೆ ಮಗಾ

ಎನ್ನುತ್ತಾರೆ. ಇಷ್ಟು ಪ್ರೀತಿಯಿಂದ ಕಳುಹಿಸಿ ಕೊಟ್ಟ ಅತ್ತೆ ಗಂಡ ಅನಂತರದಲ್ಲಿ ಸತ್ಯನಾಪುರದ ಕಡೆ ತಿರುಗುವುದೇ ಇಲ್ಲ. (ಪುಟ 190)

ಇತ್ತ ದಿನ ಕಳೆದಂತೆ ಕಾಂತುಪೂಂಜ ಅಜ್ಜನವರಿಗೆ ಎದುರಾದರೂ ಮುಖ ಕೊಟ್ಟು ಮಾತನಾಡದಾಗುತ್ತಾನೆ. ಸಿರಿಗೆ ಹೆರಿಗೆ ನೋವು ಕಾಣಿಸಿಕೊಂಡಾಗ ಬಸಲೂರಿಗೆ ಹೇಳಿ ಕಳುಹಿಸುತ್ತಾರೆ. ಕಾಂತು ಪೂಂಜ ಮನೆಯ ಒಳಗಿದ್ದು ಕೊಂಡೇ ಇಲ್ಲ ಎಂದು ಹೇಳಿ ಕಳುಹಿಸಿದ. ಎರಡನೆಯ ಬಾರಿ ಆಳು ಕಳುಹಿಸುತ್ತಾರೆ. ಆದರೂ ಕಾಂತುಪೂಂಜ ಬರುವುದಿಲ್ಲ. ಮೂರನೆಯ ಆಳು ಕಳುಹಿಸ ಬೇಕಾಗಿಲ್ಲ ಎನ್ನುತ್ತಾಳೆ ಸಿರಿ.

ಅಮೃತ ಸೋಮೇಶ್ವರರ ಪಠ್ಯವು ತಿಳಿಸುವಂತೆ ಸಿರಿಯು ಮದುವೆಯಾಗಿ ಒಂದು ವರ್ಷ ಆರು ತಿಂಗಳಲ್ಲಿ ಗರ್ಭವತಿಯಾಗುತ್ತಾಳೆ. ಕಾಂತುಪೂಂಜ ಬಹುತೇಕವಾಗಿ ಸತ್ಯನಾಪುರದಲ್ಲೇ ಕಾಲ ಕಳೆಯಲಾರಂಭಿಸಿದ. ಆಗ ತಾಯಿ ಅವನನ್ನು ಕರೆದು ಎಚ್ಚರಿಸುವ ಮಾತು ಹೀಗಿದೆ.

ತುಳುಪಠ್ಯ

ಬಾಲೆಕಾಂತುಪೂಂಜೆರೆಡ ಪನ್ಪೆರ್ ಅಪ್ಪೆ ಸಂಕರುಪೂಂಜೆದಿ
ಬಾಲೆ ಕಾಂತಾನ ಕೇಂಡನಾ ಪೊದ್ವೆರಿಲ್ಲಾಡೆ
ಪೋಪಿನಲೆಕ ಪೋವೊಡು ಬರ್ಪಿನಲೆಕ ಬರೊಡು
ಕಿಚ್ಚಿಮಚ್ಚರೊಡು ಮಗಕ್ ಬಲುಬಾಸೆ ಪಂಡೆರ್
ಅಪ್ಪೆ ಪಂಡಿನಲ್ಕನೇ ಪೊದ್ವೆರಡೆ ಪೋಯಿನೇ ಇಜ್ಜೆರ್

ಕನ್ನಡಾನುವಾದ

ಮಗ ಕಾಂತುಪೂಂಜನಲ್ಲಿ ತಾಯಿ ಸಂಕರುಪೂಂಜೆದಿ ಹೇಳುತ್ತಾರೆ
ಮಗು ಕಾಂತನಾ ಕೇಳಿದಿಯೇ ಹೆಂಡತಿ ಮನೆಗೆ
ಹೋಗುವ ಹಾಗೆ ಹೋಗಬೇಕು ಬರುವ ರೀತಿಯಲ್ಲಿ ಬರಬೇಕು

ಕಿಚ್ಚುಮತ್ಸರದಲ್ಲಿ ಮಗನಿಗೆ ಬಲು ಬುದ್ಧಿ ಹೇಳುತ್ತಾರೆ.
ತಾಯಿ ಹೇಳಿದಂತೆ ಹೆಂಡತಿ ಮನೆಗೆ ಹೋಗುವುದನ್ನೇ ಕಾಂತುಪೂಂಜ ನಿಲ್ಲಿಸಿದ (ಪುಟ 163).

ಈ ಮಾತುಗಳನ್ನು ಗಮನಿಸುವಾಗ ಅತ್ತೆಗೆ ಸೊಸೆಯಲ್ಲಿ ಎಷ್ಟು ಅಸಮಾಧಾನ ಇತ್ತು ಎಂಬುದು ತಿಳಿಯುತ್ತದೆ. ಸಿರಿಯ ಗರ್ಭಕ್ಕೆ ಏಳುಏಳುವರೆ ತಿಂಗಳಾಗುವಾಗ ಸಂಕರು ಪೂಂಜೆದಿ ಮಗನನ್ನು ಕರೆದು ನಿನ್ನ ಮದುಮಗಳಿಗೆ ಸೀಮಂತ ಹಾಕಬೇಕು, ನೀನು ಸತ್ಯನಾಪುರದ ಅರಮನೆಗೆ ಹೊಗಿ ಅಜ್ಜನವರಿಗೆ ತಿಳಿಸಿ ಸೀಮಂತಕ್ಕೆ ದಿನವಿಟ್ಟು ಬರಬೇಕೆನ್ನುತ್ತಾಳೆ. ತಕ್ಕಬಣ್ಣಾಯ ಕಾಳುಮೇಲಾಂಟರನ್ನು ಕರೆದುಕೊಂಡು ಹೋಗುತ್ತಾನೆ ಕಾಂತುಪೂಂಜ. ಕಾಳುಮೇಲಾಂಟರ ಪ್ರಸ್ತಾವ ಬೇರೆ ಯಾವ ಪಠ್ಯಗಳಲ್ಲಿಯೂ ಬರುವುದಿಲ್ಲ. ಎಲ್ಲರೂ ಸೇರಿ ನಾರಾಯಣ ಭಟ್ಟರಲ್ಲಿಗೆ ಹೋಗಿ ಸೀಮಂತಕ್ಕೆ ದಿನವಿಟ್ಟು ಬರುತ್ತಾರೆ. ಸಂಕರು ಪೂಂಜೆದಿಯಲ್ಲಿ ಸೀಮಂತಕ್ಕೆ ದಿನವಿಟ್ಟ ವಿಷಯ ತಿಳಿಸಲು ಆಕೆ 'ಬಾರಿಯೊಂಜಿ ಗೌಜಿ ಗೌನಾರ್‌ಗ್ ಪೋವಡ, ಕಟ್ಟ್ ಕಟ್ಲೆ ಕಿಂಚಿತ್ತೊಡಾಂಡ ಸೈಯಿಂದೆರ್' (ಬಾರೀ ಗೌಜಿಗದ್ದಲದಲ್ಲಿ ಸೀಮಂತ ಮಾಡಬೇಡ, ಕಿಂಚಿತ್ತಲ್ಲಿ ಮಾಡುವುದಾದರೆ ಸೈಯೆಂದರು'). ಮುಂದುವರಿದು ನಿನಗಾದರೋ ಇಲ್ಲಿ ಮುಗಿದರೆ ಸತ್ಯನಾಪುರದಲ್ಲಿ ಇದೆ. ನನ್ನ ಹೊಟ್ಟೆಯ ಪಾಡೇನು ಎಂದು ನಂಜು ಮಾತನಾಡುತ್ತಾಳೆ. ಕಾಂತುಪೂಂಜ ಸೀಮಂತಕ್ಕೆ ಅರುವತ್ತು ವರಹದ ಅರುವತ್ತು ಮೊಳದ ಸೀರೆ ತೆಗೆಯಲು ಪದಂಗಾಡಿ ಪೇಟೆಗೆ ಒಬ್ಬನೇ ಹೋಗುತ್ತಾನೆ. ಇದನ್ನು ತೆಗೆದುಕೊಂಡು ಹಿಂತಿರುಗಲು ಪದಂಗಾಡಿ ಸೂಳೆಸಿದ್ದು ಕರೆಯುವ ವಿಚಾರ ಇದೆ. ಈ ಸೀರೆಯನ್ನೊಮ್ಮೆ ನಾನು ಉಟ್ಟು ನನ್ನ ಅಂದವನ್ನು ನೀವೊಮ್ಮೆ ನೋಡಬೇಕು ಪೂಂಜರೆ. ನಾನೂ ನೀವು ತೂಗುಯ್ಯಾಲೆಯಲ್ಲಿ ಕುಳಿತು ಚೆನ್ನೆ ಚದುರಂಗ ಆಡಬೇಕು ಎನ್ನುತ್ತಾಳೆ. ನನಗೆ ವೇಳೆ ತಡವಾಗುತ್ತದೆ. ಇನ್ನೆರಡು ದಿನದಲ್ಲಿ ಬಂದು ನಿನ್ನನ್ನು ತೋಳು ತುಂಬ ತಬ್ಬಿಕೊಳ್ಳುವೆ, ಬಾಯಿ ತುಂಬ ಮುತ್ತಿಡುವೆ ಎಂದು ಹೇಳಿ ಹೊರಟುಹೋಗುತ್ತಾನೆ. ಮಂಗಳವಾರ ಸಿಂಹ ರಾಶಿ ಅಮವಾಸ್ಯೆಯ ಫಲದಲ್ಲಿ ಸಿರಿಯ ಬಾಯಿಯ ಅರೆಮರೆ(ಆಸೆ) ಕಳೆಯುವ ಆಚರಣೆ ಮಾಡುತ್ತಾರೆ. ಉಳಿದ ವಿವರಗಳು ಎಲ್ಲ ಪಠ್ಯಗಳಂತೆ ಇವೆ. ಮುಂದುವರಿದು ಪದಂಗಾಡಿ ಸೂಳೆ ಸಿದ್ದು ಮಡಿ ಕಡಿಸಿದ ಸೀರೆ ಉಡಲಾರೆ ಎನ್ನುತ್ತಾ ನನಗೆ ನನ್ನ ಅಜ್ಜನವರು ಸತ್ಯನಾಪುರದಲ್ಲಿ ತೆಗೆದ ಸೀರೆ ಇದೆ. ಅದನ್ನೇ ಉಡುತ್ತೇನೆ ಎಂದುಹೇಳಿ ಅತ್ತೆಯವರೇ ನನಗೆ ಸತ್ಯನಾಪುರದಲ್ಲಿ ಏನೊಂದು ಕಷ್ಟವೂ ಇರಲಿಲ್ಲ. ನಿಮ್ಮ ಮಗನಿಗೆ ಬಲದ ಕೈ ಕೊಟ್ಟ ಅನಂತರವೇ ನನಗೆ ಬಾರದ ಕಷ್ಟ ಬಂದೊದಗಿತು ಅತ್ತೆಯವರೇ ಎನ್ನುತ್ತಾಳೆ. ಮುಂದೆ ಸೀಮಂತದ ಕಾರ್ಯ ನಡೆಯುತ್ತದೆ. ಸೀಮಂತ ಸತ್ಯನಾಪುರದಲ್ಲಿ ನಡೆದ ಬಗೆಗೆ ತಿಳಿಯುತ್ತದೆ. ಸೀಮಂತ ಮುಗಿಸಿ ಬಸಲೂರಿಗೆ ಕರೆದುಕೊಂಡು ಹೋಗುವ ಸಮಯ ಬಂದಾಗ ಸಿರಿ ಬಸಲೂರಿಗೆ ಹೋಗಲು ನಿರಾಕರಿಸುತ್ತಾಳೆ. ನನಗೆ ಎದ್ದು

ನಾಲ್ಕು ಹೆಜ್ಜೆ ಇಡಲು ಆಗುವುದಿಲ್ಲ. ಎರಡು ದಿನ ಕಳೆದು ನನ್ನ ಮದುಮಗ ಬರಲಿ. ನಾವು ಜೊತೆಯಾಗಿ ಬರುತ್ತೇವೆ. ಇಂದು ಬರಲು ನನ್ನ ದೈವ ದೇವರಾದ ಬೆರ್ಮೆರ್ ಹಾಗೂ ನನ್ನ ಉಳ್ಳಾಯ ಉಳ್ಳಾಲ್ದಿಯ ಮಾಯದ ಅಪ್ಪಣೆ ಇಲ್ಲ ಎನ್ನುತ್ತಾಳೆ. ಬಸಲೂರಿಗೆ ಹಿಂತಿರುಗಿದಾಗ ಕಾಂತುಪೂಂಜ ಸಿರಿಯನ್ನು ಕರೆದುಕೊಂಡು ಬಾರದಿರುವ ಬಗೆಗೆ ತಾಯಿಯಲ್ಲಿ ವಿಚಾರಿಸುತ್ತಾನೆ. ಆಗ ಸತ್ಯನಾಪುರದಲ್ಲಿ ನಡೆದ ಎಲ್ಲ ವಿವರಗಳನ್ನು ಮಗನಿಗೆ ತಾಯಿ ವಿವರಿಸುತ್ತಾಳೆ. ಸೂಳೆಸಿದ್ದು ಸೀರೆಯ ಮಡಿ ಕೆಡಿಸಿ ಆದ ಅವಮಾನದ ಬಗೆಗೂ ತಿಳಿಸುತ್ತಾಳೆ. ಇದರಿಂದ ಅವಮಾನಗೊಂಡ ಕಾಂತುಪೂಂಜ ಅಷ್ಟು ಅಹಂಕಾರದ ಹೆಣ್ಣಾದರೆ

ತುಳುಪಠ್ಯ
ಎಂಕ್ ಪನನ ಕಲೆ ಪಂಡಾಳ್, ಮನ್ಪಾನ ದೂಸನ ಮಂತಾಲ್
ಅವ್ವೊಂಜಿ ಮುಟ್ಟಿಕಲ್ಲ್‌ನ್ ಮೂಜಿ ಮೂಜಿ ಪಾತೆರೊಗು
ಯಾನ್ ಬಡ್ತಯೆಂದ್ ಬಾಸೆ ಪಂಡ್‌ದ್ ಮೀಸೆ ಒಯ್ತೆರ್
ಬಸಲೂರ ಬತ್ತಕೆರಿದ ಕಾಂತುಪೂಂಜೆರ್

ಕನ್ನಡಾನುವಾದ
ನನಗೆ ಹೇಳ ಬಾರದ ಅಪವಾದ ಹೇಳಿದಳು, ಮಾಡಬಾರದ ದೂಷಣೆ ಮಾಡಿದಳು
ಅದೊಂದು ಮೆಟ್ಟುಕಲ್ಲನ್ನು ಮೂರುಮೂರು ಮಾತಿಗೆ
ನಾನು ಹತ್ತಲಾರೆ ಎಂದು ಭಾಷೆ ಹಾಕಿ ಮೀಸೆ ಎಳೆದರು
ಬಸಲೂರ ಬತ್ತಕೇರಿಯ ಕಾಂತು ಪೂಂಜರು.

ಈ ಮೇಲಿನ ಒಟ್ಟು ವಿವರಗಳನ್ನು ನೋಡಿದಾಗ ಸಿರಿಯ ಜೊತೆಗೆ ಅತ್ತೆ ಹಾಗೂ ಗಂಡನಿಗೆ ಸೀಮಂತಕ್ಕೆ ಮೊದಲೇ ಮನಸ್ತಾಪವಿದ್ದದ್ದು ತಿಳಿಯುತ್ತದೆ. ಹಾಗಾಗಿಯೇ ಅತ್ತೆ ಸಿರಿಯ ಸೀಮಂತವನ್ನು ತುಂಬ ಗೌಜಿಯಿಂದ ಮಾಡುವುದು ಬೇಡ, ಕಿಂಚಿತ್ತಲ್ಲಿ ಮುಗಿಸಿ ಬಿಡುವ ಎನ್ನುತ್ತಾಳೆ. ಈ ಮಾತು ಸಿರಿಗೆ ತುಂಬ ನೋವನ್ನು ತರುತ್ತದೆ. ಅದುದರಿಂದಲೇ ಗಂಡನ ಮನೆಯಾದ ಬಸಲೂರಿನಲ್ಲಿ ನಡೆಯಬೇಕಿದ್ದ ಸೀಮಂತದ ಆಚರಣೆ ಸತ್ಯನಾಪುರದಲ್ಲಿ ನಡೆಯುತ್ತದೆ. ಯಾವತ್ತೂ ಸೀಮಂತದಂಥ ಕಾರ್ಯ ನಡೆಯಬೇಕಾದುದು ಗಂಡನ ಮನೆಯಲ್ಲೇ. ಆದರೆ ಸಿರಿಯ ಸೀಮಂತ ಸತ್ಯನಾಪುರದರಮನೆಯಲ್ಲಿ ನಡೆದರೂ ಈ ಕಾರ್ಯಕ್ಕೆ ಗಂಡನಾದ ಕಾಂತುಪೂಂಜ ತಪ್ಪಿಸುತ್ತಾನೆ. ಈ ವಿಚಾರವನ್ನು ತಿಳಿದ ಸಿರಿ ತಾನಾಗಿಯೇ ಅಂದು ಬಸಲೂರಿಗೆ ಹೊರಡದೆ ಕಾಂತುಪೂಂಜನನ್ನು ಕಳುಹಿಸಿಕೊಡಿ ಅತ್ತೆಯವರೇ, ನಾವು ಜೊತೆಯಾಗಿ ಬರುತ್ತೇವೆ ಎನ್ನುವ ಮಾತನ್ನು ಹೇಳುತ್ತಾಳೆ.

ಪೊಳಲಿ ಶೀನಪ್ಪ ಹೆಗ್ಗಡೆಯವರ ಪಠ್ಯದಲ್ಲಿ ಸೀಮಂತದ ಮುನ್ನಾ ದಿನ ರಾತ್ರಿ ಸಿರಿಗೆ ಕನಸೊಂದು ಬೀಳುತ್ತದೆ. ಅದರಂತೆ ತನಗೆ ಸೀಮಂತಕ್ಕಾಗಿ ತೆಗೆದ ಸೀರೆಯನ್ನು ಬಸಲೂರಿನ ಕಿಞ್ಞಕ್ಕೆ ಸೂಳೆ ಉಟ್ಟಿರುವ ಕಾರಣ ಅದನ್ನು ಸೀಮಂತದಂದು ಉಡಬಾರದೆಂದೂ ಅಜ್ಜನವರಲ್ಲಿ ಬೇರೆ ಸೀರೆ ತರಿಸಿಕೊಂಡು ಉಡಬೇಕೆಂದೂ ಸ್ವಪ್ನ ಬೀಳುತ್ತದೆ. ಮರುದಿನ ಬೆಳಗ್ಗೆದ್ದು ಸೀಮಂತದ ಸೀರೆಯನ್ನು ಪರಿಶೋಧಿಸಲು ಸೀರೆ ಮಡಿಕೆ ಮಾಸಿದ್ದು ಗೊತ್ತಾಗಿ ಸ್ವಪ್ನ ನಿಜವೆಂದು ನಂಬುವ ವಿವರಗಳಿವೆ (ಪುಟ 307–308). ಕರ್ಗಿಯವರ ಪಠ್ಯದಲ್ಲಿ ಸಿರಿ ಸೀಮಂತದ ದಿನ ಸೂಳೆಸಿದ್ದು ಉಟ್ಟ ಸೀರೆಯನ್ನು ಉಡಲು ನಿರಾಕರಿಸುತ್ತಾಳೆ. ಅಜ್ಜನವರು ಸೀರೆಗೆ ಕೈ ಕೊಡು ಮಗಳೇ ಎಂದಾಗ ಹೆಣಕ್ಕೆ ಮತ್ತೆ ನೀವು ಮೊನಚು ಆಯುಧದಿಂದ ಚುಚ್ಚ ಬೇಡಿ ಅಜ್ಜನವರೇ ಎನ್ನುತ್ತಾಳೆ. ಕೊನೆಗೆ ಅಜ್ಜನವರು ಮದುವೆಗೆಂದು ತೆಗೆದ ಸೀರೆಯನ್ನುಟ್ಟು ಸೀಮಂತ ನಡೆಯುತ್ತದೆ. (ಬಂಟ ಜನಾಂಗದ ಬಸುರಿಯ ಸೀಮಂತದ ಆಚರಣೆಯಲ್ಲಿ ಕೋಳಿ ಬಿಡುವುದು, ಹೂ ಸೀರೆ ಕೊಡುವುದು, ಬಸುರಿಯ ಐತ ಸಿಂಗಾರ, ಗಂಡ ಬಸುರಿಯ ಮುಡಿಗೆ ಹಿಂಗಾರ ಮುಡಿಸುವ ಆಚರಣೆಯ ವಿವರಗಳು ಇಲ್ಲಿ ವಿವರವಾಗಿ ದಾಖಲಾಗಿವೆ). ಸಿರಿಯ ಈ ರೀತಿಯ ವರ್ತನೆಯಿಂದ ಅತ್ತೆಗೆ ಬಹುವಾಗಿ ನೋವಾಗುತ್ತದೆ. ಗಂಡ ಕಾಂತುಪೂಂಜ ಅವಮಾನಿತನಾಗುತ್ತಾನೆ. ಸಿರಿ ತನ್ನ ಗಂಡನ ಎಲ್ಲ ಕೃತ್ಯಗಳನ್ನು ವಿವರಿಸಿ ಅತ್ತೆಗೆ ಸಮಾಧಾನ ಹೇಳುತ್ತಾಳೆ. ಅಜ್ಜನವರು ಸಿರಿಯನ್ನು ಕರೆದುಕೊಂಡು ಸತ್ಯನಾಪುರದ ಅರಮನೆಗೆ ಹೋಗುತ್ತಾರೆ.

ರಾಮಕ್ಕ ಅವರ ಪಠ್ಯದಲ್ಲಿ ಸಿರಿ ಋತುಮತಿಯಾದುದರ ಆಚರಣೆಯನ್ನು ಬಹಳ ಗೌಜಿ ಗಮ್ಮತ್ತಿನಿಂದ ಮದುವೆಯ ರೀತಿಯಲ್ಲಿ ನಡೆಸುವ ವಿವರಗಳಿವೆ. ಆರು ಮುಡಿ ಬೀಜ ಬಿತ್ತುವಷ್ಟು ವಿಶಾಲಗದ್ದೆಯನ್ನು ಕೆತ್ತಿಸಿ, ಮೂರುಮುಡಿ ಬೀಜ ಬಿತ್ತುವಷ್ಟು ವಿಶಾಲ ಗದ್ದೆಗೆ ವೀಳ್ಯದೆಲೆಯ ಹನಿಚಪ್ಪರ ಹಾಕಿಸಿ, ಬೆಲ್ಲದ ಒಲೆ ಮಾಡಿಸಿ ...... ಈ ರೀತಿಯ ವಿವರಗಳಿವೆ. ಸೀಮಂತಕ್ಕೆ ದಿನಮಾನ ಇಡುವುದು, ಸೀಮಂತಕ್ಕೆ ಸೀರೆ ತೆಗೆದುಕೊಂಡು ಬರುವಾಗ ಕಡೆಂಗಾಡಿ ಸೂಳೆ ಕರೆಯುವ ವಿಚಾರ (ಸೂಳೆ ಸಿದ್ದು ಎಂಬ ಹೆಸರು ಬರುವುದಿಲ್ಲ), ಆಕೆ ಸಿರಿಯ ಸೀಮಂತದ ಸೀರೆ ಉಡುವುದು, ಸೀಮಂತದಂದು ಸಿರಿಯಿಂದ ಸೀರೆಯ ನಿರಾಕರಣೆ ಇವೆಲ್ಲ ಉಳಿದ ಪಠ್ಯಗಳಂತೆ ಇವೆ. ಆದರೆ ಸೀಮಂತ ಮುಗಿಸಿ ಸಿರಿಯನ್ನು ಸತ್ಯನಾಪುರಕ್ಕೆ ಕರೆದುಕೊಂಡು ಹೋಗುವಾಗ ಕಾಂತುಪೂಂಜನೂ ಜೊತೆಯಾಗಿ ಹೋಗುತ್ತಾನೆ. ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಪಠ್ಯದಲ್ಲಿಯೂ ಕಾರ್ಕಳದ ಗುಮ್ಮಡ ಸೆಟ್ಟಿಯ ಅಂಗಡಿಯಿಂದ ಸೀರೆ ತೆಗೆಯುವ ವಿವರ ಇದೆ. ಗೋಪಾಲ ನಾಯ್ಕರ ಪಠ್ಯದಲ್ಲಿ ಬಸಲೂರ ಪೇಟೆಯಿಂದಲೇ ಸಿರಿಗೆ ಪಟ್ಟೆಸೀರೆ ಹಾಗೂ ಆಭರಣಗಳನ್ನು ತೆಗೆಯುವ ವಿವರಗಳಿವೆ. ಸೀಮಂತದ ಔತಣ ಬಡಿಸುವ ವಿವರಗಳು ಗೋಪಾಲನಾಯ್ಕರ ಪಠ್ಯದಲ್ಲಿ ಈ ರೀತಿ ಇದೆ.

ತುಳುಪಠ್ಯ
ಕೊಟ್ಟು ಮಣೆ ಕೊಂಡು ಬತ್ತೆರ್ ಚಾವಡಿ ನಡುವರ ದೀಯೆರ್
ಬಂಗಬಾರೆದ ಕೊಡಿಯಿರೆ ಕೊಂಡೊ ಬತ್ತೆರ್ ಪತ್ತ್ ಪದಿನಾಜಿ ಪೊಣ್ಣುಲೂ
ಐನ್ ಬರಿತ ಬರಿ ಬಾಂದ್ರೊದ ಪೊಣ್ಣುಲೆನ್ ಲೆಪ್ಪಾದ್
ಸತ್ಯಮಲೋಕಂದ ಸಿರಿನ ಕೈಟ್ ಪತ್ತಾದೆರ್ ಕೊಟ್ಟು ಮಣೆಟ್ಟ್ ಕುಲ್ಲಾದೆರೋ
ತರೆ ನಿಲಿಕ್ಕೆ ಪೂತ ಸಮ್ಮನೊ ಬಾಮಿದೆರೋ ಬಾಲೆದ ಬಾಯಿದಗ್ಗಿನೊ ಕಲೆಯೆರೆ
ಬಂಗಬಾರೆದ ಕೊಡಿಯಿರೆಟ್ಟ್ ಮುಡಿ ಬಜಿಲ್ ಬಲಸಿಯೆರ್
ಕೈಲ್ ಪಂರ್ದ್ ಬಲಸ್‌ದೆರ್ ಕಜ್ಜಾಯೊಂದು ಬಲಸ್‌ದೆರ್

ಕನ್ನಡಾನುವಾದ
ದೊಡ್ಡ ಮಣೆ ತಂದರು ಚಾವಡಿ ನಡುವಲ್ಲಿ ಇರಿಸಿದರು
ಬಂಗ ಬಾಳೆಯ ತುದಿ ಎಲೆ ತಂದರು ಹತ್ತು ಹದಿನಾರು ಮನೆಯ ಹೆಣ್ಣುಮಕ್ಕಳು
ಐದು ಬಳಿಯ ಹೆಣ್ಣುಗಳು ಸಿರಿಯ ಕೈ ಹಿಡಿದು ಕರೆದುಕೊಂಡು ಬಂದು ಮಣೆಯಲ್ಲಿ ಕುಳ್ಳಿರಿಸಿದರು
ಮುಡಿ ತುಂಬ ಹೂವಿನ ಔತಣ ಹಾಕಿಸಿದರು ಬಾಯಿಯ ಆಸೆ ಕಳೆಯಲು
ಮುಡಿ ಅವಲಕ್ಕಿ ಗೊನೆ ಬಾಳೆಹಣ್ಣು ಬಡಿಸಿದರು. ಬಗೆ ಬಗೆಯ ಕಜ್ಜಾಯ ಬಡಿಸಿದರು
(ಪುಟ 188).

ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಪಠ್ಯದಲ್ಲಿ ಈ ವಿವರಗಳು ಇಂತಿವೆ

ತುಳುಪಠ್ಯ
ಜಿಂಜಿದಿ ಬಂಜಿನಾರ್ ಸಿರಿನ್ ಸಾನೇರಿ ಚಾವಡಿಡ್ ಕೊಟ್ಟುಲ್ಲ ಮಣೆದೀದ್ ಕುಲ್ಲಾವೆರತ್ತೋ
ಆರೆನ ದತ್ತ್ ಬಲತ್ತ್‌ಡ್ ನಾಲ್ ಕನ್ಯಾವು ಬಾಲೆಲೆನ್ ಕುಲ್ಲಾವೆರತ್ತೋ
ಬಡೆಕಾಯಿ ದಂಗಿನ ಬಂಗಬಾರೆ ಕೊಡಿತುಂಡು ಇರೆ ಪಾರಾದೆರ್‌ಗೆ
ಇರೆಪಾಡಿ ದೋಸೊಗು ಪನಿನೀರ್ ಪಾರಾದೆರ್‌ಗೆ
ಬಗೆಬನ್ನಲ್ಲ ಬಕ್ಸಾ ಪೊರ್ತಿಂಗೊಲ ತಮ್ಮನಂದ್ ಸಿರಿಗ್ ಬಾಮಿಯೆರ್
ಎಣ್ಣೆಂದ ಚಕ್ಕುಲಿಗೆ ಬಣ್ಣಂದ ಗಾರಿಗೆನಾ ಮೂಡೆನ್ನ ಪೊದ್ದೊಲುಗೆನಾ
ಇನಿ ಇರೆನಿಲೆಕ್ಕೆ ತಮ್ಮನ ಬಲಸುವೆರ್‌ಗೆನಾ............ (ಪುಟ 73)

ಕನ್ನಡಾನುವಾದ
ತುಂಬಿದ ಬಸುರಿ ಸಿರಿಯನ್ನು ಸಾನೇರಿ ಚಾವಡಿಯಲ್ಲಿ ದೊಡ್ಡ ಮಣೆಯ ಮೇಲೆ ಕುಳ್ಳಿರಿಸುತ್ತಾರೆ

ಅವರ ಎಡಬಲಗಳಲ್ಲಿ ನಾಲ್ಕು ಜನ ಕನ್ಯಾಮಕ್ಕಳನ್ನು ಕುಳ್ಳಿರಿಸಿದರು
ಬಡಗು ದಿಕ್ಕಿಗೆ ಬಾಗಿದ ಬಂಗಬಾಳೆಯ ತುದಿ ಎಲೆಯನ್ನು ಹಾಸಿದ್ದಾರೆ
ಎಲೆಯ ಮೇಲೆ ಹನಿನೀರು ಚಿಮುಕಿಸಿದ್ದಾರೆ
ಬಗೆ ಬಗೆಯ ಭಕ್ಷ್ಯಗಳನ್ನು ಹೆರುವ ತಿಂಗಳ ಔತಣ ಎಂದು ಸಿರಿಗೆ ಬಡಿಸಿದರು
ಎಣ್ಣೆ ಚಕ್ಕುಲಿಯಂತೆ ಬಣ್ಣದ ಗಾರಿಗೆಯೆಂದು ಮೂಡೆ ಮೂಡೆಅರಳು
ಇಂದು ಎಲೆ ತುಂಬ ಸಿರಿಗೆ ಔತಣ ಬಡಿಸಿದರು....

ಹೀಗೆ ಬಡಿಸಿದ ಅನಂತರ ಸಿರಿಯ ಎಡಬಲಗಳಲ್ಲಿ ಕುಳಿತ ಕನ್ಯಾಮಕ್ಕಳಿಗೂ ಬಡಿಸಿ ಅನಂತರ ಸಿರಿ ಅವರಿಗೆ ಸಿಹಿತುತ್ತನ್ನು ಕೊಟ್ಟು ತಾನೂ ಬಾಯಿಗಿರಿಸುವ ವಿವರ ಇದೆ. ಅಮೃತ ಸೋಮೇಶ್ವರ ಅವರ ಪಠ್ಯದಲ್ಲಿಯೂ ಸಿರಿಯ ಸೀಮಂತಕ್ಕೆ ಸಿಕ್ಕ ಮುಹೂರ್ತ 'ಅಂಗಾರೆ ಬಾರೊಡು ಅಮಾಸೆದ ಪಲೊಟ್ಟು ಸಿಂಗಂದ ರಾಸಿಡ್ ಸತ್ಯಮಲೋಕಂದ ಬಾಲಕ್ಕೆ ಸಿರಿನ ಬಂಜಿದ ಬಯಕೆಗ್ ಏಳ್ಯ ಗಲಿಗೆ ತಿಕ್ಕ್ಂಡ್' (ಮಂಗಳವಾರ ಅಮವಾಸ್ಯೆಯ ಫಲದಲ್ಲಿ ಸಿಂಹ ರಾಶಿಯಲ್ಲಿ ಸತ್ಯಮಲೋಕದ ಬಾಲಕ್ಕೆ ಸಿರಿಯ ಸೀಮಂತಕ್ಕೆ ವೇಳೆ ಘಳಿಗೆ) ಸಿಕ್ಕಿತು ಎಂದು ಬರುತ್ತದೆ.

ಲೀಲಾ ಅವರ ಪಠ್ಯದಲ್ಲಿ ಸಿರಿಯ ಸೀಮಂತಕ್ಕೆ ಅಜ್ಜನವರು ಹಾಗೂ ಮಗು ಕಾಂತನ ಇಬ್ಬರೂ ಬಲ್ಯಾಯ (ಜ್ಯೋತಿಷಿ)ನಲ್ಲಿಗೆ ಹೋಗಿ ದಿನ ಕೇಳುತ್ತಾರೆ. ಸಿರಿಗೆ ಔತಣದ ಸೀರೆ ತೆಗೆಯಲು ಇಬ್ಬರೂ ಬಟ್ಟುಕಲ್ಲ ಬೈಂದೂರ ಪೇಟೆಯ ಗುಮ್ಮಡ ಸೆಟ್ಟಿಯ ಅಂಗಡಿಗೆ ಹೋಗುವ ವಿವರ ಇದೆ. ಉಳಿದ ಪಠ್ಯಗಳಲ್ಲಿ ಕಾರ್ಲದ ಪೇಟೆಗೆ ಹೋಗುವ ಬಗೆಗಿದ್ದರೆ ಲೀಲಾ ಅವರು ಬಟ್ಟುಕಲ್ಲ ಬೈಂದೂರ ಪೇಟೆ ಎಂದರೆ ಈಗಿನ ಭಟ್ಕಳ ಹಾಗೂ ಬೈಂದೂರು ಇರಬಹುದೇ? ಇನ್ನಿತರ ವಿವರಗಳು ಉಳಿದ ಪಠ್ಯಗಳಂತಿವೆ. ರಾಮಕ್ಕ ಮುಗ್ಗೇರ್ತಿ ಅವರ ಪಠ್ಯದಲ್ಲಿ ಬಸಲೂರಲ್ಲಿ ಸೀಮಂತ ಆದ ನಂತರ ಸತ್ಯನಾಪುರದ ಅರಮನೆಯಲ್ಲಿಯೂ ಸಿರಿಗೆ ಇರೆ ನಿಲೆಕ್ಕೆ ಒರ್ಪೊರ್ತುದ ತಮ್ಮನ (ಎಲೆ ತುಂಬ ಒಂದು ಬಾರಿಯ ಔತಣ) ಬಡಿಸುವ ವಿವರ ಇದೆ.

ಕುಮಾರನ ಜನನ

ಸಿರಿಗೆ ಹೆರಿಗೆ ನೋವು ಕಾಣಿಸಿಕೊಂಡಿತು. ಸಿರಿ ಹಾಗು ಅಜ್ಜನವರು ಲಂಕೆಲೋಕನಾಡ ದೈವಕ್ಕೆ ಬಂಗಾರದ ಮಗು, ಬೆಳ್ಳಿಯ ತೊಟ್ಟಿಲು, ಹಿಡಿಹಣ ಹರಿಕೆ ಹೇಳಿಕೊಂಡರು. ಸಿರಿಗೆ ಗಂಡು ಮಗುವಿನೊಂದಿಗೆ ಸುಖಪ್ರಸವ ಆಗುವ ವಿಚಾರ ಕರ್ಗಿಯವರ ಹಾಗೂ ಇನ್ನಿತರ ಪಠ್ಯದಲ್ಲಿದೆ. ಶ್ಯಾಮರಾಯ ಶೆಟ್ಟಿಯವರ ಪಠ್ಯವು ಕುಮಾರನ ಜನನವನ್ನು ಸ್ವಲ್ಪ ಭಿನ್ನ ರೀತಿಯಲ್ಲಿ ತಿಳಿಸುತ್ತದೆ. ಜನನಕ್ಕೆ ಮೊದಲು ಮಗು ಗರ್ಭದಿಂದಲೇ ತಾಯಿಯೊಡನೆ ಸಂಭಾಷಣೆ ನಡೆಸುತ್ತದೆ.

ತುಳುಪಠ್ಯ

ಬಂಜಿಡ್ ಬಾಲೆ ಪಾತೆರುವೆ ನಾರಾಯಿನಪ್ಪೆರೆ ನಾರಾಯಿನಪ್ಪೆರೆ
ರಕ್ಕಸ ಕುಲ ಯಾನ್ ಈರೆ ಬಂಜಿಡ್ ಜನನೊಗು ಬತ್ತೆ
ನಾರಾಯಿನಪ್ಪೆರೆ ನೆತ್ತೆರ್‌ಗ್ ಬೂರಯೆ ಯಾನ್ ಕೆರೆಂಚಿಡ್ ಬರಯೆ ಯಾನ್
ಈರ್ ಪೆದ್ದ್‌ದ್ ಎನನ್ ಪುಲ ಪೂಜಡೆ
ಈರ್ ಎಂಚ ಉದಿಪನೊ ಆಯರೋ ಅಂಚನೇ ಉದಿಪನೊ ಯಾನ್ ಆವೊಡು

ಕನ್ನಡಾನುವಾದ

ಗರ್ಭದಲ್ಲಿ ಮಗು ಮಾತನಾಡುತ್ತದೆ ನಾರಾಯಣ ತಾಯಿಯವರೇ
ರಕ್ಕಸ ಕುಲ ನಾನು ನಿಮ್ಮ ಗರ್ಭದಲ್ಲಿ ಜನನಕ್ಕೆ ಬಂದೆ
ನಾರಾಯಣ ತಾಯಿಯವರೇ ರಕ್ತಕ್ಕೆ ಬೀಳಲಾರೆ ನಾನು ಕೆಸರಲ್ಲೆ ಬರಲಾರೆ
ನೀವು ನನ್ನನ್ನು ಹೆತ್ತು ಕಳ ಸಾರಿಸಬೇಡಿ
ನೀವು ಹೇಗೆ ಉದಯವಾದಿರೋ ಹಾಗೇ ನಾನೂ ಉದಯವಾಗಬೇಕು (ಪುಟ 82).

ತಾನು ಎಲ್ಲರಂತೆ ಜನ್ಮ ತಾಳಲು ತಯಾರಿಲ್ಲ ಎಂದು ಹೇಳುತ್ತಾ ತನ್ನ ಜನನದ ಅನಂತರ ಎದುರಾಗುವ ಎಲ್ಲ ಕಂಟಕಗಳ ಬಗೆಗೆ ಪೂರ್ವಸೂಚನೆ ನೀಡುತ್ತಾನೆ.

ತುಳುಪಠ್ಯ

ನಾರಾಯಣ ಮಗಾ ಎನ್ನ ಬಂಜಿಡ್ ಜನನಾಯಿ ಬಾಲೆದೋ
ನಾರಾಯಣ ಮಗಾ ಸೊರ್ಗೊ ಮಾರ್ಗೊ ಉಂಡು
ಸರಳ ಮಾರ್ಗೊ ಉಂಡು ಮಗಾ ಬಲತ್ತ ಕಾರ್ ಪಾಡ್ಲ ಮಗಾ ಬೂಮಿಗ್
ಅಲಿಯಾಂತ್ರ ಆವಂದಿಲೆಕೊ ಬೂಮಿಗ್ ಜನನೊಗು ಬಲ ಮಗಾಂದ್ ಪನ್ಪೆರ್

ಕನ್ನಡಾನುವಾದ

ನಾರಾಯಣ ಮಗಾ ನನ್ನ ಗರ್ಭದಿಂದ ಜನನವಾಗುವ ಮಗುವಲ್ಲವೇ
ನಾರಾಯಣ ಮಗಾ ಸ್ವರ್ಗ ಮಾರ್ಗವಿದೆ
ಸರಳ ಮಾರ್ಗವಿದೆ ಮಗಾ ಬಲದ ಕಾಲು ಹಾಕಿ ಭೂಮಿಗೆ ಬಾ ಮಗುವೇ
ಭೂಮಿ ಅಳಿಯದ ಹಾಗೆ ಜನನಕ್ಕೆ ಬಾ ಮಗ ಎಂದು ಹೇಳುತ್ತಾರೆ (ಪುಟ 82).

ಬಹುಶಃ ಮಗುವಿನ ಜನನದಿಂದ ಒದಗಿಬರುವ ವಿಪತ್ತುಗಳ ಬಗೆಗೆ ಸಿರಿಗೆ ಮೊದಲೇ ಪೂರ್ವ ಸೂಚನೆ ಇದ್ದದ್ದು ತಿಳಿಯುತ್ತದೆ. ಆದರೆ ಮಗು ಈ ಮಾತನ್ನು ಕೇಳದೆ ನಾನು ಯಾವ ಯಾವ ಮಾರ್ಗದಲ್ಲಿ ಬರಲಿ ಎಂಬುದನ್ನು ಕೇಳುತ್ತಾನೆ.

ತುಳುಪಠ್ಯ

ಯಾನ್ ಸೊರ್ಗೊ ಮಾರ್ಗೊಡೆ ಬರಾಯೆ ಎಂಕೊಂಜಿ ಸಾದಿ ಪನ್ಲೆಪ್ಪೆರೆ
ತರೆ ಉಡೆವೊಂದು ಬರ್ಪೆಪ್ಪೆರೇ ರಕ್ಕಸ ಕುಲತ್ತ ಮಗೆ ಯಾನ್
ತರೆ ಉಡೆವೊಂದು ಬತ್ತಡ ತರೆಟ್ಟ್ ಪುಟ್ಟಿ ತಮ್ಮಲೆಂದ್ ಪನ್‌ಂಬೆರ್ ಮಗಾ
ನಿರೆತ್ತಕುಲು ನಿಕ್ಕ್ ಕಲೆ ಪನ್‌ಂಬೆರ್ ಕುಲ ಗೋಸೆರ್ ಮಗಾ
ನಾರಾಯಣ ಅಪ್ಪೆರೇ ಬೆರಿ ಉಡೆವೊಂದು ಬರ್ಪೆಯಪ್ಪೆರೇ
ಬೆರಿಟ್ಟ್ ಬತ್ತಡ ಬೆರಿಟ್ಟ್ ಬತ್ತಿ ಮೆಗಿಂದ್ ಪನ್‌ಂಬೆರ್
ಅಪಕೀರ್ತಿದ ಪಾತೆರ ಬತ್ತ್‌ದ್ ಪೋವು ನಿಕ್ಕ್
ಮರ್ಗಿಲ್ ಉಡೆವೊಂದು ಬರ್ಪೆಯಪ್ಪೆರೇ
ಮರ್ಗಿಲ್‌ಡಿತ್ತಿನ ಕಂಡನಿಂದ್ ಪನ್ ಂಬೆರ್
ಬಂಜಿ ಉಡೆವೊಂದು ಬರ್ಪೆಯಪ್ಪೆರೇ
ಅಪ್ಪೆನ್ ಕೆರಿ ಕೆಂಗುಡೆಂದ್ ಪನ್‌ಂಬೆರ್ ನಿಕ್ಕ್
ಅಪಕೀರ್ತಿದ ಪಾತೆರ ಅವಸಾನ ಕಾಲ ಮುಟ್ಟ ಮುಗಿಯಂದ್ ಮಗಾ ನಿಕ್ಕ್

ಕನ್ನಡಾನುವಾದ

ನಾನು ಸ್ವರ್ಗಮಾರ್ಗದಿಂದ ಬರಲಾರೆ, ನನಗೊಂದು ದಾರಿ ಹೇಳಿ ತಾಯಿಯವರೇ
ತಲೆ ಸೀಳಿಕೊಂಡು ಬರುತ್ತೇನೆ ತಾಯಿಯವರೇ ರಕ್ಕಸಕುಲದ ಮಗ ನಾನು
ತಲೆ ಸೀಳಿಕೊಂಡು ಬಂದರೆ ತಲೆಯಲ್ಲಿ ಹುಟ್ಟಿದ ಮಾವನೆಂದಾರು ಮಗಾ
ನೆರೆಕರೆಯವರು ನಿನಗೆ ಕೊರತೆ ಹೇಳಿ ನಿನ್ನ ಕುಲಕ್ಕೆ ಅಪಮಾನ ತಂದಾರು ಮಗಾ
ನಾರಾಯಣ ತಾಯಿಯವರೇ ಬೆನ್ನು ಸೀಳಿಕೊಂಡು ಬರುತ್ತೇನೆ
ಬೆನ್ನಲ್ಲೆ ಬರಬೇಡ ಹಾಗೆ ಬಂದರೆ ಬೆನ್ನಲ್ಲೆ ಹುಟ್ಟಿದ ಸಹೋದರನೆಂದಾರು
ಅಪಕೀರ್ತಿಯ ಮಾತು ಬಂದು ಹೋದೀತು
ಮಗ್ಗುಲು ಸೀಳಿಕೊಂಡು ಬರುತ್ತೇನೆ ತಾಯಿಯವರೇ
ಹಾಗೆ ಬಂದರೆ ಮಗ್ಗುಲಲ್ಲಿ ಮಲಗುವ ಪತಿ ಎಂದಾರು
ಬಸಿರು ಸೀಳಿಕೊಂಡು ಬರುತ್ತೇನೆ ತಾಯಿಯವರೇ
ತಾಯಿಯನ್ನು ಕೊಂದ ಕೆಂಗುಡೆ ಎಂದು ಕರೆದಾರು
ಅಪಕೀರ್ತಿಯ ಮಾತು ಅವಸಾನ ಕಾಲದವರೆಗೆ ಮುಗಿಯದು ಮಗಾ ನಿನಗೆ (ಪುಟ 83)

ಹಾಗಾದರೆ ನನಗೊಂದು ದಾರಿ ಹೇಳಿ ಎನ್ನಲು ಮಗನೇ,

ತುಳುಪಠ್ಯ

ಬಲತ್ತ ಸಿರಿಮಿರೆನ್ ಪುಂಟುವೆ ಯಾನ್
ಬಂಗಾರ್‌ದ ಪರೆಲ್ ಮಗಾ

ಬೊಲ್ಲಿದ ತಟ್ಟೆ ಪತ್ತುವೆ ಯಾನ್
ಬಲತ್ತ ಸಿರಿಮಿರೆ ಪುಂಟ್‌ನಗಾ
ದಾಸೆಮಿದ ಒರು ಬಂಗಾರ್ದ ಕುರೂ
ಬೊಲ್ಲಿದ ತಟ್ಟೆಗ್ ಬಾಲೆ ಬೂರ್‌ಂಡ್‌ದೆ ಓ

ಕನ್ನಡಾನುವಾದ
ಬಲದ ಸಿರಿಮೊಲೆಯನ್ನು ಹಿಂಡುವೆ ನಾನು
ಬಂಗಾರದ ಹರಳಾಗಿ ಮಗಾ
ಬೆಳ್ಳಿಯ ತಟ್ಟೆ ಹಿಡಿಯುವೆ ನಾನು
ಬಲದ ಸಿರಿಮೊಲೆ ಹಿಂಡುವಾಗ
ಸಾಸಿವೆಯ ರೂಪದಲ್ಲಿ ಬಂಗಾರದ ಕುರುಹಾಗಿ
ಬೆಳ್ಳಿಯ ತಟ್ಟೆಗೆ ಮಗುವಾಗಿ ಬಿತ್ತು ಓ........ (ಶ್ಯಾಮರಾಯ ಶೆಟ್ಟಿ, ಪುಟ 84)

ಈ ರೀತಿಯ ಕುಮಾರನ ಜನನವನ್ನು ಕುರಿತಾದ ಮಾಹಿತಿಗಳು ಬೇರೆ ಯಾವುದೇ ಸಿರಿ ಕಾವ್ಯಗಳಲ್ಲಿ ಲಭ್ಯವಿಲ್ಲ. ತುಳುನಾಡಿನಲ್ಲಿ ಆರಾಧನೆಗೊಳ್ಳುವ ಗುಳಿಗ ಹಾಗೂ ಕೋಡ್ದಬ್ಬು ದೈವದ ಹುಟ್ಟು ಮಾತ್ರ ಈ ರೀತಿಯಲ್ಲಿ ಆಗುವುದನ್ನು ಅದರ ಸಾಹಿತ್ಯಿಕ ಭಾಗವಾದ ಪಾಡ್ದನ ತಿಳಿಸುತ್ತದೆ. ಈ ಬಗೆಗೆ ಶ್ಯಾಮರಾಯ ಶೆಟ್ಟಿಯವರನ್ನು ಕೇಳಿದಾಗ ನನ್ನ ಮಾವನವರು ಕುಮಾರ ಪಾತ್ರಿಯಾಗಿದ್ದರು ಹಾಗೂ ತಾಯಿಯವರಿಗೆ ಸಿರಿ ದರ್ಶನವಿತ್ತು. ಇವರಿಂದಲೇ ನಾನು ಈ ಸಂಧಿಯನ್ನು ಕಲಿತೆ ಎನ್ನುತ್ತಾರೆ. (ಸಂದರ್ಶನ, 18-3-2006). ಕುಮಾರನ ಜನನವನ್ನು ಕುರಿತು ಶ್ಯಾಮರಾಯ ಶೆಟ್ಟಿಯವರ ಹಾಡಿನಲ್ಲಿ ಈ ರೀತಿಯ ಮಾಹಿತಿಗಳು ಇರುವುದನ್ನು ಉರುಂಬಿದೊಟ್ಟು ಆಲಡೆಯಲ್ಲಿ ಶ್ರೀಮತಿ ಲಲಿತಾ ಅವರ ಗಮನಕ್ಕೆ ತಂದಾಗ ಅವರೂ ಈ ಮಾಹಿತಿಗಳು ಸರಿ ಎಂಬುದನ್ನು ನಾನು ನಡೆಸಿರುವ ಸಂದರ್ಶನದಲ್ಲಿ ಒಪ್ಪಿಕೊಂಡರು. ಇವರು ಕಂಡೇವು ಆಲಡೆಯಲ್ಲಿ ದಾರಗ ಪಾತ್ರಿಯಾಗಿ ದರ್ಶನಾವೇಶ ನಡೆಸುವವರು. ಲೀಲಾ ಅವರ ಅಕ್ಕ. ಆದರೆ ಲೀಲಾ ಶೆಡ್ತಿ, ಕರ್ಗಿ ಶೆಡ್ತಿಯವರು ಕುಮಾರನ ಈ ರೀತಿಯ ಜನನವನ್ನು ಕುರಿತಾದ ಮಾಹಿತಿಗಳನ್ನು ಒಪ್ಪಿಕೊಳ್ಳುವುದಿಲ್ಲ.

ಕರ್ಗಿಯವರ ಪಠ್ಯದಲ್ಲಿ ಉಳಿದ ಭಾಗ ಈ ರೀತಿ ಇದೆ. ಮಗುವಿನ ಜನನವಾದಾಗ ಅಜ್ಜನವರು ಬಲ್ಯಾಯ (ಜ್ಯೋತಿಷಿ)ನಲ್ಲಿಗೆ ಹೋಗಿ ಮಗುವಿನ ಜನನರಾಶಿ, ನಕ್ಷತ್ರ ಕೇಳಿದರು. ಆತ ಮುಂದೆ ನಡೆಯಬಹುದಾದ ವಿಪತ್ತುಗಳ ಬಗೆಗೆ ತಿಳಿಸಿ ಮಗುವಿನ ಮುಖವನ್ನು ನೀವು, ನಿಮ್ಮ ಮುಖವನ್ನು ಮಗು ನೋಡಬಾರದು. ನೋಡಿದರೆ ನಿಮಗೆ ಮರಣ, ತಂದೆಗೆ ಬೇಡಿ ತಿನ್ನುವ ಕಾಲ, ತಾಯಿ ದೇಶಾಂತರ ಹೋಗುವ ಫಲ, ಮಗು ಹುಟ್ಟಿದ ಜಾಗ ಸುಟ್ಟುಭಸ್ಮ (ಸುಡುಸೂಕರಿ)ವಾಗುವ ಲಕ್ಷಣ ಎನ್ನುತ್ತಾನೆ.

ಅಜ್ಜನವರಿಗೆ ಇದರಿಂದ ತಡೆಯಲಾರದ ದುಃಖವಾಗುತ್ತದೆ. ಇತ್ತ ಮಗು ಹುಟ್ಟಿದ ಮೈಲೆ ತೆಗೆಸಿ ಮಗುವನ್ನು ತೊಟ್ಟಿಲಲ್ಲಿ ಹಾಕಿ ಸತ್ಯಮಹಾಲೋಕದ ಸಿರಿಯ ಮಗ 'ಮುದ್ದುಕುಮಾರ' ಎಂದು ನಾಮರಣ ಮಾಡಿದರು.ಇಷ್ಟಾದರೂ ಮಗುವನ್ನು ನೋಡಲು ಕಾಂತು ಪೂಂಜನಾಗಲೀ, ಸಂಕರು ಪೂಂಜೆದಿಯಾಗಲೀ ಸತ್ಯನಾಪುರಕ್ಕೆ ಬರುವುದಿಲ್ಲ.

ಗೋಪಾಲ ನಾಯ್ಕರ ಪಠ್ಯದಲ್ಲಿ ಸಿರಿಗೆ ಒಂಬತ್ತು ತಿಂಗಳು ತುಂಬಿದರೂ ತನ್ನ ಗಂಡನಾಗಲೀ ಅತ್ತೆಯಾಗಲೀ ನೋಡಲು ಬಾರದಿರುವುದನ್ನು ಕಂಡು ಆಳನ್ನು ಕಳುಹಿಸಿ ಕೊಡುತ್ತಾರೆ. ಆದರೂ ನಾವು ಹಿಂದಿನಿಂದ ಬರುತ್ತೇವೆ, ನೀನು ಮುಂದಿನಿಂದ ಹೋಗೆಂದು ಆಳನ್ನು ಹಿಂದೆ ಕಳುಹಿಸುವ ವಿವರ ಇದೆ. ಕೊನೆಗೂ ಸಿರಿ ಗಂಡು ಮಗುವಿಗೆ ಜನನ ನೀಡುತ್ತಾಳೆ. ಮಗು ಹುಟ್ಟಿದ ಜನನ ನಕ್ಷತ್ರ ಕೇಳಲು ಬೆರಂಬಿ (ಬ್ರಾಹ್ಮಣ ಜ್ಯೋತಿಷಿ)ಗಳಲ್ಲಿಗೆ ಅಜ್ಜನವರು ಹೋಗುತ್ತಾರೆ. ಅವರು ಮಗುವಿನ ಜನನವನ್ನು ನೋಡಿ ಅಜ್ಜನವರನ್ನು ಕುರಿತು ಈ ರೀತಿ ಹೇಳುತ್ತಾರೆ.

ತುಳುಪಠ್ಯ

ಏರ್ ಬೆರ್ಮೆರ್‍ಪಾಲವಾ ಎಡ್ಡೆ ಗಲಿಗೆಡ್ ಬಾಲೆ ಜನನಾತ್‌ಂಡ್ ಎಡ್ಡೆ ಪೊರ್ತು
ಉಂಡು ಬೆರ್ಮೆರ್‍ಪಾಲವಾ
ಪಂಚಾಂಗೊಡು ಪುಟ್ಟಿ ನಚ್ಚತ್ರೊ ತೋಜಿದ್ ಬರ್ಪುಂಡು ಪನ್ಪೆರ್
ಕರಿಯನಮಾಸೆಡ್ ಪುಟ್ಟಿ ಬಾಲೆಮ್ಮ ಉಂದೂ ಬೆರ್ಮೆರ್‍ಪಾಲವಾ
ಬೊಲಿಯ ಗ್ರಾಣೊಡು ಜಲ್ಮೆತ್ತಿ ಬಾಲೆ ಒತ್ತರೆ ನಚ್ಚತ್ರೊಡು ಪುಟ್ಟಿ ಬಾಲೆಂದ್ ಪನ್ಪೆರ್..........

ಕನ್ನಡಾನುವಾದ

ಯಾರು ಬೆರ್ಮೆರ್‍ಪಾಲವಾ ಒಳ್ಳೆಯ ಘಳಿಗೆಯಲ್ಲಿ ಮಗುವಿನ ಜನನವಾಗಿದೆ
ಹಾಗೆ ಪಂಚಾಂಗದಲ್ಲಿ ಹುಟ್ಟಿದ ನಕ್ಷತ್ರ ತೋರಿ ಬರುತ್ತಿದೆ ಎನ್ನುತ್ತಾರೆ
ಕರಿಯ ಅಮವಾಸ್ಯೆಯಲ್ಲಿ ಹುಟ್ಟಿದ ಮಗು ಇದು ಬೆರ್ಮೆರ್‍ಪಾಲವಾ
ಕರಿಯ ಅಮಾವಾಸ್ಯೆ, ಬಿಳಿಯ ಗ್ರಹಣ ಕಾಲ ಉತ್ತರಾ ನಕ್ಷತ್ರದಲ್ಲಿ ಹುಟ್ಟಿದ ಮಗು ಇದು ಎನ್ನುತ್ತಾರೆ. ಮುಂದುವರಿದು

ತುಳುಪಠ್ಯ

ನಾರಾಯಿನ ಬೆರ್ಮೆರ್‍ಪಾಲವಾ ಕೇನಿದನಾ
ಬಾಲೆದ ಮೋರೆ ಅಜ್ಜೆರ್ ತೂಂಡ
ಅಜ್ಜೆರೆ ಮೋರೆ ಬಾಲೆ ತೂಂಡ
ಅಜ್ಜೆರೆಗ್ ಮರಣೊಂದು ಬಾಲೆ ಪುಟ್ಟಿ ನಚ್ಚತ್ರೊಡು ಉಂಡು

ಕನ್ನಡಾನುವಾದ
ನಾರಾಯನ ಬೆರ್ಮುಪಾಲವಾ ಕೇಳಿದ್ದೀಯೇ
ಮಗುವಿನ ಮುಖ ಅಜ್ಜನವರು ನೋಡಿದರೆ
ಅಜ್ಜನವರ ಮುಖ ಮಗು ನೋಡಿದರೆ
ಅಜ್ಜನವರಿಗೆ ಮರಣವೆಂದು ಮಗು ಹುಟ್ಟಿದ ನಕ್ಷತ್ರದಲ್ಲಿದೆ ಎನ್ನುತ್ತಾರೆ.
ಅಮೃತಸೋಮೇಶ್ವರರ ಪಠ್ಯದಲ್ಲಿ ಸಿರಿಯು

ತುಳುಪಠ್ಯ
ಒರ್ಂಬ ತಿಂಗೊಲು ಒರ್ಂಬ ದಿನೊಟ್ಟು ಒರ್ಂಬ ಗಲಿಗೆಡ್
ಒರ್ಂಬ ನಿಮಿಸೊಗು ಸೆಲಿವುಲ್ಲ ಮೋನೆಡ್ ಮೈಲೆದ ಬೇನೆ ತೋಜಿ ಬತ್ತ್ಂಡ್
ತೋಜಿನ ಬೇನೆಗ್ ಪಾಡಿನ ನೇಲೆಗ್ ಅಂಗಾರೆ ಬಾರೊ ಅಮಾಸೆದ ಪಲೊಟ್ಟು
ಸಿಂಗಂದ ರಾಸಿಡ್ ಗಂಡಾಂತರೊದ ಮೂಲ ನಕ್ಷತ್ರೊದ ಪಲೊಟು
ಸತ್ಯಮಲೋಕಂದ ಸಿರಿ ಪೆದ್ದ್ ಪೆದ್ಮಾನ ಪೋತೆರ್

ಕನ್ನಡಾನುವಾದ
ಒಂಭತ್ತು ತಿಂಗಳು ಒಂಭತ್ತು ದಿನ ಒಂಭತ್ತು ಘಳಿಗೆ
ಒಂಭತ್ತು ನಿಮಿಷದಲ್ಲಿ ತಿಳಿಯಾದ ಮುಖದಲ್ಲಿ ಹುಳಿಯಂಥ ನೋವು ಕಾಣಿಸಿಕೊಂಡಿತು
ತೋರಿದ ನೋವಿಗೆ ಹಾಕಿರುವ ನೇಲೆ (ಪ್ರಸವ ಕಾಲದಲ್ಲಿ ಆಧಾರಕ್ಕಾಗಿ ಇಡುವ ಹಗ್ಗ)ಯಲ್ಲಿ ಮಂಗಳವಾರ ಅಮಾವಾಸ್ಯೆಯ ಫಲದಲ್ಲಿ
ಸಿಂಹ ರಾಶಿಯಲ್ಲಿ ಗಂಡಾಂತರದ ಮೂಲ ನಕ್ಷತ್ರದಲ್ಲಿ
ಸತ್ಯಮಲೋಕದ ಸಿರಿಯ ಹೆರಿಗೆ ಆಯಿತು (ಪುಟ 172).

ಇದರಿಂದಾಗುವ ಅಪಾಯದ ಬಗೆಗೆ ಜಾತಕ ನೋಡಿದ ಬಲ್ಯಾಯರು

ತುಳುಪಠ್ಯ
ಪುಟ್ಟಿನ ಬಾಲೆಗ್ ಮೂಲ ನಚ್ಚತ್ರ ಮೂಲಲ ನಾಸ ಆವು
ಗಂಡಾಂತರ ಬರು ಬಿರ್ಮು ಆಳ್ವೆರ್ ಅಜ್ಜೆರ್
ಅವ್ವೊಂಜಿ ಬಾಲೆದ ಮೋನೆಡ್ ತೂಯಿ ಗಲಿಗೆಡ್
ವಿಸ ಗಲಿಗೆ ಬತ್ತ್ ಪಾಲ್ಯುಂಡು ಅಜ್ಜೆರೆಗ್ ಬರಾನ ಆಪತ್ತ್ ಬತ್ತ್ ಪಾಲ್ಯುಂಡು

ಕನ್ನಡಾನುವಾದ
ಹುಟ್ಟಿದ ಮಗುವಿಗೆ ಮೂಲ ನಕ್ಷತ್ರ ಮೂಲವೇ ನಾಶವಾದೀತು
ಗಂಡಾಂತರ ಬಂದೀತು ಬಿರ್ಮು ಆಳ್ವ ಅಜ್ಜನವರಿಗೆ

ಮಗುವಿನ ಮುಖದಲ್ಲಿ ನೋಡಿದ ಆ ಒಂದು ಘಳಿಗೆಯಲ್ಲಿ
ವಿಷ ಘಳಿಗೆ ಬಂದೆರಗುತ್ತದೆ ಅಜ್ಜನವರಿಗೆ ಬಾರದ ಆಪತ್ತು ಬಂದೊದಗುತ್ತದೆ (ಪುಟ 172)

ಶ್ಯಾಮರಾಯ ಶೆಟ್ಟಿಯವರ ಕಾವ್ಯದಲ್ಲಿ ಪುಣ್ಕೆದಡಿ ತಂಬೂರಿ ಬ್ರಾಹ್ಮಣ ಮಗು ಹುಟ್ಟಿದ ನಕ್ಷತ್ರ ನೋಡಿ ಈ ರೀತಿ ಹೇಳುತ್ತಾರೆ.

ತುಳುಪಠ್ಯ

ಉತ್ತರ ನಚ್ಚತ್ರ ಬಾಲೆದ ಅಜ್ಜೆರೆಗ್ ಮರಣೊ
ಅಪ್ಪೆ ದೇಸಾಂತ್ರಿ ಅಮ್ಮಗ್ ನಟ್ಟ್ ತಿನ್ಪಿ ಪಲೊ,
ಪುಟ್ಟಿ ಇಲ್ಲ್ ಸುಡುಸೂಕರಿ ಬಾಲೆದ ಮೋನೆಡ್ ಅಜ್ಜೆರ್ ತುಯೆರ್ಂಡ ಮರಣೊ

ಕನ್ನಡಾನುವಾದ

ಮಗುವಿನದ್ದು ಉತ್ತರ ನಕ್ಷತ್ರ ಅಜ್ಜನವರಿಗೆ ಮರಣ
ತಾಯಿಗೆ ದೇಶಾಂತರ ತಂದೆಗೆ ಬೇಡಿ ತಿನ್ನುವ ಕಾಲ
ಹುಟ್ಟಿದ ಮನೆ ಸುಟ್ಟುಭಸ್ಮವಾಗುವ ಲಕ್ಷಣ, ಮಗುವಿನ ಮುಖದಲ್ಲಿ ಅಜ್ಜನವರು ನೋಡಿದರೆ ಮರಣ (ಪುಟ 87)

ಲೀಲಾ ಶೆಡ್ತಿಯವರ ಪಠ್ಯವೂ 'ಮಗು ಸತ್ಯನಾಪುರದ ಜಲ್ಮಭೂಮಿಯಲ್ಲಿ ಮಂಗಳವಾರದಂದು ಉತ್ತರಾ ನಕ್ಷತ್ರದಲ್ಲಿ ಜನನವಾಯಿತು. ಆತ ಒತ್ತರೆ (ನಿರ್ನಾಮ) ಮಾಡಿಯಾನೆಂದು ಕಾಣಿಸುತ್ತದೆ. ಮಗುವಿನ ಮುಖದಲ್ಲಿ ಅಜ್ಜನವರು ನೋಡಿದರೆ ಮರಣ' ಎಂದು ಕಾಣಿಸುತ್ತದೆ.

ರಾಮಕ್ಕ ಅವರ ಪಠ್ಯದಲ್ಲಿ ಅಜ್ಜನವರು ಬಾರೆದಡಿ ಬಲ್ಯಾಯನಲ್ಲಿ ಮಗುವಿನ ಹುಟ್ಟಿನ ಬಗೆಗೆ ಕೇಳಲು ಅವರೂ

ತುಳುಪಠ್ಯ

ಒತ್ತಾರೆ ನಚ್ಚತ್ರೊಡು ಬೂಮಿಗ್ ಜನನೊಗು ಬತ್ತೆ
ಆಯೆ ಎಲ್ಲಿ ಪೋದು ಮಲ್ಲೆ ಆನೇಟ ಈರ್ ತೂವರೆ ಬಲ್ಲಿ
ಈರ್ ತೂಯರ್ಂಡ ಕಾಯೊ ಬುಡ್ದು ಕೈಲಾಸೊ ಪೋವರ್
ಜೂವೊ ಬುಡ್ದು ವೈಕುಂಟೊ ಸೇರ್ವರ್

ಕನ್ನಡಾನುವಾದ

ಉತ್ತರಾ ನಕ್ಷತ್ರದಲ್ಲಿ ಭೂಮಿಗೆ ಜನನಕ್ಕೆ ಬಂದ
ಆತ ಬೆಳೆದು ದೊಡ್ಡವನಾಗುವವರೆಗೆ ನೀವು ಅವನನ್ನು ನೋಡಬಾರದು

ನೀವು ನೋಡಿದರೆ ಕಾಯಬಿಟ್ಟು ಕೈಲಾಸ ಸೇರುವಿರಿ
ಜೀವಬಿಟ್ಟು ವೈಕುಂಠ ಸೇರುವಿರಿ.

ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಪಠ್ಯದಲ್ಲಿ ಈ ವಿವರಗಳು ಸ್ವಲ್ಪ ಬೇರೆ ರೀತಿಯಲ್ಲಿ ಬರುತ್ತವೆ.

ತುಳುಪಠ್ಯ
ಇನಿ ಕುಮಾರೆ ಪುಟ್ಟ್‌ದಿನ ಏಲ್ಯ ಗಲಿಗೆ ಅಜ್ಜೆರೆ ಕೇನಿದರೆಗೆನ
ಸರ್ವಾ ಲಚ್ಚನ ಕೊಂಡೋ ಪುಟ್ಟ್‌ದಿನ ಮಗೆ
ಆಯಗ್‌ಗೆ ಕುಮಾರೆಂದೇ ಪುದರ್ ಪುರಪ್ಪು ಅಜ್ಜೆರೆ
ಎಡ್ಡೆ ಏಲ್ಯ ಗಲಿಗೆಡ್ ಕುಮಾರೆ ಇನಿ ಬೂಮಿಗ್ ಜನನ ಆತೆ
ಆಂಡಲಾ ಅಜ್ಜೆರೆ ಈರ್ ಕುಮಾರನ ಮೋನೆಡ್ ತೂಂಡ ಈರೆಗ್ ಮರಣ ಉಂಡುಂದೆರಾ

ಕನ್ನಡಾನುವಾದ
ಇಂದು ಕುಮಾರ ಹುಟ್ಟಿರುವ ವೇಳೆ ಘಳಿಗೆ ಅಜ್ಜನವರೇ ಕೇಳಿದ್ದೀರೇ
ಸರ್ವ ಲಕ್ಷಣದಿಂದ ಹುಟ್ಟಿರುವ ಮಗ
ಅವನಿಗೆ ಕುಮಾರನೆಂದೇ ಹೆಸರು ವಂಶಾವಳಿ ಅಜ್ಜನವರೇ
ಒಳ್ಳೆಯ ವೇಳೆಘಳಿಗೆಯಲ್ಲಿ ಭೂಮಿಗೆ ಜನನವಾಗಿದ್ದಾನೆ
ಆದರೂ ಅಜ್ಜನವರೇ ನೀವು ಕುಮಾರನ ಮುಖವನ್ನು ಕಂಡರೆ ನಿಮಗೆ ಮರಣ ಇದೆ ಎನ್ನುತ್ತಾರೆ.

ಮೇಲಿನ ಎಲ್ಲ ಪಠ್ಯಗಳನ್ನು ಗಮನಿಸುವಾಗ ಕುಮಾರ ಜನಿಸಿದ ವೇಳೆ ಘಳಿಗೆ ಅಷ್ಟು ಉತ್ತಮವಾದುದಲ್ಲ ಎಂಬುದು ತಿಳಿಯುತ್ತದೆ. ಗೋಪಾಲ ನಾಯ್ಕರ ಪಠ್ಯವು ಮಗು ಕರಿಯ ಅಮವಾಸ್ಯೆ ಹಾಗೂ ಬಿಳಿಯ ಗ್ರಹಣದ ಫಲದಲ್ಲಿ ಉತ್ತರಾ ನಕ್ಷತ್ರದಲ್ಲಿ ಹುಟ್ಟಿದ ಮಗು ಎನ್ನುತ್ತದೆ. ಬಹುತೇಕ ಪಠ್ಯಗಳು ಮಗು ಉತ್ತರಾ ನಕ್ಷತ್ರದಲ್ಲಿ ಹುಟ್ಟಿರುವ ಕಾರಣ ತುಳುವಿನ' ಉತ್ತರೆಡ್ ಪುಟ್ಯೆಂಡ ಒತ್ತರೆ ಮನ್ಪೆ'(ಉತ್ತರಾ ನಕ್ಷತ್ರದಲ್ಲಿ ಹುಟ್ಟಿದರೆ ನಿರ್ನಾಮ ಮಾಡಿಯಾನು) ಎಂಬ ಗಾದೆಯಂತೆ ಆತ ಹುಟ್ಟಿದ ಅನಂತರ ಎಲ್ಲವೂ ನಿರ್ನಾಮವಾಗುವುದನ್ನು ತಿಳಿಸುತ್ತವೆ. ಅಮೃತರ ಪಠ್ಯವು ಮೂಲನಕ್ಷತ್ರದಲ್ಲಿ ಮಂಗಳವಾರ ದಂದು ಅಮವಾಸ್ಯೆಯ ಫಲದಲ್ಲಿ ಹುಟ್ಟಿರುವ ಕುರಿತು ತಿಳಿಸುತ್ತದೆ. ಒಟ್ಟಿನಲ್ಲಿ ಅಮವಾಸ್ಯೆಯ ಹೊತ್ತು, ಗ್ರಹಣದ ಕಾಲ, ಮಂಗಳವಾರ, ಉತ್ತರಾ ನಕ್ಷತ್ರ ಹಾಗೂ ಮೂಲ ನಕ್ಷತ್ರ ಇವೆಲ್ಲವೂ ಬಲ್ಯಾಯನಬಲ್ಮೆ(ಜ್ಯೋತಿಷ್ಯಾಸ್ತ್ರ) ಪ್ರಕಾರ ಜನನಕ್ಕೆ ಶುಭದಾಯಕವಲ್ಲ. ಆದುದರಿಂದಲೇ ಬಲ್ಯಾಯ ಅಜ್ಜನವರಿಗೆ ನೀವು ಮಗುವಿನ ಮುಖವನ್ನು ನೋಡ

ಬೇಡಿ, ನಿಮಗೆ ಮರಣ ಎಂಬುದನ್ನು ಮುಂಚಿತವಾಗಿ ತಿಳಿಸುತ್ತಾನೆ. ಅಲ್ಲದೆ ತಾಯಿಗೆ ದೇಶಾಂತರ ಹೋಗುವ ಸಂದರ್ಭ, ತಂದೆಗೆ ಬೇಡಿ ತಿನ್ನುವ ಕಾಲ ಹಾಗೂ ಹುಟ್ಟಿದ ಜಾಗ ಸುಟ್ಟುಭಸ್ಮ (ಸುಡುಸೂಕರಿ) ಎಂಬ ವಿಪತ್ತಿನ ಸೂಚನೆಗಳನ್ನು ನೀಡುತ್ತಾರೆ. ಒಂದು ಪಠ್ಯದಲ್ಲಿ ಮಗುವಿನ ನಕ್ಷತ್ರ ಮೂಲ ನಕ್ಷತ್ರವಾದುದರಿಂದ ಮೂಲವೇ ನಾಶವಾದೀತು ಎಂಬ ಮಾತುಗಳನ್ನು ಹೇಳುತ್ತಾರೆ. ಕೊನೆಗೆ ಅಜ್ಜನವರು ಇದಕ್ಕೆಲ್ಲ ಪಿರಿ(ಪರಿಹಾರ) ಇಲ್ಲವೇ ಎನ್ನಲು ಬ್ರಾಹ್ಮಣ ಯಾವುದಕ್ಕೆ ಪರಿಹಾರ ಮಾಡುತ್ತೀರಿ, ನಿಮ್ಮ ಹಣೆಬರಹ ಏನಿದೆಯೋ ಹಾಗೇ ಆಗುತ್ತದೆ ಎನ್ನುತ್ತಾರೆ.

ಹೀಗೆ ಹುಟ್ಟಿದ ಮಗುವಿಗೆ ಹೆಸರು ಇಡಬೇಕು. ಅಮೃತರ ಪಠ್ಯದಲ್ಲಿ 'ಕೋಟಿಪೂಂಜೆ ಸತ್ಯದ ಕುಮಾರೆಂದ್ ಪುದರ್ ಪುರಾಪು ಪಾಲಿದೆರ್' ಎಂದಿದೆ. ಹೀಗಾಗಿ 'ಕೋಟಿಪೂಂಜ ಕುಮಾರ' ಎಂಬ ಹೆಸರಿಡುವುದು ತಿಳಿಯುತ್ತದೆ. ಶ್ಯಾಮರಾಯ ಶೆಟ್ಟಿಯವರ ಪಠ್ಯದಲ್ಲಿ ಸಿರಿಯ ಹೆರಿಗೆ ಆದರೂ ಬಸಲೂರಿಂದ ಗಂಡನಾಗಲೀ, ತಾಯಿಯಾಗಲೀ ಬರಲೇ ಇಲ್ಲ. ಅಜ್ಜನವರು ಹಾಗೂ ಸಿರಿ ಹೇಳಿ ಕಳುಹಿದರೂ ಬಾರದಿದ್ದಾಗ ಅಜ್ಜನವರೇ ಮಗುವನ್ನು ತೊಟ್ಟಿಲಿಗೆ ಹಾಕಿಸುತ್ತಾರೆ. ಆದರೆ ಮಗುವಿನ ಮುಖ ನೋಡುವುದಿಲ್ಲ. ಮಗುವಿಗೆ 'ಈಸ್ವರ ದೂತೆ ವಿಷ್ಣು ಅಬತಾರದ ಮಗೆ ಬಾಲೆ ಸಿರಿಮಗೆ ಬಾಮಲ್ಲ ಕುಮಾರೆ' (ಈಶ್ವರ ಧೂತ, ವಿಷ್ಣು ಅವತಾರದ ಮಗು, ಮಗು ಸಿರಿಮಗ ಬಾಮಲ್ಲ ಕುಮಾರ) ಎಂದು ಹೆಸರಿಡುತ್ತಾರೆ. ಗೋಪಾಲನಾಯ್ಕರ ಪಠ್ಯದಲ್ಲಿ ಮಗುವಿನ ನಕ್ಷತ್ರ ನೋಡಿದ ಬೆರಂಬಿ (ಜ್ಯೋತಿಷಿ)ಗಳು 'ಇಂಬ್ಯೆ ಪೂಂಜೆ ಆದ್ ಕೆಲೆಪಿಬಿ ಬಾಲೆಂದ್ ಕೋಟಿ ಪೂಂಜೆಂದ್ ಪುದರ್ ದೀಡೊಲಿ' (ಮಗು ಹುಂಜನಂತೆ ಕೂಗುವವನಾದುದ ರಿಂದ (ಸಮರ್ಥ ಎನ್ನುವ ಅರ್ಥದಲ್ಲಿ) ಈತನಿಗೆ 'ಕೋಟಿಪೂಂಜ' ಎಂಬ ಹೆಸರಿಡಬಹುದು ಎನ್ನುತ್ತಾರೆ. ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಪಠ್ಯದಲ್ಲಿ ಮಗುವಿನ ಹುಟ್ಟಿದ ನಕ್ಷತ್ರ ನೋಡುವಾಗಲೇ ಕುಮಾರ ಹುಟ್ಟಿದ ವೇಳೆ ಘಳಿಗೆ ಚೆನ್ನಾಗಿದೆ ಎಂದು ಹೇಳುವ ಮೂಲಕ ಮಗುವಿಗೆ 'ಕುಮಾರ' ಎಂಬ ಹೆಸರಿಡುವುದು ತಿಳಿಯುತ್ತದೆ. ರಾಮಕ್ಕ ಅವರ ಪಠ್ಯದಲ್ಲಿ 'ಬಂಜೊಲಿಗೆಡ್ ಪುಟ್ಟುದೇ ಪುಂಜೊಲಿಗೆಡ್ ಪಟ್ಟ ಆಲುನಾ ಕೋಟಿಪೂಂಜೆಂದ್ ಪುದರ್ ದೀಪಾದ್' (ಬಂಜೊಳಿಗೆಯಲ್ಲಿ ಹುಟ್ಟಿದ್ದಾನೆ, ಪುಂಜೊಳಿಗೆ ಯಲ್ಲಿ ಪಟ್ಟವಾಳುವಾ ಕೋಟಿಪೂಂಜ ಎಂಬ ಹೆಸರಿಟ್ಟು) ಎಂದು ಬರುತ್ತದೆ. ಲೀಲಾಶೆಟ್ಟಿ ಅವರ ಪಠ್ಯದಲ್ಲಿ 'ಸತ್ಯಮಲೋಕಂದ ಸಿರಿಮಗ ವಜ್ರಮಾಲೋಕಂದ ಕುಮಾರ' ಎಂದು ಹೆಸರಿಟ್ಟರು ಎಂದು ಬರುತ್ತದೆ. ಹೀಗೆ ಬೇರೆ ಬೇರೆ ಪಠ್ಯಗಳಲ್ಲಿ ಕುಮಾರನ ಹುಟ್ಟು, ಸಾಮರ್ಥ್ಯಗಳಿಗನುಗುಣವಾಗಿ ಒಂದೊಂದು ಹೆಸರು ಪ್ರಾಪ್ತವಾಗಿರು ವುದು ಕಂಡುಬರುತ್ತದೆ.

ಸತ್ಯನಾಪುರದ ಅಜ್ಜನವರ ಮರಣ

ಒಂದು ದಿನ ಮಗುವಿನ ಮಲಿನ ಬಟ್ಟೆ (ತುಳುವಿನಲ್ಲಿ ಚೆನ್ನದನ) ತೊಳೆಯಲು

ದಾರು ಹಾಗು ಸಿರಿ ಸಮೀಪದ ಹೊಳೆಗೆ ಹೋಗುತ್ತಾರೆ. ಇತ್ತ ತೊಟ್ಟಿಲಿನಲ್ಲಿ ಮಗು ರಟ್ಟಿ ರಟ್ಟಿ ಅಳಲಾರಂಭಿಸುತ್ತದೆ. ಅಜ್ಜನವರು ಓಡಿ ಹೋಗಿ ಮಗುವನ್ನೆತ್ತಿಕೊಳ್ಳಲು ಮಗು ಅಜ್ಜನವರ ಮುಖ ನೋಡಿ ನಗುತ್ತದೆ. ಅಜ್ಜನವರಿಗೆ ಮರಣ ಸಂಭವಿಸುತ್ತದೆ. ಸಿರಿ ಮತ್ತು ದಾರು ಬಂದು ನೋಡುವಾಗ ಅಜ್ಜನವರು ಮರಣವನ್ನಪ್ಪಿರುತ್ತಾರೆ. ಬಲ್ಯಾಯ (ಜ್ಯೋತಿಷಿ) ಹೇಳಿದ ಭವಿಷ್ಯವಾಣಿ ನಿಜವಾಗುತ್ತದೆ. ಕುಮಾರನ ಜನನದ ಸಂತೋಷದ ಜೊತೆಗೇ ಅಜ್ಜನವರ ಮರಣದ ದುಃಖವೇ ಎಂದು ಸಿರಿ, ದಾರು ಬಹುವಾಗಿ ದುಖಿಸುತ್ತಾರೆ. ಗೋಪಾಲನಾಯ್ಕರ ಪಠ್ಯದಲ್ಲಿ ಮಗು ಅಳುವುದನ್ನು ಈ ರೀತಿಯಲ್ಲಿ ಹೇಳಲಾಗಿದೆ.

ತುಳುಪಠ್ಯ

'ಮುರುಲುದು ಬುಲಿಪುವೆ ಮುನ್ನೂದು ಮೈಲ್‌ಗ್
ನರೆಲ್‌ದ್ ಬುಲಿಪುವೆ ನಾಲ್ನೂದು ಮೈಲ್‌ಗ್
ಸೊರೊದನಿ ಕೊರ್ಪೆ ರಟ್ಟ್ ರಟ್ಟ್‌ದ್ ಬುಲಿಪ್ಪುವೆ'

ಕನ್ನಡಾನುವಾದ

ಗುರುಗುಟ್ಟಿ ಅಳುವ ಸದ್ದು ಕೇಳಿಸುತ್ತದೆ ಮುನ್ನೂರು ಮೈಲಿಗೆ
ನರಳಾಡಿ ಅಳುವ ಸದ್ದು ಕೇಳಿಸುತ್ತದೆ ನಾಲ್ನೂರು ಮೈಲಿಗೆ
ಸ್ವರದನಿ ಕೊಡುತ್ತಾನೆ ರಟ್ಟಿರಟ್ಟಿ ಅಳುತ್ತಾನೆ.

ಈ ರೀತಿಯಲ್ಲಿ ಮಗು ಅಳುವುದನ್ನು ನೋಡಲಾರದೆ ಅಜ್ಜನವರು ದಾರು ಹಾಗೂ ಸಿರಿಯನ್ನು ಕರೆಯುತ್ತಾ ಬರುತ್ತಾರೆ. ಅವರು ಇಲ್ಲದುದನ್ನು ಕಂಡು ಅಜ್ಜನವರು ಓಡಿಹೋಗಿ ಮಗುವನ್ನೆತ್ತಿಕೊಂಡು ಬಂದು ತೂಗುಯ್ಯಾಲೆಯಲ್ಲಿ ಕುಳಿತು ಮಗುವಿನ ಮುಖವನ್ನು ನೋಡುತ್ತಾರೆ. ಇದರಿಂದ ಅಜ್ಜನವರಿಗೆ ಮರಣ ಸಂಭವಿಸುವ ವಿವರಗಳಿವೆ. ರಾಮಕ್ಕ ಅವರ ಪಠ್ಯವು ಅಜ್ಜನವರ ಈ ರೀತಿಯ ಸಾವು ಸಂಭವಿಸಿದಾಗ ಸಿರಿಯ ಬಾಯಿಂದ ಈ ರೀತಿಯ ಮಾತು ಬರುವುದನ್ನು ತಿಳಿಸುತ್ತದೆ.

ತುಳುಪಠ್ಯ

'ಈ ಸುಡುಪೋಯಿ ಮೋನೆದಾಯನ್ ಜನನಾವೊಡಾಂಡ
ನಮ್ಮಜ್ಜೆರೆಗ್ ಇಡೆ ಮುಟ್ಟದ ಕಷ್ಟೊ ತಿಕೊಡಾಂಡಾ'

ಕನ್ನಡಾನುವಾದ

ಈ ಸುಟ್ಟುಹೋದ ಮುಖದವನ ಜನನವಾಗಬೇಕಿತ್ತಾ
ನಮ್ಮ ಅಜ್ಜನವರಿಗೆ ಈ ರೀತಿಯ ಮರಣಸಿಗಬೇಕಿತ್ತಾ

ಎಂಬುದಾಗಿ ದುಃಖಿಸುವ ವಿವರಗಳಿವೆ.

ಲೀಲಾ ಅವರ ಪಠ್ಯದಲ್ಲಿ ಅಜ್ಜನವರು ಮಗು ಅಳುವುದನ್ನು ನೋಡಿ ಓಡಿ ಬಂದು ಮಗುವನ್ನೆತ್ತಿಕೊಳ್ಳಲು ಮಗು ಅಜ್ಜನವರ ಮುಖವನ್ನು ನೋಡಿ ಕಿಸಕ್ಕನೆ ನಗುವ ವಿಚಾರ ಇದೆ. ಮಗುವಿನ ಮುಖವನ್ನು ನೋಡಿದ ಅಜ್ಜನವರ ಮರಣ ಸಂಭವಿಸುತ್ತದೆ. ಅಮೃತರ ಪಠ್ಯದಲ್ಲಿ ಬಹುತೇಕವಾಗಿ ಮೇಲೆ ತಿಳಿಸಿರುವ ವಿವರಗಳೇ ಬರುತ್ತವೆ. ಇದಲ್ಲದೆ ಅಜ್ಜನವರು ಪ್ರಾಣ ಬಿಡುವ ಸಂದರ್ಭ ದಾರು ಓಡೋಡಿ ಬಂದು ನಿಮ್ಮ ಚಾಕರಿಯನ್ನು ಈವರೆಗೆ ಮಾಡಿದೆ. ಇನ್ನು ನನಗೆ ಗತಿಗೋತ್ರ ಏನೆಂದು ಕೇಳಲು ಅಜ್ಜನವರು ನನ್ನ ಮೊಮ್ಮಗ ಸಿರಿಯ ಮಗ ಸತ್ಯಂದ ಕುಮಾರ ಕೋಟಿಪೂಂಜ ಇದ್ದಾನೆ, ಅವನ ಚಾಕರಿ ಮಾಡು ಎಂದು ಹೇಳಿ ಪ್ರಾಣ ಬಿಡುತ್ತಾರೆ. ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಪಠ್ಯದಲ್ಲಿ ಕುಮಾರನ ಜನನವಾದರೂ ಬಸಲೂರಿಂದ ಅತ್ತೆಯವರಾಗಲೀ, ತನ್ನ ಗಂಡನಾಗಲೀ ಬಾರದಿರುವುದು ನೋಡಿ ಸಿರಿ ದುಃಖಿಸುತ್ತಾಳೆ. ಕೊನೆಗೆ ಅಜ್ಜನವರೇ ಹದಿನಾರರ ಪುರುಡು ತೆಗೆಸಲು ನಾಲ್ಕು ಮನೆಯವರಿಗೆ ಹೇಳಿ ಕಳುಹಿಸುತ್ತಾರೆ.

ಬಲ್ಲ್ ಪತ್ತಿ ಬೊಲ್ಲಿಮಾಡೊಡು ಅಮುರ್ತೊ ಗಲಿಗೆಡ್ ಅಜ್ಜೆರ್ ತೊಟಿಲ್ ಗೋಪಾವೆರ್ (ಅಮೃತ ಗಳಿಗೆಯಲ್ಲಿ ಹಗ್ಗ ಹಾಕಿ ಬೆಳ್ಳಿಯ ಮಾಡದಲ್ಲಿ ತೊಟ್ಟಿಲು ಹಾಕಿಸುತ್ತಾರೆ ಅಜ್ಜನವರು). ದಾರು ನಾರಾಯಣ ಸ್ವರ ಹಾಕಿ ಮಗುವನ್ನು ತೂಗುತ್ತಿದ್ದಾಳೆ. ಮಗು ಹಾಗೂ ಸಿರಿಗೆ ನಲುವತ್ತು ದಿನವಾಗುವಾಗ ಸತ್ಯನಾಪುರದರಮನೆಯಲ್ಲಿ ತಿಂಗಳ ಕ್ರಮ ಮಾಡಿಸುತ್ತಾರೆ. ಸಿರಿಯನ್ನು ಬಾವಿ ಮುಟ್ಟಿಸುವ ಕ್ರಮ ಮಾಡುತ್ತಾರೆ. ಹೀಗಿರಲು ಒಂದು ದಿನ ಸಿರಿ ಮುಟ್ಟಾಗುತ್ತಾಳೆ. ಸಿರಿ ಹಾಗೂ ದಾರು ಸೀಗೆಬಾಗೆ, ಬೆಟ್ಟುಗದ್ದೆಯ ಸರೊಳಿ (ಲೋಳೆ ಸೊಪ್ಪು) ಹಿಡಿದುಕೊಂಡು ಶುದ್ಧಕ್ಕೆ ಸುಳಿನೀರು ಸ್ನಾನ ಮಾಡಲು ಸತ್ಯನಾಪುರದ ಮುತ್ತಿನ ಕೆರೆಗೆ ಹೋಗುತ್ತಾರೆ. ಸಿರಿಯನ್ನು ದಾರು ಸೀಗೆಬಾಗೆ ಹಾಕಿ ಸ್ನಾನ ಮಾಡಿಸುವ ವೇಳೆ ಮಗು ಅಳಲು ಪ್ರಾರಂಭಿಸುತ್ತದೆ. ದಾರುವನ್ನು ಕರೆಯಲು ಅವಳು ಕಾಣಿಸುವುದಿಲ್ಲ. ಹೀಗಾಗಿ ಅಜ್ಜನವರೇ ಮಗುವನ್ನೆತ್ತಿಕೊಂಡು

ತುಳು ಪಠ್ಯ

ಕಿನ್ನಿಬಾಲೆನ್ ಬಯಕೊಂಡೆರ್ ತೋಲಾರ ತೊಟ್ಟಿಯೇರ್
ಆರಡ ಮಗಾ ಬುಲಿಪಡಂದ್ ಮಾನಾದೆರ್ ಅಜ್ಜೆರ್

ಕನ್ನಡಾನುವಾದ

ಸಣ್ಣ ಮಗುವನ್ನು ಮುದ್ದಾಡಿದರು ತೋಳಲ್ಲಿ ಅಪ್ಪಿಕೊಂಡರು
ಅಳಬೇಡ ಮಗಾ ದುಃಖಿಸಬೇಡ ಎಂದು ತೂಗಿದರು ಅಜ್ಜನವರು.

ಇದನ್ನು ಸಿರಿ ಹಾಗೂ ದಾರು ನೋಡಿ ಓಡೋಡಿ ಬಂದು ನಾನು ಹೇಳಿರುವ

ಮಾತು ಮರೆತಿರೇ ಅಜ್ಜನವರೇ ಎಂದು ಮಗುವನ್ನು ಎಳೆದುಕೊಳ್ಳಲು 'ಮಗು ಹುಟ್ಟಿ ಮೂರು ತಿಂಗಳಾದರೂ ಮಗುವಿನ ಮುಖ ನೋಡಲು ಬಿಡಲಿಲ್ಲ ನೀವು' ಎಂದು ಉದ್ಗರಿಸುತ್ತಾರೆ.

ತುಳುಪಠ್ಯ

ದಾನೆಮಗ ಸಿರಿಯೇ ಎನ್ನ ಮುದ್ದು ಮೋವ ಮೋಕೆಂದ ಪುಲ್ಲಿನ್
ಎಂಕ್ ತೂವರೆ ಇಜ್ಜಾಂದ್ ಅಜ್ಜೆರ್ ಪಣ್ಣಾಗ
ದಡ್ಡಪ್ಪ ಮಗ್‌ರ್ಯೆರ್ ಕಾಯೊ ಬುಡು ಕೈಲಾಸೊಗು ಸಂದಿಯೆರ್

ಕನ್ನಡಾನುವಾದ

ಏನು ಮಗ ಸಿರಿಯೇ ನನ್ನ ಮುದ್ದು ಮೋಹದ ಮೊಮ್ಮಗನನ್ನು
ನನಗೆ ನೋಡಲು ಇಲ್ಲವೇ ಎಂದು ಅಜ್ಜನವರು ಕೇಳಲು
ದಡ್ಡನೆ ಮಗುಚಿ ಬಿದ್ದರು ಕಾಯ ಬಿಟ್ಟು ಕೈಲಾಸ ಸೇರಿದರು.

ಸಿರಿ ಮುಟ್ಟಾಗಿ ಸ್ನಾನಕ್ಕೆ ಹೋಗುವ ವಿವರಗಳು ಬೇರೆ ಪಠ್ಯಗಳಲ್ಲಿ ದೊರೆಯುವುದಿಲ್ಲ.

ಕರ್ಗಿಯವರ ಪಠ್ಯದಲ್ಲಿ ಅಜ್ಜನವರ ಮರಣವಾದಾಗ ಸಿರಿ ಬಸಲೂರಿಗೆ ಹೇಳಿ ಕಳುಹಿಸುತ್ತಾಳೆ. ಕಾಂತಾಳ್ವ ಮನೆಯಲ್ಲಿದ್ದು ಕೊಂಡೇ ಇಲ್ಲ ಎಂದು ಹೇಳಿ ಕಳುಹಿಸಿದ. ಇತ್ತ ಸಿರಿ ಅಜ್ಜನವರ ಅಂತ್ಯ ಸಂಸ್ಕಾರಕ್ಕೆ ಎಲ್ಲ ಸಿದ್ಧತೆಗಳನ್ನು ಮಾಡಿದರೂ ಕಾಂತು ಪೂಂಜ ಸುಳಿಯಲಿಲ್ಲ. ಹೆಣ್ಣನ್ನೂ ಮಣ್ಣನ್ನೂ ಧಾರೆ ಎರೆದು ಕೊಟ್ಟ ಅಜ್ಜನವರಿಗೆ ಸತ್ಯನಾಪುರದ ಅರಮನೆಯನ್ನು ಬೆಳಗಿಸಿಯೇನು ಎಂಬುದಾಗಿ ಕೊಟ್ಟ ಮಾತನ್ನು ಮರೆಯುತ್ತಾನೆ. ಇದರ ಹಿಂದಿನ ಮರ್ಮ ಸಿರಿಗೆ ತಿಳಿಯುತ್ತದೆ. ಸಿರಿ ತಾನೊಬ್ಬಳೇ ಬೆರ್ಮೆರ್ ಸತ್ಯದಿಂದ ಅಜ್ಜನವರ ಹೆಣವನ್ನು ಹೊತ್ತು ಕಾಷ್ಠದಲ್ಲಿರಿಸಿ ಸಂಸ್ಕಾರ ಮಾಡುತ್ತಾಳೆ. ಕರ್ಗಿಯವರು ಬಂಟ ಜನಾಂಗದಮರಣದ ಸಂದರ್ಭದಎಲ್ಲ ವಿಧಿವಿಧಾನಗಳ ವಿವರಗಳನ್ನು ಇಲ್ಲಿ ನೀಡುತ್ತಾರೆ.

ಅಜ್ಜನವರ ಶವ ಸಂಸ್ಕಾರ, ಕಾಂತುಪೂಂಜನಿಂದ ಮೋಸದ ಪಂಚಾಯತಿಗೆ, ಸಿರಿ ದೇಶಾಂತರ ಹೊರಡುವುದು ಇತ್ಯಾದಿ

ಕರ್ಗಿಯವರ ಪಠ್ಯದಲ್ಲಿ ದಾರು ಅಜ್ಜನವರ ಮರಣದ ಅನಂತರ ನಾನಿನ್ನು ಹೊರಡುತ್ತೇನೆ ಎನ್ನುತ್ತಾಳೆ. ಸಿರಿಯು ತಡೆದು ನನಗೂ ಇನ್ನು ಯಾರೂ ಇಲ್ಲ, ನಿನಗೂ ದಿಕ್ಕುದೆಸೆ ಇಲ್ಲ, ಹೋಗಬೇಡ ಎನ್ನುತ್ತಾಳೆ. ಇಬ್ಬರೂ ಅಜ್ಜನವರ ದುಃಖದ ಗಂಜಿ ಊಟ ಮಾಡುತ್ತಾರೆ. ಮೂರನೆಯ ದಿನ ಸಿದ್ದುಲ್ಲ ಬಂಡಾರಿ (ಕ್ಷೌರಿಕ)ಯನ್ನು ಕರೆಸಿ ಅಜ್ಜನವರನ್ನು ಸುಟ್ಟ ಬೂದಿಯನ್ನು ಪೇರಿಸಿ ಗೋರಿಗೆ ಎಳನೀರು ಇರಿಸುತ್ತಾರೆ.

ಅಷ್ಟಾಗುವಾಗ ಬಸಲೂರ ಅರಮನೆಯಿಂದ ನಾಗರಿಕರ ಕೂಟ ಏರ್ಪಡಿಸಿದ ಓಲೆಯೊಂದು ಬರುತ್ತದೆ. ಇದು ಕಾಂತುಪೂಂಜನ ಮೋಸದ ಆಟ ಎಂಬುದು ಸಿರಿಗೆ ಅರ್ಥವಾಗುತ್ತದೆ. ಆದರೂ ಈ ಪಂಚಾಯತಿಯ ಕೂಟಕ್ಕೆ ಸಿರಿ ಹೋಗುತ್ತಾಳೆ. ಅಲ್ಲಿ ಇನ್ನು ಮುಂದಕ್ಕೆ ಸತ್ಯನಾಪುರದ ಹೊರಗಿನ ಆಡಳಿತ ಕಾಂತಾಳ್ವನಿಗೂ, ಒಳಗಿನ ಆಡಳಿತ ಮಾತ್ರ ನಿನಗೆ ಎನ್ನುತ್ತಾರೆ. ಸಿಟ್ಟುಗೊಂಡ ಸಿರಿ ಸತ್ಯನಾಪುರದ ಆಡಳಿತವೇ ಬೇಡ ಎಂದು ಮೋಸದ ಪಂಚಾಯತಿಯನ್ನು ತಿರಸ್ಕರಿಸಿ ಬರುತ್ತಾಳೆ. ದಾರುವನ್ನು ಕರೆದು ತೊಟ್ಟಿಲ ಮಗು ಹೊರಗಿಡು ಎನ್ನುತ್ತಾಳೆ. ದಾರು ಸಿರಿಯನ್ನು ಸಮಾಧಾನ ಪಡಿಸಲು ನೀನು ಕಾಂತುಪೂಂಜನ ಸೇವೆಗೆ ನಿಲ್ಲವುದಾದರೆ ನಿಲ್ಲು. ನಾನು ಹೊಡುತ್ತೇನೆ ಎಂದು ಹೇಳಿ ಹೊರಡುತ್ತಾಳೆ. ಇಲ್ಲ ಅಕ್ಕನವರೇ ನಿಮ್ಮ ಬೆವರು ಬಿದ್ದಲ್ಲಿ ನನ್ನ ರಕ್ತ ಬೀಳಲಿ ಎಂದು ದಾರುವೂ ಕುಮಾರನ ತೊಟ್ಟಿಲು ಹೊತ್ತುಕೊಂಡು ಹೊರಡುವ ಮುನ್ನ ದಾರು ಕಪಿಲೆ ದನದ ಹಾಲು ತಂದು ಕೊಡುತ್ತಾಳೆ. ಅದನ್ನು ಕುಡಿದ ಸಿರಿ ಕಪಿಲೆ ದನಕ್ಕೆ ಹುಲ್ಲು ಕೊಟ್ಟು

ತುಳುಪಠ್ಯ

ಇನಿಮುಟ್ಟಗ್ ಈಯೆ ಒಂಜಿ ಅಂಡೆಪೇರ್ ಒಂಜಿ ಗಿಂಡೆ ಪೇರ್ ಕೊರ್ಪುನ ಕಬುಲ್ತಿಯೇ
ಇನಿಡ್ದ್ ಬುಕ್ಕ ಓ ಸಂಕರಾಲ್ವೆಗೆನಾ ಗಿಂಡೆ ಕೊನೊದು ಬನ್ನಗ ಬೋರಿ ಆವೊಡು
ನುಗೊ ಕೊನೊದು ಬನ್ನಗ ಪೆತ್ತ ಆವೊಡು ಈಯೇ
ಕಾಡತಪ್ಪೊ ಓ ತೋಡ ನೀರ್ ಪರೊನುದು ಇನಿಡ್ದ್ ಬುಕ್ಕೊ
ಗೊಡ್ಡು ಕಡಮಾದೆ ಕಾಡ್ ಪತ್ತೊಡು ಅಂಚಿತ್ತಿ ವರ ಪಾಲ್ಯೆರ್

ಕನ್ನಡಾನುವಾದ

ಇಂದಿನವರೆಗೆ ನೀನು ಒಂದು ಹಂಡೆ ಹಾಲು ಒಂದು ಗಿಂಡೆಹಾಲು ಕೊಡುವ ಕಪಿಲೆಯಾಗಿದ್ದಿ
ಇನ್ನು ಮುಂದಕ್ಕೆ ಸಂಕರಾಳ್ವ ಗಿಂಡೆ ಹಿಡಿದು ಹಾಲು ಕರೆಯಲು ಬರುವಾಗ ನೀನು ಹೋರಿ ಆಗಬೇಕು
ನೊಗ ಹಿಡಿದು ಉಳಲು ಬರುವಾಗ ದನ ಆಗಬೇಕು
ಕಾಡ ಸೊಪ್ಪು ತೋಡಿನ ನೀರು ಕುಡಿದು ಇನ್ನು ಮುಂದಕ್ಕೆ
ಗೊಡ್ಡು ಕಡವೆಯಾಗಿ ಕಾಡುದಾರಿ ಹಿಡಿಯಬೇಕೆಂಬ ವರ ದಯಪಾಲಿಸಿದರು

(ಪುಟ 166).

ಹೀಗೆ ಕುಮಾರ, ಸಿರಿ ಹಾಗೂ ದಾರು ಹೊಟ್ಟೆತುಂಬ ಹಾಲು ಕುಡಿದು ಕುಮಾರನ ಬಂಗಾರದ ತೊಟ್ಟಿಲನ್ನು ಹೊರಗಿಡುವಂತೆ ದಾರುವಿಗೆ ಹೇಳುತ್ತಾಳೆ. ದಾರು ಅಜ್ಜನವರು

ಕಟ್ಟಿರುವ ತೊಟ್ಟಿಲನ್ನು ಹೇಗೆ ಬಿಚ್ಚಲಿ ಎಂದು ದುಃಖಿಸಿ ಕೊನೆಗೆ ಬಿಚ್ಚಿ ಆನೆ ಬಾಗಿಲಿಂದ ತರಲೇ, ಕಿರುಬಾಗಿಲಿಂದ ತರಲೇ ಎಂದು ಕೇಳುತ್ತಾಳೆ. ಕುಮಾರನ ತಂದೆಯ ಮನೆಗೆ ಸುಖಸಂತೋಷದಿಂದ ಹೋಗುವುದಾದರೆ ಆನೆ ಬಾಗಿಲಿನಿಂದ ತರ ಬಹುದಿತ್ತು. ನಾವು ದುಃಖದಿಂದ ದೇಶಾಂತರ ಹೊರಡುವವರು. ದೇಶಾಂತರ ಹೋಗುವ ಕಾರಣ ಹಿಂದಣ ಕಿರುಬಾಗಿನಿಂದ ತಾ ಎನ್ನುತ್ತಾರೆ. ತೊಟ್ಟಿಲನ್ನು ಕೆಂದಾಳೆ ಪದ್ಮಕಟ್ಟೆಯ ಬುಡದಲ್ಲಿ ದಾರುವಿನ ತಲೆಗೆ ಹೊರಿಸಲು ತಲೆಗೆ ಒಂದು ತುಂಡು ಸಿಂಬಿ ಇಲ್ಲ ಎಂದು ದುಃಖಿಸಲು ಸಿರಿ ಬಸಲೂರಲ್ಲಿ ತನ್ನ ಗಂಡ ಸೀಮಂತಕ್ಕೆ ತೆಗೆದ ಪಟ್ಟೆ ಸೀರೆಯನ್ನು ಎರಡು ತುಂಡು ಮಾಡಿ ಒಂದರಲ್ಲಿ ತೊಟ್ಟಿಲು ಹೊರಲು ಸಿಂಬಿಯೂ ಇನ್ನೊಂದು ತುಂಡನ್ನು ಕುಮಾರನ ತೊಟ್ಟಿಲಿಗೂ ಹಾಸುತ್ತಾಳೆ. ಕೆಂದಾಳೆ ಮರವನ್ನು ನೋಡಿ ಈವರೆಗೆ ನಮಗೆ ಬೇಕಾಗುವಷ್ಟು ಫಲ ಕೊಟ್ಟೆ, ಇಂದಿನಿಂದ ಫಲ ಬಿಟ್ಟಷ್ಟು ಉದುರಿಹೋಗಬೇಕೆಂದು ಶಪಿಸುತ್ತಾರೆ. ಕಂಬಳದ ಗದ್ದೆಯೂ ಪಾಳುಬಿದ್ದು ಹೋಗುವಂತೆ ಶಪಿಸುತ್ತಾರೆ. ದೈವಗಳ ಗುಡಿಯಲ್ಲಿ ಉರಿಸುತ್ತಿದ್ದ ಹೊನ್ನೆಯ ದೀಪಕ್ಕೆ ಬೇಕಾದಷ್ಟು ಎಣ್ಣೆಯಕಾಯಿ ದೊರೆಯುತ್ತಿದ್ದ ಹೊನ್ನೆ ಮರಕ್ಕೂ ಶಪಿಸಿ ಕೊನೆಗೆ ಇಡೀ ಸತ್ಯನಾಪುರದರಮನೆಯೇ ಸುಟ್ಟುಭಸ್ಮ (ಸುಡುಸೂಕರಿ)ವಾಗುವಂತೆ ಶಪಿಸಿ ಬಾಳುವವನಿಗೆ ಬಡಗಣ ರಾಜ್ಯ, ಕೆಟ್ಟವನಿಗೆ ತೆಂಕಣ ರಾಜ್ಯ ಎಂದು ಹೇಳಿ ದೇಶಾಂತರ ಹೋಗುವುದಾದರೂ ಸ್ವತಂತ್ರವಾಗಿರಬೇಕೆಂದು ಹೇಳಿ ಹೊರಡುವ ವಿವರಗಳಿವೆ.

ಶ್ಯಾಮರಾಯ ಶೆಟ್ಟಿಯವರ ಪಠ್ಯದಲ್ಲಿ ಅಜ್ಜನವರ ಮರಣದ ಸುದ್ದಿಯನ್ನು ಸಿರಿ ತನ್ನ ಗಂಡನಿಗೆ ಓಲೆ ಕಳುಹಿಸಿ ತಿಳಿಸುತ್ತಾಳೆ. ಓಲೆಯನ್ನು ನೋಡಿದ ಕಾಂತುಪೂಂಜ ಕಿಸಕ್ಕನೆ ನಗುತ್ತಾನೆ. ಇನ್ನು ಮುಂದಕ್ಕೆ ಸಿರಿ ಯಾರ ಕಾರುಬಾರಲ್ಲಿ ದಿನ ಹೇಗೆ ತೆಗೆಯುತ್ತಾಳೆ ಎಂಬುದನ್ನು ನೋಡ ಬೇಕೆನ್ನುತ್ತಾನೆ. ಓಲೆಗೆ ಉತ್ತರಿಸಿ

ತುಳುಪಠ್ಯ
ಏರ್‌ಯ ಸಿರಿಯೇ ಅಜ್ಜೆರೆ ಪುಣೊನು
ಕಡೆಡ್ದ್ ಬಾಯಿ ಕೊರುದು ಕೊಡಿಮುಟ್ಟ ತಿಂದೊನು ಬಲ
ನಡುಕೂಡ ಬುಡಡ

ಕನ್ನಡಾನುವಾದ
ಯಾರು ಸಿರಿಯೇ ಅಜ್ಜನವರ ಹೆಣವನ್ನು
ಬುಡದಿಂದ ಬಾಯಿಹಾಕಿ ತುದಿವರೆಗೆ ತಿನ್ನುತ್ತಾ ಬಾ
ನಡುಕೂಡಾ ಬಿಡಬೇಡ

ಎಂಬುದಾಗಿ ತಿಳಿಸುತ್ತಾನೆ. ಇದರಿಂದ ಸಿರಿಗೆ ಬಹುವಾಗಿ ದುಃಖವಾಗುತ್ತದೆ. ಇನ್ನು

ಗಂಡನನ್ನು ಕಾಯುವ ಅಗತ್ಯವಿಲ್ಲವೆಂದು ತಿಳಿದು ತಾನೊಬ್ಬಳೇ ಅಜ್ಜನವರ ಅಂತ್ಯ ಸಂಸ್ಕಾರದ ಕೆಲಸವನ್ನು ಮಾಡುತ್ತಾಳೆ.

ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಪಠ್ಯದಲ್ಲಿ ಸ್ವಲ್ಪ ಹೆಚ್ಚಿನ ವಿವರಗಳು ಲಭ್ಯವಾಗುತ್ತವೆ. ಅಜ್ಜನವರ ಆಕಸ್ಮಿಕ ಮರಣದಿಂದ ಸಿರಿ ಹಾಗೂ ದಾರು ತುಂಬ ದುಃಖಕ್ಕೊಳಗಾಗುತ್ತಾರೆ. 'ಕೈಪತ್ತಿ ಕೈದಾರೆದ ಮದಿಮ್ಮಾಯಗ್ ಒಂಜಿ ಮಾನಿ ಕಡಾವೊಡುಂದೆರ್ ಸಿರಿ' (ಕೈಹಿಡಿದ ಕೈಧಾರೆಯ ಮದುಮಗನಿಗೆ ಒಂದು ಓಲೆ ಕಳುಹಿಸ ಬೇಕೆನ್ನುತ್ತಾರೆ ಸಿರಿ). ಹೀಗೆ ಓಲೆ ಬರೆದು 'ಈರ್ ಬರೊಡು, ಅಜ್ಜೆರೆ ಪುಣೊನು ಪೊರ್ಲುಡು ಪೋಲ್ಯ ಮಲ್ಪೊಡುಗೆನಾ' (ನೀವು ಬರಬೇಕು, ಅಜ್ಜನವರ ಹೆಣವನ್ನು ಚಂದದಿಂದ ವ್ಯವಸ್ಥೆ ಮಾಡಬೇಕು) ಎಂದು ಬರೆದು ಮಡಿವಾಳ ಹುಡುಗನ ಕೈಯಲ್ಲಿ ಕೊಟ್ಟು ಕಳುಹಿಸುತ್ತಾಳೆ. ಓಲೆ ಓದಿ ನೀನು ಮುಂದಿನಿಂದ ಹೋಗು, ನಾನು ಹಿಂದಿನಿಂದ ಬರುತ್ತೇನೆ ಎಂದು ಹೇಳಿ ಕಳುಹಿಸುತ್ತಾನೆ ಕಾಂತುಪೂಂಜ. ಅಜ್ಜನವರು ತೀರಿಕೊಂಡ ವಿಷಯವನ್ನು ತನ್ನ ತಾಯಿಗೆ ತಿಳಿಸಲು ಆಕೆ

ತುಳುಪಠ್ಯ

ಈಯಾಂಡಲ ಇನಿ ಅಜ್ಜೆರೆ ಸಾವುಗು ಪೋಯಂಡಗೆನ
ಸತ್ಯನಾಪುರದ ಆದೇಚ ಬೆನ್ನಿದ ಬಾಮೊ ಲೆಕ್ಕ ಪತ್ರ ನಿಕ್ಕ್‌ಗೆನ
ಅಜ್ಜೆರೆನ ಪಟ್ಟದುಂಗಿಲ ನಿಕ್ಕ್ ದೀಪೆರ್ ಮಗಾ
ಸತ್ಯನಾಪುರದ ಪಟ್ಟ ನಿಕ್ಕ್ ಆಳಿಯೆರೆ ತಿಕ್ಕುಂಡತ್ತೋ ಓ........
ಅಪ್ಪೆ ಸಂಕರು ಪೂಂಜೆದಿ ಪಣ್ಪೆರೋ..........

ಕನ್ನಡಾನುವಾದ

ನೀನಾದರೋ ಇಂದು ಅಜ್ಜನವರ ಮರಣಕ್ಕೆ ಹೋದರೆ
ಸತ್ಯನಾಪುರದ ಆಡಳಿತೆ ಕೃಷಿಯ ಉಸ್ತುವಾರಿ ಲೆಕ್ಕಪತ್ರ ನಿನಗೆ
ಅಜ್ಜನವರ ಪಟ್ಟದುಂಗುರ ನಿನಗೆ ಇಡುತ್ತಾರೆ ಮಗಾ
ಸತ್ಯನಾಪುರದ ಪಟ್ಟ ನಿನಗೆ ಆಳಲು ಸಿಗುತ್ತದೆ ಓ
ತಾಯಿ ಸಂಕರು ಪೂಂಜೆದಿ ಹೇಳುತ್ತಾರೆ.

ತುಳುಪಠ್ಯ

ಇನಿಯಾಂಡಲ ಈ ಪೋವಡ ಮಗಾ ಪೋವರೆ ಆವಂದ್‌ಗೆನಾ
ಇನಿ ಸತ್ಯನಾಪುರ ಆಳಿಯೆರೆ ನಿಕ್ಕ್ ತಿಕ್ಕುಂಡುಂದುದುಗೆನ
ಇನಿ ತನ ಮಗಕ್ಕ್‌ಗೆನ ಸಂಕರು ಪೂಂಜೆದಿ ಪಂಡೆರ್‌ಗೆನ
ಆತ್ ಪಾತೆರ ಕೇಂಡಿನ ಆಲ್ವೆ ಇನಿ ಬಸಲೂರುದರಮನೆ ಬುಡ್ದು
ಪಿದಾಡುಜೆರತ್ತೇ ಓ........... ಆಲ್ವೇ ಕೇನೊಡುದೇ (ಪುಟ 91-92)

ಕನ್ನಡಾನುವಾದ

ಇಂದಾದರೋ ನೀನು ಹೋಗಬೇಡ ಮಗಾ ನೀನು ಹೋಗಬಾರದು
ಇಂದು ಹೋದರೆ ನಿನಗೆ ಸತ್ಯನಾಪುರ ಆಳಲು ಸಿಗುತ್ತದೆ
ಹಾಗೆ ಸಂಕರು ಪೂಂಜೆದಿ ತನ್ನ ಮಗನಿಗೆ ಹೇಳಿದರಂತೆ
ಅಷ್ಟು ಮಾತನ್ನು ಕೇಳಿದ ಆಳ್ವ ಇಂದು ಬಸಲೂರಿನರಮನೆ ಬಿಟ್ಟು
ಹೊರಡುವುದಿಲ್ಲವಂತೆ ಓ......... ಆಳ್ವ ಕೇಳಬೇಕು.

ಸಂಕರು ಪೂಂಜೆದಿ ಹೇಳುವ ಈ ಮಾತಿನ ಅರ್ಥ ಏನೆಂಬುದು ತಿಳಿಯುವುದಿಲ್ಲ. ಯಾಕೆಂದರೆ ಅಜ್ಜನವರು ಸಿರಿಯನ್ನು ಮದುವೆ ಮಾಡಿ ಕೊಡುವಾಗಲೇ ಮಣ್ಣನ್ನೂ ಹೆಣ್ಣನ್ನೂ ಜೊತೆಯಾಗಿ ಮದುವೆಯ ಮೂಲಕ ಕೊಟ್ಟಿದ್ದಾರೆ. ಹೀಗಾಗಿ ಅಜ್ಜನವರ ಅನಂತರ ಕಾಂತುಪೂಂಜನೇ ಸತ್ಯನಾಪುರದ ಸಕಲ ಆಸ್ತಿಗೂ ವಾರೀಸುದಾರನಾಗುತ್ತಾನೆ. ಆದರೆ ತಾಯಿ ಮಗನನ್ನು ತಡೆಯುವ ಹಿಂದಿನ ಉದ್ದೇಶ ಏನೆಂದು ತಿಳಿಯದಾಗಿದೆ. ಬಹುಶಃ ಸಿರಿಯನ್ನು ನಿಯಂತ್ರಿಸಬೇಕೆಂಬ ಒಂದು ಉದ್ದೇಶವಲ್ಲದೆ ಬೇರೆ ಉದ್ದೇಶ ಇದ್ದಂತೆ ಕಾಣಿಸುವುದಿಲ್ಲ.

ಅಜ್ಜನವರ ಮರಣದ ಸುದ್ದಿ ಕೇಳಿ ಸೂಡದಣ್ಣು ಸೆಟ್ಟಿ ಮಗ ಸಂಕರಾಳ್ವ ಸತ್ಯನಾಪುರ ತಲಪಿ ನೆರೆಕರೆಯವರು ಅಲ್ಲಿಗೆ ಬಾರದಂತೆ ತಡೆಯುತ್ತಾನೆ. ಸತ್ಯನಾಪುರದ ಲೆಕ್ಕಪತ್ರ ನನಗೆ ಸಿಗುತ್ತದೋ ಇಲ್ಲವೋ ನೋಡುತ್ತೇನೆ ಎನ್ನುತ್ತಾನೆ. ಸಿರಿಯಲ್ಲಿ ನನ್ನ ಅಜ್ಜನವರ ಪಾಲುಪಂತ್ಯೆ ನನಗೂ ಇದೆ. ಒಳಗಿನ ಅಧಿಕಾರ ನೀನು ನೋಡು. ಹೊರಗಿನ ಲೆಕ್ಕಪತ್ರ ರಕೋಲಿಗೆ ನಾನು ನೋಡುತ್ತೇನೆ. ಹಾಗೆ ಮಾಡದಿದ್ದರೆ ನಿನ್ನ ಅಜ್ಜನವರ ಹೆಣವನ್ನು ಮುಟ್ಟಲು ಬಿಡಲಾರೆ. ನಿನ್ನ ಮದುಮಗನನ್ನು ಬರಲೂ ಬಿಡಲಾರೆ ಎನ್ನಲು ಸಿರಿ ಕೋಪಿಸಿಕೊಂಡಳು. ಹಾಗೆ ಮಾಡುವುದಾದರೆ ಮಾಡು. ನನಗೆ ಹಕ್ಕುಪತ್ರ ಓಡಿಬಂದಿದ್ದೇ ಎಂದು ಕೇಳುತ್ತಾಳೆ ಸಿರಿ. ಇಂದು ಅರವೂರು ಪರವೂರು ಬಾರದಂತೆ ತಡೆದರೂ ತೊಂದರೆಯಿಲ್ಲ. ನನ್ನ ಮದುಮಗ ಬಾರದಿದ್ದರೆ ಹೋಗಲಿ. ಆದರೆ ಒಂದೇ ಮಡಿಕೆಯಲ್ಲಿ ಎರಡು ನಾಯಿಗಳು ತಿಳಿಕುಡಿಯಲು ಬಿಡಲಾರೆ. ಇಂದು ನಿನಗೆ ಪಾಲು ಬೇಕೇ ಸಂಕರಾಳ್ವ ಎಂದು ಕೇಳುತ್ತಾಳೆ ಸಿರಿ. ನೀವು ಯಾರು ಬಾರದಿದ್ದರೂ ನಾನೇ ಇಂದು ಅಜ್ಜನವರನ್ನು ಆಕಾಶಕ್ಕೆ ಹೊಗೆ ಭೂಮಿಗೆ ಭುಗುತಿ ಮಾಡುತ್ತೇನೆ ಎನ್ನುತ್ತಾಳೆ. 'ಹೆಣ್ಣಾದ ನಾನು ಅಜ್ಜನವರ ಹೆಣವನ್ನು ನನ್ನ ತಲೆಯಲ್ಲಿ ಹೊತ್ತುಕೊಂಡು ಹೋಗಿ ಭಸ್ಮ ಮಾಡುವುದನ್ನು ಗಂಡಸಾದ ನೀವು ನೋಡಿ' ಎನ್ನುತ್ತಾಳೆ. ಲಂಕೆಲೋಕನಾಡ ದೇವರು ಬೆರ್ಮೆರ್‌ನ್ನು ನೆನೆದು ಅಜ್ಜನವರ ಹೆಣ ಮಲ್ಲಿಗೆಯ ಹೂವಿನಂತೆ ಹಗುರವಾಗಬೇಕೆಂದಳು. ಅದು ನನ್ನ ನೆತ್ತಿಯಲ್ಲಿ ಕುಳಿತುಕೊಳ್ಳಬೇಕೆಂದಳು. ಹಾಗೇ ಆಯಿತು. ಇಷ್ಟೆಲ್ಲ ಆಗುವಾಗ ಸತ್ಯನಾಪುರದ ಅರಮನೆಯಲ್ಲಿ ಸಿರಿಗೆ ಇಷ್ಟು ದೊಡ್ಡ ಅಹಂಕಾರ ಬಂದೊದಗಿತಲ್ಲಾ ಎನ್ನುತ್ತಾನೆ ಸೂಡದಣ್ಣು ಸೆಟ್ಟಿಮಗ ಸಂಕರಾಳ್ವ.

ಹೆಣವನ್ನು ಬಾಕಿಮಾರು ಗದ್ದೆಗೆ ಹೊತ್ತು ಕೊಂಡು ಹೋಗಿ ಮೂರು ಸುತ್ತು ಅಪ್ರದಕ್ಷಿಣೆ ಬಂದು ಕಾಷ್ಠದಲ್ಲಿರಿಸಿ ಸಿರಿ ದಾರು ಕೊಳ್ಳಿ ಹಿಡಿದು ಬೆಂಕಿ ಕೊಡುತ್ತಾರೆ. ಅಷ್ಟಾಗುವಾಗ

ತುಳುಪಠ್ಯ

ಅಜ್ಜೆರೆನ ಪುಣ ನಡು ಕರಿಯೊಣು ಬನ್ನಗಾಂಡಲಗೆನ
ಸಿರಿಯಾಂಡಲಗೆನ ಸತ್ಯನಾಪುರತ್ತ ಕಂಬುಲದ ಕಂಡದ ಕಟ್ಟ ಪುಣಿಟೇ ಬನ್ನಗಗೆನ
ಸೂಡೊಡು ಪುಟ್ಟಿನ ಸೂಡೊದಣ್ಣು ಸೆಟ್ಟಿ ಮಗೆ ಸಂಕರಾಲ್ವೆ
ಸಿರಿಡ ಉರೆಜ್ಜಿ ಪೆರೆಜ್ಜಿವೆತ್ತೋ...........

ಕನ್ನಡಾನುವಾದ

ಅಜ್ಜನವರ ಹೆಣ ಉರಿದು ನಡು ಸೇರುತ್ತಾ ಬರುವಾಗ
ಸಿರಿಯಾದರೋ ಸತ್ಯನಾಪುರದ ಕಂಬಳ ಗದ್ದೆಯ ಬದುವಿನಲ್ಲೆ ಬರುತ್ತಿರಲು
ಸೂಡದಲ್ಲಿ ಹುಟ್ಟಿದ ಸೂಡದಣ್ಣುಸೆಟ್ಟಿ ಮಗ ಸಂಕರಾಳ್ವ
ಸಿರಿಯಲ್ಲಿ ಮಾತಿಗೆ ಮಾತು ಬೆಳೆಸುತ್ತಾನೆ...... ಇದರಿಂದ ಸಿಟ್ಟುಗೊಂಡ ಸಿರಿ

ತುಳುಪಠ್ಯ

ಇನಿಡ್ದ್ ದುಂಬು ಎನಾಡ್ದ್ ಬುಕ್ಕೊಗು ಎನಲೆಕಂತಿನ ಪೊಣ್ಣುಪೊಣ್ಜೋವು
ಸುಡಲೆದ ಕಂಡ ಜಪ್ಪೆರೆ ಆವಂದ್ಂದ್‌ದ್ ಸಿರಿ ಕಂಡೊಡ್ದು ಮಿತ್ತ್ ಬನ್ನಾಗಗೆನ
ಮಣ್ಣ್ ಮುಟ್ಟ್ ಪೊಣ್ಣ ಸಾಪೊನೆ ಕೊರ್ಯೆರತ್ತೋ

ಕನ್ನಡಾನುವಾದ

ಇನ್ನು ಮುಂದಕ್ಕೆ ನನ್ನಂತಿರುವ ಹೆಣ್ಣು ಹೆಂಗಸರು
ಹೆಣಸುಡುವ ಗದ್ದೆ ಇಳಿಯಬಾರದು ಎಂದು ಸಿರಿ ಗದ್ದೆಯಿಂದ ಮೇಲೆ ಬರುವಾಗ
ಮಣ್ಣುಮುಟ್ಟಿ ಹೆಣ್ಣ ಶಾಪ ಕೊಟ್ಟಳು (ಪುಟ 97).

ಸಿರಿ ಅಜ್ಜನವರ ಹೆಣವನ್ನು ಭೂಮಿಗೆ ಭುಗುತಿ(ಭಸ್ಮ) ಮಾಡಿ ಹೆಣ ಸುಟ್ಟ ಗದ್ದೆಯಿಂದ ಕಾಲು ತೆಗೆದು ಬದುವಿಗೆ ಇಡಬೇಕಾದರೆ ಸೂಡದಲ್ಲಿ ಹುಟ್ಟಿದ ಸೂಡದಣ್ಣು ಸೆಟ್ಟಿ ಮಗ ನಾಲ್ಕು ಊರು, ನಾಲ್ಕು ಗಂಡಸರು, ಮೇಲಿನ ಕರೆಯ ಪಾಲವರು, ಕೆಳಗಿನ ಕರೆಯ ದೇಸಿಂಗರನ್ನು, ಕಾಂತಾಳ್ವನನ್ನು ಒಟ್ಟು ಸೇರಿಸಿ ಪಂಚಾಯಿತಿ ಕಳ ಏರ್ಪಡಿಸಿದ್ದಾನೆ. ಸಿರಿಗೆ ಕಡು ಉತ್ತರದ ಓಲೆ ಬರೆದಿದ್ದಾನೆ. ಸಿರಿ ಕೂಟದ ಕಳಕ್ಕೆ ಹೋದಾಗ ಪಾಲವರು ಕಳ ಒತ್ತಟ್ಟು ಮಾಡಿ ಸಿರಿಯನ್ನು ಮೇಲೆ ಕರೆಯುತ್ತಾರೆ.

ಸಿರಿಗೆ ಕೂಟದವರು ಇಂದಿನಿಂದ ಸತ್ಯನಾಪಪುರದ ಹೇಳಿಕೆ ಲೆಕ್ಕಪತ್ರ ಸೂಡದಣ್ಣುಸೆಟ್ಟಿ ಮಗ ಸಂಕರಾಳ್ವನಿಗೆ ಕೊಡಬೇಕು ಎನ್ನಲು ಸಂಕರಾಳ್ವ ಒಳಗಿನ ವ್ಯವಹಾರ ನೀನೇ ನೋಡಿಕೋ ಎನ್ನಲು ಸಿರಿ ಪಂಚಾಯತಿಗೆಯ ಕಳವನ್ನೇ ಕಲ್ಲು ಮಾಡಿ ಬಿಡುತ್ತೇನೆಂದು ಕಲ್ಲು ಹೆಕ್ಕಿ ಹಾರಿಸುವಾಗ ನೀನು ನಮ್ಮ ತಂಗಿ, ಸೊಸೆಗೆ ಸಮಾನ. ಕೂಟದ ಕಳಕ್ಕೆ ಬರಬೇಡ ಎನ್ನುತ್ತಾರೆ. ಉಳಿದಂತೆ ಸತ್ಯನಾಪುರದರಮನೆ ಸುಟ್ಟುಭಸ್ಮ ಮಾಡಿ ಹೊರಡುವ ವಿಚಾರಗಳು ಉಳಿದ ಪಠ್ಯಗಳಂತೆ ಇವೆ.

ರಾಮಕ್ಕ ಅವರ ಪಠ್ಯದಲ್ಲಿ ಅಜ್ಜನವರ ಸಾವು ಸಂಭವಿಸಿದಾಗ ಸಿರಿ ಹಾಗೂ ದಾರುವಿಗೆ ಏನು ಮಾಡಬೇಕೆಂಬುದು ತಿಳಿಯದಿದ್ದಾಗ ದಾರು ಸಿರಿಯನ್ನು ಕುರಿತು ಅಂದು ಅಜ್ಜನವರು ಹೆಣ್ಣನ್ನೂ ಮಣ್ಣನ್ನೂ ಧಾರೆ ಎರೆದು ನಿಮ್ಮ ಮದುಮಗನಿಗೆ ನೀಡಿದ್ದಾರೆ. ಅವರಿಗೆ ಅಂತರಂಗದ ಓಲೆ ಕಳುಹಿಸಿ ಎನ್ನುತ್ತಾಳೆ.

ತುಳುಪಠ್ಯ

'ಜೂವೊಡಿತ್ತ್ಂಡ ಬರುವೆರ್. ಇಜ್ಜಂಡ ಅಜ್ಜೆರ್ ಸೈತಿಲೆಕ ಆಲ್ರ್ ಸೈತೆರ್ಂದ್ ಎಣ್ಣ್ಡ್ಲೇ ಅಕ್ಕೆರೇ
ಮುತ್ತರೊ ಮೂಜಿ ಓಲೆ ಇಚ್ಚಿಡಿಚ್ಚಿಡಿ ಕಡಪುಡ್ಲೆಕ್ಕೆರೇ

ಕನ್ನಡಾನುವಾದ

ಜೀವದಲ್ಲಿದ್ದರೆ ಬಂದಾರು ಇಲ್ಲದಿದ್ದರೆ ಅಜ್ಜನವರು ಸತ್ತಂತೆ ಅವರೂ ಸತ್ತಿದ್ದಾರೆಂದು ಎಣಿಸಿಕೊಳ್ಳಿ ಅಕ್ಕನವರೇ
ಮೂರು ಬಾರಿ ಮೂರು ತರದ ಓಲೆ ಒಂದರ ಹಿಂದೆ ಒಂದರಂತೆ ಕಳುಹಿಸಿ ಅಕ್ಕನವರೇ

ಎನ್ನುತ್ತಾಳೆ. ಹೀಗೆ ಎರಡು ಓಲೆ ಕಳುಹಿಸಲು ನೀನು ಮುಂದಿನಿಂದ ಹೋಗು ನಾನು ಹಿಂದಿನಿಂದ ಬರುತ್ತೇನೆ ಎಂದು ಕಾಂತುಪೂಂಜ ಹೇಳಿ ಕಳುಹಿಸುತ್ತಾನೆ. ಮೂರನೇ ಓಲೆ ಹೋದಾಗ

ತುಳುಪಠ್ಯ

ಯಾನಾಂಡ ಬರ್ಪುಜಿ ಬರ್ಪುಜಿಂಬಾ
ಮಾಯಲ್ಲ ಬಾರಿನಾಲ್ ಬಾಲಕ್ಕೆ ಸಿರಿ ಎನ್ನ ಮದಿಮ್ಮಲೆನ ಅಜ್ಜೆರೆನ್
ಅಡಿಕ್ಕ್ ಆಜಿಮುಡಿ ಉಪ್ಪು ಮೇಲ್‌ಗ್ ಮೂಜಿ ಮುಡಿ ಉಪ್ಪು ಪಾಡ್ದ್
ಕಲ್ಲ ಕಲೆಂಬಿಡ್ ಪಾಡ್ದ್ ದೀವಡ್ಂಬಾ
ಯಾನ್ ಬರಾಯೆ ಬರಾಯೆಂದ್ ಪನ್ಪೆ

ಕನ್ನಡಾನುವಾದ

ನಾನಾದರೋ ಬರುವುದಿಲ್ಲ ಬರುವುದಿಲ್ಲಾ ತಿಳಿಯಿತಾ
ಮಾಯದಲ್ಲಿ ಆಡಳಿತ ನಡೆಸುವ ಬಾಲಕ್ಕೆ ಸಿರಿ ನನ್ನ ಮದುಮಗಳ ಅಜ್ಜನವರನ್ನು
ಅಡಿಗೆ ಆರು ಮುಡಿ ಉಪ್ಪು ಮೇಲಿನಿಂದ ಮೂರುಮುಡಿ ಉಪ್ಪು ಹಾಕಿ
ಕಲ್ಲಿನ ದಾಸ್ತಾನು ಪೆಟ್ಟಿಗೆಯಲ್ಲಿ ಹಾಕಿಡಲಿ ಆಯಿತಾ
ನಾನು ಬರಲಾರೆ ಬರಲಾರೆ ಎನ್ನುತ್ತಾನೆ (ಪುಟ 113).

ಈ ಮಾತಿನಿಂದ ಸಿರಿ ಏಳೇಳು ಲೋಕದ ಕೋಪ ಕೋಪಿಸಿಕೊಳ್ಳುತ್ತಾಳೆ. ಆದಿ ಬಸಲೂರಿನ ನನ್ನ ಮದುಮಗ ಸತ್ತಿದ್ದಾರೆಂದು ತಿಳಿಯುವ ಮಗಾ. ಅವರು ಕಾಯ ಬಿಟ್ಟು ಕೈಲಾಸ ಸೇರಿದ್ದಾರೆಂದು ತಿಳಿಯುವ ಮಗಾ ಎಂದು ದಾರುವಿಗೆ ಸಿರಿ ಸಮಾಧಾನ ಹೇಳುತ್ತಾಳೆ. ದಾರುವನ್ನು ಕರೆದು

ತುಳುಪಠ್ಯ

ಪೋದು ಓಡ ಮುಗ್ಗೆರ್ಲೆನ್ ಲೆತೊಂದು ಬಲಾ
ನಾಲ್ ಕೂಡಿ ಗೆರಮ್ಮಿಲೆನ್ ಲೆತೊಂದು ಬಲಾ
ಬೈಲ ಬಾಕುಡೆರೆನ್ ಲೆತೊಂದು ಬಲಾ

ಕನ್ನಡಾನುವಾದ

ನೀನು ಹೋಗಿ ಓಡ ಮುಗ್ಗೇರರನ್ನು ಕರೆದುಕೊಂಡು ಬಾ
ನಾಲ್ಕು ಕಡೆಯ ಗ್ರಾಮಸ್ಥರನ್ನು ಕರೆದುಕೊಂಡು ಬಾ
ಬೈಲ ಬಾಕುಡರನ್ನು ಕರೆದುಕೊಂಡು ಬಾ

ಎಂದು ತಿಳಿಸುತ್ತಾಳೆ. ಹಾಗೆ ಕರೆಯಲು ಅವರು ಓಡೋಡಿ ಬಂದು ಯಾಕಾಗಿ ನಮ್ಮನ್ನು ಕರೆದಿರಿ ಎನ್ನಲು ಸಿರಿ ನನ್ನ ಅಜ್ಜನವರು ತೀರಿಕೊಂಡಿದ್ದಾರೆ, ಬಸಲೂರ ಬತ್ತಕೇರಿಯ ನನ್ನ ಮದುಮಗನೂ ತೀರಿಕೊಂಡಿದ್ದಾರೆ. ಆದುದರಿಂದ ಅಜ್ಜನವರ ಸಂಸ್ಕಾರದ ಕಾರ್ಯವನ್ನು ನೀವು ಮಾಡಬೇಕೆಂದು ತಿಳಿಸುತ್ತಾಳೆ. ಇವರು ಮಾವಿನಮರ, ಹಲಸಿನ ಮರ, ಗಂಧದ ಮರ ಕಡಿದು ಮಸಣದ ಕಾಷ್ಠ ತಯಾರಿಸುವಲ್ಲಿಂದ ಹಿಡಿದು ಸಿರಿ ಹೆಣ ಮೀಯಿಸುವುದು, ಹೆಣದ ಸಿಂಗಾರ ಈ ಎಲ್ಲ ವಿವರಗಳು ಇಲ್ಲಿ ಪ್ರಸ್ತಾವಿತ ವಾಗಿವೆ. ಈ ಎಲ್ಲ ತಯಾರಿಯ ಅನಂತರ 'ಕಾರ್ ದಿಸೆ ಈ ತುಂಬುಲ ದಾರು ತರೆ ದಿಸೆ ಯಾನ್ ತುಂಬುವೆ' (ಕಾಲ ದಿಕ್ಕಿನಿಂದ ನೀನು ಹೊರು ದಾರು ತಲೆಯ ದಿಕ್ಕಿನಿಂದ ನಾನು ಹೊರುವೆನು) ಎನ್ನುತ್ತಾಳೆ ಸಿರಿ. ಹೀಗೆ ಹೊತ್ತುಕೊಂಡು ಹೋಗಿ ಕಾಷ್ಠದಲ್ಲಿರಿಸಿ ಉರಿಸುತ್ತಾರೆ. ದುಃಖದಿಂದ ಸಿರಿ ಈ ಮಾತುಗಳನ್ನಾಡುತ್ತಾಳೆ.

ತುಳುಪತ್ಯ

ಅಯ್ಯೋ ಅಜ್ಜೆರೇ ಇನಿಕ್ಕ್ ಸುಡುಪೋವು ಮೋನೆದಾಯೆ
ಉತ್ತರ ನಚ್ಚತ್ರೊಡು ಜನನೊಗು ಬರೊಡಾಂಡ್
ಇನಿಕ್ಕ್ ಈರೆಗ್ ಸೊರ್ಗೊ ಸಂದುನ ಬಾಗ್ಯೊ ಪಾಡ್ಯೆರತ್ತಜ್ಜೆರೇ

ಕನ್ನಡಾನುವಾದ

ಅಯ್ಯೋ ಅಜ್ಜನವರೇ, ಇಂದಿಗೆ ಸುಟ್ಟ ಮುಖದವನು
ಉತ್ತರಾ ನಕ್ಷತ್ರದಲ್ಲಿ ಜನನವಾಗಬೇಕಿತ್ತೇ
ಇಂದಿಗೆ ನಿಮಗೆ ಸ್ವರ್ಗ ಸೇರುವ ಭಾಗ್ಯ ಬಂತಲ್ಲಾ ಅಜ್ಜನವರೇ

ಎಂದು ತನ್ನ ಮಗು ಕುಮಾರನ ಜನನದ ಕೆಟ್ಟ ಘಳಿಗೆ ಮತ್ತು ನಕ್ಷತ್ರದಿಂದ ನಿಮ್ಮ ಮರಣವಾಯಿತು ಎಂಬುದಾಗಿ ದುಃಖಿಸುತ್ತಾಳೆ. ಆ ನಂತರ ಮಡಿವಾಳ ಕರಿಯದಲ್ಲಿ ಹೋಗಿ ಶುದ್ಧವಾಗುವ ವಿವರಗಳು ಲಭ್ಯವಾಗುತ್ತವೆ.

ಲೀಲಾ ಅವರ ಪತ್ಯದಲ್ಲಿ ಮಗು ಅಳುವಾಗ ಅಜ್ಜನವರು ಓಡಿಹೋಗಿ ಎತ್ತಿಕೊಂಡಾಗ ಮಗುವಿನ ಮುಖ ಅಜ್ಜನವರು ನೋಡಿ ಕಿಸಕ್ಕನೆ ನಗುವಾಗ ಅಜ್ಜನವರಿಗೆ ಮರಣ ಸಂಭವಿಸುವ ವಿವರಗಳು ಇವೆ. ಕಾಂತುಪೂಂಜನಿಗೆ ಓಲೆ ಕಳುಹಿಸುತ್ತಾಳೆ ಸಿರಿ. ಆತ ಮಸಣದ ಕಾಷ್ಠ ತಯಾರಿಸಲಿ, ಬಂದರೆ ಬಂದೆ ಎಂದು ಹೇಳಿ ಕಳುಹಿಸುತ್ತಾನೆ. ಇದನ್ನು ತಿಳಿದ ಸಿರಿ ತಾನೇ ಅಜ್ಜನವರ ಅಂತ್ಯಸಂಸ್ಕಾರದ ಎಲ್ಲ ಕೆಲಸಗಳನ್ನು ಮಾಡುತ್ತಾಳೆ. ಆಗ ಕಾಂತುಪೂಂಜ ಸೂಡದಲ್ಲಿ ಹುಟ್ಟಿದ ಸೂಡದಣ್ಣು ಸೆಟ್ಟಿ ಮಗ ಸಂಕರಾಳ್ವನಲ್ಲಿಗೆ ಹೋಗಿ ಸತ್ಯನಾಪುರದಲ್ಲಿ ಪಾಲು ತೆಗೆಸಿಕೊಡಬೇಕೆಂದು ಹೇಳುತ್ತಾನೆ. ಹೀಗಾಗಿ ಸಂಕರಾಳ್ವ ಮೂರು ಮೊಳ ಬಟ್ಟೆ ಹಿಡಿದುಕೊಂಡು ಸತ್ಯನಾಪುರಕ್ಕೆ ಬರುತ್ತಾನೆ. ಅಜ್ಜನವರ ಹೆಣದ ಮೇಲೆ ಬಟ್ಟೆ ಹೊದೆಸಲು ಮುಂದೆ ಬಂದಾಗ ಸಿರಿ ಅಜ್ಜನವರ ಹೆಣ ಮುಟ್ಟಿದರೆ ಜಾಗ್ರತೆ ಎನ್ನುತ್ತಾಳೆ. ಸತ್ಯನಾಪುರದಲ್ಲಿ ನನಗೂ ಪಾಲಿದೆ. ಅದು ನನಗೆ ಸಿಗಬೇಕೆನ್ನುತ್ತಾನೆ. ನಿನಗೆ ಮೂರು ರೀತಿಯಿಂದ ಪಾಲು ತೆಗೆಸಿಕೊಟ್ಟ ಪಾಲವರಿದ್ದಾರೆ. ಉಪ್ಪು ಹಾಕುವ ಗೆರಟೆ, ಕೋಳಿ ಕಟ್ಟುವ ಗೂಟ, ಕರು ಕಟ್ಟುವ ಹಗ್ಗದಿಂದ ಹಿಡಿದು ಬಾವಿಯಿಂದ ನೀರು ಸೇದುವ ದಡೆಮರದವರೆಗೆ ಕೊಂಡುಹೋದವ ನೀನು. ನಿನಗೆ ಇನ್ನೇನು ಪಾಲು ಎನ್ನುತ್ತಾಳೆ ಸಿರಿ. ಕೊನೆಗೆ ತಾನೊಬ್ಬಳೇ ಅಜ್ಜನವರ ಹೆಣವನ್ನು ಹೊತ್ತುಕೊಂಡು ಹೋಗಿ ಕಾಷ್ಠದಲ್ಲಿರಿಸಿ ಉರಿಸುತ್ತಾಳೆ. ಇದನ್ನು ನೋಡಿದ ಸಂಕರಾಳ್ವ ಸತ್ಯನಾಪುರದ ಚಾವಡಿ ಇಳಿದು ಹೋಗುತ್ತಾನೆ. ಹತ್ತು ಜನ ಪಾಲವರನ್ನು ಸೇರಿಸಿ ಕೂಟದ ಕಳ ಏರ್ಪಡಿಸಿ ಅಜ್ಜನವರ ಮರಣವಾಯಿತು. ಸತ್ಯನಾಪುರದಲ್ಲಿ ನನಗೆ ಪಾಲು ತೆಗೆಸಿಕೊಡಬೇಕೆಂದು ಹೇಳಿ ಸಿರಿಯನ್ನು ಪಂಚಾಯತಿಯ ಕಳಕ್ಕೆ ಬರಿಸುತ್ತಾನೆ.

ತುಳುಪಠ್ಯ

ಅಜ್ಜೆರೆನ ಸುಡಲೆದ ಸೂ ತೆಕ್ಕೊಡಾಂಡ ಎನ್ನ ಕಣನೀರ್ ಕಟ್ಟೊಡಾಂಡ
ಆಣ್ ಆಣ್ಜೋವು ಕುಲ್ಲುಬಿ ಕಲಕ್ಕ್ ಪೋವೊಡಾಂಡೆ

ಕನ್ನಡಾನುವಾದ

ಅಜ್ಜನವರನ್ನು ಸುಟ್ಟ ಬೆಂಕಿ ಆರುವ ಮುನ್ನ ನನ್ನ ಕಣ್ಣೀರು ಕಟ್ಟುವ ಮುನ್ನ
ಗಂಡಸರು ಕುಳಿತುಕೊಳ್ಳುವ ಕಳಕ್ಕೆ ಹೋಗಬೇಕಾದ ಸ್ಥಿತಿ ಬಂತಲ್ಲ

ಎಂದು ದುಃಖಿಸುತ್ತಾಳೆ. ಕುಮಾರನಿಗೆ ಮೊಲೆಯೂಡಿಸಿ ತೊಟ್ಟಿಲಲ್ಲಿ ಮಲಗಿಸಿ ದಾರುವಿಗೆ ವಿಷಯ ತಿಳಿಸಿ 'ಕಲ್ಲ ಕಲೆಂಬಿ'ಯ ಬೀಗ ತೆಗೆದು ತನ್ನ ಅಜ್ಜನವರು ಹಿಡಿಯುವ ಚಂದ್ರಾಯುಧ (ಪಟ್ಟದ ಕತ್ತಿಯೇ?) ಹಿಡಿದುಕೊಂಡು ಹೋಗುತ್ತಾಳೆ. ಈ ವಿವರಗಳು ಬೇರೆ ಪಠ್ಯಗಳಲ್ಲಿ ಇಲ್ಲ. ಪಂಚಾಯತಿಯಲ್ಲಿ ಸಂಕರಾಳ್ವನಿಗೆ ಪಾಲು ಕೊಡಬೇಕು ಎನ್ನಲು ಮೂರು ತರದಲ್ಲಿ ಪಾಲು ಕೊಂಡು ಹೋಗಿದ್ದಾನೆ ಎನ್ನುತ್ತಾಳೆ. ಆತನಿಗೆ ಪಟ್ಟ ಕಟ್ಟಬೇಕು. ಪಟ್ಟದುಂಗುರ ತೊಡಿಸಿ ಪಾದಕಾನಿಗೆ ಇಡಬೇಕು ಎನ್ನುತ್ತಾರೆ ಪಂಚಾಯತಿಯವರು. ಸತ್ಯನಾಪುರದಲ್ಲಿ ನನ್ನ ಮಗ ಕುಮಾರ ಇದ್ದಾನೆ. ಆತನಿಗೆ ಪಟ್ಟಕಟ್ಟಿ ಪಟ್ಟದುಂಗುರ ಇಡಿ ಎನ್ನುತ್ತಾಳೆ ಸಿರಿ. ತೊಟ್ಟಿಲ ಮಗುವಿಗೆ ಪಟ್ಟ ಕಟ್ಟಲಾರೆವು ಎನ್ನುತ್ತಾರೆ ಪಂಚಾಯತಿಯವರು. ಹಾಗಾದರೆ ನನಗೇ ಪಟ್ಟಕಟ್ಟಿ ಪಟ್ಟದುಂಗುರ ಇಡಿ ಎನ್ನಲು ಸಿರಿ ಹೆಣ್ಣು ಹೆಂಗಸಿಗೆ ಪಟ್ಟಕಟ್ಟಿ, ಪಟ್ಟದುಂಗುರ ಇಟ್ಟು ಪಾದಕಾಣಿಕೆ ಇಡಲಾರೆವು ಎನ್ನುತ್ತಾರೆ ಪಂಚಾಯತಿಯಲ್ಲಿ ಸೇರಿದ ಗಂಡಸರು. ಹಾಗಾದರೆ ಸಂಕರಾಳ್ವನಿಗೇ ಪಟ್ಟಕಟ್ಟಿ ಎಂದು ಹೇಳಿ ಕೂಟದಕಳ ತಿರಸ್ಕರಿಸಿ ಹೊರಡುತ್ತಾಳೆ ಸಿರಿ. ಸತ್ಯನಾಪುರದ ಅರಮನೆಯ ಕೆಂದಾಳೆಯ ಪದ್ಮಕಟ್ಟೆಯಡಿಯಲ್ಲಿ ಕುಳಿತು ಕುಮಾರನ ತೊಟ್ಟಿಲನ್ನು ಹೊರಗಿಡಲು ದಾರುವಿಗೆ ತಿಳಿಸುತ್ತಾಳೆ. ಕುಮಾರನನ್ನೆತ್ತಿ ಮಡಿಲಲ್ಲಿ ಮಲಗಿಸಿ ಮೊಲೆಯೂಡಿಸುತ್ತಾಳೆ. ಮೊಲೆಹಾಲು ಕುಡಿದ ಮಗು ಕಡೆಬಾಯಿಯಲ್ಲಿ ಭೂಮಿಗೆ ಬಿಡುತ್ತಾನೆ. ಆಗ ಸಿರಿ

ತುಳುಪಠ್ಯ

ಸತ್ಯನಾಪುರೊದ ಅರಮನೆಡ್ ಅಪ್ಪೆನ ತಿಗಲೆದ ನೆತ್ತೆರ್ ಪರ್ದ್
ಭೂಮಿಗ್ ಬುಡಿಯಂಡ ನಿಕ್ಕ್ ಅನ್ನಾದ್ ಬುಳೆಂಡಲಾ ಎಂಕ್ ಸುಣ್ಣಾದ್ ಬುಳೆವು

ಕನ್ನಡಾನುವಾದ

ಸತ್ಯನಾಪುರದ ಅರಮನೆಯಲ್ಲಿ ತಾಯಿಯ ಎದೆಯ ರಕ್ತ(ಹಾಲು) ಕುಡಿದು
ಭೂಮಿಗೆ ಬಿಟ್ಟರೆ ಅದು ನಿನಗೆ ಅನ್ನವಾಗಿ ಬೆಳೆದರೆ ನನಗೆ ಸುಣ್ಣವಾಗಿ ಬೆಳೆದೀತು

ಎನ್ನುತ್ತಾಳೆ ಸಿರಿ. ದಾರುವನ್ನು ಕರೆದು

ತುಳುಪಠ್ಯ

ಸತ್ಯನಾಪುರದರಮನೆಡ್ ದಿಕ್ಕ್ ಮುತ್ತ್‌ಂಡ್ ನಂಕ್ ದಿಸೆಲರಿಂಡ್
ಬಾರಿನಾಯಗ್ ಬಡೆಕ್ಕಾಯಿ ರಾಜ್ಯ ಸೆಟ್ಟಿನಾಯಗ್ ಸೆನ್ಕಾಯಿ ರಾಜ್ಯ
ನಮೊ ಸೆಟ್ಟ್‌ದ್ ಪೋಪಿನಕುಲು ಸೆನ್ಕಾಯಿ ಪೋಯಿ
ಸೆಟ್ಟಿ ಸೇನವೆರೆ ಜಾಲ ಮುಂದಿಲ್ ಅಡಿತ್ತ್‌ದ್ ಕರಿಕ್ಕ

ಕನ್ನಡಾನುವಾದ

ಸತ್ಯನಾಪುರದರಮನೆಯಲ್ಲಿ ದಿಕ್ಕು ಕಾಣದಾಯಿತು ದೆಸೆ ಮುಕ್ತಾಯವಾಯಿತು
ಬಾಳುವವನಿಗೆ ಬಡಗಣ ರಾಜ್ಯ ಬಡವನಿಗೆ ತೆಂಕಣ ರಾಜ್ಯ
ನಾವು ಬಡತನದಿಂದ ಹೋಗುವವರು ತೆಂಕಣಕ್ಕೆ ಹೋಗುವ
ಸೆಟ್ಟಿ ಸೇನವರ ಅಂಗಳ ಗುಡಿಸಿಯಾದರೂ ದಿನ ಕಳೆಯುವ

ಎನ್ನುತ್ತಾಳೆ. ಸಿರಿ ದಾರುವಿನ ತಲೆಗೆ ಕುಮಾರನ ತೊಟ್ಟಿಲು ಹೊರಿಸಿ ಮಣ್ಣು ಮುಟ್ಟಿ ಹೆಣ್ಣಶಾಪ ನೀಡುತ್ತಾಳೆ.

ತುಳುಪಠ್ಯ

ಸತ್ಯನಾಪುರೊದ ಬಾರೆಪಾಡಿ ಬಾಕಿಮಾರ್‌ಡ್ ಸಾರಮುಡಿ ಅರಿಬಾರ್ ಬುಳೆವುನಾಡೆ
ಸಾರಮುಡಿ ದಡ್ಡ್ ಬುಳೆವೊಡು, ತೋಟೊದ ಕಂಗ್‌ಡ್ ಪಾಲೆ ಉಡೆಂಡಲಾ ಕೊಲೆರೋಗೊ ಬೂರ್ದ್ ಪೋವೊಡು
ತಾರೆಡ್ ಕೊಂಬು ಉಡೆಂದಲಾ ಕುರುವಾಯಿ ತಿಂದ್‌ದ್ ಚೆಂಡೆಲ್ ತಾಲ್‌ದ್ ಪೋವೊಡು
ಕಾಸಿಗ್ ಪೋತಿನ ಕಬುಲ್ತಿ ಐಯಲ ಪೇರ್ ಕೊರ್ಪುನಾಲ್ ಬೊರಿಯೆರೆ ಬನ್ನಗ ಬೋರಿ ಆವೊಡು
ನುಗೊ ಪತೊಂದು ಬನ್ನಗ ಪೆತ್ತ ಆವೊಡು ಸತ್ಯನಾಪುರೊದರಮನೆಡ್ ಗೆಂದೆ ಮೇವೊಡು ಕಾರಿ ಜೆಪ್ಪೊಡು

ಕನ್ನಡಾನುವಾದ

ಸತ್ಯನಾಪುರದರಮನೆಯ ಬಾಳೆಹಾಕುವ ಬಾಕಿಮಾರು ಗದ್ದೆಯಲ್ಲಿ ಸಾವಿರ ಮುಡಿ ಅಕ್ಕಿ ಭತ್ತ ಬೆಳೆಯುವಲ್ಲಿ
ಸಾವಿರ ಮುಡಿ ಜಳ್ಳು ಬೆಳೆಯಬೇಕು, ತೋಟದ ಕಂಗಿನಲ್ಲಿ ಹಿಂಗಾರ ಮೊಳೆತರೂ ಕೊಳೆರೋಗ ಬಿದ್ದು ಹೋಗಬೇಕು

ತೆಂಗಿನ ಮರದಲ್ಲಿ ಕಾಯಿ ಬೆಳೆದರೂ ಕುರುವಾಯಿ(ಕಪ್ಪುಹುಳ) ಹುಳ ತಿಂದು ಬಿದ್ದು ಹೋಗಬೇಕು
ಮೇಯಲು ಹೋದ ಕಪಿಲೆ ದನ ಐದು ಬಳ್ಳ ಹಾಲು ಕೊಡುತ್ತಿತ್ತು. ಇನ್ನು ಮುಂದಕ್ಕೆ ಕರೆಯಲು ಬರುವಾಗ ಎತ್ತು ಆಗಬೇಕು
ಉಳಲು ನೊಗ ಹಿಡಿದು ಬರುವಾಗ ದನ ಆಗಬೇಕು ಸತ್ಯನಾಪುರದರಮನೆಯಲ್ಲಿ ಕಪಿಲ ಬಣ್ಣದ ಎತ್ತು ಮೇಯಬೇಕು, ಕಾರಿ ಎತ್ತು ಮಲಗಬೇಕು.

ಸಿರಿ ರೂಪಕದ ಭಾಷೆಯಲ್ಲಿ ಈ ಶಾಪವನ್ನು ನೀಡುತ್ತಾಳೆ. ಗೆಂದೆ ಮೇವೊಡು (ಕಪಿಲ ಬಣ್ಣದ ಎತ್ತು ಮೇಯಬೇಕು) ಎಂದರೆ ಬೆಂಕಿಯ ಕೆನ್ನಾಲಿಗೆ ಆವರಿಸಬೇಕು ಎಂದರ್ಥ. ಕಾರಿ ಜೆಪ್ಪೊಡು (ಕಪ್ಪು ಬಣ್ಣದ ಎತ್ತು ಮಲಗಬೇಕು) ಎಂದರೆ ಸುಟ್ಟು ಕರಕಲಾಗಿ ಹೋಗಬೇಕೆಂಬರ್ಥ. ಇದನ್ನೇ ಉಳಿದ ಪಠ್ಯಗಳಲ್ಲಿ 'ಸುಡುಸೂಕರಿ' (ಸುಟ್ಟುಭಸ್ಮ) ಎಂಬುದಾಗಿ ಹೇಳಲಾಗಿದೆ. ಹೀಗೆ ಶಪಿಸಿ ದಾರುವಿನಲ್ಲಿ ಹಿಂತಿರುಗಿ ನೋಡಬೇಡ ಎಂದು ಹೇಳಿ ದೇಶಾಂತರ ಹೊರಡಲು ದಾರು ತಿರುಗಿ ನೋಡುತ್ತಾಳೆ. ಸಿರಿಗೆ ಸತ್ಯನಾಪುರದರಮನೆ ಸುಟ್ಟುಭಸ್ಮವಾಗುವ ವಿಚಾರ ತಿಳಿಸಲು ನೀನು ನೋಡಿದ ತಪ್ಪಿಗೆ ಅಜ್ಜನವರು ಪಟ್ಟವಾಳಿದ ಪಟ್ಟದ ಮಂಚ ಹಾಗೂ ಕುಮಾರನ ತೊಟ್ಟಿಲು ಕಟ್ಟಿದ ಕೋಣೆ ಉಳಿದು ಬರಲಿ ಎಂದು ಹೇಳಿ ಮುಂದುವರಿಯುತ್ತಾಳೆ.

ಲೀಲಾ ಅವರ ಪಠ್ಯದಲ್ಲಿ ಸ್ವಲ್ಪ ಬದಲಾವಣೆ ಇದೆ. ಎಲ್ಲ ಪಠ್ಯಗಳು ಸಿರಿ ಸತ್ಯನಾಪುರ ದಿಂದ ನೇರವಾಗಿ ಬಸಲೂರಿನ ಅರಮನೆಗೆ ಬಂದರೆ ಲೀಲಾ ಅವರ ಪಠ್ಯದಲ್ಲಿ ಸಿರಿಯು ಬಡಗಣ ದಿಕ್ಕಿಗೆ ಹೊರಡುತ್ತಾಳೆ. ಆಗ ದಾರು ಏನು ಅಕ್ಕನವರೇ, ಬಡವನಿಗೆ ತೆಂಕಣರಾಜ್ಯ ಎಂದಿರಿ. ಈಗ ನೋಡಿದರೆ ನೀವು ಬಡಗು ದಿಕ್ಕಿಗೆ ಹೋಗುತ್ತೀರಿ ಎನ್ನಲು ಸಿರಿ ಅಜ್ಜನವರು ಕುಮಾರನ ಹೆರಿಗೆಯ ಸಂದರ್ಭ ಲಂಕೆಲೋಕನಾಡಿಗೆ ಹೇಳಿರುವ ಬಂಗಾರದ ಮಗು, ಬೆಳ್ಳಿಯ ತೊಟ್ಟಿಲು ಹಾಗೂ ಹಿಡಿಹಣ ಹರಕೆ ಬಾಕಿ ಇದೆ. ಅದನ್ನು ಮೊದಲು ಸಲ್ಲಿಸಬೇಕೆಂದು ಹೇಳಿ ಅಲ್ಲಿಗೆ ಹೋಗುತ್ತಾಳೆ. ಆಗ ಮನೆಪೂಜೆ ಮುಗಿಸಿ ಬಂದ ಲಂಕೆಲೋಕನಾಡಿನ ಬ್ರಾಹ್ಮಣ ಎದುರಿಗೆ ಸಿಗುತ್ತಾನೆ. ಅವನಿಗೆ ಹರಕೆಯ ವಿಷಯ ತಿಳಿಸಲು ಇಂದಿನ ಪೂಜೆ ಮುಗಿಯಿತು. ನೀವು ನಾಳೆ ಬನ್ನಿ ಎನ್ನುತ್ತಾನೆ. ಆಗ ಸಿರಿ ನಮಗೆ ಇಂದು ತಡೆಯಲು ಎಲ್ಲಿ ಜಾಗ ಇದೆ ಎಂದು ಕೇಳಲು ಬ್ರಾಹ್ಮಣ,

ತುಳುಪಠ್ಯ

ನಿಕುಲು ಒಲ್ತುಡ್ದು ಬತ್ತಿನಕುಲು
ಬಡೆಕ್ಕಾಯಿಡ್ದ್ ಬತ್ತಿನ ಬೈರ ಸೂಲೆಲಾ
ಬೆದ್ರಡ್ದ್ ಬತ್ತಿನ ಸದುರೆಲಾ
ವಾ ಊರು ದೆತ್ತ್‌ದ್ ವಾ ಊರು ದೆಪ್ಪೆರೆ ಪೋಪಿನಕುಲು

ಕನ್ನಡಾನುವಾದ

ನೀವು ಎಲ್ಲಿಂದ ಬಂದವರು
ಬಡಗಿನಿಂದ ಬಂದ ಬೈರ ಸೂಳೆಯರಾ
(ಮೂಡ)ಬಿದಿರೆಯಿಂದ ಬಂದ ಚದುರೆಯರಾ
ಯಾವ ಊರು ತೆಗೆದು ಯಾವ ಊರು ತೆಗೆಯಲು ಹೋಗುವವರು

ಎನ್ನುತ್ತಾನೆ. ಇದರಿಂದ ಸಿಟ್ಟಾದ ಸಿರಿ ಲಂಕೆಲೋಕನಾಡಿಗೆ ನೇರವಾಗಿ ಹೋಗುತ್ತಾಳೆ. ಮಗುವಿನ ತೊಟ್ಟಿಲನ್ನು ಗೋಪುರದಲ್ಲಿ ಇರಿಸಿ ಜಳಕದ ಕೆರೆಯಲ್ಲಿ ಮಿಂದು ಬರುತ್ತಾಳೆ. ಗರ್ಭ ಗುಡಿಯ ಎದುರು ನಿಂತು ಜಯಲ್ಲ ದೇವರು ಬೆರ್ಮೆರ್‌ಗೆ ಕೈಮುಗಿದು ನಾನು ಸತ್ಯದ ಮಗಳಾದರೆ ಸತ್ಯ ತೋರಿಸಬೇಕು. ಕಪಟದ ಮಗಳಾದರೆ ಕಪಟ ತೋರಿಸಬೇಕೆಂದು ಕೇಳಿಕೊಳ್ಳುತ್ತಾಳೆ. ಅಷ್ಟು ಹೇಳಲು ಗರ್ಭಗುಡಿಯ ಬಾಗಿಲು ತೆರೆಯಿತು. ನಂದಿದ ನಂದಾದೀಪ ಉರಿಯಿತು. ಸಿರಿ ಅಜ್ಜನವರು ಹೇಳಿಕೊಂಡು ಹರಕೆಯನ್ನು ಸಲ್ಲಿಸಿದಳು. ಲಂಕೆಲೋಕನಾಡಲ್ಲಿ ಗೌಜಿಗದ್ದಲ ಕೇಳಿ ಬ್ರಾಹ್ಮಣ ಓಡೋಡಿ ಬರುತ್ತಾನೆ. ಸಿರಿಯ ಸತ್ಯ ಕಂಡು ದಮ್ಮಯ್ಯ ದಕ್ಕಯ್ಯ, ನನ್ನದು ತಪ್ಪಾಯಿತು. ಒಂದು ಬಾರಿಗೆ ಮಾಫು ಮಾಡಿಬಿಡಿ ಎನ್ನುತ್ತಾನೆ. ಸಿರಿ ಸಿಟ್ಟುಗೊಂಡು ನನ್ನ ಅಜ್ಜನವರು ನಿಮಗೆ ಪೂಜೆ ಅರ್ಚನೆಗೆ ಎಷ್ಟು ಮುಡಿ ಅಕ್ಕಿಯ ಉಂಬಳಿ ಬಿಟ್ಟಿದ್ದಾರೆ ಎಂದು ವಿಚಾರಿಸುತ್ತಾಳೆ. ಬ್ರಾಹ್ಮಣ 60 ಮುಡಿ ಎನ್ನಲು ಇನ್ನು ಮುಂದಕ್ಕೆ 60 ಮುಡಿಯಲ್ಲಿ ಮೂವತ್ತು ಮುಡಿ ಅಕ್ಕಿ ವಾಲಗದವನಿಗೆ ಉಂಬಳಿ, ಏಳೂವರೆ ಮುಡಿ ದೋಲುಗಂಟೆಯವನಿಗೆ, ಮೂರೂವರೆ ಮುಡಿ ಗುಡಿಸುವವಳಿಗೆ/ಶುದ್ಧ ಮಾಡುವವಳಿಗೆ (ಅಡಿಪ್ಪು ತಲಿಪ್ಪಿನವಳಿಗೆ), ಉಳಿದದ್ದು ನಿಮಗೆ ಎಂದು ಪಾಲು ಮಾಡಿಕೊಟ್ಟು ಉರಿಯುತ್ತಿರುವ ನಂದಾದೀಪ ಆರಿಬರಲಿ, ಗರ್ಭಗುಡಿಯ ಬಾಗಿಲು ಮುಚ್ಚಲಿ ಎಂದು ಹೇಳಿ ಕುಮಾರನಿಗೆ ಲಂಕೆ ಲೋಕನಾಡಿನ ಜಯಲ್ಲ ಬೆರ್ಮೆರ್ ಪ್ರಸಾದ ಹಾಕಿ ಮಗುವನ್ನು ದಾರುವಿನಲ್ಲಿ ಹೊರಿಸಿ ಬಸಲೂರಿಗೆ ಹೋಗುತ್ತಾಳೆ. ಉಳಿದ ಪಠ್ಯಗಳಲ್ಲಿ ಬಸಲೂರಿಗೆ ಮೊದಲು ಹೋಗಿ ಅಲ್ಲಿಂದ ಹೊರಟು ಬಂದ ಅನಂತರ ಲಂಕೆಲೋಕನಾಡಿನಲ್ಲಿ ಹರಕೆ ಸಲ್ಲಿಸುವ ವಿವರಗಳಿವೆ.

ರಾಮಕ್ಕ ಅವರ ಪಠ್ಯದಲ್ಲಿ ಅಜ್ಜನವರನ್ನು ಸುಟ್ಟು ಬೂದಿ ಮಾಡಿದ ಅನಂತರ ಅರಮನೆಯೊಳಗಿಂದ ಕುಮಾರನ ತೊಟ್ಟಿಲನ್ನು ತಂದುಕೊಡುವಂತೆ ದಾರುವಿಗೆ ತಿಳಿಸುತ್ತಾಳೆ ಸಿರಿ. ದಾರು ತಂದು ಕೊಡಲು ಕುಮಾರನಿಗೆ ಮೊಲೆಯೂಡಿಸುತ್ತಾಳೆ. ಆಗ ಕುಮಾರ

ತುಳುಪಠ್ಯ

ಎಡತ್ತ ಜಕ್ಕೆಲ್‌ಡ್ ಕುಲ್ಲಾದ್ ಬಲತ್ತ ಸಿರಿಮಿರೆ ಬಾಮಿಯೆರ್ ಸಿರಿಯಾಂಡೋ
ಬಾಯಿಡ್ ತಿಂದೆ ಬಾಲೆ ಕಡೆಬಾಯಿಡ್ ಬುಡಿಯೆನೇ
ಸಿರಿಮಿರೆತ್ತ ಪೇರ್ ಬೂಮಿಗ್ ಪಯನೊ ಮಲ್ತೆಪ್ಪೋ

ಕನ್ನಡಾನುವಾದ

ಎಡದ ಮಡಿಲಲ್ಲಿ ಹಾಕಿ ಬಲದ ಸಿರಿಮೊಲೆ ಕೊಟ್ಟಳು ಸಿರಿ
ಬಾಯಲ್ಲಿ ಮೊಲೆ ತಿಂದ ಮಗು ಕಡೆಬಾಯಲ್ಲೆ ಬಿಟ್ಟ
ಸಿರಿಮೊಲೆಯ ಹಾಲು ಭೂಮಿಗೆ ಪಯಣ ಮಾಡಿಸಿದ.

ಮುಂದೆ ಸೂಡದಣ್ಣು ಸೆಟ್ಟಿ ಮಗ ಸಂಕರಾಳ್ವ ಪಂಚಾತಿಗೆಗೆ ಕರೆಯುತ್ತಾನೆ. ಸಿರಿ ಕೈಯಲ್ಲಿ ಗೆಜ್ಜೆ ಕತ್ತಿ ಹಾಗೂ ಪನೆತತ್ರ ಹಿಡಿದು ಹೊರಡುವಾಗ ಬಲದಿಂದ ಹಕ್ಕಿ, ಎಡದಿಂದ ಹಲ್ಲಿ ಶಕುನ ನುಡಿಯುತ್ತದೆ. ಸಿರಿ ಅನುಮಾನಿಸಲು ದಾರು ಅದು ಅದರ ಹೊಟ್ಟೆ ಪಾಡಿಗೆ ಕೂಗುತ್ತದೆ. ನೀವು ಹೊರಡಿ ಅಕ್ಕನವರೇ ಎಂದು ಧೈರ್ಯ ತುಂಬಿ ಕಳುಹಿಸಿ ಕೊಡುತ್ತಾಳೆ. ಪಂಚಾಯತಿಯವರು ಸತ್ಯನಾಪುರದ ಅಜ್ಜನವರು ಕೂರುತ್ತಿದ್ದ ಮೂರು ಕಾಲಿನ ಮುಂಡು ಮುಕ್ಕಲಿಗೆ ತಂದಿರಿಸಲು ಸಿರಿ ಅದರಲ್ಲಿ ಕೂರದೆ ತನ್ನ ಕೈಯಲ್ಲಿನ ಪನೆತತ್ರ ಅಡಿಗೆ ಹಾಕಿ ಕುಳಿತುಕೊಳ್ಳುತ್ತಾಳೆ. ಏಕೆ ನನ್ನನ್ನು ಬರ ಹೇಳಿದಿರಿ ಎಂದು ಕೇಳಲು ಹತ್ತು ಕಡೆಯ ಪಾಲವರು ಹದಿನೆಂಟು ಬರಿಸಾಲರು ಹೇಳುತ್ತಾರೆ. ಒಳಗಿನ ಅಧಿಕಾರ ನಿನಗಾದರೆ ಹೊರಗಿನ ಅಧಿಕಾರ ಸೂಡದಣ್ಣು ಸೆಟ್ಟಿ ಮಗ ಸಂಕರಾಳ್ವನಿಗೆ ನೀಡಬೇಕು, ಪಾಲುಪಂತ್ಯೆ ನೀಡಬೇಕೆಂದು ಹೇಳುತ್ತಾರೆ. ಈ ಮಾತಿನಿಂದ ಸಿಡಿಮಿಡಿಗೊಂಡ ಸಿರಿ

ತುಳುಪಠ್ಯ

ಉಂದು ಎನ್ನ ಮದಿಮ್ಮಾಯನ ತಿಗಲೆದ ನೆತ್ತೆರ್ದ ಗೊಬ್ಬಾದ್ ಪೋಂಡು
ಸೂಡೊಡು ಪುಟ್ಟಿನ ಸೂಡೊದಣ್ಣು ಸೆಟ್ಟಿಮಗೆ ಸಂಕರಾಳ್ವನ ಪರ್ಬೊದ ಪೊಡಿಬಜಿಲ್‌ದ ಗೊಬ್ಬಾದ್ ಪೋಂಡು

ಕನ್ನಡಾನುವಾದ

ನನ್ನ ಮದುಮಗನ ಎದೆಯ ನೆತ್ತರ ಆಟವಾಗಿ ಹೋಯಿತು
ಸೂಡದಲ್ಲಿ ಹುಟ್ಟಿದ ಸೂಡದಣ್ಣುಸೆಟ್ಟಿ ಮಗ ಸಂಕರಾಳ್ವನ ದೀಪಾವಳಿಯ ಹುಡಿ ಅವಲಕ್ಕಿಯ ಆಟವಾಗಿ ಹೋಯಿತು

ಎಂದು ಹೇಳಿ ನನಗೆ ಸತ್ಯನಾಪುರದ ಅಧಿಕಾರ ಬೇಡ, ಪಾಲುಪಂತ್ಯೆ ಬೇಡ. ಪಂಚಾಯತಿಯವರಿಗೆ ಲಂಚ ಕೊಟ್ಟು ಕರೆದಿರುವ ಇಲ್ಲಿ ನ್ಯಾಯ ಸಿಗದು. ನನಗೆ ಒಳಗಿನ ಅಧಿಕಾರವೂ ಬೇಡ, ಹೊರಗಿನ ಅಧಿಕಾರವೂ ಬೇಡ. ನಾನು ದೇಶ ಬಿಟ್ಟು ದೇಶಾಂತರ ಹೋಗುತ್ತೇನೆ. ಸತ್ಯನಾಪುರದ ಅರಮನೆ ಸುಟ್ಟು ಭಸ್ಮವಾಗಿ ಹೋಗಲಿ ಎಂದು ಶಪಿಸಿ ಪಂಚಾಯತಿಯ ಕೂಟದಿಂದ ಇಳಿದು ಬರುತ್ತಾಳೆ. ಅಲ್ಲಿಂದ ನೇರವಾಗಿ ಸತ್ಯನಾಪುರದ ಅರಮನೆಗೆ ಬಂದು ದಾರುವನ್ನು ಕರೆದು

ತುಳುಪಠ್ಯ
ನಮ್ಮಜ್ಜೆರ್ ಸಾಂಕಿ ದೋಸೊಗು
ಅಜ್ಜೆರೆಗ್ ಸುಡುಪೋವು ಸೂಕರ ಮಲ್ತ್‌ದೇ
ಸೈತಿನಾಯಗ್ ಸಾವು ಇತ್ತಿನಾಯಗ್ ಬಾರಿ ಮದಿಮ್ಮೆಂದ್
ಇತ್ತಿನ ಕಟ್ಟ್ ಕಟ್ಲೆ ಏನ್ ಮಲ್ತಿಜತ್ತೋ

ಕನ್ನಡಾನುವಾದ
ನಮ್ಮ ಅಜ್ಜನವರು ಸಾಕಿದ ದೋಷಕ್ಕೆ
ಅಜ್ಜನವರನ್ನು ಸುಟ್ಟು ಬೂದಿ ಮಾಡಿದ್ದೇನೆ
ಸತ್ತವನಿಗೆ ಉತ್ತರಕ್ರಿಯೆ ಇದ್ದವನಿಗೆ ಭಾರೀ ಮದುವೆ ಎಂದು
ಇದ್ದ ಕಟ್ಟುಕಟ್ಲೆಯನ್ನು ನಾನು ಮಾಡಲಿಲ್ಲವಲ್ಲಾ

ಎಂದು ಹೇಳುತ್ತಾಳೆ. ಹೀಗಾಗಿ ಸಿರಿ ಅಜ್ಜನವರು ಸತ್ತ ಎಲ್ಲ ವಿಧಿಗಳನ್ನು ನೆರವೇರಿಸುತ್ತಾಳೆ. ಅಜ್ಜನವರು ಸತ್ತ ಮೂರನೇ ದಿನದಂದು ಧೂಳೊಪ್ಪದ(ಶವಸಂಸ್ಕಾರದ ಜಾಗದಲ್ಲಿ ಭಸ್ಮವನ್ನು ಒಟ್ಟು ಮಾಡುವ ಕ್ರಿಯೆ) ಕ್ರಿಯೆಯನ್ನು ನೆರವೇರಿಸುತ್ತಾಳೆ. ಐದರಂದು ಹಿರಿಯರು ಮಾಡಿದ ಕಟ್ಟಿನಂತೆ ಅರಿಸುಡಲೆಯ ಕ್ರಿಯೆ(ಶವ ಸಂಸ್ಕಾರದ ಜಾಗದಲ್ಲಿ ಕುಟುಂಬಿಕರು ಅಕ್ಕಿ, ಕುಂಬಳಕಾಯಿಯ ಹೋಳು ಬಡಿಸುವ ಕ್ರಿಯೆ)ಯನ್ನು ಮಾಡಿದರು, ಅಜ್ಜನವರ ಗೋರಿಗೆ ಸೀಯಾಳ ಇಟ್ಟು ಹದಿಮೂರರಲ್ಲಿ ಅಜ್ಜನವರಿಗೆ ಸಾವು ಸಲಾರ (ಉತ್ತರಕ್ರಿಯೆ) ಮಾಡುವ ವಿವರಗಳಿವೆ. ಇದೆಲ್ಲವನ್ನೂ ಮಾಡಿ ನಾನಿನ್ನು ದೇಶ ಬಿಟ್ಟು ದೇಶಾಂತರ ಹೋಗುತ್ತೇನೆ. ಬೋಳದ ಕಾಡಿಗೆ ಹೋಗುತ್ತೇನೆ ಎಂಬುದಾಗಿ ಅಜ್ಜನವರ ಮಸಣದ ಗದ್ದೆ ಇಳಿದು ಹೊರಡುತ್ತಾಳೆ. ದಾರುವಿನಲ್ಲಿ ಕುಮಾರನ ತೊಟ್ಟಿಲು ಹೊರಿಸಿ ಅರಮನೆಯ ಮೆಟ್ಟಲಲ್ಲಿ ನಿಂತು ಗಂಡ ಬಾಲಕಾಂತನನ್ನು ಕುರಿತು

ತುಳುಪಠ್ಯ
ಸೆಟ್ಟಿನಾಯಗ್ ತೆನ್ಕಾಯಿ ರಾಜ್ಯ ಬಾರಿನಾಯಗ್ ಬಡೆಕ್ಕಾಯಿ ರಾಜ್ಯ
ನೀತಿಕೆಟ್ಟಿನಾಯಗ್ ನೆರಿಯ ಕುಲೊ ಕೆಟ್ಟಿನಾಯಗ್ ಕುಡುಮೊ
ಬಡವಗ್ ಬಂಗಾಡಿ, ಮಲ್ಲಾಯಗ್ ಏಣೂರು

ಕನ್ನಡಾನುವಾದ
ಸೋತವನಿಗೆ ತೆಂಕಣ ರಾಜ್ಯ ಆಳುವವನಿಗೆ ಬಡಗಣ ರಾಜ್ಯ
ನೀತಿ ಕೆಟ್ಟವನಿಗೆ ನೆರಿಯ, ಕುಲ ಕೆಟ್ಟವನಿಗೆ ಕುಡುಮ
ಬಡವನಿಗೆ ಬಂಗಾಡಿ, ಶ್ರೀಮಂತನಿಗೆ ವೇಣೂರು (ಪುಟ 155)

ಎನ್ನುತ್ತಾಳೆ. ಬೆನ್ನುಹಾಕಿ ಹೋದವಳು ಹೊಟ್ಟೆ ಹಾಕಿ ಈ ಅರಮನೆಗೆ ಮತ್ತೆ ಬರಲಾರೆ. ಕುಮಾರ ಹಾಗೂ ಅಜ್ಜನವರ ಕೋಣೆ ಉಳಿದು ಉಳಿದುದೆಲ್ಲ 'ಅಗ್ಗಿ ಪೋವು ಅರಲ್ತೆ ಸುಡು ಪೋವು ಸೂಕರಿ' (ಉರಿದು ಭಸ್ಮ) ಅಗಲಿ ಎಂದು ಹೆಣ್ಣ ವರ (ಶಾಪ) ಕೊಟ್ಟು ಹೊರಡುತ್ತಾಳೆ. ಲೀಲಾ ಅವರ ಪಠ್ಯದ ಹಾಗೆ ರಾಮಕ್ಕ ಅವರ ಕಾವ್ಯದಲ್ಲಿಯೂ ಸತ್ಯನಾಪುರದಿಂದ ದೇಶಾಂತರ ಹೊರಟ ಸಿರಿ ನೇರವಾಗಿ ಬಸಲೂರಿಗೆ ಹೋಗದೆ ಅಜ್ಜನವರು ಹೆರಿಗೆಯ ಸಂದರ್ಭ ಹೇಳಿರುವ ಕುಮಾರನ ಹರಕೆ ಸಲ್ಲಿಸುವುದಕ್ಕಾಗಿ ಲಂಕೆಲೋಕನಾಡಿಗೆ ಹೋಗುತ್ತಾಳೆ. ಆಗಷ್ಟೇ ಪೂಜೆ ಮುಗಿಸಿ ಬರುವ ಬ್ರಾಹ್ಮಣ ಎದುರಾಗುತ್ತಾನೆ. ಅವನಲ್ಲಿ ಮಗುವಿನ ಹರಕೆಯ ಬಗೆಗೆ ಹೇಳಲು ನಾಳೆ ಬನ್ನಿ ಎನ್ನುತ್ತಾನೆ. ಇಂದು ಇಲ್ಲಿ ತಡೆಯಿರಿ ಎನ್ನುತ್ತಾ ಸಿರಿಯನ್ನು ಕುರಿತು

ತುಳುಪಠ್ಯ

'ಸತ್ಯನಾಪುರೊದರಮ್ಮನೆಡ್ದ್ ಜತ್ತ್‌ರ್ ಬತ್ತಿ ಪೊಣ್ಣತ್ತೋ ಈರ್'
(ಸತ್ಯನಾಪುರದ ಅರಮನೆಯಿಂದ ಅಹಂಕಾರದಿಂದ ಇಳಿದುಬಂದ ಹೆಣ್ಣಲ್ಲವೇ ನೀವು)

ಎನ್ನುತ್ತಾನೆ. ಸಿರಿಗೂ ಬ್ರಾಹ್ಮಣನಿಗೂ ಮಾತುಕತೆಯಾಗುತ್ತದೆ. ಬ್ರಾಹ್ಮಣ ಸಿರಿಯನ್ನು ಕುರಿತು ತುಚ್ಛವಾಗಿ ಈ ಮಾತುಗಳನ್ನು ಆಡುತ್ತಾನೆ.

ತುಳುಪಠ್ಯ

ದಾಡೆ ಕಳೆಯಿ ದೋಡೆ ಪಂಡ ಈರೆನಾ ಸೂಂಟಿಮೀರಿ ಕಸಾಯೊ
ಸಂಬಾರೊ ಮೀರಿ ಕಜಿಪು, ಪಯ್ಯೊಲಿದ ಕುದುರೆ ಪಂಡ ಈರೆನಕ್ಕೆರೇ
ಸಿರಿ ಪಂಡ ತಾರೆದ ಸಿರಿಕ್ಕ್ ಸರಿಯಾದ್ ಪೋತರಕ್ಕೆರೇ

ಕನ್ನಡಾನುವಾದ

ದಾಡೆ ಕಳೆದ ದೋಡೆ(ಅಹಂಕಾರಿ) ಹೆಂಗಸು ಎಂದರೆ ನೀವೆಯಾ ಶುಂಠಿ ಮೀರಿದ ಕಷಾಯ
ಸಂಬಾರ ಮೀರಿದ ಪದಾರ್ಥ, ಸವಾರಿಯ ಕುದುರೆ ಎಂದರೆ ನೀವೇನಾ
ಸಿರಿ ಎಂದರೆ ತೆಂಗಿನ ಸಿರಿ (ಎಳಗರಿ)ಗೆ ಸರಿಯಾಗಿ ಹೋಗಿದ್ದೀರಿ ಅಕ್ಕನವರೇ
(ಪುಟ 180)

ಎನ್ನುತ್ತಾನೆ. ಹೀಗೆ ಇವರ ಹರಕೆ ಸಲ್ಲಿಸುವ ಬೇಡಿಕೆಯನ್ನು ನಿರಾಕರಿಸಿ ಬ್ರಾಹ್ಮಣ ಅವನ ಮನೆಯ ದಾರಿ ಹಿಡಿಯುತ್ತಾನೆ. ಸಿರಿ ದಾರುವಿನೊಂದಿಗೆ ಕುಮಾರನ ತೊಟ್ಟಿಲು ಹೊರಿಸಿಕೊಂಡು ಮುಂದೆ ಹೋಗುತ್ತಾಳೆ. ದೇವಸ್ಥಾನ, ದೈವಸ್ಥಾನ ಹಾಗೂ ನಂದಿಗೋಣ

ಚಾವಡಿ ಎದುರಾಗುತ್ತದೆ. ಸಿರಿ ಮೈಂದಿರ್ನಾರೆ ಗುಂಡಿಯಲ್ಲಿ ಮಗುವಿನೊಂದಿಗೆ ಸ್ನಾನ ಮಾಡಿ (ಉಳಿದ ಪಠ್ಯಗಳಲ್ಲಿ ಕಂದಡಿ ಕಯ ಎಂಬ ಹೆಸರೂ ಇದೆ) ಬಂದು ಆದಿ ಬಡಗಣ ಲಂಕೆಲೋಕನಾಡ ಗರಡಿಯಲ್ಲಿ ತನ್ನ ಸತ್ಯದಿಂದ ಪೂಜೆ ಸಲ್ಲಿಸಿ ಮಗುವಿನ ಹರಕೆ ತೀರಿಸುತ್ತಾಳೆ. ತನ್ನ ಅಜ್ಜನವರು ನಂಬಿರುವ ದೈವ ಸೇಮಿಕಲ್ಲ ಪಂಜುರ್ಲಿ, ಕಾಂತಕಲ್ಲಿನ ಕಾಂತಾವರ ಪಂಜುರ್ಲಿ ಹಾಗು ಉಳಿದ ದೈವಗಳ ಸಾನ್ನಿಧ್ಯಕ್ಕೆ ತೆರಳಿ ಹರಕೆ ತೀರಿಸುತ್ತಾಳೆ. ಸಿರಿಯ ಸತ್ಯ ಗೊತ್ತಾದ ಬ್ರಾಹ್ಮಣ ಓಡೋಡಿ ಬಂದು ಸಿರಿಯ ಕಾಲಿಗೆರಗಿ ನನ್ನ ಅನ್ನ ತೆಗೆಯಬೇಡಿ ಅಕ್ಕನವರೇ ಎಂದು ಅಂಗಲಾಚುತ್ತಾನೆ. ಆಗ ಸಿರಿ ನಿನಗೆ ನನ್ನ ಅಜ್ಜನವರು ಉತ್ತರ ಉಂಬಳಿ ಎಷ್ಟು ಬಿಟ್ಟಿದ್ದಾರೆ ಎಂದು ವಿಚಾರಿಸಲು ಬ್ರಾಹ್ಮಣ ಹನ್ನೆರಡು ಮುಡಿ ಅಕ್ಕಿಯ ಉಂಬಳಿ, ತೆಂಗಿನ ಕಟ್ಟಹುಣಿ (ಗದ್ದೆಯ ಬದುವಿನ ಸಾಲು ತೆಂಗಿನ ಮರ)ಬಿಟ್ಟಿದ್ದಾರೆ ಎನ್ನುತ್ತಾನೆ. ಇನ್ನು ಮುಂದಕ್ಕೆ ನೀನು ಘಟ್ಟದ ಗಡಿಯಿಂದ ಹಿಡಿದು ಸಮುದ್ರದ ಬದಿಯವರೆಗೆ ಕಲ್ಲು ಕಂಡಲ್ಲಿ ಪೂಜೆ, ಅರ್ಚನೆ ಮಾಡುತ್ತಿರು ಎಂದು ಹೇಳಿ ಬಸಲೂರಿಗೆ ಹೊರಡುತ್ತಾಳೆ. ಗೋಪಾಲ ನಾಯ್ಕರಿಂದ ರಾಮಕ್ಕ ಸಿರಿ ಸಂಧಿಯನ್ನು ಕಲಿತದ್ದು ಎಂಬುದಾಗಿ ಹೇಳಿಕೊಂಡಿದ್ದಾರಾದರೂ ಗೋಪಾಲ ನಾಯ್ಕರ ಪಠ್ಯದಲ್ಲಿ ಲಂಕೆಕೆಲೋಕನಾಡಲ್ಲಿ ಸಿರಿ ಮಗುವಿನ ಹರಕೆ ತೀರಿಸುವ ವಿಚಾರ ಅನಂತರ ಬರುತ್ತದೆ.

ಶ್ಯಾಮರಾಯ ಶೆಟ್ಟಿಯವರ ಸಂಧಿಯಲ್ಲಿ ಸಿರಿ ಅಜ್ಜನವರನ್ನು ಭಸ್ಮ ಮಾಡಿ ಸುಡಲೆಯ ಗದ್ದೆ (ಸ್ಮಶಾನ)ಯಿಂದ ಮೇಲೆ ಬಂದು ಮಿಂದು ಅಜ್ಜನವರ ದುಃಖದ ಗಂಜಿ ಕುಡಿಯಲಿಲ್ಲ. ಅಷ್ಟು ಹೊತ್ತಿಗೇ ಓಲೆಯ ಮಾನಿ ಬಂದು ಪಂಚಾಯತಿಯ ಕೂಟಕ್ಕೆ ಬರಲು ಓಲೆ ಕಳುಹಿಸುತ್ತಾರೆ. ಸೂಡದಣ್ಣು ಸೆಟ್ಟಿ ಮಗ ಸಂಕರಾಳ್ವ ನೀವು ನ್ಯಾಯ ಇದ್ದಂತೆ ಮಾತನಾಡಬಾರದು. ಲಂಚ ತೆಗೆದುಕೊಂಡು ಲಂಚಕ್ಕೆ ಬೇಕಾದ ಹಾಗೆ ಮಾತನಾಡಬೇಕೆಂದು ಕೂಟದ ಕಳ ಏರ್ಪಡಿಸುತ್ತಾನೆ. ಗಂಡಸರು ಹೋಗುವ ಕೂಟದ ಕಳಕ್ಕೆ ಹೆಂಗಸರು ಹೋಗುವ ಸಂದರ್ಭ ಬಂತಲ್ಲ ಎಂದು ಸಿರಿ ದುಃಖಿಸುತ್ತಾಳೆ. ಮಗುವನ್ನು ದಾರುವಿನ ಕೈಯಲ್ಲಿ ನೀಡಿ ಸತ್ಯನಾಪುರದರಮನೆ ಕೆಳಗಿಳಿಯಲು ಹಲ್ಲಿ ಹಾಗೂ ಹಕ್ಕಿ ಶಕುನ ನುಡಿಯುತ್ತವೆ. ಒಳಗಿನ ಅರಸ್ತಾನ ನೀನು ನೋಡ ಬೇಕು, ಹೊರಗಣ ಅರಸ್ತಾನ ಸೂಡದಲ್ಲಿ ಹುಟ್ಟಿದ ಸೂಟದಣ್ಣು ಸೆಟ್ಟಿ ಮಗನಿಗೆ ಕೊಡಬೇಕು. ಆತನಿಗೂ ಸತ್ಯನಾಪುರದಲ್ಲಿ ಪಾಲು ಇದೆ. ಅಜ್ಜನವರು ಇರುವಾಗ ಸತ್ಯನಾಪುರದಲ್ಲಿ ಕೋಳಿ ಕಾಗೆ ಓಡಿಸಿ ಸತ್ಯನಾಪುರವನ್ನು ಬೆಳಗಿಸಿದ್ದಾನೆ ಎನ್ನುತ್ತಾರೆ. ಸಿರಿ ಆಗದು ಎಂದು ನಿರಾಕರಿಸುತ್ತಾಳೆ.

ತುಳುಪಠ್ಯ

ಸತ್ಯನಾಪುರೊಕ್ಕು ಎಂಕುಲು ಮಾನ ಕೊರ್ಪುಜ ಮರ್ಯಾದಿ ಕೊರ್ಪುಜ
ಸತ್ಯನಾಪುರೊನು ಲೆಕ್ಕೊಡ್ಡು ಪಿದಯಿ ದೀಪ

ಪೊಣ್ಣು ಪೊಣ್ಜೆವೆನ ಅರಸ್ತಾನ ಎಂಕ್ಲೆಗಿಪ್ಪರೆ ಬಲ್ಲಿ
ಆಣ್ ಆಣ್ಜೆವೆನ ಅರಸ್ತಾನ ಎಂಕ್ಲೆಗ್ ಬೋಡು

ಕನ್ನಡಾನುವಾದ

ಸತ್ಯನಾಪುರಕ್ಕೆ ನಾವು ಮಾನ ಕೊಡೆವು ಮರ್ಯಾದೆ ಕೊಡೆವು
ಸತ್ಯನಾಪುರವನ್ನು ಲೆಕ್ಕದಿಂದ ಹೊರಗಿಟ್ಟೇವು
ಹೆಣ್ಣು ಹೆಂಗಸರ ಆಡಳಿತ ನಮಗಿರಬಾರದು
ಗಂಡಸರ ಆಡಳಿತ ನಮಗೆ ಬೇಕು – ಎನ್ನುತ್ತಾರೆ. ಇದಕ್ಕೆ ಉತ್ತರವಾಗಿ ಸಿರಿ

ತುಳುಪಠ್ಯ

ಎನ್ನ ಬಾಲೆ ಉಲ್ಲೆ ಮುತ್ತು ಮುದ್ರೆದ ಉಂಗಿಲೊ ಆಯಗ್ ದೀಲೆ
ಪಟ್ಟಕಟ್ಟ್‌ಲೆ ಪಟ್ಟೊಡು ಕುಲ್ಲಾಲೆ
ಬಾಲೆಸಿರಿ ಮಗೆ ಬಾಮಲ್ಲ ಕುಮಾರೆ ಉಲ್ಲೆ
ಎನ್ನ ಒಜ್ರೊದ ಪರೆಲ್ ನೆತ್ತೆರ್ದ ಗಟ್ಟಿ ಉಲ್ಲೆ
ಅರಸ್ತಾನೊ ನಡಪ್ಪಾಡ್‌ಲೆಂದ್ ಪನ್ಪಲೊಡೋ ಸಿರಿಯೇ

ಕನ್ನಡಾನುವಾದ

ನನ್ನ ಮಗನಿದ್ದಾನೆ ಮುತ್ತು ಮುದ್ರೆಯ ಉಂಗುರ ಅವನಿಗೆ ಇಡಿ
ಪಟ್ಟ ಕಟ್ಟಿ ಪಟ್ಟದಲ್ಲಿ ಕೂರಿಸಿ
ಮಗು ಸಿರಿಯ ಮಗ ಬಾಮಲ್ಲ ಕುಮಾರನಿದ್ದಾನೆ
ನನ್ನ ವಜ್ರದ ಹರಳು ರಕ್ತದ ಗಟ್ಟಿ ಇದ್ದಾನೆ
ಅರಸ್ತಾನ ನಡೆಸಿಕೊಡಿ

ಎಂದು ಹೇಳುತ್ತಾಳೆ ಸಿರಿ. ಅದಕ್ಕೆ ಪಂಚಾಯತಿಯವರು ಯಾರು ಸಿರಿ, ರಕ್ತದ ಗಟ್ಟಿಗೆ ನಾವು ಪಟ್ಟ ಕಟ್ಟಿ ಪಟ್ಟದುಂಗುರ ತೊಡಿಸೆವು. ನಮ್ಮಂತೆ ಮೀಸೆಯಿದ್ದು ಹುಟ್ಟಿದವ ಗಂಡಸರ ಕೂಟದಲ್ಲಿ ನಿಂತು ಪಂಚಾಯತಿ ನಡೆಸುವಂಥ ಬುದ್ಧಿವಂತಿಕೆಯಿಂದ ಮಾತನಾಡುವವ ಆಗ ಬೇಕೆನ್ನುತ್ತಾರೆ. ಕೊನೆಗೂ ಸತ್ಯನಾಪುರದ ಹಕ್ಕು ಸೂಡದಲ್ಲಿ ಹುಟ್ಟಿದ ಸೂಡದಣ್ಣು ಸೆಟ್ಟಿ ಮಗನಿಗೆ ಎನ್ನಲು ಸಿರಿ ಏಳೇಳು ಲೋಕದ ಕೋಪ ಕೋಪಿಸಿಕೊಳ್ಳುತ್ತಾಳೆ. ಪಂಚಾಯತಿಯ ಕೂಟ ಇಳಿದು ಸತ್ಯನಾಪುರದರಮನೆಗೆ ಬರುತ್ತಾಳೆ. ಅಂಗಳದಲ್ಲಿ ನಿಂತು ಮಗುವನ್ನು ಹೊರತರುವಂತೆ ದಾರುವಿಗೆ ಹೇಳಿ ಸತ್ಯನಾಪುರ ಬಿಟ್ಟು ಹೊರಡುತ್ತಾಳೆ. ದಾರು ಸಮಾಧಾನಿಸಲು ನೀನು ಸಂಕರಾಳ್ವನ ಚಾಕರಿಗೆ ನಿಲ್ಲುವುದಾದರೆ ನಿಲ್ಲು ಎನ್ನುತ್ತಾಳೆ. ಇಲ್ಲಿ ಕಾಂತುಪೂಂಜನನ್ನು ದಾರು 'ಭಾವ' ಎಂದು ಸಂಬೋಧಿಸುವುದು ತಿಳಿಯುತ್ತದೆ.

ತುಳುಪಠ್ಯ

ಈರೆಗ್ ಕೂಟೊದ ಕಳಕ್ಕ್ ಪೋಯಿನಕ್ಕೆರೆಗ್
ಮಕ್ಕ್ ಪುಟ್ಟಿನಿ ದಾನೆಯೆ ಅಕ್ಕೆರೆ ಮರ್ಲ್ ತೊಡಗಿನಿ ದಾನೆ
ಎನ್ನ ಬಾವೆರೆಲೆಕಂತಿನ ತುಡೆ ಸರೀರೊದ ಅಡ್ಂಜೋವೆನ್ ತೂಯರ ಅಕ್ಕೆರೇ

ಕನ್ನಡಾನುವಾದ

ನಿಮಗೆ ಕೂಟದ ಕಳಕ್ಕೆ ಹೋದ ಅಕ್ಕನವರಿಗೆ
ತುರಿಕೆ ಮುಟ್ಟಿತೇ ಹುಚ್ಚು ತೊಡಗಿತೇ ಏನು
ನನ್ನ ಭಾವನಂತಿರುವ ತೊಡೆಶರೀರದ ಗಂಡಸನ್ನು ನೋಡಿದಿರೇ ಅಕ್ಕನವರೇ

ಎಂದು ತಮಾಷೆಯಾಗಿ ಮಾತನಾಡುತ್ತಾಳೆ. ಇದಕ್ಕೆ ಪ್ರತಿಯಾಗಿ ಸಿರಿ ಪಂಚಾತಿಗೆ ಕಳ ಸೇರಿಸಿದ್ದು ಸೂಡದಲ್ಲಿ ಹುಟ್ಟಿದ ಸೂಡದಣ್ಣು ಸೆಟ್ಟಿ ಮಗನ ಬುದ್ಧಿವಂತಿಗೆಯಿಂದಲ್ಲ. ನಿನ್ನ ಭಾವನವರು ನನ್ನ ಮದುಮಗ(ಗಂಡ) ಹೇಳಿಕೊಟ್ಟ ಮಾತಿನಿಂದ ಎನ್ನುತ್ತಾಳೆ. ಕುಮಾರನ ತೊಟ್ಟಿಲನ್ನು ಹೊರಗಿಡಲು ಸಿರಿ ಹೇಳುತ್ತಾಳೆ. ದಾರು ಮಗುವನ್ನು ಸತ್ಯನಾಪುರದ ಅರಮನೆಯಿಂದ ಹೊರತರಲು ಅದು ತೊಟ್ಟಿಲಲ್ಲಿ ರಟ್ಟಿರಟ್ಟಿ ಅಳುತ್ತದೆ. ಆಗ ದಾರು ಕಪಿಲೆ ದನದ ಹಾಲು ಕರೆದು ತರಲು ಹೋದಾಗ ಸೂಡದಣ್ಣು ಸೆಟ್ಟಿ ಮಗ ಸಂಕರಾಳ್ವ ಬಂದು ದನದ ಹಗ್ಗವನ್ನು ತುಂಡರಿಸಿ ದನವನ್ನು ಗುಡ್ಡೆಗೆ ಓಡಿಸಿ ಹಾಲನ್ನು ಚೆಲ್ಲಿ ದಾರುವಿಗೆ ಹೊಡೆಯುವ ಪ್ರಸಂಗವಿದೆ. ದಾರು ಸಿರಿಯಲ್ಲಿಗೆ ಓಡಿಬಂದು ನನ್ನ ನರ ಜಜ್ಜಿತು, ನಾಡಿ ತುಂಡಾಯಿತು ಎಂದು ದೂರಿಕೊಳ್ಳುತ್ತಾಳೆ. ಸಿರಿ ನಾನು ದೇವಲೋಕದಿಂದ ನರಲೋಕಕ್ಕೆ ಬಂದಿರುವ ಮಗಳು ಹೌದಾದರೆ ನಿನಗೆ ನುಸಿ ಕಚ್ಚಿದಷ್ಟು ನೋವು ಗೊತ್ತಾಗಬಾರದೆಂದು ತನ್ನ ಸೊಂಟದಿಂದ ಗೆಜ್ಜೆಕತ್ತಿ ತೆಗೆದು ಮೂರು ಗೆರೆ ಎಳೆದು ದಾರುವನ್ನು ತಲೆಯಿಂದ ಕಾಲಿನವರೆಗೆ ತನ್ನ ಅಂಗೈಯಲ್ಲಿ ಸವರಿದಳು. ದಾರುವಿನಲ್ಲಿ ಸತ್ಯನಾಪುರದರಮನೆಯ ನಂದಾದೀಪ ಉರಿಸಲು ತಿಳಿಸಿ ಕುಮಾರನ ತೊಟ್ಟಿಲು ದಾರುವಿನಲ್ಲಿ ಹೊರಿಸಿ ಸತ್ಯನಾಪುರದರಮನೆ ಬಿಟ್ಟು ಹೊರಡುತ್ತಾರೆ (ಪುಟ 210-211). ಸಿರಿ, ದಾರು ಇಬ್ಬರೂ ಮಗುವಿನೊಂದಿಗೆ ದೇಶಾಂತರ ಹೊರಡುತ್ತಾರೆ. ಹೊರಡುವಾಗ ಸತ್ಯನಾಪುರದರಮನೆ ನಮ್ಮಿಂದಾಗಿ ನಮ್ಮಿಂದಲೇ ಅಳಿಯಬೇಕೆಂದು ಶಾಪ ಕೊಡುತ್ತಾಳೆ ಸಿರಿ. ಕುಮಾರನನ್ನು ಉದ್ದೇಶಿಸಿ

ತುಳುಪಠ್ಯ

ಬಂಜಿಡ್ ಪಾತೆರ್‌ನ ಬಾಲೆದೆ ಮಗಾ
ಕಸ್ಬೊ ಬತ್ತ್‌ಂಡ್ ನಸ್ಬೊ ಪಡೆಡ್‌ಂದ್
ಮೂಲು ಪಾಡಿನ ಬಾಯಿಬೀಗೊ ಲಂಕೆಲೋಕನಾಡ್‌ಡ್ ಜತ್ತ್ ಬರೊಡು ಮಗಾ

ಯಾನ್ ಬಾಯಿದ ಬೀಗೊ ಜಪ್ಪರ ಪನ್ನೇಟ ಬಾಯಿದ ಬೀಗೊ ಜಪ್ಪರ ಬಲ್ಲಿ
ಮಣ್ಣ್ ಮುಟ್ಟ್‌ದ್ ಪೊಣ್ಣ ಸಾಪೊ ಕೊರ್ಪಲ್

ಕನ್ನಡಾನುವಾದ
ಬಸಿರಲ್ಲಿ ಮಾತನಾಡಿದ ಮಗು ನೀನು
ಕಷ್ಟ ಬಂದಿದೆ ನಷ್ಟ ಪಡೆದಿದ್ದೇವೆ
ಇಲ್ಲಿ ಹಾಕಿದ ಬಾಯಿಯ ಬೀಗವನ್ನು ಲಂಕೆಲೋಕನಾಡಲ್ಲಿ ತೆಗೆದು ಬರಬೇಕು
ನಾನು ಬಾಯಿಬೀಗ ತೆಗೆಯಲು ಹೇಳುವವರೆಗೆ ಬಾಯಿ ಬೀಗ ತೆಗೆಯಬಾರದು
ಮಣ್ಣು ಮುಟ್ಟಿ ಹೆಣ್ಣಶಾಪ ನೀಡುತ್ತಾಳೆ.

ಕುಮಾರನಿಗೆ ಮಾತನಾಡದಂತೆ ನಿರ್ಬಂಧಿಸುತ್ತಾಳೆ ಸಿರಿ. ಸತ್ಯನಾಪುರದರಮನೆ ಸುಟ್ಟು ಕರಕಲಾಗುವಂತೆ (ಸುಡುಸೂಕರಿ) ಶಪಿಸುತ್ತಾಳೆ. ದಾರು ತಿರುಗಿ ನೋಡಿ ಅರಮನೆ ಸುಡುತ್ತಿರುವ ವಿಚಾರ ಸಿರಿಗೆ ತಿಳಿಸಲು ಅಜ್ಜನವರ ತೂಗುಯ್ಯಾಲೆ ಒಂದು ಉಳಿದು ಬರಬೇಕೆಂದು ಹೇಳಿ ಹೊರಡುತ್ತಾರೆ. ಹೀಗಾಗಿ ಅಜ್ಜನವರಿಗೆ ಸಿರಿ ಸಾವಿನ ಆಚರಣೆ ಮಾಡಿಲ್ಲ. ಆದುದರಿಂದ ವರ್ಷಕ್ಕೆ ಒಂದು ಬಾರಿ ನಡೆಯುವ ಸಿರಿ ಜಾತ್ರೆಯೇ ಸಿರಿಗಳು ಅಜ್ಜನವರಿಗೆ ನಡೆಸುವ ಸಾವಿನ ಆಚರಣೆ ಎನ್ನುತ್ತಾರೆ. ಕರ್ಗಿ ಹಾಗೂ ಶ್ಯಾಮರಾಯಶೆಟ್ಟಿಯವರ ಪಠ್ಯಗಳು ಅಜ್ಜನವರಿಗೆ ಉತ್ತರಕ್ರಿಯೆ ಆಗುವುದನ್ನು ತಿಳಿಸುವುದಿಲ್ಲ. ಶೀನಪ್ಪ ಹೆಗ್ಗಡೆ ಹಾಗೂ ಅಮೃತ ಸೋಮೇಶ್ವರರ ಗದ್ಯ ಪಠ್ಯದಲ್ಲಿ ಮಾತ್ರ ಸಿರಿ ಅಜ್ಜನವರಿಗೆ ಉತ್ತರಕ್ರಿಯೆ ನಡೆಸುವ ವಿವರಗಳಿವೆ.

ಗೋಪಾಲನಾಯ್ಕರ ಪಠ್ಯದಲ್ಲಿ ಸಿರಿಯು ಒಬ್ಬಳೇ ಅಜ್ಜನವರ ಹೆಣವನ್ನು ಹೊತ್ತು ಸಾಗಿಸಿ ಸುಡುವುದು, ತನ್ನ ಗಂಡ ಬಾರದೆ ಮೋಸದ ಪಂಚಾಯತಿಯನ್ನು ಕರೆಯುವುದು ಇತ್ಯಾದಿ ವಿವರಗಳೆಲ್ಲ ಉಳಿದ ಪಠ್ಯಗಳಂತೆ ಇದೆ. ಪಂಚಾಯತಿಯ ಕೂಟದಲ್ಲಿ ಅರುವ ಗುತ್ತಿನ ರಂಗೋಜಿ ಸೀನಪ್ಪರು ಇರುವುದು ಇವರ ಪಠ್ಯದ ವಿಶೇಷ. ಪಂಚಾಯತಿಯಲ್ಲಿ ಇವರು ಅಜ್ಜನವರು ಪಟ್ಟ ಆಳಿ ತೀರಿ ಕೊಂಡರು. ಪಟ್ಟಕ್ಕೆ ಸರಿಯಾದ ಜನ ಆಗಬೇಕಲ್ಲ ಎಂದು ಸಿರಿಯನ್ನು ಕೇಳುತ್ತಾರೆ. ಅದಕ್ಕೆ ಸಿರಿ

ತುಳುಪಠ್ಯ
ನಾರಾಯಿನ ಓ ರಂಗೋಜಿ ಸೀನಪ್ಪೆರೇ
ಕೂಡ್‌ದಿ ಕೂಟೊಡು ನ್ಯಾಯೊ ಸಾಲಿಲೇ
ಅಜ್ಜೆರ್ ಸೈತಿನೆಲಂದ್ ಪಟ್ಟೊಗು ಮಾನಿ ಇದ್ಯಾಂದಿನೆಲಂದ್
ಅಜ್ಜೆರೆ ಪುಲ್ಲಿ ಯಾನ್ ಉಲ್ಲೆ ಪಟ್ಟೊಗು
ಅಜ್ಜೆರ್ ಕುಲ್ಲಿಬಿ ಪಟ್ಟೊ ಯಾನ್ ಆಲ್‌ಬೆಂದ್ ಪನ್ಪೆರ್ ಸತ್ಯಮಲೋಕಂದ ಸಿರಿಯೇ

ಅಜ್ಜೆರೆ ಮುತ್ತು ಮುದ್ರೆದ ಉಂಗಿಲೊ ಯಾನ್ ದೀಪೆಯೇ
ಅಜ್ಜೆರ್ ಪತ್ತ್‌ಬಿ ಪಟ್ಟೊದ ಕತ್ತಿ ಯಾನ್ ಪತ್ತ್‌ಬೆ
ಪನ್ಪೆರ್ ಸತ್ಯಮಲೋಕಂದ ಸಿರಿಯೇ.................

ಕನ್ನಡಾನುವಾದ

ನಾರಾಯಣ ರಂಗೋಜಿ ಓ ಸೀನಪ್ಪರೇ
ಸೇರಿರುವ ಕೂಟದಲ್ಲಿ ನ್ಯಾಯ ಹೇಳಿರಿ
ಅಜ್ಜನವರು ಸತ್ತದ್ದೂ ಹೌದು ಪಟ್ಟಕ್ಕೆ ಜನ ಇಲ್ಲದಿರುವುದೂ ಹೌದು
ಆದರೆ ಅಜ್ಜನವರ ಮೊಮ್ಮಗಳು ನಾನಿದ್ದೇನೆ ಪಟ್ಟಕ್ಕೆ
ಅಜ್ಜನವರು ಕುಳಿತುಕೊಳ್ಳುವ ಪಟ್ಟ ನಾನು ಆಳುತ್ತೇನೆಂದು ಹೇಳುತ್ತಾರೆ ಸತ್ಯಮಲೋಕಂದ ಸಿರಿ
ಅಜ್ಜನವರ ಮುತ್ತುಮುದ್ರೆಯ ಉಂಗುರ ನಾನು ಇಡುತ್ತೇನೆ
ಅಜ್ಜನವರು ಹಿಡಿಯುವ ಪಟ್ಟದ ಕತ್ತಿ ನಾನು ಹಿಡಿಯುತ್ತೇನೆ (ಪುಟ 255)

ಎನ್ನುತ್ತಾ ಅಜ್ಜನವರ ಪಟ್ಟದಲ್ಲಿ ಕುಳಿತು ಸಮರ್ಥ ಆಡಳಿತ ನಡೆಸುವೆನು ಎನ್ನುತ್ತಾಳೆ ಸತ್ಯಮಲೋಕಂದ ಸಿರಿ. ಇದಕ್ಕೆ ಅಲ್ಲಿ ಸೇರಿದ ಪಾಲವರು, ಬರಿಸಾಲರು ಹಾಗೂ ಸತ್ತುಗುತ್ತು ಬರ್ಕೆಯವರು ಹೇಳುತ್ತಾರೆ,

ತುಳುಪಠ್ಯ

ನಾರಾಯಿನ ಮಗ ಸಿರಿಯೇ
ಇನಿಗ್ ಪಟ್ಟೊಗು ಇನೀ
ಆನ ಪಟ್ಟೊಗು ಇನಿ ಪೊಣ್ಣು ಪೊಣ್‌ಂಜೋವು
ಪಟ್ಟೊಗು ಮಾನಿ ಆಪುಜಿಂದ್ ಪನ್‌ಪ್ಪೆರ್ ರಂಗೋಜಿ ಸೇನಪ್ಪೆರ್

ಕನ್ನಡಾನುವಾದ

ನಾರಾಯಣ ಮಗ ಸಿರಿಯೇ
ಇಂದು ಈ ಪಟ್ಟಕ್ಕೆ
ಗಂಡಸರ ಪಟ್ಟಕ್ಕೆ ಇಂದು ಹೆಣ್ಣು ಹೆಂಗಸರು
ಪಟ್ಟಕ್ಕೆ ಜನ ಆಗದು ಎನ್ನುತ್ತಾರೆ ರಂಗೋಜಿ ಸೇನಪ್ಪರು (ಪುಟ 256). ಹಾಗಿದ್ದಲ್ಲಿ

ತುಳುಪಠ್ಯ

ಅಜ್ಜೆರೆ ಪಟ್ಟೊಗು ಇನಿಗ್ ಪೊಣ್ಣು ಪೊಣ್ಜೋವು ಆಪುಜಿಂದಿತ್ತ್‌ಂಡ
ಎನ್ನ ಮಗೆ ಅಜ್ಜೆರೆ ಪುಲ್ಲಿ ಉಲ್ಲೆ ಒಜ್ರ ಮಲಕಂದ ಓ ಕುಮಾರೆ

ಆಯಗ್ ಪಟ್ಟೊ ಓ ಕಟ್ಟ್‌ಗೋ ಆಯನ್ ಪಟ್ಟೊಡು ಕುಲ್ಲಾಗೊಂದು
ಉತ್ತರೊಗು ಉತ್ತರೊ ಓ ಸತ್ಯಮಲೋಕಂದ ಸಿರಿ ಕೂಟೊದ ಕಲಟ್ಟ್ ಕೊರ್ಪೆರ್

ಕನ್ನಡಾನುವಾದ

ಅಜ್ಜನವರ ಪಟ್ಟಕ್ಕೆ ಇಂದು ಹೆಣ್ಣು ಹೆಂಗಸರು ಆಗದು ಎಂದಿದ್ದರೆ
ನನ್ನ ಮಗ ಅಜ್ಜನವರ ಮೊಮ್ಮಗ ಇದ್ದಾನೆ ವಜ್ರ ಮಲಕಂದ ಕುಮಾರ
ಆತನಿಗೆ ಪಟ್ಟ ಕಟ್ಟುವ ಪಟ್ಟದಲ್ಲಿ ಅವನನ್ನು ಕೂರಿಸುವ
ಉತ್ತರಕ್ಕೆ ಉತ್ತರ ಓ ಸತ್ಯಮಲೋಕಂದ ಸಿರಿ ಕೂಟದ ಕಳದಲ್ಲಿ ಕೊಡುತ್ತಾಳೆ
(ಪುಟ 256).

ಇದಕ್ಕೊಪ್ಪದ ಪಂಚಾಯತಿಯವರು

ತುಳುಪಠ್ಯ

ಪಟ್ಟೊಗು ನನ ಯೋಗ್ಯಬಾಗ್ಯ ಆಯಿನ ಮಾನಿ ಉಂಡು
ಬಾಲೆಗ್ ಪಟ್ಟೊ ಕಟ್ಯೆರೆ ಆಪುಜಿ
ಪೂತಲೆಕೊಂದಿ ಬಾಲೆಗ್ ಮಗಾ ಓ
ಸೂತಲೆಕೊಂದಿ ಪುದೆ ಪತ್ತ್ಯೆರೆ ಆಪುಜಿ ಮಗಾ
ಎಲ್ಯೊಂಜಿ ಬಾಲೆಗೇ ಪಟ್ಟೊದ ಕತ್ತೀ ಪಟ್ಟೊದ ಉಂಗಿಲೋ ದೀಡ್ಯೆರೆ ಅಪುಜಿ ಮಗಾ

ಕನ್ನಡಾನುವಾದ

ಪಟ್ಟಕ್ಕೆ ಇಂದು ಯೋಗ್ಯಭಾಗ್ಯದ ಜನ ಇದ್ದಾರೆ
ಮಗುವಿಗೆ ಪಟ್ಟಕಟ್ಟಲು ಆಗದು
ಹೂವಿನಂಥ ಮಗುವಿಗೆ ಮಗಾ ಓ
ಬೆಂಕಿಯಂಥ ಹೊರೆ ಹೊರಿಸಲಾಗದು ಮಗಾ
ಚಿಕ್ಕ ಮಗುವಿಗೆ ಪಟ್ಟದ ಕತ್ತಿ ಪಟ್ಟದ ಉಂಗುರ ಕೊಡಲಾಗದು ಮಗಾ ಎನ್ನುತ್ತಾರೆ
(ಪುಟ 257).

ಇದಕ್ಕುತ್ತರವಾಗಿ ಸಿರಿ

ತುಳುಪಠ್ಯ

ಬಾಲೆಗ್ ಪಟ್ಟೊ ಆಪುಜಿಂಡ ಬೊಡ್ಚಿ ಬೊಡ್ಚಿ ಕೂಡಿ ಕೂಟೊ ಎನ್ನ ಕುಟುಂಬೊ
ನ್ಯಾಯೊ ಸಾಲಿಲೆ ಕೇನಿದರೋ
ಎನ್ನ ಅಜ್ಜೆರ್ ಪತ್ತ್‌ದಿ ಪಟ್ಟೊದ ಕತ್ತಿ
ಎನ್ನ ಅಜ್ಜೆರ್ ದೀತಿನ ಪಟ್ಟೊದ ಮುದ್ರೆದ ಉಂಗಿಲೋ

ಎನ್ನ ಬಾಲೆ ಮಲ್ಲೇಯಿನೇಟ ಓ
ಪಟ್ಟೊಡು ದೀದ್ ಇಪ್ಪಡ್
ಎನ್ನ ಬಾಲೆಗ್ ಪಿರಯೊ ಬನ್ನಗ ಓ
ಬಾಲೆಗ್ ಪಟ್ಟೊ ಓ ಕಟ್ಟೋನುಗೊಯೇ
ಆತ್‌ನೇಟಗ್ ಎಂಕ್ಲೆನ ಅಜ್ಜೆರ್ ನಡಪ್ಪುಡಿ ಮಾನಾದಿಗೆದ ಕೆಲಸೊನು
ಯಾನ್ ಮಲ್ತೊನು ಸತ್ಯನಾಪುರೊಡು ಇಪ್ಪುಬೆಂದ್ ಪನ್‌ಂಬೆರ್ ದಾನೆ ಸಿರಿ

ಕನ್ನಡಾನುವಾದ
ಮಗುವಿಗೆ ಪಟ್ಟ ಆಗದಿದ್ದರೆ ಬೇಡಬೇಡ ಸೇರಿದ ಕೂಟದವರೇ ನನ್ನ ಕುಟುಂಬದವರೇ
ನ್ಯಾಯತೀರ್ಮಾನದ ಮಂದಿ ಕೇಳಿರಿ
ನನ್ನ ಅಜ್ಜನವರು ಹಿಡಿದ ಪಟ್ಟದ ಕತ್ತಿ
ನನ್ನ ಅಜ್ಜನವರಿಗಿಟ್ಟ ಪಟ್ಟದ ಮುದ್ರೆಯ ಉಂಗುರ
ನನ್ನ ಮಗ ದೊಡ್ಡವನಾಗುವವರೆಗೆ ಓ
ಪಟ್ಟದಲ್ಲಿ ಇಟ್ಟುಬಿಡಿ
ನನ್ನ ಮಗನಿಗೆ ಪ್ರಾಯ ತುಂಬಿದಾಗ ಓ
ಮಗನಿಗೆ ಪಟ್ಟಕಟ್ಟುವ ಆಗದೇ
ಅಲ್ಲಿಯವರೆಗೆ ನನ್ನಜ್ಜನವರು ನಡೆಸುತ್ತಿದ್ದ ಮಾನಾದಿಗೆಯ ಕೆಲಸಗಳನ್ನೆಲ್ಲ ನಾನು ಮಾಡುತ್ತಾ ಸತ್ಯನಾಪುರದಲ್ಲಿರುವೆ ಎಂದು ಹೇಳುತ್ತಾಳೆ ಸಿರಿ (ಪುಟ 258).

ಈ ಮಾತಿಗೂ ಕೂಟದವರು ಒಪ್ಪುವುದಿಲ್ಲ. ಗಂಡಸರು ಮಾಡುವ ಕೆಲಸವನ್ನು ಹೆಂಗಸರು ಮಾಡಲಾಗದು. ನಿನ್ನೆಯವರೆಗೆ ನಿನಗೆ ಅಜ್ಜನವರು ಆಧಾರವಾಗಿದ್ದರು. ಮುಂದಕ್ಕೆ ನಿನಗೊಬ್ಬ ರಕ್ಷಕನನ್ನು ನಾವು ತೋರಿಸಿಕೊಡುತ್ತೇವೆ. ಅಜ್ಜನವರ ಕೂಡು ಕುಟುಂಬದಲ್ಲಿ ಹುಟ್ಟಿದ ಬಳಿ(ವಂಶಮೂಲದವನು) ಯವನು ಇದ್ದಾನೆ. ಸೂಲೂರು ಗುತ್ತಿನ ಸಂಕರಾಳ್ವ ಇದ್ದಾನೆ. ಆತನನ್ನು ಪಟ್ಟದಲ್ಲಿ ಕೂರಿಸುವ ಆಗದೇ ಎನ್ನುತ್ತಾರೆ. ಆಗ ಸಿರಿ ಕೋಪಿಸಿಕೊಂಡು ಆತನಿಗೆ ಸತ್ಯನಾಪುರದಿಂದ ಕೊಂಡು ಹೋದ ಪಾಲು ಸಾಕಾಗಲಿಲ್ಲವೇ? ಕೋಳಿಯ ಹಗ್ಗದಿಂದ ಹಿಡಿದು ಹಾಲಿನ ಮಣ್ಣಿನ ಮಡಿಕೆಯವರೆಗೆ ಕೊಂಡು ಹೋಗಿದ್ದಾನೆ. ಆತನಿಗೆ ಪಟ್ಟವೇ? ನಾರಾಯಣ ರಂಗೋಜಿ ಸೇನಪ್ಪರೇ, ಅನ್ಯಾಯದಿಂದ ನೀವು ತೀರ್ಮಾನಿಸುವುದಾದರೆ ಪಟ್ಟದಲ್ಲಿ ಆತನೇ ಕೂರಲಿ. ಇದಕ್ಕೆ ಪ್ರತಿಯಾಗಿ ರಂಗೋಜಿ ಸೇನಪ್ಪರು ಒಳಗಿನ ಆಡಳಿತೆ ನೀನು ನೋಡಿಕೊಂಡಿರು, ಹೊರಗಿನ ಆಡಳಿತೆಗೆ ಅವನಿಗಿರಲಿ ಎನ್ನುತ್ತಾರೆ. ಇದರಿಂದ ಸಿಟ್ಟಾದ ಸಿರಿ ಸತ್ಯನಾಪುರದ ಆಡಳಿತವನ್ನೇ ಬಿಟ್ಟೆ ನಾನು. ಅಣ್ಣುಸೆಟ್ಟಿಯೇ ಎಲ್ಲವನ್ನೂ ಅನುಭವಿಸುತ್ತಿರಲಿ ಎಂದು ಹೇಳಿ ಪಂಚಾಯತಿಯ ಕೂಟದಿಂದ ಇಳಿದು ಬರುತ್ತಾಳೆ. ಸತ್ಯನಾಪುರದರಮನೆಗೆ

ಬಂದು ತನ್ನ ಅಜ್ಜನವರು ಕಟ್ಟಿಸಿರುವ ಕೆಂದಾಳಿಯ ಬುಡದಲ್ಲಿನ ಪದ್ಮ ಕಟ್ಟೆಯಲ್ಲಿ ಕುಳಿತು ಕೆಲಸದ ಹೆಣ್ಣು ದಾರುವನ್ನು ಕರೆದು ಮಾರಿಹಟ್ಟಿಯಲ್ಲಿ ಕಪಿಲೆ ದನವಿದೆ. ಹಂಡೆಯಲ್ಲಿ ಹಾಲು ಕರೆದು ಕುಮಾರನ ಬಾಯಾರಿಕೆ ತಣಿಸು ಎಂಬುದಾಗಿ ತಿಳಿಸುತ್ತಾಳೆ. ಬುಟ್ಟಿಯ ಬಾಳೆಹಣ್ಣು ತಿನ್ನಿಸಿ ಮಗುವಿನ ಹಸಿವು ತಣಿಸು ಎಂದಳು. ಅಜ್ಜನವರು ಕಟ್ಟಿಸಿರುವ ತೊಟ್ಟಿಲನ್ನು ಕೆಳಗಿಳಿಸಿ ತಂದು ಹೊರಗಿಡು ಎನ್ನುತ್ತಾಳೆ. ದಾರುವಿಗೆ ಸಿರಿಯ ಈ ಮಾತಿನಿಂದ ಏನೊಂದೂ ತಿಳಿಯದೆ ಏನು ಅಕ್ಕನವರೇ, ಪಂಚಾಯತಿಯ ಕಳಕ್ಕೆ ಹೋದವರಿಗೆ ನಿಮಗೆ ಮಂಕು ಮರುಳು ಆಯಿತೇ ಎಂದು ಕೇಳಲು ಸಿರಿ ಸೂಲೂರಗುತ್ತಿನ ಸಂಕರಾಳ್ವನ ಮಗ ಅಣ್ಣುಸೆಟ್ಟಿ ಇನ್ನು ಮುಂದಕ್ಕೆ ಸತ್ಯನಾಪುರದ ಪಟ್ಟ ಆಳುತ್ತಾ ಒಳಹೊರಗಿನ ಆಡಳಿತ ನೋಡುತ್ತಿರುತ್ತಾನೆ. ಆತನ ಸೇವೆಗೆ ನೀನು ನಿಲ್ಲುವುದಾದರೆ ನಿಲ್ಲು. ನಾನು ನಿಲ್ಲಲಾರೆ. ಸತ್ಯನಾಪುರದರಮನೆ ಬಿಟ್ಟು ಹೊರಟೆ ಎನ್ನುತ್ತಾಳೆ. ದಾರುವೂ ನಿಮ್ಮನ್ನು ಬಿಟ್ಟು ನಾನೂ ನಿಲ್ಲಲಾರೆ. ಜೊತೆಗೇ ಬರುವೆನು ಎನ್ನುತ್ತಾಳೆ.

ದಾರು ಹಂಡೆಹಿಡಿದುಕೊಂಡು ಹಟ್ಟಿಗೆ ಹೋಗಿ ಕಪಿಲೆದನದ ಹಾಲು ಕರೆದು ತಂದು ಕುಮಾರನನ್ನು ಚಾವಡಿಯ ನಡುವಲ್ಲಿ ಮಲಗಿಸಿ ಹೊಟ್ಟೆತುಂಬ ಹಾಲುಣಿಸುತ್ತಾಳೆ. ಹಸಿವಿಗೆ ಬಾಳೆಹಣ್ಣು ನೀಡಿ ಅಜ್ಜನವರು ಕಟ್ಟಿಸಿದ ತೊಟ್ಟಿಲನ್ನು ಕೆಳಗಿರಿಸಿ ತಂದು ಪದ್ಮಕಟ್ಟೆಯಲ್ಲಿರಿಸುತ್ತಾಳೆ. ಸಿರಿ ಮಗುವನ್ನೆತ್ತಿಕೊಂಡು ಎಡಬಲದ ಸಿರಿಮೊಲೆ ಉಣಿಸುತ್ತಾಳೆ. ಅಜ್ಜನವರ ಕಲ್ಲಕಲೆಂಬಿಯಿಂದ ಅರುವತ್ತು ಮೊಳದ ಪಟ್ಟೆ ಸೀರೆಯನ್ನು ತಂದು ತುಂಡರಿಸಿ ಮೂವತ್ತು ಮೊಳದಲ್ಲಿ ದಾರುವಿಗೆ ತೊಟ್ಟಿಲು ಹೊರುವ ಸಿಂಬಿಯನ್ನು ಮಾಡಿ, ಮೂವತ್ತು ಮೊಳ ಪಟ್ಟೆಯನ್ನು ಕುಮಾರನ ತೊಟ್ಟಿಲಿಗೆ ಹಾಸಿ ತೊಟ್ಟಿಲನ್ನು ಎತ್ತಿ ದಾರುವಿನ ತಲೆಗೆ ಹೊರಿಸಿ ಸತ್ಯನಾಪುರದರಮನೆ ಬಿಟ್ಟು ಹೊರಡುತ್ತಾರೆ. ಹೊರಡುವಾಗ ಸಿರಿ ಮಣ್ಣು ಮುಟ್ಟಿ ಹೆಣ್ಣಶಾಪ ನೀಡುತ್ತಾಳೆ. ಅದು ಉಳಿದ ಪಠ್ಯಗಳಿಗಿಂತ ಭಿನ್ನವಾಗಿದೆ.

ತುಳುಪಠ್ಯ

ಸತ್ಯನಾಪುರೊತ್ತ ಎರಮನೆಡ್ ಕಾಲಾದಿದ ಕರ್ಚಿ ಪೋಪಿನ ಓಂಟೆದ ಪುಲಿಟ್ಟ್
ಆಜಿ ತಿಂಗೊಲುದ ಪುಲಿ ತಾಲ್‌ದ್ ಪೋವೊಡು ಆಜಿ ತಿಂಗೊಲುದ ಪುಲಿ ಒರಿದ್ ಬರೊಡು
ಸತ್ಯನಾಪುರೊದ ಎರಮ್ಮನೆಡ್ ಕಾಲಾದಿದ ಕರ್ಚಿ ಪೋಪಿನ ತಾರೆದ ಮರಟ್ಟ್
ಆಜಿ ತಿಂಗೊಲುದ ತಾರಾಯಿ ಒರಿದ್ ಬರೊಡು ಆಜಿ ತಿಂಗೊಲುದ ಕುರ್ವಾಯಿ ತಿಂದ್‌ದ್ ಪೋವೊಡು
ಅಜ್ಜೆರ್ ಬೆಳಗ್ಗಾಯಿ ಎರಮನೆ ಇನಿತ್ತ ದಿನೊಕ್ಕು
ಸುಡುಸೂಕರಿ ಆದ್ ಪೋವೊಡು ಜರಿ ಬೂರ್ದ್ ಪೋವೊಡು

ಮೇಲಾರ ಬರೊಡು ಚೀಗೆ ಬಲ್ಲೆ ನಿಗಿಯೊಡು
ಅಡಿಯಾರ ಬರೊಡು ಪುಲ್ಲುಪುದೆಲ್ ನಿಗಿದ್ ಕಲೆಂಜಿ ಕೊಡಿತ್ತ್‌ದ್
ಸತ್ಯನಾಪುರದೆರಮ್ಮನೆ ಪಾರ್ ಪಡಿಲ್ ಬೂರ್ದ್ ಪೋವೊಡುಂದು
ಸತ್ಯಮಲೋಕಂದ ಸಿರಿಯೇ ಮಣ್ಣ್ ಮುಟ್ಯೆರ್ ಪೊಣ್ಣಸಾಪೊ ಕೊರ್ಯೆರ್...........

ಕನ್ನಡಾನುವಾದ

ಸತ್ಯನಾಪುರದರಮನೆಯಲ್ಲಿ ಕಾಲಾವಧಿಯ ಖರ್ಚು ಹೋಗುವ ಓಟೆ ಹುಳಿಯಲ್ಲಿ
ಆರು ತಿಂಗಳ ಹುಳಿ ಉದುರಿ ಹೋಗಬೇಕು ಆರು ತಿಂಗಳ ಹುಳಿ ಉಳಿದು ಬರಬೇಕು
ಸತ್ಯನಾಪುರದರಮನೆಯ ಕಾಲಾವಧಿಯ ಖರ್ಚು ಹೋಗುವ ತೆಂಗಿನ ಮರದಲ್ಲಿ
ಆರು ತಿಂಗಳ ಕಾಯಿ ಉಳಿದು ಬರಬೇಕು, ಆರು ತಿಂಗಳ ಕಾಯಿಯನ್ನು
ಕುರುವಾಯಿ(ಕಪ್ಪುಹುಳ) ಹುಳು ತಿಂದುಹೋಗಬೇಕು
ಅಜ್ಜನವರು ಬೆಳಗಿದ ಅರಮನೆ ಇಂದಿನ ದಿನಕ್ಕೆ
ಸುಟ್ಟುಭಸ್ಮವಾಗಿ ಹೋಗಿ ಜರಿದು ಬೀಳಬೇಕು
ಮೇಲಿನಿಂದ ಸೀಗೆ ಬಲ್ಲೆ ತುಂಬಿ ಅಡಿಯಿಂದ ಪೊದರು ತುಂಬಿ ಹೋಗಬೇಕು
ಕಲೆಂಜಿ ಮರ ಹುಟ್ಟಿ ಸತ್ಯನಾಪುರದರಮನೆ ಪಾಳುಬಿದ್ದು ಹೋಗಬೇಕೆಂದು
ಸತ್ಯಮಲೋಕಂದ ಸಿರಿ ಮಣ್ಣು ಮುಟ್ಟಿದರು ಹೆಣ್ಣಶಾಪ ನೀಡಿದರು
(ಪುಟ 271–272).

ಮತ್ತೆ ಸತ್ಯನಾಪುರದರಮನೆಗೆ ಅಜ್ಜನವರ ಕಾಲದಲ್ಲಾದ ಲಂಕೆಲೋಕನಾಡಿನ ಸ್ಥಿತಿ ಬಂದೊದಗಿತು. ಹೀಗೆ ಸತ್ಯನಾಪುರದ ಅರಮನೆ ಬಿಟ್ಟು ಹೊರಡುತ್ತಾರೆ. ಉಳಿದ ವಿಚಾರ ಇತರ ಪಠ್ಯಗಳಂತೆ ಇವೆ.

ಸಿರಿ ಬಸಲೂರ ಅರಮನೆಗೆ, ಕಾಂತುಪೂಂಜನಿಗೆ ಬರ (ವಿಚ್ಛೇದನ) ಹೇಳುವುದು

ಕರ್ಗಿಯವರ ಪಠ್ಯವು ಸಿರಿ ಸತ್ಯನಾಪುರದಿಂದ ಹೊರಟು ನೇರವಾಗಿ ಬಸಲೂರ ಬೀಡಿಗೆ ಬರುವುದನ್ನು ತಿಳಿಸುತ್ತದೆ. ಸಿರಿ ಬಸಲೂರಿಗೆ ಬರುವುದನ್ನು ದೂರದಿಂದ ನೋಡಿದ ಕಾಂತುಪೂಂಜ

ತುಳುಪಠ್ಯ

ಈರೆ ಮರ್ಮಲ್ ಎನ್ನ ಮದಿಮ್ಮಲ್ ಬಾಲೆ ಪತ್ತವೊನುದೂ ತೊಟಿಲ್ ತುಂಬಾವೊನುದೂ
ಬರ್ಪಿನ ಪೊರ್ಲು ತೂಲೆ ಅಪ್ಪೆರೆಂದ್ ಓ ಪನ್ಪೆನೆ ಮಗೇ
ನಾರಾಯಿನ ಮಗಾ ನಿಕ್ಕ್ ಎನ್ನ ಮರ್ಮಲ್ ನಿನ್ನ ಮದಿಮ್ಮಲ್
ಬರೊಡು ಪೋವೊಡುಂದು ಇತ್ತ್‌ಂಡ ಮಗಾ

ಇಂಚಿತ್ತಿ ಬುದ್ದಿ ಮಲ್ಪುವನ ಕಾಂತಾಲ್ವಾ
ಒಂಜಿ ಗಿಂಡ್ಯೆದ ಪೇರ್ ಪರ್ಪುನತ್ತಂದೆ ರಡ್ಡ್ ಗಿಂಡೆದ ಪೇರ್‌ಗ್ ಬಯಕ್‌ಬನಾ
ಲಿಂದ್‌ದ್ ಪನ್ಪೆರ್ ಅಪ್ಪೆರ್

ಕನ್ನಡಾನುವಾದ
ನಿಮ್ಮ ಸೊಸೆ ನನ್ನ ಮದುಮಗಳೂ ಮಗು ಹಿಡಿಸಿಕೊಂಡು ತೊಟ್ಟಿಲು ಹೊರಿಸಿಕೊಂಡು
ಬರುವ ಅಂದ ನೋಡಿ ತಾಯಿಯವರೇ ಎನ್ನುತ್ತಾನೆ ಮಗ
ನಾರಾಯಣ ಮಗಾ ನಿನಗೆ ನನ್ನ ಸೊಸೆ ನಿನ್ನ ಮದುಮಗಳು
ಬರುತ್ತಾ ಹೋಗುತ್ತಾ ಇರಬೇಕೆಂದಿದ್ದರೆ
ಈ ರೀತಿಯ ಬುದ್ಧಿ ತೋರಿಸುತ್ತಿದ್ದೆಯಾ ಕಾಂತಾಳ್ವಾ
ಒಂದು ಗಿಂಡೆಯ ಹಾಲು ಕುಡಿಯುವ ಬದಲು ಎರಡು ಗಿಂಡೆಯ ಹಾಲಿಗೆ
ಬಯಸುತ್ತಿದ್ದೆಯಾ
ಎಂದು ಹೇಳುತ್ತಾರೆ ತಾಯಿ (ಪುಟ 180)

ಇದನ್ನು ಕೇಳಿದ ಕಾಂತುಪೂಂಜ ನಿಮ್ಮ ಕಟ್ಟುವಾಲಗ ಕಡಿಮೆ ಮಾಡಿ ತಾಯಿಯವರೇ. ಅವಳು ಬಂದಳು ಎನ್ನುತ್ತಾನೆ. ಮಗುವಿಗೆ ದೃಷ್ಟಿ ನಿವಾಳಿಸಲು ಬಂದ ಅತ್ತೆಯನ್ನು ತಡೆದು' ನೀವು ನನ್ನ ಕುಮಾರನಿಗೆ ನೀವಾಳಿಸುವ ಅಗತ್ಯವಿಲ್ಲ. ಬೇಕಿದ್ದರೆ ಸೂಳೆ ಸಿದ್ದುವಿನ ಮಗ ಗಾಳಿ ಕುಮಾರನಿಗೆ ನಿವಾಳಿಸಿ' ಎನ್ನುತ್ತಾಳೆ ಸಿರಿ. ತನ್ನ ಗಂಡನನ್ನು ವಿಚಾರಿಸಲು ಆತ ಕಡೆರಿಕಾರ್ಲಕ್ಕೆ ಕಿಸ್ತಿನ ಹಣ ಕಟ್ಟಲು ಹೋಗಿದ್ದಾನೆ ಎನ್ನುತ್ತಾರೆ ಅತ್ತೆ. ಕಡೆರಿಕಾರ್ಲಕ್ಕೆ ಹೋಗಿದ್ದಾನೋ ಅಥವಾ ಸೂಳೆಸಿದ್ದುವಿನ ಕಡೆಕಾಯಲು ಹೋಗಿದ್ದಾನೋ ಎಂದು ಕೇಳಲು ಈ ಮಾತನ್ನು ತಡೆಯಲಾರದೆ ಒಳಗೆ ಅವಿತಿದ್ದ ಕಾಂತುಪೂಂಜ ಹೊರ ಬರುತ್ತಾನೆ.

ತುಳುಪಠ್ಯ
ದಾನೆ ಅಪ್ಪೆರೇ ಬಸಲೂರು ಬತ್ತಕೇರಿದರಮ್ಮನೆಡ್
ಪೂಂಜೆ ದಡಿಮುಟ್ಟುದೂ ಕೆಲೆಪ್ಪಿನಾಡೆಗ್
ಪೆರಡ್ಡೆ ದಾನೆ ದಡಿಮುಟ್ಟುದು ಕೆಲೆಪ್ಪಿನೆಂದ್
ಜತ್ತೊನು ಬರ್ಪೆ ಕಾಂತಾಲ್ವೇ

ಕನ್ನಡಾನುವಾದ
ಏನು ತಾಯಿಯವರೇ ಬಸಲೂರ ಬತ್ತಕೇರಿಯರಮನೆಯಲ್ಲಿ
ಹುಂಜ ರೆಕ್ಕೆ ಬಡಿದು ಕೂಗುವಲ್ಲಿ

ಹೇಂಟೆ ಏನು ರೆಕ್ಕೆ ಬಡಿದು ಕೂಗುತ್ತಿದೆ ಎಂದು
ಇಳಿದು ಬರುತ್ತಾನೆ ಕಾಂತಾಳ್ವ (ಪುಟ 184)

ಆತನಲ್ಲಿ ಆರ್ಯಬನ್ನಾಯ ಬಳಿ(ವಂಶಾವಳಿ), ಪುತ್ರಬನ್ನಾಯ ಸೆರ(ಹಿಡಿತ ?) ಬದಲಿಸಬೇಕೆಂದು ಕೇಳಿ ರಂಡೆ ಕಳೆದು ಮುಂಡೆ ಮುಚ್ಚುತ್ತಾಳೆ(ಮುತ್ತೈದೆತನವನ್ನು ಕಳೆದು ವೈಧವ್ಯವನ್ನು ಸ್ವೀಕರಿಸುತ್ತಾಳೆ). ಸಿರಿಗೂ ಕಾಂತಾಳ್ವನಿಗೂ ಮಾತಿಗೆ ಮಾತು ಬೆಳೆಯುತ್ತದೆ. ಕುಮಾರನಿಗೆ ಪಟ್ಟಕಟ್ಟಿ ಪಟ್ಟದುಂಗುರ ಇಡಬೇಕೆನ್ನುತ್ತಾನೆ ಕಾಂತುಪೂಂಜ. ಅದನ್ನು ಸೂಳೆ ಸಿದ್ದುವಿನ ಮಗನಿಗೆ ಮಾಡಿ ಎನ್ನುತ್ತಾಳೆ ಸಿರಿ. ಅಂತಪಂಥ ನಡೆಯುತ್ತದೆ. ಸಿರಿ ಪಂಥ ಸ್ವೀಕರಿಸುತ್ತಾಳೆ. ಕಾಂತುಪೂಂಜ ಹಾಗೂ ಬಸಲೂರನ್ನು ಶಪಿಸಿ ಸಿರಿ ಹೊರಡುತ್ತಾಳೆ. ಇದರಿಂದ ಅತ್ತೆ ಸಂಕರು ಪೂಂಜೆದಿಗೆ ಅತೀವ ದುಃಖವಾಗುತ್ತದೆ. ಸಿರಿಯು ಮಡಿವಾಳರ ಮಾಪುಕರಿಯ(ಹೊಳೆ) ರಾತ್ರಿಯಾಗುವ ಮೊದಲು ದಾಟದಿದ್ದರೆ ಶಿಕ್ಷಿಸುವುದಾಗಿ ತಿಳಿಸಿ ದಾಟದಂತೆ ನಾನಾ ತಂತ್ರ ಹೂಡುತ್ತಾನೆ ಕಾಂತುಪೂಂಜ. ಎಲ್ಲ ಪಂಥವನ್ನು ಮೀರಿ ಸಿರಿ ಮುನ್ನಡೆಯುತ್ತಾಳೆ.

ಶ್ಯಾಮರಾಯಶೆಟ್ಟಿಯವರ ಪಠ್ಯದಲ್ಲಿ ಸಿರಿ ದಾರುವಿನ ತಲೆಯಲ್ಲಿ ಮಗು ಹೊರಿಸಿಕೊಂಡು ಬಸಲೂರ ಬತ್ತಕೇರಿ ಕಡೆಂಗಾಡಿ ಗುತ್ತಿನ ಕಡೆ ಬರುವುದನ್ನು ಕಂಡ ಆಳ್ವ ವಿಷಯವನ್ನು ತನ್ನ ತಾಯಿಗೆ ತಿಳಿಸಿ ಕಳವಲ್ಲಿ ಬಂದವಳನ್ನು ಗೆಲುವಲ್ಲಿ ಕರೆಯಬೇಕು ತಾಯಿಯವರೇ ಎಂದು ಹೇಳಿ ತಾನು ಹೋಗಿ ಮೇಲಿನ ಏಳುಪ್ಪರಿಗೆಯಲ್ಲಿ ಅಡಗಿ ಕುಳಿತುಕೊಳ್ಳುತ್ತಾನೆ. ಮಗುವಿಗೆ ಸಂಕರು ಪೂಂಜೆದಿ ನೀವಾಳಿಸಲು ಬಂದಾಗ ಸಿರಿ ತಡೆದು ನೀವು ಮಗುವಿಗೆ ನೀವಾಳಿಕೆ ಮಾಡಲು ನೀವು ನನ್ನನ್ನು ಬರಹೇಳಿದ್ದೀರೇ? ನನಗೆ 'ಬರ್ಪಣದ ಪಣವು ಕಟ್ಯರಯೇ ಮಾಮಿನಾರೆ, ಪೆದ್ದೊಲ್ತಿ ಕಾಸ್ ಕಟ್ಯರಯೇ (ಹೆರಿಗೆ ಹಣ ಕೊಟ್ಟು ಗಂಡನ ಮನೆಗೆ ತೊಟ್ಟಿಲಮಗು ಬರಹೇಳುವ ಕ್ರಮ) ಮಾಡಿದ್ದೀರೇ ಅತ್ತೆಯವರೇ ಎಂದು ಪ್ರಶ್ನಿಸುತ್ತಾಳೆ. ಆಗ ಅತ್ತೆಯವರು ಹಿಂದಿನದನ್ನು ಮರೆತು ಬಿಡು ಸಿರಿ. ಬಸಳೆಯಂತಿರುವ ಮಗು ಬಾಳೆಯ ದಿಂಡಿನಂತೆ ಬಾಡಿ ಹೋಗಿದೆ. ಬಿಸಿಲಿನಿಂದ ಒಳಗೆ ಬಾ ಎಂದು ಅತ್ತೆ ಕರೆಯಲು ಸಿರಿ

ತುಳುಪಠ್ಯ
ಮಾಮಿನಾರೆ ಕೇಂಡರೋ ಈರೆ ಬಾಲೆ ಮಗಕ್ಕ್ ಪುಟ್ಟಿನ ಬಾಲೆ ಅತ್ತ್‌ಯೇ
ಗುಡ್ಡೆದ ಜೋಕುಲೆಗ್ ಕುರು ಪುದೆಲ್‌ಡ್ ಪುಟ್ಟಿನ ಬಾಲೆಯೇ ಉಂದು

ಕನ್ನಡಾನುವಾದ
ಅತ್ತೆಯವರೇ ಕೇಳಿರಿ ನಿಮ್ಮ ಮಗನಿಗೆ ಹುಟ್ಟಿದ ಮಗುವಲ್ಲ ಇದು
ಗುಡ್ಡೆಯ ಮಕ್ಕಳಿಗೆ ಕುರುಚಲು ಪೊದರಲ್ಲಿ ಹುಟ್ಟಿದ ಮಗು ಇದು.

ಹೀಗಾಗಿ ನಿಮಗೆ ಈ ಮಗುವಿನ ಮೇಲೆ ಮಮತೆ ಇಲ್ಲ. ನಿಮ್ಮ ಮಗನಿಗೂ ಇಲ್ಲ ಎನ್ನಲು ಹಾಗೆಲ್ಲ ದೂಷಣೆ ಮಾಡಬೇಡ ಎನ್ನುತ್ತಾಳೆ. ಸಿರಿ ಹಾಗೂ ಅತ್ತೆಯ ಸುದೀರ್ಘ ಸಂಭಾಷಣೆ ಇದೆ. ಕೊನೆಗೆ ಸಿಟ್ಟು ತಡೆಯಲಾರದೆ ಸಿರಿ ಈವರೆಗೆ ನಿಮ್ಮನ್ನು ಅತ್ತೆ ಎಂಬ ಗೌರವದಿಂದ ಮಾತನಾಡಿಸಿದೆ. ಇನ್ನು ಮುಂದಕ್ಕೆ ಅವಳು ಇವಳು ಎಂದು ಏಕವಚನದಿಂದ ಕರೆದೇನು. ಸಂಕರು ಪೂಂಜೆದಿ ಎಂದು ನನ್ನ ಬಾಯಿಂದ ತಪ್ಪಿ ಬಂದೀತು. ಏಳು ಮಾಳಿಗೆಯಲ್ಲಿ ಅಡಗಿ ಕುಳಿತಿರುವ ನಿಮ್ಮ ಮಿಂಡನನ್ನು ಮೊದಲು ಕರೆಯಿರಿ ಎನ್ನುತ್ತಾಳೆ ಸಿರಿ. ಇದರಿಂದ ವಿಚಲಿತಳಾದ ಅತ್ತೆ ಏಳು ಮಾಳಿಗೆ ಮೇಲೆ ಹೋಗಿ

ತುಳುಪಠ್ಯ

ನಾರಾಯನ ಮಗ ಆಳ್ವಾ ಎನ್ನ ಪಾದ ಕಬಿಂಡಲ ಮಗ ನಿನ್ನ ತರೆ ಕಬಿಜೆ
ನಿನ್ನ ಬುಡೆದಿ ಮಗಾ ಎನ್ನ ಮರ್ಮಲ್ ಮಗಾ ಕಲೆ ಪಿಲೆ ಪಂಡಲ್ ಮಗಾ
ನಿಕ್ಕ್‌ಲಾ ಎಂಕ್‌ಲಾ ಕಟ್ಟ್ ದ್ ಕೊರ್ಯಲ್

ಕನ್ನಡಾನುವಾದ

ನಾರಾಯಣ ಮಗಾ ಆಳ್ವಾ ನನ್ನ ಪಾದ ಮುಳುಗಿದರೂ ನಿನ್ನ ತಲೆ ಮುಳುಗಲಿಲ್ಲವಲ್ಲಾ
ನಿನ್ನ ಪತ್ನಿ ನನ್ನ ಸೊಸೆ ನನಗೆ ಅಪವಾದದ ಮಾತು ಹೇಳಿದಳು ಮಗಾ
ನಿನಗೂ ನನಗೂ ಅನೈತಿಕ ಸಂಬಂಧವನ್ನು ಕಟ್ಟಿಕೊಟ್ಟಳು (ಪುಟ 129).

ಇದನ್ನು ಕೇಳಿದ ಆಳ್ವ ಏಳು ಮಾಳಿಗೆಯಿಂದ ಇಳಿದು ಬರುತ್ತಾನೆ. ಗಂಡನನ್ನು ಕಂಡು ಸಿರಿ ನಿಮಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ. ನನ್ನಲ್ಲಿ ಕೋಪಿಸಿ ಕೊಳ್ಳಬೇಡಿ. ಇನ್ನಾದರೂ ನನ್ನ ಹೆರಿಗೆ ಹಣ ಕೊಟ್ಟು ನನ್ನ ತೊಟ್ಟಿಲಮಗು ಕರೆಸಿಕೊಳ್ಳಿ ಎನ್ನುತ್ತಾಳೆ ಸಿರಿ.

ತುಳುಪಠ್ಯ

ನಾರಾಯಣ ಅಡ್‌ಂಜೋವೇ ತೊಟ್ಟಿಲ್ ಕಟ್ಟಾಲೇ ಬಾಲೆ ಮಾಣಾಲೇ
ಬಸಲೂರ ಬತ್ತಕೇರಿ ಕಡೆಂಗಾಡಿ ಗುತ್ತುಡು
ಈರೆಗ್ ಪುಟ್ಟಿನ ಬಾಲೆಂದಂಡ ಓ
ಈರೆ ಅಪ್ಪೆರೆಡ ಸಂಕರು ಪೂಂಜೆದಿಡ
ಕಾಸ್ ಕಟ್ಟಾಲೆ ಉಲಯಿ ಲೆಪ್ಪಾಲೇ
ತೊಟ್ಟಿಲ್ ಕಟ್ಟಾಲೆ ಬಾಲೆ ಮಾನಾಡ್ಡ್‌ಲ್ಲೆಯೇ

ಕನ್ನಡಾನುವಾದ

ನಾರಾಯಣ ಗಂಡಸೇ ತೊಟ್ಟಿಲು ಕಟ್ಟಿಸಿ ಮಗುವನ್ನು ತೂಗಿ
ಬಸಲೂರ ಬತ್ತಕೇರಿ ಕಡೆಂಗಾಡಿಗುತ್ತಲ್ಲಿ
ನಿಮಗೆ ಹುಟ್ಟಿದ ಮಗುವೆಂದಾದರೆ ಓ
ನಿಮ್ಮ ತಾಯಿ ಸಂಕರು ಪೂಂಜೆದಿಯವರಲ್ಲಿ
ಹೆರಿಗೆಯ ಹಣ ಕಟ್ಟಿಸಿ ಒಳಗೆ ಕರೆಯಿರಿ
ತೊಟ್ಟಿಲು ಕಟ್ಟಿಸಿ ಮಗವನ್ನು ತೂಗಿರಿ (ಪುಟ 130)

ಎಂಬುದಾಗಿ ತನ್ನ ಗಂಡನಿಗೆ ಸವಾಲೊಡ್ಡುತ್ತಾಳೆ ಸಿರಿ. ಹಾಗೆ ಮಾಡಬೇಕಾದರೆ ನಿನ್ನ ವಾರೀಸುದಾರ (ರಕ್ಷಕ)ನನ್ನು ಕರೆದುಕೊಂಡು ಬಾ ಎನ್ನುತ್ತಾನೆ ಕಾಂತುಪೂಂಜ. ಸಿರಿ ಬೇಲಿಯ ತೂಣ(ಗೂಟ) ತೆಗೆದು ಇದುವೇ ನನ್ನ ರಕ್ಷಕ ಎನ್ನುತ್ತಾಳೆ. ಅದು ನಾನು ಕೂಲಿ ಕೊಟ್ಟು ಹಾಕಿಸಿದ ಗೂಟ ಎನ್ನಲು ತನ್ನ ಮಗುವನ್ನೆತ್ತಿ ಇವನೇ ನನ್ನ ರಕ್ಷಕ ಎನ್ನುತ್ತಾಳೆ. ನನ್ನ ನೆತ್ತರನ್ನೇ ನನಗೆ ರಕ್ಷಕ ಎಂದು ತೋರಿಸಿದೆಯಲ್ಲಾ ಎಂದು ಆಳ್ವ ಕಣ್ಣೀರು ಹಾಕುತ್ತಾನೆ. ಸಿರಿ ನಿಮ್ಮ ಕಣ್ಣಲ್ಲಿ ನೀರು ಬಂದರೆ ನನ್ನ ಕಣ್ಣಲ್ಲಿ ನೆತ್ತರು ಬರುತ್ತಿದೆ ಎನ್ನುತ್ತಾಳೆ.ನನಗೆ ಸೀಮಂತ ಹಾಕಿ ಕರೆದುಕೊಂಡು ಹೋದ ಅನಂತರ, ಮಗುವಿಗೆ ಜನ್ಮ ನೀಡಿದಾಗ, ನನ್ನ ಅಜ್ಜನವರು ಮರಣ ಹೊಂದಿದಾಗ ಬಾರದ ನೀವೂ ಒಬ್ಬ ಗಂಡನೇ? ಸಿರಿ ಕಾಂತಾಳ್ವರ ನಡುವಿನ ಸಂಭಾಷಣೆ ಇಲ್ಲಿ ಸುದೀರ್ಘವಾಗಿದೆ.

ಕೊನೆಗೆ ಸಿರಿ ತನ್ನ ಸೊಂಟದ ಜೋಡಿ ನೇವಳ ತೆಗೆದು ಬೋದಿಗೆಯ ಕಂಬಕ್ಕೆ ಕಟ್ಟುತ್ತಾಳೆ. ಕೈಯ ಬಳೆ, ಅಂಗೈ ಸರಪಳಿ, ಮುಂಗೈ ಬಳೆ ತೆಗೆದು ಬೋದಿಗೆ ಕಂಬಕ್ಕೆ ಕಟ್ಟುತ್ತಾಳೆ. ಕತ್ತಿನ ಕಿಲವಂದಿ ತೆಗೆದು ಬೋದಿಗೆಯ ಕಂಬಕ್ಕೆ ಕಟ್ಟುತ್ತಾಳೆ. ಮೂಗಿನ ಮೂಗುತ್ತಿಗೆ ಕೈ ಹಾಕಲು ಅತ್ತೆ ಓಡೋಡಿ ಬಂದು ನನ್ನ ಮಗ ಜೀವಂತವಾಗಿರುವಾಗ ಆತ ಸತ್ತಾಗ ಮಾಡುವ ವಿಧಿ ಮಾಡಬೇಡ ಸಿರಿ ಎಂದು ತಡೆಯುತ್ತಾಳೆ.

ತುಳು ಪಠ್ಯ

ನಿನ್ನ ಮಗಕ್ಕ್ ಕಂಡನಿ ಅಡೋನೆ ಬಾಲೆ ಪೆದ್ದೊನೆ, ತೊಟಿಲ್ ಕಟೋನೆ
ಗುತ್ತುದ ಬಂಟಗ್ ಕಂಡನಿ ಅಡ್‌ಪ್ಪೆ ಬಾಲೆ ಪೆದ್ದುವೆ ತೊಟ್ಟಿಲ್ ಕಟ್ಟುವೆ
ಸಂಕರು ಪೂಂಜೆದಿ ಎನನ್ ಪತ್ತಡ ಮುಟ್ಟಡ ಎನನ್ ಪತ್ಯಡ ಮುಟ್ಯಡ ಬಸ್ಮೊ ಆದ್
ಪೋವಾ

ಕನ್ನಡಾನುವಾದ

ನಿನ್ನ ಮಗನನ್ನು ಗಂಡನಾಗಿ ಪಡೆಯಲಾರೆ, ಮಗು ಹೆರಲಾರೆ, ತೊಟ್ಟಿಲು ಕಟ್ಟಲಾರೆ
ಗುತ್ತಿನ ಬಂಟನನ್ನು ಗಂಡನಾಗಿ ಪಡೆಯುವೆ, ಮಗು ಹೆರುವೆ, ತೊಟ್ಟಿಲು ಕಟ್ಟುವೆ

ಸಂಕರು ಪೂಂಜೆದಿ ನನ್ನನ್ನು ತಡೆಯಬೇಡ, ಮುಟ್ಟಬೇಡ, ಮುಟ್ಟಿದರೆ ಭಸ್ಮವಾಗಿ ಹೋಗುವೆ (ಪುಟ 135).

ನಿನ್ನ ಮಗನಲ್ಲಿ ಗುತ್ತಿನ ಮನೆತನದವನಲ್ಲಿ ಹುಟ್ಟಿದವನಲ್ಲಿ ಇರಬೇಕಾದ ಸಾಮಾನ್ಯ ಗುಣಗಳೂ ಇಲ್ಲದ ಕಾರಣ ಅವನನ್ನು ತಿರಸ್ಕರಿಸುತ್ತೇನೆ ಎಂದು ಕಾಂತುಪೂಂಜನ ತಾಯಿಗೇ ಹೇಳುತ್ತಾಳೆ.

ಮೂಗಿನ ನತ್ತು ತೆಗೆದು ಬೋದಿಗೆಯ ಕಂಬಕ್ಕೆ ಕಟ್ಟಿ ರಂಡೆ ಕಳೆದು (ಮುತ್ತೈದೆತನ ತೆಗೆದು ಮುಂಡೆಯಾದಳು) ಮುಂಡೆ ಮುಚ್ಚಿದಳು ಸಿರಿ. ಗಂಡನನ್ನು ಕುರಿತು 'ನಾನು ದೇಶಾಂತರ ಹೋಗುವವಳು'.

ತುಳುಪಠ್ಯ

ಇರ್ವರೊ ಬಾಲೆ ಪೆದ್ದೊನು ತೊಟ್ಟಿಲ್ ಕಟೊಂದು ಬನ್ನಗ
ಈರ್ ಕೆಕ್ಕಿಲ್‌ಗ್ ನಾಯೆರ್ ನುಗೊ ಪಾಡ್‌ದ್
ನಾಲಿಲ್ಲ್ ನಟ್ಟೊಂದು ಮೂಜಿಲ್ಲ್ ಬೇಡೊಂದು ಬನ್ನಗಾ
ಯಾನ್ ಈ ಜಲ್ಮ ಬುಡ್ದೂ ಕುಡೊಂಜಿ ಜಲ್ಮೊಗು ಸೇರ್‌ದ್ ಬರ್ವೆಯೆ ಆಡ್‌ಂಜೋವೇ

ಕನ್ನಡಾನುವಾದ

ಎರಡನೇ ಬಾರಿ ಮಗು ಹೆತ್ತು ತೊಟ್ಟಿಲು ಕಟ್ಟಿಕೊಂಡು ಬರುವಾಗ
ನೀವು ಕುತ್ತಿಗೆಗೆ ನೊಗ ನೇಗಿಲು ಕಟ್ಟಿಕೊಂಡು
ನಾಲ್ಕುಮನೆ ಬೇಡುತ್ತಾ ಮೂರು ಮನೆ ಭಿಕ್ಷೆ ಎತ್ತುತ್ತಾ ಬರುವಾಗ
ನಾನು ಈ ಜನ್ಮ ಬಿಟ್ಟು ಇನ್ನೊಂದು ಜನ್ಮಕ್ಕೆ ಸೇರಿ ಬರುವೆ ಓ ಗಂಡಸೇ (ಪುಟ 136).

ಈ ರೀತಿಯಲ್ಲಿ ನೀವು ಬಂದು ನನ್ನ ಕಣ್ಣಿಗೆ ಕಂಡಾಗ ನಾನು ಮಾಯವಾಗ ಬೇಕು ಎನ್ನುತ್ತಾಳೆ ಬಸಲೂರಲ್ಲಿ. ಹೀಗೆ ಶಪಿಸಿ ಸಿರಿ ಬಸಲೂರ ಮೆಟ್ಟಿಲು ಇಳಿದು ಹೊರಡುತ್ತಾಳೆ.

ಅಮೃತ ಸೋಮೇಶ್ವರರ ಸಂಗ್ರಹಿತ ಪಠ್ಯದಲ್ಲಿ ಸಿರಿ ದಾರುವಿನಲ್ಲಿ ಕುಮಾರನ ತೊಟ್ಟಿಲು ಹೊರಿಸಿಕೊಂಡು ಸತ್ಯನಾಪುರದರಮನೆಯ ಚೆಂಬುಚೆರಿಗೆ, ಬಂಗಾರ್ ಪದ್ದೆಯಿ ಬೂಮಿಗ್ ಎರಗ್‌ದ್ ಪೋವಡ್ ಸುಡು ಸೂಕರಿಯಾದ್ ಪೋವಡೆಂದು (ಚೆಂಬಿನ ಪಾತ್ರೆಗಳು, ಬಂಗಾರದ ಒಡವೆಗಳು ಭೂಮಿಗೆ ಎರಗಿ ಹೋಗಲೆಂದು) ಶಪಿಸಿ ಹೊರಟು ಬಸಲೂರ ದಾರಿಯಾಗಿ ಪದಂಗಡಿ ಪೇಟೆಯಲ್ಲಿ ಬರಲು ಪದಂಗಡಿ ಸೂಳೆಸಿದ್ದು ದಾರಿಗೆ ಓಡೋಡಿ ಬರುತ್ತಾಳೆ. ಕುಮಾರನಿಗೆ ಹಾಲು ಕುಡಿಸಿ ಮುಂದೆ ಹೋಗಿ ಎನ್ನುತ್ತಾಳೆ. ಹಾಗೆ ಸೂಳೆಸಿದ್ದುವಿನ ಬೀಡಿಗೆ ಹೋಗುತ್ತಾರೆ. ಆ ಹೊತ್ತಿಗೆ

ತುಳುಪಠ್ಯ
ಅವ ಸಮಯೊಡು ಬಸಲೂರುದ ಬತ್ತಕೇರಿ ಅರಮನೆದ ಕಾಂತು ಪೂಂಜೆರ್
ಸೂಳೆ ಸಿದ್ದುನ ಇಲ್ಲಡ್ ತೂಕಿದಿ ಉಜ್ಜಾಲ್‌ಡ್ ಕುಲ್ಲುದು
ಕಿನ್ನಿ ಬಿರೆಲ್ ತುಚ್ಚಿದ್ ಮುಗುರು ತೆಲಿಕೆ ತೆಲೆಪುವೆರ್‌ದೇ

ಕನ್ನಡಾನುವಾದ
ಆ ಸಮಯದಲ್ಲಿ ಬಸಲೂರು ಬತ್ತಕೇರಿ ಅರಮನೆಯ ಕಾಂತುಪೂಂಜರು
ಸೂಳೆ ಸಿದ್ದುವಿನ ಮನೆಯ ತೂಗುಯ್ಯಾಲೆಯಲ್ಲಿ ಕುಳಿತು
ಕಿರುಬೆರಳು ಕಚ್ಚುತ್ತಾ ಮುಗುಳು ನಗು ನಗುತ್ತಿದ್ದಾರೆ (ಪುಟ 178).

ಈ ವಿವರಗಳು ಬೇರೆ ಪಠ್ಯಗಳಲ್ಲಿ ಇಲ್ಲ.

ತುಳುಪಠ್ಯ
ಅವ ಸಮಯೋಡು ಬೊಳ್ಳಿನ ಸಿರಿಗಿಂಡ್ಯೆ ಪತ್ಯಲ್ ಸಿದ್ದು
ಕಬುಲ್ತಿ ಪೆತ್ತದ ಪೇರ್ ಮೈತಲ್
ಪೇರ್‌ಗ್ ವಿಸ ಪಾಡಿಯಲ್ ಕುಮಾರಗ್ ಕೊನತ್ತ್ ಕೊರಿಯಲ್

ಕನ್ನಡಾನುವಾದ
ಆ ಸಮಯದಲ್ಲಿ ಬೆಳ್ಳಿಯ ಗಿಂಡೆ ಹಿಡಿದಳು ಸಿದ್ದು
ಕಪಿಲೆ ದನದ ಹಾಲು ಎರೆದಳು
ಹಾಲಿಗೆ ವಿಷ ಹಾಕಿದಳು ಕುಮಾರನಿಗೆ ತಂದುಕೊಟ್ಟಳು

ತುಳುಪಠ್ಯ
ಪೇರ್‌ನ್ ಕಡೆಬಾಯಿಡೆ ಬುಡಿಯೆ ಮಾಯೊದ ಮಗೆ ಸತ್ಯೊದ ಕುಮಾರೆ
ಏರ್‌ಯೆ ಅಕ್ಕೆರೆ ಈರೆ ಮಗೆ ಪೇರ್‌ನ್
ಕಡೆ ಬಾಯಿಡೆ ಬುಡ್ನ ಗಜ್ಜ ಕಾರ್ಯ ದಾನೆಂದ್ ಕೇನುವಲ್ ಸಿದ್ದು
ಅಪಗ ಪನ್ಪೆರ್ ಏರ್ಯ ಸಿದ್ದುವೋ ಎನ್ನ ಮಗೆ ಸತ್ಯದ ಕುಮಾರೆ
ಅಸುದ್ದ ಪೇರ್‌ನ್ ಆಯೆ ಪರಯೆಂದ್ ಪಂಡೇರ್
ಎಂಕೊಂಜಿ ಎಡ್ಡೆ ವರ ಅಪ್ಪಣೆ ಕೊರ್ಲೆ ಅಕ್ಕೆರೆಂದೊಲು ಸಿದ್ದು
ನಿನ್ನ ಸೊಂಟೊಡ್ದು ಮಿತ್ತ್ ಪೊರ್ಲು ಪೊಲ್ಯ ಇಪ್ಪುಡ್ ಸಿದ್ದುವೋ
ಸೊಂಟೊಡ್ದು ತಿರ್ತ್‌ಗ್ ಬಾಪು ಬದಂಗಲ ಪರೆಂಗಿಲ ಉಪ್ಪುಡ್ ಸಿದ್ದುವೋ

ಕನ್ನಡಾನುವಾದ

ಹಾಲನ್ನು ಕಡೆ ಬಾಯಿಂದ ಬಿಟ್ಟ ಮಾಯದ ಮಗು ಸತ್ಯದ ಕುಮಾರ
ಯಾರು ಅಕ್ಕನವರೇ ನಿಮ್ಮ ಮಗ ಹಾಲನ್ನು
ಕಡೆಬಾಯಿಂದ ಬಿಟ್ಟ ವಿಷಯವೇನೆಂದು ಕೇಳುತ್ತಾಳೆ ಸಿದ್ದು
ಆಗ ಹೇಳುತ್ತಾರೆ ಯಾರು ಸಿದ್ದು ನನ್ನ ಮಗ ಸತ್ಯದ ಕುಮಾರ
ಅಶುದ್ಧ ಹಾಲನ್ನು ಆತ ಕುಡಿಯಲಾರ ಎಂದಳು
ನನಗೊಂದು ವರ ಅಪ್ಪಣೆ ಕೊಡಿ ಅಕ್ಕನವರೇ ಎಂದಳು
ನಿನ್ನ ಸೊಂಟದಿಂದ ಮೇಲಕ್ಕೆ ಅಂದಚಂದ ಇರಲಿ ಸಿದ್ದು
ಸೊಂಟದಿಂದ ಕೆಳಗೆ ಬಾವು ಬದಂಗಲ ಪರಂಗಿರೋಗ ಇರಲಿ ಸಿದ್ದು ಎಂದರು (ಪುಟ 179).

ಬಹುಶಃ ಸಿರಿ ಸತ್ಯನಾಪುರದ ಅರಮನೆ ಬಿಟ್ಟು ಹೊರಡುವಾಗ ಆಕೆಗೆ ಗೊತ್ತಾಗಬೇಕೆಂದೇ ಕಾಂತುಪೂಂಜ ಸೂಳೆಸಿದ್ದುವಿನ ಮನೆಯಲ್ಲಿದ್ದುಕೊಂಡು ಸಿರಿಯನ್ನು ಕರೆಯಲು ಸೂಳೆಸಿದ್ದುವನ್ನು ಕಳುಹಿಸಿರಬೇಕು. ಮಾತ್ರವಲ್ಲ ಸಿರಿಯ ಮಗನನ್ನು ಉಪಾಯದಿಂದ ವಿಷಹಾಕಿ ಕೊಲ್ಲುವ ತಂತ್ರ ರೂಪಿಸಿರಬೇಕು. ತುಳುವಿನಲ್ಲಿ ಒಂದು ಗಾದೆ ಇದೆ 'ಮಗೆ ಸೈತ್‌ಂಡಲಾ ಮಲ್ಲೆ ಇದ್ದಿ ಮರ್ಮಲ್ ಮುಂಡೆ ಮುಚ್ಚುನ ತೂವೊಡು' (ಮಗ ಸತ್ತರೂ ಪರವಾಗಿಲ್ಲ, ಸೊಸೆ ವಿಧವೆಯಾಗುವುದು ನೋಡಬೇಕು) ಹಾಗೆಯೇ ಇಲ್ಲಿ ಕಾಂತುಪೂಂಜನ ಸ್ಥಿತಿಯೂ ಮಗ ಸತ್ತರೂ ಪರವಾಗಿಲ್ಲ, ತನ್ನನ್ನು ಅವಮಾನಿಸಿದ ಹೆಂಡತಿ ಕಷ್ಟ ಪಡುವುದನ್ನು ನೋಡಬೇಕು ಎಂಬ ಉದ್ದೇಶದಿಂದ ಈ ರೀತಿ ಮಾಡಿರಬೇಕು.

ಅಲ್ಲಿಂದ ಸಿರಿ ಬಸಲೂರಿಗೆ ಹೋಗುತ್ತಾಳೆ. ಅತ್ತೆ ಸಿರಿಯ ಸಂಭಾಷಣೆ, ಸಿರಿ ಕಾಂತುಪೂಂಜನ ಸಂಭಾಷಣೆ ಉಳಿದ ಪಠ್ಯಗಳಂತೆ ಇದೆ. ಆದರೆ ಇಲ್ಲಿನ ಒಂದು ವ್ಯತ್ಯಾಸವೆಂದರೆ ಸಿರಿ ಕಾಂತುಪೂಂಜನಿಗೆ ಬರ (ವಿಚ್ಛೇದನ) ಹೇಳುವ ಸಂದರ್ಭ ಈ ರೀತಿ ಇದೆ:

ತುಳುಪಠ್ಯ

ಈರೆನ ಅರಮನೆಡ್ ಮುಕ್ಕಾಲ್ ಮೂಜಿ ಗಳಿಗೆ ಉಂತಯೆ ಪಂಡೆರ್
ಎಂಕ್ ಆರಿಯ ಬನ್ನಾಕುಲೆ ಬರ ಪನ್ಲೆ
ಪುತ್ರ ಬನ್ನಾಕುಲೆ ಪುಂಡಿ ಸೆರಂಗ್ ಬುಡ್ಲೆ
ಈರ್‌ಲಾ ಯಾನ್‌ಲಾ ನನ ದುಂಬುಗು ಒಪ್ಪತಪ್ಪ ನಿರೆವೊಡುಂದಾಂಡ
ಈರ್ ಕಂಟೆಲ್‌ಗ್ ನಾಯೆರ್ ಪುಗೆಲ್‌ಗ್ ನುಗೊ ಕಟೊಂದು
ಏನಿಗ್ ಎನ್ನ ಕಾರಡಿಕ್ಕ್ ಬತ್ತರಾ
ಆನಿಗ್ ನಮೊ ಒಪ್ಪ ನಿರೆವಂದ್ ಪಂಡೆರ್

ಕನ್ನಡಾನುವಾದ
ನಿಮ್ಮರಮನೆಯಲ್ಲಿ ಮುಕ್ಕಾಲು ಮೂರು ಘಳಿಗೆ ನಿಲ್ಲೆನು
ನನಗೆ ಆರ್ಯ ಬನ್ನಾಯ ಬರ (ವಿಚ್ಛೇದನ) ಹೇಳಿರಿ
ಪುತ್ರ ಬನ್ನಾಯ ಹಿಡಿಸೆರಗು ಬಿಡಿ (ನಿಯಂತ್ರಣ)
ನೀವು ನಾನೂ ಇನ್ನು ಮುಂದಕ್ಕೆ ಒಂದಾಗಿ ಬಾಳಬೇಕೆಂದರೆ
ನೀವು ಕುತ್ತಿಗೆಗೆ ನೇಗಿಲು ಹೆಗಲಿಗೆ ನೊಗ ಕಟ್ಟಿಕೊಂಡು
ಎಂದಿಗೆ ನನ್ನ ಕಾಲಡಿಗೆ ಬಂದಿರೋ
ಅಂದಿಗೆ ನಾವು ಒಂದಾಗಿ ಬಾಳುವೆವೆಂದು ಹೇಳಿದರು (ಪುಟ 189).

ಅದಕ್ಕೆ ಕಾಂತುಪೂಂಜ ಕೋಪಿಸಿಕೊಂಡರು, ಯಾರು ಸಿರಿಯೇ, ನಿನಗೆ ಈ ಅರಮನೆಯ ಹಾಲುನೀರು ಇಂದಿಗೆ ಮುಗಿಯಿತು.

ತುಳುಪಠ್ಯ
ಜತ್ತ್ ಪೋಯಿ ಪೊಣ್ಣಗ್ ಲೆತ್ತ್ ಪಂಡಿ ಬರಗೆ
ಆರಿಯ ಬನ್ನಾಕುಲೆ ಬರಪಂಡೆ ಪುತ್ರ ಬನ್ನಾಕುಲೆ ಪುಂಡಿ ಸೆರಂಗ್ ಬುಡಿಯೆ (ಹಿಡಿತ)

ಕನ್ನಡಾನುವಾದ
ಅಹಂಕಾರದಿಂದ ಇಳಿದುಹೋಗುವ ಹೆಣ್ಣಿಗೆ ಕರೆದು ಹೇಳಿದ ಬರವಂತೆ
ಆರ್ಯ ಬನ್ನಾಯ ಬರಹೇಳಿದೆ ಪುತ್ರ ಬನ್ನಾಯ ಹಿಡಿ ಸೆರಗು ಬಿಟ್ಟೆ (ನಿಯಂತ್ರಣ)

ಎನ್ನುತ್ತಾನೆ. ಸಿರಿ ಈ ಮಾತನ್ನು ಕೇಳಿ ಮೂರು ಹೆಜ್ಜೆ ಹಿಂದೆ ಬಂದು ಬಸರೂರಿನ ಬತ್ತಕೇರಿಯ ಅರಮನೆ ಉರಿದು ಸುಟ್ಟುಭಸ್ಮವಾಗಿ ಹೋಗಲಿ ಎಂದು ಶಪಿಸಿದರು. ಮುಕ್ಕಾಲು ಮೂರು ಘಳಿಗೆಯಲ್ಲಿ ಅರಮನೆ ಸುಟ್ಟು ಭಸ್ಮವಾಯಿತು. ದಾರು ತಿರುಗಿ ನೋಡಿ ಸಿರಿಗೆ ತಿಳಿಸಲು ನಿನಗೆ ತಿರುಗಿ ನೋಡಬೇಡ ಎಂದೆ. ನೀನು ನೋಡಿದ ತಪ್ಪಿಗೆ ಸಿರಿ

ತುಳುಪಠ್ಯ
ಯಾನ್‌ಲಾ ಎನ್ನ ಅನ್ನಬನ್ನಂದ ಮದಿಮಾಯೆಲಾ ಕುಲ್ಲುದಿನ ಪಟ್ಟದ ಮುತ್ತಿನ
ಅರಮನೆ ಅದೆ ಒಂಜಿ ಒರಿಯಡ್
ಬಾಕಿಪೂರ ಸುಡುಸೂಕರಿಯಾದ್ ಪೋವಡ್ ಪಂಡೆರ್

ಕನ್ನಡಾನುವಾದ
ನಾನೂ ನನ್ನ ಅಂದಚಂದದ ಮದುಮಗನೂ ಕುಳಿತಿದ್ದ ಮುತ್ತಿನ ಅರಮನೆಯ

ಕೋಣೆಯೊಂದು ಉಳಿಯಲಿ
ಉಳಿದದ್ದೆಲ್ಲ ಸುಟ್ಟುಭಸ್ಮವಾಗಿ ಹೋಗಲಿ ಎಂದರು (ಪುಟ 183).

ಇಲ್ಲಿ ಸಿರಿ ಸತ್ಯನಾಪುರದಿಂದ ಹೊರಡುವಾಗ ಅರಮನೆ ನಾಶ ಮಾಡಿ ಹೊರಟಂತೆ ಬಸಲೂರನ್ನೂ ನಾಶ ಆಗುವಂತೆ ಶಪಿಸುವ ವಿವರಗಳಿವೆ.

ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಪಠ್ಯವು ಸಿರಿ ಬಸಲೂರಿಗೆ ಬರುವಾಗ ಅತ್ತೆ ಮಗುವಿಗೆ ತಿಳಿಮಸಿಯಲ್ಲಿ ನೀವಾಳಿಸಲು ಬರುವ ವಿಚಾರ, ಸಿರಿ ನಿರಾಕರಿಸಿ ತನ್ನ ಗಂಡನನ್ನು ಕೇಳಿದಾಗ ಆತ ಕಡೆರಿಕಾರ್ಲಕ್ಕೆ ಕಿಸ್ತಿನ ಹಣ ಕಟ್ಟಲು ಹೋಗಿದ್ದಾನೆ ಎನ್ನಲು ಕಿಸ್ತಿನ ಹಣ ಕಟ್ಟಲು ಹೋಗಿದ್ದಾನೆಯೇ ಅಥವಾ ಕಡೆರಿಕಾರ್ಲದ ಸೂಳೆಸಿದ್ದುವಿನ ಕಡೆಕಾಯಲು ಹೋಗಿದ್ದಾನೆಯೇ ಎಂದು ಕೇಳುವುದು, ಅತ್ತೆ ಸೊಸೆಯರ ಸಂಭಾಷಣೆ, ಗಂಡನಿಂದ ಬರ ಪಡೆಯುವ ರೀತಿ ಉಳಿದ ಪಠ್ಯಗಳಂತೆ ಇದೆ. ಗಂಡನಿಗೆ ಬರ (ವಿಚ್ಛೇದನ) ಹೇಳಲು ಕೇಳುವಾಗ ಈ ಮಾತನ್ನು ಹೇಳುತ್ತಾಳೆ.

ತುಳುಪಠ್ಯ
ಬತ್ತ ಕಟ್ಟ್‌ಲೆ ಆಣ್ಜೋವೆ ಬರಪನ್ಲೆ
ಎನ್ನ ಕೈ ಸೆರಸ್ರೆ ಒರೊದೇಕ್ ಬುಡ್ದು ಕೊರ್ಲೆ

ಕನ್ನಡಾನುವಾದ
ನನಗೆ ಬತ್ತ ಕಟ್ಟಿ ಬರ ಹೇಳಿ ಗಂಡಸೇ
ನನ್ನ ಕೈ ಸೆರಸ್ರೆ (ನನ್ನ ಮೇಲಿನ ಹಿಡಿತ) ಒಂದು ಬಾರಿಗೆ ಬಿಟ್ಟು ಕೊಡಿ.

ಇಲ್ಲಿ ಬೇರೆ ಬೇರೆ ರೀತಿಯ ಪದಗಳ ಬಳಕೆಯಾಗಿರುವುದು ಕಂಡುಬರುತ್ತದೆ. ಪುಂಡಿ ಸೆರಂಗ್ ಬುಡ್ಲೆ, ಕೈ ಸೆರಸ್ರೆ ಬುಡ್ದು ಕೊರ್ಲೆ, ಪುತ್ರ ಬನ್ನಾಯ ಸೆರ ಬುಡ್ಲೆ, ಹಕ್ಕ್ ಪಕ್ಕ್ ಕಡಿತ್ತೊಂಡೆರ್‌ಇತ್ಯಾದಿ.ಇದೆಲ್ಲವೂ ತನ್ನ ವಂಶಾವಳಿ ಬದಲಿಸಿ, ನನ್ನ ಮೇಲಿನ ಹಿಡಿತ ಬಿಟ್ಟುಕೊಡಿ, ನನ್ನ ಮೇಲಿನ ಹಕ್ಕು ಬಿಟ್ಟುಕೊಡಿ ಇತ್ಯಾದಿ ಅರ್ಥಗಳನ್ನೇ ನೀಡುತ್ತವೆ. ಸಿರಿ ಬರಹೇಳಿ ಬಸಲೂರ ಅರಮನೆ ಇಳಿದು ಹೊರಡುವ ವಿವರಗಳಿವೆ. ಬಸಲೂರ ಅರಮನೆ ಬಿಟ್ಟು ಹೊರಡುವಾಗ ಮೂರು ಲೋಕಕ್ಕೆ ಕೊಡುವಷ್ಟು ಸಂಪತ್ತು ಇತ್ತು. ಇನ್ನು ಮುಂದಕ್ಕೆ ತನ್ನ ಗಂಡನಿಗೆ ಕುಡಿಯಲು ಗಂಜಿ ತಿಳಿಯೂ ಸಿಗದೇ ಹೋಗಬೇಕೆಂದು ಶಪಿಸಿ

ತುಳುಪಠ್ಯ
ಕಾಟಿ ಕರ್ಬಾಸ್‌ಲೆಡ್ ದತ್ತೊಂದಿತ್ತಿನಾಡೆ

ಇನಿ ಮಾರಿಕಿದೆಟ್ಟ್ ಒತ್ತೆ ಕಣ್ಣ ಎರು ಆವೊಡು
ಎನ್ನ ಕೈ ಪತ್ತಿ ದಾರೆದ ಮದಿಮ್ಮಾಯಗ್‌ಗೆನಾ
ಪರಿಯೆರೆ ತೆಲಿದಾಂತೆ ಪೋವೊಡು
ನಾಲಿಲ್ಲ್ ನಟ್ಟೊಡುಗೆನಾ ಮೂಜಿಲ್ಲ್ ಬೇಡೊಡುಗೆನಾ
ಇನಿ ಅಂಚಿತ್ತಿ ಸಾಪ ಪಾಲಿಯೆರ್ ಸಿರಿಯಾರ್

ಕನ್ನಡಾನುವಾದ
ಕಾಟಿ ಕರ್ಬಾಸುಗಳಿಂದ(ಕೋಣ ಎತ್ತುಗಳಿಂದ) ಉಳುತ್ತಿದ್ದಲ್ಲಿಗೆ
ಇಂದು ಮಾರಿ ಹಟ್ಟಿಯಲ್ಲಿ ಒಂದು ಕಣ್ಣಿನ ಎತ್ತು ಆಗಬೇಕು
ನಾನು ಕೈ ಹಿಡಿದ ಧಾರೆಯ ಮದುಮಗನಿಗೆ
ಕುಡಿಯಲು ಗಂಜಿಯಿಲ್ಲದೆ ಹೋಗಬೇಕು
ಇಂದು ಅಂಥ ಶಾಪ ಕೊಟ್ಟರು (ಪುಟ 107).

ಗೋಪಾಲ ನಾಯ್ಕರ ಪಠ್ಯದಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ. ಸಂಕರು ಪೂಂಜೆದಿ ಮಗುವಿಗೆ ನೀವಾಳಿಸಲು ಬಂದಾಗ ನೀವಾಳಿಸಬೇಡಿ ಎಂದರೂ ಕೇಳದ ಅತ್ತೆಗೆ ಸಿರಿ ಅತ್ತೆಯವರೇ ಒಂದು ಬಾರಿ ಹೇಳಿಯೇನು, ಎರಡು ಬಾರಿ ಹೇಳಿಯೇನು, ನೀವು ಕೇಳದಿದ್ದರೆ ಮೂರನೇ ಬಾರಿಗೆ ಮುಂಡೆ ಎಂಬ ಅಗೌರದ ಮಾತು ಬಂದೀತು ಎಂದು ಹೇಳುವ ಮಾತು ಬರುತ್ತದೆ. ಕಾಂತುಪೂಂಜ ಸಿರಿಯರ ನಡುವಿನ ಸಂಭಾಷಣೆ ಎಲ್ಲ ಪಠ್ಯಗಳಲ್ಲಿರುವಂತಿದೆ. ಒಂದು ಕಡೆ ಮಾತ್ರ ನೀನು ಬಸಲೂರ ಗುತ್ತಲ್ಲಿ ಆಳುವವಳೋ, ಬಾಳುವವಳೋ ಅಥವಾ ದೇಶ ಬಿಟ್ಟು ದೇಶಾಂತರ ಹೋಗುವವಳೋ ಎಂದು ಕೇಳಿದಾಗ ಸಿರಿ ಈ ಮಾತನ್ನು ಹೇಳುತ್ತಾಳೆ.

ತುಳುಪಠ್ಯ
ನಾರಾಯಿನ ಮದಿಮ್ಮಯಾ ನಾರಾಯಿನ ಮದಿಮ್ಮಾಯಾ ಓ
ಬಸ್‌ಲೂರ ಗುತ್ತುಡು ಆಲ್‌ಬಿ ಲೆಕ್ಕೊಡು ಬಾಲ್‌ಬಿ ಲೆಕ್ಕೊಡು
ಲೆತ್ತೊಂದುವರ್‌ಂಡ ಆಲ್‌ದುವೆ ಬಾಲ್‌ದುವೆ

ಕನ್ನಡಾನುವಾದ
ನಾರಾಯಣ ಮದುಮಗಾ ನಾರಾಯಣ ಮದುಮಗಾ ಓ
ಬಸಲೂರ ಗುತ್ತಲ್ಲಿ ನನ್ನನ್ನು ಆಳುವಂತೆ ಬಾಳುವಂತೆ
ನೀವು ಕರೆದಿದ್ದರೆ ಆಳುತ್ತಿದ್ದೆ ಬಾಳುತ್ತಿದ್ದೆ (ಪುಟ 282).

ಆ ರೀತಿಯಲ್ಲಿ ನೀವು ಕರೆಯಲಿಲ್ಲ. ಹಾಗಾಗಿ ದೇಶ ಬಿಟ್ಟು ದೇಶಾಂತರ ಹೋಗುತ್ತೇನೆ ಎನ್ನುತ್ತಾಳೆ. ಹೀಗಾಗಿ ಕಾಂತುಪೂಂಜರೂ, ಸಿರಿಯೂ ಬತ್ತ ಕಟ್ಟಿದರು ಬರ ಹೇಳಿದರು, ಹಕ್ಕು ಪಕ್ಕು ಕಡಿದುಕೊಂಡರು ಬಸಲೂರ ಗುತ್ತಿನಲ್ಲಿ. ಬಸಲೂರ ಗುತ್ತು ಇಳಿದು ಹೊರಡುತ್ತಾಳೆ ಸಿರಿ.

ರಾಮಕ್ಕ ಅವರ ಪಠ್ಯದಲ್ಲಿ ಸಿರಿ ಬಸಲೂರ ಅರಮನೆಗೆ ಹೋದ ಕೂಡಲೇ ಅತ್ತೆ ನಾವಾಗಿ ಕರೆಯುವ ಮೊದಲೇ ಅವಳಾಗಿಯೇ ಬಂದಿದ್ದಾಳೆ. ಆದುದರಿಂದ ಮಗುವಿನ ಅಲ್ಕ್ ಉಲ್ಕ್ (ಭಯ, ಹೆದರಿಕೆ) ತೆಗೆಯಲು ಬಟ್ಟಲಲ್ಲಿ ತಿಳಿ ಹಾಗೂ ಮಸಿಯನ್ನು ಹಾಕಿ ತರುತ್ತಾರೆ. ಇದನ್ನು ನೋಡಿದ ಸಿರಿ ಅತ್ತೆಯವರೇ ಕಡೆಂಗಾಡಿ ಸೂಳೆ ಸಿದ್ದುವಿನರಮನೆಯಲ್ಲಿ ನಿಮ್ಮ ಮಗನಿಗೆ ಹುಟ್ಟಿದ ಮಕ್ಕಳಿದ್ದಾರೆ. ಅವರ 'ಅಲ್ಕ್ ಉಲ್ಕ್' ತೆಗೆಯಿರಿ ಎನ್ನುತ್ತಾಳೆ. ಅತ್ತೆ–ಸಿರಿ, ಸಿರಿ–ಕಾಂತುಪೂಂಜರ ನಡುವಿನ ಸಂಭಾಷಣೆ ಉಳಿದ ಪಠ್ಯಗಳಂತೆ ಇದೆ. ಕೊನೆಗೆ ಸಿರಿ ನಾನು ಯಾಕೆ ಇಲ್ಲಿಗೆ ಬಂದಿದ್ದೇನೆಂದರೆ

ತುಳುಪಠ್ಯ

ಎನ್ನ ಒರ್ವರೊದ ಬಣ್ಣ ಬಂಗಾರ್ ಐಸುರೊ ಭಾಗ್ಯೊ ಬೊಳ್ಳಿ ಬಂಗಾರ್
ನಾರಾಯಿನಾ ದೆತ್ತೊನೊಡು ಹಕ್ಕ್ ಬಾರ ದೆಪ್ಪೊಡು
ಎಂಕ್ ಬರೊ ಪನ್ಲೇ ಬತ್ತ ಲೆಪ್ಪುಲೆ ಮದಿಮ್ಮಾಯಾ

ಕನ್ನಡಾನುವಾದ

ನನ್ನ ಒಂದು ಬಾರಿಯ ಬಣ್ಣ ಬಂಗಾರ ಐಶ್ವರ್ಯ ಭಾಗ್ಯ ಬೆಳ್ಳಿ ಬಂಗಾರ
ನಾರಾಯಣ ತೆಗೆಯಬೇಕು ಹಕ್ಕುಬಾರ ತೆಗೆಯಬೇಕು
ನನಗೆ ಬರಹೇಳಿ ಬತ್ತ ಕರೆಯಿರಿ ಮದುಮಗಾ

ಎನ್ನುತ್ತಾಳೆ. ಉಳಿದ ಪಠ್ಯಗಳಲ್ಲಿ ಲಭ್ಯವಿಲ್ಲದ ಚಿನ್ನಾಭರಣಗಳನ್ನು ತೆಗೆಯುವ ಪಟ್ಟಿ ಇಲ್ಲಿದೆ. ಮೊದಲಿಗೆ ನೆತ್ತಿ ಭಗ್ತಲೆ ತೆಗೆದಳು, ಜಡೆಗೊಂಡೆ ತೆಗೆದಳು, ಕಿವಿಗೆ ಕೈ ಕೊಟ್ಟಳು ಮುತ್ತಿನ ಬೆಂಡೋಲೆ ತೆಗೆದಳು, ಎಸಳಿರುವ ಕೊಪ್ಪು, ಬುಗುಡಿ ಕೊಪ್ಪು ತೆಗೆದರು, ಮೂಗಿನ ಮುತ್ತೈದೆತನ ತೆಗೆದರು. ಕುತ್ತಿಗೆಗೆ ಕೈಹಾಕಿ ಮಿಸಿರಿನ ಮಾಲೆ, ಗೆಜ್ಜೆ ಟಿಕ್ಕಿನ ಮಣಿ, ಅವಲಕ್ಕಿ ಸರ, ಚಕ್ರಸರ, ಕಟ್ಟಿದ ತಾಲಿಮಣಿ ತೆಗೆದಳಪ್ಪಾ. ಕೈಯ ಕೋಂದೆ ಬಳೆ, ಬೆರಳಿನ ಮುತ್ತು ಮುದ್ರೆಯ ಉಂಗುರ ತೆಗೆದಳು. ಸೊಂಟದ ಬಂಗಾರದ ಡಾಬು ತೆಗೆದಳು, ಕಾಲ ಪೈಜಣಿ ತೆಗೆದಳು. ಸಿರಿ ಏಳೇಳು ಲೋಕದ ಕೋಪ ಕೋಪಿಸಿದಳು. ನಿಮ್ಮ ಎದೆಯ ಮೇಲಿರಲಿ ಎಂದಳು. ಎಲ್ಲವನ್ನೂ ತೆಗೆದು ಗಜಕಂಭದ ಬುಡದಲ್ಲಿಟ್ಟು ಹಕ್ಕುಬಾರ ಕಳೆದೆ ಎಂದಳು ತೆಗೆದು ಎಸೆದಳು. ಕಾಂತುಪೂಂಜನ ಎದೆಗೇ ತೆಗೆದು ಬಿಸಾಡಿದಳು.

ಇಲ್ಲಿನ ಒಟ್ಟು ವಿವರಗಳನ್ನು ನೋಡಿದಾಗ ಮುತ್ತೈದೆಯಾಗಿದ್ದಂಥ ಸಿರಿ ಕಾಂತುಪೂಂಜನ ಜೊತೆಗೆನ ಸಂಬಂಧವನ್ನು ಕಡಿದುಕೊಂಡು ವಿಧವೆಯಂತಾಗುವ ಚಿತ್ರಣವಿದೆ. ಹಾಗಾಗಿಯೇ ತನ್ನ ಅಂದಚಂದದ ಬಗೆಬಗೆಯ ಆಭರಣಗಳನ್ನೆಲ್ಲ ಒಂದೊಂದಾಗಿಯೇ ಕಳಚುತ್ತಾ ಬಂದು ಕೊನೆಗೆ ಮೂಗಿನ ನತ್ತು, ಕರಿಮಣಿ ಸರ, ತಾಳಿ ಇವೆಲ್ಲವನ್ನೂ ಗಂಡನ ಎದುರಲ್ಲೇ ಕಳಚಿ ಕಾಂತುಪೂಂಜನ ಎದೆಯ ಮೇಲೆ ಎಸೆಯುತ್ತಾಳೆ. ಆಮೂಲಕವಾಗಿ ಕಾಂತುಪೂಂಜ ಬದುಕಿದ್ದರೂ ಸತ್ತಂತೆ ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಾಳೆ. ತುಳುವಿನಲ್ಲಿ ಒಂದು ಮಾತಿದೆ 'ಐನ್ ಆಯನ ತಿಗಲೆಗ್ ದೀಂಡ್' (ಅದನ್ನು ಅವನ ಎದೆಗೆ ಇಟ್ಟಾಯಿತು) ಎಂದರೆ ಸಂಪೂರ್ಣ ನಾಶ ಎಂಬರ್ಥ. ಬಂಟರ ಸಾವಿನ ಆಚರಣೆಗೆ ಸಂಬಂಧಿಸಿ ಈ ಕ್ರಿಯೆ ನಡೆಯುತ್ತದೆ. ಸಾಮಾನ್ಯವಾಗಿ ಗಂಡ ತೀರಿಕೊಂಡಾಗ ಹೆಣದ ಮೀಹ ಎಲ್ಲ ಆದಮೇಲೆ ಹೆಣವನ್ನು ಶೃಂಗಾರ ಮಾಡಿ ಕಾಷ್ಠಕ್ಕೆ ಕೊಂಡು ಹೋಗುವ ಕೊನೆಯ ಗಳಿಗೆಯಲ್ಲಿ ಆತನ ಹೆಂಡತಿಯನ್ನು ವಿಧವೆ ಮಾಡುವ ವಿಧಿ ನಡೆಯುತ್ತದೆ. ಆಕೆಯ ಮಂಗಳ ಸೂತ್ರ, ಮೂಗಿನ ನತ್ತು ಇವನ್ನೆಲ್ಲ ಹೆಣದ ಮುಂದೆ ಕೂರಿಸಿ ವಿಧವೆ ಹೆಂಗಸರೇ ತೆಗೆಯುವ ಕ್ರಮ ಇದೆ. ಆಕೆಯ ಕೈಯಲ್ಲಿನ ಗಾಜಿನ ಬಳೆಗಳನ್ನು ಎರಡೂ ಕೈಗಳನ್ನು ಪರಸ್ಪರ ತಾಗಿಸಿಕೊಂಡು ಹೆಣದ ಎದೆಯ ಮೇಲೆ ಒಡೆದು ಹಾಕುವ ವಿಧಿ ನಡೆಯುತ್ತದೆ. ಆಕೆಯ ಆಭರಣಗಳನ್ನೆಲ್ಲ ಒಂದು ಬಿಳಿಯ ಬಟ್ಟೆಯಲ್ಲಿ ಕಟ್ಟಿ ಆತನ ಎದೆಯ ಮೇಲಿರಿಸುತ್ತಾರೆ. ಹೀಗಾಗಿ ಆತನ ಎದೆಯ ಮೇಲಿಟ್ಟಾಯಿತು ಅಥವಾ ಆಕೆಯ ವೈವಾಹಿಕ ಬದುಕು ನಾಶವಾಯಿತು ಎಂಬರ್ಥದಲ್ಲಿ ಈ ಮಾತನ್ನು ಹೇಳುತ್ತಾರೆ. ಸಿರಿ ಇಲ್ಲಿ ಕಾಂತುಪೂಂಜನ ಎದೆಯ ಮೇಲೆ ತನ್ನೆಲ್ಲ ಆಭರಣಗಳನ್ನು ಎಸೆಯುವ ಮೂಲಕ ಪರೋಕ್ಷವಾಗಿ ಇದೇ ವಿಧಿಯನ್ನು ನೆರವೇರಿಸುತ್ತಾಳೆ. ಹೀಗಾಗಿ ಕಾಂತುಪೂಂಜ ಬದುಕಿದ್ದೂ ಸತ್ತಂತೆ ಎಂಬ ಸಂದೇಶವನ್ನು ನೀಡುತ್ತಾಳೆ. ಮುಂದುವರಿದು ನಾನು ಎಲ್ಲಿಗೆ ಹೋಗುವುದು ಗೊತ್ತೇ?

ತುಳುಪಠ್ಯ

ಸೆಟ್ಟಿನಾಯಗ್ ತೆನ್ಕಾಯಿ ರಾಜ್ಯ ಬಾರುನಾಯಗ್ ಬಡೆಕ್ಕಾಯಿ ರಾಜ್ಯ
ನೀತಿಕೆಟ್ಟಿನಾಯಗ್ ನೆರಿಯ ಕುಲೊ ಕೆಟ್ಟಿನಾಯಗ್ ಕುಡುಮೊ
ಮಲ್ಲಾಯಗ್ ಏಣೂರು ಬಡವಗ್ ಬಂಗಾಡಿ

ಕನ್ನಡಾನುವಾದ

ಹಾಳಾದವನಿಗೆ ತೆಂಕಣ ರಾಜ್ಯ ಆಳುವವನಿಗೆ ಬಡಗಣ ರಾಜ್ಯ
ನೀತಿ ಕೆಟ್ಟವನಿಗೆ ನೆರಿಯ ಕುಲ ಕೆಟ್ಟವನಿಗೆ ಕುಡುಮ
ಶ್ರೀಮಂತನಿಗೆ ವೇಣೂರು ಬಡವನಿಗೆ ಬಂಗಾಡಿಯಂತೆ (ಪುಟ 180).

ನನ್ನ ಮದುಮಗಾ, ನಾನು ಹೋಗುವ ದಾರಿಯನ್ನೊಮ್ಮೆ ನೋಡಿಕೊಳ್ಳಿ. ನಾನು ದೇಶ ಬಿಟ್ಟು ದೇಶಾಂತರ ಹೋಗುತ್ತೇನೆ. ಕೊಟ್ಟರಾಡಿಗೆ ಹೋಗುತ್ತೇನೆ. ಅಲ್ಲಿನ ಕೊಡ್ಸರಾಳ್ವರಿಗೆ ಎರಡನೇ ಸಂಬಂಧವಾಗಿ ಗಂಡನನ್ನು ಪಡೆಯುವೆ. ಅಂದು ನೀವು ಬರಬೇಕು. ಇಂದು ನಾನು ಹೋಗುವ ದಾರಿಯನ್ನೊಮ್ಮೆ ನೋಡಿಕೊಳ್ಳಿ ಎನ್ನುತ್ತಾಳೆ. ಅಲ್ಲಿಗೆ ಹೇಗೆ ನೀವು ಬರಬೇಕೆಂದರೆ

ತುಳುಪಠ್ಯ

ಎಡತ್ತ್ ಬಲತ್ತ್ ಜೋಳಿಗೆ ಪಾಡೊನ್ಲೆ
ನಾರಾಯಿನ ಮದಿಮ್ಮಯಾ ಕಾರ್‌ಗ್ ಬೊಲ್ದು ಕುಂಟು ಕಟೊನ್ಲೆ
ಈರೆ ಕೆಕ್ಕಿಲ್‌ಗ್ ಬೊಲ್ಲಿದ ನಾಯೆರ್ ಪಾಡೊನ್ಲೆ
ನಾಲಿಲ್ಲ್ ನಟ್ಟೊನು ಮೂಜಿಲ್ಲ್ ಬೇಡೊನು ಬನ್ನಗ
ಕೊಟ್ಟರಾಡಿದ ಕೊಡ್ಸರಾಳ್ವನ ಅರಮನೆಡ್ ಏನ್ ಇಪ್ಪುವೆ
ಆನಿದ ಕಾಲೊ ಬುಡೊನ್ಲೆ ಮದಿಮ್ಮಾಯಾ
ಎಡತ್ತ ಕೈ ಚಂಡಿ ಮಲ್ತ್‌ದ್ ಪುಂಡಿ ಬಿಗ್ಸ್ ಈರೆಗ್ ಕೊರ್ಪೆ
ಮಣ್ಣ್ ಮುಟ್ಟ್‌ದ್ ಪೊಣ್ಣ ವರೊ ಕೊರ್ಪೆ ಮದಿಮ್ಮಯಾ
ಏನ್ ಪೋಪಿನ ಸಾದಿಡೆ ಬಲ್ಲೆಂದೆರ್

ಕನ್ನಡಾನುವಾದ

ಎಡಬಲಗಳಿಗೆ ಜೋಳಿಗೆ ಹಾಕಿಕೊಳ್ಳಿ
ನಾರಾಯಣ ಮದುಮಗಾ ಕಾಲಿಗೆ ಬಿಳಿಯ ಬಟ್ಟೆ ಸುತ್ತಿಕೊಳ್ಳಿ
ನಿಮ್ಮ ಕುತ್ತಿಗೆಗೆ ಬೆಳ್ಳಿಯ ನೇಗಿಲು ಕಟ್ಟಿಕೊಳ್ಳಿ
ನಾಲ್ಕುಮನೆ ಬೇಡುತ್ತಾ ಮೂರು ಮನೆಗಳಲ್ಲಿ ಭಿಕ್ಷೆ ಕೇಳುತ್ತಾ ಬರುವಾಗ
ಕೊಟ್ಟರಾಡಿಯ ಕೊಡ್ಸರಾಳ್ವರ ಅರಮನೆಯಲ್ಲಿ ನಾನಿರುತ್ತೇನೆ
ಅಂದಿನ ಕಾಲಬಿಡಿ ಮದುಮಗಾ
ಎಡದ ಕೈ ಒದ್ದೆ ಮಾಡಿ ಹಿಡಿ ಭಿಕ್ಷೆ ನಿಮಗೆ ನೀಡುತ್ತೇನೆ
ಮಣ್ಣು ಮುಟ್ಟಿ ಹೆಣ್ಣ ವರ ಕೊಡುತ್ತೇನೆ ಮದುಮಗಾ
ನಾನು ಹೋಗುವ ದಾರಿಯಲ್ಲೆ ಬನ್ನಿ ಎಂದಳು (ಪುಟ 181).

ಸಾಮಾನ್ಯವಾಗಿ ಬಂಟ ಜನಾಂಗದವರಲ್ಲಿ ಭಿಕ್ಷೆ ಬೇಡುವುದು ನಿಷೇಧ. ಒಂದು ವೇಳೆ ಅಂಥ ಸಂದರ್ಭ ಒದಗಿ ಬಂದರೆ ಇದೇ ರೀತಿಯಲ್ಲಿ ನೇಗಿಲಿನ ರೂಪವನ್ನು ಕುತ್ತಿಗೆಗೆ ಕಟ್ಟಿಕೊಂಡು ಭಿಕ್ಷೆ ಬೇಡಬೇಕೆಂಬ ನಿಯಮ ಇದೆ. ಹಿಂದೆ ಕೆಲವು ಮನೆತನಗಳಲ್ಲಿ ಬಡತನ ಬಂದಾಗ ಈ ರೀತಿಯಲ್ಲಿ ನೇಗಿಲ ರೂಪ ಕುತ್ತಿಗೆಗೆ ಕಟ್ಟಿಕೊಂಡು ಬೇಡುತ್ತಿದ್ದ

ಸಂದರ್ಭವನ್ನು ಹಿರಿಯರು ನೆನಪಿಸಿಕೊಳ್ಳುತ್ತಾರೆ. ಕಾಲಿಗೆ ಬಿಳಿ ಬಟ್ಟೆ ಕಟ್ಟುವ ಸಂಕೇತವೂ ಅದೇ. ಈ ಪದ್ಧತಿ ಸಿರಿಯಿಂದ ಆರಂಭವಾಗಿರಲೂಬಹುದು.

ಲೀಲಾ ಅವರ ಪಠ್ಯದಲ್ಲಿ ಸಿರಿ ನನಗೆ 'ಆರ್ಯ ಬನ್ನಾಕ್ಲೆ ಬತ್ತ ಕಟ್ಟಾವರೆ ಪುತ್ರ ಬನ್ನಾಕ್ಲೆ ಬರ ಪನ್ಪಾವರೆ' (ಆರ್ಯ ಬನ್ನಾಯ ಬತ್ತ ಪುತ್ರ ಬನ್ನಾಯ ಬರ (ವಿಚ್ಛೇದನ) ಹೇಳಲು) ಬಸಲೂರಿಗೆ ಹೋಗಬೇಕೆಂದು ಮಗುವನ್ನು ದಾರುವಿನಲ್ಲಿ ಹೊರಿಸಿಕೊಂಡು ಬರುತ್ತಾಳೆ. ಇವಳನ್ನು ದೂರದಿಂದ ಕಂಡ ಕಾಂತಾಳ್ವ ಇವಳನ್ನು ನಾನು ಬರಲು ಹೇಳಿಲ್ಲ. 'ಬರ್ಪಣದ ಪಣವು' (ಹೆರಿಗೆಯ ಹಣವನ್ನು ಗಂಡನ ಮನೆಯವರು ತವರುಮನೆಗೆ ಕೊಟ್ಟು ತೊಟ್ಟಿಲ ಮಗು ಗಂಡನ ಮನೆಗೆ ತರುವಂತೆ ಹೇಳುವ ಕ್ರಮ) ಕಟ್ಟಲಿಲ್ಲ. ಅವಳಾಗಿಯೇ ಬಂದಳಲ್ಲ ಎಂದು ಎಲೆಮರೆ ಕಾಯಿಮರೆ ಆಗುತ್ತಿದ್ದಾನೆ. ಅತ್ತೆ ಕುಮಾರನಿಗೆ ತೊರಪು (ನೀವಾಳಿಸಲು) ಮಾಡಲು ಬಂದಾಗ ನನ್ನ ಮಗ ಕುಮಾರನಿಗೆ ತೊರಪು ಮಾಡಬೇಡಿ, ಸೂಳೆಸಿದ್ದು ಮಗ ಸಿದ್ದಪ್ಪನಿಗೆ ನೀವಾಳಿಕೆ ಮಾಡಿ ಎನ್ನುತ್ತಾಳೆ. ಸಿರಿ ಮತ್ತು ಸಂಕರಾಳ್ವೆದಿ, ಸಿರಿ ಮತ್ತು ಕಾಂತಾಳ್ವರ ನಡುವಿನ ಸಂಭಾಷಣೆ ಉಳಿದ ಪಠ್ಯಗಳಂತೆ ಇವೆ. ಸಿರಿ ಕೊನೆಗೆ ತನ್ನ ಗಂಡನಿಗೆ ಬರಹೇಳಿ ತನ್ನ ಕತ್ತಿನ ಕಿಲಬಂದಿ, ಮೂಗಿನ ನತ್ತನ್ನು ತೆಗೆದು ಬೋದಿಗೆ ಕಂಬಕ್ಕೆ ಕಟ್ಟಿದಾಗ ಕಾಂತಾಳ್ವ ಬಂದು ಅದನ್ನು ಒಂದು ಬಟ್ಟೆಯಲ್ಲಿ ಕಟ್ಟಿ ಕುಮಾರನ ತೊಟ್ಟಿಲಲ್ಲಿಟ್ಟು 'ಮಗನೇ ಸಿರಿಯ ಕುತ್ತಿಗೆಯ ಕಿಲಬಂದಿ, ಮೂಗಿನ ಮತ್ತೈದೆತನವನ್ನು ಕಟ್ಟಿನಿನ್ನ ತೊಟ್ಟಿಲಲ್ಲಿ ಇಟ್ಟಿದ್ದೇನೆ. ನಿನಗೆ 'ಉರ್ಬುಮಕರ' (ತಿಳುವಳಿಕೆ) ಬಂದಾಗ ಈ ಆಭರಣ ಗಳಿಂದ ಕಿವಿಗೆ ಅತ್ತಿಕಾಯಿ ಕುಂಡಲ, ಸೊಂಟಕ್ಕೆ ಹುಲಿಯುಗುರಿನ ಸರಪಳಿ ಮಾಡಿಸಿ ಹಾಕಿಸಿ ಕೋಎನ್ನುತ್ತಾನೆ. ಈ ವಿವರಗಳು ಬೇರೆ ಪಠ್ಯಗಳಲ್ಲಿ ಇಲ್ಲ. ಈ ಬಗೆಗೆ ಲೀಲಾ ಅವರಲ್ಲಿ ಕೇಳಿದಾಗ ಬಂಟರಲ್ಲಿ ಹೆಂಡತಿ ಧರಿಸುವ ಕರಿಯಮಣಿ ಹಾಗೂ ಮೂಗಿನ ನತ್ತಿಗೂ ಗಂಡನಿಗೂ ಏನೇನೂ ಸಂಬಂಧವಿಲ್ಲ. ಹಿಂದಿನ ಕಾಲದಲ್ಲಿ ಹೆಣ್ಣು ತಾಯಿಗೆ ಗೃಹಕೃತ್ಯಗಳಲ್ಲಿ ಸಹಾಯವಾಗುವ ಸಂದರ್ಭ ಎಂದರೆ ಸಾಮಾನ್ಯವಾಗಿ ಹನ್ನೆರಡು ವರ್ಷ ಪ್ರಾಯದಲ್ಲಿ ಹೆಣ್ಣಿನ ತಾಯಿ ಅಥವಾ ಹಿರಿಯ ಅತ್ತೆ ಈ ಕರಿಮಣಿಯನ್ನು ಹೆಣ್ಣಿನ ಕುತ್ತಿಗೆಗೆ ಕಟ್ಟುತ್ತಿದ್ದರು. ಇದನ್ನು ಚಿನ್ನದಲ್ಲಿಯೇ ಮಾಡಿಸಿ ಕಟ್ಟುತ್ತಿದ್ದರಂತೆ. ಇದಕ್ಕೆ ದೃಷ್ಟಿಸರ ಎಂಬ ಹೆಸರಿತ್ತು. ಇದು ಕತ್ತಿನಲ್ಲಿ ಇಲ್ಲದೆ ಒಲೆ ಮುಟ್ಟುವಂತಿಲ್ಲ ಎಂಬುದು ಕುಂದಾಪುರ ಕಡೆಯ ಹಿರಿಯರ ಹೇಳಿಕೆ. ಇದು ವಿವಾಹ ವಿಧಿಯ ಭಾಗವಾಗಿ ಬಂದದ್ದು ಕ್ರಿ.ಶ. 20ನೇ ಶತಮಾನದ ಉತ್ತರಾರ್ಧದಲ್ಲಿ. ವಿವಾಹ ವಿಧಿಯಲ್ಲಿ ಇದನ್ನು ಹುಡುಗ ಹುಡುಗಿಯ ಕುತ್ತಿಗೆಗೆ ಕಟ್ಟುವ ಪರಿಪಾಠ ಬೆಳೆದು ಬಂತು. ಇದಕ್ಕೆ ಮಂಗಳಸೂತ್ರ ಎಂಬ ಹೆಸರೂ ಬಂತು. ಆದರೆ ಇದನ್ನು ಹುಡುಗಿಯ ಮನೆಯವರೇ ಇಂದಿಗೂ ಮಾಡಿಸಿ ಕೊಂಡುಹೋಗಬೇಕು ಎಂಬುದು ನಿಯಮ. ಬಂಟರ ಬಗೆಗೆ ನನ್ನ ಕ್ಷೇತ್ರೀಯ ಅಧ್ಯಯನದ ಸಂದರ್ಭದಲ್ಲಿ ಅನೇಕ ಹಿರಿಯ ಹೆಂಗಸರು ಅವರಿಗೆ ಕರಿಮಣಿ ಧಾರಣೆ ತವರು ಮನೆಯಲ್ಲೇ ಆದದ್ದನ್ನು ತಿಳಿಸಿರುತ್ತಾರೆ.

ಈ ಬಗೆಗೆ ಲೀಲಾ ಅವರನ್ನು ಕೇಳಿದಾಗ ಕುತ್ತಿಗೆಯ ಕಿಲವಂದಿ ಮತ್ತು ಮೂಗಿನ ನತ್ತು ಸಿರಿಯ ತವರು ಮನೆಗೆ ಸಂಬಂಧಿಸಿದ್ದು. ಅದಕ್ಕೂ ಕಾಂತಾಳ್ವನಿಗೂ ಸಂಬಂಧವಿಲ್ಲ. ಹಾಗಾಗಿ ತನ್ನದಲ್ಲದ ಸ್ವತ್ತನ್ನು ಕಾಂತಾಳ್ವ ಯಾಕೆ ಇಟ್ಟುಕೊಳ್ಳುತ್ತಾನೆ. ಅದಕ್ಕಾಗಿ ಕುಮಾರನ ತೊಟ್ಟಿಲಲ್ಲಿಟ್ಟು ನಿನಗೆ ತಿಳುವಳಿಕೆ ಬರುವಾಗ ಕಿವಿಗೆ ಅತ್ತಿಕಾಯಿ ಕುಂಡಲ, ಸೊಂಟಕ್ಕೆ ಹುಲಿಯುಗುರಿನ ಸರಪಳಿ ಹಾಕಿಸಿಕೋ ಎಂದು ಹೇಳಿ ಕಳುಹಿಸಿ ಕೊಟ್ಟಿದ್ದಾನೆ. ಇದರಿಂದ ಲೀಲಾ ಅವರಿಗೆ ಬಂಟ ಸಮಾಜದ ವಿವಾಹ ಕ್ರಮಗಳ ಪ್ರಾಚೀನ ಪದ್ಧತಿಯ ಅರಿವಿದ್ದ ಬಗೆಗೆ ತಿಳಿಯುತ್ತದೆ. ಈ ದೃಷ್ಟಿಯಲ್ಲಿ ಲೀಲಾ ಅವರ ಪಠ್ಯ ಬಹು ಮುಖ್ಯವಾಗುತ್ತದೆ.

ಸಿರಿ ಬಸಲೂರ ಅರಮನೆ ಇಳಿದು ದೇಶಾಂತರ ಹೋಗುವ ಸಂದರ್ಭ

ಕರ್ಗಿಯವರ ಪಠ್ಯದಲ್ಲಿ ಸಿರಿಯು ತಾನು ದೇಶಾಂತರ ಹೋದರೂ ಸ್ವತಂತ್ರಳಾಗಬೇಕೆಂದು ಬಸಲೂರ ಬೈಲಲ್ಲೆ ಹೋಗುತ್ತಾಳೆ. ತಾನು ಸಾಯುವ ಮೊದಲು ತನ್ನ ಗಂಡ ನೇಗಿಲನ್ನು ಕುತ್ತಿಗೆಯಲ್ಲಿ ನೇತು ಹಾಕಿಕೊಂಡು ಸೊಂಟಕ್ಕೆ ಲಕ್ಕಿಸೊಪ್ಪು ಕಟ್ಟಿಕೊಂಡು ಬೇಡುತ್ತಾ ಬಂದು ತನ್ನ ಕೈಯಿಂದ ಭಿಕ್ಷೆ ಬೇಡುವುದನ್ನು ನೋಡಬೇಕೆಂದು ಶಪಿಸಿ ಹೊರಡುತ್ತಾಳೆ. ಆಗ ಕಾಂತಾಳ್ವ ನೀನು ಹೊತ್ತು ಮುಳುಗುವ ಮೊದಲು ಮಡಿವಾಳರು ಬಟ್ಟೆ ಒಗೆಯುವ ಮಾಪುಕರಿಯ ಎಂಬ ಹೊಳೆ, ಮದನ ಕುದುರು ದಾಟದೇ ಹೋದರೆ ಜುಟ್ಟಿಗೆ ಕೈ ಹಾಕಿ ಎಳೆದು ಕೊಂಡು ಬಂದು ಚಾಕರಿಗೆ ಇಡುವೆನು ಎನ್ನುತ್ತಾನೆ. ಪಂಥ ಸ್ವೀಕರಿಸಿ ಮುಂದೆ ಕಾರ್ಲದ ಬೈಲಲ್ಲೆ ಹೋಗಲು ದೂರದಿಂದ ಕಂಡ ಸೂಳೆ ಸಿದ್ದು ಓಡೋಡಿ ಬಂದು ಮಗುವಿಗೆ ಹಾಲು ಕುಡಿಸಿ, ಹಣ್ಣು ತಿನ್ನಿಸಿ ಎನ್ನುತ್ತಾಳೆ. ಸಿರಿ ನಿರಾಕರಿಸುತ್ತಾಳೆ. ನನ್ನ ಗಂಡನಂಥವನು ನಿಮಗೆ ಆಧಾರ ಎಂದು ಸಿಟ್ಟಲ್ಲಿ ಹೊರಡಲು ನಮಗೆ ಒಂದು ವರ ಪಾಲಿಸಿ ಎಂದು ಬೇಡುತ್ತಾರೆ. ಅವರಿಗೆ 'ಸಾವಿರ ರೋಗ ಸಾವಿರದೊಂದು ತೊಂದರೆ ನಿಮಗಿರಲಿ. ಹತ್ತು ರೋಗ ಸತ್ತಾಗ ಹನ್ನೊಂದನೆಯದು ಆರಂಭವಾಗಲಿ. ನನ್ನ ಎಡಕಾಲಿನ ಕಿರುಬೆರಳಿನ ಉಂಗುರದ ಅಂದ ನಿಮಗಿರಲಿ' ಎಂದು ಹೇಳಿ ಮುಂದೆ ಹೋಗುತ್ತಾಳೆ. ವೀಳ್ಯ ಕೊಯ್ಯುವ ಕ್ರೈಸ್ತ ಹೆಂಗಸು ಸಿರಿ ಹಾಗೂ ಮಗುವನ್ನು ಉಪಚರಿಸುತ್ತಾಳೆ. ಅವಳಿಗೆ ಸಿರಿ ಗುಡ್ಡೆಯ ತುದಿಯಲ್ಲಿ ಕುಳಿತರೂ ಕೇನೆ ಗೆಣಸು ಬಾಳೆ ನೆಟ್ಟಾದರೂ ನಿನ್ನ ಜೀವನ ಸಾಗಿಸು ಎಂಬ ವರ ನೀಡುತ್ತಾಳೆ. ಕ್ರೈಸ್ತ ಹೆಂಗಸಿಗೆ ತನ್ನ ಕಟ್ಟಿದ ತಲೆ ಮಾಸಬಾರದು, ಉಟ್ಟ ಸೀರೆ ಹುಡಿಯಾಗಬಾರದೆಂಬ ವರ ಕೊಡುತ್ತಾಳೆ ಸಿರಿ. ಅಲ್ಲಿಂದ ಸಿರಿ ಮುಣ್ಕೆದೊಟ್ಟು ನಾರಾಯಣ ಬ್ರಾಹ್ಮಣನಲ್ಲಿಗೆ ಬಂದು ಕುಮಾರನ ಹರಕೆಯನ್ನು ಪೂರೈಸುವಂತೆ ಕೇಳಿಕೊಳ್ಳುತ್ತಾಳೆ. ಹೆಣ್ಣೆಂದು ತುಚ್ಛವಾಗಿ ಮಾತನಾಡುತ್ತಾನೆ ಬ್ರಾಹ್ಮಣ.

ತುಳುಪಠ್ಯ

ಕಟ್ಟಂಗಾರೆ ವಾರೊಗು ಕೊಟ್ಟಕೋರ್ಯರ್ ದೊಂಬುಗು ನಟನಲಿಪ್ಪುಗು
ಒಲ್ತು ಬತ್ತಿನ ಸರ್ಕಾರ ಇಜ್ಜಂದೀ ಓ ಸರ್ಕಾರ ಕುದುರೆಲು ನಿಕುಲೂ
ಅಯ್ಯೊಲಿ ಪಯ್ಯೊಲಿದ ಪೊಣ್ಣುಲು ನಿಕುಲೂ
ವಾ ಊರು ದೆತ್ತ್‌ದ್ ವಾ ಊರು ದೆಪ್ಪೆರಪ್ಪಾ ಪೋಪಿನಕುಲು ನಿಕುಲು

ಕನ್ನಡಾನುವಾದ

ಕಡು ಮಂಗಳವಾರ ಸುಡುವ ಬಿಸಿಲು ನಳನಳಿಸುವ ಹೊತ್ತಲ್ಲಿ
ಎಲ್ಲಿಂದ ಬಂದ ಸರ್ಕಾರ ಇಲ್ಲದ (ಅಧೀನ) ಈ ಸರ್ಕಾರಿ ಕುದುರೆಗಳು ನೀವು
ಅಯ್ಯೋಲಿ ಸವಾರಿಯ ಹೆಣ್ಣುಗಳು ನೀವು
ಯಾವ ಊರು ತೆಗೆದು ಯಾವ ಊರು ತೆಗೆಯಲು ಹೋಗುವವರು ನೀವು

(ಪುಟ 208)

ಎನ್ನುತ್ತಾನೆ ಬ್ರಾಹ್ಮಣ. ಇಂದಿಗೆ ಇಲ್ಲಿ ನೀವು ತಡೆಯಿರಿ, ನಾಳೆಯ ಪೂಜೆಗೆ ಬನ್ನಿ ಎನ್ನುತ್ತಾನೆ. ಅಡುಗೆಗೆ ಪಾತ್ರ ಇತ್ಯಾದಿ ನೀಡುವೆನು ಎನ್ನುತ್ತಾನೆ. ಇದರಿಂದ ಅತೀವ ಸಿಟ್ಟುಗೊಳ್ಳುತ್ತಾಳೆ ಸಿರಿ. ಸಿರಿ ಲಂಕೆಲೋಕನಾಡಿಗೆ ತಿರುಗಿ ಬರುತ್ತಾಳೆ. ತಾವರೆಯ ಕೆರೆಯಲ್ಲಿ ಮಿಂದು ಮಡಿಯುಟ್ಟು ದೇವರ ಗರ್ಭಗುಡಿಯ ಎದುರು ಬಂದು ನಾನು ಅಜ್ಜನವರ ಸತ್ಯದಲ್ಲಿ ದೇವರ ವರಪ್ರಸಾದವಾಗಿ ಹುಟ್ಟಿದ ಮಗಳಾದರೆ ಗರ್ಭಗುಡಿಯ ಬಾಗಿಲು ತೆರೆದು ಬರಬೇಕು. ನಂದಿರುವ ನಂದಾದೀಪ ಉರಿದು ಬರಬೇಕು, ಸರ್ವ ಬಿರುದಾವಳಿ, ಸಹಸ್ರ ಮಿನದನ(ಸಂಭ್ರಮ)ಕೇಳಿಬರಬೇಕೆಂದು ಪ್ರಾರ್ಥಿಸಿದಳು. ಹಾಗೇ ಆಯಿತು. ಇದನ್ನು ಕೇಳಿದ ಬ್ರಾಹ್ಮಣ ಊಟಕ್ಕೆ ಕುಳಿತಲ್ಲಿಂದ ಎದ್ದು ಓಡಿಬಂದು ಸಿರಿಗೆ ಅಡ್ಡ ಬೀಳುತ್ತಾನೆ. ತಪ್ಪಾಯಿತೆಂದು ಕೈಮುಗಿಯುತ್ತಾನೆ. ನಿಮಗೆ ನನ್ನ ಅಜ್ಜನವರು ಎಷ್ಟು ಉತ್ತಾರ ಉಂಬಳಿ ಬಿಟ್ಟಿದ್ದಾರೆ ಎಂದು ಕೇಳಲು ಒಂದು ಸಾವಿರ ಮುಡಿ ಅಕ್ಕಿ ಹಾಗೂ ಒಂದು ಸಾವಿರ ತೆಂಗಿನಕಾಯಿ ಎನ್ನುತ್ತಾನೆ ಬ್ರಾಹ್ಮಣ. ಇಂದಿನಿಂದ ನಿಮಗೆ ಹನ್ನೆರಡು ಮುಡಿ ಅಕ್ಕಿಯ ಉಂಬಳಿ. ಇನ್ನು ಮುಂದಕ್ಕೆ ನನ್ನಂಥ ಹೆಣ್ಣುಮಕ್ಕಳು ಬಂದರೆ ಹಣ್ಣುಕಾಯಿ ಮಾಡಿಸಿ ಗಂಧ ಪ್ರಸಾದ ನೀಡಿ ಎನ್ನುತ್ತಾಳೆ. ಬ್ರಾಹ್ಮಣನನ್ನು ಗುಡಿಯ ಒಳಗೆ ಕಳುಹಿಸಿ ತನ್ನ ಅಜ್ಜನವರ ಕಾಲದ ಬಂಗಾರದ ಹರಿವಾಣದಲ್ಲಿ ಬಂಗಾರದ ಮಗು, ಬೆಳ್ಳಿಯ ತೊಟ್ಟಿಲು, ಹಿಡಿ ಹಣ, ದಂಡು ಕುಂಬಳ ಮಗುವಿನ ಕೈಯಲ್ಲೇ ಹರಕೆ ಹಾಕಿಸಿ ಗಂಧಪ್ರಸಾದ ಹಿಡಿಯುತ್ತಾಳೆ ಸಿರಿ. ಬಡಗಣ ಲಂಕೆಲೋಕನಾಡು ಇಳಿದರು ಸಿರಿ. ಅಲ್ಲಿಂದ ಮಡಿವಾಳರ ಮಾಪುಕರಿಯ ಹೊಳೆ, ಮದನಕುದ್ರುವಿಗೆ ಬಂದಾಗ ಹೊಳೆಯಲ್ಲಿ ಪ್ರವಾಹವಿದೆ. ಸಿರಿ ದೋಣಿಯ ಕುಂಞನಲ್ಲಿ ದೋಣಿಯಲ್ಲಿ ಆ ಕಡೆಗೆ ದಾಟಿಸುವಂತೆ ಕೇಳಿದಾಗ ಆತನೂ ಮೋಸದಿಂದ ದೋಣಿ ಬಿಡಲು

ಸಾಧ್ಯವಿಲ್ಲ ಎನ್ನುತ್ತಾನೆ. ಆತನನ್ನೂ ಶಪಿಸಿ ತಾನೇ ಬಾಳೆಎಲೆಯಲ್ಲಿ ಕುಳಿತು ತನ್ನ ಮಹಿಮಾ ಶಕ್ತಿಯಿಂದ ಹೊಳೆ ದಾಟಿ ಕಾಂತು ಪೂಂಜನಿಗೆ ನೀಡಿದ ಪಂಥವನ್ನು ಗೆಲ್ಲುತ್ತಾಳೆ.

ಹೊಳೆದಾಟಿ ಮಗುವನ್ನೆತ್ತಿಕೊಂಡು ಕೋಟಿ ಪೂಂಜರ ಬೈಲಲ್ಲೆ ಸಿರಿ ಬರಲು ಕೋಟಿ ಪೂಂಜರ ತಂಗಿ ದಾರಮು ಮರ್ದೆದಿ ಸಿರಿಯನ್ನು ಬಹಳ ಆದರದಿಂದ ಉಪಚರಿಸುತ್ತಾಳೆ. ಆ ದಿನ ತಡೆಯಲು ಅವಕಾಶ ಕೇಳಲು ದಾರಮು ಮರ್ದೆದಿ ನನಗೊಬ್ಬ ಮಗನಿದ್ದಾನೆ. ಮನುಷ್ಯರನ್ನು ತಿನ್ನುವ ರಕ್ಕಸ, ಹೆಣ್ಣುಮರುಳ. ಆತ ಬರುವ ಮೊದಲೇ ನೀವು ಹೊರಡಿ ಎನ್ನುತ್ತಾಳೆ. ಹಾಗೆ ಇವರು ಹೊರಟು ಹೋಗಲು ಈತ ಮನೆಗೆ ಬಂದು ಹೆಣ್ಣ ಮೂರಿ, ಗಂಡಿನ ಮೂರಿ ಬರುತ್ತದೆ. ಯಾರು ಬಂದಿದ್ದಾರೆ ಎಂದು ವಿಚಾರಿಸಿ ಸಿರಿ ಬಂದ ವಿಚಾರ ತಿಳಿದು ಅವಳನ್ನು ಹಿಂಬಾಲಿಸಿ ಏಳೂವರೆ ಗಾವುದ ಓಡಿ ಬರುತ್ತಾನೆ. ಇವನನ್ನು ನೋಡಿದ ಸಿರಿ ಮೂರು ಕಲ್ಲುಗಳನ್ನು ಹೆಕ್ಕಿ ಒಂದನ್ನು ಎಸೆದು ಏಳೂವರೆ ಗಾವುದ ಹಿಂದೆ ಹೋಗುವಂತೆಯೂ, ಇನ್ನೊಂದನ್ನು ಎಸೆದು ಮಾಯದಲ್ಲಿ ಬಂದರೆ ಮಯೇಸ್ವರ ಕುಮಾರ, ಕ್ಷೇಮದಲ್ಲಿ ಬಂದರೆ ಕ್ಷೇಮಕಲ್ಲ ಪಂಜುರ್ಲಿ ಆಗುವಂತೆಯೂ, ಮೂರನೇ ಕಲ್ಲನ್ನು ಎಸೆದು ವೀರದಲ್ಲಿ ಬಂದರೆ ಈರಭದ್ರ ಕುಮಾರ ಆಗುವಂತೆಯೂ ಶಪಿಸುತ್ತಾಳೆ. ಕೋಟಿ ಪೂಂಜರ ತಂಗಿ ದಾರಮು ಮರ್ದೆದಿ ಉಪಚರಿಸಿದ್ದಕ್ಕೆ ಕೊಂತ್ಯಮ್ಮ ದೇವಿ ಆಗುವಂತೆ ವರಕೊಟ್ಟು ಬೋಳದ ಕಾಡಿಗೆ ಹೋಗುತ್ತಾಳೆ.

ಗೋಪಾಲ ನಾಯ್ಕರ ಪಠ್ಯದಲ್ಲಿ ಬಸಲೂರ ಕಾಂತುಪೂಂಜನಿಗೆ ವಿಚ್ಛೇದನ ಹೇಳಿ ಸಿರಿ ದೇಶ ಬಿಟ್ಟು ದೇಶಾಂತರ ಹೋಗುವ, ನಾವು ಶ್ರೀಮಂತರ ಅಂಗಳ ಗುಡಿಸಿಯಾದರೂ ಜೀವನ ಸಾಗಿಸುವ, ಅದಕ್ಕಿಂತ ಮೊದಲು ಅಜ್ಜನವರು ಕುಮಾರನ ಹೆರಿಗೆಯ ಸಂದರ್ಭ ಲಂಕೆಲೋಕನಾಡಿಗೆ ಹೇಳಿರುವ ಹರಕೆ ಸಲ್ಲಿಸುವ ಎಂದು ದಾರುವಿಗೆ ಹೇಳಿ ಹೊರಡುತ್ತಾರೆ. ಹೀಗೆ ಪೂವರಿ ಪೇಟೆಯಲ್ಲೆ ಸಾಗುವಾಗ ಕೊಂತ್ಯಮ್ಮ ಹೆಂಗಸು ಇವರನ್ನು ನೋಡಿ ಅಜ್ಜನವರ ಮೊಮ್ಮಗಳು ಈ ಬಿಸಿಲಲ್ಲಿ ಮಗುವನ್ನೆತ್ತಿಕೊಂಡು ಹೋಗುತ್ತಿದ್ದಾಳೆ. ಅವಳನ್ನು ನನ್ನ ಅರಮನೆಗೆ ಕರೆಯಬೇಕೆಂದು ತನ್ನ ಅಕ್ಕನಂತೆ ಭಾವಿಸಿ ಕರೆಯುತ್ತಾಳೆ. ಮಗುವಿಗೆ ಕುಡಿಯಲು ಹಾಲು, ಸಿರಿ ದಾರುವಿಗೆ ತಿನ್ನಲು ಹಣ್ಣು ಕೊಟ್ಟು ಉಪಚರಿಸಿ ಬಿಸಿಲ ಧಗೆ ಕಡಿಮೆಯಾದಾಗ ಹೊರಟು ಮೂರು ಹೊಳೆ ಸೇರುವ ಮುಕ್ಕಡಾಪು ಜಾಗಕ್ಕೆ ಬರುತ್ತಾರೆ. ದೋಣಿಯ ಕುಂಞನಲ್ಲಿ ಹೊಳೆ ದಾಟಿಸಲು ಕೇಳಿಕೊಂಡಾಗ ಆತ ಇಂದಾಗದು. ನಾಳೆ ಬನ್ನಿ ಎನ್ನುತ್ತಾನೆ. ಸಿರಿ ತನ್ನ ಸತ್ಯದಿಂದ ಬಾಳೆ ಎಲೆಯಲ್ಲಿ ಮಗುವನ್ನಿಟ್ಟು ಹೊಳೆಯ ಆಚೆ ಬದಿಗೆ ದಾಟಿಸಿ ತಾನು ತನ್ನ ಸತ್ಯದಿಂದ ಹೊಳೆಯ ಮೇಲಿನ ನೀರು ಮೇಲೆ, ಕೆಳಗಿನ ನೀರು ಕೆಳಗಾಗುವಂತೆ ಮಾಡಿ ನಡುವಿನ ಹೆದ್ದಾರಿ ಮಾರ್ಗದಲ್ಲಿ ನಡೆದು ಹೊಳೆಯ ಮಧ್ಯಕ್ಕೆ ಬರುವಾಗ ಪೂವರಿ ಪೇಟೆಯ ಕೊಂತಿ ಹೆಂಗಸಿನ ಮಗ ಈರಭದ್ರ ಸಿರಿ ಮಗುವಿನೊಂದಿಗೆ

ಬಂದ ವಿಚಾರವನ್ನು ತಾಯಿಯಿಂದ ತಿಳಿದುಕೊಂಡು ಓಡೋಡಿ ಮುಕ್ಕಡಾಪು ಮೂಜಿ ಕರಿಯ ಹೊಳೆಯ ಹತ್ತಿರ ಬರುವಾಗ ಸಿರಿ ಹೊಳೆ ದಾಟುವುದನ್ನು ನೋಡುತ್ತಾನೆ. ಎಲ್ಲಿಗೆ ಮುಂದೆ ಹೊಗುತ್ತಿ ಸಿರಿ ನಿಲ್ಲು ಎಂದು ಹಿಂಬಾಲಿಸಿ ಓಡಿ ಬಂದು ಸಿರಿಯ ಸೆರಗಿಗೆ ಕೈಹಾಕಲು ಯತ್ನಿಸಿದ ಈರಭದ್ರನನ್ನು ಸಿರಿ ಹೊಳೆಯಲ್ಲಿಯೇ 'ಪರಿಪ್ಪ ನಿರ್‌ಡ್ ಒಯಿಪ್ಪ ಕಲ್ಲ್ ಮಲ್ತ್ ಬುಡಿಯೆರ್' (ಹರಿಯುವ ನೀರಿನಲ್ಲಿ ಹಾಸುಗಲ್ಲು ಮಾಡಿಬಿಟ್ಟರು). ಇದರಿಂದ ಬೇಸರಿಸಿಕೊಂಡ ಕೊಂತಿ ಹೆಂಗಸು ಸಿರಿಯಲ್ಲಿ ನನಗೂ ಒಬ್ಬ ಕುಮಾರ, ನಿನಗೂ ಒಬ್ಬ ಕುಮಾರ. ನನ್ನ ಮಗನನ್ನು ಸಾವಿರಾರು ಜನ ಆತನ ಎದೆಯಲ್ಲಿ ಕುಳಿತು ಬಟ್ಟೆ ಒಗೆಯುವಂತೆ ಕಲ್ಲು ಮಾಡಿದೆ. ಆತನಿಗೊಂದು ಪ್ರಾಯಶ್ಚಿತ್ತ ಮಾಡಿಬಿಡು ಎಂದು ಬೇಡಿಕೊಳ್ಳುತ್ತಾಳೆ. ಕೊಂತಿ ತನ್ನನ್ನು ಉಪಚರಿಸಿದ್ದಕ್ಕಾಗಿ ಸಿರಿ ಆಕೆಯ ಮಗನನ್ನು ತನ್ನ ಕುಮಾರನ ಸಹಾಯಕ ಬಂಟನಾಗಿರುವಂತೆ ವರ ಕೊಡುತ್ತಾಳೆ.

ತುಳುಪಠ್ಯ

ಎನ್ನ ಬಾಲೆದ ಬಲತ್ತ ಬಾಗೊದ ಬಂಟೆ ಆದ್ ಬರ್ಯೆರೆಗ್
ಸೇಮೊಡು ಬನ್ನಗ ಸೇಮುಕಲ್ಲ ಪಂಜುರ್ಲಿಯಾದ್
ಎನ್ನ ಬಾಲೆದ ಬಲತ್ತ ಬಾಗೊಡು ಬಂಟೆ ಆದ್ ಉಪ್ಪಡ್
ಮಾಯೊಡು ಬನ್ನಗ ಎನ್ನ ಬಾಲೆದ ಬಲತ್ತ ಬಲಬಾಗೊದ
ಬಂಟೆ ಆದ್ ಮಯಿಸಲ್ಲ ಕುಮಾರೆ ಆದ್ ಇಪ್ಪಡ್‌ಂದ್ ಪಂಡೆರ್
ನಾಲ್‌ಕಾರ ಓ ನಂದಿಗೋಣೆ ಓ ಪಿರಿಸಾಪ ಕೊರ್ಯೆರ್
ಸತ್ಯಮಲೋಕಂದ ಸಿರಿ ತಾನ್

ಕನ್ನಡಾನುವಾದ

ನನ್ನ ಮಗುವಿನ ಬಲಭಾಗದ ಬಂಟನಾಗಿ ಬರಲು
ಕ್ಷೇಮದಲ್ಲಿ ಬಂದರೆ ಕ್ಷೇಮಕಲ್ಲ ಪಂಜುರ್ಲಿಯಾಗಿ
ನನ್ನ ಮಗುವಿನ ಬಲಭಾಗದಲ್ಲಿ ಬಂಟನಾಗಿರಲಿ
ಮಾಯದಲ್ಲಿ ಬರುವಾಗ ನನ್ನ ಮಗುವಿನ ಬಲದ ಬಲಬಾಗದಲ್ಲಿ
ಬಂಟನಾಗಿ ಮಯಿಸಲ್ಲ ಕುಮಾರನಾಗಿರಲೆಂದು ಹೇಳಿದರು
ನಾಲ್ಕು ಕಾಲಿನ ಓ ನಂದಿಗೋಣ ಎಂದು ಬಿಡುಗಡೆಯ ಶಾಪ ಕೊಟ್ಟರು
ಸತ್ಯಮಲೋಕಂದ ಸಿರಿ ತಾನು (ಪುಟ 294– 296).

ಅಲ್ಲಿಂದ ಸಿರಿ ನೇರವಾಗಿ ಮಗುವಿನ ಹರಕೆ ಹಿಡಿದುಕೊಂಡು ಲಂಕೆಲೋಕನಾಡಿಗೆ ಹೋಗುತ್ತಾಳೆ. ಅಲ್ಲಿ ಆಗತಾನೇ ಪೂಜೆ ಮುಗಿಸಿಕೊಂಡು ಬಂದ ಅಂಬಡೊಟ್ಟು ನಾರಾಯಣ ಭಟ್ಟರು ಕಾಣ ಸಿಗುತ್ತಾರೆ. ಸಿರಿ ಅವರಲ್ಲಿ ಹರಕೆಯ ಬಗೆಗೆ ವಿಚಾರಿಸಲು

ಇಂದಿನ ಪೂಜೆ ಆಯಿತು, ನಾಳೆ ಬನ್ನಿ ಎಂದಷ್ಟೇ ಹೇಳುತ್ತಾರೆ. ಸಿರಿಯನ್ನು ತುಚ್ಛವಾಗಿ ಮಾತನಾಡುವ ವಿವರಗಳು ಈ ಪಠ್ಯದಲ್ಲಿ ಇಲ್ಲ. ಉಳಿದಂತೆ ಮೇಲಿನ ಪಠ್ಯಗಳಲ್ಲಿರುವಂತೆ ಸಿರಿ ತಾನೇ ಮಗುವಿನ ಹರಕೆ ಸಲ್ಲಿಸುವ ವಿವರಗಳಿವೆ. ಅಂಬಡೊಟ್ಟು ಬ್ರಾಹ್ಮಣ ಓಡೋಡಿ ಬಂದು ಸಿರಿಯ ಕಾಲಿಗೆರಗಿ ಕ್ಷಮೆ ಯಾಚಿಸುತ್ತಾನೆ. ಸಿರಿ ಬ್ರಾಹ್ಮಣನಿಗೆ ದೇವರ ಹೂ ಅರ್ಚನೆ ಮಾಡಿಕೊಂಡಿರಿ, ಐವತ್ತು ದೈವಗಳ ಪಂಚಪರ್ವ ಮಾಡಿಕೊಂಡಿರಿ, ನಿತ್ಯ ಪಡಿ (ಸಂಭಾವನೆ) ನಿಮಗೆ ತಪ್ಪದಿರಲಿ ಎಂದು ಬಿಡುಗಡೆಯ ಶಾಪ ನೀಡುತ್ತಾಳೆ.

ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಪಠ್ಯದಲ್ಲಿ ಮುಕ್ಕಡಾಪು ಮೂಜಿಕರಿಯ ದಾಟುವ ವಿವರಗಳು, ದೋಣಿಯ ಕುಂಞನಿಗೆ ಕೊಡುವ ಶಾಪ ಇತ್ಯಾದಿಗಳಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ. ಇಲ್ಲಿನ ಒಂದು ವ್ಯತ್ಯಾಸವೆಂದರೆ ಸಿರಿ ಹೊಳೆ ದಾಟುವ ಸಂದರ್ಭ ಸಿರಿಯ ಕುಟುಂಬ ಸಂತಾನದವ ಸಂಬಂಧದಲ್ಲಿ ಸಿರಿಯ ಮಾವನ ಮಗ ಮೈದುನನಾಗುವವ ಕೆಳಗಿನ ಹೊಳೆಯಲ್ಲಿ ಸಿರಿಯ ಮುಂಗೈಯ ಅಂದ ನೋಡಿ ಓಡೋಡಿ ಬಂದು ನಿಲ್ಲು ಸಿರಿ ನಿಲ್ಲು. ನೀನೇ ನನ್ನ ಮದುಮಗಳೆಂದು ಓಡೋಡಿ ಬರುತ್ತಾನೆ. ನನಗೆ ಮಾವನ ಮಕ್ಕಳು ತುಂಬ ಜನ ಇದ್ದಾರೆ. ನನ್ನ ಮುಂಗೈಯ ಅಂದ ನೋಡಿ ಹುಚ್ಚುಕಟ್ಟಿ ಓಡಿ ಬಂದಿದ್ದಿಯಲ್ಲ ಎಂದು ಸಿರಿ ಒಂದು ಕಲ್ಲು ಎಸೆದು ಇದೇ ಹೊಳೆಯಲ್ಲಿ ಕ್ಷೇಮಕಲ್ಲ ಪಂಜುರ್ಲಿಯಾಗು ಎಂದು ಶಪಿಸಿ ಕಲ್ಲು ಮಾಡುತ್ತಾಳೆ.

ಶ್ಯಾಮರಾಯಶೆಟ್ಟಿಯವರ ಕಾವ್ಯದಲ್ಲಿ ಸಿರಿ ಬಸಲೂರ ಅರಮನೆ ಇಳಿದು ಕಾಂತುಪೂಂಜನ ಜೊತೆ ರಾತ್ರಿಯಾಗುವ ಮೊದಲು ಮಡಿವಾಳ ಮಾಪುಕರಿಯ ಹೊಳೆ ದಾಟಿ ಹೋಗುವೆ ಎನ್ನುವ ಪಂಥವನ್ನು ಸ್ವೀಕರಿಸಿ ಹೋಗುತ್ತಾಳೆ. ದೋಣಿಯ ಕುಂಞ ದೋಣಿ ಬಿಡದೆ ಇವಳಿಗೆ ತೊಂದರೆ ಕೊಡುವ ವಿವರಗಳು, ಸಿರಿಯ ಶಾಪ ಇತರ ಪಠ್ಯಗಳಂತೆ ಇವೆ. ಮುಂದುವರಿದು ಹೋಗುವಾಗ ದಾರಿಯಲ್ಲಿ ಕುಡುಬಿಯರ ಹೆಣ್ಣು, ಬಿರುವರ ಹೆಣ್ಣು, ಬ್ಯಾರಿ ಜನಾಂಗದ ಹೆಣ್ಣು ಸಿರಿಯನ್ನು ಕಂಡು ಪ್ರೀತಿಯಿಂದ ಕಾಣುವ ವಿವರಗಳಿವೆ. ಇವರಿಗೆ ವರವನ್ನಿತ್ತು ತನ್ನನ್ನು ಹೀಯಾಳಿಸಿದವರಿಗೆ ಶಾಪವನ್ನಿತ್ತು ಮುಂದೆ ಹೋಗುತ್ತಾಳೆ. ಮುಂದೆ ಸಿರಿಗೆ ಕೊರೆದ್ ಗುತ್ತಿನ ಹೆಂಗಸರು ಅಪವಾದದ ಮಾತು ಹೇಳುತ್ತಾರೆ. ಇದರಿಂದ ಸಿಟ್ಟಾದ ಸಿರಿ ಅವರಾಗಿಯೇ ಒನಕೆ ಒನಕೆ ತಾಗಿಸಿಕೊಂಡು ಗೆರಸೆಯಲ್ಲಿ ಬಡಿದಾಡಿಕೊಳ್ಳುವಂತೆ ಮಾಡುತ್ತಾಳೆ. ಕೊರೆದುಗುತ್ತಿನ ಗಂಡಸರು ಸಿರಿಯಲ್ಲಿ ಬಂದು ಕ್ಷಮೆಯಾಚಿಸಿ ಹಾಲು ಕುಡಿದು ಹೋಗುವಂತೆ ವಿನಂತಿಸುತ್ತಾರೆ. ಮಗುವಿಗೆ ಹಾಲು ಕುಡಿಸಿ ತಾನು ಎಲೆ ಅಡಿಕೆ ತಿಂದು ನಿಮ್ಮ ಜಾತಿಕುಲ ಯಾವುದೆಂದು ಕೇಳುತ್ತಾಳೆ.

ತುಳುಪಠ್ಯ

ನಿಕ್ಲೆನ ಜಾತಿ ಕುಲೋನಿ ಒವು
ಬರಿಬಂದ್ರ ಒವುಂದು ಕೇನ್ನಗ

ಎಂಕುಲು ಸಾಲಿಯನ್ನ ಬರಿಯೇ
ಅಯ್ಯೋ ಪಾಪೊನೇ ಉಲೋ ದೊಸೊನೇ
ಎನ್ನ ಬಾಲೆಗ್ ಪೇರ್ ಕೊರಿನೆಟಾಂಡ್
ಯಾನ್ ಪೇರ್ ಪರ್ಪುಂಡ ಎನ್ನ ಪಗೆನಾಯನ ಪೇರಾದ್ ಪೋತುವೆ ಪಂಡೆರ್
ಎನ್ನ ಕಂಡನ್ಯ ಬರಿತ್ತಕ್ಲೆಗ್ ರಡ್ಡ್ ಇಪ್ಯರ ಬಲ್ಲಿ ಒಂಜಿ ತಪ್ಯರ ಬಲ್ಲಿ
ಪೇರೆಸಲೆ ನುಂಗ್ಯರ ಬಲ್ಲಿ ....

ಕನ್ನಡಾನುವಾದ
ನಿಮ್ಮ ಜಾತಿಕುಲ ಯಾವುದು
ಬಳಿಬಂದ್ರ(ವಂಶಾವಳಿ) ಯಾವುದೆಂದು ಕೇಳಿದಾಗ
ನಾವು ಸಾಲಿಯನ್ನ ಬಳಿಯವರು
ಅಯ್ಯೋ ಪಾಪವೇ ಎಲಾ ದೋಷವೇ
ನನ್ನ ಮಗುವಿಗೆ ಹಾಲು ಕುಡಿಸಿದ್ದರಲ್ಲಾಯಿತು
ನಾನು ಹಾಲು ಕುಡಿಯುತ್ತಿದ್ದರೆ ನನ್ನ ಹಗೆಯವನ ಹಾಲು ಕುಡಿದಂತೆ ಆಗುತ್ತಿತ್ತು ಎಂದರು
ನನ್ನ ಗಂಡನ ಬಳಿಯವರಿಗೆ ಎರಡು (ದನ) ಇರಬಾರದು ಒಂದು ತಪ್ಪಬಾರದು
ಹಾಲಿನ ಪಾತ್ರೆ ಒಣಗಬಾರದೆಂಬ (ಪುಟ 152)

ವರ ಕೊಟ್ಟು ಮುಂದೆ ಸಾಗುತ್ತಾಳೆ. ಗದ್ದೆಯಲ್ಲಿ ಹೆಸರು, ಹುರುಳಿ, ಎಳ್ಳು, ಉದ್ದಿನ ಧಾನ್ಯ ಕೀಳುವ ಹೆಂಗಸರು ಎದುರಾಗುತ್ತಾರೆ. ನಿಮಗೆ ಕೂಲಿ ಎಷ್ಟು ಕೊಡುತ್ತಾರೆ ಎಂದು ವಿಚಾರಿಸುತ್ತಾಳೆ. ಮಧ್ಯಾಹ್ನದವರೆಗೆ ಕಿತ್ತರೆ ಒಂದು ಪಾವು ಅಕ್ಕಿ, ಸಂಜೆಯವರೆಗಾದರೆ ಎರಡು ಪಾವು ಎನ್ನುತ್ತಾರೆ. ಇನ್ನು ಮುಂದಕ್ಕೆ ಬೆಳಗಿನ ಜಾವ ಮಾತ್ರ ಕೀಳಬೇಕು. ಎರಡು ಪಾವಕ್ಕಿ ಸಂಬಳ ಹಿಡಿಯಬೇಕು. ಅಹಂಕಾರದಲ್ಲಿ ಕೀಳಲು ಹೇಳಿದರೆ ಧಾನ್ಯ ಒಡೆದು ಹೋಗಬೇಕೆಂದು ಕೊರೆದು ಬೈಲಲ್ಲಿ ಶಾಪ ಕೊಡುತ್ತಾಳೆ ಸಿರಿ.

ಅಲ್ಲಿಂದ ಬಿಸಿಲು ಜಾಸ್ತಿಯಾಯಿತು ಎಂದು ಕೊಂಚಮ್ಮ ದೇವಿಯಲ್ಲಿಗೆ ಬರುತ್ತಾರೆ. ಮಗುವಿಗೆ ಹಾಲು, ಸಿರಿ ದಾರುವಿಗೆ ಕುಡಿಯಲು ನೀರು ನೀಡಿ ತನ್ನ ಮಗನ ಹೆಣ್ಣು ಮರುಳುತನದ ಬಗೆಗೆ ತಿಳಿಸಿ ಬೇಗ ಹೊರಡುವಂತೆ ಹೇಳುತ್ತಾಳೆ. ಅವರು ಹಿಂತಿರುಗಿದಾಕ್ಷಣ ಮಗ ರಾಜಬಾರಿ ಕುಮಾರ ಬಂದು ಮನೆಗೆ ಬಂದಿರುವವರ ಕುರಿತು ವಿಚಾರಿಸಲು ತಾಯಿ ಸುಳ್ಳು ಹೇಳುತ್ತಾಳೆ. ಖಡ್ಗ ತೆಗೆದು ತಾಯಿಯ ತಲೆ ಕಡಿಯಲು ಮುಂದಾದ ಮಗನಿಗೆ ಸಿರಿ ಬಂದಿರುವ ವಿಚಾರ ತಿಳಿಸುತ್ತಾಳೆ. ಅವಳನ್ನು ಹಿಂಬಾಲಿಸಿ ಓಡಿ ಹೋಗಲು ತಾಯಿಯೂ ಹಿಂದಿನಿಂದ ಓಡುತ್ತಾಳೆ. ಸಿರಿ ಹೊಳೆ ದಾಟುವ ಕಡಾವಿನಲ್ಲಿ ಸಿರಿಯನ್ನು ತಡೆದು ಸೀರೆಯ ಸೆರಗಿಗೆ ಕೈ ಹಾಕಲು

ಮುಂದಾದವನಿಗೆ ಸೊಂಟದಿಂದ ಕೆಳಗೆ ಕಲ್ಲಾಗುವಂತೆಯೂ ಸೊಂಟದಿಂದ ಮೇಲೆ ಮಾನವ ರೂಪ ಧರಿಸುವಂತೆಯೂ ಸಿರಿ ಶಪಿಸುತ್ತಾಳೆ. ತಾಯಿ ಕೊಂಚಮ್ಮ ದೇವಿ ಬೇಡಿಕೊಂಡಾಗ ಮುಂದಕ್ಕೆ ಕ್ಷೇಮಕಲ್ಲ ಪಂಜುರ್ಲಿಯಾಗುವಂತೆ ಹೇಳುತ್ತಾಳೆ.

ತುಳುಪಠ್ಯ

ಕಲ್ಲರೂಪ ದೆತ್ತ್‌ದ್ ಮಾನ್ಯರೂಪ ಮಲ್ತೆರ್
ಪಂಜಿದ ಒರು ಕೊರ್ಯೆರ್
ಉಲಯಿ ಗುಂಡೊಡು ಬಾಲೆಸಿರಿಮಗೆ ಬಾಮಲ್ಲ ಕುಮಾರೆ
ಪಿದಾಯಿ ಗುಂಡೊಡು ಸೇಮುಕಲ್ಲ ಪಂಜುರ್ಲಿ
ಆದಿ ಆಲಡೆ ಮೂಲ ಸಾನೊಡು ಆದ್ ಬನ್ನಗಾ........

ಕನ್ನಡಾನುವಾದ

ಕಲ್ಲುರೂಪ ತೆಗೆದು ಮಾನವರೂಪ ಮಾಡಿದರು
ಹಂದಿಯ ರೂಪ ಕೊಟ್ಟರು ಒಳಗಿನ ಗುಡಿಯಲ್ಲಿ ಸಿರಿಯ ಮಗ ಬಾಮಲ್ಲ ಕುಮಾರ
ಹೊರಗಿನ ಗುಡಿಯಲ್ಲಿ ಸೇಮುಕಲ್ಲ ಪಂಜುರ್ಲಿ
ಮೂಲಸ್ಥಾನ ಆದಿ ಆಲಡೆಯಲ್ಲಿ ಆಗಿ ಬಾ ಎಂದರು (ಪುಟ 159).

ಮುಂದೆ ಬೋಳದ ಪೇಟೆಯಲ್ಲೆ ಸಾಗುತ್ತಿರಲು ಜಕಣಾಚಾರಿ ಎದುರಾಗಿ ಸಿರಿಯಲ್ಲಿ ಹಿಂದೆ ಒಂದು ಪೆಟ್ಟಿಗೆ ಒಂದು ಅರಮನೆ, ಎರಡು ಪೆಟ್ಟಿಗೆ ಎರಡು ಅರಮನೆ ಆಗುತ್ತಿತ್ತು. ಈಗ ಸಾವಿರ ಪೆಟ್ಟು ಹೊಡೆದರೂ ಒಂದು ಚೆಕ್ಕೆಯೂ ಏಳುವುದಿಲ್ಲ ಏನೆಂದು ಕೇಳುತ್ತಾನೆ. ಆಗ ಸಿರಿ ನಾನು ದಾಡೆ ಕಳೆದ ದೋಡೆ ಹೆಂಗಸು, ತಮೆರಿ ಮೀರಿದ (ರಕ್ಷಕನಿಲ್ಲದ) ಹೆಂಗಸೆಂದು ನನ್ನನ್ನು ಹೀಯಾಳಿಸಿದೆ. ಅನುಭವಿಸು ಎನ್ನಲು ಸಿರಿಯ ಕಾಲಿಗೆರಗಿ ಕ್ಷಮೆ ಯಾಚಿಸುತ್ತಾನೆ. ಸಿರಿ ಈತನಿಗೆ ನೀನು ಮದುವೆ ಆಗುವ ಮೊದಲು ಬ್ರಹ್ಮಚಾರಿ, ಮದುವೆ ಆದ ನಂತರ ಕರ್ಮಾಚಾರಿ ಎಂದು ಹೇಳಿ ಬೋಳದ ದಾರಿ ಹಿಡಿದು ಹೋಗುತ್ತಾಳೆ.

ಅಮೃತರ ಪಠ್ಯದಲ್ಲಿ ಸಿರಿ ಬಸಲೂರಿಂದ ಹೊರಟು ಕೊಂಚಮ್ಮ ದೇವಿಯ ಅರಮನೆಯ ಬಾಗಿಲಲ್ಲೆ ಹೋಗುತ್ತಿರಲು ಕೊಂಚಮ್ಮ ದೇವಿ ಸಿರಿಯನ್ನು ಎಲ್ಲಿಂದ ಬಂದವಳು, ಎಲ್ಲಿಗೆ ಹೋಗುವವಳೆಂದು ವಿಚಾರಿಸುತ್ತಾಳೆ. ಅದಕ್ಕೆ ಸಿರಿ 'ಗಂಡಾಂತರದಲ್ಲಿ ಹುಟ್ಟಿದ ಮಗ ಗುಂಡಾಂತರ(ಸರ್ವನಾಶ) ಮಾಡಿದ'. ನಾನು ಸತ್ಯನಾಪುರದ ಅರಮನೆಯನ್ನೂ, ಬಸಲೂರ ಅರಮನೆಯನ್ನೂ ಸುಟ್ಟುಭಸ್ಮ ಮಾಡಿ ದೇಶ ಬಿಟ್ಟು ದೇಶಾಂತರ ಹೋಗುವವಳು ಎನ್ನುತ್ತಾಳೆ. ಹಾಗೆ ಹೋಗುವವರಾದರೆ ಕುಮಾರನಿಗೆ ಒಂದು ಗಿಂಡೆ ಹಾಲು ಕುಡಿಸಿ ಹೋಗಿ ಎನ್ನುತ್ತಾಳೆ. ಸಿರಿ ಅದಕ್ಕೆ ಆತ ಸತ್ಯದ

ಕುಮಾರ, ಹಾಗೆಲ್ಲ ಹಾಲು ಕುಡಿಯಲಾರ ಎಂದು ಹೇಳಿ ಮಾಪು ಕರಿಯ ಹೊಳೆಯ ಹತ್ತಿರ ಹೋಗುತ್ತಾರೆ. ದೋಣಿಯ ಕುಂಞನಲ್ಲಿ ಹೊಳೆ ದಾಟಿಸಲು ಕೇಳಿದಾಗ ಯಾರು ಹೆಂಗಸೇ, ಈ ನಡು ಮಧ್ಯಾಹ್ನದ ಹೊತ್ತಲ್ಲಿ ನೀವು ಬಿಡಿ. ಎಂತೆಂಥ ಗುತ್ತಿನ ಗಂಡಸರಿಗೇ ದೋಣಿ ಬಿಟ್ಟಿಲ್ಲ ಎನ್ನಲು ದಾರುವಿನ ತಲೆಯಿಂದ ಕುಮಾರನ ತೊಟ್ಟಿಲು ಇಳಿಸಿ ಕುಮಾರ ಹಾಗೂ ದಾರುವನ್ನು ತೊಟ್ಟಿಲಲ್ಲಿ ಕೂರಿಸಿ ಆ ದಡ ಸೇರುವಂತೆ ದೂಡಿ ಬಿಡುತ್ತಾಳೆ. ಸಿರಿ ತನ್ನ ಸತ್ಯದಿಂದ ಹೊಳೆಯ ನೀರು ಆಚೀಚೆ ಆಗಬೇಕೆಂದು ಹೇಳಿ ನಡುವಲ್ಲೆ ದಾಟುತ್ತಾಳೆ. ದೋಣಿಯ ಕುಂಞ ಓಡೋಡಿ ಬಂದು ತಿಳಿಯದೆ ಮಾಡಿದ ತಪ್ಪಿಗೆ ಕ್ಷಮೆ ಯಾಚಿಸುತ್ತಾನೆ. ಸಿರಿ ಆತನಿಗೆ ವರ್ಷದ ಆರು ತಿಂಗಳು ನಿನಗೆ ಹೊಳೆ ದಾಟಿಸುವ ಕೆಲಸ, ಉಳಿದ ಆರು ತಿಂಗಳು ಬೇಸಿಗೆಯಲ್ಲಿ ಅವರಾಗಿಯೇ ದಾಟಬೇಕು. ನಿನಗೆ ಮಳೆಗಾಲದ ಒಂದು ತಿಂಗಳಿಗೆ ಒಂದು ಕಳಸೆ ಅಕ್ಕಿಯ ಹುಟ್ಟುವಳಿ ಎಂದು ವರ ಪಾಲಿಸಿ ಮುಂದೆ ಸಾಗುತ್ತಾಳೆ. ಕೊಂಚಮ್ಮದೇವಿಯ ಮಗ ಸೇಮುಲ್ಲ ಕಟ್ಟೆಯಲ್ಲಿ ನಿತ್ಯ ಹೂ ಅರ್ಚನೆ ಮಾಡುತ್ತಿದ್ದ ಸೇಮುಲ್ಲ ಕುಮಾರ ಸಿರಿಯನ್ನು ನೋಡಿ ತನ್ನ ತಾಯಿಯಲ್ಲಿ ವಿಚಾರಿಸುತ್ತಾನೆ. ಆಕೆ ಸತ್ಯದ ಸಿರಿ, ಸತ್ಯನಾಪುರದರಮನೆ ಹಾಗೂ ಬಸಲೂರ ಅರಮನೆಯನ್ನು ಸುಟ್ಟುಭಸ್ಮ ಮಾಡಿ ದೇಶಾಂತರ ಹೋಗುವವಳು ಎನ್ನಲು ಅವಳ ಸತ್ಯವನ್ನು ನೋಡಬೇಕೆಂದು ಹೊಳೆ ದಾಟಿ ಓಡೋಡಿ ಬರುತ್ತಾನೆ. ಇವನನ್ನು ನೋಡಿದ ಸಿರಿ ಸೇಮುಲ್ಲ ಕುಮಾರ ನನ್ನ ಸತ್ಯ ನೋಡಲು ಬರುವ ನಿನ್ನ ಸತ್ಯ ಎಲ್ಲಿಯವರೆಗೆ ಗೆಲ್ಲುತ್ತದೆ ಎಂದು ನಾನೂ ನೋಡುತ್ತೇನೆ ಎಂದುಹೇಳಿ

ತುಳು ಪಠ್ಯ

ಇನಿವರೆ ಮುಟ್ಟ ಈ ಸೇಮುಲ್ಲ ಕಟ್ಟೆಡ್ ಸೇಮುಲ್ಲ ಕುಮಾರೆ ಆದ್
ನಿಚ್ಚದ ಪೂ ಪೂಜನೆ ಮಲ್ತೊಂದಿತ್ತ ಇನಿಡ್ದ್ ಬುಕ್ಕ
ಈ ಸೇಮುಲ್ಲ ಕಟ್ಟೆಡ್ ಸೇಮುಲ್ಲ ಪಂಜುರ್ಲಿಯಾದ್ ನಿರೆವುಲ
ವೊರ್ಸೊದ ಬಲಿಬೋಗೊ ದೆತ್ತೊಂದಿಪ್ಪುಲ
ಎನ್ನ ಜಯವುಲ್ಲ ದೇವೆರ್ ಬೆರ್ಮೆರ್ ಉಲ್ಲಾಯ ಉಲ್ಲಾಕುಲು ಉಲ್ಲೆರ್ಂದಾಂಡ
ನಿನ್ನ ಬಾಯಿಗ್ ಬೀಗೊ ಪಾಡುವೆರ್ ಇನಿ ಬಾಯಿ ಜತ್ತಿನನೇ ಜತ್ತಿನ
ಇನಿಡ್ದ್ ಬೊಕ್ಕ ನಿಕ್ಕ್ ಬಾಯಿ ಬರಂದೆ ಪೊಟ್ಟ ಬೂತಂದ್ ನಿರೆಲಂದ್ ವರ ಕೊರ್ಯೆರ್

ಕನ್ನಡಾನುವಾದ

ಇಂದಿನವರೆಗೆ ನೀನು ಸೇಮುಲ್ಲ ಕಟ್ಟೆಯಲ್ಲಿ ಸೇಮುಲ್ಲ ಕುಮಾರ ಆಗಿ
ನಿತ್ಯದ ಪೂಜೆ ಮಾಡುತ್ತಿದ್ದೆ ಇಂದಿನಿಂದ
ನೀನು ಸೇಮುಲ್ಲ ಕಟ್ಟೆಯಲ್ಲಿ ಸೇಮುಲ್ಲ ಪಂಜುರ್ಲಿಯಾಗಿ ಬಾಳು
ವರ್ಷಾವಧಿ ಬಲಿಬೋಗ ತೆಗೆದುಕೊಂಡಿರು

ನನ್ನ ಜಯವುಲ್ಲ ದೇವರು ಬೆರ್ಮೆರ್ ಉಳ್ಳಾಯ ಉಳ್ಳಾಕುಲು ಇದ್ದಾರೆ ಹೌದಾದರೆ ನಿನ್ನ ಬಾಯಿಗೆ ಬೀಗ ಹಾಕಿಯಾರು, ನೀನು ಇಂದು ಬಾಯಿ ತೆಗೆದದ್ದೇ ಬಂತು ಮುಂದಕ್ಕೆ ನಿನಗೆ ಬಾಯಿಬಾರದೆ ಪೊಟ್ಟಭೂತವಾಗಿ ಬಾಳು ಎಂದು ವರ ಕೊಟ್ಟರು (ಪುಟ 186).

ಅಂದಿನಿಂದ ಬಾಯಿಬಾರದೆ ಕೈಸನ್ನೆ ಮಾಡುತ್ತಿದ್ದಾನೆ.

ಸಿರಿ ಮುಂದುವರಿದು ಹೋಗುತ್ತಿರಲು ತನ್ನ ಜಾತಿಯ ಹೆಂಗಸರು ಕರೆದು ಮಾತನಾಡಿಸುತ್ತಾರೆ. ಅವರಿಗೆ ತನ್ನ ಸೀರೆ ನೆರಿಗೆಯ ಅಂದವಿರಲಿ ಎಂಬ ವರ ಕೊಟ್ಟಳು. ಮಲೆಯಾಳಿ ಬಿರುವರ ಹೆಣ್ಣುಗಳಿಗೆ ತನ್ನ ತಲೆ ಸೂಡಿಯ ಅಂದವಿರಲಿ, ಬ್ರಾಹ್ಮಣ ಹೆಣ್ಣುಗಳಿಗೆ ನಾನು ಮುಡಿದ ಜೇವು ಕೇದಗೆ ಹೂವಿನ ಅಂದವಿರಲಿ, ಆಚಾರಿ ಹೆಣ್ಣುಗಳಿಗೆ ತನ್ನ ಕುಂಕುಮ ಬೊಟ್ಟಿನ ಅಂದವಿರಲಿ, ಸಮಗಾರ ಹೆಂಗಸರಿಗೆ ತನ್ನ ಕಾಲುಂಗುರದ ಅಂದ, ಕುಡುಬಿ ಹೆಣ್ಣಿಗೆ ತನ್ನ ಚೆಂಡು ಮಲ್ಲಿಗೆಯ ಅಂದ, ಸೆಟ್ಟಿ ಹೆಣ್ಣುಗಳಿಗೆ ನಿಮ್ಮ ಜಾತಿ ಮಕ್ಕಳು ನೂಲಿಗೆ ಏಲೆ ಹಾಕಿಕೊಂಡಿರಲಿ, ಬೈಲಬಾಕುಡರು, ಮುಂಡಾಲರು ಓಡೋಡುತ್ತಾ ಬರುತ್ತಾರೆ. ಅವರಿಗೆ ನೀವು ವರ್ಷಕ್ಕೊಮ್ಮೆ ನಂದಿಗೋಣನ ಕಣಜ ತುಂಬಿಸುತ್ತಾ ಇರಿ, ದೇವರು ಬೆರ್ಮೆರ್ ಅವರ ಸೇವೆ ಮಾಡುತ್ತಿರಿ, ಬೈರರ ಹೆಣ್ಣು ಮಕ್ಕಳಿಗೆ ತನ್ನ ಮೂಗುತ್ತಿಯ ಅಂದವಿರಲಿ ಎಂಬುದಾಗಿ ವರವನ್ನು ನೀಡುತ್ತಾರೆ. ಹೀಗೆ ಮುಂದುವರಿದು ಹೋಗಿ ಅಬ್ಬಂದಡ್ಕ ಬೋಲದ ಪದವಿಗೆ ಹೋಗುತ್ತಾರೆ.

ರಾಮಕ್ಕ ಅವರ ಪಠ್ಯದಲ್ಲಿಯೂ ಹೆಚ್ಚುಕಮ್ಮಿ ಇಂತದ್ದೇ ವಿವರಗಳು ದೊರೆಯುತ್ತವೆ. ಎಲ್ಲ ಪಠ್ಯಗಳಲ್ಲಿ ಮಡಿವಾಳರ ಮಾಪುಕರಿಯ ಹೊಳೆ ದಾಟುವ ವಿವರಗಳಿದ್ದರೆ ರಾಮಕ್ಕ ಅವರ ಪಠ್ಯದಲ್ಲಿ ಪಾಂಗಾಳ ಹೊಳೆ ದಾಟಿದರು ಎಂದಿದೆ. ಹೊಳೆದಾಟಿ ಮುಂದೆ ಹೋಗುವಾಗ ಬಿರುವರ ಹೆಣ್ಣು ಕಳ್ಳು ಹೊತ್ತುಕೊಂಡು ಬರುತ್ತಿರುತ್ತಾಳೆ. ನನಗೊಂದು ವರ ಕೊಡಿ ಎಂದು ಸಿರಿಯನ್ನು ಕೇಳಿದಾಗ ಈವರೆಗೆ ಕಳ್ಳನ್ನು ಹೊತ್ತು ಮಾರುತ್ತಿದ್ದೆ, ಇನ್ನು ಮುಂದಕ್ಕೆ ಕುಳಿತು ಮಾರು ಎಂಬ ವರ ನೀಡುತ್ತಾಳೆ. ಹೂ ಮಾರುವ ಹೆಣ್ಣು ಸಿರಿಗೆ ಹೂ ಮುಡಿಸುತ್ತಾಳೆ. ಅವಳಿಗೆ ಗುಡ್ಡೆ ಪರ್ವತಗಳಲ್ಲಿ ಕುಳಿತರೂ ಉಪ್ಪು ಅನ್ನಕ್ಕೆ ಕೊರತೆ ಬಾರದಿರಲಿ ಎಂಬ ವರ ನೀಡುತ್ತಾಳೆ. ಮುಂದೆ ಸಾಗುವಾಗ ಮನ್ಸ ಜನಾಂಗದ ಹೆಣ್ಣು ಸಿಗುತ್ತಾಳೆ. ಸಿರಿಗೆ ಒಂದು ಸೌತೆಕಾಯಿ ಕೊಟ್ಟು ಒಡಲು ತಂಪುಮಾಡಿಕೊಳ್ಳಿ ಎನ್ನುತ್ತಾಳೆ. ಆಕೆಗೆ ತನ್ನ ಮೊಲೆಯ ಎಳ್ಳಿನ ಏಳು ಭಾಗದಷ್ಟು ಅಂದ ಇರಲಿ, ಜೈನರ ಹೆಣ್ಣು ಸಿಗುತ್ತಾಳೆ. ಅವಳಿಗೆ ನಿನ್ನ ಮನೆಯಲ್ಲಿ ಮಜ್ಜಿಗೆಯ ಮಡಕೆ ತಪ್ಪದಿರಲಿ, ಆಚಾರಿ ಹೆಣ್ಣಿಗೆ ನಿನ್ನ ಹಣೆಯಲ್ಲಿ ಮುತ್ತೈದೆತನ ತಪ್ಪದೇ ಇರಲಿ, ಸಮಗಾರ್ದಿ ಹೆಣ್ಣಿಗೆ ತನ್ನ ತಲೆಯ ಜುಟ್ಟಿನ ಎಳ್ಳಿನ ಏಳುಭಾಗದ ಅಂದ ಇರಲಿ, ನಲಿಕೆ ಜನಾಂಗದವರ ಹೆಣ್ಣಿಗೆ ನಿನಗೆ ಆರು ತಿಂಗಳ ಬೇಸಿಗೆಯಲ್ಲಿ ದೈವದ ದರ್ಶನ ಇರಲಿ, ಮಡಿಕೆ ಹೊತ್ತುಕೊಂಡು ಹೋಗುವವ ಎದುರಿಗೆ ಸಿಗುತ್ತಾನೆ. ಆತನಲ್ಲಿ

ಮಗುವಿಗೆ ಅನ್ನ ಅರೆದು ಕೊಡುವ ಮಡಿಕೆ ಒಂದು ಕೊಡಬಹುದೇ ಎಂದು ಕೇಳುತ್ತಾಳೆ. ಆತ ಕೊಡಲಾರೆ. ಅಲ್ಲಿ ಕಾಣಿಸುವ ಮುಳಿಹುಲ್ಲಿನ ಮನೆಯಲ್ಲಿ ಕೊಟ್ಟರೆ ಒಂದು ಸೇರು ಭತ್ತ ಸಿಗುತ್ತದೆ ಎನ್ನುತ್ತಾನೆ. ಅವನಿಗೆ ನಿನ್ನ ಇಡೀ ಕೂಡುಕುಟುಂಬ, ಜಾತಿ ಕುಲಕ್ಕೆ ಬೆಳಿಗ್ಗೆ ತಿನ್ನಲು ಇದ್ದರೆ ಸಂಜೆಗೆ ಇರಬಾರದು. ಒಂದು ಕೋಲು ಇದ್ದರೆ ಐದುಕೋಲು ತಪ್ಪದೇ ಹೋಗಬೇಕೆಂದು ಶಪಿಸುತ್ತಾಳೆ. ಮರಾಠಿಗರ ಹೆಣ್ಣುಗಳು ಸಿಗುತ್ತಾರೆ.ನಿಮ್ಮ ಜಾತಿ ಕುಲಕ್ಕೆ ಸೊಂಟದಿಂದ ಕೆಳಗೆ ತಂಡುಬಟ್ಟೆ (ಒಕ್ಕೊ ಸುತ್ತುದಿಪ್ಪುಲೆ) ಸುತ್ತಿಕೊಂಡಿರಿ, ಗೌಡರ ಹೆಣ್ಣು ಮಕ್ಕಳಿಗೆ ಗದ್ದೆಯಲ್ಲಿ ಒಂದು ಹೊತ್ತು ಧಾನ್ಯ ಕೊಯ್ಯುತ್ತಿರಿ, ಆ ನಂತರವೂ ಕೊಯ್ಯಲು ಮುಂದಾದರೆ ಧಾನ್ಯ ಒಡೆದು ಹೋಗಲಿ, ಆರ್ಧ ಸೇರು ಅಕ್ಕಿಯ ಪಡಿ ನಿಮಗಿರಲಿ, ಮುಂದುವರಿದು ಸಾಗಲು ನಾಲ್ಕು ಜನ ಗೌಡರ ಹೆಂಗಸರು ಒನಕೆಯಲ್ಲಿ ಭತ್ತ ಕುಟ್ಟುತ್ತಿದ್ದವರು ಸಿರಿಯನ್ನು ಕಂಡು ಇವಳು ಓಡಿಬಂದ ಹೆಣ್ಣು ಎಂದು ಹೀಯಾಳಿಸುತ್ತಾರೆ. ಸಿರಿ ಇವರನ್ನು ಕಂಡು ನಿಮ್ಮ ಸೊಂಟದ ಬಟ್ಟೆ ಮೇಲೆ ಕುತ್ತಿಗೆಯವರೆಗೆ ಹಾರಿ ನಿಲ್ಲಲಿ, ಮೇಲೆ ಹೋದ ಒನಕೆ ಮೇಲೆಯೇ ನಿಲ್ಲಲಿ ಎಂದು ಶಪಿಸುತ್ತಾಳೆ. ಪುನಃ ಬೇಡಿಕೊಂಡಾಗ ಮೊದಲಿನಂತಾಗಲಿ ಎನ್ನುತ್ತಾಳೆ.ಅಡಿಕೆ ಹಾಳೆಯ ಟೊಪ್ಪಿ (ಕೊಂಗೋಲು ಮುಟ್ಟಳೆ) ನಿಮ್ಮ ತಲೆಯಲ್ಲಿ ತಪ್ಪದಿರಲಿ, ಸಣ್ಣ ಕತ್ತಿ ಬಗಲಲ್ಲಿ ತಪ್ಪದಿರಲಿ, ಮೊಣಕಾಲಿಂದ ಮೇಲೆ ನಿಮ್ಮ ಹೆಂಗಸರ ಬಟ್ಟೆ ಇರಲಿ ಎಂಬ ವರಶಾಪಗಳನ್ನು ನೀಡುತ್ತಾ ಸಿರಿ ಮುಂದೆ ಸಾಗುತ್ತಾಳೆ.

ಮುಂದುವರಿದು ಸೆಟ್ಟಿಲ್ಲ ಪೇಟೆಯಲ್ಲೆ ಹೋಗುವಾಗ ಕೊಂತ್ಯಮ್ಮ ದೇವಿ ತನ್ನರಮನೆಗೆ ಕರೆಯುತ್ತಾಳೆ. ಇವರನ್ನು ಸತ್ಕರಿಸಿ ಉಪಚರಿಸುತ್ತಾಳೆ. ಆ ದಿನ ತಡೆಯಲು ಬಿಡಾರ ಕೊಡಬಹುದೇ ಎಂದು ಕೇಳಲು, ಕೊಡಲು ಕೊಡಬಹುದು. ಅದರೆ ನನ್ನ ಮಗನೊಬ್ಬನಿದ್ದಾನೆ.

ತುಳುಪಠ್ಯ

ಎನ್ನ ಮಗೆ ಉಲ್ಲೆ ಸಿರಿಲ್ಲ ಪೊನ್ನೆದ ಮುದೆಲ್‌ಡ್ ಪುಟ್ಟಿನಾಯೆ
ಈರಬದ್ರ ಕುಮಾರೆ ಆಯೆ ಪೊಣ್ಣ ಮರ್ಲ್ ಉಂಡಾಯೆಗ್
ಆಯಾಂಡ ಸೆರಂಗ್ ಒಯಿಪ್ಯರ ಬರುವೆ

ಕನ್ನಡಾನುವಾದ

ನನ್ನ ಮಗನೊಬ್ಬನಿದ್ದಾನೆ ಸಿರಿ ಹೊನ್ನೆಯ ಬುಡದಲ್ಲಿ ಹುಟ್ಟಿದವ
ಈರಬದ್ರ ಕುಮಾರ ಆತನಿಗೆ ಹೆಣ್ಣುಮರುಳು ಇದೆ ಅವನಿಗೆ
ಅವನಾದರೋ ಸೆರಗೆಳೆಯಲು ಬಂದಾನು (ಪುಟ 200).

ಆದ ಕಾರಣ ನೀವು ನಿಲ್ಲುವುದು ಸೂಕ್ತವಲ್ಲ ಎನ್ನುತ್ತಾಳೆ. ಕಪಿಲೆ ದನದ ಹಾಲು

ತಂದು ಕುಮಾರನಿಗೆ ಕೊಡುತ್ತಾಳೆ. ಹಾಲು ಕುಡಿದ ಕುಮಾರ ಸ್ಮೃತಿ ಕಳೆದುಕೊಳ್ಳುತ್ತಾನೆ. ಕಪಿಲೆ ದನದ ಹಾಲಲ್ಲಿ ವಿಷ ಬೆರೆಸಿ ನನ್ನ ಮಗನಿಗೆ ಕೊಟ್ಟೆ ಎನ್ನುತ್ತಾಳೆ ಸಿರಿ. ಕುಮಾರ ನಿಗೆ ಸ್ಮೃತಿ ಬರಿಸುತ್ತಾಳೆ. ದಾರುವನ್ನು ಕರೆದು ನಾವಿಲ್ಲಿಂದ ಹೊರಡುವ ಎನ್ನುತ್ತಾಳೆ. ಕೊಂತ್ಯಮ್ಮದೇವಿ ನೀವು ಹೋಗುವುದಿದ್ದರೆ ಎಡಬಲ ದಾರಿಗಳಿಲ್ಲ. ನನ್ನ ಮಗ ಈರಭದ್ರ ಕುಮಾರನ ಕಾಡಲ್ಲಿ ಹೋಗಬೇಕು.'ಆಯೆ ಸಾದಿಕಟ್ಟುವೇ, ತಡಮೆಡ್ ಕುಲ್ಲುವೇ, ಬೆತ್ತಡಿ ಬರುವೇ, ತರೆ ಒಡಿ ಪತ್ಯರೆ ಸೆರಂಗ್ ಒಯಿಪ್ಪೆರೆ ಬರುವೇ' (ಆತ ದಾರಿ ಅಡ್ಡ ಕಟ್ಟಿಯಾನು. ದಾಟು ಬೇಲಿಯ ಮೇಲೆ ಕೂತಾನು. ಹಿಂದಿನಿಂದ ಬಂದು ತಲೆ ಜುಟ್ಟು ಹಿಡಿಯಲು, ಸೆರಗು ಎಳೆಯಲು ಬಂದಾನು) ಎನ್ನುತ್ತಾಳೆ. ಇವರು ಹೊರಟು ಹೋಗುತ್ತಾರೆ. ಅಷ್ಟು ಹೊತ್ತಿಗೆ ಈರಬದ್ರ ಕುಮಾರ ಕೊಂಚಮ್ಮ ದೇವಿ ಅರಮನೆಗೆ ಬರುತ್ತಾನೆ. ಹೆಣ್ಣ ಮೂರಿ ಬರುತ್ತಿದೆ, ಯಾರು ಬಂದಿದ್ದಾರೆ ನಮ್ಮರಮನೆಗೆ ಎಂದು ವಿಚಾರಿಸುತ್ತಾನೆ. ಈರಬದ್ರ ಕುಮಾರನನ್ನು ಇಲ್ಲಿ ರಾಕ್ಷಸನ ರೀತಿಯಲ್ಲಿ ಚಿತ್ರಿಸಲಾಗಿದೆ.

ತುಳುಪಠ್ಯ

ಒಂಜಿ ತಾರಿ ಪೊರ್ತೆಗೆನ ಕಿದ್ಕ್‌ಲಡಿಟ್ಟ್ ದೀವೊಂದು
ನನೊಂಜಿ ತಾರಿ ಪೊರ್ತೊನು ಕೂಲಿ ದೆಕ್ಕೊನು ಪೋಪೆನೇ

ಕನ್ನಡಾನುವಾದ

ಒಂದು ತಾಳೆ ಮರವನ್ನು ಕಿತ್ತು ಕಂಕುಳಡಿಯಯಲ್ಲಿ ಇಟ್ಟುಕೊಂಡು
ಇನ್ನೊಂದನ್ನು ಕಿತ್ತು ಹಲ್ಲು ಉಜ್ಜುತ್ತಾ ಹೋಗುತ್ತಾನೆ (ಪುಟ 203).

ಹೀಗೆ ಹೋಗುತ್ತಿರಲು ಸಿರಿ ಎಲೆ ಅಡಿಕೆ ತಿಂದು ದಾರಿಬದಿಯಲ್ಲಿ ಉಗುಳಿ ಹೋಗುತ್ತಾಳೆ. ಇದನ್ನು ಕಂಡ ಈರಬದ್ರ ಕುಮಾರ 'ಉಬ್ಬಿಯೇ ಈತ್ ಪೊರ್ಲುಜಿ ಇತ್ತ್‌ಂಡ ಪೊಣ್ಣು ಏತ್ ಪೊರ್ಲುಜಿ ಇಪ್ಪಾಯಲ್' (ಸಿರಿ ಉಗುಳಿದ ಎಂಜಲೇ ಇಷ್ಟು ಚಂದವಿರಬೇಕಾದರೆ ಇನ್ನು ಹೆಣ್ಣು ಎಷ್ಟು ಅಂದ ಇದ್ದಾಳು) ಎಂದು ಯೋಚಿಸಿ ಓಡಿ ಬಂದು ಸಿರಿಯ ದಾರಿಗಡ್ಡ ನಿಲ್ಲುತ್ತಾನೆ. ದಾರಿ ಬಿಡು ನಾನು ಹೋಗುತ್ತೇನೆ ಎಂದಳು. ಎಡಬಲದಿಂದ ಸೆರಗು ಎಳೆಯಲು ಬಂದ ಈರಬದ್ರ ಕುಮಾರನಿಗೆ ನೀನು 'ಒಯಿಪ್ಪ ಕಲ್ಲ್ ಪರಪು ನೀರಾದ್ ಇಪ್ಪುಲ' (ಹಾಸುಗಲ್ಲು ಹರಿಯುವ ನೀರಾಗಿರು) ಎಂದು ಶಾಪ ಕೊಡುತ್ತಾಳೆ. ನಾನು ಬೋಳದ ಕಾಡಿಗೆ ಹೋಗುತ್ತೇನೆ. ನನ್ನ ಮಗ ವಜ್ರಮಲಕಂದ ಕುಮಾರನ ಬಲಭಾಗದಲ್ಲಿ ಬಂಟನಾಗಿರಬೇಕು. ಎಂದು ನಾನು ನೆನಪಿಸುತ್ತೇನೋ ಅಂದು ನೀನು ಜೋಗವಾಗಬೇಕು. ಈಗ ಕಲ್ಲಾಗಿರು ಎಂಬ ಶಾಪ ಕೊಡುತ್ತಾಳೆ.

ಲೀಲಾ ಅವರ ಪಠ್ಯದಲ್ಲಿ ಕೆಲವು ಹೊಸ ವಿವರಗಳು ಲಭ್ಯವಾಗುತ್ತವೆ. ದೋಣಿಯ ಕುಂಞನಿಗೆ ಕಾಂತಾಳ್ವ ಒಂದು ಕಳಸೆ ರೂಪಾಯಿ ಲಂಚಕೊಟ್ಟು ಸಿರಿಯನ್ನು ಹೊಳೆ

ದಾಟದಂತೆ ತಡೆಯುತ್ತಾನೆ. ಸಿರಿ ಅಲ್ಲಿಂದ ಕೊಂತ್ಯಮ್ಮ ದೇವಿಯ ಅರಮನೆಗೆ ಬಂದು ಒಂದು ತುಂಡು ಬಾಳೆ ಎಲೆ ಕೊಡುವಂತೆ ಕೇಳುತ್ತಾಳೆ. ಸಿರಿ ಹಾಗೂ ಕುಮಾರನನ್ನು ಉಪಚರಿಸಿದ ಕೊಂತ್ಯಮ್ಮ ದೇವಿ ನೀವೇ ತೋಟಕ್ಕೆ ಹೋಗಿ ತನ್ನಿ ಮತ್ತು ಬೇಗನೆ ಇಲ್ಲಿಂದ ಹೊರಡಿ. ನನ್ನ ಮಗ ಈರಬದ್ರ ಕುಮಾರ ಬಂದರೆ ಆತ ಹೆಣ್ಣು ಮರುಳ, ನಿಮ್ಮನ್ನು ಬಿಡಲಾರ ಎನ್ನುತ್ತಾಳೆ. ಸಿರಿ ಬಾಳೆಎಲೆ ತೆಗೆದುಕೊಂಡು ಹೊರಟು ಹೋಗುತ್ತಾಳೆ. ಅಷ್ಟು ಹೊತ್ತಿಗೆ ಮಗ ಬಂದು ಯಾರು ನಮ್ಮ ಮನೆಗೆ ಬಂದಿದ್ದಾರೆ. ಹೆಣ್ಣಮೂರಿ ಬರುತ್ತದೆ ಎನ್ನುತ್ತಾನೆ. ತಾಯಿ ಸಿರಿ ಬಂದಿರುವ ವಿಚಾರ ತಿಳಿಸಿ ಆಕೆಯ ಸಹವಾಸಕ್ಕೆ ಹೋಗಬೇಡ, ನಿನ್ನನ್ನು ಭಸ್ಮ ಮಾಡಿಯಾಳು ಎನ್ನುತ್ತಾಳೆ. ಆದರೂ ಸಿರಿಯನ್ನು ಹಿಂಬಾಲಿಸಿ ಓಡುತ್ತಾನೆ. ಸಿರಿ ನೆಲದಲ್ಲಿ ಗೆರೆ ಎಳೆದು ಮೂರು ಕಲ್ಲು ಹೆಕ್ಕಿ ಗೆರೆ ದಾಟಿ ಬರಬೇಡ ಎನ್ನುತ್ತಾಳೆ. ಮತ್ತೂ ದಾಟಿ ಬಂದಾಗ ಮಾಬಿಕರಿಯ ಹೊಳೆಯಲ್ಲಿ ಕಲ್ಲಾಗಬೇಕೆಂದು ಶಾಪ ಕೊಡುತ್ತಾಳೆ. ಇದನ್ನು ಕಂಡ ತಾಯಿಗೆ ತುಂಬ ದುಃಖವಾಗುತ್ತದೆ. ನಿಮಗೂ ಒಬ್ಬ ಕುಮಾರ, ನನಗೂ ಒಬ್ಬ ಕುಮಾರ. ಆತನನ್ನು ನೀವು ಕಲ್ಲು ಮಾಡಿದಿರಿ. ಇನ್ನು ನನಗೆ ಯಾರು ಗತಿ? ಎಂದು ದುಃಖಿಸುತ್ತಾಳೆ. ಆಗ ಸಿರಿ

ತುಳುಪಠ್ಯ

ನಿನ್ನ ಮಗನ್ ಕಲ್ಲ್ ಮಲ್ತೆಂಡಲಾ ಎನ್ನ ಮಗನ್ ಮಾಯ ಮಲ್ತ್‌ದ್ ಪಿರ ಆಯಗ್
ಯಾನ್ ಸ್ವತಂತ್ರ ಕೊರ್ನಗ ಆಯೆ ಆದಿ ಆಲಡೆ ಕಟ್ಟಾದ್
ಉಲಯಿ ಸುತ್ತುದ ಸೇವೆ ಆಯಗ್ ಮಲ್ಪುನಗ ಪಿದಯಿ ಸುತ್ತುದ ಸೇವೆ
ನಿನ್ನ ಮಗೆ ಈರಬದ್ರ ಕುಮಾರಗ್ ಎನ್ನ ಮಗಟ್ಟ ಕೊರ್ಪಾವೆ

ಕನ್ನಡಾನುವಾದ

ನಿನ್ನ ಮಗನನ್ನು ಕಲ್ಲು ಮಾಡಿದರೂ ನನ್ನ ಮಗ ಕುಮಾರನನ್ನು ಮಾಯಮಾಡಿ ಮತ್ತೆ ಅವನಿಗೆ
ನಾನು ಸ್ವಾತಂತ್ರ್ಯ ಕೊಡುವಾಗ ಆತ ಆದಿ ಆಲಡೆ ಕಟ್ಟಿಸಿ
ಒಳಗಿನ ಸುತ್ತಿನ ಸೇವೆ ಅವನಿಗಾಗುವಾಗ ಹೊರ ಸುತ್ತಿನ ಸೇವೆ
ನಿನ್ನ ಮಗ ಈರಬದ್ರ ಕುಮಾರನಿಗೆ ನನ್ನ ಮಗನಲ್ಲಿ ಕೊಡಿಸಿಯೇನು

ಎನ್ನುತ್ತಾಳೆ. ಹೀಗಾಗಿ ಈರಬದ್ರ ಕುಮಾರನಿಗೆ ಯಾವುದೇ ಮೂರ್ತಿಶಿಲ್ಪ ಇಲ್ಲ ಎನ್ನುವುದು ಲೀಲಾ ಅವರ ಅಭಿಪ್ರಾಯ. ಈರಬದ್ರ ಕುಮಾರನಿಗೆ ದರ್ಶನ ನಡೆಸುವ ಕ್ರಮವೂ ಕಡಿಮೆ.

ಬಂಗಬಾಳೆಯ ಮೇಲೆ ಕುಮಾರನ ತೊಟ್ಟಿಲು ಇರಿಸಿಹೊಳೆಯ ಆಕಡೆ ದಾಟಿಸಿ ತಾನೂ ತನ್ನ ಮಹಿಮಾಶಕ್ತಿಯಿಂದ ಹೊಳೆ ದಾಟುತ್ತಾಳೆ. ದೋಣಿಯ ಕುಂಞನಿಗೆ

ಸುಳ್ಳು ಕಪಟ ಮಾಡಿದ್ದಕ್ಕೆ ವರ್ಷದ ಆರು ತಿಂಗಳು ಮಾತ್ರ ದಾಟಿಸುವ ಕೆಲಸ ಇರಬೇಕೆಂದು ಶಪಿಸಿ ಮುಂದೆ ಸಾಗುತ್ತಾಳೆ. ಬೋಲದ ಬೈಲಲ್ಲೆ ಹೋಗುತ್ತಿರಲು ಬೋಲದ ಬೈರಿ ಗದ್ದೆಯಲ್ಲಿ ಕಳೆ ತೆಗೆಯುತ್ತಿದ್ದವಳು ಇವರನ್ನು ನೋಡುತ್ತಾಳೆ. ಮನೆಗೆ ಬರಹೇಳಿ ಕುಮಾರನಿಗೆ ಹಾಲು ಕೊಡುತ್ತಾಳೆ. ಸಿರಿ ನಿಮ್ಮ ಜಾತಿ, ಬಳಿ(ವಂಶ) ಯಾವುದೆಂದು ಕೇಳಲು ನಮ್ಮದು ಒಕ್ಕೆತ್ರಿ (ಬಂಟ) ಕಟ್ಟ್, ಪುತ್ರ ಬನ್ನಾಯಬಳಿ (ವಂಶ)ಎನ್ನುತ್ತಾಳೆ. ಸಿರಿ ಬಹುವಾಗಿ ಕೋಪಿಸಿಕೊಂಡು (ಯಾಕೆಂದರೆ ಇದು ಸಿರಿಯ ಗಂಡನ ಬಳಿ) ತನ್ನ ಹಗೆಯ ಬಳಿಯವನ ಹಾಲು ಮಗನಿಗೆ ಕುಡಿಸಿದೆಯಲ್ಲಾ ಎಂದು ಪಶ್ಚಾತ್ತಾಪ ಪಟ್ಟು ಸಿರಿ ಅವರನ್ನು ಶಪಿಸುತ್ತಾಳೆ.

ತುಳುಪಠ್ಯ

ಬೋಲದರಮನೆಡ್ ನಿಕ್ಲೆಗ್ ಪೊಂಜೆನಕ್ಲೆಗ್ ಅಂಟೆಕಾರ್ ದೋಂಟೆ ಕೈ
ಪರಪ್ಪಟ್ ಬಂಜಿ, ಕೊಂಡೆ ಕೆಬಿ, ನಂಡ್ ಮೂಂಕು, ಕೈಕಾರ್‌ಡ್ ಪುಡಸ್ ಸೈಯೊಂದಿಪ್ಪಡ್
ಜಕ್ಕೆಲ್ಡ್ ಬಾಲೆ, ದಿಕ್ಕೆಲ್ಡ್ ಪೇರ್ ತಪ್ಪಂದಿಪ್ಪಡ್
ಮದ್ಯನ ಮುಟ್ಟ ಕಂಡೊಡು ಕಜವು ತೋಜಡ್ ಮದ್ಯನಡ್ದ್ ಬುಕ್ಕ ತೋಜಂದಿಪ್ಪಡ್

ಕನ್ನಡಾನುವಾದ

ಬೋಲದರಮನೆಯಲ್ಲಿ ನೀವು ಹೆಂಗಸರಿಗೆ ಅಂಟೆಕಾಲು (ವಕ್ರಕಾಲು) ದೋಂಟೆ ಕೈ (ಉದ್ದ ಕೈ)
ಡೊಳ್ಳುಹೊಟ್ಟೆ, ಕೊಂಡೆ ಕಿವಿ, ನಂಡು ಮೂಗು, ಕೈಕಾಲಲ್ಲಿ ಚರ್ಮ ಸಾಯುತ್ತಿರಲಿ
ಮಡಿಲಲ್ಲಿ ಮಗು ಒಲೆಯಲ್ಲಿ ಹಾಲಿನ ಮಡಿಕೆ ತಪ್ಪದಿರಲಿ
ಮಧ್ಯಾಹ್ನದವರೆಗೆ ಗದ್ದೆಯಲ್ಲಿ ಕಳೆ ಕಾಣಿಸಲಿ ಮಧ್ಯಾಹ್ನದ ಅನಂತರ ಕಾಣದಾಗಲಿ

ಎಂಬ ಶಾಪನೀಡಿ ಮುಂದೆ ಹೋಗುತ್ತಾಳೆ. ಬೋಳದ ಕಾಡಿಗೆ ಹೋಗುವ ವಿವರಗಳಿವೆ.

ಬೋಲಬಾರಿ ಚತ್ತೇರಿಗಳು/ ಸತ್ತಿರಿಕುಲು

ಕರ್ಗಿಯವರ ಪಠ್ಯವು ಬೋಳದರಮನೆಯಲ್ಲಿನ ಬೋಲಬಾರಿ ಚತ್ತೇರಿಗಳ ಕುರಿತು ಈ ಕೆಳಗಿನ ವಿವರಗಳನ್ನು ನೀಡುತ್ತದೆ. ಅಣ್ಣ ಕರಿಯ ಕಾಸಿಂಗರಾಯ ತಮ್ಮ ಬೊಳಿಯ ದೇಸಿಂಗರಾಯ. ತಮಗೆ ಕಾಡುಕಟ್ಟಿ ಬೇಟೆ ಮಾಡಬೇಕೆಂದು ಬಿಲ್ಲು, ಕೋವಿಯ ಬೇಟೆಗಾರರನ್ನು ಬರಹೇಳುತ್ತಾರೆ. ಬೇಟೆ ನಾಯಿಗಳನ್ನು ತರಿಸುತ್ತಾರೆ. ಮಾದೆರಿ ಮಲೆಕಾಡು ಹಾಗು ಬೋಲದ ಕಾಡಲ್ಲಿ ಬೇಟೆ ಮಾಡಲು ಏನೊಂದು ಬೇಟೆಯೂ ತೋರಿಬರುವುದಿಲ್ಲ.

ಇತ್ತ ಸಿರಿಯು ಕೋಟಿಪೂಂಜರ ಬೈಲಿನ ಕಾಡು ಬದಿಯಲ್ಲಿ ಬಿಳಿಯ ಬುಗರಿ ಮರಕ್ಕೆ ಮಗ ಕುಮಾರನ ತೊಟ್ಟಿಲನ್ನು ಕಟ್ಟಿ ಸ್ವರದನಿ ಕೊಟ್ಟು ತೊಟ್ಟಿಲನ್ನು ತೂಗುತ್ತಿದ್ದಾಳೆ.

ಈ ಸ್ವರ ಕಾಸಿಂಗರಸರ ಕಿವಿಗೆ ಬಿದ್ದು ಅವರು ಓಡೋಡಿ ಬರುತ್ತಾರೆ. ಮುಂದೆ ಬಂದವ ಅಣ್ಣ, ಹಿಂದೆ ಬಂದವ ತಮ್ಮ ಎನ್ನುತ್ತಾಳೆ ಸಿರಿ. ಕಾಸಿಂಗ ರಾಯರು ಸಿರಿಯ ಪೂರ್ವ ವೃತ್ತಾಂತವನ್ನು ತಿಳಿದುಕೊಳ್ಳುತ್ತಾರೆ. ಬೋಳಬಾರಿ ಚತ್ತೇರಿಗಳು ನಾವು ಕೂಡಾ ನಿನ್ನಂತೆಯೇ ಸತ್ಯದಲ್ಲಿ ಹುಟ್ಟಿದವರು. ನೆಲ್ಲಿಯ ಮರದಲ್ಲಿ ಪಕ್ಷಿಯ ರೆಕ್ಕೆಯಲ್ಲಿ ಜೋಡು ನಳಿಗೆಯ ಕೋವಿಯಲ್ಲಿ ಉದಯವಾದವರು. ನಮ್ಮ ಅರಮನೆಗೆ ಬಾ ಎಂದು ಕರೆಯಲು ಸಿರಿ ಇಲ್ಲ, ಹಾಗೆ ಬರಲಾರೆ. ಬೇಟೆಗೆ ಹೋದವರು ಹೆಣ್ಣು ತಂದಿದ್ದಾರೆ ಎಂಬ ಅಪವಾದದ ಮಾತು ಬಂದೀತು. ನೀವು ಕರೆದುಕೊಂಡು ಹೋಗುವ ರೀತಿಯಲ್ಲಿ ಹೋದರೆ ಬರುವ ರೀತಿಯಲ್ಲಿ ನಾನು ಬಂದೇನು ಎನ್ನುತ್ತಾಳೆ. ಹಾಗೆ ಸಹೋದರರು ಅರಮನೆಗೆ ಬಂದು ಪಲ್ಲಕ್ಕಿಯ ಜೊತೆಗೆ ಸಕಲ ಬಿರುದಾವಳಿಗಳೊಂದಿಗೆ ಬಂದು ಸಿರಿಯನ್ನು ಕರೆಯುತ್ತಾರೆ.

ಬೋಲದ ಕಾಡಲ್ಲಿ ಕುಮಾರ, ದಾರುವಿನ ಮಾಯ

ಬೋಲದರಮನೆಗೆ ಹೊರಡುವ ಮೊದಲು ಸಿರಿ ಕುಮಾರನಿಗೆ ಕೊನೆಯದಾಗಿ ಮೊಲೆಯುಣಿಸಿ 'ಬಾ, ಬೋಲದರಮನೆಗೆ ಹೋಗುವ. ನಿನಗೆ ಅಲ್ಲಿ ಪಟ್ಟ ಕಟ್ಟುವ' ಎಂದು ಕರೆಯುತ್ತಾಳೆ. ಆಗ ಕುಮಾರ 'ಏನು ನನಗೆ ಬೋಳದರಮನೆಯಲ್ಲಿ ಪಟ್ಟವೇ? ಪಟ್ಟವಾಗಬೇಕಿದ್ದರೆ ನನಗೆ ಸತ್ಯನಾಪುರ ಅಥವಾ ಬಸಲೂರ ಅರಮನೆಯಲ್ಲಿ ಆಗಬೇಕಿತ್ತು. ಈವರೆಗೆ ಒಬ್ಬನನ್ನು ಅಪ್ಪ ಎಂದು ಕರೆದು ಈಗ ಇನ್ನೊಬ್ಬನನ್ನು ಹಾಗೆ ಕರೆಯಲಾರೆ. ಬೋಲಕ್ಕೆ ನನ್ನನ್ನು ಕರೆಯಬೇಡಿ. ಇಲ್ಲೆ ಮಾಯ ಮಾಡಿಬಿಡಿ ಎನ್ನುತ್ತಾನೆ. ಹಾಗೆ ಸಿರಿ ರಾವಿನ್ನ ಗೆಜ್ಜೆಕತ್ತಿ ತೆಗೆದು ಮೂರುಗೆರೆ ಎಳೆದು 'ಬೋಳದ ಕಾಡಲ್ಲಿ ಮಾಯವಾಗು ಮಗನೇ, ಬೊಲ್ಯೊಟ್ಟು ಮಾಡ ಬಿಳಿಯ ಬುಗುರಿ ಮರದ ಗೆಲ್ಲಿನಲ್ಲಿ ಕುಳಿತು ಕಂಚಿನ ಕೋಳಿಯಾಗಿ ಕೂಗು ಕುಮಾರ. ಒಂದು ವರ್ಷ ಒಂದು ದಿನದಲ್ಲಿ ನನ್ನನ್ನು ತಾಯಿ ಎಂದು ಕರೆ, ನಾನು ಮಗ ಎಂಬ ಪ್ರೀತಿಯಿಂದ ಬರುತ್ತೇನೆ. ನಿನಗೊಬ್ಬಳು ತಂಗಿಯನ್ನು ಹೆತ್ತು ಬರುವೆ ಎಂದು ಹೇಳಿ ಕುಮಾರನನ್ನು ಮಾಯ ಮಾಡುತ್ತಾಳೆ. ದಾರುವನ್ನು ಕುರಿತು ನನ್ನ ಸಹೋದರರು ನನ್ನನ್ನು ಬೋಲದರಮನೆಗೆ ಕರೆದುಕೊಂಡು ಹೋಗಲು ಬಂದಿದ್ದಾರೆ. ಬಾ ಹೋಗುವ ಎಂದು ದಾರುವನ್ನು ಕರೆಯಲು, ಇಲ್ಲ ಅಕ್ಕನವರೇ ಬೋಲದರಮನೆಯ ಹೆಂಗುಸರ ಒಳ ಉಡುಪು(ಕಡೆ ಕುಂಟು)ಒಗೆಯುವ ಕೆಲಸಕ್ಕೆ ನಾನು ಬರಲಾರೆ ಎನ್ನುತ್ತಾಳೆ. ಕುಮಾರನನ್ನು ಮಾಯ ಮಾಡಿದಂತೆ ನನ್ನನ್ನೂ ಮಾಯಮಾಡಿ ಎನ್ನುತ್ತಾಳೆ. ಅದರಂತೆ ಸಿರಿ, ಇನ್ನು ಮುಂದಕ್ಕೆ ನೀನು ಹಟ್ಟಿಯ ಕರುಗಳಿಗೆ ರಕ್ಷಣೆ ನೀಡುತ್ತಾ ತಿಂಗಳಿಗೊಂದರಂತೆ ಗೆರಸೆಯ ಎಡೆಗಳನ್ನು ಸ್ವೀಕರಿಸುತ್ತಾ 'ಗುಡ್ಡೆದಜ್ಜಿಯಾಗಿ ಇರು' ಎಂದುಹೇಳಿ ದಾರುವನ್ನೂ ಮಾಯಮಾಡುತ್ತಾಳೆ. ಕುಮಾರ ಹಾಗು ದಾರುವನ್ನು ಮಾಯ ಮಾಡಿದ ವಿಚಾರ ಬೋಳಬಾರಿ ಚತ್ತೇರಿಯರಿಗೆ ತಿಳಿಸಿ ಸಿರಿ ಸಹೋದರರ ಜೊತೆ ಒಂದೇ ಪಲ್ಲಕ್ಕಿಯಲ್ಲಿ ಕುಳಿತು ಬೋಳದರಮನೆಗೆ ತೆರಳುತ್ತಾಳೆ.

ಕರ್ಗಿ ಹಾಗೂ ರಾಮಕ್ಕ ಇವರ ಸಂಧಿಗಳಲ್ಲಿ ಕುಮಾರ ಹಾಗೂ ದಾರುವಿನ ಮಾಯ ಮೊದಲು ಆಗಿ ಆನಂತರ ಬೋಲಬಾರಿ ಕ್ಷತ್ರಿಯರ ಪ್ರಸ್ತಾವ ಬರುತ್ತದೆ. ಈ ಬದಲಾವಣೆ ಹೊರತುಪಡಿಸಿದರೆ ಹೆಚ್ಚಿನ ಬದಲಾವಣೆಗಳಿಲ್ಲ.

ಶ್ಯಾಮರಾಯ ಶೆಟ್ಟಿಯವರ ಪಠ್ಯವು ಸ್ವಲ್ಪ ಭಿನ್ನ ವಿಚಾರವನ್ನು ತಿಳಿಸುತ್ತದೆ. ಸಿರಿ ಬೋಲದ ಕಾಡಿಗೆ ಹೋಗಿ ಮಗುವಿನ ತೊಟ್ಟಿಲನ್ನು ಮರದ ಗೆಲ್ಲಿಗೆ ಕಟ್ಟಿ ತೊಟ್ಟಿಲು ತೂಗುತ್ತಿರಲು ಕರಿಯ ಕಾಸಿಂಗ ಬೊಳಿಯ ದೇಸಿಂಗರು ಹೆಣ್ಣಿನ ಸ್ವರದನಿ ಕೇಳಿ ಓಡಿ ಬರುತ್ತಾರೆ. ಮೊದಲು ಬಂದವನನ್ನು ಅಣ್ಣ, ನಂತರ ಬಂದವ ತಮ್ಮ ಎಂದು ಸಿರಿ ಹೇಳಿ ಅವರ ಹುಟ್ಟಿನ ವೃತ್ತಾಂತವನ್ನು ಕೇಳುತ್ತಾಳೆ. ತಾವರೆಯ ಹೂವಲ್ಲಿ ಜೋಡು ದುಂಬಿಗಳಾಗಿ ನಮ್ಮ ಉದಯ. ಈಶ್ವರ ದೇವರ ವರದಿಂದ ಕಾಳಿಂಗರಸರಾಗಿದ್ದೇವೆ ಎಂದು ತಿಳಿಸಲು ಸಿರಿಯೂ ತನ್ನ ಜನನದ ಸತ್ಯ ವೃತ್ತಾಂತವನ್ನು ತಿಳಿಸುತ್ತಾಳೆ. ಬೋಲಮಲ್ಲಿಗೆಗೆ ಸಕಲಬಿರುದಾವಳಿಗಳೊಂದಿಗೆ ಹೊರಡುವ ಸಂದರ್ಭ ಕುಮಾರ ತಾಯಿಯೊಂದಿಗೆ ಕೆಲವು ವಿಚಾರಗಳನ್ನು ಮಾತನಾಡುತ್ತಾನೆ. ಈವರೆಗೆ ನಿಮಗೆ ಅರುವತ್ತು ಕಾಲದ ಹೆಣ್ಣಿಗೆ ಏಳು ಪ್ರಾಯದ ಮಗ ನಾನು ವಾರೀಸುದಾರನಾಗಿದ್ದೆ. ಈಗ ನಿಮಗೆ ಬೋಲದ ಕಾಡಲ್ಲಿ ಸತ್ತೇರಿಗಳು ಅಣ್ಣತಮ್ಮಂದಿರಾದರು. ನಾನು ನಿಮ್ಮ ಜೊತೆ ಬರಲಾರೆ. ನೀವೇ ಹೋಗಿ ಎನ್ನುತ್ತಾನೆ. ಇಲ್ಲಿ ಸಿರಿ ಕುಮಾರನ ನಡುವಿನ ಸಂಭಾಷಣೆ ಸುದೀರ್ಘ ವಾಗಿದೆ. ಸಿರಿ ಕುಮಾರನನ್ನು ಪರಿಪರಿಯಾಗಿ ಕೇಳಿಕೊಳ್ಳುತ್ತಾಳೆ.

ತುಳುಪಠ್ಯ

ನಾರಾಯನ ಮಗ ಕುಮಾರ ನಿನನ್ ಕೈಕಂಜಿ ಮೇಪವುಜಿ
ದೊಂಬುಡು ಕುಲ್ಲವುಜಿ ಮಗಾ
ಸತ್ಯೊಡು ಪುಟ್ಟ್‌ದೆ ಮಗ
ನಿಕ್ಕ್ ಕಲೆ ಪಿಲೆ ದೀನಕ್ಲೆನ್
ಮಣ್ಣ್ ಮುಟ್ಟ್ ಪೊಣ್ಣ ಸಾಪೊ ಕೊರ್ದು ಮಗಾ
ಬಸ್ಮ ಮಲ್ಪಾವೆ ಮಗಾ ಕಲ್ಲ ರೂಪೊ ಕೊಂಡೊ ಬರ್ವೆ ಮಗಾ
ಜಪ್ಪುಲಾ ಎನ್ನ ಬೆರಿ ಪತ್ತ್‌ಲಾ

ಕನ್ನಡಾನುವಾದ

ನಾರಾಯಣ ಮಗ ಕುಮಾರ ನಿನ್ನನ್ನು ದನ ಮೇಯಿಸಲಾರೆ
ಬಿಸಿಲಲ್ಲಿ ಕುಳಿತುಕೊಳ್ಳಲು ಬಿಡಲಾರೆ
ಸತ್ಯದಲ್ಲಿ ಹುಟ್ಟಿದ್ದೇನೆ ಮಗಾ
ನಿನಗೆ ಅಪವಾದ ಹೇಳಿದವರನ್ನು
ಮಣ್ಣುಮುಟ್ಟಿ ಹೆಣ್ಣ ಶಾಪ ನೀಡಿ ಮಗಾ

ಭಸ್ಮ ಮಾಡಿಯೇನು ಮಗಾ ಕಲ್ಲು ರೂಪ ಮಾಡಿಯೇನು ಮಗಾ
ಇಳಿದು ನನ್ನ ಬೆನ್ನ ದಾರಿ ಹಿಡಿದು ಬಾ ಮಗಾ (ಪುಟ 174)

ಎಂದು ಪರಿ ಪರಿಯಾಗಿ ಮಗನನ್ನು ಕೇಳಿಕೊಳ್ಳುತ್ತಾಳೆ. ಸಿರಿ ಯಾವ ರೀತಿಯಲ್ಲಿ ಹೇಳಿದರೂ ಕೇಳದೆ ಕೊನೆಗೂ ಕುಮಾರ ತಾಯಿಯ ಮಾತಿಗೆ ತಲೆಬಾಗದೆ 'ಈರೆ ಬೆರಿಯೆ ಬರಾಯೆ, ಅಮ್ಮೆರೆ ಪಾತೆರೊ ಮಿಕ್ಕಾಯೆ' (ನಿಮ್ಮ ಬೆನ್ನು ಹಿಡಿದು ಬಾರೆನು, ತಂದೆಯ ಮಾತು ಮೀರೆನು) ಎನ್ನುತ್ತಾನೆ.

ತುಳುಪಠ್ಯ
ಆನಿಗ್ ಅಮ್ಮೆರ್ ಪಂತೆರ್
ಪೊಣ್ಣಾಯಿನಾಲೆನ್ ಮೈತೆದೀಂದ್ ಪನ್‌ಂಬೊಲು
ಆಣ್ ಆಣನ ಮರ್ಲ್ ಉಲ್ಲೊಲು
ಆಲೆ ಬೆರಿ ಪತ್ತಡ ಕುಮಾರ
ಎಂಕ್ ಪುಟ್ಟುದು ಮೂಜೆನಕ್ಲೆಗ್ ಪುಟ್ಟಿನ ಪುದರ್ ಕೊಂಡೊದು ಬರಡಂದ್

ಕನ್ನಡಾನುವಾದ
ಅಂದು ತಂದೆಯವರು ಹೇಳಿದ್ದಾರೆ
ಹೆಣ್ಣಾದವರನ್ನು ನಾದಿನಿ ಎಂದಾಳು
ಗಂಡಸರ ಹುಚ್ಚು ಹುಚ್ಚು ಇದ್ದಾಳೆ ಅವಳು
ಅವಳ ಬೆನ್ನು ಹಿಡಿಯಬೇಡ ಮಗ ಕುಮಾರ
ನನಗೆ ಹುಟ್ಟಿ ಮೂರನೆಯವನಿಗೆ ಹುಟ್ಟಿದ ಹೆಸರು ತರಬೇಡವೆಂದಿದ್ದಾರೆ
(ಪುಟ 175–176)

ಎಂಬ ಬಹಳ ಮುಖ್ಯವಾದ ಮಾತು ಕುಮಾರನ ಬಾಯಿಂದ ಬರುತ್ತದೆ. ತನ್ನ ತಂದೆ ಮೊದಲೇ ಸಿರಿಯ ಚಾರಿತ್ರ್ಯದ ಬಗೆಗೆ ಅನುಮಾನ ವ್ಯಕ್ತಪಡಿಸಿ ಮಗನಿಗೆ ತಿಳಿಸಿರುವುದನ್ನು ಮಗ ತಾಯಿಗೆ ತಿಳಿಸಿ ಬೋಲಮಲ್ಲಿಗೆಗ ಬರಲು ನಿರಾಕರಿಸುತ್ತಾನೆ. ಅಲ್ಲದೆ 'ಈರ್ ಜತ್ತ್‌ರ್ ಪೋಲೆಪ್ಪೆರೇ' ಎಂದು ಹೇಳುತ್ತಾನೆ. ತುಳುವಿನಲ್ಲಿ 'ಜತ್ತ್‌ರ್ ಪೋಪಿನಿ' ಎನ್ನುವುದಕ್ಕೆ ಇನ್ನೊಬ್ಬನ ಜೊತೆ ಓಡಿ ಹೋಗುವುದು ಎಂಬ ಹೀನಾರ್ಥವಿದೆ. ಈ ಮಾತನ್ನು ಕುಮಾರ ತಾಯಿಗೆ ಹೇಳುವ ಮೂಲಕ ತಾಯಿ ಬೋಲಬಾರಿ ಚತ್ತೇರಿಯರ ಜೊತೆಗೆ ಬೋಲ ಮಲ್ಲಿಗೆಗೆ ಹೋಗುವುದಕ್ಕೆ ತನ್ನ ಸಮ್ಮತಿಯಿಲ್ಲ ಎಂಬುದನ್ನು ತಿಳಿಸುತ್ತಾನೆ. ತನ್ನ ತಂದೆ ಹಿಂದೆ ಹೇಳಿರುವ ಮಾತು ನಿಜವಾಯಿತು ಎಂದು ತಿಳಿಯುತ್ತಾನೆ. ನನಗೆ ಒಂದು ದಾರಿ ತೋರಿಸಿ ತಾಯಿಯವರೇ ಎಂದು ಕೇಳುತ್ತಾನೆ ಕುಮಾರ. ಕುಮಾರನನ್ನು

ಮಾಯ ಮಾಡಿ ಸಿರಿಯು ಆತನನ್ನು ಎಲ್ಲೂರಿಗೆ ಹೋಗಿ ವಿಶ್ವನಾಥ ದೇವರ ಭೇಟಿ ಮಾಡು ಎಂದು ಕಳುಹಿಸುತ್ತಾಳೆ. ಅವರ ಅಪ್ಪಣೆ ಪಡೆದು ಅಲ್ಲಿ ನೆಲೆವೂರು. ಅಲ್ಲಿ ನಿಂತು ದಲ್ಯ (ಹೆಣ್ಣೊಬ್ಬಳ ಮೈಮೇಲೆ ಸಿರಿಬಳಗದ ಶಕ್ತಿ ಆವಾಹನೆಯಾದಾಗ ಅವಳಿಗೆ ಅಧಿಕೃತವಾಗಿ ಸಿರಿಬಳಗದ ಸದಸ್ಯತ್ವ ನೀಡಿ ಹಿರಿಯ ಸಿರಿಗಳ ಸಾಲಿನಲ್ಲಿ ಬಿಳಿಯ ಬಟ್ಟೆ ಹಾಸಿ ಅದರ ಮೇಲೆ ಬಲದಕಾಲು ಹಾಕಿಸಿ ಬರಮಾಡಿಕೊಳ್ಳುವ ಕ್ರಿಯೆ) ನನಗೆ ಹಾಕಿಸು. ನಡೆಯುವ ನಡೆದಲ್ಯ ನಿನಗೆ ಇಟ್ಟುಕೋ ಎನ್ನುತ್ತಾಳೆ. ಅಲ್ಲಿಂದ ಕುತ್ಯಾರಿಗೆ ಹೋಗು. ಅಲ್ಲಿ ನೀನು ಬಂದಿರುವ ವಿಷಯವನ್ನು ಹಟ್ಟಿಯ ಕರುಗಳು, ತೊಟ್ಟಿಲ ಮಗುವಿಗೆ ತೊಂದರೆ ಕೊಡುವ ಮೂಲಕ ತೋರಿಸು. ಬೊಲ್ಯೊಟ್ಟಿನಲ್ಲಿ ಬಿಳಿಯ ಬುಗುರಿ ಮರ ಇದೆ. ಮಂಗಳವಾರದಂದು ಬಿಳಿಯ ಸಾಸ್ತ್ರ ಹುಂಜನಾಗಿ ಕೂಗು. ಆಗ ಕುತ್ಯಾರ್ ಅರಸರು, ಅಡ್ಡ ಆರು ಮಾಗಣೆಯವರು ಇದೇನೆಂದು ಬಲ್ಮೆಯಲ್ಲಿ ಕೇಳಿ ನೀನು ಬಂದಿರುವ ವಿಷಯ ತಿಳಿದು ನಿನಗೆ ಗುಡಿ, ನನಗೆ ಸ್ಥಾನ ಕಟ್ಟಿಸುತ್ತಾರೆ. ನಾನು ಇನ್ನೊಂದು ಮಗು ಹೆತ್ತುಕೊಂಡು ಬರುತ್ತೇನೆ ಎಂದು ಹೇಳಿ ಬೊಲ್ಯೊಟ್ಟುವಿಗೆ ಕುಮಾರನನ್ನು ಕಳುಹಿಸಿ ಕೊಡುತ್ತಾಳೆ. ಅಂತೆಯೇ ದಾರುವನ್ನು ಕುರಿತು ಬಡವ ಬಲ್ಲಿದ, ಗಂಡು ಹೆಣ್ಣು, ಅರಸ್ತಾನ ಮುಂತಾದೆಡೆ ಜಾಲ ಬೈಕಡ್ತಿಯಾಗಿ ಇದ್ದು ಅವರಿಗೆ ರಕ್ಷಣೆಯನ್ನು ನೀಡುತ್ತಿರು ಹಾಗು ಹಟ್ಟಿಯಲ್ಲಿ ದನಗಳ ಕೆಚ್ಚಲಲ್ಲಿ ಉಣ್ಣಿಯಾಗಿ ಇದ್ದು ಹಾಲು ಹೀರುತ್ತಿರು ಎಂದು ಹೇಳಿ ಆಕೆಯನ್ನೂ ಮಾಯ ಮಾಡುವ ವಿವರಗಳಿವೆ (ಶ್ಯಾಮರಾಯ ಶೆಟ್ಟಿ, ಪುಟ 177–180). ಸಿರಿ ದಂಡಿಗೆಯಲ್ಲಿ ಕುಳಿತು ಬೋಲ ಮಲ್ಲಿಗೆಗೆ ಹೋಗುತ್ತಾಳೆ.

ಗೋಪಾಲ ನಾಯ್ಕರ ಪತ್ಯದಲ್ಲಿ ಸಿರಿ 'ದೇಸ ಬುಡ್ದು ದೇಸಾಂತ್ರಿ ಪೋಯಂಡಲ ಸೊಸಂತ್ರೊ ಇಪ್ಪುಲ ಪನ್ಪಿನ ದೇವೆರೆನ ಅಬಯೊ ಉಬಯೊ ದೆತೊಂಡಲ್' (ದೇಶ ಬಿಟ್ಟು ದೇಶಾಂತರ ಹೋದರೂ ಸ್ವತಂತ್ರವಾಗಿರು ಎಂಬ ಅಭಯ ಉಭಯವನ್ನು ದೇವರಿಂದ ಪಡೆದುಕೊಂಡಳು). ಸಿರಿ ಆದಿ ಲಂಕೆಲೋಕನಾಡು ಇಳಿದುಕೊಂಡು ಬೋಲದ ಪದವಿಗೆ ಬರುತ್ತಾಳೆ. ಬೋಲದ ಪದವಿಗೆ ಬರುವಾಗ ಮಧ್ಯಾಹ್ನದ ಕಡು ಬಿಸಿಲಿನ ಹೊತ್ತು. ಗೋಳಿಯ ಮರದಡಿ ನೆರಳಿಗೆ ಕುಳಿತು ಬಿಳಿಯ ನೋಕಟೆಯ ಬಿಳಲನ್ನು ತಂದು ಅಡ್ಡ ಹೋದ ಗೋಳಿಯ ಗೆಲ್ಲಿಗೆ ಕುಮಾರನ ತೊಟ್ಟಿಲನ್ನು ಕಟ್ಟಿ ನಾರಾಯಣ ಪದ ಹಾಡಿ ತೂಗುತ್ತಿದ್ದಾಳೆ ಸಿರಿ. ಮಗುವಿಗೆ ಹಸಿವಾಗುತ್ತಿದೆ ಎಂದು ಸಮೀಪದ ಕುಂಟಲಾಡಿ ಗುತ್ತಿಗೆ ಹಾಲು ತರಲು ದಾರುವನ್ನು ಕಳುಹಿಸಿ ಕೊಡುತ್ತಾಳೆ. ಕುಂಟಲಾಡಿ ಗುತ್ತಲ್ಲಿ ಇರುವವರು ಸಿರಿಯ ಗಂಡನ ಬಳಿಯಾದ ಪುತ್ರಾಡಿ ಬನ್ನಾಯ ಬಳಿಯವರು. ದಾರು ಹೋಗಿ ಮಗುವಿಗೆ ಹಾಲು ಬೇಕೆಂದು ಕೇಳಿದಾಗ ಹಾಲು ಕೊಡಬಹುದು. ಆದರೆ ನಮ್ಮಲ್ಲಿ ಪಾತ್ರೆ ಇಲ್ಲ ಎನ್ನುತ್ತಾರೆ. ದಾರು ಕುಂಟಲಾಡಿ ಗುತ್ತಿನ ಬಾಕಿಮಾರು ಗದ್ದೆಗೆ ಹೋಗಿ ಭತ್ತದ ಪೈರಿನ ದಂಟನ್ನು ಕೊಯ್ದು ತಂದು ಅದರಲ್ಲಿ ಹಾಲು ತುಂಬಿಸಿ ತಂದು ಕುಮಾರನಿಗೆ ನೀಡುತ್ತಾಳೆ. ಹಾಲು ಕುಡಿಸಿ ಮಗುವನ್ನು

ತೊಟ್ಟಿಲಲ್ಲಿ ಮಲಗಿಸಲು ಮಗು ರಟ್ಟಿ ರಟ್ಟಿ ಅಳುತ್ತದೆ. ಏನು ಮಾಡಿದರೂ ಮಗುವಿನ ಅಳು ನಿಲ್ಲಿಸಲಾಗುವುದಿಲ್ಲ. ತೊಟ್ಟಿಲಿಂದ ಎಬ್ಬಿಸಿ ಸಿರಿ ಮಗುವಿಗೆ ಹಾಲು ಸಾಕಾಗಲಿಲ್ಲವೋ ಏನೋ ಎಂದು ಮಡಿಲಲ್ಲಿ ಹಾಕಿ ಬಲದ ಸಿರಿಮೊಲೆಯುಣಿಸಲು

ತುಳುಪಠ್ಯ
ನಾರಾಯಿನ ನಾರಾಯಿನ ಕುಮಾರೆ
ಕೊಡಿ ಬಾಯಿಡೆ ತಿಂದೆ ಮಿರೆ ಕುಮಾರೆ
ಕಡೆ ಬಾಯಿಡೆ ಮೂಜಿ ಬೊಟ್ಟು ರಕ್ತೊಂದು
ಬೂಮಿಗ್ ಪಯನೊ ಬುಡ್ತೆ ಕುಮಾರೆ
ಗೋಲಿದ ಮುದೆಲ್‌ಡ್ ಸತ್ಯಮಲೋಕಂದ ಸಿರಿಗ್
ಅಕಲ್ ತಪ್ಪುಂಡೆ ಮತಿ ಕೆಟ್ಟೆರೆ

ಕನ್ನಡಾನುವಾದ
ನಾರಾಯಿನ ನಾರಾಯಿನ ಕುಮಾರ
ತುದಿ ಬಾಯಲ್ಲೆ ಮೊಲೆ ತಿಂದು
ಕಡೆ ಬಾಯಲ್ಲೆ ಮೂರು ತೊಟ್ಟು ರಕ್ತವನ್ನು
ಭೂಮಿಗೆ ಬಿಟ್ಟಿದ್ದಾನೆ ಕುಮಾರ
ಗೋಳಿಯ ಬುಡದಲ್ಲಿ ಸತ್ಯಮಲೋಕಂದ ಸಿರಿಗೆ
ಪ್ರಜ್ಞೆ ತಪ್ಪುತ್ತದೆ ಸ್ಮೃತಿ ಕೆಡುತ್ತದೆ (ಪುಟ 265).

ಸಿರಿ ಮಗುವಿನ ಮುಖವನ್ನೇ ನೋಡಿ ಏನು ಕುಮಾರ, ನನಗೆ ಈವರೆಗೆ ಕೊಡಬಾರದ ಶಿಕ್ಷೆಯನ್ನೆಲ್ಲ ಕೊಟ್ಟೆ. ನನಗೆ ನಿಲ್ಲಲು, ಕೂರಲು ಆಗುತ್ತಿಲ್ಲ ಕುಮಾರ. ನನಗೊಂದು ಮಾತು ಹೇಳಬಹುದೇ ಕುಮಾರ ಎನ್ನುತ್ತಾಳೆ. ಕುಮಾರ ಬಾಯಿ ಬಿಟ್ಟು ಮಾತನಾಡುವುದಿಲ್ಲ. ಆಗ ಸಿರಿ

ತುಳುಪಠ್ಯ
ಎನ್ನ ಬೆಮ್ಮೆರೆನ್ ನೆನೆತ್ತ್ ನೆಲೆ ಮಲ್ಪೊಡು ಓ ಪಂಡೆರೆ
ಸತ್ಯಮಲೋಕಂದ ಸಿರಿ ಪತ್ತ್ ಬಿರೆಲ್ ವಂದನೆ ಮಲ್ತೆರೆ
ನಾರಾಯಿನ ಬೆಮ್ಮೆರೆ ನಾರಾಯಿನ ಬೆಮ್ಮೆರೆ
ಈರೆ ಸುತ್ತು ಬಲಿಟ್ಟ್ ಈರೆ ಗದ್ದಿಗೊದ ಸುತ್ತು ಬಲಿಟ್ಟ್ ಬತ್ತಿಂಚಿತ್ತಿನ ಸಿರಿಯಾಂಡ
ಏನ್ ಪಂಡಿನಲ್ಪ ಸಾರೆತಿ ಆವೊಡು ಬೆರಮ್ಮ

ಕನ್ನಡಾನುವಾದ

ನನ್ನ ಬೆರ್ಮೆರ್‌ನ್ನು ನೆನೆದು ನೆಲೆ ಮಾಡಬೇಕೆಂದರು ಓ
ಸತ್ಯಮಲೋಕಂದ ಸಿರಿ ಹತ್ತು ಬೆರಳು ವಂದನೆ ಮಾಡಿದರು
ನಾರಾಯಣ ಬೆರ್ಮರೇ ನಾರಾಯಣ ಬೆರ್ಮರೇ
ನಿಮ್ಮ ಸುತ್ತು ಬಲಿಯಲ್ಲಿ ನಿಮ್ಮ ಗದ್ದಿಗೆಯ ಸುತ್ತು ಬಲಿಯಲ್ಲಿ ಬಂದಂಥ ಸಿರಿಯಾಗಿದ್ದರೆ
ನಾನು ಹೇಳಿದಲ್ಲಿ ನೆಲೆಯಾಗಬೇಕು ಬೆರಮ್ಮ ಎಂದರು (ಪುಟ 316).

ನಾನು ಸತ್ಯದ ಸಿರಿಯಾಗಿದ್ದರೆ, ಅಜ್ಜನವರ ಕಣ್ಣೀರಿನ ಧರ್ಮದಲ್ಲಿ ಹಾಳೆ ಹಿಂಗಾರದಲ್ಲಿ, ಗಂಧದ ಗುಳಿಗೆಯಲ್ಲಿ, ಕುಂಕುಮದ ಕುಸುರಲ್ಲಿ ಉದಯವಾಗಿರುವ ಸಿರಿಯಾಗಿದ್ದರೆ ನನ್ನ ಕುಮಾರನ ಬಾಯಿಬೀಗ ತೆಗೆದು ಕೊಡಬೇಕು ಬೆರ್ಮರೇ ಎಂದು ಕೇಳಿಕೊಳ್ಳುತ್ತಾಳೆ. ನನ್ನ ಮಗುವಿನಲ್ಲಿ ಒಂದು ಮಾತು ಮಾತನಾಡಿಸಿ ಎಂದು ಬೇಡುತ್ತಾಳೆ. ಅದರಂತೆ ಬೆರ್ಮೆರ್ ಕುಮಾರನ ನಾಲಿಗೆಯ ತುದಿಯಲ್ಲಿ ಕುಳಿತು ಕುಮಾರನ ಬಾಯಿ ಬೀಗ ತೆಗೆದು ಮಾತನಾಡಿಸುತ್ತಾರೆ. ಕುಮಾರ ತಾಯಿಯನ್ನು ಕುರಿತು ಈ ರೀತಿ ಹೇಳುತ್ತಾನೆ.

ತುಳುಪಠ್ಯ

ನಾರಾಯಿನ ಅಪ್ಪೆರೇ ನಂಕ್ ಏಲ್ಯೊ ಗಲಿಗೆ ಬತ್ತ್ ಎತ್ತ್‌ಂಡ್ ಅಪ್ಪೆರೇ
ನಾರಾಯಿನ ಅಪ್ಪೆರೇ ಮುತ್ತುದಲೆಕೊಂದಿ ಬಾಲೆನ್ ಎನನ್ ಅಪ್ಪೆರೇ
ಈರ್ ಪೋಯಿನಾತ್ ದೂರೊ ಕೊಂಡೊದು ಪೋಪುನ ಬೊಡ್ಚಪ್ಪೆರೇ
ಒಂಜಮ್ಮಗ್ ಪುಟ್ಟ್‌ದ್ ಒಂಜಮ್ಮನ ಪುರಾಪು ಪನ್ಪಾಡ್ಡೆಪ್ಪೆರೇ
ಮಲ್ಲಾಯನ ಜಾಲ ಮುಂದಿಲ್ ಅಡಿಪ್ಪಾಡ್ಡೆಪ್ಪೆರೇ
ಪೀಂಚಿಲ್ ಕತ್ತಿ ಪತ್ತಾಡ್ಡೆಪ್ಪೆರೇ ತಪ್ಪು ಕುದ್ಪಾಡ್ಡೆಪ್ಪೆರೇ
ಗೋಂಪರ್ ಮುಟ್ಟಲೆ ದೀಪಾಡ್ಡೆಪ್ಪೆರೇ ಗೊಬ್ಬರೊದ ಬಟ್ಟಿ ಎನಡ ತುಂಬಾಡ್ಡೆಪ್ಪೆರೇ
ಕತ್ತೆಗ್ ಕುದುರೆಗ್ ಕುಡು ತಾರಾಯಿ ದೀಪಾಡ್ಡೆಪ್ಪೆರೇ
ಪೆರೆಯ ಮುಂದಿಲ್ ಎನನ್ ಅಡಿಪ್ಪಾಡ್ಡೆ ಅಪ್ಪೆರೆಂದ್
ಪನ್ಪೆ ಒಜ್ರ ಮಲಕಂದ ಕೋಟಿ ಕುಮಾರೆ

ಕನ್ನಡಾನುವಾದ

ನಾರಾಯಣ ತಾಯಿಯವರೇ ನಮಗೆ ವೇಳೆ ಘಳಿಗೆ ಬಂದು ಸಮೀಪಿಸಿದೆ
ನಾರಾಯಣ ತಾಯಿಯವರೇ ಮುತ್ತಿನಂಥ ಮಗುವನ್ನು ನನ್ನನ್ನು ತಾಯಿಯವರೇ
ನೀವು ಹೋಗುವಷ್ಟು ದೂರ ಕೊಂಡುಹೋಗಬೇಡಿ ತಾಯಿಯವರೇ
ಒಂದು ಅಪ್ಪನಿಗೆ ಹುಟ್ಟಿ ಇನ್ನೊಬ್ಬ ಅಪ್ಪನ ಹೆಸರು ಕರೆಸಬೇಡಿ ತಾಯಿಯವರೇ
ದೊಡ್ಡಮನೆತನದವರ ಅಂಗಳವನ್ನು ಗುಡಿಸಲು ಹೇಳಬೇಡಿ ತಾಯಿಯವರೇ

ಸಣ್ಣಕತ್ತಿ ಕೈಗೆ ಕೊಟ್ಟು ಸೊಪ್ಪು ಕಡಿಸಬೇಡಿ ತಾಯಿಯವರೇ
ದೊಡ್ಡ ಮುಟ್ಟಾಳೆ ತಲೆಗೆ ಇಡಿಸಿ ಗೊಬ್ಬರ ಹೊರಿಸಿಬೇಡಿ ತಾಯಿಯವರೇ
ಕತ್ತೆ ಕುದುರೆಗೆ ಹುರುಳಿ ಕಾಯಿ ನನ್ನ ಕೈಯಲ್ಲಿ ಇಡಿಸಬೇಡಿ ತಾಯಿಯವರೇ
ಮನೆಯ ಮುಂದಿನ ಅಂಗಳವನ್ನು ಗುಡಿಸಲು ಹೇಳಬೇಡಿ ತಾಯಿಯವರೇ
ಎಂದು ಹೇಳುತ್ತಾನೆ ವಜ್ರಮಲಕಂದ ಕೋಟಿ ಕುಮಾರ (ಪುಟ 318).

ನೀನು ಹೇಳಿರುವ ಯಾವುದೇ ಕೆಲಸಗಳನ್ನು ನಿನ್ನ ಕೈಯಲ್ಲಿ ಮಾಡಿಸಿಯೇನು ಮಗನೇ ಎಂದಾಗ ಕುಮಾರ ತಾಯಿಯವರೇ, ಒಳ್ಳೆಯ ಹೂವನ್ನು ಕೊಂಡುಹೋಗಿ ಒಳ್ಳೆಯ ಗದ್ದುಗೆಯಲ್ಲಿ ಇಟ್ಟುಬಿಡಿ ಎನ್ನಲು ಅದಕ್ಕೆ ತಾಯಿ ಒಳ್ಳೆಯ ಹೂವನ್ನು ಕೊಂಡು ಹೋಗಿ ದೇವರ ಗದ್ದುಗೆಯಲ್ಲಿ ಇಟ್ಟೇನು ಮಗನೇ, ಅದನ್ನು ಕೆಸರಲ್ಲಿ ಹಾಕೆನು, ಹೆದರಬೇಡ ಎನ್ನುತ್ತಾರೆ.

ತುಳುಪಠ್ಯ
ನನ ನೆಡ್ದ್ ದುಂಬು ಎನನ್ ಕೊಂಡೊದು ಪೋಪುನ ಬೊಡ್ಚಪ್ಪೆರೇ
ಎನನ್ ಮುಲ್ಪ ಬೋಲದ ಪದವುಡು ಮಾಯ ಬೆನ್ಲೆ

ಕನ್ನಡಾನುವಾದ
ಇಲ್ಲಿಂದ ಮುಂದಕ್ಕೆ ನನ್ನನ್ನು ಕರೆದುಕೊಂಡು ಹೋಗಬೇಡಿ ತಾಯಿಯವರೇ
ನನ್ನನ್ನು ಇಲ್ಲಿ ಬೋಲದ ಪದವಲ್ಲಿ ಮಾಯ ಮಾಡಿಬಿಡಿ

ಎನ್ನುತ್ತಾನೆ. ಇಷ್ಟು ವರ್ಷ ನಿನ್ನನ್ನು ಕೈಯಾರೆ ಎತ್ತಿಕೊಂಡು, ಮುದ್ದಾಡಿ ಆಡಿಸಿ ತಿನ್ನಿಸಿದ ನಾನು ಹೇಗೆ ಮಾಯ ಮಾಡಲಿ ಎನ್ನುತ್ತಾರೆ. ಹೀಗೆ ತಾಯಿ ಮಗನ ಸಂಭಾಷಣೆ ಮುಂದುವರಿಯುತ್ತದೆ. ಕೊನೆಗೆ ಕುಮಾರ

ತುಳುಪಠ್ಯ
ನಾರಾಯಿನ ಅಪ್ಪೆರೇ ನಾರಾಯಿನ ಅಪ್ಪೆರೇ
ಈರಾಂಡಲ ಅಪ್ಪೆರೇ ಮುಲ್ತು ಬೋಲಬಾರಿ ಸತ್ತಿರ್ಲು
ಕರಿಯ ಕಾಸಿಂಗೆ ಬೊಲಿಯ ದೇಸಿಂಗೆನ್ಪಿ ಅರಸುಲು
ಬೋಲ ಸತ್ತಿರ್ಲಪ್ಪೆರೇ ಈಡೆ ಬರ್ಪೆರ್
ಅಕ್ಲೆನ ಅರಮನೆಗ್ ಈರ್ ಪೋವರಪ್ಪೆರೇ
ಬೋಲಬಾರಿ ಸತ್ತಿರ್ಲೆನ ಅರಮನೆಡ್ದಪ್ಪೆರೇ
ಕೊಟ್ಟರಾಡಿದ ಎರಮನೆಗ್ ಜಾತಿ ಕಟ್ಟ್‌ಡ್ ನೀತಿ ಮಲ್ಪೆರೇ

ಎರಡ್ನೇ ಸಂಬಂಧೋ ಜಾತಿ ಕಟ್ಟ್‌ಡ್ ಉಂಡು ಮಲ್ಪುಬರಪ್ಪೆರೇ
ಯಾನ್ ಬರ್ಪುಜೀ ಬರ್ಪುಜೀ ಈರೆ ಒಟ್ಟುಗು ಅಪ್ಪೆರೇ
ಎನನ್ ಮುಲ್ಪ ಬೋಲದ ಪದವುಡು ಮಾಯ ಮಲ್ಪುಲೆ ಅಪ್ಪೆರೇ
ಕೊಟ್ಟರಾಡಿದ ಕೊಡ್ಸರಾಲ್ವನ್ ಯಾನ್ ಅಮ್ಮೆರ್‌ಂದ್ ಲೆಪ್ಪಾಯೆ ಅಪ್ಪೆರೇ

ಕನ್ನಡಾನುವಾದ
ನಾರಾಯಣ ತಾಯಿಯವರೇ ನಾರಾಯಣ ತಾಯಿಯವರೇ
ನೀವಾದರೋ ಇಲ್ಲಿಂದ ಬೋಲಬಾರಿ ಸತ್ತೇರಿಗಳು
ಕರಿಯಕಾಸಿಂಗ ಬೊಲಿಯ ದೇಸಿಂಗ ಎಂಬ ಅರಸರು
ಬೋಲ ಸತ್ತೇರಿಗಳು ಇಲ್ಲಿಗೆ ಬರುತ್ತಾರೆ ತಾಯಿಯವರೇ
ಅವರ ಅರಮನೆಗೆ ನೀವು ಹೋಗುವಿರಿ ತಾಯಿಯವರೇ
ಬೋಲಬಾರಿ ಸತ್ತೇರಿಗಳ ಅರಮನೆಯಿಂದ ಕೊಟ್ಟರಾಡಿಯ ಅರಮನೆಗೆ ಜಾತಿ ಕಟ್ಟಿನ ನೀತಿ ಮಾಡಲು
ಎರಡನೇ ಸಂಬಂಧ ಜಾತಿ ಕಟ್ಟಲ್ಲಿ ಉಂಟು ಮಾಡುತ್ತೀರಿ ತಾಯಿಯವರೇ
ನಾನು ಬರಲಾರೆ ನಾನು ಬರಲಾರೆ ನಿಮ್ಮ ಜೊತೆಗೆ ತಾಯಿಯವರೇ
ನನ್ನನ್ನು ಇಲ್ಲಿ ಬೋಲದ ಪದವಲ್ಲಿ ಮಾಯ ಮಾಡಿಬಿಡಿ ತಾಯಿಯವರೇ
ಕೊಟ್ಟರಾಡಿಯ ಕೊಡ್ಸರಾಳ್ವರನ್ನು ಅಪ್ಪ ಎಂದು ಕರೆಯಲಾರೆ ತಾಯಿಯವರೇ
(ಪುಟ 321–322).

ಹೀಗಾಗಿ ಕುಮಾರ ತನ್ನ ತಾಯಿಯವರಲ್ಲಿ ನೀವು ಕೊಟ್ರಾಡಿಯ ಕೊಡ್ಸರಾಳ್ವನನ್ನು ಎರಡನೇ ಮದುವೆಯಾಗುವ ಮೂಲಕ ಒಕ್ಕೆತ್ರಿ ಜಾತಿಯಲ್ಲಿ ಎರಡನೇ ಸಂಬಂಧದ ಕಟ್ಟುಪಾಡನ್ನು ಆರಂಭಮಾಡುತ್ತೀರಿ. ಹಾಗಾಗಿ ನಿಮ್ಮ ಜೊತೆ ಬರಲಾರೆ. ನನ್ನನ್ನು ಮಾಯಮಾಡಿ ಎಂಬುದಾಗಿ ಮುಂಚಿತವಾಗಿಯೇ ಭವಿಷ್ಯ ನುಡಿಯುತ್ತಾನೆ. ನಿನ್ನನ್ನು ಮಾಯಮಾಡಿ ಮುಂದೆ ಯಾವಾಗ ನಿನ್ನ ಮುಖ ನೋಡಲಿ ಎಂದು ತಾಯಿಯವರು ಕೇಳಿದಾಗ ಕುಮಾರ ಈ ಮಾತನ್ನು ಹೇಳುತ್ತಾನೆ.

ತುಳುಪಠ್ಯ
ಎನ್ನ ಮುದ್ದು ಮೋನೆನ್ ತೂಯೆರೆ ಈರೆಗ್ ತಿಕ್‌ಬೆ ಯಾನ್
ಕೊಟ್ಟರಾಡಿಗ್ ಈರ್ ಪೋದು
ಯಾನೊಂಜಿ ತುಂಡು ಕರ್ಲ್
ಈರೆ ಕಿಲರೊಡು ಬುಡ್ದು ಬತ್ತ್‌ದಿ ಕರ್ಲ್ ಉಂಡಪ್ಪೆರೇ
ಎನ್ನ ಬೆರಿಸಾಯೊಗು ಓ

ಒಂಜಿ ಸಗೆ ಬೋಡುಂದು ಬುಡ್ತೆಪ್ಪೆರೇ ಓ
ಕೊಟ್ಟರಾಡಿದ ಅರಮ್ಮನೆಡ್ ಅಪ್ಪೆರೇ ಕೇಂಡರೋ
ಬಂಜಿನಾರ್ ಆವರ್ ಅಪ್ಪೆರೇ ಈರ್
ಬಾಯಿದಗ್ಗಿನೋ ಕಲೆವೆರೆ ಈರೆನ್ ಲೆತ್ತೊಂದು ಪೋವೆರ್
ಪಿರವತ್ತ ಬನ್ನಗ ಏನ್ ಎಲಿಕುಂಜ ಪಿಲಿಕುಂಜ ಪುಂಜೆದ ನಡವೆಡ್ ಯಾನ್ ಬರ್ಪೆಪ್ಪೆರೇ
ಈರೆಗ್ ತೂಯೆರೆ ತಿಕ್ಕ್‌ಬೆ ಅಪ್ಪೆರೇ

ಕನ್ನಡಾನುವಾದ
ನನ್ನ ಮುದ್ದು ಮುಖವನ್ನು ನೋಡಲು ಸಿಗುತ್ತೇನೆ ನಾನು
ಕೊಟ್ಟರಾಡಿಗೆ ನೀವು ಹೋಗಿ ನಾನೊಂದು ತುಂಡು ಕರುಳನ್ನ
ನಿಮ್ಮ ಗರ್ಭದಲ್ಲಿ ಬಿಟ್ಟು ಬಂದಿದ್ದೇನೆ ನನ್ನ ಬೆನ್ನ ಸಹಾಯಕ್ಕೆ
ಒಬ್ಬಳು ತಂಗಿ ಬೇಕೆಂದು ಬಿಟ್ಟು ಬಂದಿದ್ದೇನೆ ತಾಯಿಯವರೇ
ಕೊಟ್ಟರಾಡಿಯ ಅರಮನೆಯಲ್ಲಿ ತಾಯಿಯವರೇ
ಗರ್ಭವತಿಯಾಗುತ್ತೀರಿ ನೀವು
ನಿಮಗೆ ಬಾಯಿಯ ಆಸೆಯನ್ನು ಕಳೆಯಲು ಕರೆದುಕೊಂಡು ಹೋಗುತ್ತಾರೆ
ಹಿಂತಿರುಗಿ ಬರುವಾಗ ಅಲಿಕುಂಜ ಪಿಲಿಕುಂಜ ಪುಂಜದ ನಡವೆಗೆ ನಾನು ಬರುತ್ತೇನೆ
ನಿಮ್ಮನ್ನು ಭೇಟಿಯಾಗುತ್ತೇನೆ ತಾಯಿಯವರೇ (ಪುಟ 323–324)

ಎನ್ನುತ್ತಾನೆ. ಹೀಗೆ ಕುಮಾರ ತನ್ನ ತಾಯಿಯ ಎರಡನೇ ಮದುವೆಯ ವೃತ್ತಾಂತದಿಂದ ಹಿಡಿದು ತನಗೊಬ್ಬಳು ತಂಗಿಯನ್ನು ಹೆತ್ತು ಬರುವವರೆಗಿನ ಎಲ್ಲ ವಿಚಾರಗಳನ್ನು ತಾಯಿಗೆ ತಿಳಿಸುತ್ತಾನೆ. ತನ್ನ ತಾಯಿಯವರನ್ನು ಕುರಿತು ನಾವು ದೇವರ ಸುತ್ತು ಬಲಿಯಲ್ಲಿ ಬರುವಾಗ ನರಲೋಕದಲ್ಲಿ ನಾವು ಮಾನವ ಜನ್ಮ ತಾಳಿಬಂದೆವು. ತುಳುನಾಡಲ್ಲಿ ನಮ್ಮ ಕಥೆ ಉಳಿದುಬಂತು. ಈಗ ನಾವು ಮತ್ತೆ ದೇವರ ಗದ್ದುಗೆಗೆ ಹೋಗುವ ಹೊತ್ತಾಯಿತು. ತಡಮಾಡಬೇಡಿ, ನನ್ನನ್ನು ಮಾಯಮಾಡಿ ಎನ್ನುತ್ತಾನೆ ಕುಮಾರ.

ತುಳುಪಠ್ಯ
ಸತ್ಯಮಲೋಕಂದ ಸಿರಿಯೇ ಓ
ಬಾಲೆದ ನನ ನೆತ್ತಿಗ್ ಕೈಯೇ ಕೊರ್ಯೆರ್ ದಾನೆ
ಬಾಲೆದ ಕಾರ ಉಂಗುಷ್ಟೊಗು ಸತ್ಯಮಲೋಕಂದ ಸಿರಿನ ಕಾರ ಉಂಗುಷ್ಟೊ ಕೊರಿನ ಉಂಡು
ಬಲತ್ತ್‌ಡ್ ಉಂಡು ಬಲಕನ್ನಿಗೆ ಪುಂಚೊ ಎಡತ್ತ್‌ಡ್ ಉಂಡು ಎಡ ಕನ್ನಿಗೆ ಪುಂಚೊ
ನಡುಟ್ಟು ಉಂಡು ನಾಗರ ಪುಂಚೊದ ಓ ಕೈತಲ್‌ಡ್ ನೆತ್ತಿಗ್ ಉಂಗುಷ್ಟೊ ಕೊರ್ದು
ಬೂಮಿಗ್ ತರ್ತೆರ್ ಓ ಮಾಯ ಬೆಂದೆರ್

ಕನ್ನಡಾನುವಾದ
ಸತ್ಯಮಲೋಕಂದ ಸಿರಿ ಓ
ಮಗುವಿನ ನೆತ್ತಿಗೆ ಕೈ ಕೊಟ್ಟರು
ಮಗುವಿನ ಕಾಲ ಉಂಗುಟಕ್ಕೆ ಸತ್ಯಮಲೋಕಂದ ಸಿರಿಯ ಕಾಲ ಉಂಗುಟವನ್ನು ಕೊಟ್ಟರು
ಬಲದಲ್ಲಿದೆ ಬಲಕನ್ನಿಗೆ ಹುತ್ತ ಎಡದಲ್ಲಿದೆ ಎಡ ಕನ್ನಿಗೆ ಹುತ್ತ
ನಡುವಲ್ಲಿದೆ ನಾಗರ ಹುತ್ತದ ಓ ಸಮೀಪದಲ್ಲಿ ನೆತ್ತಿಗೆ ಉಂಗುಟ ಕೊಟ್ಟು ಭೂಮಿಗೆ ಒತ್ತಿ ಓ ಮಾಯ ಮಾಡಿದರು (ಪುಟ 326).

ಮಾಯ ಮಾಡುವಾಗ ಹೇಳುತ್ತಾರೆ ನನಗೊಂದು ಹೆಜ್ಜೆ ಜಾಗ ನಿನ್ನ ಬಲಭಾಗದಲ್ಲಿ ಬೆರ್ಮೆರ್ ಎಡಭಾಗದಲ್ಲಿ ಇಟ್ಟುಬಿಡು ಕುಮಾರ. ನೀನು ನಡುವಿನ ಗುಡಿ ನಿನ್ನದನ್ನಾಗಿ ಮಾಡಿಕೋ ಎನ್ನುತ್ತಾರೆ.

ತುಳುಪಠ್ಯ
ಅಡ್ಡೊ ಆಜಿ ಮಾಗಣೆಗ್ ಪೋಲಮ್ಮ ಬಾಲೆ ಪಂಡೆರೆ
ಬೊಲ್ಯೊಟ್ಟು ಪನ್ಪಿ ಗುತ್ತು ಮಗಾ
ಆಡೆಗ್ ಪೋಲ ಮಗಂದ್ ಪನ್ಪೆರ್ ಸತ್ಯಮಲೋಕಂದ ಸಿರಿ
ನೋಟೊ ನಿಮಿತ್ತೊಡು ತೋಜಿದ್ ಬಲಮ್ಮಾ
ಅಡಿಯಾರ ನನ ಬೊಲ್ದು ಬೊಗರಿನ್ನ ಮರತ್ತ ಮುದೆಲ್‌ಡ್
ಕಂಚಿದ ಪಾಣಿಪೀಠಾದ್ ನೆಗಪ್ಪುಲಮ್ಮ ಬಾಲೆ
ಬೊಲ್ಲಿದ ಸಾಸ್ತ್ರ ಪೂಂಜೆಯಾದ್ ಮೂಡ್‌ಲಮ್ಮ ಬಾಲೆ
ಬೊಲ್ಯೊಟ್ಟು ತಾವುಕಟ್ಟ್‌ಡಮ್ಮ ಬಾಲೆ
ಬಡೆಕ್ಕಾಯಿ ಪೋಯಿ ಗೆಲ್ಲ್‌ಡಮ್ಮ ಬೊಲ್ದು ಓ ಬೊಗರಿನ್ನ ಮರಟ್ಟ್ ಕುಲ್ಲುದು ನನಾ
ಪೂವೆದ ದಿನೊಟ್ಟು ದಡಿ ಬೊಟ್ಟ್‌ಲಾ ಪುಣ್ಣಮೆದ ದಿನೊಟ್ಟು ಕೆಲೆಪ್ಪುಲಮ್ಮ ಬಾಲೆ
ಸತ್ತ್ ಗುತ್ತುಗು ಸಾವಿರೊ ರೋಗೊ ಪಾಡ್‌ಲ್ಹಾ
ನೋಟೊ ನಿಮಿತ್ತೊಡು ಓ ತೋಜಿದ್ ಬಲಮ್ಮಾ ಓ
ತಾನಮಾನ ಓ ಗರ್ಭಗುಡೀ ಓ ಕಟ್ಟವೊನುಲಾ
ಪನ್ಪೆರ್ ದಾನೆ ಸತ್ಯಮಲೋಕಂದ ಸಿರಿ.

ಕನ್ನಡಾನುವಾದ
ಅಡ್ಡ ಆರುಮಾಗಣೆಗೆ ಹೋಗಮ್ಮ ಮಗೂ ಎಂದರು
ಅಲ್ಲಿ ಬೊಲ್ಯೊಟ್ಟು ಎನ್ನುವ ಗುತ್ತು ಮಗಾ

ಅಲ್ಲಿಗೆ ಹೋಗೆಂದರು ಸತ್ಯಮಲೋಕದ ಸಿರಿ
ನೋಟ ನಿಮಿತ್ತ (ಜ್ಯೋತಿಷ್ಯ)ದಲ್ಲಿ ತೋರಿ ಬಾ
ಅಡಿಯಿಂದ ಬಿಳಿಯ ಬುಗರಿ ಮರದ ಬುಡದಲ್ಲಿ
ಕಂಚಿನ ಪಾಣಿಪೀಠವಾಗಿ ಉದಯವಾಗು ಮಗನೇ,
ಬೆಳ್ಳಿಯ ಸಾಸ್ತ್ರ ಹುಂಜನಾಗಿ ಉದಯವಾಗು ಮಗೂ
ಬೊಲ್ಯೊಟ್ಟು ತಾವು ಕಟ್ಟಿನಲ್ಲಿ (ಮೂಲತಾಣ) ಬಡಗಣಕ್ಕೆ ಹೋದ ಗೆಲ್ಲಿನಲ್ಲಿ ಬಿಳಿಯ ಬುಗುರಿ ಮರದಲ್ಲಿ ಕುಳಿತು
ಪೂವೆಯ (ಹುಣ್ಣಿಮೆಯ ಮುನ್ನಾ ದಿನ) ದಿನದಂದು ರೆಕ್ಕೆ ಬಡಿ, ಹುಣ್ಣಿಮೆಯ ದಿನದಂದು ಕೂಗು
ಸತ್ತ್ ಗುತ್ತಿಗೆ ಸಾವಿರ ತರದ ರೋಗ ಹಾಕು
ನೋಟ ನಿಮಿತ್ತ (ಜ್ಯೋತಿಷ್ಯ)ದಲ್ಲಿ ಕಾಣಿಸಿಕೋ
ಸ್ಥಾನಮಾನ ಗರ್ಭಗುಡಿ ಕಟ್ಟಿಸಿಕೋ ಎಂದು ಹೇಳುತ್ತಾರೆ ಸತ್ಯಮಲೋಕಂದ ಸಿರಿ
(ಪುಟ 328).

ಘಟ್ಟದ ಬದಿಯಿಂದ ಹಿಡಿದು ಸಮುದ್ರದ ಬದಿಯವರೆಗೆ ಸೂರ್ಯೋದಯದಿಂದ ಚಂದ್ರೋದಯದವರೆಗೆ ನಿನ್ನ ದೃಷ್ಟಿ ಹಾಕಿಕೊಂಡಿರು ಎನ್ನುತ್ತಾ ಸಿರಿ ಕುಮಾರನನ್ನು ಮಾಯ ಮಾಡುತ್ತಾರೆ.

ಅಷ್ಟು ಹೊತ್ತಿಗೆ ದಾರು ನಾನು ಕೈಯಲ್ಲಿ ಎತ್ತಿ ಆಡಿಸಿದ ಮಗು. ಅದು ನನ್ನಿಂದ ದೂರವಾಯಿತು. ನನಗೂ ಒಂದು ದಾರಿ ತೋರಿಸಿ ಅಕ್ಕನವರೇ ಎನ್ನುತ್ತಾಳೆ. ಸಿರಿ ನಿನ್ನನ್ನೂ ಇಲ್ಲಿಂದ ಮುಂದಕ್ಕೆ ನಾನು ಕರೆದುಕೊಂಡು ಹೋಗುವುದಿಲ್ಲ. ನನ್ನ ಉಳಿದ ಕೆಲಸವನ್ನು ಸಾರ್ಥಕ ಮಾಡಿಕೊಳ್ಳುತ್ತೇನೆ ಎಂದು ಹೇಳಿ ಕುಮಾರನನ್ನು ಮಾಯ ಮಾಡಿದ ರೀತಿಯಲ್ಲೇ ದಾರುವಿನ ನಡು ನೆತ್ತಿಗೂ ಕೈಕೊಟ್ಟು ಮಾಯ ಮಾಡಿ ಅವಳಿಗೊಂದು ದಾರಿ ಹೇಳಿದರು.

ತುಳುಪಠ್ಯ
ನಿಕ್ಕೊಂಜಿ ಎಡ್ಡೆ ತಾನಮಾನ ತೋಜಿಪಾಬೆ ಯಾನ್
ಬೋಲ ಬೊಲ್ಮಡ್ ಇನ್ನ ಮುಂಡೇರ್ ಕಾಪು ಕಡಂದಾಲೆ
ಕುಂಟಲಾಡಿ ಸತ್ತ್ ಗುತ್ತುಡು ಬರ್ಕೆಡ್
ಜಾಲ್‌ಡ್ ಈಯೆ ಜಾಲ ಕೊರತ್ತಿಯಾದ್ ಇಪ್ಪುಲ
ತನೆತ್ತ ಪೆತ್ತಗ್ ಪೀಡನೆ ಕೊರೊನು
ಬಂಜಿನ ಪೊಣ್ಣುಲೆಗ್ ಪೀಡನೆ ಕೊರೊನು
ನೆನೆತ್ತ್‌ನಲ್ಪ ನೆಲೆ ಆವೊನ್ಲಾ ಬಲಿಬೋಗೊ ಓ ಬೋಜನೊ ದೆತ್ತೊನು ಓ

ಯಿಪ್ಪುಲ ದಾರೂ ಪಂಡೆರ್ ಸತ್ಯಮಲೋಕಂದ ಸಿರಿಯೇ
ಕುಡುಪ್ಪು ನನ ಓ ದೇವಸ್ಥಾನೊಡು ವೊರ್ವರೊ ಬಾಗೊಡು
ಓ ಮಾಕಾಲಿಯಬ್ಬೆಂದ್ ಪುದರ್ ದೆತ್ತೊನು ಇಪ್ಪುಲ ದಾರುಂದ್ ಪಂಡೆರ್ ಓ
ಸತ್ಯಮಲೋಕಂದ ಸಿರಿಯೇ ತಾನ್
ಬೋಲದ ಪದವುಡು ಓ ಗೋಲಿದ ಮುದೆಲ್‌ಡ್ ಮಾಯೊ ಆದ್ ಪೋಲ ಪಂಡೆರ್
ಬೂಮಿಗ್ ದಾನೋ ತರ್ತ್‌ನ ಉಂಡೂ ಸತ್ಯಮಲೋಕಂದ ಸಿರಿಯೇ

ಕನ್ನಡಾನುವಾದ
ನಿನಗೊಂದು ಒಳ್ಳೆಯ ಸ್ಥಾನಮಾನ ತೋರಿಸುತ್ತೇನೆ ನಾನು
ಬೋಲ ಬೊಳ್ಮ ಇನ್ನ ಮುಂಡೇರ್ ಕಾಪು ಕಡಂದಾಲೆ
ಕುಂಟಲಾಡಿ ಸತ್ತ್‌ಗುತ್ತು ಬರ್ಕೆಯಲ್ಲಿ
ಅಂಗಳದಲ್ಲಿ ನೀನು ಜಾಲ ಕೊರತಿಯಾಗಿ ಇರು
ಗಬ್ಬದ ದನಗಳಿಗೆ ಪೀಡನೆ ಕೊಡುತ್ತಾ
ಬಸುರಿ ಹೆಂಗಸರಿಗೆ ಪೀಡನೆ ಕೊಡುತ್ತಾ
ನೆನೆದಲ್ಲಿ ನೆಲೆಯಾಗುತ್ತಾ ಬಲಿಬೋಗ ಭೋಜನ ತೆಗೆದುಕೊಂಡಿರು ಓ
ದಾರು ಎಂದರು ಸತ್ಯಮಲೋಕಂದ ಸಿರಿ
ಕುಡುಪು ದೇವಸ್ಥಾನದ ಒಂದು ಭಾಗದಲ್ಲಿ
ಮಾಹಾಕಾಳಿಯಬ್ಬೆ ಎಂಬ ಹೆಸರು ಪಡೆದು ಇರು ದಾರು ಎಂದರು
ಸತ್ಯಮಲೋಕದ ಸಿರಿ ಅವರು ಓ
ಬೋಲದ ಪದವಲ್ಲಿ ಗೋಳಿಯ ಬುಡದಲ್ಲಿ ಮಾಯವಾಗಿ ಹೋಗು ಎಂದರು
ಭೂಮಿಯ ಕೆಳಗೆ ಒತ್ತಿದರು ಸತ್ಯಮಲೋಕಂದ ಸಿರಿ (ಪುಟ 333–334).

ಕುಮಾರನನ್ನು ಹಾಗೂ ದಾರುವನ್ನು ಮಾಯ ಮಾಡುವ ವಿವರಗಳು ಇಷ್ಟು ಸುದೀರ್ಘವಾಗಿ ಬೇರೆ ಪಠ್ಯಗಳಲ್ಲಿ ಲಭ್ಯವಾಗುವುದಿಲ್ಲ.

ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಪಠ್ಯ ತಿಳಿಸುವಂತೆ ಸಿರಿ ಬೋಲದ ಕಾಡಿಗೆ ಬರುತ್ತಾಳೆ. ಬಿಳಿಯ ನೋಕಟೆ ಮರದ ಬುಡದಲ್ಲಿ ಕುಮಾರನಿಗೆ ಮೊಲೆಯುಣಿಸಿ ದಾರುವನ್ನು ಕರೆದು ಕುಮಾರನ ಬಟ್ಟೆ ಒಗೆದುಕೊಂಡು ಬಾ ಎಂದು ಹೇಳಿ ಕಳುಹಿಸುತ್ತಾಳೆ. ಹಾಗೆ ದಾರು ಹೋಗಲು ಮುಗ್ಗೇರರು ಕಡು ಹಾಕಿ (ಒಂದು ರೀತಿಯ ವಿಷದ ಕಾಯಿ ಹಾಗು ಸಸ್ಯಗಳನ್ನು ನೀರಿಗೆ ಬೆರೆಸುವುದು) ಮೀನು ಹಿಡಿದುದರಿಂದ ತೋಡಿನ ನೀರು ಕಲಕಿ ಹೋಗಿತ್ತು. ಬೋಲದ ಕೆರೆಗೆ ಹೋಗಿ ನೋಡುವಾಗ ಅಲ್ಲಿಯೂ ಅದೇ ರೀತಿಯಾಗಿತ್ತು. ಹಾಗಾಗಿ ಬಟ್ಟೆ ಒಗೆಯದೆ ಹಾಗೇ ಬರುತ್ತಾಳೆ ದಾರು. ಇದರಿಂದ ಸಿಟ್ಟುಗೊಂಡ ಸಿರಿ ಇನ್ನು ಮುಂದಕ್ಕೆ ಬೋಲದ ಕಾಡಲ್ಲಿ ಕಳ್ಳಿ ಕನಪಡಿ ಗಿಡಗಳು

ಮೊಳೆಯ ಬಾರದು. ಬೊಲಿಯ ಮುಗ್ಗೇರರು ಬೋಲದ ಊರಲ್ಲಿ ಒಂದು ರಾತ್ರಿ ತಡೆಯಬಾರದು. ಒಂದು ವೇಳೆ ತಡೆದರೆ 'ಮಂಡೆ ಬಾಪೊಡು ತೈಯೊಡುಂದು' (ತಲೆ ಬಾವು ಬಂದು ಸಾಯಬೇಕೆಂದು) ಶಾಪ ಕೊಡುತ್ತಾಳೆ. ಆ ನಂತರ ಸಿರಿಯೇ ತನ್ನ ಕೈಯಲ್ಲಿರುವ ರಾವಿನ್ನ ಗೆಜ್ಜೆಕತ್ತಿ ತೆಗೆದು ನೆಲದಲ್ಲಿ ಹದಿನಾರು ಗೆರೆ ಎಳೆದು ನೀರು ಸೃಷ್ಟಿಸಿ ಕೆರೆಯನ್ನು ನಿರ್ಮಿಸಿ ಮಗುವಿನ ಬಟ್ಟೆ ಒಗೆದುಕೊಂಡು ಬರುತ್ತಾಳೆ.

ಬೋಲದ ಕಾಡಿಗೆ ಸಿರಿ ಹಾಗು ದಾರು ಬಂದು ಆರು ವರ್ಷ ಆರು ತಿಂಗಳಾಗಿದೆ. ಹಕ್ಕಿಯ ರೂಪದಲ್ಲಿ ಮರದಲ್ಲಿದ್ದಾರೆ ಕಾಸಿಂಗರಸರು, ದೇಸಿಂಗರಸರು. ಹೀಗಿದ್ದ ಅಣ್ಣತಮ್ಮಂದಿರಿಗೆ ಒಂದು ದಿನ ನಾವು ಜೋಗ (ಮಾನವ ರೂಪ)ವಾಗಬೇಕು, ಅರಮನೆ ನಿರ್ಮಿಸಬೇಕೆಂಬ ಬಯಕೆಯಾಗುತ್ತದೆ. ಹಕ್ಕಿಗಳಾಗಿದ್ದವರು ಮಾನವ ರೂಪ ತಾಳಿದರು. ಅಣ್ಣ ಬಂಗಾರದ ತಾವರೆಯಲ್ಲಿ ಉದಯವಾದ, ತಮ್ಮ ಬಿಳಿಯ ತಾವರೆಯಲ್ಲಿ ಉದಯವಾದ. ಬೋಲದ ಬಯಲಲ್ಲಿ ಒಂದು ನೆಲ್ಲಿಯ ಮರ ನಿರ್ಮಿಸಿದರು. ನೆಲ್ಲಿಕಾಯಿ ಕೊಯ್ದು ಮೇಲಕ್ಕೆಸೆದು ನಾಲ್ಕು ಸೀಳು ಮಾಡಿ ಒಂದು ಸೀಳಿನಲ್ಲಿ ನೆಲ್ಲಿತೀರ್ಥ ರಚಿಸಿದರು, ಎರಡನೇ ಸೀಳಿನಲ್ಲಿ ಅರುವತ್ತಾರುವರೆ ಕೋಲು ಚಾವಡಿ ಮನೆ ನಿರ್ಮಿಸಿದರು, ಮೂರನೇ ಸೀಳಿನಲ್ಲಿ ಕಾಸಿಗೆ ಹೋದ ಕಪಿಲೆದನ ನಿರ್ಮಿಸಿ, ನಾಲ್ಕನೇ ಸೀಳಿನಲ್ಲಿ ಉಳಿದ ಪರಿಕರಗಳಾದ ಮಾರಿಕಿದೆ (ದೊಡ್ಡಹಟ್ಟಿ), ಕೆರೆ ಇತ್ಯಾದಿ ನಿರ್ಮಿಸಿದರು. ಹೀಗಿರಲು ಅವರಿಗೆ ಕಾಡಿನಲ್ಲಿ ಹೆಣ್ಣ ಧ್ವನಿ ಕೇಳಿಸುತ್ತದೆ. ಅಣ್ಣನಿಗೆ ನೀವು ಓಡಿ ಹೋಗಿ ಮುಂದೆ ತಲಪಿದರೆ ನಿಮಗೆ ಅವಳು, ನಾನು ತಲಪಿದರೆ ನನಗೆ ಎಂಬ ಪಂಥ ಹಾಕಿಕೊಂಡು ಇಬ್ಬರೂ ಓಡಿ ಬರುತ್ತಾರೆ. ಹಾಗೆ ಬಂದ ಕಾಸಿಂಗರಸರನ್ನು ಮುಂದಿನಿಂದ ಬಂದವ ಅಣ್ಣ, ಹಿಂದಿನಿಂದ ಬಂದವ ತಮ್ಮ ಎನ್ನತ್ತಾಳೆ ಸಿರಿ. ಸಿರಿಯಲ್ಲಿ ಅವಳ ಹುಟ್ಟುಕಟ್ಟು, ಬಳಿ ಇತ್ಯಾದಿಗಳನ್ನು ಕೇಳುತ್ತಾರೆ. ನಿಮ್ಮ ಬಳಿ ಇತ್ಯಾದಿಯನ್ನು ಮೊದಲು ತಿಳಿಸಿ ಎನ್ನುತ್ತಾಳೆ ಸಿರಿ.

ತುಳುಪಠ್ಯ

ನಾರಾಯಣ ಸಿರಿಯೇ ಕೇನಿದನ
ಆಜಿವೊರ್ಸೊ ಆಜಿ ತಿಂಗೊಲುಡುಗೆನ
ಯೆಂಕುಲು ಮೆಗ್ಯೆನಾ ಪಲಯೆನಾ
ಬೋಲದ ಕಾಡ್‌ಡ್ ಮರತ್ತ ಮಿತ್ತ್
ಪಕ್ಕಿದ ಒರುವಾದ್ ಬೈಯೊಂದು ಇತ್ತ ಮಗಾ
ಈಯೊಡುದ ವೊರ್ಸೊಡು ಜೋಗೊಗು ಬತ್ತಗೆನಾ
ಮಯಿರ ಗುರಿಕ್ಕ್ ಜತ್ತ್ ಮಯಿರ್‌ದ ಕೊಡಿರೆಂಕೆಡ್ ಬಲಿರೊಂಡೊಗೆನಾ
ಉರೆತ್ತ ಗುರಿಕ್ಕ್ ಜತ್ತ್ ಉರೆತ ಕೊಂಬುಡು ಸಿಗುರೊಂಡೊಗೆನಾ
ಕಡಮದ ಗುರಿಕ್ಕ್ ಜತ್ತ್‌ದ್ ಕಡಮದ ಪೇರ್ ಪರಿಯಗೆನಾ

ಬಂಗಾರ್ದ ತಾಮರೆಡ್ ಯಾನ್ ಬಲಿರೊಂಡೆಗೆನಾ
ಬೊಲಿಯ ತಾಮರಿನ್ನ ಪುರ್ಪೊಡು ಯೆನ್ನ ಮೆಗ್ಯೆ ಬಲಿರೊಂಡೆಗೆನಾ
ಪಣ್ಪೆರ್ ಚತ್ತೇರಿಲು...........

ಕನ್ನಡಾನುವಾದ
ನಾರಾಯಣ ಸಿರಿಯೇ ಕೇಳಿದ್ದಿಯೇ
ಆರು ವರ್ಷ ಆರು ತಿಂಗಳು
ನಾವು ಅಣ್ಣ ತಮ್ಮಂದಿರು
ಬೋಲದ ಕಾಡಲ್ಲಿ ಮರದ ಮೇಲೆ ಹಕ್ಕಿಯ ರೂಪದಲ್ಲಿ ಮೇಯುತ್ತಿದ್ದೆವು
ಈ ವರ್ಷ ನಾವು ಜೋಗಕ್ಕೆ (ಮಾನವ ರೂಪ)ಬಂದೆವು ಮಗಾ
ನವಿಲಿನ ಗುಂಡಿಗೆ ಇಳಿದು ನವಿಲ ತುದಿ ರೆಕ್ಕೆಯಲ್ಲಿ ಹುಟ್ಟಿದೆವು
ಜಿಂಕೆಯ ಗುಂಡಿಗೆ ಇಳಿದು ಅದರ ಕೊಂಬಲ್ಲಿ ಚಿಗುರಿದೆವು
ಕಡವೆಯ ಗುಂಡಿಗೆ ಇಳಿದು ಅದರ ಹಾಲು ಕುಡಿದೆವು
ಬಂಗಾರದ ತಾವರೆಯಲ್ಲಿ ನಾನು ಬೆಳೆದೆ
ಬಿಳಿಯ ತಾವರೆಯ ಹೂವಲ್ಲಿ ನನ್ನ ತಮ್ಮ ಬೆಳೆದ
ಎಂದರು ಚತ್ತೇರಿಗಳು (ಪುಟ 118).

ಹೀಗೆ ತಮ್ಮ ಹುಟ್ಟಿನ ಹಿನ್ನೆಲೆಯನ್ನು ತಿಳಿಸಿದಾಗ ಸಿರಿಯೂ ತಾನು ಹೇಗೆ ಬೆರ್ಮೆರ್ ವರಪ್ರಸಾದದಿಂದ ಹಿಂಗಾರದಲ್ಲಿ ಉದಯವಾದೆ ಎನ್ನುವುದನ್ನು ತಿಳಿಸಿ ನಾನು ಸತ್ಯದ ಮಗಳು, ನೀವೂ ಸತ್ಯದ ಮಕ್ಕಳು ಎನ್ನುತ್ತಾಳೆ. ಬೋಲಬಾರಿ ಅರಮನೆಗೆ ಸಿರಿಯನ್ನು ಕರೆಯಲು ಅವಳು ಹಂದಿಬೇಟೆಗೆ ಬಂದ ನೀವು ನನ್ನನ್ನು ಅರಮನೆಗೆ ಕರೆದುಕೊಂಡು ಹೋದರೆ ಜನ ಹೆಣ್ಣುಬೇಟೆ ಮಾಡಿ ಬಂದರೆಂಬ ಮಾತುಗಳನ್ನು ಆಡಿಯಾರು. ನಾಲ್ಕು ಊರು, ನಾಲ್ಕು ದೇಶ ಸೇರಿಸಿಕೊಂಡು ಸಕಲ ಬಿರುದಾವಳಿ ಗಳೊಂದಿಗೆ ಕರೆದುಕೊಂಡು ಹೋದರೆ ಬಂದೇನು ಎನ್ನುತ್ತಾಳೆ. ಹಾಗೆಯೇ ಅವರು ಬಂದು ಕರೆಯಲು ಕುಮಾರ ತೊಟ್ಟಿಲಲ್ಲಿ ಹಾರಿ ಹಾರಿ ಅಳುತ್ತಾನೆ. ಆಗ ಸಿರಿ

ತುಳುಪಠ್ಯ
ನಾರಾಯಿನ ಬೆರ್ಮೆರೆ ಕೇನಿದರಾ
ಎನ್ನ ಬಾಲೆ ಕುಮಾರೆಗೆನ ಬಾಯಿ ಜತ್ತ್‌ದ್‌ಗೆನ
ಎನಡ ರಡ್ಡ್ ಪತೆರೊ ಪಾತೆರೊಡುಂದು ಪಣ್ಪೆರತ್ತೋ ಸಿರಿಯೇ

ಕನ್ನಡಾನುವಾದ

ನಾರಾಯಣ ಬೆರ್ಮೆರೇ ಕೇಳಿದಿರಾ
ನನ್ನ ಮಗ ಕುಮಾರ ಬಾಯಿಬೀಗ ತೆಗೆದು
ನನ್ನಲ್ಲಿ ಎರಡು ಮಾತು ಮಾತನಾಡಬೇಕೆಂದು ಹೇಳುತ್ತಾರೆ ಸಿರಿ (ಪುಟ 121).

ಆಗ ಕುಮಾರ ಬಾಯಿ ತೆಗೆದು ಈ ರೀತಿ ಹೇಳುತ್ತಾನೆ. ಸತ್ಯನಾಪುರವನ್ನು ನಾಶಮಾಡಿ ನನ್ನನ್ನು ಹೊರಿಸಿಕೊಂಡು ಬಸಲೂರಿಗೆ ಬಂದಿರಿ. ತಂದೆಗೆ ಬತ್ತಕಟ್ಟಿಸಿ ಬರ ಹೇಳಿದಿರಿ. ರಕ್ಷಕನನ್ನು ತಾ ಎಂದಾಗ ತಂದೆಯವರ ಇಂದ್ರಕ್ಕೆ ಹುಟ್ಟಿದ ನನ್ನನ್ನೇ ರಕ್ಷಕನಾಗಿ ಎದುರು ಹಿಡಿದಿರಿ. ಅಲ್ಲಿಂದ ಹೊರಟು ಬೋಲದ ಕಾಡಿಗೆ ಬಂದ ನಿಮಗೆ ಸಹೋದರರೂ, ನನಗೆ ಮಾವನವರೂ ದೊರೆತರು. ತಾಯಿಯವರೇ ನೀವು ಕೊಟ್ಪರಾಡಿಯ ಕೊಡ್ಸರಾಳ್ವರನ್ನು ಎರಡನೇ ಮದುವೆಯಾಗಿ ನನಗೊಂದು ತಂಗಿಯನ್ನು ಹೆತ್ತು ಕೊಡುವಿರಿ. ಮುಂದಕ್ಕೆ ನೀವು ನನ್ನ ಕಾಲ ಬುಡಕ್ಕೇ ಬರಲಿದ್ದೀರಿ. ಒಂದು ಅಪ್ಪನಿಗೆ ಹುಟ್ಟಿ ಇನ್ನೊಬ್ಬನ ಹೆಸರು ಕರೆಯಲಾರೆ ಎಂದು ತನ್ನ ತಾಯಿಯಿಂದಾದ ಎಲ್ಲ ಹಿಂದಿನ ಘಟನೆಗಳನ್ನು ವಿವರಿಸಿ ಬೋಲದ ಕಾಡಲ್ಲಿ ಮಾಯ ಮಾಡುವಂತೆ ಕೇಳಿಕೊಳ್ಳುತ್ತಾನೆ. ಮಾಯ ಮಾಡುವ ಮೊದಲು ನನ್ನ ತಂದೆಯ ಬಳಿಯ ಹಾಲು ತಂದು ಕುಡಿಸಿ ಎನ್ನುತ್ತಾನೆ ಕುಮಾರ.

ತುಳುಪಠ್ಯ

ಎನ್ನ ಅಮ್ಮೆರೆ ಬರಿತ್ತ ಪೇರ್ ಎಂಕ್ ಕೊನತ್ತ್‌ದ್ ಕೊರೊಡು ಅಪ್ಪೆರೆ ಈರ್
ಇನಿ ಎನನ್ ಮಾಯೊ ಬೆನೊಡುಗೆನ
ಇನಿ ಬೊಲ್ಯೊಟ್ಟುಡು ಬೊಲಿಯ ಬೊಗರಿದ ಮರತ್ತ ಮುದೆಲ್‌ಡ್ಗೆನ
ಬೊಲಿಯ ಸಾತ್ರ ಪೂಂಜೆಯಾದ್ ಯಾನ್ ಕೆಲೆಪುನಗ
ಕೋಟಿಪೂಂಜೆ ಕುಮಾರೆ ಬೈದಿನೀಂದ್ ಯಾನ್ ಪನ್ಪಾವೆ ಅಪ್ಪೆರೇ
ಬಲತ್ತ್‌ಡ್ದ್ ದಲ್ಯ ಈರೆಗ್ ಪಾಡಾವೆ ಯಾನ್
ಎನನ್ ಒರೊದೆಕ್ ಮಾಯೊ ಬೆನ್ಲೆ

ಕನ್ನಡಾನುವಾದ

ನನ್ನ ತಂದೆಯವರ ಬಳಿಯ ಹಾಲು ತಂದು ನನಗೆ ಕೊಡಬೇಕು ತಾಯಿಯವರೇ ನೀವು
ಇಂದು ನನ್ನನ್ನು ಮಾಯ ಮಾಡಬೇಕು
ಇಂದು ಬೊಲ್ಯೊಟ್ಟಲ್ಲಿ ಬಿಳಿಯ ಬುಗರಿ ಮರದ ಬುಡದಲ್ಲಿ
ಬಿಳಿಯ ಸಾಸ್ತ್ರ ಹುಂಜನಾಗಿ ನಾನು ಕೂಗುವಾಗ

ಕೋಟಿಪೂಂಜ ಬಂದದ್ದೆಂದು ನಾನು ಹೇಳಿಸಿಯೇನು ತಾಯಿಯವರೇ
ಬಲದ ದಲ್ಯ ನಿಮಗೆ ಹಾಕಿಸಿಯೇನು
ನನ್ನನ್ನು ಒಮ್ಮೆಗೆ ಮಾಯ ಮಾಡಿಬಿಡಿ (ಪುಟ 123).

ಈ ಮೇಲಿನ ಮಾತುಗಳಿಂದ ಸಿರಿಯ ಎಲ್ಲ ವಿಚಾರಗಳನ್ನು ಕುಮಾರ ಒಪ್ಪಿಕೊಂಡಂತಿಲ್ಲ. ತಂದೆಯವರಿಗೆ ಬರಹೇಳಿದ ಕ್ರಮ, ಮಗುವನ್ನೇ ತಂದೆಗೆ ತನ್ನ ವಾರೀಸುದಾರನೆಂದು ತೋರಿಸಿದ ರೀತಿ, ಬೋಲಬಾರಿ ಚತ್ತೇರಿಗಳ ಅರಮನೆಗೆ ಹೊರಡಲು ಸಿದ್ಧವಾದ ಸಿರಿಯು ನಿರ್ಧಾರ, ಕೊಡ್ಸರಾಳ್ವರನ್ನು ಎರಡನೇ ಮದುವೆಯಾಗುವ ವಿಚಾರ ಇದೆಲ್ಲವನ್ನೂ ತಾಯಿಗೆ ಹೇಳಿಯೇ ಮಾಯಮಾಡಿ ಎನ್ನುತ್ತಾನೆ. ಮಾಯವಾಗುವ ಮೊದಲು ತನ್ನ ತಂದೆಯ ಬಳಿಯವರ ಹಾಲು ಕೊನೆಯದಾಗಿ ಕುಡಿಯಬೇಕೆಂಬ ಬಯಕೆಯನ್ನು ವ್ಯಕ್ತಪಡಿಸುವುದನ್ನು ನೋಡಿದಾಗ ತಂದೆಯ ಪರವಾದ ಒಲವು ಕುಮಾರನಿಗಿದ್ದಂತೆ ಕಾಣಿಸುತ್ತದೆ.

ದಾರುವನ್ನು ಸಿರಿ ಕಳುಹಿಸಿ ಕೆಳಗಿನ ಕೊರೆದುಮನೆ ಬಿಟ್ಟು ಮೇಲಿನ ಕೊರೆದು ಮನೆಯಿಂದ ಕುಮಾರನಿಗೆ ನನ್ನ ಮದುಮಗನ ಬಳಿಯ ಹಾಲು ಒಂದು ಕುಡ್ತೆ ತಾ. ಆತ ಹೊಟ್ಟೆನೋವಿನಿಂದ ನರಳುತ್ತಿದ್ದಾನೆ ಎಂದು ಹೇಳಿ ಕಳುಹಿಸುತ್ತಾಳೆ. ಕೆಳ ಕೊರೆದಿಗೆ ಬಂದು ಕೇಳಲು ಅವರು ಹಾಲಿಗೆ ಹೆಪ್ಪು ಹಾಕಿ ಆಗಿದೆ ಎನ್ನುತ್ತಾರೆ. ಮೇಲಿನ ಕೊರೆದು ಮನೆಯ ಬಸಲೂರ ಕಾಂತಾಳ್ವನ ಆರ್ಯಬನ್ನಾಯ ಬಳಿಯ ಹಾಲು ತೆಗೆದುಕೊಂಡು ಹೋಗುತ್ತಾಳೆ.

ತುಳುಪಠ್ಯ

ನಾರಾಯಣ ಮಗ ದಾರು ಕೇನಿದನಗೆನ
ಸಿರಿಯಾಂಡಲ ಪುತ್ರ ಬನ್ನಾಯ ಬರಿತಾಲ್‌ಗೆನ
ಎಂಕುಲಾಂಡಲ ಆರ್ಯ ಬನ್ನಾಕುಲುಗೆನ
ಕುಮಾರನ ಅಮ್ಮೆರೆನ ಬರಿ ಆರ್ಯ ಬನ್ನಾಯೆಗೆನ
ಅಮ್ಮನ ಬರಿತ ಪೇರ್ ಕೊರೊಲಿಂದ್ ಕೊರೆದ್ದ್‌ದ ಇಲ್ಲಡ್ ಪಣ್ಪೆರ್

ಕನ್ನಡಾನುವಾದ

ನಾರಾಯಣ ಮಗು ದಾರು ಕೇಳಿದಿಯೇ
ಸಿರಿಯಾದರೋ ಪುತ್ರ ಬನ್ನಾಯ ಬಳಿಯವಳು
ನಾವಾದರೋ ಆರ್ಯಬನ್ನಾಯ ಬಳಿಯವರು
ಕುಮಾರನ ತಂದೆಯ ಬಳಿ ಆರ್ಯಬನ್ನಾಯ
ತಂದೆಯ ಬಳಿಯವರ ಹಾಲು ಕೊಡಬಹುದೆಂದು ಕೊರೆದು ಮನೆಯವರು ಹೇಳುತ್ತಾರೆ
(ಪುಟ 123).

ದಾರು ತಂದು ಕೊಟ್ಟ ಹಾಲನ್ನು ಸಿರಿ ಕುಮಾರನಿಗೆ 'ಇದು ನಿನ್ನ ತಂದೆಯ ಬಳಿಯ ಹಾಲು' ಎಂದು ಹೇಳಿ ಕುಡಿಸುತ್ತಾಳೆ. ಹಾಲು ಕುಡಿದ ಕುಮಾರ ಮಾಯವಾಗಿ ಬೊಲ್ಯೊಟ್ಟಲ್ಲಿ ನೆಲೆಯಾಗುತ್ತಾನೆ. ಬೊಲ್ಯೊಟ್ಟಲ್ಲಿ ತಾನು ಪಾರ(ಕಾವಲು) ಹಾಕಿ ತಾನು ಬಂದಿರುವುದನ್ನು ತಿಳಿಸುತ್ತಾನೆ. ಬಲ್ಯಾಯ ಬಲ್ಮೆ (ಜ್ಯೋತಿಷ್ಯ)ಯಲ್ಲಿ ಕೇಳಲು ಕುಮಾರ ಬಂದಿರುವ ವಿಚಾರ ಗೊತ್ತಾಗಿ ಆತನಿಗೆ ಸ್ಥಾನ ಕಟ್ಟಿಸಿ ಊರವರು ನಂಬುತ್ತಾರೆ. ದಾರುವನ್ನೂ ಮಾಯಮಾಡಿ ಜಾಲಬೈಕಡ್ತಿಯಾಗಿ ವರ್ಷದಿಂದ ವರ್ಷಕ್ಕೆ ಗೆರಸೆಯಲ್ಲಿ ಎಡೆ ತೆಗೆದುಕೊಳ್ಳುವಂತೆ ವರನೀಡಿ ಸಿರಿ ಸತ್ಯದಂಡಿಗೆಯಲ್ಲಿ ಕುಳಿತು ಬೋಲಮಲ್ಲಿಗೆಗೆ ಹೋಗುತ್ತಾಳೆ.

ಅಮೃತರ ಸಂಗ್ರಹಿತ ಪಠ್ಯದಲ್ಲಿ ಸಿರಿ ಕುಮಾರನ ತೊಟ್ಟಿಲು ಹೊರಿಸಿಕೊಂಡು ಬಸಲೂರಿಂದ ಹೊರಟು ಅಬ್ಬನಡ್ಕದ ಅಸ್‌ರ್‌ಬೋಳಂದ ಪದವಿಗೆ ಬರುತ್ತಾಳೆ. ಸಿರಿಗೋಳಿಯ ಮರದ ಮೂಡಣದ ಗೆಲ್ಲಿಗೆ ಕುಮಾರನ ತೊಟ್ಟಿಲು ಕಟ್ಟಿ ನಾರಾಯಣ ಪದ ಹಾಡುತ್ತಾಳೆ. ಈ ಸ್ವರದನಿ ಬೋಲಮಲ್ಲಿಗೆಯಲ್ಲಿರುವ ಕರಿಯ ಕಾಸಿಂಗ, ಬೊಲಿಯ ದೇಸಿಂಗ ಚತ್ತೇರಿಗಳಿಗೆ ಕೇಳಿ ಅವರು ಹುಡುಕಿಕೊಂಡು ಬರುತ್ತಾರೆ. ಹೀಗೆ ಬರುವಾಗ ಸಿರಿ ಎಲೆಅಡಿಕೆ ತಿಂದು ದಾರಿಯಲ್ಲಿ ಉಗುಳಿದ ಉಗುಳು ನೋಡಿ

ತುಳುಪಠ್ಯ
ಅಯ್ಯಯ್ಯೊ ಪಾಪೊನೆ ಉಂದು ಏರಪ್ಪ ಬಚ್ಚಿರೆ ತಿಂದ್‌ದ್ ಉಬಿತ್ತ್‌ನೆ
ಈ ಉಂಬುಡೆ ಈತ್ ಪೊರ್ಲುಂಡೆಪ್ಪಾ ಆ ಸಿರಿ ಏತ್ ಪೊರ್ಲು ಉಪ್ಪಾಯಲ್‌ಂದ್ ಪಂಡ್‌ದ್
ಮೂಜಿ ಮುಟ್ಟು ದುಂಬು ಬನ್ನಗ ಸಿರಿ ಗೋಲಿದಡಿಟ್ಟ್ ಕುಲ್ಲುದೆರ್

ಕನ್ನಡಾನುವಾದ
ಅಯ್ಯಯ್ಯೋ ಪಾಪವೇ ಇದು ಯಾರಪ್ಪಾ ಎಲೆ ಅಡಿಕೆ ತಿಂದು ಉಗುಳಿದ್ದು
ಈ ಉಗುಳಿನ ಉಂಡೆಯೇ ಇಷ್ಟು ಅಂದವಿದ್ದರೆ ಇನ್ನು ಸಿರಿ ಎಷ್ಟು ಅಂದ ಇರಲಿಕ್ಕಿಲ್ಲ ಎಂದು
ಮೂರು ಹೆಜ್ಜೆ ಮುಂದೆ ಬರುವಾಗ ಸಿರಿ ಗೋಳಿಯಡಿಯಲ್ಲಿ ಕುಳಿತಿದ್ದಾರೆ.

(ಪುಟ 187)

ಸಿರಿಯ ಬದುಕಿನ ವೃತ್ತಾಂತವನ್ನು ಕೇಳಿದಾಗ ಅವಳು ತನ್ನ ಹುಟ್ಟಿನ ಎಲ್ಲ ನೈಜ ವಿವರಗಳನ್ನು ತಿಳಿಸುತ್ತಾಳೆ. ಇದನ್ನು ಕೇಳಿದ ಚತ್ತೇರಿಗಳು ನೀನು ನಮಗಿಂತ ಮೊದಲು ಹುಟ್ಟಿದ್ದರೆ ನಮ್ಮ ಅಕ್ಕ ಎಂದು ತಿಳಿಯುವೆವು. ಅನಂತರ ಹುಟ್ಟಿದ್ದರೆ ತಂಗಿ ಎಂದು ಭಾವಿಸುವೆವು. ನಮ್ಮ ಬೋಲಮಲ್ಲಿಗೆಗೆ ಬಾ. ನಿನಗೆ ಬೇಕಾಗುವಷ್ಟು ಸಂಪತ್ತು ಅಲ್ಲಿದೆ

ಎನ್ನುತ್ತಾರೆ. ಆಗ ಸಿರಿ ನಾನು ಬರಲು ಬಂದೇನು. ಆದರೆ ನನ್ನ ಗರ್ಭದಲ್ಲಿ ಜನನವಾದ ನಲ್ವತ್ತೊಂದು ದಿನದ ಕುಮಾರ ಬಂಗಾರದ ತೊಟ್ಟಿಲಲ್ಲಿ ಮಲಗಿದ್ದಾನೆ. ನಾನು ನಂಬಿದ ಉಳ್ಳಾಯ ಉಳ್ಳಾಕುಳು ಇದ್ದರೆ ಆತ ನನ್ನಲ್ಲಿ ಎರಡು ಮಾತು ಮಾತನಾಡಿಯಾನು. ಆತನ ಒಪ್ಪಿಗೆ ಪಡೆಯದೆ ಬರಲಾರೆ ಎನ್ನುತ್ತಾಳೆ. ಕುಮಾರನಲ್ಲಿಗೆ ಬಂದು ನಾವು ನಂಬಿದ ಉಳ್ಳಾಯ ಉಳ್ಳಾಕುಲು, ನಾಲ್ಕು ಕಾಲಿನ ನಂದಿಗೋಣ ಇದ್ದರೆ ನಿನಗೆ ಮಾಯದ ಶಕ್ತಿ, ಮಾಯದ ಜ್ಞಾನ, ಒಳ್ಳೆಯ ವಚನ ಕೊಟ್ಟು ಪಾಲಿಸುವರು. ನೀನು ಏಳು ಮಗ, ನನ್ನಲ್ಲಿ ನಾಲ್ಕು ಉತ್ತರದ ಮಾತು ಮಾತನಾಡು ಎನ್ನಲು ಕುಮಾರ ತೊಟ್ಟಿಲಲ್ಲಿ ದಡಕ್ಕನೆ ಎದ್ದು ಕುಳಿತುಕೊಳ್ಳುತ್ತಾನೆ. ನೀವು ನನಗೆ ನೀಡದ ವರ ಯಾಕೆ ನೀಡಿದಿರೆಂದು ಕೇಳುತ್ತಾನೆ. ಆಗ ಹೇಳುತ್ತಾಳೆ ಸಿರಿ

ತುಳುಪಠ್ಯ

ನಂಕ್ ದಿಕ್ಕ್ ಇದ್ದಿ ಮಗ ದಿಸೆ ಇದ್ದಿ ಉಣಿಯೆರೆ ಉಣ್ಪು ಇದ್ದಿ ಮಗ
ಪರಿಯೆರೆ ಪೇರ್ ಇದ್ದಿ ಮಗ ಕುಳ್ಯೆರೆ ಅರಮನೆ ಇದ್ದಿ ಮಗ
ಬೋಳ ಮಲ್ಲಿಗೆಡ್ ಕರಿಯ ಕಾಸಿಂಗ ಬೊಳಿಯ ದೇಸಿಂಗ ಚತ್ರಿಲು
ನಮನ್ ಬಾರೀ ಸೌಬಾಗ್ಯೊಡು ತೂಪೆರ್ಗೆ
ನಮ ಆಡೆ ಪೋಯ ಮಗಂದ್ ಕೇನ್ವೆರ್

ಕನ್ನಡಾನುವಾದ

ನಮಗೆ ದಿಕ್ಕಿಲ್ಲ ದೆಸೆ ಇಲ್ಲ ಉಣ್ಣಲು ಅನ್ನ ಇಲ್ಲ ಮಗ
ಕುಡಿಯಲು ಹಾಲು ಇಲ್ಲ ಇರಲು ಅರಮನೆ ಇಲ್ಲ ಮಗ
ಬೋಳ ಮಲ್ಲಿಗೆಯಲ್ಲಿ ಕರಿಯ ಕಾಸಿಂಗ ಬೊಳಿಯ ದೇಸಿಂಗ ಚತ್ತೇರಿಗಳು
ನಮ್ಮನ್ನು ಭಾರೀ ಸೌಭಾಗ್ಯದಿಂದ ನೋಡುತ್ತಾರಂತೆ
ನಾವು ಅಲ್ಲಿಗೆ ಹೋಗೋಣವೇ ಎಂದು ಕೇಳುತ್ತಾಳೆ (ಪುಟ 189).

ಅದಕ್ಕೆ ಕುಮಾರ

ತುಳುಪಠ್ಯ

ಬೋಳ ಮಲ್ಲಿಗೆಡ್ ಏತ್ ಮಲ್ಲ ಸೌಭಾಗ್ಯ ಇತ್ತ್‌ಂಡಲಾ ಅಪ್ಪೆರೆ
ನಮ ಪೋಪಿನಕುಲು ಅತ್ತ್‌ಯೆ ಅಪ್ಪೆರೇ ಯಾನ್ ಬರಯೆ
ಎನನ್ ನಾಯೆರ್ ಪತ್ತ್ ದಪ್ಪಾವೆರ್ ಅಪ್ಪೆರೆ
ಪಂತಿ ಕನಪಾವೆರ್ ಎರ್ಲೆಗ್ ಅರ್ಕಂಜಿ ಮೈಪಾವೆರ್
ಅಮ್ಮೆ ಇದ್ಯಾಂದಿ ಮಗೆ ಕಂಡ್ರೆಕುಟ್ಟಿ ಮಗೆಂದ್ ಪನ್ವೆರ್ ಯಾನ್ ಬರಯೆ ಅಪ್ಪೆರೆ

ಕನ್ನಡಾನುವಾದ

ಬೋಳ ಮಲ್ಲಿಗೆಯಲ್ಲಿ ಎಷ್ಟು ದೊಡ್ಡ ಸೌಭಾಗ್ಯವಿದ್ದರೂ ತಾಯಿಯವರೆ
ನಾವು ಹೋಗುವವರಲ್ಲ ತಾಯಿಯವರೇ ನಾನು ಬರಲಾರೆ
ನನ್ನನ್ನು ನೇಗಿಲು ಹಿಡಿಸಿ ಉಳುಮೆ ಮಾಡಿಸಿಯಾರು ತಾಯಿಯವರೇ
ಹುಲ್ಲು ತರಿಸಿಯಾರು ಜಾನುವಾರುಗಳಿಗೆ ಅಕ್ಕಚ್ಚು ಎರೆಸಿಯಾರು
ಅಪ್ಪ ಇಲ್ಲದ ಮಗ ಹಾದರದ ಮಗ ಎಂದಾರು ನಾನು ಬರಲಾರೆ ತಾಯಿಯವರೇ
(ಪುಟ 189).

ನನಗೊಂದು ವರ ಕೊಡಿ. ನನ್ನನ್ನು ಮಾಯ ಮಾಡಿ ತಾಯಿಯವರೇ. ಅಲ್ಲದೆ 'ಎನ್ನ ಅಮ್ಮೆರೆಗ್ ಒಂಜಿ ಕಲಸೆ ಬಿತ್ತ್‌ಗ್ ರಡ್ಡ್ ಎರುಕ್ಕು ವರ ಕೊರೊಡು ಅಪ್ಪೆರೇಂದ್ ಪತ್ತಾನ ಚಲ ಪತ್ತ್‌ದೆ ಮಗೆ ಸತ್ಯದ ಕುಮಾರೆ' (ನನ್ನ ತಂದೆಯವರಿಗೆ ಒಂದು ಕಲಸೆ ಬೀಜ ಹಾಗೂ ಎರಡು ಎತ್ತಿಗೆ ವರ ಕೊಡಿ ತಾಯಿಯವರೇ ಎಂದು ಛಲ ಹಿಡಿಯುತ್ತಾನೆ).

ಇಲ್ಲಿ ಕುಮಾರ ಆಡಿದ ಮಾತುಗಳನ್ನು ನೋಡುವಾಗ ನಿಜವಾಗಿ ಕುಮಾರನಿಗೆ ತನ್ನ ತಂದೆಯ ಪರ ಒಲವಿದ್ದದ್ದು ತಿಳಿಯುತ್ತದೆ. ಹಾಗಾಗಿಯೇ ತಾನು ಬೋಳಮಲ್ಲಿಗೆಗೆ ಹೋಗಲು ನಿರಾಕರಿಸುವುದರ ಜೊತೆಗೆ ತಾನು ಮಾಯವಾಗಲು ಇಚ್ಛಿಸಿ ಆ ಸಂದರ್ಭದಲ್ಲಿಯೂ ತಂದೆಯವರಿಗೆ 'ಒಂದು ಕಳಸೆ ಬೀಜ ಹಾಗೂ ಎರಡು ಎತ್ತುಗಳ ವರ' ನೀಡುವಂತೆ ತಾಯಿಯಲ್ಲಿ ಛಲ ಹಿಡಿಯುತ್ತಾನೆ. ಅದಕ್ಕೆ ತಾಯಿ

ತುಳುಪಠ್ಯ

ನಿನ್ನ ಅಮ್ಮೆರೆಗ್ ಯಾನ್ ವರ ಕೊರ್ಯರ ಮಗಾ
ನಿನ್ನ ಅಮ್ಮೆರ್ ಕಂಟೆಲ್‌ಗ್ ನಾಯೆರ್ ಪುಗೆಲ್‌ಗ್ ನುಗೊ ಕಟ್ಟೊಂದು
ಏನಿಗ್ ಎನ್ನ ಕಾರಡಿಕ್ಕ್ ಬತ್ತೆರಾ ಆನಿಗ್ ಯಾನ್ ಎಡ್ಡೆ ವರ ಕೊರುವೆಂದ್ ಪಂಡೆರ್

ಕನ್ನಡಾನುವಾದ

ನಿನ್ನ ತಂದೆಗೆ ನಾನು ವರ ಕೊಡಲು ಮಗಾ
ಅವರು ಕುತ್ತಿಗೆಗೆ ನೇಗಿಲು ಭುಜಕ್ಕೆ ನೊಗ ಕಟ್ಟಿಕೊಂಡು
ಎಂದಿಗೆ ನನ್ನ ಕಾಲಡಿಗೆ ಬರುತ್ತಾರೋ ಅಂದು ಒಳ್ಳೆಯ ವರ ನೀಡುವೆನೆಂದು ಹೇಳಿದರು (ಪುಟ 189).

ಸಿರಿ ಬೆರ್ಮೆರ್, ಉಲ್ಲಾಯ ಉಲ್ಲಾಲ್ದಿಯನ್ನು ಸ್ತುತಿಸಿಕೊಂಡು ಸಿರಿಗೋಳಿಯ ಮರದ ಅಡಿಯಲ್ಲಿ ಬಂಗಾರದ ತೊಟ್ಟಿಲಲ್ಲಿ ಮಾಯವಾಗು ಮಗನೇ, ಮೇಲಿನ ಮಿರಿಲೋಕಕ್ಕೆ ಹೋಗು, ಬಿಳಿಯ ಬುಗರಿ ಮರದ ಅಡಿಯಲ್ಲಿ ಬೆಳ್ಳಿಯ ಸಿರಿಗುಡಿ

ಕಟ್ಟಿಸಿ ನಿತ್ಯದ ಪೂಜನೆ ಮಾಡುತ್ತಿರು ಎಂಬ ವರ ಕೊಟ್ಟು 'ತೊಟ್ಟಿಲ್ ಮಿತ್ತ್ ದಕ್ಕ್‌ದ್ ಮಾಯಮಲ್ತೆರ್' (ಕುಮಾರನ ತೊಟ್ಟಿಲನ್ನು ಮೇಲಕ್ಕೆಸೆದು ಮಾಯ ಮಾಡಿದರು). ಈ ವಿವರಗಳು ಬೇರೆ ಪಠ್ಯಗಳಲ್ಲಿ ಇಲ್ಲ.

ದಾರುವನ್ನು ಕರೆದು ನಾವು ಇನ್ನು ಬೋಲ ಮಲ್ಲಿಗೆಗೆ ಹೋಗುವ ಎಂದು ಹೇಳಲು ದಾರು ನೀವು ಹೋಗಿ ಅಕ್ಕನವರೇ, ನಾನೂ ಬರಲಾರೆ.

ತುಳುಪಠ್ಯ

ಎನನ್ ಕಂಜನ ದೆಕ್ಕಾವೆರ್ ಅಂಬಿ ದೆಪ್ಪಾವೆರ್
ಅಂಜಣ ಅಡಿಪ್ಪಾವೆರ್ ದಾಡೆ ಪಂಡ್ದ್ ದೋಡೆ ಕಳೆವೆರ್
ಯಾನ್ ಬರಯೆ ಎಂಕೊಂಜಿ ವರ ಕೊರ್ಲೆಂದ್ ಪಂಡಲ್

ಕನ್ನಡಾನುವಾದ

ನನ್ನಲ್ಲಿ ಪಾತ್ರೆ ತೊಳೆಸಿಯಾರು ಸೆಗಣಿ ತೆಗೆಸಿಯಾರು
ಅಂಗಳ ಗುಡಿಸಲು ಹೇಳಿಯಾರು ದಾಡೆ ಕಳೆದ ದೋಡೆ(ವಾಚಾಳಿ)ಹೆಂಗಸೆಂದು ಹೀಯಾಳಿಸಿಯಾರು
ನಾನು ಬರಲಾರೆ ನನಗೊಂದು ವರ ಕೊಡಿ ಎಂದಳು (ಪುಟ 190).

ನಿನ್ನನ್ನು ಅಬ್ಬನಡ್ಕ ಸಿರಿ ಗೋಳಿಯ ಬುಡದಲ್ಲಿ ಮಾಯ ಮಾಡುತ್ತೇನೆಂದಳು. ನೀನು ಮಾಯದಲ್ಲಿ ಹೋಗು ದಾರು, ಮೇಲಿನಲೋಕದಲ್ಲಿ ನನ್ನ ಮಗ ಸತ್ಯದ ಕುಮಾರ ಬಿಳಿಯ ಬುಗರಿ ಮರದಡಿಯಲ್ಲಿ ಬೆಳ್ಳಿಯ ಸಿರಿಗುಡಿ ಕಟ್ಟಿಸಿ ನಿತ್ಯದ ಪೂಜನೆ ಮಾಡುತ್ತಿದ್ದಾನೆ. ಸಿರಿಗುಂಡದ ಅಂಗಳದ ನಡುವಲ್ಲಿ ನೀನು ಜಾಲಕೊರತಿ (ಅಂಗಳದ ಕೊರತಿ ದೈವವಾಗಿ)ಯಾಗಿ ಅವತಾರ ಆಗು ಎಂಬ ವರ ನೀಡಿ ಕರಿಯ ಕಾಸಿಂಗ ಬೊಳಿಯ ದೇಸಿಂಗರ ಜೊತೆ ಸಿರಿ ಬೋಲಮಲ್ಲಿಗೆಗೆ ಹೋಗುತ್ತಾಳೆ.

ರಾಮಕ್ಕ ಅವರ ಪಠ್ಯದಲ್ಲಿ ಸಿರಿ ಕುಮಾರನ ತೊಟ್ಟಿಲನ್ನು ಬಿಳಿಯ ನೋಕಟೆ ಮರದ ಬಿಳಲಿನಿಂದ ಬುಗರಿ ಮರದ ಗೆಲ್ಲಿಗೆ ಕಟ್ಟಿ ಕುಮಾರನನ್ನು ಮಲಗಿಸಿ ನಾರಾಯಣ ಪದ ಹಾಡುತ್ತಿರುತ್ತಾಳೆ. ಬೋಳ ಮಲ್ಲಿಗೆಯ ಅರಸರಾದ ದೇವು ದೇಸಿಂಗ ಸಣ್ಣ ಮಂಗಲೆ ಕಾರಿ ಮೈಂತನ (ಬೇರೆ ಪಠ್ಯಗಳಲ್ಲಿ ಈ ಹೆಸರುಗಳಿಲ್ಲ) ಇವರಿಗೆ ಕಾಡಿನಲ್ಲಿ ಮೋಳದ ಪಂಜಿಲು (ಬೆದೆಗೆ ಬಂದ ಹಂದಿಗಳು) ಬಂದ ಕನಸು ಬೀಳುತ್ತದೆ. ಅಂತೆಯೇ ಇವರು ಮರುದಿನ ಬೇಟೆಗೆ ಹೋಗಬೇಕೆಂದು ಕೊಟ್ಟರಾಡಿಯ ಕೊಡ್ಸರಾಳ್ವರಿಗೆ ಓಲೆ ಕಳುಹಿಸುತ್ತಾರೆ. ಓಲೆ ನೋಡಿದ ಕೊಡ್ಸರಾಳ್ವರು ಬೇಟೆಗೆ ಬರುತ್ತಾರೆ. ಹೀಗೆ ಬೇಟೆ ಮಾಡುತ್ತಿರಲು ಕಾಡಿನ ಮಧ್ಯೆ ಸಿರಿಯನ್ನು ಕಂಡ ಬೇಟೆ ನಾಯಿಗಳು ನಾಲ್ಕು ಕಾಲಲ್ಲಿ ನಿಲ್ಲುತ್ತವೆ. ಈ ಕಾಡಲ್ಲಿ ಇಷ್ಟು ದೊಡ್ಡ ನರಳುವ ಸದ್ದು ಏನೆಂದು ನೋಡಲು

ಓಡಿ ಬರುತ್ತಾರೆ ಬೋಳದ ಚತ್ತೇರಿಗಳು. ಸಿರಿಯನ್ನು ಕಂಡು ತಂಗಿ ಎಂಬುದಾಗಿ ಸ್ವೀಕರಿಸಿ ಅವಳ ಹುಟ್ಟುಕಟ್ಟನ್ನು ಕೇಳುತ್ತಾರೆ. ಸಿರಿಯ ಹುಟ್ಟುಕಟ್ಟನ್ನು ತಿಳಿದುಕೊಂಡು ತಾವೂ ತಾವರೆ ಕೆರೆಯಲ್ಲಿ ತಾವರೆ ಹೂವಿಂದ ಜನಿಸಿದ ಸತ್ಯದ ಮಕ್ಕಳು ಎಂಬುದನ್ನು ತಿಳಿಸಿ ನಾವು ಕಲ್ಲು ಮಂತ್ರಿಸಿ ಎಸೆದುದರಿಂದ ನಮಗೆ ಬೇಕಾಗುವ ಅರಮನೆ, ಕೃಷಿಭೂಮಿ, ಜಾನುವಾರು ಹಾಗೂ ಪಾತ್ರೆ ಸಾಮಾನುಗಳನ್ನು ಸೃಷ್ಟಿಸಿರುವುದನ್ನು ತಿಳಿಸುತ್ತಾರೆ. ಬೋಲಮಲ್ಲಿಗೆಗೆ ಬನ್ನಿ ನಾವು ಕರೆದುಕಂಡು ಹೋಗುತ್ತೇವೆ ಎನ್ನಲು ಉಳಿದ ಪಠ್ಯಗಳಲ್ಲಿರುವಂತೆ ಕುಮಾರ ಬರಲು ನಿರಾಕರಿಸುತ್ತಾನೆ. ಅಲ್ಲದೆ ಈ ಕೆಳಗಿನ ಮಾತುಗಳನ್ನು ಏಳು ತಿಂಗಳ ಮಗು ಆಡುತ್ತಾನೆ.

ತುಳುಪಠ್ಯ

ಆದಿ ಬಸಲೂರ ಬತ್ತಕೇರಿದರಮನೆಡ್ ಎನ್ನಮ್ಮೆರ್ ಕಾಂತುಪೂಂಜೆರೆನ್
ಒಂಜಿ ದಿನೊತ್ತ ಪಾಪೊ ಕಡೆಸ್‌ಜೀ ಒಂಜಿ ದಿನೊತ್ತ ಪುಣ್ಯೊ ಪಡೆಯಿಜೆರ್
ನಾರಾಯಿನಪ್ಪೆರೇ ಬೊಲ್ಲಿದ ನಾಯೆರ್ ಕೆಕ್ಕಿಲ್ಗ್ ಕಟ್ಟಾಯರ್
ಎಡತ್ತ್ ಬಲತ್ತ್ ಜೋಳಿಗೆ ಪಾಡ್ವಾಯರ್ ಕಾರ್‌ಗ್ ಬೊಲ್ದು ಕುಂಟು ಕಟ್ಟಾಯರ್
ನಾಲಿಲ್ಲ್ ನಟ್ಟಾಯರ್ ಮೂಜಿಲ್ಲ್ ಬೇಡಾಯರ್
ಕೊಟ್ಟರಾಡಿದ ಕೊಡ್ಸರಾಳ್ವಗ್ ರಡ್ಡನೇ ಕಂಡನಿ ಅಡ್ಪೆ
ಆನಿಗ್ ಬಲ್ಲ ಜೋಳಿಗೆ ಪಾಡೊಂದು ಚಂಡಿ ಕೈಟ್ ಪುಂಡಿ ಬಿಕ್ಸೆ ಕೊರ್ಪೆ ಪಂಡರತ್ತಾ
ಎಂಕೊಂಜಿ ತಂಗಡಿನ ಪಲೊ ಉಂಡು ಪಂಡರ್

ಕನ್ನಡಾನುವಾದ

ಆದಿಬಸಲೂರ ಬತ್ತಕೇರಿಯರಮನೆಯಲ್ಲಿ ನನ್ನ ತಂದೆಯವರು ಕಾಂತುಪೂಂಜರು
ಒಂದು ದಿನದ ಪಾಪ ಪುಣ್ಯ ಪಡೆಯಲಿಲ್ಲ ಅವರು
ನಾರಾಯಣ ತಾಯಿಯವರೇ ಬೆಳ್ಳಿಯ ನೇಗಿಲು ಕುತ್ತಿಗೆಗೆ ಕಟ್ಟಿಸಿದಿರಿ
ಎಡ ಬಲದ ಬಗಲಿಗೆ ಜೋಳಿಗೆ ಹಾಕಿಸಿ ಕಾಲಿಗೆ ಬಿಳಿ ಬಟ್ಟೆ ಕಟ್ಟಿಸಿದಿರಿ
ನಾಲ್ಕು ಮನೆಯಲ್ಲಿ ಭಿಕ್ಷೆ ಎತ್ತುವಂತೆ ಮೂರು ಮನೆಯಲ್ಲೆ ಬೇಡುವಂತೆ ಮಾಡಿದಿರಿ
ಕೊಟ್ಟರಾಡಿಯ ಕೊಡ್ಸರಾಳ್ವರನ್ನು ಎರಡನೇ ಗಂಡನಾಗಿ ಪಡೆಯುತ್ತೇನೆ
ಅಂದಿಗೆ ಜೋಳಿಗೆ ಹಾಕಿಕೊಂಡು ಬಾ ಒದ್ದೆ ಕೈಯಲ್ಲಿ ಭಿಕ್ಷೆ ನೀಡುವೆ
ನನಗೊಂದು ತಂಗಿಯ ಫಲವಿದೆ ಎಂದಿರಿ (ಪುಟ 213).

ಇಲ್ಲಿ ಏಳು ತಿಂಗಳ ಮಗ ಕುಮಾರ ತನ್ನ ತಂದೆಯವರ ಕುರಿತಾಗಿ ತಾಯಿಯವರಲ್ಲಿ ಆಡುವ ಮಾತುಗಳನ್ನು ನೋಡುವಾಗ ನಿಜವಾಗಿ ಸಿರಿ ತೆಗೆದುಕೊಂಡಿರುವ ನಿರ್ಧಾರಗಳು ಸರಿಯಾದುದಲ್ಲ ಎಂದು ತಿಳಿಯುತ್ತದೆ. ಕುಮಾರ ತನ್ನ ತಂದೆಯ ಪರವಾಗಿ

ಮಾತನಾಡಿದಂತೆ ಈ ಮೇಲಿನ ಮಾತುಗಳಿವೆ. ತಾಯಿಯ ನಿರ್ಧಾರವನ್ನು ಒಪ್ಪದ ಕುಮಾರ ತಾನು ಬೋಲಮಲ್ಲಿಗೆಗೆ ಬರುವುದಿಲ್ಲ. ನೀವು ಹೋಗಿ ಎನ್ನುತ್ತಾನೆ. ನಾನು ಇನ್ನೊಬ್ಬನನ್ನು ಅಪ್ಪ ಎಂದು ಕರೆಯಲಾರೆ ಎಂದು ಇದಕ್ಕಾಗಿಯೇ ಹೇಳುತ್ತಾನೆ. ಹೀಗಾಗಿ ತನ್ನನ್ನು ಮಾಯ ಮಾಡಲು ತಾಯಿಗೆ ಹೇಳುತ್ತಾನೆ. ತಾಯಿ ಮಗನನ್ನು ಕುರಿತು ನೀನು ಯಾರಿಗೂ ಸಿಗಬೇಡ, ನೋಟನಿಮಿತ್ತಕ್ಕೂ (ಜ್ಯೋತಿಷ್ಯ) ಕಾಣಿಸಿಕೊಳ್ಳ ಬೇಡ. ಇಂದೇ ನೀನು ಬೊಲ್ಯೊಟ್ಟು ಆಲಡೆಗೆ ಹೋಗಿ ಬೆಳ್ಳಿಯ ಮುಗುಳಿಯಲ್ಲಿ ಬಿಳಿಯ ಸಾಸ್ತ್ರ ಹುಂಜನಾಗಿ ಕುಳಿತು ನಡುರಾತ್ರಿಗೆ ಸ್ವರವೆತ್ತಿ ಕೂಗು. ಅಲ್ಲಿ ಬಲಿಬೋಗ ತೆಗೆದುಕೋ ಎಂದು ಹೇಳಿ ಮಾಯ ಮಾಡುತ್ತಾರೆ. ದಾರುವೂ ನನ್ನನ್ನೂ ಮಾಯಮಾಡಿ ಎಂದದ್ದಕ್ಕೆ ನೀನು ಬೋಲಮಲ್ಲಿಗೆಯ ಅರಮನೆಯ ಗ್ರಾಮದಲ್ಲಿ 'ಜಾಲ ಸತ್ಯಾದಿಪ್ಪುಲ, ಒಂಜಿ ದೆಯ್ಯಾದಿಪ್ಪುಲ, ಈ ಕಲ್ಲಾದ್ ಪೋಲ, ಮಾಯಾಲ ಪಂಡೆರ್' (ಅಂಗಳದ ಸತ್ಯವಾಗಿರು, ಒಂದು ದೈವವಾಗಿರು, ನೀನು ಕಲ್ಲಾಗಿ ಹೋಗು) ಎಂಬ ವರದೊಂದಿಗೆ ದಾರುವನ್ನೂ ಮಾಯ ಮಾಡುತ್ತಾಳೆ.

ಲೀಲಾ ಅವರ ಪಠ್ಯದಲ್ಲಿ ಉಳಿದ ಪಠ್ಯಗಳಿಗಿಂತ ಸ್ವಲ್ಪ ಹೆಚ್ಚಿನ ವಿವರಗಳಿವೆ. ಬೋಲದ ಕಾಡಿಗೆ ಹೋದ ಸಿರಿ ಮಗುವಿನ ಬಟ್ಟೆ ಒಗೆಯುವುದಕ್ಕಾಗಿ ಹೊಳೆಗೆ ಹೋಗುತ್ತಾಳೆ. ಅಲ್ಲಿ ಬೋಲದ ಮುಗ್ಗೇರರು ಆಮೆ ಹಿಡಿಯುವುದಕ್ಕಾಗಿ ಹೊಳೆಯ ನೀರಿಗೆ ಮುಂಡೇವು ಗಿಡವನ್ನು ಕಡಿದು ಹಾಕಿ ಮಲಿನಗೊಳಿಸಿದ್ದರು. ಇದರಿಂದ ಸಿಟ್ಟಾದ ಸಿರಿ ಇನ್ನು ಮುಂದಕ್ಕೆ ಬೋಲದ ಊರಲ್ಲಿ ಮುಗ್ಗೇರರು ಇರಬಾರದು. ಇದ್ದರೆ ಅವರಿಗೆ ತಲೆಬಾವು ಬರಬೇಕೆಂದು ಶಾಪ ಕೊಡುತ್ತಾಳೆ. ಬೋಲಬಾರಿ ಚತ್ತೇರಿಗಳು ಕಾಡಿಗೆ ಬೇಟೆಗೆಂದು ಬಂದವರು ಸಿರಿಯನ್ನು ಕಂಡು ಆಕೆಯ ಹುಟ್ಟುಕಟ್ಟನ್ನು ಕೇಳುತ್ತಾರೆ. ಸಿರಿ ಅಜ್ಜನವರ ಸತ್ಯನಾಪುರದ ವಿಚಾರ ತಿಳಿಸಿ 'ಯಾನ್ ಪದಿನಾಜಿ ಸಿಲೆಕಲ್ಲ್, ಪದಿನಾಜಿ ಪಡೆಕಲ್ಲ್ ಮುಪ್ಪತ್ತರಡ್ಡ್ ಕಲ್ಲ್ ಉಡೆದ್ ಉದಿಪ್ಪಾನ ಆಯಿನ ಮೈಯಗೆ ಸಿರಿ' (ಹದಿನಾರು ಸಿಲೆಕಲ್ಲು, ಹದಿನಾರು ಪಡೆಕಲ್ಲು ಮೂವತ್ತೆರಡು ಕಲ್ಲು ಒಡೆದು ಉದಯವಾದ ಮೈಯಗೆ ಸಿರಿ) ಎಂಬುದಾಗಿ ತನ್ನ ಕುರಿತು ಹೇಳಿಕೊಳ್ಳುತ್ತಾಳೆ. ಆಗ ಚತ್ತೇರಿಗಳು ನಾವೂ ಕೂಡಾ 'ಮಲೆಮತ್ತಸೊ ಗಿರಿ ಪರ್ವತೊ ತಾವರಿನ್ನ ಕೆದುಟ್ಟು ಪುಟ್ಟುದು ಕಡಮದ ಪೇರ್ ಪರ್'ದ್ ಪುಟ್ಟಿನಕುಲು (ಮಲೆ ಮತ್ತಸ ಗಿರಿಪರ್ವತ ತಾವರೆಕೆರೆಯಲ್ಲಿ ಹುಟ್ಟಿ ಕಡವೆಯ ಹಾಲು ಕುಡಿದು ಬೆಳೆದವರು) ಎನ್ನುತ್ತಾರೆ ಹಾಗೂ ಸಿರಿಯನ್ನು ಬೋಲಮಲ್ಲಿಗೆಗೆ ಕರೆಯುತ್ತಾರೆ. ಸಿರಿ ಕುಮಾರರ ಮಾತುಕತೆ, ಕುಮಾರ ಬೋಲ ಮಲ್ಲಿಗೆಗೆ ಬರಲು ನಿರಾಕರಿಸುವುದು, ತನ್ನ ತಂದೆಗಾದ ಗತಿಯ ಬಗೆಗೆ ತಾಯಿಗೆ ತಿಳಿಸಿ ತನ್ನನ್ನು ಮಾಯ ಮಾಡುವಂತೆ ಹೇಳುವ ವಿಚಾರ, ಬೊಲ್ಯೊಟ್ಟಲ್ಲಿ ಹೋಗಿ ನೆಲೆಯೂರಲು ತಾಯಿ ತಿಳಿಸುವುದು ಇವೆಲ್ಲ ಉಳಿದ ಪಠ್ಯಗಳಂತೆ ಇದೆ. ದಾರುವನ್ನು ಕುರಿತು

ತುಳುಪಠ್ಯ

ಬೋಲದ ಊರುಡು ಮೈಯೊಲ್ದಿ ಆದ್ ಜಾಲ ಬೈಕಡ್ತಿಯಾದ್
ದಿನಕ್ಕೊಂಜಿ ಇಲ್ಲಡ್ ಕೈಕಂಜಿಲೆನ್ ದೆಂಗ್ ತಪ್ಪಾದ್ ನಾಡ್ದ್‌ಕೊರೊಂದು
ದಿನೊಕ್ಕೊಂಜಿ ಅಗೆಲ್ ದೆತೊಂದು ಇಪ್ಪುಲ

ಕನ್ನಡಾನುವಾದ

ಬೋಳದ ಊರಲ್ಲಿ ಮೈಯೊಲ್ದಿಯಾಗಿ ಜಾಲ ಬೈಕಡ್ತಿಯಾಗಿ
ದಿನಕ್ಕೊಂದು ಮನೆಯಲ್ಲಿ ಜಾನುವಾರುಗಳನ್ನು ತಪ್ಪಿಸಿ ಹುಡುಕಿಸಿಕೊಟ್ಟು
ದಿನಕ್ಕೊಂದರಂತೆ ಎಡೆ ಪಡೆಯುತ್ತಿರು ಎಂದು ವರ ಕೊಟ್ಟು ದಾರುವನ್ನು ಮಾಯ ಮಾಡುತ್ತಾರೆ.

ಕೊಟ್ಟರಾಡಿಯ ಕೊಡ್ಸರಾಳ್ವ, ಸಿರಿಯ ಎರಡನೆಯ ವಿವಾಹ

ಕರ್ಗಿಯವರ ಸಂಧಿಯಲ್ಲಿ ಕೊಡ್ಸರಾಳ್ವರನ್ನು ಕುರಿತಾದ ಮಾಹಿತಿಗಳು ಈ ರೀತಿ ಇವೆ. ಕೊಟ್ಟರಾಡಿ ಕೊಡ್ಸರಾಳ್ವರು ಯೋಗ್ಯದ ಬೀಡಿಗೆ ಭಾಗ್ಯದ ಬೆಳಕು ಬೇಕೆಂದು ಹೆಣ್ಣು ನೋಡಲು ಹೋಗುತ್ತಾರೆ. ಅಂಗಡಿಜಾಲ ಬರ್ಕೆ ಉಜಿಮಾರ ಗುತ್ತು ಬಾಮುಕೆಲ್ಲರ ತಂಗಿ ಸಾಮು ಆಳ್ವೆದಿಯನ್ನು ನೋಡಿ ಹೆಣ್ಣು ನಿಶ್ಚಯಿಸುತ್ತಾರೆ. ಅಮೃತ ಸೋಮೇಶ್ವರರ ಸಂಧಿಯಲ್ಲಿ ಸಾಮುವಿನ ಹುಟ್ಟನ್ನು ಕುರಿತು "ಎಪ್ಪತ್ತೇಳೂವರೆ ಗಂಗೆಯ ಆಚೆಗೆ ಬಿಳಿ ಸಿರಿಹೊನ್ನೆಯ ಮರದ ಪೂರ್ವದ ಮಧೂರು ಮಹಾಲಿಂಗೇಶ್ವರ ದೇವರ ತೀರ್ಥದ ಗಿಂಡಿಯಲ್ಲಿ ಉದಯವಾದವಳು" ಎಂಬುದಾಗಿ ತಿಳಿಸಿ ಇವಳೂ ಸಿರಿಯಷ್ಟೇ ಸತ್ಯವಂತೆ ಎಂದು ಇವಳ ಹುಟ್ಟನ್ನೂ ಅಲೌಕಿಕಗೊಳಿಸಲಾಗಿದೆ. ಆದರೆ ಈ ವಿವರಗಳು ಬೇರೆ ಯಾವುದೇ ಪಠ್ಯಗಳಲ್ಲಿ ಲಭ್ಯವಿಲ್ಲ. ಸಾಮುವಿಗೆ ಮದುವೆಗೆ ಮುಹೂರ್ತ ನೋಡಿ ಕೊಡ್ಸರಾಳ್ವರ ಜೊತೆಗೆ ಮದುವೆ ಜರಗುತ್ತದೆ. ಬಾಮುಕೆಲ್ಲರು ಮದುವೆಯ ಊಟ ಎಲ್ಲರಿಗೂ ಬರಲಿಕ್ಕಿಲ್ಲ ಎಂದು ಬೇಸರದಿಂದಿರಲು ವಿಷಯ ತಿಳಿದ ಸಾಮು ಆಳ್ವೆದಿ ಒಂದೆಲೆ ಅನ್ನವನ್ನು ಕಪಿಲೆ ದನಕ್ಕಿಟ್ಟು ಅಂಗಡಿಜಾಲ ಬರ್ಕೆ ಉಜಿಮಾರ ಗುತ್ತನ್ನು ಬೆಳಗಿದಂತೆ ಕೊಟ್ಟರಾಡಿಯನ್ನೂ ಬೆಳಗಬೇಕೆಂದು ಕೇಳಿಕೊಳ್ಳುತ್ತಾಳೆ. ಹೇಳಿದ ಮಾತು ಗಂಟಲಲ್ಲಿ ಆಗಬೇಕಾದರೆ ಸಾಮು ಆಳ್ವೆದಿಯ ಸತ್ಯದಿಂದ ಊಟ ಬಡಿಸಿದಷ್ಟು ಮತ್ತೂ ಮಿಕ್ಕಿ ಉಳಿಯುತ್ತದೆ. ಆ ನಂತರ ಕೊಟ್ಟರಾಡಿಯಲ್ಲಿ ಸಾಮು ಆಳ್ವೆದಿಯ ಸತ್ಯದಿಂದ ಅನೇಕ ಒಳ್ಳೆಯ ಘಟನೆಗಳು ನಡೆಯುತ್ತವೆ. ಹೀಗೆ ಗಂಡ ಹೆಂಡತಿ ಹತ್ತಾರು ವರ್ಷ ಸಂತೋಷದಿಂದ ಇರಲು ಬೋಳಬಾರಿ ಚತ್ತೇರಿಯರಿಗೆ ತಂಗಿಯೊಬ್ಬಳು ಇದ್ದಾಳೆಂಬ ಸುದ್ದಿ ತಿಳಿದು ಆಕೆಯನ್ನೊಮ್ಮೆ ನೋಡಬೇಕೆಂದು ಕೊಡ್ಸರಾಳ್ವ ಹೋಗುತ್ತಾನೆ.

ಕೊಡ್ಸರಾಳ್ವರು ಬೋಳದರಮನೆಗೆ ನಾನಾ ಕಾರಣಗಳನ್ನು ಹುಡುಕಿ ಆಗಾಗ ಹೋಗಲಾರಂಭಿಸುತ್ತಾರೆ. ಒಂದಾಟ ಚದುರಂಗ ಆಡೋಣವೇ ಎಂದು ಬೋಳಬಾರಿ

ಚತ್ತೇರಿಯರಲ್ಲಿ ಕೇಳಲು ಅದಕ್ಕವರು ಪಂಥವಿಟ್ಟು ಆಡಲು ಒಪ್ಪುತ್ತಾರೆ. ನಾವು ಸೋತರೆ ನಮ್ಮ ತಂಗಿಯನ್ನು ನೀವು ಮದುವೆ ಆಗಬೇಕು, ನೀವು ಸೋತರೆ ನಿಮ್ಮ ತಂಗಿಯನ್ನು ನಮಗೆ ಕೊಡಬೇಕು. (ಹೆಣ್ಣನ್ನು ಪಣಕ್ಕಿಟ್ಟು ಚದುರಂಗ ಆಡುವುದು ಮಹಾಭಾರತದ ದ್ರೌಪದಿಯ ಪೌರಾಣಿಕ ಪ್ರಸಂಗದಂತೆ ಇದೆ).

ತುಳುಪಠ್ಯ

ಏರ್‌ಯೇ ಕೊಟ್ಟರಾಡಿದ ಕೊಡ್ಸರಾಳ್ವ
ಎಂಕುಲು ಸದ್‌ರಂಗೊಡು ಸೋತೊಂಡಾ
ಎಂಕ್ಲೆ ತಂಗಡಿನ್ ಈರೆಗ್ ಕೊರ್ಪೋ
ಈರ್ ಸೋತರ್‌ಂಡ ಈರೆ ತಂಗಡಿನ್ ಎಂಕ್ಲೆಗೇ ಕೊರೊಡುಂದ್
ಬೋಲಬಾರಿ ಚತ್ತಿರಿಲು ಕೇನ್‌ಬೆರ್‌ದೇ

ಕನ್ನಡಾನುವಾದ

ಯಾರು ಕೊಟ್ಟರಾಡಿಯ ಕೊಡ್ಸರಾಳ್ವರೇ
ನಾವು ಚದುರಂಗದಲ್ಲಿ ಸೋತರೆ
ನಮ್ಮ ತಂಗಿಯನ್ನು ನಿಮಗೆ ಕೊಡುತ್ತೇವೆ
ನೀವು ಸೋತರೆ ನಿಮ್ಮ ತಂಗಿಯನ್ನು ನಮಗೆ ಕೊಡುತ್ತೀರೇ ಎಂದು
ಬೋಲಬಾರಿ ಚತ್ತೇರಿಗಳು ಕೇಳುತ್ತಾರೆ (ಪುಟ 276)

ಆಟದ ಮಧ್ಯೆ ಸಿರಿಯನ್ನು ನೋಡುವ ನೆಪದಿಂದ ನೀರು ಬೇಕೆಂದು ಕೇಳುತ್ತಾನೆ ಕೊಡ್ಸರಾಳ್ವ. ಕೆಲಸದ ಹೆಣ್ಣು ತಂದುಕೊಡಲು ತಂಗಿಯನ್ನು ಪಣಕ್ಕಿಟ್ಟು ಚದುರಂಗ ಆಡುತ್ತೀರಿ. ಆದರೆ ಆಕೆ ಎಲ್ಲಿ ಎಂದು ಕೇಳುತ್ತಾನೆ. ಹೀಗಾಗಿ ಸಿರಿಯೇ ನೀರು ತಂದು ಬಾಗಿಲ ಆಚೆಗೆ ನಿಂತು ಹೊರಗಡೆ ಕೈ ಚಾಚಿ ನೀರು ಕೊಡಲು ಆಕೆಯ ಮುಂಗೈಯ ಅಂದನೋಡಿ ಪ್ರಜ್ಞೆ ತಪ್ಪುತ್ತಾನೆ.ಇತ್ತ ಸಾಮು ಆಳ್ವೆದಿಗೆ ತನ್ನ ಗಂಡ ಕೊಟ್ಟರಾಡಿಯಲ್ಲಿ ಕಾವಲು ಹಾಕಿದ್ದಾನೆ ಎಂಬುದು ತಿಳಿಯುತ್ತದೆ. ನಾನಾ ರೀತಿಯಲ್ಲಿ ಆತನಿಗೆ ತಿಳಿಯುವಂತೆ ಬುದ್ಧಿ ಹೇಳುತ್ತಾಳೆ. ಸಿರಿಯು ಗಂಡನನ್ನು ಬಿಟ್ಟು ಬಂದ ಹಿಂದಣ ಕಥೆಯನ್ನೂ ತಿಳಿಸಿ ಹೇಳುತ್ತಾಳೆ. ಆದರೆ ಕೊಡ್ಸರಾಳ್ವ ಈ ಮಾತುಗಳನ್ನು ಕೇಳದೆ ಸಾಮು ಆಳ್ವೆದಿಯನ್ನು ನಾನಾ ಕಾರಣಗಳನ್ನು ಹುಡುಕಿ ಹೊಡೆಯುತ್ತಿದ್ದನೇ ವಿನಃ ತಾನು ಸರಿದಾರಿಗೆ ಬರಲಿಲ್ಲ.

ಇತ್ತ ಬೋಳಬಾರಿ ಚತ್ತೇರಿಯರು ಚದುರಂಗದಲ್ಲಿ ಸೋಲುತ್ತಾರೆ. ಹಾಕಿರುವ ಪಂಥದಂತೆ ಸಿರಿಯನ್ನು ಕೊಡ್ಸರಾಳ್ವರಿಗೆ ಮದುವೆ ಮಾಡಿ ಕೊಡಲು ಸಿದ್ಧತೆ ನಡೆಯುತ್ತದೆ. ಆದರೂ ಈತನ ಶೌರ್ಯ ನೋಡಬೇಕೆಂದು ಬೋಳದರಮನೆಗೆ ಬರುವ ಹೊತ್ತಿಗೆ ಕಾಜುಬಾಜು ನಾಯಿಗಳನ್ನು ಬಿಟ್ಟು ಪರೀಕ್ಷಿಸುತ್ತಾರೆ. ಎಡದಿಂದ ಬಂದ ನಾಯಿಗೆ ಎಡ

ಕಾಲಿನ ಚಪ್ಪಲಿ ಬಲದಿಂದ ಬಂದ ನಾಯಿಗೆ ಬಲಕಾಲಿನ ಚಪ್ಪಲಿ ಎಸೆದು ಕೊಡ್ಸರಾಳ್ವರು ಕಷ್ಟದಿಂದ ಪಾರಾಗುವ ವಿಚಾರ ಕರ್ಗಿಯವರ ಪಠ್ಯದಲ್ಲಿ ಇದೆ.

ಕೊಡ್ಸರಾಳ್ವರ ಆ ನಿರ್ಧಾರದಿಂದ ಬೇಸರಗೊಂಡ ಸಾಮು ಆಳ್ವೆದಿ ಕೊಟ್ಟರಾಡಿಯ ಸಾನೇರಿ ಚಾವಡಿ ಸಿದ್ರ ಮಂಟಪದಲ್ಲಿ ಕಂಚಿನ ದೀಪವೊಂದನ್ನು ಉರಿಸಿಟ್ಟು ಸಿರಿಯಷ್ಟೇ ಸತ್ಯ ನನ್ನಲ್ಲಿಯೂ ಇರುವುದಾದರೆ ಅನ್ಯಾಯದಿಂದ ಬಂದ ಸಿರಿಯ ಬಲದ ಕಣ್ಣಿಗೆ ಇದು ಬಾಣವಾಗಿ ನಾಟಲಿ ಎಂದು ಶಪಿಸಿ ತನ್ನ ಮನೆ ಅಂಗಡಿಜಾಲಬರ್ಕೆಗೆ ಹೊರಟು ಹೋಗುತ್ತಾಳೆ.

ಇತ್ತ ಸಿರಿಯು ಎರಡನೇ ಮದುವೆಯಾಗಿ ಕೊಟ್ಟರಾಡಿ ಅರಮನೆಗೆ ಬರುವ ಮುಕ್ಕಡಾಪು ಮೂಜಿಕರಿಯ ಹೊಳೆ ದಾಟಿ ಬಾಕಿಮಾರು ಗದ್ದೆಯ ಹತ್ತಿರ ಬರುವಾಗ ಸಾಮು ಕೊಟ್ಟರಾಡಿಯಲ್ಲಿ ಉರಿಸಿಟ್ಟ ದೀಪ ಬಾಣದಂತೆ ಸಿರಿಯ ಕಣ್ಣಿಗೆ ನಾಟಿ ನಡೆಯಲಾಗದೆ ಅಲ್ಲೇ ಕುಳಿತುಕೊಳ್ಳುತ್ತಾಳೆ. ನನ್ನ ಅಕ್ಕನವರಾದ ಸಾಮು ಆಳ್ವೆದಿ ಬಂದು ನನ್ನ ಕೈ ಹಿಡಿದು ಕರೆದುಕೊಂಡು ಹೋದರೆ ಮಾತ್ರ ಬರುವೆ. ಇಲ್ಲದೆ ಹೋದರೆ ಬರಲಾರೆ ಎನ್ನುತ್ತಾಳೆ. ಕೊಡ್ಸರಾಳ್ವ ಓಡೋಡಿ ಅಂಗಡಿಜಾಲ ಬರ್ಕೆಗೆ ಬಂದು ಬಾಮುಕೆಲ್ಲರಿಗೆ ವಿಷಯ ತಿಳಿಸಿ ತನ್ನ ತಪ್ಪನ್ನು ಮನ್ನಿಸುವಂತೆ ಬೇಡಿಕೊಂಡು ಸಾಮು ಆಳ್ವೆದಿಯನ್ನು ಕಳುಹಿಸುವಂತೆ ಅಂಗಲಾಚುತ್ತಾನೆ. ಸಾಮುಆಳ್ವೆದಿ ಕೊಡ್ಸರಾಳ್ವನನ್ನು ಪರಿಪರಿಯಾಗಿ ಹಂಗಿಸುವ ವಿವರಗಳು ಇಂತಿವೆ.

ತುಳುಪಠ್ಯ

ನಾರಾಯಿನ ಮದಿಮ್ಮಾಯಾ ನಾರಾಯಿನ ಮದಿಮ್ಮಾಯಾ
ಕೈ ಬಚ್ಚಲಾತ್ ಗುದ್ದ್‌ನಗಾ ಕಾರ್ ಬಚ್ಚಲಾತ್ ದೊಂಕ್‌ನಗ ಮದಿಮ್ಮಯಾ
ಕೆಕ್ಕಿಲ್‌ದ ಕಿಲಬಂದೀ ನುರಿನೇಟ ಓ ಮೂಂಕುದ ಮೂಂಕುತ್ತಿ ರಟ್ಟ್‌ನೇಟಗ್
ಕೈತ ಕೋಂದೆ ಕಾಜಿ ದರಿನೇಟಗ್ ಕಾರ್‌ದ ಕಾರುಂಗಿಲೊ ರಟ್ಟ್‌ದ್ ಪೋನೇಟಗ
ದೊಂಕ್‌ನಗ ಎನ್ನ ಮದಿಮ್ಮಲ್ ಸತ್ಯೊದ ಮದಿಮ್ಮಲ್‌ಂದ್ ಆನಿಗ್ ಪೋಯಿಜತ್ತೇ
ಇನಿಯತ್ತ್‌ಂಡ ಎಲ್ಲೆಲಾ ಓ ಕಡೇತ ಮದಿಮ್ಮಲ್ ಈರೆಗ್‌ಂದೊಲು

ಕನ್ನಡಾನುವಾದ

ನಾರಾಯಣ ಮದುಮಗಾ ನಾರಾಯಣ ಮದುಮಗಾ
ಕೈ ಆಯಾಸಗೊಳ್ಳುವಷ್ಟು ಗುದ್ದುವಾಗ ಕಾಲು ಆಯಾಸಗೊಳ್ಳುವಷ್ಟು ಒದೆಯುವಾಗ ಮದುಮಗಾ
ಕತ್ತಿನ ಕಿಲಬಂದಿ ತುಂಡಾಗುವಂತೆ ಓ ಮೂಗಿನ ನತ್ತು ರಟ್ಟಿ ಹೋಗುವಂತೆ
ಕೈಯ ಬಳೆಗಳು ಒಡೆದು ಹೋಗುವಂತೆ ಕಾಲ ಕಾಲುಂಗುರ ರಟ್ಟಿ ಹೋಗುವಂತೆ
ಒದೆಯುವಾಗ ನನ್ನ ಮದುಮಗಳು ಸತ್ಯದ ಮದುಮಗಳೆಂದು ಅಂದು ತಿಳಿಯಲಿಲ್ಲವೇ
ಇಂದಲ್ಲ ನಾಳೆಯೂ ಓ ಕಡೇಯ ಮಗಮಗಳು ನಾನೇ ನಿಮಗೆಂದಳು (ಪುಟ 306).

ಹೀಗೆ ತನ್ನ ಗಂಡನನ್ನು ಹಂಗಿಸಿ ಕೊನೆಗೆ ತನ್ನ ಅಣ್ಣನ ಮಾತಿಗೆ ಬೆಲೆಕೊಟ್ಟು ಹೊರಟು ಬಂದು ಸಿರಿಯ ಕೈ ಹಿಡಿದು ಎಬ್ಬಿಸಿ ಕೊಟ್ಟರಾಡಿಗೆ ಕರೆದುಕೊಂಡು ಹೋಗುತ್ತಾಳೆ. (ಕರ್ಗಿಯವರ ಪಠ್ಯದಲ್ಲಿ ಸಿರಿಯ ಎರಡನೇ ಮದುವೆಯನ್ನು ಧಾರೆಯ ಮದುವೆ ಎಂದು ಹೇಳಲಾಗಿದೆ. ಈ ಬಗೆಗೆ ಅವರಲ್ಲಿ ವಿಚಾರಿಸಿದಾಗ ಹಾಡುವಾಗ ಹಾಗೆ ತಪ್ಪಾಗಿ ಬಂದಿರಬೇಕು. ಸಿರಿಗೆ ಎರಡನೇ ಮದುವೆ ಕೈ ಹಿಡಿಸುವ (ತುಳುವಿನ ಕೈ ಪತ್ತಾವುನೆ) ಮದುವೆ ಎಂದು ಸರಿಪಡಿಸಿಕೊಳ್ಳಿ ಎಂದು ಹೇಳಿ ಆ ಭಾಗವನ್ನು ಮತ್ತೆ ಪ್ರತ್ಯೇಕವಾಗಿ ಹಾಡಿದ್ದಾರೆ).

ಅಮೃತರ ಪಠ್ಯದಲ್ಲಿ ಸಿರಿ ಬೋಲಮಲ್ಲಿಗೆಯಲ್ಲಿ ಸುಖದಿಂದಿರಲು ಒಂದು ದಿನ ಕರಿಯಕಾಸಿಂಗ ಬೊಲಿಯ ದೇಸಿಂಗ ರಾಯರು ಸಿರಿಯನ್ನು ಹಾಗೇ ಅರಮನೆಯಲ್ಲಿ ಕೂರಿಸಿಕೊಂಡರೆ ನಮಗದು ಯೋಗ್ಯವಲ್ಲ. ಹಾಗಾಗಿ ಸಿರಿಗೆ ಎರಡನೇ ಮದುವೆಮಾಡಿ ಕೊಡಬೇಕೆಂದು ಯೋಚಿಸುತ್ತಾರೆ. ಹೀಗಿರಲು ಒಂದು ದಿನ ಅವರಿಗೆ ಕೆಡ್ಡಾಸ (ತುಳುನಾಡಿನಲ್ಲಿ ಭೂಮಿತಾಯಿಯ ಮುಟ್ಟಿನ ಆಚರಣೆ ಎಂದು ತಿಳಿಯುವ ಹಬ್ಬ)ದ ಬೇಟೆ ಮಾಡದಿರುವ ಕೊರತೆ ಕಂಡುಬರುತ್ತದೆ. ಹೀಗಾಗಿ ತಮ್ಮ ಆತ್ಮೀಯರಾದ 'ಒಂಜಪ್ಪೆ ಬಾಲೆಲ್ಲೆಕ ಕರಿನಕುಲು ನಮ (ಒಂದೇ ತಾಯ ಮಕ್ಕಳಂತೆ ಬೆಳೆದವರು ನಾವು) ಕೊಟ್ಟರಾಡಿಗುತ್ತು ಕೊಡ್ಸರಾಳ್ವರಿಗೆ ಬೇಟೆಗೆ ಬರುವಂತೆ ಓಲೆ ಕಳುಹಿಸುತ್ತಾರೆ. ಓಲೆ ನೋಡಿದ ಕೊಡ್ಸರಾಳ್ವರು ಮಡದಿ ಸಾಮುವನ್ನು ಕರೆದು ಬೋಲಮಲ್ಲಿಗೆಯಿಂದ ಬೇಟೆಗಾಗಿ ಓಲೆ ಬಂದಿದೆ. ನಾವು ಹಿಂದೆ ತುಂಬ ಆತ್ಮೀಯವಾಗಿ ಇದ್ದವರು. ಈಗ ಹೋಗದೆ ತುಂಬ ಸಮಯವಾಯಿತು. ಕೂಡಲೆ ಹೋಗಿ ಬರುವೆ ಎನ್ನುತ್ತಾರೆ. ಅದಕ್ಕೆ ಸಾಮು ವಿರೋಧಿಸಿ ನೀವು ಬೋಲಮಲ್ಲಿಗೆಗೆ ಹೋಗಬಾರದು.

ತುಳುಪಠ್ಯ

ಕರಿಯ ಕಾಸಿಂಗ ಬೊಲಿಯ ದೇಸಿಂಗ ಚತ್ರಿಲು ಪಂಡ
ಮಾನ್ಯ ಕೆರಿನಕುಲುಯೇ ಮದಿಮ್ಮಾಯಾ
ಕಕ್ಕೆಕೋರಿ ಕಾದಾವುನಕುಲು ಕಲುಕಪಟ ಗೊಬ್ಬುನಕುಲು
ಕಂಡಾನ್ಯ ಇಲ್ಲಲ್ ಅಡ್ ಉಣ್ಪೆ ಪೊಣ್ಣನ ನುಪ್ಪು ದೆಪ್ಪಿನಕುಲು
ಪೊಣ್ಣ ಮೇಲ್‌ಡ್ ಪೊಣ್ಣು ಕೊರ್ಪಿನಕುಲುಯೇ ಮದಿಮಾಯಾ
ಇತ್ತೆ ದಾದನಾ ಒಲ್ಪನಾ ಜತ್ತ್ ಪೋಯಿನ ಪೊಣ್ಣನ್ ಲೆತೊಂದು ಬತ್‌ದಿಪ್ಪೊಡು
ಈರೆನ್ ಮಂಕ್‌ಮರ್ಲ್ ಮನ್ಪೆರೆ ಬರೆತಿನಿ ಓಲೆ ಈರ್ ಪೋಯೆರೆ ಬಲ್ಲಿ

ಕನ್ನಡಾನುವಾದ

ಕರಿಯ ಕಾಸಿಂಗ ಬೊಲಿಯ ದೇಸಿಂಗ ಚತ್ತೇರಿಗಳೆಂದರೆ
ನರಹತ್ಯೆ ಮಾಡುವವರು ಮದುಮಗಾ

ಕಾಗೆ ಕೋಳಿಗಳನ್ನು ಕಾದಾಟ ನಡೆಸುವವರು ಸುಳ್ಳು ಕಪಟಿಗರು
ಗಂಡನ ಮನೆಯಲ್ಲಿ ಅಟ್ಟುಂಬ ಹೆಣ್ಣಿನ ಅನ್ನ ತೆಗೆಯುವವರು
ಹೆಣ್ಣಿ ಮೇಲೆ ಹೆಣ್ಣು ಕೊಡುವವರು ಮದುಮಗಾ
ಈಗ ಎಲ್ಲಿಂದಲೋ ಓಡಿಬಂದ ಹೆಣ್ಣನ್ನು ಕರೆದುಕೊಂಡು ಬಂದಿರಬೇಕು
ನಿಮ್ಮನ್ನು ಮಂಕು ಮರುಳು ಮಾಡಲು ಓಲೆ ಬರೆದಿರಬೇಕು, ನೀವು ಹೋಗಬಾರದು
(ಪುಟ 192)

ಎನ್ನುತ್ತಾಳೆ ಸಾಮು. ಅದು ನಿನಗೆ ಹೇಗೆ ಗೊತ್ತು ಎಂದು ಕೇಳಲು ಸಾಮು "ನಾನು ಸತ್ಯದ ಮಗಳು. ನನಗೆ ಉಲ್ಲಾಯ ಉಲ್ಲಾಕುಲು ಜೋಗದ ಈಶ್ವರ ದೇವರು ಮಾಯದ ಸ್ವಪ್ನ ಕೊಟ್ಟು ಪಾಲಿಸಿದ್ದಾರೆ." ನಾನು

ತುಳುಪಠ್ಯ
ಎಲ್ಪತ್ತ ಏಳರೆ ಗಂಗೆದ ಪಿದಾಯಿಡ್ ಬೊಲ್ದು ಸಿರಿಪೊನ್ನೆದ ಮರತ ಮೂಡಾಯಿ ಪೋತಿನ ಗೆಲ್ಲ್‌ಡ್‌ಯೇ
ಮದವೂರ ಮಾಲಿಂಗೇಶ್ವರ ದೇವೆರೆ ಸೀರ್ತದ ಗಿಂಡ್ಯೆಡ್ ಉದ್ಯ ಬೆಂದ್‌ಂಡ್ ಮದಿಮಾಯಾ
ಅವೊಂಜಿ ಸಂಜೀವನ ಗಡ್ಡಿ ಬೊಲ್ದು ಕಮಲದ ಪುರ್ಪ ಆಂಡ್‌ಯೇ ಕೇನಿದರೋ
ಆವೊಂಜಿ ಪುರ್ಪ ಅಂಗರಾಜೆ ಬರ್ಕೆ ಉಜೆಮಾರ ಗುತ್ತುದ
ಬಾಮು ಕಿಲ್ಲೆರೆನ ಬಲತ್ತ ಮರ್ಗಿಲ್‌ಡ್ ಉದಿಪ್ಪನ ಆತ್‌ಂಡ್
ಅವೊಂಜಿ ಪುರ್ಪೊಡು ಯಾನ್ ಏಳ್ ಏಳರೆ ಪ್ರಾಯದ ಮಗಲ್
ಉದಿಯ ಉದಿಪನ ಬೆನ್ತೆ ಸತ್ಯದ ಮಗಲ್ ಯಾನ್

ಕನ್ನಡಾನುವಾದ
ಎಪ್ಪತ್ತೇಳುವರೆ ಗಂಗೆಯ ಹೊರಗೆ ಬಿಳಿಯ ಸಿರಿಹೊನ್ನೆಯ ಮರದ ಮೂಡಣದ ಗೆಲ್ಲಲ್ಲಿ
ಮದವೂರ ಮಹಾಲಿಂಗೇಶ್ವರ ದೇವರ ತೀರ್ಥದ ಗಿಂಡ್ಯೆಯಲ್ಲಿ ಉದಯವಾದ ಮದುಮಗಾ
ಅದೊಂದು ಸಂಜೀವನ ಕಡ್ಡಿ ಬಿಳಿಯ ಕಮಲದ ಪುಷ್ಪವಾಯಿತು ಕೇಳಿದಿರೇ
ಅದೊಂದು ಪುಷ್ಪ ಅಂಗರಾಜೆ ಬರ್ಕೆ ಉಜೆಮಾರಗುತ್ತಿನ
ಬಾಮುಕೆಲ್ಲರ ಬಲದ ಬದಿಯಲ್ಲಿ ಉದಯವಾದ
ಆ ಒಂದು ಪುಷ್ಪದಲ್ಲಿ ಏಳು ಏಳುವರೆ ಪ್ರಾಯದ ಸತ್ಯದ ಮಗಳು ನಾನು
(ಪುಟ 192).

ಹೀಗಾಗಿ ಸಾಮುವಿನ ಹುಟ್ಟನ್ನೂ ಸಿರಿಯಂತೆ ದೈವೀಕರಿಸಲಾಗಿದೆ. ಸಾಮು ಕೊಡ್ಸರಾಳ್ವರ ಮದುವೆಯ ಸಂದರ್ಭದಲ್ಲಿ ಊಟ ಎಲ್ಲರಿಗೆ ಬಾರದಿದ್ದ ಸಂದರ್ಭ ತನ್ನ ಸತ್ಯದ ಮೂಲಕ ಅನೇಕ ಪವಾಡಗಳನ್ನು ತೋರಿಸುತ್ತಾಳೆ. ಸಾಮುವಿನ ಈ ರೀತಿಯ ಹುಟ್ಟನ್ನು ಕುರಿತು ಬೇರೆ ಯಾವುದೇ ಪಠ್ಯಗಳು ತಿಳಿಸುವುದಿಲ್ಲ.

ಸಾಮು ಪರಿಪರಿಯಾಗಿ ಹೇಳಿದ ಮಾತುಗಳನ್ನು ಕೇಳದೆ ಕೊಡ್ಸರಾಳ್ವರು ಬೋಲಮಲ್ಲಿಗೆಗೆ ಹೋಗುತ್ತಾರೆ. ಕರಿಯಕಾಸಿಂಗ ಬೊಲಿಯ ದೇಸಿಂಗ ರಾಯರು ಕೊಡ್ಸರಾಳ್ವರಿಗೆ ಭಾರೀ ಬಿರುದು ಸನ್ಮಾನಗಳನ್ನು ಮಾಡಿ ಮೂರೂ ಜನ ಅಕ್ಕಪಕ್ಕ ತೂಗುಯ್ಯಾಲೆಯಲ್ಲಿ ಕುಳಿತು ಸುದ್ದಿ ಮಾತನಾಡುತ್ತಾ ಇಂದು ಬೇಟೆಗೆ ಹೋಗುವುದು ಬೇಡ. ನಮ್ಮರಮನೆಯಲ್ಲಿ ಒಬ್ಬಳು ಪ್ರಾಯಕ್ಕೆ ಬಂದ ಹೆಣ್ಣು ಇದ್ದಾಳೆ. ನಮ್ಮ ಭಾರೀ ಪ್ರೀತಿಯ ತಂಗಿ ಸಿರಿ. ಆಕೆಯನ್ನು ನೀವು ಮದುವೆಯಾಗಬೇಕೆಂದು ಹೇಳುತ್ತಾರೆ. ಅದಕ್ಕೆ ಕೊಡ್ಸರಾಳ್ವರು ಮನೆಯಲ್ಲಿ ನನ್ನ ಧಾರೆಯ ಹೆಂಡತಿ ಸಾಮು ಇದ್ದಾಳೆ. ಒಂದು ಮದುವೆಯ ಮೇಲೆ ಇನ್ನೊಂದು ಮದುವೆ ಹೇಗೆ ಆಗಲಿ ಎನ್ನುತ್ತಾರೆ. ಆಗ ಚತ್ತೇರಿಗಳು ಮೊದಲನೇ ಹೆಂಡತಿಯನ್ನು ಕಾರಣ ಹುಡುಕಿ ಶಿಕ್ಷಿಸಿದರೆ ಅವಳು ಹೊರಟು ಅವಳ ತವರುಮನೆಗೆ ಹೋಗುತ್ತಾಳೆ. ಯಾವ ರೀತಿಯಲ್ಲಿ ಮನೆಯಿಂದ ಹೊರ ಹಾಕಬೇಕೆಂಬುದನ್ನು ಹೇಳಿಕೊಡುತ್ತಾರೆ.

ಇತ್ತ ಚತ್ತೇರಿಗಳು ಸಿರಿಯಲ್ಲಿ ಕೊಡ್ಸರಾಳ್ವರಿಗೆ ಸಿರಿಗಿಂಡ್ಯೆಯಲ್ಲಿ ಹಾಲು, ನೀರು ತಂದುಕೊಡುವಂತೆ ತಿಳಿಸಲು ಸಿರಿ ನಾನು ಬಾಯಾರಿಕೆ ಕೊಡಬೇಕಾದರೆ ನನ್ನ ಮುಖ ವನ್ನು ಅವರು ಅವರ ಮುಖವನ್ನು ನಾನು ನೋಡಬಾರದು ಎನ್ನುತ್ತಾಳೆ. ನಡು ಚಾವಡಿಯಲ್ಲಿ ಪಟ್ಟೆ ಸೀರೆಯನ್ನು ಪರದೆಯಂತೆ ಅಡ್ಡ ಹಿಡಿಯಿರಿ. ಆಚೆ ಬದಿಯಲ್ಲಿ ಅವರು ನಿಲ್ಲಲಿ, ಈ ಕಡೆ ನಾನು ನಿಂತು ಪರದೆಯ ಆ ಕಡೆಗೆ ನಾನು ಹಾಲು ಕೊಡುತ್ತೇನೆ. ಅವರು ಕೆಳಗೆ ನೋಡಿ ಹಾಲು ತೆಗೆದುಕೊಳ್ಳಬೇಕೆನ್ನುತ್ತಾಳೆ. ಹೀಗೆ ಮಾಡಿ ಕೊಡ್ಸರಾಳ್ವರು ಹಾಲು ತೆಗೆದುಕೊಳ್ಳುವಾಗ ಸಿರಿಯ ಉಂಗುಷ್ಟದ ಅಂದ ನೋಡಿದರು. ಸ್ಮೃತಿ ತಪ್ಪಿ ಕೆಳಗೆಬಿದ್ದರು. ಆಗ ಚತ್ತೇರಿಗಳು ಅವರಿಗೆ ಸ್ಮೃತಿ ಬರಿಸಲು ನಮ್ಮಿಂದ ಸಾಧ್ಯವಿಲ್ಲ ಮಗಾ. ನೀನಾದರೋ ಸತ್ಯದ ಮಗಳು. ಕೊಡ್ಸರಾಳ್ವರನ್ನು ಸ್ಮೃತಿ ಬರುವಂತೆ ಮಾಡು ಎಂದರು. ಅಂತೆಯೇ ಸಿರಿ ಬೆಳ್ಳಿಯ ಸಿರಿಗಿಂಡ್ಯೆಯಲ್ಲಿ ನೀರು ಹಿಡಿದು ತಾನು ನಂಬಿದ ಉಲ್ಲಾಯ ಉಲ್ಲಾಕುಲು, ಲಂಕೆಲೋಕನಾಡ ಜಯವುಲ್ಲ ಬೆರ್ಮೆರ್‌ನ್ನು ನೆನೆದು ಮುಖಕ್ಕೆ ನೀರು ಹಾಕಿದಾಗ ಕೊಡ್ಸರಾಳ್ವರಿಗೆ ಸ್ಮೃತಿ ಬಂದು ಸಿರಿಯ ಮುಖವನ್ನು ನೋಡುತ್ತಾರೆ. ಮುಖವನ್ನು ನೋಡಿದ ಕೊಡ್ಸರಾಳ್ವರು ಚತ್ತೇರಿಯರನ್ನು ಕರೆದು ಎಷ್ಟು ಮಾತ್ರಕ್ಕೂ ಸಿರಿಯನ್ನು ಮದುವೆಯಾಗದೆ ಬಿಡಲಾರೆ ಎಂದು ಹೇಳಿ ಕೊಟ್ಟರಾಡಿಗೆ ಹೊರಟು ಹೋಗುತ್ತಾರೆ. ಅಲ್ಲಿ ಸಾಮುವಿನ ಜೊತೆ ಬೇರೆಬೇರೆ ಕಾರಣಗಳನ್ನು ಹುಡುಗಿ ಜಗಳ ಮಾಡುತ್ತಾರೆ. ಸಾಮುವನ್ನು ಶಿಕ್ಷಿಸುತ್ತಾರೆ. ಇದರಿಂದ ರೋಸಿಹೋದ ಸಾಮು ನಾನು ನನ್ನ ಅಣ್ಣನ ಅರಮನೆಗೆ ಹೋಗುವೆ ಎನ್ನುತ್ತಾಳೆ. ಅದಕ್ಕೆ ಕೊಡ್ಸರಾಳ್ವರು

ತುಳುಪಠ್ಯ
ಈ ಎಂಕ್ ಆಯಿಜಿ ಸಾಮುವೋ
ನಿಕ್ಕ್ ಜತ್ತಿ ಪೋಯಿ ಪೊಣ್ಣಗ್ ಲೆತ್ತ್ ಪಂಡಿ ಬರ
ನಿಕ್ಕ್ ಯಾನ್ ಬರಪಂಡೆ ಸಾಮುವೋ
ಈ ಪಿದಾಡ್ಲ ಪೋಲಯ ಸಾಮುವೋ
ಎನ್ನ ಅರಮನೆಡ್ ಕುಲ್ಯೆರೆ ಬಲ್ಲಿಂದ್ ಪಂಡೆರ್

ಕನ್ನಡಾನುವಾದ
ನೀನು ನನಗೆ ಆಗದು ಸಾಮು
ನಿನಗೆ ಇಳಿದು ಹೋದ ಹೆಣ್ಣಿಗೆ ಕರೆದು ಹೇಳುವ ಬರ
ನಿನಗೆ ನಾನು ಬರ ಹೇಳಿದೆ ಸಾಮು
ನೀನು ಹೊರಡು ಸಾಮು
ನನ್ನ ಅರಮನೆಯಲ್ಲಿ ನಿಲ್ಲಬಾರದು ಎಂದರು (ಪುಟ 196).

ಇದಕ್ಕೆ ಸಾಮು ಬೋಲಬಾರಿ ಚತ್ತೇರಿಯರು ಹೇಳಿಕೊಟ್ಟ ಮಾತು ಎಲ್ಲಿಯವರೆಗೆ ಮುಟ್ಟುತ್ತದೆ ಎಂಬುದನ್ನು ನಾನೂ ನೋಡುತ್ತೇನೆ. ಇನ್ನು ಈ ಅರಮನೆಯಲ್ಲಿ ನಿಲ್ಲಲಾರೆ ಎಂದಳು,

ತುಳುಪಠ್ಯ
ಯಾನ್ ಉದ್ಯ ಉದಿಪಾನ ಬೆಂದಿನ ಸಂಜೀವನದ ಕಡ್ಡಿ
ಉತ್ತರಂದ ಕೋಲು ಬೊಲ್ದು ಕಮಲದ ಪುರ್ಪೊಡು ಸತ್ಯ ಇತ್ತ್ಂಡ
ಎನ್ನ ದೇವೆರ್ ಬೆರ್ಮೆರ್ ಉಲ್ಲಾಯ ಉಲ್ಲಾಕುಲು
ಮದವೂರ ಮಾಲಿಂಗೇಸ್ವರ ದೇವೆರ್ ಉಲ್ಲೆರ್ಂಡ
ಯಾನ್ ಬನ್ನಗ ಈ ಅರಮನೆಡಿತ್ತಿ ಬಸ್ತ್ ಬಾಗ್ಯ ಮಾತ್ರೊ ಒರಿಯೊಡು
ಯಾನ್ ಬತ್ತಿ ಬುಕ್ಕ ಆಯಿನ ಬಸ್ತ್ ಬಾಗ್ಯೊಲು ಪೂರ ಬೂಮಿಗ್ ಎರಗ್ದ್ ಪೋವೊಡು
ತಾರಾಯಿದ ಗಡಿಟ್ಟ್ ಕಬುಲ್ತಿ ಪೆತ್ತದ ನೆಯಿಟ್ಟ್ ತುಡಾರ್ ದೀಯೆರ್
ಯಾನ್ ಪೊತ್ತಾಯಿ ನಂದನ ತೆಕ್ಯೆರೆ ಬಲ್ಲಿ
ಈ ಇಲ್ಲ ಎರಮನೆಗ್ ಎನಡ್ದ್ ಬುಕ್ಕ ಬತ್ತಿನ ಸಿರಿನ ಕಣ್ಣ್‌ಗ್
ಯಾನ್ ಪೊತ್ತಾಯಿ ನಂದಾದೀಪ ಸಪಳ ಆದ್ ಕಂತೊಡು
ಬೂಮಿಗ್ ಎರಗಿನ ಚೆಂಬುಚೆರಿಗೆ ಆಲೆನ ತಿಗಲೆಗ್ ಪಗರಿಯಾದ್ ತಾಗೊಡು
ಕೊಟ್ರಾಡಿಗುತ್ತುಗು ಬಾರಿ ಬಡಸ್ತಾನ ಒಡ್ಡೋನು ಬರೊಡುಂದು
ಕೊರಾನ ಸಾಪ ಕೊರ್ದು ಜತ್ತ್ ಪಿದಾಡೊನು ಪೋತೆರ್ ಸಾಮು ಆಳ್ವೆದಿ

ಕನ್ನಡಾನುವಾದ

ನಾನು ಉದಯವಾದ ಸಂಜೀವನದ ಕಡ್ಡಿ
ಉತ್ತರಂದ ಕೋಲು ಬಿಳಿಯ ಕಮಲದ ಪುಷ್ಪದಲ್ಲಿ ಸತ್ಯ ಇದ್ದರೆ
ನಾನು ನಂಬಿದ ಉಳ್ಳಾಯ ಉಳ್ಳಾಕುಲು ಮದವೂರ ಮಹಾಲಿಂಗೇಶ್ವರ ದೇವರು ಇದ್ದರೆ
ನಾನು ಬರುವಾಗ ಈ ಅರಮನೆಯಲ್ಲಿದ್ದ ಸಂಪತ್ತು ಮಾತ್ರ ಉಳಿಯಬೇಕು
ನಾನು ಬಂದ ಅನಂತರ ತುಂಬಿದ ಸಂಪತ್ತು ಎಲ್ಲ ಭೂಮಿಗೆ ಎರಗಬೇಕು
ತೆಂಗಿನಕಾಯಿಯ ಅರ್ಧಭಾಗದಲ್ಲಿ ಕಪಿಲೆ ದನದ ತುಪ್ಪದಲ್ಲಿ ದೀಪ ಹಚ್ಚಿದಳು
ನಾನು ಹಚ್ಚಿದ ನಂದಾದೀಪ ಆರಬಾರದು
ಈ ಅರಮನೆಗೆ ನನ್ನ ಅನಂತರ ಬಂದ ಸಿರಿಯ ಕಣ್ಣಿಗೆ
ನಾನು ಉರಿಸಿದ ನಂದಾದೀಪ ಈಟಿಯಂತೆ ನಾಟಬೇಕು
ಭೂಮಿಗೆ ಎರಗಿದ ತಾಮ್ರದ ಪಾತ್ರಗಳು ಅವಳೆದೆಗೆ ಬಾಣವಾಗಿ ನಾಟಬೇಕು
ಕೊಟ್ರಾಡಿ ಗುತ್ತಿಗೆ ಭಾರೀ ಬಡತನ ಬಂದೆರಗಬೇಕು
ಕೊಡಬಾರದ ಶಾಪ ಕೊಟ್ಟು ಹೊರಟಿದ್ದಾಳೆ ಸಾಮು ಆಳ್ವೆದಿ (ಪುಟ 196–197).

ಸಿರಿ ಹಾಗು ಸಾಮುವಿನ ಹುಟ್ಟು ಮತ್ತು ಅವರ ಬದುಕಿನ ಪ್ರಸಂಗಗಳನ್ನು ನೋಡುವಾಗ ಇಬ್ಬರಲ್ಲಿಯೂ ಸಾಮ್ಯತೆ ಇರುವುದು ತಿಳಿಯುತ್ತದೆ. ಸಿರಿಯಂತೆ ಸಾಮುವಿನ ಜನನವೂ ಅಸಾಮಾನ್ಯವಾಗಿ ಆಗುವುದು ತಿಳಿಯುತ್ತದೆ. ಜೊತೆಗೆ ಕೊಡ್ಸರಾಳ್ವರಿಂದ ತನಗಾದ ಅನ್ಯಾಯವನ್ನು ಪ್ರತಿಭಟಿಸಿ ಸಾಮು ಸಿರಿಯಂತೆ ಗಂಡನಿಗೆ ಶಪಿಸಿ ಹೋಗುವ ರೀತಿ ನೋಡಿದರೆ ಇಬ್ಬರಲ್ಲಿಯೂ ಸಾಮ್ಯತೆ ಇರುವುದು ಕಾಣುತ್ತದೆ.

ಇತ್ತ ಕೊಡ್ಸರಾಳ್ವರ ಮದುವೆ ಬೋಲಮಲ್ಲಿಗೆಯಲ್ಲಿ ಸಿರಿಯ ಜೊತೆ ನಡೆಯುತ್ತದೆ. ಹೆಣ್ಣೊಪ್ಪಿಸಿಕೊಟ್ಟು ಸಿರಿ ಹಾಗೂ ಕೊಡ್ಸರಾಳ್ವರು ಕೊಟ್ರಾಡಿ ಅರಮನೆಯ ದಾರಿ ಹಿಡಿದು ಬರುತ್ತಾರೆ. ಕಂಬುಲದ ಗದ್ದೆ ದಾಟಿ ಕೆಂದಾಳೆ ಪದ್ಮಕಟ್ಟೆಯ ಸಮೀಪ ಬರಲು ಕೊಟ್ರಾಡಿಯಲ್ಲಿ ಮುಚ್ಚಿರುವ ಬಾಗಿಲು ತೆರೆದು ಬರಲಿಲ್ಲ. ಮನೆಯ ಸಿರಿ(ಸಾಮು) ಇರಲಿಲ್ಲ. ಉರಿಸಿರುವ ನಂದಾದೀಪ ಈಟಿಯಂತೆ ಸಿರಿಯ ಕಣ್ಣಿಗೆ ನಾಟುತ್ತದೆ. ಭೂಮಿಗೆ ಎರಗಿದ್ದ ತಾಮ್ರದ ಪಾತ್ರೆಗಳು ಬಾಣದಂತೆ ಸಿರಿಯ ಎದೆಗೆ ನಾಟುತ್ತವೆ. ಆಗ ಸಿರಿ ಹೇಳುತ್ತಾಳೆ

ತುಳುಪಠ್ಯ

ಏರ್‌ಯೆ ಮದಿಮಯ ಈ ಇಲ್ಲ ಎರಮನೆಡ್
ದುಂಬು ಬತ್ತಿ ಸಿರಿ ಇದ್ಯಾಂದೆ ಯಾನ್ ಮುಟ್ಟಿಕಲ್ಲ್‌ಗ್ ಕಾರ್ ದೀವಾಯೆ
ಈರೆನ ಕೈ ಧಾರೆದ ಮದಿಮಾಳ್ ಬರೊಡು
ಎನ್ನ ಬಲತ್ತ ಕೈಕ್ ಕೈ ಕೊರೊಡು ಯಾನ್ ಈ ಇಲ್ಲ ಅರಮನೆ ಪೊಗ್ಗೊಡು

ಕನ್ನಡಾನುವಾದ

ಯಾರು ಮದುಮಗ ಈ ಅರಮನೆಯಲ್ಲಿ
ಮೊದಲು ಬಂದಿರುವ ಸಿರಿ ಇಲ್ಲದೆ ನಾನು ಮೆಟ್ಟಲಿಗೆ ಕಾಲು ಇಡಲಾರೆ
ನಿಮ್ಮ ಕೈ ದಾರೆಯ ಮಡದಿ ಬರಬೇಕು
ನನ್ನ ಬಲದ ಕೈ ಹಿಡಿದು ಈ ಅರಮನೆ ಪ್ರವೇಶ ಮಾಡಿಸಬೇಕು (ಪುಟ 197–198)

ಎನ್ನುತ್ತಾಳೆ. ಈ ಅರಮನೆ ಇಳಿದು ಹೋಗುವಾಗ ಅವಳಿಗೆ ಕರೆದು ಬರ ಹೇಳಿದ್ದೇನೆ. ಮತ್ತೆ ಹೇಗೆ ಕರೆಯಲಿ ಎಂದಾಗ ಸಿರಿ ನಾನು ನಂಬಿದ ಸತ್ಯ ಇದ್ದರೆ ಎಲ್ಲವೂ ಸರಿಯಾಗುತ್ತದೆ ಎನ್ನುತ್ತಾಳೆ. ಹಾಗೆ ಕೊಡ್ಸರಾಳ್ವರು ಅಂಗಡಿಜಾಲ ಬರ್ಕೆಗೆ ಬಂದು ತನ್ನ ಭಾವನವರಲ್ಲಿ ನಡೆದ ವಿಷಯಗಳನ್ನೆಲ್ಲ ತಿಳಿಸಿ ಸಾಮುವನ್ನು ಕಳುಹಿಸಿ ಕೊಡಬೇಕೆಂದು ಬೇಡಿಕೊಳ್ಳುತ್ತಾರೆ. ಬಾಮುಕೆಲ್ಲರು ಸಾಮುವನ್ನು ಸಮಾಧಾನಿಸಿ ಇಬ್ಬರೂ ಜೊತೆಯಾಗಿ ಕೊಟ್ರಾಡಿಗೆ ಬರುತ್ತಾರೆ. ಅರಮನೆ ಸಮೀಪಿಸುತ್ತಿದ್ದಂತೆ ಸಿರಿಯ ಸತ್ಯದಿಂದ ಸಾಮು ಹಾಕಿರುವ ಬಾಗಿಲು ತೆರೆದುಬರುತ್ತದೆ. ನಂದಿ ಹೋಗಿರುವ ನಂದಾದೀಪ ಉರಿದು ಬರುತ್ತದೆ. ಸಿರಿ ಸಾಮುವನ್ನು ಕುರಿತು ಹೇಳುತ್ತಾಳೆ. ಯಾರು ಅಕ್ಕನವರೇ ನಿಮ್ಮ ಈಟಿಯನ್ನು ಬಲದ ಕೈಯಲ್ಲಿ, ನೀವು ಬಿಟ್ಟ ಬಾಣವನ್ನು ಎಡದ ಕೈಯಲ್ಲಿ ಹಿಡಿದಿದ್ದೇನೆ ನೋಡಿ. ನಿಮ್ಮಷ್ಟು ಸತ್ಯ ನನ್ನಲ್ಲಿಯೂ ಇದೆ. ನನ್ನಷ್ಟು ಸತ್ಯ ನಿಮ್ಮಲ್ಲಿಯೂ ಇದೆ. ಗೆಜ್ಜೆ ಕತ್ತಿಯಿಂದ ಮೂರು ಗೆರೆ ಎಳೆದು ಎರಡು ಗೆರಯಲ್ಲಿ ನಾವು ಜಳಕವಾಗುವ ಕೆರೆ ನಿರ್ಮಿಸಿದೆ, ಇನ್ನೊಂದು ಗೆರೆಯಲ್ಲಿ ಬಟ್ಟೆ ಒಗೆಯುವ ಕಲ್ಲು ನಿರ್ಮಿಸಿದ ನನ್ನ ಸತ್ಯವನ್ನು ನೋಡಿ ಎನ್ನುತ್ತಾಳೆ ಸಿರಿ. ಅದಕ್ಕೆ ಸಾಮು, ಅದು ಸರಿ

ತುಳುಪಠ್ಯ

ಬರ್ಪೆಂದ್ ಪಂಡ್‌ದ್ ಎನ್ನ ಮದಿಮ್ಮಾಯನೊಟ್ಟಿಗೆ ಬತ್ತಾನೆ
ಅಡ್ಪೇಂದ್ ಪಂಡ್‌ದ್ ಅಡಿಯನೆ ಸಿರಿಂದ್ ಪಂಡೆರ್
ದತ್ತ ಕೈ ಸಿರಿಕ್ಕ್ ಕೊರಿಯೆರ್ ಬಲ ಪೋಯಿ ಪಂಡೆರ್
ಅವ ಸಮಯೊಡು ಸಿರಿ ಪಂಡೆರ್ ಏರ್‌ಯೆ ಅಕ್ಕೆರೆ ಕೇನಿದರೋ
ಈರೆ ದತ್ತ ಕೈ ಪತ್ತ್‌ದ್ ಬರ್ಪಿ ಸಿರಿ ಯಾನತ್ತ್
ಬಲತ್ತ ಕೈ ಕೊರ್ಲೆಂದ್ ಪಂಡೆರ್ ಬಾಲಕ್ಕೆ ಸಿರಿ

ಕನ್ನಡಾನುವಾದ

ಬರುತ್ತೇನೆಂದು ತಿಳಿದು ನನ್ನ ಮದುಮಗನ ಜೊತೆಗೆ ಬಂದಿದ್ದಿ
ಗಂಡನನ್ನು ಪಡೆಯುತ್ತೇನೆಂದು ತಿಳಿದು ಪಡೆದಿದ್ದಿ ಸಿರಿ
ಎಡದ ಕೈ ಸಿರಿಗೆ ಕೊಟ್ಟರು ಬಾ ಹೋಗುವ ಎಂದರು

ಆ ಸಮಯದಲ್ಲಿ ಸಿರಿ ಹೇಳಿದರು ಯಾರು ಅಕ್ಕನವರೇ ಕೇಳಿದ್ದೀರೇ
ನಿಮ್ಮ ಎಡ ಕೈ ಹಿಡಿದು ಬರುವ ಸಿರಿ ನಾನಲ್ಲ
ಬಲದ ಕೈ ಕೊಡಿ ಎಂದಳು ಬಾಲಕ್ಕೆ ಸಿರಿ (ಪುಟ 199).

ಸಾಮು ತನ್ನ ಬಲದ ಕೈಕೊಟ್ಟು ಕೊಟ್ರಾಡಿಗುತ್ತಿಗೆ ಬಲದ ಕಾಲು ಹಾಕಿ ಪ್ರವೇಶ ಮಾಡಿಸುತ್ತಾಳೆ. ಕೊಟ್ರಾಡಿಯಲ್ಲಿ ಬಾಲಕ್ಕೆ ಸಿರಿ, ಸಾಮು ಹಾಗೂ ಕೊಡ್ಸರಾಳ್ವರು ಒಮ್ಮತದಿಂದ ಬಾಳುತ್ತಿದ್ದಾರೆ.

ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಪತ್ಯದಲ್ಲಿ ಸಿರಿ ಬೋಲಮಲ್ಲಿಗೆಗೆ ಬಂದು ಹೀಗೆ ದಿನ ಕಳೆಯುತ್ತಿರುವಾಗ ಒಂದು ದಿನ ಕಾಸಿಂಗರಸರು 'ನಮ್ಮ ಸಿರಿಗ್ ತಕ್ಕಂತಿ ಆಣನ್ ತೂದು ಮದಿಮೆ ಮಲ್ಪೊಡುಂದು ಮದಿಪುವೆರ್' (ನಮ್ಮ ಸಿರಿಗೆ ಸರಿಯಾದ ಗಂಡು ನೋಡಿ ಮದುವೆ ಮಾಡಬೇಕೆಂದು ಹೇಳುತ್ತಾರೆ). ಕೊಟ್ರಾಡಿ ಕೊಡ್ಸರಾಳ್ವರಿಗೆ ಓಲೆ ಕಳುಹಿಸಿ ಬರ ಹೇಳುತ್ತಾರೆ. ಹೀಗೆ ಕೊಡ್ಸರಾಳ್ವರು ಬೋಲ ಮಲ್ಲಿಗೆಗೆ ಬಂದು ಹೋಗುತ್ತಿರುವುದನ್ನು ತಿಳಿದ ಸಾಮು ಆಳ್ವೆದಿ ಅಂದು ನಾನು ಬರುವ ಮೊದಲು ಪಡುವಣದಿಂದ ಹೊಕ್ಕ ಕಾಗೆ ಮೂಡಣದಿಂದ ಹೊರ ಬರುತ್ತಿತ್ತು. ಒಂದು ತುಪ್ಪೆ (ಕಣಜ) ಇದ್ದುದು ಈಗ ಜೋಡು ಕಣಜವಾಗಿದೆ. ನಿಮ್ಮ ಹೆಸರು ನಾಲ್ಕು ಊರು, ನಾಲ್ಕು ದೇಶಕ್ಕೆ ಹೋಗಿದೆ. ಈಗೇನು ಕೊಟ್ರಾಡಿಯಲ್ಲಿ ಕಾವಲು ಹಾಕಿದ್ದೀರಿ ಎಂದು ಎಚ್ಚರಿಸುತ್ತಾಳೆ. ಹೀಗಿರಲು ಒಂದು ದಿನ ಕಾಸಿಂಗರಸರು ಒಂದು ಬಾರಿ ಬೋಲಮಲ್ಲಿಗೆಗೆ ಬಂದು ಹೋಗುವಂತೆ ಕೊಟ್ರಾಡಿಗೆ ಓಲೆ ಕಳುಹಿಸುತ್ತಾರೆ. ಓಲೆ ನೋಡಿದ ಆಳ್ವರು ಬೋಲಮಲ್ಲಿಗೆಗೆ ಹೊರಟು ಹೋಗುತ್ತಾರೆ. ಇವರನ್ನು ದೂರದಿಂದ ಕಂಡ ಕಾಸಿಂಗರಸರು ಒಳಗೊಳಗೇ ನಗುತ್ತಾರೆ. ಬಂದ ಕೂಡಲೇ ಸಿರಿಯಲ್ಲಿ ಹಾಲುನೀರು ಕೊಡಲು ಹೇಳುತ್ತಾರೆ. ಈ ಸಂದರ್ಭ ಸಿರಿಯ ಮುಂಗೈಯ ಅಂದ ನೋಡಿದ ಕೊಡ್ಸರಾಳ್ವರು ಸ್ಮೃತಿ ತಪ್ಪುತ್ತಾರೆ. ಇವರನ್ನು ಎಚ್ಚರಿಸಿ

ತುಳುಪತ್ಯ
ಎಂಕಲೆನಾ ಮೋವ ಮೋಕೆಂದ ತಂಗಡಿನ್
ಈರಾಂಡಲಾ ಮದ್ಮೆಂದೆ ಇನಿಲಾವೊಡುಂದು ಮದಿಪ್ಪುವೆರತ್ತೋ
ಬೋಲಬಾರಿ ಚತ್ತಿರಿಲು

ಕನ್ನಡಾನುವಾದ
ನಮ್ಮ ಮೋಹದ ಪ್ರೀತಿಯ ತಂಗಿಯನ್ನು
ನೀವಾದರೋ ಮದುವೆ ಆಗಬೇಕು ಎಂದು ಹೇಳುತ್ತಾರೆ
ಬೋಲಬಾರಿ ಚತ್ತೇರಿಗಳು (ಪುಟ 133).

ಇಂದು ವೀಳ್ಯ ಬದಲಾಯಿಸಿಕೊಳ್ಳಬೇಕು, ನಿಶ್ಚಯ ಮಾಡ ಬೇಕೆಂದಾಗ ಆಳ್ವರು ನನಗೆ ಮದುವೆಯಾಗಿ ಧಾರೆಯ ಹೆಂಡತಿ ಇದ್ದಾಳೆ. ಅವಳು ಬಂದ ಅನಂತರವೇ ಕೊಟ್ರಾಡಿಯಲ್ಲಿ ಸಿರಿ ಸಂಪತ್ತು ತುಂಬಿದೆ. ಒಂದು ಇದ್ದ ಸಿರಿತುಪ್ಪೆ (ಕಣಜ) ಇದ್ದುದು ಏಳು ಆಗಿದೆ ಎನ್ನಲು ಅವಳನ್ನು ಉಪಾಯದಿಂದ ಸೋಲಿಸಿ ಅವಳ ಅಣ್ಣ ಬಾಮುಕೆಲ್ಲರಲ್ಲಿಗೆ ಕಳುಹಿಸಿಕೊಡಿ ಎನ್ನುತ್ತಾರೆ. ಹಾಗೆ ಕೊಟ್ರಾಡಿಗೆ ಹಿಂತಿರುಗಿ ಬಂದ ಕೊಡ್ಸರಾಳ್ವರು ನಾನಾ ಕಾರಣಗಳನ್ನು ತೆಗೆದು ಸಾಮುವನ್ನು ಶಿಕ್ಷಿಸುತ್ತಾರೆ. ಇದರಿಂದ ಬೇಸರಿಸಿಕೊಂಡ ಸಾಮು ಆಳ್ವೆದಿ ನಾನು ಮದುವೆಯಾಗಿ ಬಂದ ಅನಂತರ ಈ ಅರಮನೆಯಲ್ಲಾದ ಭಾಗ್ಯವನ್ನು ನನ್ನ ಅಣ್ಣನವರನ್ನು ಬರಹೇಳಿ ಹೊರಗಿಡಿಸುತ್ತೇನೆಂದು ಹೇಳಿ ಬಾಮುಕೆಲ್ಲರಿಗೆ ಜೋಡು ದೋಣಿಯೊಂದಿಗೆ ಬರುವಂತೆ ಓಲೆ ಕಳುಹಿಸುತ್ತಾಳೆ. ಕೊಟ್ರಾಡಿಗೆ ಹೊರಟು ಬಂದ ಬಾಮುಕೆಲ್ಲರಿಗೆ ಕೊಡ್ಸರಾಳ್ವರು ಸಿರಿಯನ್ನು ಎರಡನೇ ಮದುವೆಯಾಗುತ್ತಿರುವ ವಿಚಾರ ತಿಳಿಸಿ ನಾನು ಬಂದ ಅನಂತರ ಈ ಅರಮನೆಯಲ್ಲಾದ ಏಳು ಸಿರಿ ತುಪ್ಪೆ (ಕಣಜ)ಗಳನ್ನು ದೋಣಿಯಲ್ಲಿ ತುಂಬಿಸಿ ಕೊಟ್ರಾಡಿ ಬಿಟ್ಟು ಹೊರಡುವ ಮುನ್ನ ತೆಂಗಿನ ಕಾಯಿಯ ಅರ್ಧಭಾಗದಲ್ಲಿ ದೀಪವುರಿಸಿ ಸಿರಿ ಬಂದಾಗ ಅವಳ ಕಣ್ಣಿಗೆ ಬಾಣವಾಗಿ ನಾಟುವಂತೆ ಶಪಿಸಿ ಹೊರಟು ಹೋಗುತ್ತಾಳೆ.

ಇದರಿಂದ ಸಂತೋಷಿತರಾದ ಕೊಡ್ಸರಾಳ್ವರು ತನ್ನವರನ್ನು ಕೂಡಿಕೊಂಡು ಬೋಲ ಮಲ್ಲಿಗೆಗೆ ಬಂದು ಸಿರಿಯನ್ನು ಧರ್ಮಧಾರೆಯಾಗುತ್ತಾರೆ. ಹೆಣ್ಣೊಪ್ಪಿಸಿ ಕೊಟ್ಟ ಅನಂತರ ಸತ್ಯದಂಡಿಗೆಯಲ್ಲಿ ಕುಳಿತು ಕೊಟ್ರಾಡಿಗೆ ಬರುತ್ತಾರೆ. ಕಂಬಳದ ಬದುವಿನ ನಿನ್ನಿಪಾದೆಯ ಸಮೀಪಕ್ಕೆ ಬರುವಾಗ ಸಿರಿಯ ಕಣ್ಣಿಗೆ ಸಾಮು ಉರಿಸಿಟ್ಟ ದೀಪ ಈಟಿಯಂತೆ ನಾಟಿ ಮುಂದೆ ಹೋಗಲಾರದೆ ಪನೆತತ್ರ (ಪನೆ ಎಂಬ ಗಿಡದ ಒಲಿಯಿಂದ ಮಾಡಿದ ಕೊಡೆ) ಅಡಿಗೆ ಹಾಕಿ ದಾರಿಯಲ್ಲಿ ಕುಳಿತುಕೊಳ್ಳುತ್ತಾಳೆ. ಸಾಮು ಆಳ್ವೆದಿ ಬಂದು ನನ್ನ ಕೈಹಿಡಿದು ಬಲದ ಕಾಲು ಮುಂದಿರಿಸಿ ಅರಮನೆ ಪ್ರವೇಶ ಮಾಡಿಸಬೇಕೆನ್ನುತ್ತಾಳೆ. ಕೊಡ್ಸರಾಳ್ವರು ಬೇರೆ ದಾರಿಕಾಣದೆ ಅಂಗಡಿಜಾಲ ಬರ್ಕೆಗೆ ಓಡೋಡಿ ಬಂದು ಬಾಮುಕೆಲ್ಲರಲ್ಲಿ ತನ್ನ ತಪ್ಪಿಗೆ ಕ್ಷಮೆಯನ್ನು ಯಾಚಿಸಿ ಸಾಮುವನ್ನು ಕಳುಹಿಸಿಕೊಡುವಂತೆ ವಿಧ ವಿಧವಾಗಿ ಬೇಡಿಕೊಳ್ಳುತ್ತಾರೆ. ಇದರಿಂದ ಮನಸ್ಸು ಕರಗಿದ ಬಾಮುಕೆಲ್ಲರು ಸಾಮುವನ್ನು ಹೋಗು ವಂತೆ ತಿಳಿಸುತ್ತಾರೆ. ಸಾಮು ಬಂದು ನನ್ನ ಕೈ ಹಿಡಿದ ಗಂಡನನ್ನು ಮದುವೆಯಾಗಿ ಬಂದಿದ್ದಿ. ಯಾಕೆ ಕೊಟ್ರಾಡಿಯ ಅರಮನೆ ಪ್ರವೇಶಿಸದೆ ಅರ್ಧದಾರಿಯಲ್ಲಿ ಕುಳಿತಿದ್ದಿ ಎಂದು ಕೇಳಲು ಸಿರಿ ಕೋಪಿಸಿಕೊಂಡು ಅಕ್ಕನವರೇ ನಿಮ್ಮಷ್ಟೇ ಸತ್ಯ ನನ್ನಲ್ಲೂ ಇದೆ. ನಿಮ್ಮನ್ನು ನಿನ್ನಿ ಪಾದೆಯಲ್ಲಿ ಮಾಯ ಮಾಡಿಬಿಡುವೆನೆಂದು ಕಲ್ಲೊಂದನ್ನು ಹೆಕ್ಕಲು ಬಾಮು ಕೆಲ್ಲರು ಇಬ್ಬರನ್ನೂ ಸಮಾಧಾನಿಸಿ ಇನ್ನು ಮುಂದೆ ನೀವಿಬ್ಬರೂ ಅಕ್ಕತಂಗಿಯರಂತೆ ಅನ್ಯೋನ್ಯವಾಗಿರಬೇಕೆಂದು ತಿಳಿಸುತ್ತಾರೆ. ಸಾಮು ಹೋಗಿ ಸಿರಿಯ ಕೈಹಿಡಿದು ಕರೆದುಕೊಂಡು ಬಂದು ಕೊಟ್ರಾಡಿಯ ಅರಮನೆ ಪ್ರವೇಶಮಾಡಿಸುತ್ತಾರೆ. ಬಾಮುಕೆಲ್ಲರು ಇಬ್ಬರಿಗೂ ಬುದ್ಧಿವಾದ ಹೇಳಿ ತಾನು ಹೊರಟು ಅಂಗಡಿಜಾಲ ಬರ್ಕೆಗೆ ಹೋಗುತ್ತಾರೆ.

ಶ್ಯಾಮರಾಯ ಶೆಟ್ಟಿಯವರ ಪಠ್ಯದಲ್ಲಿ ಕೊಡ್ಸರಾಳ್ವರು ಬೋಳದ ಕಾಡಲ್ಲಿ ಕಾಡುಕಟ್ಟಿ ಬೇಟೆ ಮಾಡುತ್ತಿರುವಾಗ ಅವರಿಗೆ ಬಾಯಾರಿಕೆಯಿಂದ ಎದೆ ಆರಿ ಹೋದುದರಿಂದ ಬೋಳಮಲ್ಲಿಗೆಗೆ ನೀರು ಕುಡಿಯುವುದಕ್ಕಾಗಿ ಹೋಗುತ್ತಾರೆ. ಸಿರಿ ನೀರು ತಂದು ಕೊಡುವಾಗ ಕೈಯ ಅಂದವನ್ನು ನೋಡಿ ಇನ್ನು ದೇಹ ಎಷ್ಟು ಚಂದ ಇದ್ದೀತೆಂದು ಯೋಚಿಸಿ ಅವಳನ್ನು ಮದುವೆಯಾಗಬೇಕೆಂಬ ಲೆಕ್ಕಾಚಾರವನ್ನು ಹಾಕುತ್ತಾರೆ. ಹೀಗೆ ಬೇಟೆ ನೆವದಲ್ಲಿ ಆಗಾಗ ಬೋಳಮಲ್ಲಿಗೆಗೆ ಹೋಗಿ ನೀರು ಕೇಳಲು ಆರಂಭಿಸುತ್ತಾರೆ. ಒಂದು ದಿನ ಸಿರಿ ನೀರು ತಂದು ಒಂದು ಕಾಲು ಹೊರಗಿಟ್ಟು ಚಿಕ್ಕ ಚಾವಡಿಯಲ್ಲಿ ಇಡುತ್ತಾಳೆ. ನಿನ್ನೆ ಸಿರಿಯ ಕೈಯ ಅಂದ ನೋಡಿದೆ, ಇಂದು ಕಾಲಿನ ಅಂದ ನೋಡಿದೆ. ಅವಳ ದೇಹದ ಅಂದ ನೋಡಲೇಬೇಕೆಂಬ ಬಯಕೆ ಹೆಚ್ಚಾಗುತ್ತದೆ ಕೊಡ್ಸರಾಳ್ವರಿಗೆ. ಸಾಮುವಿಗೆ ಈ ವಿಚಾರ ತಿಳಿದು ಕೊಡ್ಸರಾಳ್ವರನ್ನು ವಿಚಾರಿಸಲು ಆಕೆಯನ್ನು ಗದರಿಸುತ್ತಾರೆ. ಒಂದು ದಿನ ಕಾಸಿಂಗರಸರು ಎದುರಾದಾಗ ಏನು ಭಾವನವರೇ ಎಂಬ ಮಾತು ಕೊಡ್ಸರಾಳ್ವರ ಬಾಯಿಂದ ಬರುತ್ತದೆ. ಆಗ ಕಾಸಿಂಗರಸರು ನಮ್ಮನ್ನು 'ಭಾವ' ಎಂದು ಕರೆಯಬೇಕಾದರೆ ನಮ್ಮ ತಂಗಿ ಏನಾದರೂ ಈತನಲ್ಲಿ ಮಾತನಾಡಿದ್ದಾಳೆಯೇ ಎಂದು ಅನುಮಾನಿಸಿ ಸಿರಿಯನ್ನು ಕೇಳಲು ಆಕೆ 'ಅಪದಾಂತಿ ಅಪೋನೆ ಎನ್ನ ತರೆ ಮಿತ್ತ್ ದೀಪರಾ, ಆಯನ ಮೋನೆ ಯಾನ್ ತೂತ್‌ಜಿ, ಎನ್ನ ಮೋನೆ ಆಯೆ ತೂತ್‌ಜೆ' (ನಾನು ಮಾಡದ ಅಪವಾದವನ್ನು ನನ್ನ ತಲೆಯ ಮೇಲಿಡಬೇಡಿ, ಅವನ ಮುಖ ನಾನು ನೋಡಿಲ್ಲ, ನನ್ನ ಮುಖ ಅವ ನೋಡಲಿಲ್ಲ) ಎನ್ನುತ್ತಾಳೆ. ನಮ್ಮನ್ನು ಕಂಡ ಕೊಡ್ಸರಾಳ್ವರು ಭಾವನವರೇ ಎಂದು ಕರೆದರು. ನಾವೂ ಅವರನ್ನು ಭಾವ ಎಂದೇ ಸಂಬೋಧಿಸಿದೆವು ಎನ್ನುತ್ತಾರೆ. ನಾಳೆ ಅವರು ಬಂದರೆ ಚಾವಡಿಯಲ್ಲೊಮ್ಮೆ ಆಚೀಚೆ ಹೋಗು, ನಾವು ಹಿಂದೆ ಅಡಗಿರುತ್ತೇವೆ ಎನ್ನಲು ಹಾಗೇ ಮಾಡುತ್ತಾಳೆ ಸಿರಿ. ಸಿರಿಯನ್ನು ಕಂಡ ಕೊಡ್ಸರಾಳ್ವರು ಈಕೆಯನ್ನು ಮದುವೆಯಾಗದ ಗಂಡಸಿಗೆ ಮೀಸೆ ಬೇಕೇ? ಎನ್ನುತ್ತಾರೆ. ಈ ಎಲ್ಲ ವಿಚಾರಗಳನ್ನು ತಿಳಿದ ಕಾಸಿಂಗರಸರು ಇವರಲ್ಲಿ ಮದುವೆಯ ಪ್ರಸ್ತಾವ ತೆಗೆಯುತ್ತಾರೆ. ಆಗ ತನಗೆ ಮದುವೆಯಾಗಿರುವ ವಿಚಾರ ತಿಳಿಸಲು ಆಕೆಯನ್ನು ಉಪಾಯದಿಂದ ಹೊರ ಹಾಕುವ ತಂತ್ರವನ್ನು ಹೇಳಿಕೊಡುತ್ತಾರೆ. ಇತ್ತ ಕೊಟ್ಟರಾಡಿಗೆ ಬಂದ ಕೊಡ್ಸರಾಳ್ವರು ಸಾಮುವಿನ ಜೊತೆ ಜಗಳ ಮಾಡುತ್ತಾರೆ . ಇವರ ನಡುವಿನ ಸಂಭಾಷಣೆ ಸುದೀರ್ಘವಾಗಿದೆ. ಸಾಮುವಿಗೆ ಹೊಡೆಯುವುದರಿಂದ ಆಕೆ ಮುನಿಸಿಕೊಂಡು ಅಂಗಡಿಜಾಲ ಬರ್ಕೆಗೆ ಹೋಗುತ್ತಾಳೆ. ಹೋಗುವಾಗ ದೀಪ ಉರಿಸಿಟ್ಟು ಸಿರಿಯ ಕಣ್ಣಿಗೆ ನಾಟುವಂತೆ ಹೇಳಿ ಹೋಗುವ ವಿವರಗಳು ಇತರ ಪಠ್ಯಗಳಂತೆ ಇವೆ. ಸಿರಿ ಕೊಡ್ಸರಾಳ್ವರ 'ಬುಡುದಾರೆಯ ಮದುವೆ' (ಬಂಟರಲ್ಲಿ ನಡೆಯುವ ಎರಡನೇ ಮದುವೆಗೆ ಈ ಹೆಸರು) ನಡೆಯುತ್ತದೆ. ಉಳಿದಂತೆ ಎಲ್ಲ ವಿವರಗಳು ಉಳಿದ ಪಠ್ಯಗಳಂತಿವೆ.

ಗೋಪಾಲ ನಾಯ್ಕರ ಪಠ್ಯದಲ್ಲಿ ಕೆಲವು ಹೊಸ ವಿವರಗಳು ದೊರೆಯುತ್ತವೆ.

ಕೊಟ್ರಾಡಿಯ ಕೊಡಸರಾಳ್ವರು ತನ್ನರಮನೆಯ ಕೃಷಿಯನ್ನು ಬೈಲು ಹಾಗೂ ಬೆಟ್ಟಿನಲ್ಲಿ ನೋಡುತ್ತಾ ಏರಿದ ನೀರನ್ನು ತಗ್ಗಿಸುತ್ತಾ, ತಗ್ಗಿದ ನೀರನ್ನು ಏರಿಸುತ್ತಾ ಬಂದು ಬೋಲಮಲ್ಲಿಗೆಯ ಅರಮನೆಗೆ ಹೋಗದೆ ಬಹು ಸಮಯವಾಯಿತು. ಒಂದು ಬಾರಿ ಹೋಗಬೇಕೆಂದು ಯೋಚಿಸಿ ಅಲ್ಲಿಗೆ ಹೋಗುತ್ತಾರೆ. ಇವರನ್ನು ಕಂಡ ಕಾಸಿಂಗರಸರು ಕೊಡ್ಸರಾಳ್ವರು ಬಾರದೆ ಬಹುಕಾಲವಾಯಿತು. ಇಂದೇನು ಬಂದರೆಂದು ತಿಳಿದು ಅವರನ್ನು ಸತ್ಕರಿಸುತ್ತಾರೆ. ನಾನು ಬೈಲಲ್ಲೆ ತಿರುಗುತ್ತಾ ಬಂದೆ. ಬಾಯಾರಿಕೆಯಾಗುತ್ತಿದೆ. ಸ್ವಲ್ಪ ನೀರು ಬೇಕೆಂದು ಕೇಳುತ್ತಾರೆ. ಸಿರಿಯನ್ನು ಕರೆದು ಬಟ್ಟಲಲ್ಲಿ ಹಾಲು, ಹರಿವಾಣದಲ್ಲಿ ಹೂ ಬಾಳೆಯ ಹಣ್ಣು ತರುವಂತೆ ಕಾಸಿಂಗರಸರು ತಿಳಿಸಲು ಸಿರಿ ಇವೆಲ್ಲವನ್ನೂ ಜೋಡಿಸಿ ತಂದು ತಾನು ಹೊರಗೆ ಬಾರದೆ ಹೊಸ್ತಿಲಿಗೆ ಕಾಲಿಟ್ಟು ಕಾಸಿಂಗರಸರ ಕೈಗೆ ನೀಡುತ್ತಾಳೆ. ಸತ್ಯಮಲೋಕಂದ ಸಿರಿಯ ಕಾಲ ಉಂಗುಷ್ಠದ ಅಂದವನ್ನು ಕಂಡ ಕೊಡ್ಸರಾಳ್ವರು ತಲೆ ತಿರುಗಿ ದಡಕ್ಕನೆ ಬೀಳುತ್ತಾರೆ. ಕಾಸಿಂಗರಸರು ಉಪಚರಿಸಲು ಸ್ಮೃತಿ ಬಂದು ಎಲೆಅಡಿಕೆ ತಿಂದು ಹೊಗೆಸೊಪ್ಪು ಅಮಲಾಗಿ ತಲೆ ತಿರುಗಿತು ಎನ್ನುತ್ತಾರೆ. ಹಾಲು ಹಣ್ಣು ಸ್ವೀಕರಿಸಿ ಅಂದು ಹೊರಟು ಕೊಟ್ರಾಡಿಗೆ ಹೋಗುತ್ತಾರೆ. ಆ ನಂತರ ಕೊಟ್ರಾಡಿಯಲ್ಲಿ ಎಲೆ ಅಡಿಕೆ ಹಿಡಿದರೆ ಸುಣ್ಣ ಹಾಕಲು ಬೋಲಮಲ್ಲಿಗೆಗೆ ಬರಲು ಆರಂಭಿಸಿದರು. ಹೀಗೆ ಬರುತ್ತಾ ಹೋಗುತ್ತಾ ಇರಲು ಒಂದು ದಿನ ಕೊಡ್ಸರಾಳ್ವರು ಬೋಲಮಲ್ಲಿಗೆ ಈವರೆಗೆ ಬರಿಯ ಗಂಡಸರು ಮಾತ್ರ ಇರುವ ಅರಮನೆಯಾಗಿತ್ತು. ನಿನ್ನೆಗೆ ತಂಗಿಯಲ್ಲಿ ನೀರು ಹಣ್ಣು ತರಲು ಹೇಳಿದಿರಿ. ನನಗೊಮ್ಮೆ ನಿಮ್ಮ ತಂಗಿಯನ್ನು ನೋಡ ಬೇಕಿತ್ತು ಎನ್ನುತ್ತಾರೆ. ನಮ್ಮ ತಂಗಿಯನ್ನು ನೊಡುವ ಆಸೆ ಇದ್ದರೆ ನಿಮಗೆ ತೋರಿಸ ಬಹುದೆಂದು ಹೇಳಿದ ಕಾಸಿಂಗರಸರು ಏಳು ಪದರದ ಬಟ್ಟೆ ಹಿಡಿದು ಏಳು ಸೆರಸ್ರೆ(ಪರದೆ) ಎಂದು ತಿಳಿದು ಅದರ ಆಚೆಗೆ ಕೊಡ್ಸರಾಳ್ವರು ಈಚೆಗೆ ಸಿರಿಯನ್ನು ನಿಲ್ಲಿಸಿ ಏಳು ಪರದೆಯ ಮೇಲಿನಿಂದ ಕೈ ನೀಡಿ ಸಿರಿಯಲ್ಲಿ ಹಾಲು ನೀಡಲು ಹೇಳಿದರು. ಸಿರಿ ಹಾಗೆ ಮಾಡಲು ಕೊಡ್ಸರಾಳ್ವರು

ತುಳುಪಠ್ಯ

ನಾರಾಯಿನ ನಾರಾಯಿನದೆ ಓ
ಈರೆಡ ಸಗೆನ ಮುದ್ದು ಮೋನೆ ತೂಯೆರ
ಸೆರಸಿರೆ ತಗ್ಗಾವರೋ
ಮೋನೆ ಎಂಕ್ ತೂಯೆರೆ ಬುಡುವರೋಂದು ಕೇಂಡೆರೋ ಓ
ಕೊಡ್ಸರ ಆಳ್ವೇ ಪನ್ನಗ ಆವು ಆವು ಪಂಡೆರ್
ಮೇಲ ಸೆರಸಿರೆ ತಗ್ಗಾಯೆರೆ ಸತ್ತುರ್ಲು
ಸತ್ಯಮಲೋಕಂದ ಸಿರಿನ ಮೋನೆ ಕೊಡ್ಸರಾಳ್ವೆರ್ ತೂಪೆರ್ ದಾನೆ

ಕನ್ನಡಾನುವಾದ
ನಾರಾಯಣ ನಾರಾಯಣ ಓ
ನಿಮ್ಮ ಸಹೋದರಿಯ ಮುದ್ದು ಮುಖ ನೋಡಲು
ಪರದೆ ತಗ್ಗಿಸಬಹುದೇ
ಮುಖ ನೋಡಲು ನನಗೆ ಬಿಡಬಹುದೇ ಎಂದು ಕೇಳಿದರು ಓ
ಕೊಡ್ಸರಾಳ್ವ ಕೇಳಲು ಆಯಿತು ಆಯಿತು ಎಂದರು
ಮೇಲಿನ ಪರದೆ ತಗ್ಗಿಸಿದರು ಚತ್ತೇರಿಗಳು
ಸತ್ಯಮಲೋಕಂದ ಸಿರಿಯ ಮುಖ ಕೊಡ್ಸರಾಳ್ವರು ನೋಡಿದರು (ಪುಟ 364).

ಸಿರಿಯ ಸರ್ವಾಂಗವನ್ನು ನೋಡಿ ಮರುಳಾದ ಕೊಡ್ಸರಾಳ್ವರು ಕರಿಯ ಕಾಸಿಂಗ ಬೊಲಿಯ ದೇಸಿಂಗರಲ್ಲಿ ನಮ್ಮ ಒಕ್ಕೆತ್ತೂರ ಜಾತಿಕಟ್ಟಿನಂತೆ (ಬಂಟ) ನಾವು ಎರಡನೇ ಸಂಬಂಧಕ್ಕೆ ನೀತಿ ಮಾಡೋಣವೇ ಎಂದು ಕೇಳುತ್ತಾರೆ.

ತುಳುಪಠ್ಯ
ಕಟ್ಟ್‌ಕಟ್ಟಳೆ ಮಲ್ಪುಗೊನೋ
ಕೈ ಪತ್ತಾಬಿ ಕಾರ್ಯಕ್ರಮೊ ಓ ಉಂಡು ಮಲ್ಪುಗೊ
ನಿಕ್ಲೆಡ ಸಗೆ ಸಿರಿನ್ ಎಂಕ್

ಕನ್ನಡಾನುವಾದ
ಕಟ್ಟುಕಟ್ಟಳೆ ಮಾಡೋಣವೇ
ಕೈ ಹಿಡಿಸುವ ಕಾರ್ಯಕ್ರಮ ಓ ಮಾಡುವ
ನಿಮ್ಮ ತಂಗಿ ಸಿರಿಯನ್ನು (ಪುಟ 368).

ಆಗ ಕಾಸಿಂಗರಸರು ನಮ್ಮ ತಂಗಿಯಲ್ಲಿ ಒಂದು ಮಾತು ಕೇಳಬೇಕೆನ್ನುತ್ತಾರೆ. ತಂಗಿಯಲ್ಲಿಗೆ ಬಂದು

ತುಳುಪಠ್ಯ
ಕೊಟ್ರಾಡಿದ ಕೊಡ್ಸರಾಳ್ವೆರ್ ನಿನ್ನ ಮಿತ್ತ್ ಪ್ರೀತಿಯಾದ್ ನಿನನ್ ಕೇನ್‌ಬೆರ್ ಮಗ
ಕೊಟ್ರಾಡಿದ ಕೊಡ್ಸರಾಳ್ವೆರ್ ಪಂಡ್‌ಂಡ ಮಗಾ
ಕೋರಿ ಕೊಂತಲೊದಾಡೆಗ್ ಬೋಡಾಯಿ ಮಾನಿ ಮಗಾ
ಆಟೊ ಕೂಟೊದಾಡೆಗ್ ಬೋಡಾಯಿ ಮಾನಿ
ನೇಮೊ ನೆರಿತ್ತಾಡೆ ಬೋಡಾಯಿ ಮಾನಿ ಮಗ
ಕೊಡ್ಸರಾಳ್ವೆ ಪಂಡ ಗುತ್ತುಡು ಮಲ್ಲ ಓ ಕೀರ್ತಿದ ಮಾನಿ ಮಗಾ

ಕನ್ನಡಾನುವಾದ

ಕೊಟ್ರಾಡಿಯ ಕೊಡ್ಸರಾಳ್ವರಿಗೆ ನಿನ್ನ ಮೇಲೆ ಪ್ರೀತಿಯಾಗಿ ನಿನ್ನನ್ನು ಕೇಳುತ್ತಿದ್ದಾರೆ ಮಗ
ಕೊಡ್ಸರಾಳ್ವರೆಂದರೆ ಕೋಳಿ ಅಂಕ ಕೊಂತಲಗಳಿಗೆ ಬೇಕಾಗುವ ಮನುಷ್ಯ
ಆಟ ಕೂಟಗಳಿಗೆ ಬೇಕಾಗುವವರು
ನೇಮ ನೆರಿಗಳಿಗೆ ಬೇಕಾಗುವವರು ಮಗಾ
ಕೊಡ್ಸರಾಳ್ವರು ಗುತ್ತುಗಳಲ್ಲಿ ದೊಡ್ಡ ಕೀರ್ತಿವಂತರು ಮಗಾ (ಪುಟ 368)

ಎಂದು ಕೊಡ್ಸರಾಳ್ವರನ್ನು ಕುರಿತು ಹೊಗಳಿ ಹೇಳುತ್ತಾರೆ. ಇದಕ್ಕೆ ಸಿರಿ ಅಣ್ಣಂದಿರಾದ ನಿಮ್ಮ ನಿರ್ಧಾರವೇ ನನ್ನ ನಿರ್ಧಾರ ಎನ್ನುತ್ತಾಳೆ. ಹೀಗಾಗಿ ಬೋಲಬಾರಿ ಚತ್ತೇರಿಗಳು ಸಿರಿಯನ್ನು ಕೊಡ್ಸರಾಳ್ವರಿಗೆ ಕೊಡಲು ಮಾತು ಕೊಡುತ್ತಾರೆ. ಬೋಲಬಾರಿ ಚತ್ತೇರಿಗಳು ನಾವು ಹೆಣ್ಣು ಕೊಡಲು ಮಾತು ಕೊಟ್ಟಿದ್ದೇವೆ. ಆದರೆ ನಮ್ಮ ಗುತ್ತಿನ ಮರ್ಯಾದೆಗೆ ತಕ್ಕಂತೆ ಜಾತಿ ಕಟ್ಟಿಗೆ ಸರಿಯಾದ ರೀತಿಯಲ್ಲಿ ಮಾಡಿಕಳುಹಿಸಬೇಕು ಎನ್ನುತ್ತಾರೆ. ಓಲೆ ಬರೆಸಿ ನಾಲ್ಕು ಮಾಗಣೆಯ ಹಿರಿಯರನ್ನು ಕೂಡಿಕೊಂಡು ಬರಬೇಕೆಂದು ತಿಳಿಸಿ ಕೊಟ್ಟರಾಡಿಗೆ ಕಳುಹಿಸುತ್ತಾರೆ. ಈ ಓಲೆ ಸಾಮುವಿನ ಕೈಗೆ ಸಿಕ್ಕಿ ಆಕೆಗೆ ವಿಷಯ ತಿಳಿಯುತ್ತದೆ. ಕೊನೆಗೆ ಕೊಡ್ಸರಾಳ್ವರ ಕೈಗೆ ಓಲೆಯ ಮಾನಿ ಕೊಂಡುಹೋಗಿ ಓಲೆ ಕೊಡುತ್ತಾನೆ. ಅದರಲ್ಲಿ ನಾವು ಮಾತನಾಡಿರುವಂತೆ ನೀವು ಬೋಲಮಲ್ಲಿಗೆಗೆ ಕೂಡಲೇ ಹೊರಟು ಬರಬೇಕು. ಬೋಲಮಲ್ಲಿಗೆಯಲ್ಲಿ ಅಡ್ಡ ಆರು ಮಾಗಣೆ, ನೀಟ(?)ಆರು ಮಾಗಣೆ, ಹದಿನಾರು ಮಾಗಣೆಯ ಗುರಿಕಾರರನ್ನ ಸೇರಿಸಿದ್ದಾರೆ ಚತ್ತೇರಿಗಳು. ಮದುವೆಯ ಮಾತುಕತೆ ನಡೆಯುತ್ತದೆ.

ತುಳುಪಠ್ಯ

ಎಂಕಲೆಗ್ ಸಗೆ ಸತ್ಯಮಲೋಕಂದ ಸಿರಿನ್
ಕೊಟ್ಟರಾಡಿದ ಅರಮನೆಗ್ ಕೇನಿದೆರ್ ಕೊಡ್ಸರಾಳ್ವೆರ್
ಕೊರ್ಪುನ ನಿಕ್ಷಯ ನಮೊ ಮಲ್ಪೊಡು
ಸಾರಿ ಪಂಚಾಂಗೊನು ತೂಯೆರೆ ಇದ್ದಿ
ಎರಡನೆದ ಕಟ್ಟ್ ಕಟ್ಲೆದ ಕಾರ್ಯಕ್ರಮೊ ಮಲ್ಪುನೆ ನಮೊ

ಕನ್ನಡಾನುವಾದ

ನಮಗೆ ಸಹೋದರಿ ಸತ್ಯಮಲೋಕದ ಸಿರಿಯನ್ನು
ಕೊಟ್ಟರಾಡಿಯ ಅರಮನೆಗೆ ಕೇಳಿದ್ದಾರೆ ಕೊಡ್ಸರಾಳ್ವರು
ಕೊಡುವ ನಿಶ್ಚಯ ನಾವು ಮಾಡಬೇಕು
ಪಂಚಾಂಗ ನೋಡಲು ಇಲ್ಲ
ಎರಡನೇ ಮದುವೆಯ ಕಟ್ಟುಕಟ್ಟಳೆ ಕ್ರಮ ಮಾಡುವುದು ನಾವು (ಪುಟ 380).

ಈ ಬರುವ ಮಂಗಳವಾರವಲ್ಲ ಮೇಲಿನ ಮಂಗಳವಾರ ನಿಮಗೆ ಬೇಕಾಗುವ ಜನರು, ಕುಟುಂಬದವರನ್ನು ಸೇರಿಕೊಂಡು ಬನ್ನಿ ಎಂದು ಕೊಡ್ಸರಾಳ್ವರಿಗೆ ತಿಳಿಸುತ್ತಾರೆ ಗುರಿಕಾರರು. ಬೋಲಮಲ್ಲಿಗೆಯಲ್ಲಿ ಸಿರಿಗೆ ಉಡಲು ಬಿಳಿಯ ಸೀರೆಯೊಂದನ್ನು ತೆಗೆಯಬೇಕು. ಅಡ್ಡ ಹಿಡಿಯಲು ಪರದೆಯ ಸೀರೆಯೊಂದು ಬೇಕು ಎಂದು ಗುರಿಕಾರರು ಹೇಳುತ್ತಾರೆ.

ಅಲ್ಲಿಂದ ಇಳಿದು ತನ್ನರಮನೆಗೆ ಬಂದು ಹೆಂಡತಿ ಸಾಮುವನ್ನು ಜೋರು ಧ್ವನಿಯಲ್ಲಿ ಕರೆಯುತ್ತಾರೆ. ಸಾಮುವಿನಲ್ಲಿ ಕಾರಣವಿಲ್ಲದೆ ಬೇರೆಬೇರೆ ಸಂಗತಿಗಳನ್ನು ತೆಗೆದು ಜಗಳವಾಡಿ ಮಾತಿಗೆ ಮಾತು ಬೆಳೆಸಿ ಹೊಡೆಯುತ್ತಾರೆ.

ತುಳುಪಠ್ಯ

ನಿನ್ನ ಲೆಕೊಂದಿ ಗೀಲ್ ಕೆಟ್ಟಿನಾಲೆನ್ ಇಲ್ಲಲ್ ದೀವೊಂಡ
ಮಾಟೊ ಮಲ್ಪೊಡೋ ಚಿದ್ರೊ ತೂವೊಡೋ ಪನ್ಪೆರ್ ಕೊಡ್ಸರಾಳ್ವೆರ್
ಪೋಯಿನಲ್ಪ ಇದ್ದಿ ಬತ್ತಿನಲ್ಪ ಇದ್ದಿ ಉಡು ನೂರಿನಂಗೆ ಆಂಡ್ ಈ ಬತ್ತಿನೆಡ್ದ್ ಬೊಕ್ಕ ಪಂಡೆರ್

ಕನ್ನಡಾನುವಾದ

ನಿನ್ನಂಥ ಗೀಳುಕೆಟ್ಟವಳನ್ನು ಮನೆಯಲ್ಲಿ ಇಟ್ಟುಕೊಂಡರೆ
ಮಾಟ ಮಾಡಬೇಕೋ ಚಿದ್ರ ನೋಡಬೇಕೋ ಎಂದರು ಕೊಡ್ಸರಾಳ್ವರು
ಹೋದಲ್ಲಿ ಬಂದಲ್ಲಿ ಸುಖವಿಲ್ಲ ಉಡ ಹೊಕ್ಕ ಹಾಗಾಯಿತು ನೀನು ಈ ಮನೆ ಹೊಕ್ಕ ಬಳಿಕ (ಪುಟ 386)

ಎಂದರು. ನೀವು ಯಾಕೆ ಹೀಗೆ ಮಾಡುತ್ತೀರಿ ಎಂಬ ತಿಳುವಳಿಕೆ ನನಗಿದೆ. ಆದರೂ ನಿಮಗೆ ನಾನಿಲ್ಲಿರುವುದು ಭಾರ ಎನಿಸಿದರೆ ನನ್ನ ಅಣ್ಣ ಇದ್ದಾರೆ, ಅವರಿಗೆ ಭಾರವಾಗಲಾರೆ. ಅಲ್ಲಿಗೆ ಕಳುಹಿಸಿಕೊಡಿ ಎನ್ನುತ್ತಾಳೆ ಸಾಮು. ಸಾಮುವಿಗೆ ಕಾಲು ಆಯಾಸವಾಗುವಷ್ಟು ತುಳಿದರು, ಕೈ ಆಯಾಸವಾಗುವಷ್ಟು ಹೊಡೆದರು, ಕತ್ತಿಗೆ ಕೈ ಹಾಕಿ ಹೊರ ದಬ್ಬಿದರು. ಸಾಮು ಹೊರಟು ಅಂಗಡಿಜಾಲ ಬರ್ಕೆಗೆ ಹೋಗುವ ದಾರಿಯಲ್ಲಿ ಯೋಚನೆಯೊಂದು ಬರುತ್ತದೆ. ನನಗೆ ಈ ರೀತಿ ಮಾಡಿದ ವ್ಯಕ್ತಿಯನ್ನು ಒಂದಲ್ಲ ಒಂದು ದಿನ ನನ್ನ ಕಾಲಡಿಗೆ ಬರುವಂತೆ ಮಾಡಬೇಕೆಂದು ಹಿಂತಿರುಗಿ ಕೊಟ್ಟರಾಡಿಗೆ ಬಂದು ತೆಂಗಿನ ಕಾಯಿಯ ಅರ್ಧ ಭಾಗದಲ್ಲಿ ತುಪ್ಪದ ದೀಪ ಉರಿಸಿ ಹೊಸ್ತಿಲಲ್ಲಿಟ್ಟು ನನ್ನ ಅನಂತರ ಬರುವವಳ ಕಣ್ಣಿಗೆ ಬಾಣವಾಗಿ ನಾಟಲಿ ಎಂದು ಶಪಿಸಿ ಉಜೆಮಾರ ಗುತ್ತು ಅಂಗಡಿಜಾಲ ಬರ್ಕೆಗೆ ಹೋಗುತ್ತಾಳೆ.

ಇತ್ತ ಬೋಲಮಲ್ಲಿಗೆಗೆ ಕೊಡ್ಸರಾಳ್ವರು ಒಬ್ಬರೇ ಬರುತ್ತಾರೆ. ಬೋಲಬಾರಿ

ಚತ್ತೇರಿಗಳು ನಿಮ್ಮವರನ್ನು ಸೇರಿಸಿಕೊಂಡು ಯಾಕೆ ಬರಲಿಲ್ಲ ಎನ್ನಲು ಕೂಟಕಳ, ನೇಮನೆರಿ(ಭೂತಾರಾಧನೆಯ ಉತ್ಸವ)ಯಿಂದಾಗಿ ಅವರನ್ನೆಲ್ಲ ಸೇರಿಸಿ ಬರಲಾಗಲಿಲ್ಲ ಎನ್ನುತ್ತಾರೆ. ಬೋಲ ಮಲ್ಲಿಗೆಯಲ್ಲಿ ಅಡ್ಡ ಆರು ಮಾಗಣೆ, ನೀಟ ಆರು ಮಾಗಣೆ, ಹದಿನಾರು ಮಾಗಣೆಯ ಗುರಿಕಾರರು ಸೇರಿದ್ದಾರೆ.

ತುಳುಪಠ್ಯ

ಜಾತಿಕಟ್ಟ್‌ದ ನೀತಿ ಮಲ್ಪುಬೆರೆ
ಎರಡ್ನೆ ಸಂಬಂದೊ ಸಂಬಂದೊಂದ್
ತುತ್ಯೆರೆ ಸೀರೆ ಕೊರುವೆರ್ ದಾನೆ ಎಡತ್ತ ಕೈಟ್
ಕೊಡ್ಸರಾಳ್ವೆರ್ ಕೊರುವೆರ್ ದಾನೆ ಸತ್ಯಮಲೋಕಂದ ಸಿರಿಗೋ
ಕೊಡ್ಸರಾಳ್ವೆರ್ ಎಡ ಕೈಟ್ ಕೊರ್ನೆನ್ ಬಲಕೈಟ್ ದೆತೊನುವೆರ್
ಸತ್ಯಮಲೋಕಂದ ಸಿರಿ

ಕನ್ನಡಾನುವಾದ

ಜಾತಿಕಟ್ಟಿನ ನೀತಿ ಮಾಡುತ್ತಾರೆ
ಎರಡನೇ ಸಂಬಂಧ ಸಂಬಂಧವೆಂದು
ಉಡಲು ಸೀರೆ ಕೊಡುತ್ತಾರೆ ಎಡದ ಕೈಯಲ್ಲಿ
ಕೊಡ್ಸರಾಳ್ವರು ಕೊಡುತ್ತಾರೆ ಸತ್ಯಮಲೋಕಂದ ಸಿರಿಗೆ
ಕೊಡ್ಸರಾಳ್ವರು ಎಡದ ಕೈಯಲ್ಲಿ ಕೊಟ್ಟ ಸೀರೆಯನ್ನು
ಬಲದ ಕೈಯಲ್ಲಿ ತೆಗೆದುಕೊಂಡರು ಸತ್ಯಮಲೋಕಂದ ಸಿರಿ (ಪುಟ 394).

ಬಹುಮುಖ್ಯವಾಗಿ ಈ ಭಾಗದಲ್ಲಿ ಬಂಟರಲ್ಲಿರುವ ಎರಡನೇ ಮದುವೆಯ ಕಟ್ಟನ್ನು ಮಾಡಬೇಕೆಂದು ಅಡ್ಡ ಆರು ಮಾಗಣೆಯವರು, ನೀಟ ಆರು ಮಾಗಣೆಯವರು ಮತ್ತು ಹದಿನಾರು ಮಾಗಣೆಯವರು ಈ ಕ್ರಮವನ್ನು ನೆರವೇರಿಸುವುದನ್ನು ನೋಡುತ್ತೇವೆ. ಎರಡನೇ ಮದುವೆಗೆ ಬಿಳಿಯ ಸೀರೆ ತೆಗೆಯಬೇಕೆಂದು ಹೇಳುತ್ತಾರೆ ಮತ್ತು ಇದನ್ನು ಕೊಡುವಾಗಲೂ ಎಡದ ಕೈಯಲ್ಲಿ ಕೊಡುತ್ತಾರೆ. ಸಾಮಾನ್ಯವಾಗಿ ಎಡದ ಕೈಯಲ್ಲಿ ಮಾಡುವ ಕ್ರಿಯೆಗಳು ಮಂಗಳಕಾರ್ಯಕ್ಕೆ ನಿಷೇಧ. ಅಪರ ಕಾರ್ಯಗಳಲ್ಲಿ ಎಡ ಕೈಯನ್ನು ಬಳಸಲಾಗುತ್ತದೆ. ಬಿಳಿಯ ಸೀರೆಯೂ ಸಾಮಾನ್ಯವಾಗಿ ಗಂಡ ಸತ್ತ ಸಂದರ್ಭ ಸಾವಿನ ಆಚರಣೆಯಂದು ಗಂಡನ ಮನೆಯವರು ವಿಧವೆಗೆ ನೀಡುವ ದುಃಖದ ಸೀರೆ ಆಗಿರುತ್ತದೆ. ಹೀಗಾಗಿ ಸಿರಿ ತನ್ನ ಮೊದಲನೇ ಗಂಡ ತೀರಿಕೊಂಡ ಸಂಕೇತವಾಗಿ ಇದನ್ನು ಉಡುತ್ತಾಳೆಯೇ? ಸಿರಿ ಆರಾಧನೆಯಲ್ಲಿಯೂ ಸಿರಿ ಪರಿವಾರದವರು ದಲಿಯ ಪಡೆಯಬೇಕಾದರೆ ಬಿಳಿಯ ಸೀರೆ ಉಟ್ಟೇ ದಲಿಯದಲ್ಲಿ ನಿಲ್ಲಬೇಕೆಂಬ ಕ್ರಮ ಇದೆ. ಈ

ಒಟ್ಟು ವಿಧಿಯನ್ನು ನೋಡುವಾಗ ವಿಧವೆಯ ಮದುವೆಯ ಆಚರಣೆಯಂತೆ ಕಂಡುಬರುತ್ತದೆ.

ತುಳುಪಠ್ಯ

ಐತೊ ಸಿಂಗಾರೊ ಆತೆರೋ ನಾರಾಯಿನ ನಾರಾಯಿನದೆ
ಏಲ್ ಸೆರಸಿರೆ ಪತ್ಯೆರ್ ದಾನೆ
ಏಲ್ ಸೆರಸಿರೆದ ಪಿದಾಯಿಗ್ ಕೈ ನೀರ್ಪಾಯೆರ್ ದಾನೆ
ಕೊಟ್ರಾಡಿದ ಕೊಡ್ಸರಾಳ್ವೆರೆ ಕೈಲಾ ಸತ್ಯಮಲೋಕಂದ ಸಿರಿನ ಕೈಲಾ
ಬೋಲಮಲ್ಲಿಗೆದ ಅರಮನೆಡ್ ಪತ್ತಾಯೆರ್ ದಾನೆ

ಕನ್ನಡಾನುವಾದ

ಐತ ಸಿಂಗಾರವಾಗಿದ್ದಾರೆ ನಾರಾಯಣ ನಾರಾಯಣ
ಏಳು ಸೆರೆಸಿರೆ (ಬಟ್ಟೆಯ ಪರದೆ) ಹಿಡಿದರು ಅಲ್ಲಿ
ಏಳು ಸೆರೆಸಿರೆಯ ಹೊರಗೆ ಕೈ ನೀಡಿದರು ಅಲ್ಲಿ
ಕೊಟ್ರಾಡಿಯ ಕೊಡ್ಸರಾಳ್ವರೂ ಸತ್ಯಮಲೋಕಂದ ಸಿರಿಯೂ
ಬೋಲಮಲ್ಲಿಗೆಯ ಅರಮನೆಯಲ್ಲಿ ಕೈ ಕೈ ಹಿಡಿದರು (ಪುಟ 394).

ಸಾಮಾನ್ಯವಾಗಿ ಎರಡನೇ ಮದುವೆಗೆ ತುಳುವಿನಲ್ಲಿ 'ಕೈ ಪತ್ತಾವುನೆ' (ಬಟ್ಟೆಯ ಪರದೆ ಮಧ್ಯೆ ಹಿಡಿದು ಹಿರಿಯರ ಸಮ್ಮುಖ ಹುಡುಗ ಹುಡುಗಿಯ ಕೈ ಹಿಡಿಸುವುದು) ಎನ್ನುತ್ತಾರೆ. ಈ ರೀತಿಯಲ್ಲಿ ಕೊಡ್ಸರಾಳ್ವರು ಹಾಗೂ ಸಿರಿಯ ಮದುವೆ ನಡೆವದ್ದು ತಿಳಿಯುತ್ತದೆ. ಬೋಲಮಲ್ಲಿಗೆಯಿಂದ ಸಿರಿಯನ್ನು ಬಹಳ ಪ್ರೀತಿಯಿಂದ ಬೋಲಬಾರಿ ಚತ್ತೇರಿಗಳು ಕೊಡ್ಸರಾಳ್ವರ ಜೊತೆ ಕಳುಹಿಸಿ ಕೊಡುತ್ತಾರೆ. ಕೊಟ್ರಾಡಿಯ ಹಾದಿ ಹಿಡಿದು ಕಂಬಳದ ಬದುವಲ್ಲೆ ಬರಲು ಸಿರಿಗೆ ಮುಂದೆ ಹೋಗಲು ಕಾಣದಾಗುತ್ತದೆ. ಏನಾಯಿತೆಂದು ಬೋಲಬಾರಿ ಚತ್ತೇರಿಗಳು ತಾವು ನಂಬಿದ ದೈವಗಳಿಗೆ ಪ್ರಾರ್ಥಿಸಿ ಕೊಳ್ಳುತ್ತಾರೆ. ಕೊನೆಗೆ ಸಿರಿ ಕೊಟ್ಟರಾಡಿಯ ಅರಮನೆಯ ನನ್ನ ಅಕ್ಕನವರು ಬಂದು ನನ್ನ ಕೈ ಹಿಡಿದೆಬ್ಬಿಸಿ ಕರೆದುಕೊಂಡು ಹೋಗಬೇಕೆನ್ನುತ್ತಾಳೆ. ಅವಳು ಉಜಿಮಾರ ಗುತ್ತು ಅಂಗಡಿಜಾಲ ಬರ್ಕೆಗೆ ಹೋಗಿದ್ದಾಳೆ. ಅವಳಿಗೆ ಹೊಡೆದಿರುವ ವಿಚಾರವನ್ನು ಕೊಡ್ಸರಾಳ್ವರು ತಿಳಿಸಿ ನಾನು ಹೋಗಲಾರೆ. ಬಾಮುಕೆಲ್ಲರು ತುಂಬ ನ್ಯಾಯದ ವ್ಯಕ್ತಿ. ಅವರ ಮುಂದೆ ನಿಂತು ನನಗೆ ಮಾತನಾಡಲಾಗದು ಎನ್ನಲು ಕಾನಬೆಟ್ಟಿನ ದುರ್ಗಲ್ಲ ಪೆರ್ಗಡೆಯವರನ್ನು ಕಳುಹಿಸಿ ಸಾಮುವನ್ನು ಬರಹೇಳುತ್ತಾರೆ. ಕೊಡ್ಸರಾಳ್ವನಿಂದ ತಪ್ಪಾಗಿದೆ. ಅದನ್ನು ಮನ್ನಿಸಿ ಕಾನಬೆಟ್ಟಿಗೆ ಒಂದು ಮರ್ಯಾದೆ ಹಾಗೂ ನನ್ನ ಮೀಸೆಗೂ ಒಂದು ಮರ್ಯಾದೆ ಕೊಟ್ಟುಬಿಡಿ ಬಾಮುಕೆಲ್ಲರೇ ಎನ್ನುತ್ತಾರೆ. ಬೇರೆ ಯಾರಾದರೂ ನಿಮ್ಮ

ಹೊರತಾಗಿ ಬರುತ್ತಿದ್ದರೆ ಅವರಿಗೆ ಹೇಳುವ ಮಾತು ಬೇರೆ ಇತ್ತು. ನೀವು ಬಂದು ನನ್ನ ಬಾಯಿ ಕಟ್ಟಿಸಿದಿರಿ ಎಂದು ಹೇಳಿ ಸಾಮುವನ್ನು ಸಮಾಧಾನಿಸಿ ಕಳುಹಿಸಿ ಕೊಡುತ್ತಾರೆ. ಸಾಮುವಿನಲ್ಲಿ ಕೊಡ್ಸರಾಳ್ವರು ಕ್ಷಮೆಯಾಚಿಸಿದ ಅನಂತರ ಆಕೆ ಸಿರಿಯ ಕೈ ಹಿಡಿದೆಬ್ಬಿಸಿ ಕೊಟ್ರಾಡಿಗೆ ಕರೆತರುವ ವಿವರಗಳು ಉಳಿದ ಪಠ್ಯಗಳಂತೆ ಇವೆ.

ರಾಮಕ್ಕ ಅವರ ಪಠ್ಯವು ಬೋಲಬಾರಿ ಸತ್ತಿರಿಗಳು ಕೊಟ್ರಾಡಿ ಕೊಡ್ಸರಾಳ್ವರಿಗೆ ಬೇಟೆ ಬವರಕ್ಕೆ ಬರಬೇಕೆಂದು ಓಲೆ ಕಳುಹಿಸುತ್ತಾರೆ. ಓಲೆಯನ್ನು ತಂದ ಮಾನಿಯು ಪಾತ್ರೆ ತೊಳೆಯುತ್ತಿರುವ ಸಾಮುವಿನಲ್ಲಿ ಕೊಟ್ರಾಡಿಯ ದಾರಿ ಕೇಳಲು ಅವಳು ಓಲೆಯನ್ನು ಪಡೆದು ಓದಿನೋಡಿ ಮತ್ತೆ ಅವನ ಕೈಗೆ ನೀಡಿ ಇದೇ ಕೊಟ್ರಾಡಿ ಎಂದು ತಿಳಿಸಲು ಓಲೆಯನ್ನು ಕೊಂಡುಹೋಗಿ ಕೊಡ್ಸರಾಳ್ವರ ಕೈಗೆ ನೀಡುತ್ತಾನೆ. ಕೊಡ್ಸರಾಳ್ವರು ಬೇಟೆಯ ತಯಾರಿಯಲ್ಲಿ ಹೊರಡಲು ಸಾಮು ಪರಿಪರಿಯಾಗಿ ಹೋಗಬೇಡಿ ಎಂದು ಹೇಳಿ ತಡೆಯುತ್ತಾಳೆ. ಆದರೂ ಸಾಮುವಿನ ಮಾತನ್ನು ಕೇಳದೆ ಹೋಗುತ್ತಾರೆ, ಬೋಳಮಲ್ಲಿಗೆಗೆ ತಲಪುವಾಗ ನೀವು ಬರುವಾಗ ತಡವಾಯಿತು, ನಾವು ಬೇಟೆ ಮುಗಿಸಿದೆವು ಎಂದು ಸುಳ್ಳು ಹೇಳುತ್ತಾರೆ. ಬಾಯಾರಿಕೆಯಾಗುತ್ತದೆ ಒಂದು ಗಿಂಡೆ ನೀರುಕೊಡಿ ಎಂದು ಕೇಳುತ್ತಾರೆ ಕೊಡ್ಸರಾಳ್ವರು. ಸಿರಿ ನೀರು ತಂದು ಕೊಡಲು ಕೈಯ ಬೆರಳಿನ ಅಂದ ನೋಡಿ ಸ್ಮೃತಿ ತಪ್ಪಿದರು ಕೊಡ್ಸರಾಳ್ವರು. ದೇವು ದೇಸಿಂಗ ಬಬ್ಬು ನರಸಿಂಗ ಸಣ್ಣ ಮಂಗಲ ಕಾರಿ ಮೈಂತನ ಬೋಲಬಾರಿ ಸತ್ತಿರಿಗಳು 'ನಮೊ ಒಂಜಾಟೊ ಚೆನ್ನೆ ಗೊಬ್ಬುಗೊನೋ, ಕ್ಯಾಕಟಿ ಸೊರ್ಕುಗುನೋ' (ನಾವೊಂದಾಟ ಚೆನ್ನೆ ಆಡೋಣವೇ, ಕ್ಯಾಕಟಿ ಆಡೋಣವೇ) ಎಂದು ಕೇಳುತ್ತಾರೆ. ನಾವು ಸೋತರೆ ನಮ್ಮ ಸಹೋದರಿಯನ್ನು ನಿಮಗೆ ಕೊಡುತ್ತೇವೆ, ನೀವು ಸೋತರೆ ನಿಮ್ಮ ಸಹೋದರಿಯನ್ನ ನಮಗೆ ಕೊಡಬೇಕೆಂಬ ಷರತ್ತಿನಲ್ಲಿ ಆಡುತ್ತಾರೆ. ಒಂದಾಟ ಆಡುವಾಗ ಒಂದು ಮನೆಗೆ ಬೆಂಕಿ ಬಿತ್ತು, ಎರಡನೇ ಆಟ ಆಡುವಾಗ ಎರಡು ಮನೆಗೆ ಬೆಂಕಿ ಬಿತ್ತು, ಹೀಗೆ ಮೂರು ನಾಲ್ಕನೇ ಆಟ ಆಡುವಾಗಲೂ ಬೆಂಕಿಬಿತ್ತು, ಹೀಗೆ ಬೋಲಮಲ್ಲಿಗೆಯ ಅರಸರು ಸೋತುಹೋದರು. ಹಾಕಿರುವ ಪಂಥದಂತೆ ಬೋಲಮಲ್ಲಿಗೆಯ ಅರಸರ ತಂಗಿಯನ್ನು ಕೊಡ್ಸರಾಳ್ವರು ಮದುವೆಯಾಗಬೇಕು. ಆದರೆ ಮೊದಲನೇ ಹೆಂಡತಿಯನ್ನು ಹೇಗೆ ಒಪ್ಪಿಸಲಿ ಎನ್ನಲು ಬೋಲದರಸರು ಹೆಣ್ಣನ್ನು ಸೋಲಿಸುವ ಆಟ ನಿಮಗೆ ಗೊತ್ತಿಲ್ಲವೇ? ಸ್ನಾನ ಮಾಡಲು ಹೋಗಿ. ಸೀಗೆ ತರುವಾಗ ಬಾಗೆ ಬೇಕು ಎಂದು ಹೇಳಿ. ಬಾಗೆ ತರುವಾಗ ಸೀಗೆ ಕೇಳಿ. ನೀರು ಬಿಸಿಯಾಗಿದ್ದರೆ ತಣ್ಣೀರು ಬೇಕೆಂದು ಕೇಳಿ, ತಣ್ಣೀರು ತರುವಾಗ ಬಿಸಿ ಬೇಕೆನ್ನಿ. ಊಟದ ಶಾಲೆಯಲ್ಲಿ ಬಿಳಿಯಕ್ಕಿಯ ಅನ್ನ ತರುವಾಗ ನೀರ್‌ಸಲೆ ಅಕ್ಕಿಯ ಅನ್ನ ಬೇಕೆನ್ನಿ. ಹೀಗಾದಾಗ ಅವಳು ಸರಿದಾರಿಗೆ ಬರುತ್ತಾಳೆ ಎಂದು ಹೇಳಿಕೊಟ್ಟರು. ಕೊಡ್ಸರಾಳ್ವರು ಹಾಗೆ ಮಾಡಲು ಸಾಮು ನಿಮಗೇನಾಗಿದೆ? ಯಾವ ಹೆಣ್ಣನ್ನು ನೋಡಿ ಬಂದಿದ್ದೀರಿ ಎಂದು ಕೇಳುತ್ತಾಳೆ. ಸಿರಿಯನ್ನು ನೋಡಿದ್ದೇನೆ. ಆಕೆಯನ್ನು ಮದುವೆಯಾಗ ಬೇಕೆಂದಿದ್ದೇನೆ ಎನ್ನಲು ಸಾಮು ಆಳ್ವೆದಿ ನಾನು ಈ ಅರಮನೆಗೆ ಬರುವ ಮೊದಲಿನ

ಸ್ಥಿತಿ ಹೇಗಿತ್ತು. ಈ ಕಡೆಯಿಂದ ಕಾಗೆ ನುಗ್ಗಿ ಆ ಕಡೆಯಿಂದ ಓಡುತ್ತಿತ್ತು. ಬಂದವರಿಗೆ ಅನ್ನ ಹಾಕುವ ಗತಿ ಇರಲಿಲ್ಲ. ನನ್ನ ಮನೆಯ ಕಪಿಲೆ ದನವನ್ನು ಈ ಮನೆಗೆ ಪ್ರವೇಶಿಸಿದ ಅನಂತರ ಈ ಮನೆಯ ನಂದಾದೀಪ ಬೆಳಗಿ ಬಂತು. ಕೊಟ್ಟರಾಡಿಯ ಅರಮನೆಯಲ್ಲಿ ಸಂಪತ್ತು, ಚಿನ್ನಬೆಳ್ಳಿ, ತಾಮ್ರದ ಪಾತ್ರೆಗಳು ತುಂಬಿ ಬಂದವು. ಈಗ ನಿಮಗೆ ನಾನು ಬೇಡವಾಯಿತೇ ಎನ್ನಲು ಸಿರಿಯನ್ನು ನನಗೆ ಎರಡನೇ ಕೈ ಹಿಡಿಸಿ ಮದುವೆಯಾಗಲೇ ಬೇಕೆನ್ನುತ್ತಾರೆ. ಹೀಗೆ ಸಾಮು ಕೊಡ್ಸರಾಳ್ವರ ನಡುವೆ ಮಾತಿಗೆ ಮಾತು ಬೆಳೆದು ಸಾಮುವಿಗೆ ಹೊಡೆಯುತ್ತಾರೆ. ಇದರಿಂದ ಸಾಮು ಬೇಸರಿಸಿಕೊಂಡು ತನ್ನ ಮನೆ ಅಂಗಡಿಜಾಲ ಬರ್ಕೆಗೆ ಹೊರಡುವ ಮೊದಲು ತೆಂಗಿನ ಅರ್ಧಭಾಗದಲ್ಲಿ ದೀಪವುರಿಸಿ ಹೊಸ್ತಿಲಲ್ಲಿಟ್ಟು ಕೊಟ್ರಾಡಿ ಅರಮನೆ ಹಿಂದೆ ನಾನು ಬರುವಾಗ ಇದ್ದ ಹಾಗೆ ಆಗಲಿ. "ಈ ಕಡೆಯಿಂದ ಹೊಕ್ಕ ಕಾಗೆ ಆ ಕಡೆಯಿಂದ ಹೊರಡಲಿ. ಕೊಟ್ರಾಡಿ ಅರಮನೆಯ ದಿಕ್ಕು ಮುತ್ತಲಿ, ದಿಸೆ ಅಳಿದು ಹೋಗಲಿ" ಎಂದು ಶಪಿಸಿ ಹೊರಡುತ್ತಾಳೆ. ದೀಪ ಸಿರಿಯ ಕಣ್ಣಿಗೆ ಬಾಣವಾಗಿ ನಾಟಲಿ ಎನ್ನುವ ವಿವರ ಇಲ್ಲಿ ಇಲ್ಲ.

ಇತ್ತ ಸಿರಿಯನ್ನು ಕೊಡ್ಸರಾಳ್ವರಿಗೆ ಕೈ ಪತ್ತಾದ್ (ಕೈ ಹಿಡಿಸಿ) ಎರಡನೇ ಸಂಬಂಧ ಮಾಡಿಬಿಟ್ಟರು. ಕೊಡ್ಸರಾಳ್ವರು ಸಿರಿಯನ್ನು ಕರೆದುಕೊಂಡು ಕೊಟ್ರಾಡಿಯ ಸಮೀಪದ ಪದ್ಮಕಟ್ಟೆ ಕೆಂದಾಳೆಯ ಹತ್ತಿರ ಬರುವಾಗ ಮಾಯದ ಸಿರಿಯ ಕಾಲಿಗೆ 'ಬೊಲ್ದು ಕಟ್ರೆದ ಮುಳ್ಳು ಕಾರ್‌ಗ್ ನಚ್ಚೊ ಬೆಂದ್‌ಂಡ್ ಕಣ್ಣ್‌ಗ್ ಪಗರಿಯಾದ್ ಬತ್ತ್‌ಂಡೇ' (ಬಿಳಿಯ ಕಟ್ರೆಯ ಮುಳ್ಳು ಮಾಯದ ಸಿರಿಯ ಕಾಲಿಗೆ ತಾಗಿತು, ಕಣ್ಣಿಗೆ ಬಾಣವಾಗಿ ನಾಟಿತು). ಇದು ಕೋಟಿ ಚೆನ್ನಯ ಕಾವ್ಯದಲ್ಲಿ ಬರುವ ಪ್ರಸಂಗ. ಪರ್ಮಲೆ ಬಲ್ಲಾಳರು ಬೇಟೆಗೆ ಹೋದಲ್ಲಿ ಅವರ ಕಾಲಿಗೆ ಬಿಳಿಯ ಕಟ್ರೆಯ ಮುಳ್ಳು ತಾಗಿ ಅವರು ಸಾವು ಬದುಕಿನ ಹೋರಾಟದಲ್ಲಿರುವಾಗ ತುಂಬು ಗರ್ಭಿಣಿ ದೇಯಿ ಬೈದ್ಯೆದಿ ಬಂದು ಮದ್ದು ಮಾಡುವ ಮೂಲಕ ಬಲ್ಲಾಳರ ಪ್ರಾಣವನ್ನು ಉಳಿಸುವ ಚಿತ್ರಣವಿದೆ. ರಾಮಕ್ಕ ಅವರಿಗೆ ಕೋಟಿಚೆನ್ನಯ ಸಂಧಿಯೂ ಸ್ವಲ್ಪ ಮಟ್ಟಿಗೆ ತಿಳಿದಿರುವುದರಿಂದ ಆ ಭಾಗ ಇಲ್ಲಿ ಸೇರ್ಪಡೆಯಾಗಿರಬೇಕು. ಬೇರೆ ಯಾವುದೇ ಪಠ್ಯಗಳಲ್ಲಿ ಈ ವಿವರವಿಲ್ಲ.

ನನಗೆ ಏಳಲಾಗುವುದಿಲ್ಲ. ಸಾಮು ಆಳ್ವೆದಿ ಇಲ್ಲಿಂದ ಹೊರಡುವಾಗ ನನ್ನ ಕಾಲಿಗೆ ಬಿಳಿಯ ಕಟ್ರೆಯ ಮುಳ್ಳು ತಾಗಬೇಕು, ಕಣ್ಣಿಗೆ ಬಾಣವಾಗಿ ನಾಟಬೇಕು ಎಂದು ಶಪಿಸಿ ಹೋಗಿದ್ದಾರೆ. 'ಯಾನ್ ಬತ್ತ್‌ದ್‌ಕೈಟ್ ಪತ್ತಂದೆ ಕಣ್ಣ್ ತೋಜಿಯೆರೆ ಬಲ್ಲಿ, ಕಾರ್ ಸರಿ ಆವರೆ ಬಲ್ಲಿಂದ್ ವರೊ ಕೊರ್ತೆರ್' (ನಾನು ಬಂದು ಕೈ ಹಿಡಿಯದೆ ಕಣ್ಣು ಕಾಣಿಸ ಬಾರದು, ಕಾಲು ಸರಿ ಆಗಬಾರದೆಂದು ಸಾಮು ವರ ಕೊಟ್ಟಿದ್ದಾರೆ) ಎನ್ನುತ್ತಾಳೆ. ಕಾನಬೆಟ್ಟಿನ ಅಜ್ಜನವರು ಹಾಗೂ ಕೊಡ್ಸರಾಳ್ವರು ಜೊತೆಯಾಗಿ ಅಂಗಡಿಜಾಲ ಬರ್ಕೆಗೆ ಹೋಗಿ ಬಾಮುಕೆಲ್ಲರಿಗೆ ಎಲ್ಲ ವಿಷಯ ತಿಳಿಸಿ ಕೊಡ್ಸರಾಳ್ವನಿಂದಾದ ತಪ್ಪನ್ನು ಮನ್ನಿಸುವಂತೆ ಕೇಳಿಕೊಂಡು ನಾಲ್ಕು ಜನರೂ ಜೊತೆಯಾಗಿ ಕೊಟ್ರಾಡಿಗೆ ಬರುತ್ತಾರೆ. ಸಾಮು ಆಳ್ವೆದಿ ಬಂದು ಹೊಸ್ತಿಲಲ್ಲಿಟ್ಟ ದೀಪವನ್ನು ತೆಗೆದು ಏನು ತಂಗಿ? ಕೆಂದಾಳೆ ಪದ್ಮ

ಕಟ್ಟೆಯ ಬುಡದಲ್ಲಿ ಕುಳಿತಿದ್ದಿ ಬಾ ಎಂದು ಕೈ ಹಿಡಿದು ಎಬ್ಬಿಸಿ ಅರಮನೆಯೊಳಗೆ ಕರೆತರುತ್ತಾಳೆ. ಆ ನಂತರ ಒಬ್ಬ ಗಂಡನಿಗೆ ಇಬ್ಬರು ಹೆಂಡತಿಯರಾಗಿ ಚೆನ್ನಾಗಿ ಬಾಳುತ್ತಿದ್ದಾರೆ ಕೊಟ್ರಾಡಿಯಲ್ಲಿ.

ಲೀಲಾ ಅವರ ಪಠ್ಯದಲ್ಲಿ ಕೊಡ್ಸರಾಳ್ವರು ಹಾಗೂ ಸಾಮುವಿನ ಮದುವೆಯ ವಿವರಗಳಿಲ್ಲ. ಬದಲಾಗಿ ಕೊಡ್ಸರಾಳ್ವರು ಬೋಲಮಲ್ಲಿಗೆಗೆ ಬರುತ್ತಿದ್ದವರು ಬರುವುದನ್ನು ನಿಲ್ಲಿಸಿದಾಗ ಬೋಲಬಾರಿ ಚತ್ತೇರಿಗಳು ಬೇಟೆಯ ನೆಪದಲ್ಲಿ ಓಲೆ ಕಳುಹಿಸಿ ಕರೆಸಿಕೊಳ್ಳುತ್ತಾರೆ. ಕೊಡ್ಸರಾಳ್ವರು ಬೋಲಮಲ್ಲಿಗೆಗೆ ಬರುವಾಗ ನಾಯಿಗಳನ್ನು ಬಿಟ್ಟು ಅಂದ ನೋಡುತ್ತಾರೆ. ಕೊಡ್ಸರಾಳ್ವರು ನಾಯಿಗಳಿಗೆ ತನ್ನ ಕಿಸೆಯಿಂದ ತೆಂಗಿನಕಾಯಿಯ ಚೂರುಗಳನ್ನು ಎಸೆದು ತನ್ನ ಬುದ್ಧಿವಂತಿಗೆಯನ್ನು ಪ್ರದರ್ಶಿಸುತ್ತಾರೆ. ಒಂದಾಟ ಚದುರಂಗ ಆಡೋಣವೇ ಎಂದು ಕೊಡ್ಸರಾಳ್ವರನ್ನು ಕರೆಯುತ್ತಾರೆ. ನಾವು ಚದುರಂಗದಲ್ಲಿ ಸೋತರೆ ನಮ್ಮ ಸಹೋದರಿಯನ್ನು ನೀವು ಮದುವೆಯಾಗಬೇಕು. ನೀವು ಸೋತರೆ ನಮ್ಮ ಹೂ ತೋಟಕ್ಕೆ ನೀರು ಹಾಕಬೇಕು, ಕಾಟಿ ಕರ್ಬಾಸುಗಳಿಗೆ (ಕೋಣ ಎತ್ತುಗಳಿಗೆ) ಅಕ್ಕಚ್ಚು ಮೇವು ಹಾಕುವ ಕೆಲಸ ಮಾಡಬೇಕೆನ್ನುವ ಷರತ್ತಿನಲ್ಲಿ ಆಡಲು ಕುಳಿತುಕೊಳ್ಳುತ್ತಾರೆ. ಆಡುವಾಗ ಬೆಕ್ಕಿನ ತಲೆಯ ಮೇಲೆ ದೀಪವಿರಿಸಿ ಆಟ ಮುಂದುವರಿಸುತ್ತಾರೆ. ಒಂದಾಟ ಆಡುವಾಗ ಕೊಡ್ಸರಾಳ್ವರು ಸೋಲುತ್ತಾ ಬರುವಾಗ ಮೆಲ್ಲನೆ ಸಣ್ಣ ಇಲಿಯನ್ನು (ಕಿಜ್ಜೆಲಿ) ಬಿಡುತ್ತಾರೆ ಬೋಲಬಾರಿ ಚತ್ತೇರಿಗಳು. ಬೆಕ್ಕು ಇಲಿಯನ್ನು ಕಂಡು ಹಾರುವಾಗ ದೀಪ ಅಡ್ಡ ಬೀಳುತ್ತದೆ. ಆ ಮೂಲಕ ಕೊಡ್ಸರಾಳ್ವರು ಗೆಲ್ಲುವಂತೆ ಮಾಡುತ್ತಾರೆ. ಈ ರೀತಿ ಮೂರು ಬಾರಿ ಆದಾಗಲೂ ಇಲಿಯನ್ನು ಬಿಟ್ಟು ಬೆಕ್ಕು ಹಾರುವಂತೆ ಮಾಡಿ ದೀಪ ನಂದುವ ಮೋಸದ ತಂತ್ರವನ್ನು ಹೂಡಿ ಕೊಡ್ಸರಾಳ್ವರು ಮೂರೂ ಆಟದಲ್ಲಿ ಜಯ ಗಳಿಸುವಂತೆ ಮಾಡುತ್ತಾರೆ. ಹೇಳಿದ ಮಾತಿನಂತೆ ಸಿರಿಯನ್ನು ಕೊಡ್ಸರಾಳ್ವರು ಮದುವೆಯಾಗಬೇಕು. ಆದರೆ ಸಾಮುವನ್ನು ಹೊರಗೆ ಹಾಕದೆ ಮದುವೆಯಾಗುವಂತಿಲ್ಲ. ಹೀಗಾಗಿ ಸಾಮುವನ್ನು ಅವಳ ಮನೆಗೆ ಕಳುಹಿಸಿಕೊಟ್ಟು ಬನ್ನಿ ಎಂದು ಚತ್ತೇರಿಗಳು ಹೇಳುತ್ತಾರೆ. ಇತ್ತ ಕೊಡ್ಸರಾಳ್ವರು ಸಾಮುವಿಗೆ ಕೊಡಬಾರದ ಶಿಕ್ಷೆಯನ್ನು ನೀಡಿ ಸಾಮುವೇ ಹೊರ ಹೋಗುವಂತೆ ಮಾಡುತ್ತಾರೆ. ಸಾಮು ಕೊಟ್ರಾಡಿ ಬಿಡುವ ಮೊದಲು 'ಕಂಚಿನ್ನ ತಟ್ಟುಗ ಪೆರ್ನ ಅಗೊಲಿ ಜೋಡು ತುಪ್ಪೆ ಮಾಯ ಆವೊಡು' (ತಾಮ್ರದ ಸವುಟು ದೊಡ್ಡ ತಾಮ್ರದ ಮಡಿಕೆ ಹಾಗೂ ಜೋಡು ತುಪ್ಪೆ (ಧಾನ್ಯ ಶೇಖರಣೆಯ ಕಣಜ) ಮಾಯವಾಗಬೇಕೆನ್ನುತ್ತಾರೆ. ತೆಂಗಿನಕಾಯಿಯ ಅರ್ಧಭಾಗದಲ್ಲಿ ದೀಪವುರಿಸಿ ಹೊಸ್ತಿಲಲ್ಲಿಟ್ಟು ಸಿರಿಯ ಕಣ್ಣಿಗೆ ಬಾಣವಾಗಿ ನಾಟುವಂತೆ ಶಪಿಸಿ ಅಂಗಡಿಜಾಲ ಬರ್ಕೆಗೆ ಹೊರಟು ಹೋಗುತ್ತಾಳೆ.

ಇತ್ತ ಕೊಡ್ಸರಾಳ್ವರಿಗೆ ಸಿರಿಯನ್ನು ಕೈ ಹಿಡಿಸಿ ಮದುವೆ ಮಾಡುವ ಕಾರ್ಯ ನಡೆಯುತ್ತದೆ. ಏಳು ಪರದೆಯನ್ನು ನಡುವಲ್ಲಿ ಹಿಡಿದು ಪರದೆಯ ಒಳಗೆ ಸಿರಿಯನ್ನು ನಿಲ್ಲಿಸಿ ಪರದೆಯ ಹೊರಗೆ ಕೊಡ್ಸರಾಳ್ವರನ್ನು ನಿಲ್ಲಿಸಿ ಪರಸ್ಪರ ಅವರ ಕೈಯನ್ನು

ಹಿಡಿಸುವ ಮೂಲಕ ಜಾತಿ ಕಟ್ಟಿನಂತೆ ಎರಡನೇ ಮದುವೆಯನ್ನು ನೆರವೇರಿಸುತ್ತಾರೆ. ಸಿರಿಯನ್ನು ಕೊಟ್ರಾಡಿಗೆ ಕರೆದುಕೊಂಡು ಬರಲು ಸಿರಿ ಬರಲಾಗದೆ ಚಕ್ಕುಲ್ಲ ಪಾದೆಯಲ್ಲಿ ಪನ್ನೆ ತತ್ರ ಅಡಿಗೆ ಹಾಕಿ ಕುಳಿತುಕೊಳ್ಳುತ್ತಾಳೆ. ನನ್ನ ಅಕ್ಕನವರು ಬಂದು ಕೈ ಹಿಡಿದು ಕರೆದುಕೊಂಡು ಹೋದರೆ ಮಾತ್ರ ಬರುವೆನೆನ್ನುತ್ತಾಳೆ. ದಾರಿ ಕಾಣದೆ ಕೊಡ್ಸರಾಳ್ವರು ಅಂಗಡಿಜಾಲ ಬರ್ಕೆಗೆ ಹೋಗಿ ಬಾಮುಕೆಲ್ಲರಿಗೆ ತನ್ನ ತಪ್ಪನ್ನು ತಿಳಿಸಿ ಕ್ಷಮಿಸುವಂತೆ ಬೇಡಿಕೊಂಡು ಬಾಮುಕೆಲ್ಲರು ಹಾಗೂ ಸಾಮುವಿನ ಜೊತೆ ಬರುತ್ತಾರೆ. ಸಿರಿಯನ್ನು ಕೈ ಹಿಡಿದೆಬ್ಬಿಸಿ ಸಾಮು ಕೊಟ್ರಾಡಿಗೆ ಕರೆ ತರುತ್ತಾಳೆ.

ಸಾಮು ಹಾಗೂ ಸಿರಿಯ ಸತ್ಯದ ಪರೀಕ್ಷೆ

ಕರ್ಗಿಯವರ ಪಠ್ಯದಲ್ಲಿ ಸಾಮು ಆಳ್ವೆದಿ ಹಾಗೂ ಸಿರಿ ಕೊಟ್ಟರಾಡಿಯ ಅರಮನೆಯಲ್ಲಿ ಜೊತೆಯಾಗಿ ಬಾಳುತ್ತಿದ್ದು ಒಂದು ದಿನ ಸಿರಿ ಮುಟ್ಟಾಗುತ್ತಾಳೆ. ಸೀಗೆಬಾಗೆ ಹಿಡಿದುಕೊಂಡು ಮಡಿವಾಳರ ಮಾಪು ಕರಿಯಕ್ಕೆ ಸ್ನಾನಕ್ಕೆ ಹೋಗಲು ಅಲ್ಲಿ ಹಕ್ಕಿಗೆ ಕುಡಿಯಲೂ ನೀರಿಲ್ಲದಾಗುತ್ತದೆ. ಎಳನೀರಿನಲ್ಲಿ ಮಿಂದು ಮಡಿಯಾಗು ಎನ್ನುತ್ತಾಳೆ ಸಾಮು. ಗೊನೆ ಗೊನೆ ಎಳೆನೀರು ತೆಗೆಸಿದರು. ಅದರಲ್ಲಿಯೂ ನೀರಿಲ್ಲದಾಗುತ್ತದೆ. ಇದು ಸಾಮುವಿನ ತಂತ್ರ ಎಂಬುದು ತಿಳಿಯುತ್ತದೆ ಸಿರಿಗೆ. ಕೊಡ್ಸರಾಳ್ವರಿಗೆ ಈ ವಿಚಾರ ತಿಳಿಸಲು ನೀವಿಬ್ಬರೂ ಸತ್ಯದವರು. ಯಾಕೆ ಹೀಗೆ ಮಾಡುತ್ತೀರಿ ಎಂದು ಇಬ್ಬರಿಗೂ ಬುದ್ಧಿ ಹೇಳುತ್ತಾರೆ. ಕೊನೆಗೆ ಸಿರಿ ಸ್ನಾನ ಮಾಡಿ ಬರುತ್ತಾಳೆ. ಸ್ವಲ್ಪ ದಿನದಲ್ಲಿ ಸಾಮು ಮುಟ್ಟಾಗುತ್ತಾಳೆ. ಸಾಮುವೂ ಸ್ನಾನಕ್ಕೆ ಹೋದಾಗ ಮಡಿವಾಳರ ಮಾಪುಕರಿಯದಲ್ಲಿ ಅದೇ ಸ್ಥಿತಿ. ಕೆಂದಾಳೆ ಎಳನೀರಲ್ಲಿ ಮಿಂದು ಶುದ್ಧವಾಗಿ ಎನ್ನುತ್ತಾಳೆ ಸಿರಿ. ಸಾವಿರ ಸಾವಿರ ಎಳನೀರು ಕಡಿಸಿದರೂ ನೀರಿಲ್ಲದಾಗುತ್ತದೆ. ಇದು ಸಿರಿಯ ತಂತ್ರ ಎಂಬುದು ತಿಳಿಯುತ್ತದೆ. ಕೊನೆಗೆ ಸಿರಿ ಮಡಿವಾಳರ ಮಾಪುಕರಿಯಕ್ಕೆ ಸಾಮುವನ್ನು ಕರೆದುಕೊಂಡು ಹೋಗುವಾಗ ನೀರಿರುವುದು ಕಾಣಿಸುತ್ತದೆ. ಹೀಗೆ ಇಬ್ಬರೂ ತಮ್ಮ ತಮ್ಮ ಸತ್ಯಗಳನ್ನು ತೋರ್ಪಡಿಸುವ ವಿವರಗಳಿವೆ.

ಶ್ಯಾಮರಾಯ ಶೆಟ್ಟಿಯವರ ಪಠ್ಯದಲ್ಲಿ ಸಿರಿ ಮುಟ್ಟಾದಾಗ ಸಿರಿ ಸಾಮುವಿನಲ್ಲಿ ಸೀಗೆ ಹಾಗೂ ನರ್ಲ್‌ನ ತುಂಡನ್ನು (ಸಾಬೂನಿಗೆ ಪರ್ಯಾಯವಾಗಿ ಬಳಸುವ ಸಸ್ಯವೊಂದರ ಕಾಯಿ) ಕೊಡುವಂತೆ ಕೇಳುತ್ತಾಳೆ. ಸಾಮು ಸತ್ಯನಾಪುರದಿಂದ ಬರುವಾಗ ನೀನು ತಂದದ್ದು ಇದೆಯೇ ಎಂದು ಕೇಳುತ್ತಾಳೆ. ಸಿರಿ ಪೊದರಿಗೆ ಹೋಗಿ ಕುಲವುದ ಬಳ್ಳಿ(ಒಂದು ರೀತಿಯ ಲೋಳೆ ಬರುವ ಬಳ್ಳಿ) ಬೊಳ್ಳೆ ಸೊಪ್ಪು ಹಾಗೂ ಪಲ್ಲೆಯ ಕೆತ್ತೆಯನ್ನು ಕಲಸಿ ಅದರಲ್ಲಿ ಸ್ನಾನ ಮಾಡಿ ಬರುತ್ತಾಳೆ. ಸಾಮು ಮುಟ್ಟಾದಾಗ ಸೀಗೆ ಹಾಗೂ ನರ್ಲ್‌ನ ತುಂಡನ್ನು ಕೇಳುವಾಗ ಸಿರಿಯೂ ನೀವು ಅಂಗಡಿಜಾಲ ಬರ್ಕೆಯಿಂದ ತಂದಿದ್ದೀರೇ ಎಂದು ಪ್ರಶ್ನಿಸಿ ಕೊನೆಗೆ ತಂದು ಕೊಡುತ್ತಾಳೆ. ಸಾಮು ಸ್ನಾನಕ್ಕೆ ಹೋಗುವಾಗ ನೀರಿಲ್ಲದಾಗುವ, ಕಪಿಲೆದನದ ಹಾಲು ಕರೆದರೂ ರಕ್ತ ಬರುವ ವಿವರಗಳಿವೆ. ನಿಮ್ಮನ್ನು

ಕೈ ಹಿಡಿದ ದೋಷಕ್ಕೆ ಮೈಲೆನೀರು ಸ್ನಾನಮಾಡಲಾಗದ ಸ್ಥಿತಿ ಒದಗಿ ಬಂತಲ್ಲ ಎಂದು ವಿಷಾದಿಸಿ ಕೊನೆಗೆ ಅಂಗಡಿಜಾಲ ಬರ್ಕೆಗೆ ಹೋಗಿ ಸ್ನಾನ ಮಾಡಿ ಬರುತ್ತೇನೆಂದು ಹೋಗುವ ವಿವರಗಳಿವೆ. ಅಲ್ಲಿಯೂ ನೀರಿಲ್ಲದಾದಾಗ ಕೊನೆಗೆ ಅಣ್ಣನವರ ಜೊತೆ ಕೊಟ್ರಾಡಿಗೆ ಇಬ್ಬರೂ ಬಂದು ಕೊಡ್ಸರಾಳ್ವರಲ್ಲಿ ದೂರು ಕೊಡುತ್ತಾರೆ. ಸಿರಿಯ ಜೊತೆ ಮಾತನಾಡಿ ಸಾಮುವಿನ ಅನ್ಯಾಯವನ್ನೂ ತಿಳಿಸಿ ಕೊನೆಗೆ ಮಡಿವಾಳರ ಮಾಪು ಕರಿಯದಲ್ಲಿ ನೀರಾಗುವಂತೆ ಮಾಡುತ್ತಾಳೆ ಸಿರಿ.

ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಪಠ್ಯದಲ್ಲಿ ಇಬ್ಬರೂ ಮುಟ್ಟಾದಾಗ ಸ್ನಾನಕ್ಕೆ ನೀರಿಲ್ಲದಂತೆ ಮಾಡುವ ವಿವರಗಳಿವೆ. ಆದರೆ ಇಬ್ಬರೂ ತಮ್ಮ ಸೊಂಟದ ಗೆಜ್ಜೆ ಕತ್ತಿಯಿಂದ ನೆಲದಲ್ಲಿ ಮೂರು ಗೆರೆ ಎಳೆದು ಕೆರೆಯಲ್ಲಿ ನೀರು ತುಂಬಿಸಿ ಸ್ನಾನ ಮಾಡಿ ಬರುವ ವಿವಗಳಿವೆ. ಅಮೃತರ ಪಠ್ಯದಲ್ಲಿ ಸಿರಿ ಮುಟ್ಟಾಗುವಾಗ ಸಾಮು ಸೀಗೆ ಬಾಗೆ ಬೋಳಮಲ್ಲಿಗೆಯಿಂದ ತಂದಿದ್ದಿಯೇ ಎಂದು ಹೀಯಾಳಿಸಿದಾಗ ತಾನೇ ತನ್ನ ಸತ್ಯದಿಂದ ಇವುಗಳನ್ನು ಜೋಡಿಸಿ ಸ್ನಾನ ಮಾಡಿ ಬರುವ ವಿವರಗಳಿವೆ. ಸಾಮು ಮುಟ್ಟಾದಾಗ ಸಿರಿ ಸ್ನಾನಕ್ಕೆ ನೀರಿಲ್ಲದಂತೆ ಮಾಡುವುದು. ಅಂಗಡಿಜಾಲ ಬರ್ಕೆಯಿಂದ ಬಾಮುಕೆಲ್ಲರು ಬಂದು ಇಬ್ಬರನ್ನೂ ಸಿರಿಪಡಿಸಿ ಹೊಂದಾಣಿಕೆಯಿಂದ ಬದುಕಬೇಕೆಂದು ತಿಳಿಸುವ ವಿವರ ಇದೆ. ಗೋಪಾಲ ನಾಯ್ಕರ ಪಠ್ಯದಲ್ಲಿ ಸಿರಿ ಮತ್ತು ಸಾಮು ಮುಟ್ಟಾದಾಗ ನೀರಿಲ್ಲದಂತೆ ಮಾಡುವ ವಿವರಗಳಿವೆ. ಕೊನೆಗೆ ಕೊಡ್ಸರಾಳ್ವರು ಕಾನೆಬೆಟ್ಟಿನ ದುರ್ಗಲ್ಲ ಪೆರ್ಗಡೆಯವರನ್ನು ಕರೆಸಿ ಇಬ್ಬರನ್ನೂ ಸಮಾಧಾನಗೊಳಿಸಿ ಒಂದೇ ಎಲೆಯಲ್ಲಿ ಇಬ್ಬರೂ ಜೊತೆಯಾಗಿ ಉಣ್ಣುವಂತೆ ಮಾಡಿ ಸಮಾಧಾನಗೊಳಿಸುವ ವಿವರ ಇದೆ. ರಾಮಕ್ಕ ಅವರ ಪಠ್ಯದಲ್ಲಿ ಇಬ್ಬರೂ ಸೂತಕವಾದಾಗ ಸ್ನಾನಕ್ಕೆ ನೀರಿಲ್ಲದಂತೆ ಮಾಡಿ ತಮ್ಮ ತಮ್ಮ ಸತ್ಯವನ್ನು ಪ್ರದರ್ಶಿಸುವ ವಿವರ ಇದೆ. ಲೀಲಾ ಅವರ ಪಠ್ಯದಲ್ಲಿ ಸೂತಕವಾಗುವ ವಿವರಗಳು ಕಂಡುಬರುವುದಿಲ್ಲ.

ಸಿರಿಯು ಗರ್ಭವತಿಯಾಗಿ ಸೊನ್ನೆಯ ಹೆರಿಗೆ, ಸಿರಿಯ ಅಂತ್ಯ ಇತ್ಯಾದಿ

ಕರ್ಗಿಯವರ ಪಠ್ಯವು ಸಿರಿ ಎರಡನೇ ಬಾರಿ ಗರ್ಭವತಿಯಾಗುವುದನ್ನು ತಿಳಿಸುತ್ತದೆ. ಗರ್ಭ ಬೆಳೆದು ಏಳು ತಿಂಗಳಾಗುತ್ತಾ ಬರಲು ಅಂಗಡಿಜಾಲ ಬರ್ಕೆಯ ಬಾಮುಕೆಲ್ಲರು ಸಾಮು ಹಾಗೂ ಸಿರಿಯನ್ನು ತನ್ನರಮನೆಗೆ ಔತಣಕ್ಕಾಗಿ ಕಳುಹಿಸಿಕೊಡುವಂತೆ ಕೊಡ್ಸರಾಳ್ವರಿಗೆ ಹೇಳುತ್ತಾರೆ. ಅದಕ್ಕೇನಂತೆ ಬೆಳಗ್ಗೆ ಬಂದರೆ ಸಾಯಂಕಾಲ ಹಿಂದೆ ಬಂದಾರು ಎನ್ನುತ್ತಾರೆ. ಅಂತೆಯೇ ಮರುದಿನ ಅಕ್ಕತಂಗಿ ಇಬ್ಬರೂ ಅಂಗಡಿಜಾಲ ಬರ್ಕೆಗೆ ಹೊರಡುವ ತಯಾರಿಯಲ್ಲಿರಲು

ತುಳುಪಠ್ಯ

ಏರಾ ಒಂಜಿ ಈ ನಾಲಿಲ್ಲ್ ನಟ್ಟೊನು ಓ ಮೂಜಿಲ್ಲ್ ಬೇಡೊನು
ಬರ್ಪಿನವು ನರ್ಸನ್ನೆಂದ್ ಸಿರಿ ದಾನೆ ಓ ಪನ್ಂಬೆರ್‌ದೇ

ಆತೆನ ಪೊರ್ತುಗು ಒರ್ಲ ಅರಿ ಓ ಒಂಜಿ ತಾರಯಿ ಒಂಜಿ ಕವಲೆ ಬಚ್ಚಿರೆ ಒಂಜಿ ಬಜ್ಜೆಯಿ
ಪತ್ತ್‌ದ್ ಪಡಿಸಂಪಗೆ ಓ ಕೊರ್ದ್‌ರ್ಲ ಮಗಾ ಸಿರಿಂದ್ ಪನ್ಪೆರ್ ಸಾಮು ಆಳ್ವೆದಿ
ಅವೆನ್ ಪತೊನುದು ಆಜರೆ ಅಂಜಣೊ ಮೂಜರೆ ಮುಂದಿಲ್ಗ್ ಪೆರುವ ಮುಂದಿಲ್‌ಗ್
ಕಾರ್ ದೀಪೆಂದ್ ಪನ್ನಗೋ
ಸಿರಿ ದಾನೆ ತೂಪೆರ್‌ದೇ ಕೆಕ್ಕಿಲ್‌ಡೇ ಅರ್ತೊಗುರ್ತೊದಾ ಸೊತ್ತು ತೋಜುಂಡಪ್ಪಾ
ಕೆಕ್ಕಿಲ್‌ಡೇ ನಾಯೆರ್‌ದ ತುಂಡು ಪಾಡೊನುದು ನಾಲಿಲ್ಲ್ ನಟ್ಟೊನು ಬರ್ಪಿನವು ತೂಯೆರ್
ಬತ್ತಕೇರಿ ಓ ಬಸ್ಲೂರುದ ಮದಿಮ್ಮಯ ಗುರ್ತೊ ಕಾಂತಾಲ್ವೆರೆ ಗುರ್ತೊ ಸಿರಿಗ್ ತಿಕ್ಂಡ್‌ದೆ
ತಡ್ಪೆನ್ ಪತೊಂಡೊಲು ಪಿರ ಪಿರ್ಜಿಯೊಲು ಓ ಅಕ್ಕೆರೇ ಈರ್ ಕೊರ್ದ್‌ರ್ಲೆಂದ್
ಪಂಡೊಲೆ

ಕನ್ನಡಾನುವಾದ

ಯಾರೋ ಒಬ್ಬ ನಾಲ್ಕು ಮನೆ ಬೇಡುತ್ತಾ ಮೂರು ಮನೆಯಲ್ಲಿ ಭಿಕ್ಷೆಯೆತ್ತುತ್ತಾ
ಬರುವ ನರಸಣ್ಣ ಎಂದು ಸಿರಿ ಹೇಳುತ್ತಾರೆ
ಅವನಿಗೆ ಒಂದು ಬಳ್ಳ ಅಕ್ಕಿ, ಒಂದು ತೆಂಗಿನಕಾಯಿ, ಒಂದು ಕವಲೆ ವೀಳ್ಯದೆಲೆ
ಒಂದು ಅಡಿಕೆ
ಪಡಿ ಕೊಟ್ಟು ಬಿಡು ಸಿರಿ ಎಂದು ಹೇಳುತ್ತಾರೆ ಸಾಮು ಆಳ್ವೆದಿ
ಅವನ್ನು ಹಿಡಿದುಕೊಂಡು ಆರೂವರೆ ಅಂಜಣ, ಮೂರೂವರೆ ಮುಂದಿಲ್ ದಾಟಿ
ಅಂಗಳಕ್ಕೆಕಾಲಿಡುತ್ತೇನೆ ಎನ್ನುವಷ್ಟರಲ್ಲಿ
ಸಿರಿಗೆ ಕುತ್ತಿಗೆಯಲ್ಲಿ ಕಾಣಿಸುತ್ತದೆ ಗುರುತಿನ ಸ್ವತ್ತು
ಕುತ್ತಿಗೆಗೆ ನೇಗಿಲಿನ ತುಂಡು ಕಟ್ಟಿಕೊಂಡು ನಾಲ್ಕು ಮನೆ ಬೇಡುತ್ತಾ ಬರುವುದನ್ನು
ನೋಡಿದರು
ಬತ್ತಕೇರಿ ಬಸಲೂರಿನ ಕಾಂತಾಳ್ವರ ಗುರುತು ಸಿರಿಗೆ ಸಿಕ್ಕಿತು
ಗೆರಸೆಯನ್ನು ಹಿಡಿದು ಹಿಂತಿರುಗಿದಳು ಸಿರಿ ಓ ಅಕ್ಕನವರೇ ನೀವೇ ಭಿಕ್ಷೆ ನೀಡಿ
ಎಂದಳು (ಪುಟ 324–326).

ಯಾಕೆ ಎಂದು ಸಾಮು ಕೇಳಲು ಎಲ್ಲಿಗಾದರೂ ಹೊರಟು ನಿಂತಾಗ ಭಿಕ್ಷೆ ನೀಡಿ ಹೋಗಬೇಡ ಎಂದು ನನ್ನ ಅಜ್ಜನವರು ಹೇಳಿದ್ದರು ಎನ್ನುತ್ತಾಳೆ ಸಿರಿ. ಹಾಗೆ ಸಾಮು ಬಂದು ಭಿಕ್ಷೆ ನೀಡುತ್ತಾಳೆ. ಸಿರಿ ಹೇಳುತ್ತಾಳೆ ಬಸಲೂರ ಕಾಂತಾಳ್ವನ ಮಾತು ಮುಳುಗಿ ಹೋಯಿತು. ಸತ್ಯನಾಪುರದ ಸತ್ಯಮಲೋಕಂದ ಸಿರಿಯ ಸತ್ಯ ಗೆದ್ದಿತು ಎನ್ನುತ್ತಾಳೆ.

ಅಲ್ಲಿಂದ ಹೊರಟು ಅಕ್ಕ ತಂಗಿ ಇಬ್ಬರೂ ಅಂಗಡಿಜಾಲ ಬರ್ಕೆಗೆ ಹೋಗುತ್ತಾರೆ. ದಾರಿಯಲ್ಲಿ ನಡೆದು ಹೋಗಲು ಅಲಿಕುಂಜ ಪಿಲಿಕುಂಜ ಎಂದರೆ ಯಾವುದು ಅಕ್ಕ ಎಂದು ಕೇಳುತ್ತಾಳೆ ಸಿರಿ. ಅದು ನಿನಗೆ ಹಿಂತಿರುಗಿ ಬರುವಾಗ ತಿಳಿಸುವೆ ಎನ್ನುತ್ತಾಳೆ. ಅಂಗಡಿಜಾಲ ಬರ್ಕೆಗೆ ಬಂದರು. ಸಿರಿಗೆ ಬಾಮು ಕೆಲ್ಲರು ಔತಣ ಹಾಕಿದರು.

ತುಳುಪಠ್ಯ

ನಾರಾಯಿನ ನಾರಾಯಿನ ಓ ಅಕ್ಕೆರೇ
ನಮ ಮೆಗ್ದಿಲಾ ಪಲಿಲಾ ಓ ನಮಾ
ಒಂಜೇ ಇರೆಟ್ಟ್ ಕುಲ್ಲುಗಾ ಒಂಜೇ ಇರೆಟ್ಟ್ ಒನಸ್ ಬಲ್ಮನ ಮಲ್ಪುಗಂದೆರ್
ಎನ್ನ ಇರೆಟ್ಟ್ ಓ ಈರೆಗ್ ಸಮಪಾಲ್ ಓ ಎಂಕ್ಂದೆರ್
ಸಮಪಾಲ್ ಓ ಈರೆಗಕ್ಕೆರೆಂದೊಲು
ಬಾರೆದ ಇರೆಕ್ಕ್ ಓ ಅದ್‌ರ್ ಕೊರ್ಯೊಲು
ಸತಕಾಲೊಡ್ದು ಸಾವಿರಕಾಲೊ ಮುಟ್ಟ ಓ ಬಾರೆದಿರೆಟ್ಟೇ ನಮಪಾಲ್ಂದೊಲು

ಕನ್ನಡಾನುವಾದ

ನಾರಾಯಣ ನಾರಾಯಣ ಓ ಅಕ್ಕನವರೇ
ನಾವು ಅಕ್ಕ ತಂಗಿ ಇಬ್ಬರೂ
ಒಂದೇ ಎಲೆಯಲ್ಲಿ ಕುಳಿತು ಊಟ ಮಾಡುವಾ..........
ನನ್ನ ಎಲೆಯಲ್ಲಿ ಓ ನಿಮಗೆ ಸಮಪಾಲು ಓ ನನಗೂ ಎಂದರು
ಸಮಪಾಲು ನಿಮಗೂ ಅಕ್ಕನವರೇ ಎಂದಳು
ಬಾಳೆಯ ಎಲೆಗೆ ಓ ಭಾಗ ಕೊಟ್ಟಳು
ಶತಕಾಲದಿಂದ ಸಾವಿರ ಕಾಲದವರೆಗೆ ಓ ಬಾಳೆ ಎಲೆಯಲ್ಲಿ ಸಮಪಾಲು ಎಂದಳು
(ಪುಟ 330).

ಹೀಗೆ ಸಾಮುವನ್ನು ಒಂದೇ ಎಲೆಯಲ್ಲಿ ಉಣ್ಣುವಂತೆ ಕರೆದಳು. ನನ್ನದರಲ್ಲಿ ಶತಕಾಲದಿಂದ ಸಾವಿರ ಕಾಲದವರೆಗೆ ಸಮಪಾಲು ನಿಮಗೆ ಎಂದಳು ಸಿರಿ (ಕರ್ಗಿ ಈ ಬಗೆಗೆ ವಿವರಿಸುತ್ತಾ ಬಾಳೆ ಎಲೆಯಲ್ಲಿ ನಡುವೆ ಇರುವ ದಂಟು ಅಂದು ಸಿರಿ ಸಾಮು ಒಂದೇ ಎಲೆಯಲ್ಲಿ ಕುಳಿತು ಉಣ್ಣುವಾಗ ತನ್ನದರಲ್ಲಿ ಸಮಪಾಲು ನೀಡಿದ ಗುರುತು ಎಂದರು). ರಾಮಕ್ಕ ಅವರ ಸಂಧಿಯಲ್ಲಿ ಈ ವಿವರಗಳಿಲ್ಲ.

ಹೀಗೆ ಔತಣ ಮುಗಿಸಿ ಅಕ್ಕ ತಂಗಿ ಕೊಟ್ಬರಾಡಿಯ ಮಾರ್ಗವಾಗಿ ಹೊರಡುತ್ತಾರೆ. ದಾರಿಮಧ್ಯೆ ಅಲಿಕುಂಜ ಪಿಲಿಕುಂಜದ ಬಗೆಗೆ ತಿಳಿಸಿ ಎನ್ನುತ್ತಾಳೆ ಸಿರಿ. ಬೇಡ ಬೇಡವೆಂದರೂ ಕೇಳಲಿಲ್ಲ. ಸಾಮು ಈ ಕಾಡಿನ ಮಹತ್ವವನ್ನು ತಿಳಿಸುತ್ತಾಳೆ. ಅಷ್ಟು ಹೊತ್ತಿಗೆ ದಾರಿಮಧ್ಯೆ ಸಿರಿಗೆ ಹೆರಿಗೆ ನೋವು ಕಾಣಿಸಿಕೊಳ್ಳುತ್ತದೆ. ಸಾಮುವಿಗೆ ಏನು ಮಾಡಬೇಕೆಂದು ತಿಳಿಯುವುದಿಲ್ಲ. ಆ ಹೊತ್ತಿಗೆ ಬಡ ಬ್ರಾಹ್ಮಣ ಕುಮಾರನೊಬ್ಬ ಕಾಣಿಸಿಕೊಂಡು ಸಾಮುವಿಗೆ ಕೊಟ್ಬರಾಡಿಗೆ ಹೋಗಿ ಮಗುವಿನ ಹೊಕ್ಕಳ ಬಳ್ಳಿಯನ್ನು ತುಂಡರಿಸಲು ಕತ್ತಿ ಹಾಗೂ ಹಾಳೆಯೊಂದನ್ನು ತಾ ಎಂದು ಕಳುಹಿಸುತ್ತಾನೆ. ಇತ್ತ ಸಿರಿಯು ತನ್ನ ಸತ್ಯದಿಂದ ಅಜ್ಜನವರನ್ನು ಸ್ಮರಿಸಿ ಅಡಿಕೆಯೊಂದನ್ನು ಭೂಮಿಯಲ್ಲಿ

ಇಟ್ಟು ಮರವಾಗಿ ನಿರ್ಮಿಸಿ ಅದರ ಹಾಳೆಯಲ್ಲಿ ಮಗುವನ್ನು ಮಲಗಿಸಿ ಮಗುವಿಗೆ ಮೊಲೆಯುಣಿಸುತ್ತಾಳೆ. ಮಗು ಕಿರುಚಿ ಕಿರುಚಿ ಅಳುತ್ತದೆ. ಆ ಹೊತ್ತಿಗೆ ಕುಮಾರ ಮಾಯದಲ್ಲಿ ಬಂದು ಬೊಳ್ಳೊಟ್ಟು ಬೊಳ್ಳಿಮಾಡ ಬಿಳಿಯ ಬುಗರಿ ಮರದಲ್ಲಿ ಕಂಚಿಯ ಕೋಳಿಯಾಗಿ ಜೋರಾಗಿ ಕೂಗಿ ನೀನು ನನ್ನನ್ನು ಮಗ ಎಂದು ಕರೆದರೆ ನಾನು ತಾಯಿ ಎಂದು ಪ್ರೀತಿಯಿಂದ ಬರುವೆ ಎಂಬುದಾಗಿ ಅಂದು ತಾನು ಮಾಯವಾಗುವ ಸಂದರ್ಭ ಕೊಟ್ಟಿರುವ ಮಾತಿನಂತೆ ಬಂದು ಕರೆದ. ಸಿರಿ ಜೋರಾದ ಪ್ರವಾಹ ಬರಬೇಕೆಂದು ಪ್ರಾರ್ಥಿಸಿದಳು. ಮಗುವಿಗೆ ಸೊನ್ನೆ ಎಂಬ ಹೆಸರಿಟ್ಟು ಪ್ರವಾಹದಲ್ಲಿ ಮಗುವನ್ನು ತೇಲಿಬಿಟ್ಟು ಗುರ್ಗಲಾಡಿ ಚಂದು ಪೆರ್ಗಡೆಯವರಿಗೆ ಸಿಗಬೇಕೆಂದು ಹೇಳಿದಳು. ತಾನು ಕುಮಾರನಿಗೆ ನಿನಗೊಂದು ತಂಗಿಯನ್ನು ಹೆತ್ತು ಬರುವೆನೆಂದು ಕೊಟ್ಟ ಮಾತನ್ನು ಉಳಿಸಿ ಮಾಯವಾಗುತ್ತಾಳೆ.

ಶ್ಯಾಮರಾಯ ಶೆಟ್ಟಿಯವರ ಕಾವ್ಯದಲ್ಲಿ ಸಿರಿ ಗರ್ಭವತಿಯಾಗಿ ಎಂಟು ತಿಂಗಳಾಗುತ್ತಾ ಬರುವಾಗ ಅಂಗಡಿಜಾಲ ಬರ್ಕೆಗೆ ಹೋಗಿ ಬರುವ ಎಂದು ಸಾಮು ತಿಳಿಸುವ ವಿವರಗಳಿವೆ. ಸಿರಿ ಗಂಡನಿಗೆ ತಿಳಿಸಬೇಕೆಂದು ಹೇಳಿದಾಗ ಸಾಮು ಕೊಡ್ಸರಾಳ್ವರಲ್ಲಿ ಹೇಳಿ ಇಬ್ಬರೂ ಜೊತೆಯಾಗಿ ಅಂಗಡಿಜಾಲ ಬರ್ಕೆಗೆ ಹೋಗುತ್ತಾರೆ. ಅಂಗಡಿಜಾಲ ಬರ್ಕೆಯಲ್ಲಿ ಬಾಮುಕೆಲ್ಲರು ಔತಣ ಹಾಕುತ್ತಾರೆ. ಔತಣ ಸ್ವೀಕರಿಸಿ ಇಬ್ಬರೂ ಹೊರಟು ಕೊಟ್ರಾಡಿಯ ದಾರಿ ಹಿಡಿಯುತ್ತಾರೆ. ದಾರಿ ಮಧ್ಯೆ ಬಿಸಿಲಿನ ಝಳ ತಾಳಲಾರದೆ ಸಿರಿಹೊನ್ನೆಯ ಮರದಡಿ ಕುಳಿತುಕೊಳ್ಳುತ್ತಾರೆ. ಅಲ್ಲೆ ಸಿರಿಗೆ ಹೆರಿಗೆ ನೋವು ಕಾಣಿಸಿಕೊಳ್ಳುತ್ತದೆ. ಸಾಮುವನ್ನು ತೋಟದಿಂದ ಹಾಳೆ ತರುವಂತೆ ಕಳುಹಿಸಿಕೊಡುತ್ತಾಳೆ. ಅಂಗಡಿಜಾಲ ಬರ್ಕೆಯಿಂದ ಸಿರಿ ಹೊರಡುವಾಗ ಬಾಮುಕೆಲ್ಲರು ವೀಳ್ಯದ ಜೊತೆಗೆ ಇಡಿ ಅಡಕೆ ಇಟ್ಟು ಕೊಟ್ಟಿದ್ದರು. ಸಿರಿ ಅದನ್ನೇ ನೆಲದಲ್ಲಿ ಇಟ್ಟು ತನ್ನ ಸತ್ಯದಿಂದ ಅಡಿಕೆಯ ಸಸಿಯಾಗಿ ನಿರ್ಮಿಸಿ ಅದರಿಂದ ಹಾಳೆಯನ್ನು ಪಡೆದು ಮಗುವನ್ನು ಮಲಗಿಸುತ್ತಾಳೆ. ಸೊನ್ನೆಯನ್ನು ಹೆತ್ತ ಘಳಿಗೆಯಲ್ಲಿ ಸಿರಿಯ ಮೊದಲ ಗಂಡ ಕಾಂತುಪೂಂಜ ಕುತ್ತಿಗೆಗೆ ನೇಗಿಲು ನೊಗ ಕಟ್ಟಿಕೊಂಡು ಬಗಲಿಗೆ ಜೋಳಿಗೆ ಹಾಕಿಕೊಂಡು ಬೇಡುತ್ತಾ ಬರುತ್ತಾನೆ. ಆಗ ಸಿರಿ ಗಂಡನನ್ನು ನೋಡಿ ಅಯ್ಯಯ್ಯೋ ಪಾಪವೇ, ಎಲ ಎಲ ದೋಷವೇ, ನಾನು ಹೇಳಿದ ಮಾತು ಫಲಿಸಿ ಬಂತು. ದೇವರು ಬೆರ್ಮೆರ್ ನನ್ನನ್ನು ಕರೆಯುವ ಹೊತ್ತಾಯಿತು. ಈ ಮಗುವನ್ನು ಕೊಂಡು ಹೋಗಿ ನನ್ನ ಮದುಮಗನಿಗೆ ತೋರಿಸಿಬಿಡಿ. ನಾನು ಮಾಯವಾಗುತ್ತೇನೆ. ಮಗುವನ್ನು ಕಾನಬೆಟ್ಟಿನ ಅಜ್ಜನವರಿಗೆ ಸಾಕಲು ಕೊಡಿ. ಅಲ್ಲಿ ಮಗುವಿಗೆ ಹೆಸರು ಅವರಾಗಲೀ, ನೀವಾಗಲೀ ಇಡಬಾರದು. ಸಣ್ಣ ತೋಡಿನ ಬುಡದಲ್ಲಿ ಹುಟ್ಟಿದ ಸೊನ್ನೆ ಮದುಮಗಳೆಂಬ ಹೆಸರನ್ನು ಇಟ್ಟುಬಿಡಿ ಅಕ್ಕನವರೇ ಎಂದು ಹೇಳಲು ಸಾಮು ನನಗೊಂದು ದಾರಿ ತೋರಿಸಿ ಬಿಡು ಮಗಾ ಎಂದು ಕೇಳುತ್ತಾಳೆ. ಆಗ ಸಿರಿ ನೀವು ಹೋಗಿ ಕಾನಬೆಟ್ಟು ಅಜ್ಜನವರಿಗೆ ಮಗುವನ್ನು ಕೊಡಿ, ಕೊಟ್ಟರಾಡಿಗೆ ಹೋಗಿ ಗಂಡನಿಗೆ ಪಿಂಜಾಣಿಯಲ್ಲಿ ಹಾಲು,

ಕಂಜಣ (ಬಟ್ಟಲು)ದಲ್ಲಿ ಎಲೆಕಾಯಿ ಕೊಡಿ ಅಕ್ಕನವರೇ. ನೀವು ಒಳಗಣ ಹೊಸ್ತಿಲಿಗೆ ಬಲದ ಕಾಲು ಹಾಕಿ, ಹೊರಗಣ ಹೊಸ್ತಿಲಿಗೆ ಎಡ ಕಾಲು ಹಾಕಿ ಜೀವಬಿಟ್ಟು ವೈಕುಂಠ ಸೇರಿ ಅಕ್ಕನವರೇ ಎನ್ನುತ್ತಾಳೆ. ನನ್ನ ಮಗನಲ್ಲಿ ನನಗಿಂತ ಮೊದಲು ಒಡಿಯಲು ಹಿಂಗಾರದ ಹೂ, ನಿಲ್ಲಲು ದಲ್ಯ ಆದಿ ಆಲಡೆ, ಮೂಲ ಸ್ಥಾನದಲ್ಲಿ ಕೊಡಲು ಹೇಳುತ್ತೇನೆಂದು ತಿಳಿಸಿ ಮಾಯವಾಗುತ್ತಾಳೆ.

ಇತ್ತ ಸಾಮು ಅಂಗಡಿಜಾಲಬರ್ಕೆ ಬಾಮು ಕೆಲ್ಲರು, ನಾರ್ಣ ಕೆಲ್ಲರಿಗೆ ಮಗುವನ್ನು ತೋರಿಸಿ, ಕೊಟ್ಟರಾಡಿಯ ಕೊಡ್ಸರಾಳ್ವರಿಗೆ ತೋರಿಸಿ ಉರ್ಕಿದೊಟ್ಟಿನ ದುರ್ಗಲ್ಲ ಪೆರ್ಗಡೆಯವರಿಗೆ ಸಾಕಲು ಮಗುವನ್ನು ಕೊಟ್ಟು ಸಿರಿ ಹೇಳಿದಂತೆ ಸಾಮು ಜೀವ ಬಿಟ್ಟು ವೈಕುಂಠ ಸೇರುತ್ತಾಳೆ. ತಾಯಿ ಮಕ್ಕಳು ಹೋಗಿ ಬೊಲ್ಯೊಟ್ಟಿನ ಮಣ್ಣಲ್ಲಿ ನೆಲೆಸುವ ವಿವರಗಳಿವೆ. ಸಾಮುವಿನ ಈ ರೀತಿಯ ಮರಣದ ಪ್ರಸ್ತಾವ ಬೇರೆ ಪಠ್ಯಗಳಲ್ಲಿ ಇಲ್ಲ.

ಗಿಡಿಕೆರೆ ರಾಮಕ್ಕ ಮಗ್ಗೇರ್ತಿಯವರ ಪಠ್ಯವು ಕೆಲವು ಹೊಸ ವಿವರಗಳನ್ನು ನೀಡುತ್ತದೆ. ಸಿರಿ ಗರ್ಭವತಿಯಾಗುವ ವಿವರಗಳು ಆಮೇಲೆ ಬರುತ್ತವೆ. ಅದಕ್ಕಿಂತ ಮೊದಲು ಬಸಲೂರ ಕಾಂತುಪೂಂಜನಿಗೆ ಬಲುಬಡತನ ಬಂದು

ತುಳುಪಠ್ಯ

ಪರಿಯೆರೆ ತೆಲಿದಾಂತೆ ಪೋತುಂಡುಗೆನಾ
ಜೋಡು ಮಾರಿಕಿದೆಟ್ಟ್ ಒತ್ತೆಕಣ್ಣ ಎರು ಒತ್ತೆಕಣ್ಣ ಬೋರಿ ಆತ್ಂಡ್‌ಗೆನಾ
ನುಪ್ಪು ದಾಂತೆನೆ ದಿನೊ ಮೂಜಾಂಡತ್ತೋ ಬಸಲೂರ ಕಾಂತಾಳ್ವಗೋ

ಕನ್ನಡಾನುವಾದ

ಕುಡಿಯಲು ಗಂಜಿಯ ತಿಳಿಯೂ ಇಲ್ಲದೆ ಹೋಗಿದೆಯಂತೆ
ಜೋಡು ಮಾರಿ ಹಟ್ಟಿಯಲ್ಲಿ ಒತ್ತೆಕಣ್ಣ ಎತ್ತು ಒತ್ತೆ ಕಣ್ಣ ಹೋರಿ ಆಗಿದೆಯಂತೆ
ಅನ್ನವಿಲ್ಲದೆ ಮೂರು ದಿನವಾಗಿದೆಯಂತೆ ಬಸಲೂರ ಕಾಂತಾಳ್ವರಿಗೆ (ಪುಟ 160)

ಕಾಂತಾಳ್ವನ ಬಸಲೂರ ಅರಮನೆಯ ಸ್ಥಿತಿ ಶೋಚನೀಯವಾಗಿದೆ. ಒಲೆ ಉರಿಸದೆ ಮೂರು ದಿನವಾಗಿದೆ. ತಾಯಿ ಸಂಕರು ಪೂಂಜೆದಿ ಹೇಳುತ್ತಾಳೆ ಮಗಾ ನೆರೆಕರೆಯ ಕೂಲಿ ಹೆಂಗಸರ ಜೊತೆ ಬೈಹುಲ್ಲು ಹೊಡೆಯಲು ಹೋಗುತ್ತೇನೆ. ಕೊನೆಯ ಪಕ್ಷ ಮೂರು ಪಾವು ಬೈ ಹುಲ್ಲಿನ ಅಕ್ಕಿಯಾದರೂ ದೊರೆತೀತು. ಅದನ್ನು ಹಿಡಿದುಕೊಂಡು ಬಂದು ಬಸಲೂರ ಅರಮನೆಯಲ್ಲಿ ಗಂಜಿ ಹಾಗೂ ಚಟ್ನಿ ಮಾಡಿ ಉಣ್ಣುವ ಸ್ಥಿತಿ ಒದಗಿ ಬಂತಲ್ಲಾ,

ತುಳುಪಠ್ಯ
ಕಾಂತಾಳ್ವಗ್ ಇನಿ ಬೊಲ್ಲಿನ್ನ ಅರಿವಾಣೊಡು ಬೊಲಿಯರಿತ್ತ ಬೋವನೊ ದಾಂತೆ ಪೋಂಡೇ
ಬೈತರಿತ್ತ ಬೋವನೊ ತಿಕ್ಕ್‌ದ್ ಬತ್ತ್‌ಂಡೇ

ಕನ್ನಡಾನುವಾದ
ಕಾಂತಾಳ್ವನಿಗೆ ಇಂದು ಬೆಳ್ಳಿಯ ಹರಿವಾಣದಲ್ಲಿ ಬೆಳ್ತಿಗೆ ಅಕ್ಕಿಯ ಅನ್ನ ಇಲ್ಲದಾಯಿತು
ಬೈಹುಲ್ಲಿನ ಕಪ್ಪಕ್ಕಿಯ ಅನ್ನ ಸಿಕ್ಕಿತು (ಪುಟ 162).

ಇದನ್ನು ಬಾಯಿಯ ಹತ್ತಿರ ಕೊಂಡು ಹೋಗುವಾಗಲೇ ಮೂಗಿಗೆ ವಾಸನೆ ಬಂದು ಊಟ ಮಾಡಲಾರದೆ ಏಳುತ್ತಾನೆ. ತಾಯಿಗೆ ಹೇಳುತ್ತಾನೆ

ತುಳುಪಠ್ಯ
ಇನಿ ನಮ ಮಲ್ತಿನ ಕರ್ಮದ ಸಾರೆತಿ ಎಚ್ಚಾಂಡ್ ಅಪ್ಪೆರೇ
ಇನಿ ಸಿರಿ ಮಲ್ತಿನ ಧರ್ಮ ಎಚ್ಚಾಂಡತ್ತಪ್ಪೆರೇ
ಇನಿ ನಮೊ ವನಸ್ ಬಲ್ಮನ ಮಲ್ಪಂದೆ ದಿನ ನಾಲಾದ್ ಪೋಂಡತ್ತೇ
ಇನಿ ಪನ್ಪೆರ್‌ದೇ ಬಸಲೂರ ಕಾಂತಾಲ್ವೇ

ಕನ್ನಡಾನುವಾದ
ಇಂದು ನಾವು ಮಾಡಿದ ಕರ್ಮದ ಫಲ ಹೆಚ್ಚಾಯಿತು ತಾಯಿಯವರೇ
ಇಂದು ಸಿರಿ ಮಾಡಿದ ಧರ್ಮದ ಫಲ ಹೆಚ್ಚಾಯಿತು
ಇಂದು ನಾವು ಊಟ ಮಾಡದೆ ದಿನ ನಾಲ್ಕಾಗಿ ಹೋಯಿತು
ಎಂದು ಹೇಳುತ್ತಾರೆ ಬಸಲೂರ ಕಾಂತಾಳ್ವ (ಪುಟ 162).

ಕಾಂತಾಳ್ವ ಪಟ್ಟೆಯೊಂದನ್ನು ಹರಿದು ಜೋಳಿಗೆ ಮಾಡಿಕೊಂಡು ಎಡದ ಹೆಗಲಿಗೆ ಹಾಕಿಕೊಂಡು ಬೆಳ್ಳಿಯ ನೊಗ ನೇಗಿಲನ್ನು ಹೆಗಲಲ್ಲಿ ಹಾಕಿಕೊಂಡು ನಾಲ್ಕು ಊರಲ್ಲಿ ಬೇಡಲು ಹೋಗುತ್ತಾರೆ. ಆಳ್ವ ಬೇಡುತ್ತಾ ಬರುವಾಗ ತಮ್ಮ ತಮ್ಮ ಅರಮನೆಯ ಬಾಗಿಲು ಮುಚ್ಚ ಬೇಕೆಂದರು ಊರ ಹೆಂಗಸರು. ಬೆಳಗಿಂದ ಸಂಜೆಯವರೆಗೆ ಬಸಲೂರ ಊರಲ್ಲಿ ತಿರುಗಿದರೂ ಒಂದು ಹಿಡಿ ಭಿಕ್ಷೆ ಸಿಗಲಿಲ್ಲ. ಜೋಳಿಗೆ ಎಸೆದು ನೊಗನೇಗಿಲನ್ನು ಎಸೆದು ಬಸಲೂರ ಅರನೆಯಲ್ಲಿ ನಾವು ಮಾಡಿದ ಕರ್ಮವೇ ನಮಗೆ ಅನುಭವಿಸಲು ಸಿಕ್ಕಿತಲ್ಲಾ ಎಂದು ವ್ಯಥಿಸುತ್ತಾರೆ. ಮರುದಿನ ಎದ್ದು ಸತ್ಯನಾಪುರದ ಊರಿಗೆ ಹೋಗುತ್ತಾರೆ. ಅಲ್ಲಿಯೂ ಊರ ಹೆಂಗಸರು

ತುಳುಪಠ್ಯ

ಆನಿ ಸಿರಿಗ್ ಕೊರ್ನವು ಕರ್ಮ ಸಾರೆತಿ ಆದ್ ಇಂಬ್ಯಗ್ ತಿಕ್ಂಡ್
ಸಿರಿ ಮಲ್ತಿನ ಧರ್ಮನಾ ಇಂಬ್ಯೆ ಮಲ್ತಿನ ಕರ್ಮನಾ ಅರ್ದೊನು ಬತ್ತೆ

ಕನ್ನಡಾನುವಾದ

ಅಂದು ಸಿರಿಗೆ ನೀಡಿದ ಕರ್ಮ ಇಂದು ಇವನಿಗೆ ಅನುಭವಿಸಲು ಸಿಕ್ಕಿತು
ಸಿರಿ ಮಾಡಿದ ಧರ್ಮ ಇವ ಮಾಡಿದ ಕರ್ಮ ಅನುಭವಿಸುತ್ತಿದ್ದಾನೆ

ಎನ್ನುತ್ತಾರೆ. ಅಲ್ಲಿಯೂ ಬೆಳಗಿಂದ ಸಂಜೆಯವರೆಗೆ ತಿರುಗಿದರೂ ಒಂದು ಹಿಡಿ ಭಿಕ್ಷೆಯೂ ಸಿಗಲಿಲ್ಲ. ಇಲ್ಲಿ ಕಾಂತಾಳ್ವನನ್ನು 'ನಟ್ಟು ಪರ್ದೇಸಿ ಕಾಂತಾಲ್ವ' (ಭಿಕ್ಷುಕ ಪರದೇಶಿ ಕಾಂತಾಳ್ವ) ಎಂದು ಹೀನಾಯವಾಗಿ ಕರೆಯಲಾಗಿದೆ. ಕೊನೆಗೆ ಕೊಟ್ಟರಾಡಿಯ ಊರಲ್ಲಿ ಮನೆಮನೆ ತಿರುಗಬೇಕು. ಉಣ್ಣದೆ ಐದು ದಿನವಾಯಿತೆಂದು ಹೇಳುತ್ತಾರೆ ಆಳ್ವರು. ಬಗಲಲ್ಲಿ ಜೋಳಿಗೆ, ಎಡದ ಹೆಗಲಲ್ಲಿ ನೊಗ ನೇಗಿಲು ಹಾಕಿಕೊಂಡು 'ಪರದೇಸಿ ಆಳ್ವ'ರು ಮನೆಮನೆ ಬೇಡಿಕೊಂಡು ಕೊನೆಗೆ ಕೊಟ್ಟರಾಡಿಯ ಅರಮನೆಗೆ ಬರುತ್ತಾರೆ. ಇವನನ್ನು ಕಂಡ ಕೊಡ್ಸರಾಳ್ವರು

ತುಳುಪಠ್ಯ

ನಾರಾಯಣಾ ನಾರಾಯಣಾ ಪಂಡೆರ್
ಈರ್‌ಲಾ ಒಂಜಿ ಗುತ್ತುದ ಬಂಟೆಗೆನಾ ಯಾನ್‌ಲಾ ಒಂಜಿ ಗುತ್ತುದ ಬಂಟೆಗೆ
ಆಂಡಲಾ ಪುಗೆಲ್‌ಗ್ ಜೋಳಿಗೆ ನುಗ ನಾಯೆರ್ ಪಾಡೊಂಡರತ್ತಾ ಆಲ್ವೆರೇ
ಕಾಂತಾಲ್ವನ ಪಟ್ಟೆಜೋಳಿಗೆ ಒಯ್ತ್ ಪರ್ತೆರ್
ಪುಗೆಲ್‌ದ ನುಗ ನಾಯೆರ್ ಕೊಟ್ಯದ ಕೋಡಿಗ್ ದಕ್ಯೆರ್
ಆಲ್ವೆರೇ ಬಲೆ ಕಲ್ಲುಲೆಂದ್ ಪಂಡೆರ್ ಕೊಟ್ಟರಾಡಿದ ಎರಮಾನೆಡ್ ಕೊಡ್ಸರಾಲ್ವೆರ್

ಕನ್ನಡಾನುವಾದ

ನಾರಾಯಣ ನಾರಾಯಣ ಎಂದರು
ನೀವೂ ಒಂದು ಗುತ್ತು ಮನೆತನದ ಬಂಟ ನಾನೂ ಒಂದು ಗುತ್ತು ಮನೆತನದ ಬಂಟ,
ಆದರೂ ನೀವು ಹೆಗಲಿಗೆ ಜೋಳಿಗೆ, ಕುತ್ತಿಗೆಗೆ ನೊಗ ನೇಗಿಲು ಕಟ್ಟಿಕೊಂಡಿರಲ್ಲ ಆಳ್ವರೇ
ಕಾಂತಾಳ್ವನ ಪಟ್ಟೆ ಜೋಳಿಗೆ ಎಳೆದು ಹರಿದರು
ಹೆಗಲ ನೊಗನೇಗಿಲನ್ನು ಕೊಟ್ಟಿಗೆಯ ಮೂಲೆಗೆ ಎಸೆದರು
ಆಳ್ವರೇ ಬನ್ನಿ ಕುಳಿತುಕೊಳ್ಳಿ ಎಂದು ಹೇಳಿದರು ಕೊಟ್ಟರಾಡಿ ಅರಮನೆಯ ಕೊಡ್ಸರಾಳ್ವರು
(ಪುಟ 168).

ಒಂದು ಗುತ್ತು ಮನೆತನದವರಾದ ನೀವು ಹೆಗಲಿಗೆ ಜೋಳಿಗೆ ಹಾಕಿ, ನೊಗ ನೇಗಿಲು ಹೆಗಲಲ್ಲಿಟ್ಟುಕೊಂಡು ಬೇಡುವುದನ್ನು ಇನ್ನೊಂದು ಗುತ್ತುಮನೆತನದವನಾಗಿ ನಾನು ನೋಡಲಾರೆ ಎಂದು ಅವೆಲ್ಲವನ್ನು ತೆಗೆದೆಸೆದು ಒಳಗೆ ಕರೆದುಕೊಂಡು ಹೋಗಿ ಉಪಚರಿಸುತ್ತಾರೆ. ತೂಗುಯ್ಯಾಲೆಯಲ್ಲಿ ಕರೆದುಕೊಂಡು ಹೋಗಿ ಕುಳಿತುಕೊಳ್ಳಿಸಿ ಕುಡಿಯಲು ಹಾಲು ಕೊಡುತ್ತಾರೆ. ಕೊಡ್ಸರಾಳ್ವರನ್ನು ಸ್ನಾನ ಮಾಡಿ ಬರಲು ಹೇಳುತ್ತಾರೆ. ಕೊಡ್ಸರಾಳ್ವರು ಮೆಯಿಗೆ ಎಣ್ಣೆ ಹಚ್ಚಿ ಸಾವಿರ ಗಡಿಗೆ ತಣ್ಣೀರು, ಬಿಸಿನೀರು ಸ್ನಾನ ಮಾಡಿ ಬರುತ್ತಾರೆ. ತೊಳಸಿ ಮಂಟಪದ ಹತ್ತಿರಬಂದು ಗಂಧ ತೇದು ಹಲಸಿನ ಎಲೆಯಲ್ಲಿ ಹಾಕುತ್ತಾರೆ. ತೊಳಸಿಗೆ ಮೂರು ಸುತ್ತು ಬಲಿ ಪ್ರದಕ್ಷಿಣೆ ಬಂದು ತುಳಸಿ ಮುಟ್ಟಿ ನೀರು ಹೊಯ್ದು ತೀರ್ಥ ತೆಗೆದುಕೊಳ್ಳುತ್ತಾರೆ. ಹತ್ತು ಬೆರಳು ಜೋಡಿಸಿ ನಮಸ್ಕರಿಸುತ್ತಾರೆ. ಗಂಧ ಹಿಡಿದು ಸೂರ್ಯನನ್ನು ನೋಡಿ ಸೂರ್ಯ ನಾಮ, ಚಂದ್ರನನ್ನು ನೊಡಿ ಚಂದ್ರ ನಾಮ, ಪುಣ್ಯಕ್ಕೆ ಅಡ್ಡ ನಾಮ ಹಾಕಿ ಗಂಧದ ಮಸಲಾದಿಗೆ (ಮೆಯಿಗೆ ಗಂಧ ಸವರಿಕೊಳ್ಳುವುದು) ಆಗುತ್ತಾರೆ. ಭೋಜನ ಶಾಲೆಗೆ ಹೋಗಿ ಬಂಗಬಾಳೆಯ ಎಲೆ ಹಾಕಿ ಊಟಕ್ಕೆ ಕುಳಿತುಕೊಳ್ಳುತ್ತಾರೆ. ಈ ಮೇಲಿನ ಸಾಲುಗಳಿಂದ ಗುತ್ತುಮನೆತನದ ಹಿರಿಯನೊಬ್ಬನ ದಿನಚರಿಯ ವಿವರಗಳು ದೊರೆಯುತ್ತವೆ. ಊಟದ ವರ್ಣನೆಯೂ ವಿವರವಾಗಿದೆ. ಊಟಕ್ಕೆ ಕೂತಾಗ ಸಾಮು ಹೇಳುತ್ತಾಳೆ

ತುಳುಪಠ್ಯ

ಇನಿ ನಿನ್ನ ಕೈ ಪತ್ತಿ ಕೈ ದಾರೆದ ಕಂಡನಿ ಮಗಾ ಬಸಲೂರುದ ಕಾಂತಾಳ್ವೆ ಮಗಾ ಸಿರಿಯೇ ಕೇನಿದನಾ
ಯೆನ ಕೈ ಪತ್ತಿನ ಕೈ ದಾರೆದ ಮದಿಮಾಯೆ ಕೊಟ್ಟರಾಡಿದ ಮದಿಮ್ಮಾಯೆ
ನಿನ ಮದಿಮ್ಮಾಯಗ್ ಈ ಬೋವನ ಬಲಸೊಡು ಮಗ ಸಿರಿಯೇ
ಎನ ಮದಿಮಾಯಗ್ ಯಾನೇ ಬೋವನ ಬಲಸುವೆ ಸಿರಿಯೇ

ಕನ್ನಡಾನುವಾದ

ಇಂದು ನಿನ್ನ ಕೈಹಿಡಿದ ಧಾರೆಯ ಗಂಡ ಮಗಾ ಬಸಲೂರ ಕಾಂತಾಳ್ವ ಮಗಾ ಸಿರಿಯೇ ಕೇಳಿದಿಯೇ
ನನ್ನ ಕೈ ಹಿಡಿದ ಧಾರೆಯ ಮದುಮಗ ಕೊಟ್ಟರಾಡಿಯ ಮದುಮಗ
ನಿನ್ನ ಮದುಮಗನಿಗೆ ನೀನೇ ಅನ್ನ ಬಡಿಸಬೇಕು ಮಗ ಸಿರಿಯೇ
ನನ್ನ ಮದುಮಗನಿಗೆ ನಾನೇ ಅನ್ನ ಬಡಿಸುವೆನು ಸಿರಿಯೇ (ಪುಟ 174).

ನನ್ನ ಕೈ ಹಿಡಿದ ಕೈ ಧಾರೆಯ ಮದುಮಗ ನನಗೆ ಕೊಡುವಷ್ಟು ಕಷ್ಟ, ಹಿಂಸೆ ಕೊಟ್ಟಿದ್ದಾನೆ. ಅಂಥವನ ಮುಖ ಹೇಗೆ ನೋಡಲಿ ಎಂದು ಸಾಮುವಿನಲ್ಲಿ ಕೇಳುತ್ತಾಳೆ

ಸಿರಿ. ಸಾಮು ಆತ ಈ ಲೋಕದಲ್ಲಿ ಮಾತ್ರವಲ್ಲ ಆ ಲೋಕದಲ್ಲಿಯೂ ನಿನ್ನ ಗಂಡನೇ ಎಂದು ಹೇಳುತ್ತಾಳೆ. ಇವರ ಈ ರೀತಿಯ ಮಾತುಕತೆಯಿಂದ ಹೊರಗೆ ಊಟಕ್ಕೆ ಕುಳಿತವರಿಗೆ ಬಡಿಸುವುದು ತಡವಾಗುತ್ತದೆ. ಇದರಿಂದ ಕೊಡ್ಸರಾಳ್ವರು ಸಿಟ್ಟಾಗಲು ಕೂಡಲೇ ಹೊರಗೆಬಂದು ಕೊಡ್ಸರಾಳ್ವರಿಗೆ ಸಾಮು, ಕಾಂತಾಳ್ವರಿಗೆ ಸಿರಿ ಬಡಿಸುತ್ತಾಳೆ. ಊಟ ಮಾಡಿ ವೀಳ್ಯ ತಿಂದು ಕಾಂತಾಳ್ವ ಕೊಡ್ಸರಾಳ್ವರಿಗೆ ಹೀಗೆ ಹೇಳುತ್ತಾರೆ.

ತುಳುಪಠ್ಯ

ಇನಿ ಸಿರಿ ಮಲ್ದಿನ ಧರ್ಮ ಕೇಂಡರಾ
ಇನಿ ಯಾನ್ ಮಲ್ದಿನ ಕರ್ಮ ತೂಯರಾ ಎನ ತರೆಕೇ ಸಿಗೆಂಡತ್ತೋ
ಈರೆನ ಮದಿಮಾಲೆಡ ಸಿರಿಡ ಇನಿ ಎಂಕ್ ಒಂಜಿ ವರಾನೆ ಕೊರ್ಪಾವೊಡು

ಕನ್ನಡಾನುವಾದ

ಇಂದು ಸಿರಿ ಮಾಡಿದ ಧರ್ಮ ಕೇಳಿದಿರಾ
ಇಂದು ನಾನು ಮಾಡಿದ ಕರ್ಮ ನೋಡಿದಿರಾ ನನ್ನ ತಲೆಗೇ ಸುತ್ತಿಕೊಂಡಿತು.
ನಿಮ್ಮ ಮದುಮಗಳು ಸಿರಿಯಲ್ಲಿ ನನಗೆ ಒಂದು ವರ ಕೊಡಿಸಬೇಕೆನ್ನುತ್ತಾನೆ ಕಾಂತಾಳ್ವ
(ಪುಟ 176).

ಕೊಡ್ಸರಾಳ್ವರು ಸಿರಿ ಈಗ ನನ್ನ ಮದುಮಗಳಾದರೂ ಹಿಂದೆ ನಿಮ್ಮ ಕೈಹಿಡಿದ ಮದುಮಗಳು. ನೀವೇ ಅವಳಲ್ಲಿ ವರ ಕೇಳಿ ಎನ್ನುತ್ತಾರೆ. ಕಾಂತಾಳ್ವ ಈಗ ಅವಳು ನಿಮ್ಮ ಮದುಮಗಳಾದ ಕಾರಣ ನೀವೊಂದು ಮಾತು ಹೇಳ ಬೇಕೆನ್ನುತ್ತಾನೆ. ಕೊಡ್ಸರಾಳ್ವರು ಸಿರಿಯನ್ನು ಕುರಿತು ನಿನ್ನ ಅಂದು ಕೈಹಿಡಿದ ಗಂಡನಿಗೆ ವರವೊಂದನ್ನು ನೀಡು ಎನ್ನಲು ಸಾಮುವೂ ಸಿರಿಯನ್ನು ಒತ್ತಾಯಿಸುತ್ತಾಳೆ. ಆಗ ಸಿರಿ ನನಗೆ ಬೇಕಾದಷ್ಟು ಕಷ್ಟ ಕೊಟ್ಟವ ಇಂದು ಇಲ್ಲಿಗೆ ಯಾಕೆ ಬಂದಿದ್ದಾನೆ. ಆತನ ಮುಖ ಹೇಗೆ ನೋಡಲಿ ಎಂದು ಹೇಳಿ ಕಾಂತಾಳ್ವನನ್ನು ಕುರಿತು ಇಂದು ನೀವು ಮಾಡಿದ ಕರ್ಮವನ್ನು ಅನುಭವಿಸುತ್ತಿದ್ದೀರಿ. ನಾನು ಮಾಡಿದ ಧರ್ಮ ಹೆಚ್ಚಾಯಿತು. ಸಿರಿ ಕೊಟ್ಟರಾಡಿಯ ಬೋದಿಗೆಯ ಕಂಬದ ಸಮೀಪ ನಿಂತು ಕೊಡ್ಸರಾಳ್ವರ ಬುಡುದಾರೆಯ (ಎರಡನೆಯ ಮದುವೆಯ) ಮದುಮಗಳು ಮಣ್ಣು ಮುಟ್ಟಿ ಹೆಣ್ಣುಶಾಪ ನೀಡುತ್ತಾರೆ. ನಿಮಗೆ ಈವರೆಗೆ ಬಸಲೂರು, ಸತ್ಯನಾಪುರದಲ್ಲಿ ದಾನ ಧರ್ಮಗಳು ಸಿಗಲಿಲ್ಲ ಅಲ್ಲವೇ? ಇನ್ನು ಮುಂದಕ್ಕೆ

ತುಳುಪಠ್ಯ

ಬಸಲೂರ ಅರಮ್ಮನೆಡ್ ಮಾಲೋಕ ಕೊರಲಾತಾವೊಡು
ತನಕ್ ತಿನಲಾತಾವೊಡು ಕಾಟಿ ಕಟ್ಟ್‌ದ್ ಕರ್ಬಾಸ್ ದಪ್ಪಾವೊನುದು

ಪನಿಬತ್ತ ಲಪ್ಪಾವೊನುದು ಪೇರ್ ಪರೊಂದು ಪಾಸ್‌ಡ್ ಒರಗೊಂದು
ಇಪ್ಪುಲೆ ಮದಿಮ್ಮಾಯಾ ಯಾನ್ ಬತ್ತ್ ಪೊಗ್ಗಿ ಕಾಲೊಡು ಎರಮಾನೆ ಎಂಚ ಇತ್ತಂಡ್‌ಗೆನ
ಬಸಲೂರುದ ಎರಮಾನೆ ಅಂಚನೆಲಾವೊಡುಂದು ಪಂಡೆರ್
ಮಣ್ಣ್ ಮುಟ್ಟು ಪೊಣ್ಣ ಸಾಪಾನೆ ಕೊರ್ಯೆರ್

ಕನ್ನಡಾನುವಾದ
ಬಸಲೂರ ಅರಮನೆಯಲ್ಲಿ ಮಹಾಲೋಕಕ್ಕೆ ಹಂಚುವಷ್ಟು ಆಗಬೇಕು
ತನಗೆ ತಿನ್ನುವಷ್ಟು ಆಗಬೇಕು, ಕಾಟಿ (ಕೋಣ) ಕಟ್ಟಿ ಕರ್ಬಾಸ್ (ಎತ್ತುಗಳಿಂದ) ಉಳುಮೆ ಮಾಡಿಕೊಂಡು
ಕೂಲಿ ಅಳೆದು ಕೊಡುತ್ತಾ ಹಾಲು ಕುಡಿದು ಹಾಸಿಗೆಯಲ್ಲಿ ಮಲಗಿಕೊಂಡಿರಿ ಮದುಮಗಾ
ನಾನು ಇದ್ದ ಕಾಲದಲ್ಲಿ ಅರಮನೆ ಹೇಗಿತ್ತಾ ಬಸಲೂರ ಅರಮನೆ ಹಾಗೇ ಆಗಬೇಕೆಂದರು
ಮಣ್ಣು ಮುಟ್ಟಿ ಹೆಣ್ಣ ಶಾಪ ನೀಡಿದರು (ಪುಟ 178).

ಸಿರಿಯು ನೀಡಿದ ವರದಿಂದ ಶಾಪ ಮುಕ್ತರಾಗಿ ಕಾಂತಾಳ್ವ ಬಸಲೂರ ಅರಮನೆಗೆ ಬರಲು ಎಲ್ಲ ಸಂಪತ್ತುಗಳು ತುಂಬಿ ಬಂದಿವೆ. ಇಲ್ಲಿ ಕೊಡ್ಸರಾಳ್ವರು ಮಾನವೀಯತೆಯನ್ನು ಮೆರೆದು ಕಾಂತಾಳ್ವನನ್ನು ಉಪಚರಿಸುವುದನ್ನು ಕಾಣುತ್ತೇವೆ.

ಹೀಗಿರಲು ಸಿರಿ ಗರ್ಭವತಿಯಾಗುತ್ತಾಳೆ. 9 ತಿಂಗಳು ತುಂಬಲು ಸಿರಿ ಹಾಗೂ ಸಾಮುವನ್ನು ಬಾಮು ಕೆಲ್ಲರು ಔತಣಕ್ಕಾಗಿ ಅಂಗಡಿಜಾಲ ಬರ್ಕೆಗೆ ಬರ ಹೇಳುತ್ತಾರೆ. ಈ ಪಠ್ಯದಲ್ಲಿ ಅಲಿಕುಂಜ ಪಿಲಿಕುಂಜದ ಪ್ರಸ್ತಾವವಿಲ್ಲ. ಸಾಮು ಸಿರಿ ಇಬ್ಬರೂ ಅಂಗಡಿಜಾಲ ಬರ್ಕೆಗೆ ಬರಲು ಬಾಮುಕೆಲ್ಲರು ಸ್ವಾಗತಿಸುತ್ತಾರೆ. ಸಾಮು ಅಡಿಗೆಯ ತಯಾರಿ ನಡೆಸುತ್ತಾಳೆ. ವಿವರವಾದ ಸಸ್ಯಾಹಾರದ ಅಡುಗೆಯ ವರ್ಣನೆ ಇದೆ. ನಿನ್ನ ತಂಗಿಗೆ ನೀನೇ ಬಡಿಸು ಎಂದು ಬಾಮುಕೆಲ್ಲರು ಹೇಳುತ್ತಾರೆ. ಸಿರಿ ಔತಣ ಸ್ವೀಕರಿಸಿದ ಬಳಿಕ ಸಾಮು ಬಾಮುಕೆಲ್ಲರು ಊಟ ಮುಗಿಸಿ ಎಲೆ ಅಡಿಕೆ ಮೆಲ್ಲುತ್ತಾರೆ. ಸಾಮು ಹಾಗು ಸಿರಿ ನಾವಿನ್ನು ಹೊರಡುತ್ತೇವೆಂದು ಹೊರಟು ಸನ್ನೆ ತೋಡಿನ ಸಮೀಪ ಬರುವಾಗ ಸಿರಿಗೆ ಹೆರಿಗೆ ನೋವು ಕಾಣಿಸಿಕೊಳ್ಳುತ್ತದೆ. ಸಿರಿಹೊನ್ನೆಯ ಮರದಡಿಯಲ್ಲಿ ಹೆಣ್ಣು ಮಗುವಿಗೆ ಜನನವೀಯುತ್ತಾಳೆ. ಸಿರಿ ತನ್ನ ಶಕ್ತಿಯಿಂದ ಅಡಿಕೆ ಸಸಿ ನಿರ್ಮಿಸಿ ಅದರ ಹಾಳೆಯಲ್ಲಿ ಮಗುವನ್ನು ಮಲಗಿಸಿದಳು. ಸಮೀಪದಲ್ಲಿ ನೀರ ಹಳ್ಳ ಆಗಬೇಕೆಂದಳು. ಅಲ್ಲಿ ಕೈಕಾಲು ಮುಖ ತೊಳೆದು ಬರುವಷ್ಟರಲ್ಲಿ ಮಗುವಿನ ಮಾಸು (ಬಾಲೆದ ಕಜವು) ನರಿ ಕೊಂಡು ಹೋಗಿರುತ್ತದೆ. ಇದರಿಂದ ಸಿಟ್ಟಾದ ಸಿರಿ ಇನ್ನು ಮುಂದಕ್ಕೆ 'ಅಂಗಡಿಜಾಲಬರ್ಕೆ ಸನ್ನೆ ತೋಡುಡು ಕುದ್ಕನ ಸಂತಾನ ಸಂತೇಸಿ ಉಪ್ಪೆರೆ ಆವಂದ್' (ಅಂಗಡಿಜಾಲ ಬರ್ಕೆಯ ಸನ್ನೆ ತೋಡಿನಲ್ಲಿ ನರಿಯ ಸಂತಾನ ಇರಕೂಡದು)

ಎಂದು ಶಪಿಸುತ್ತಾಳೆ. ಸಾಮುವಿನ ಕೈಯಲ್ಲಿ ಮಗುವನ್ನು ನೀಡಿ 'ಬರುವಾಗ ನಾವು ಇಬ್ಬರು ಬಂದೆವು. ಹೋಗುವಾಗ ನೀವೊಬ್ಬರೇ ಹೋಗುವ ಕಾಲ ಬಂತಲ್ಲಾ' ಎಂದು ದುಃಖಿಸುತ್ತಾಳೆ. ಸಾಮುವಿನಲ್ಲಿ ಸನ್ನೆ ತೋಡಿನಲ್ಲಿ ಹುಟ್ಟಿದ ಮಗುವಾದುದರಿಂದ ಸೊನ್ನೆ ಎಂಬ ಹೆಸರಿಡಬೇಕು. ನಾನು ಬೊಲ್ಯೊಟ್ಟುವಿಗೆ ಹೋಗುವ ಹೊತ್ತಾಯಿತು. ಕುಮಾರ ಅಲ್ಲಿ ನನಗೆ ದಲಿಯ ಹಾಕಿದ್ದಾನೆ ಎಂದು ಹೇಳಿ ಮಗುವನ್ನೆತ್ತಿ ಸಾಮುವಿನ ಕೈಯಲ್ಲಿರಿಸಿ ಸಿರಿ ಬೊಲ್ಯೊಟ್ಟು ಬಿಳಿಯ ಬುಗುರಿ ಮರದಡಿ ದಲ್ಯದಲ್ಲಿ ಕುಮಾರನ ಬಲಭಾಗದಲ್ಲಿ ಮಾಯವಾಗುತ್ತಾಳೆ.

ಸಾಮು ಮಗುವನ್ನೆತ್ತಿಕೊಂಡು ಕೊಟ್ರಾಡಿಗೆ ಬರುತ್ತಾಳೆ. ಏನು ನೀನು ಒಬ್ಬಳೇ ಬಂದಿ ಎಂದು ಕೊಡ್ಸರಾಳ್ವರು ಕೇಳಲು ಸಿರಿ ಮಗುವನ್ನು ಹೆತ್ತು ಮಾಯವಾದ ಬಗೆಗೆ ತಿಳಿಸಿ ಮಗುವನ್ನು ಕೊಡ್ಸರಾಳ್ವರ ಕೈಗೆ ನೀಡಿ ಚೆನ್ನಾಗಿ ಸಾಕುವಂತೆ ತಿಳಿಸಿ ನನ್ನ ತಂಗಿಯನ್ನು ಬಿಟ್ಟು ನಾನಿರಲಾರೆ ಎಂದು ಹೇಳಿ ಸಾಮು ಕೂಡಾ ಬೊಲ್ಯೊಟ್ಟುವಿನಲ್ಲಿ ನೆಲೆಯಾಗುವ ವಿವರಗಳಿವೆ. ನನ್ನ ಇಬ್ಬರು ಹೆಂಡತಿಯರೂ ಮಾಯವಾದರು ಈ ಮಗುವನ್ನು ನಾನು ಹೇಗೆ ಸಾಕಲಿ ಎಂದು ಯೋಚಿಸಿದ ಕೊಡ್ಸರಾಳ್ವರು ಮಗುವನ್ನೆತ್ತಿ ಕೊಂಡು ಕಾನಬೆಟ್ಟು ಅಜ್ಜನವರಾದ ದುರ್ಗಲ್ಲಾಯ ಪೆರ್ಗಡೆಯರಿಗೆ ನೀಡುತ್ತಾರೆ. ಸಿರಿ ಸಾಮು ಇಬ್ಬರೂ ಮಾಯವಾಗಿ ಬೊಲ್ಯೊಟ್ಟುವಿನಲ್ಲಿ ನೆಲೆಯಾದುದನ್ನು ಈ ಪಠ್ಯ ತಿಳಿಸುತ್ತದೆ.

ಸಿರಿ ಸೊನ್ನೆಯನ್ನು ಹೆತ್ತು ಮಾಯವಾದ ಜಾಗ ಮೂಡಬಿದಿರೆ ತಾಲೂಕಿನ ಕಲ್ಲಮುಂಡ್ಕೂರು ಸಮೀಪದ ದೈಲೊಟ್ಟು ಆಲಡೆಯ ಸಮೀಪದ ಗುಡ್ಡದಲ್ಲಿದೆ. ಇಲ್ಲಿನ ಗುಡ್ಡದ ಮಧ್ಯೆ ಒಂದು ಹಳ್ಳದ ರೀತಿಯ ರಚನೆ ಇದೆ. ಇದನ್ನು ಸೊನ್ನೆಗುರಿ (ಕನ್ನಡದಲ್ಲಿ ತನ್ನೆಗುಳಿ) ಎಂದು ಕರೆಯುತ್ತಾರೆ. ಸೊನ್ನೆಯನ್ನು ಹೆತ್ತ ಜಾಗವಾಗಿರುವುದರಿಂದ ಆ ಹೆಸರಿನಿಂದ ಕರೆದಿದ್ದಿರಬಹುದು. ಸಾಮುವಿನ ಮನೆಯಾದ ಅಂಗಡಿ ಜಾಲ ಬರ್ಕೆಯೂ ಇಲ್ಲೆ ಸಮೀಪದಲ್ಲಿದೆ. ದೈಲೊಟ್ಟು ಆಲಡೆಯ ಆಡಳಿತ ಮೊಕ್ತೇಸರರಲ್ಲಿ ಅಂಗಡಿಜಾಲ ಬರ್ಕೆಯವರೂ ಒಬ್ಬರು. ಈ ಆಲಡೆಯಲ್ಲಿ ದಲಿಯ ಕೊಡುವಾಗ ಮೊದಲಿಗೆ ಸಾಮು ದರ್ಶನ ಪಾತ್ರಿಗೆ ಪ್ರಾಶಸ್ತ್ಯ ಕೊಡುವುದು ಕ್ರಮ. ಬೆಳಗ್ಗೆ ಸಿರಿಗಳು ಒಲಿಮದೆ ಗುಂಡ ಇಳಿದ ಬಳಿಕ ಸಾಮು ಹಾಗೂ ಸಿರಿಗಳು ಅಂಗಡಿಜಾಲ ಬರ್ಕೆಗೆ ಹೋಗಿ ಹಾಲು ಕುಡಿದು ಬರಬೇಕು. ಸಿರಿ ಕಥಾನಕದಲ್ಲಿ ಬರುವಂತೆ ಸಿರಿ ಎರಡನೇ ಬಾರಿ ಗರ್ಭಿಣಿ ಯಾಗಿದ್ದಾಗ ಅಂಗಡಿಜಾಲ ಬರ್ಕೆಯ ಬಾಮುಕೆಲ್ಲರು ಸಿರಿ ಹಾಗೂ ಸಾಮುವನ್ನು ಔತಣಕ್ಕಾಗಿ ಕರೆಯುತ್ತಾರೆ. ಔತಣ ಸ್ವೀಕರಿಸಿ ಹೊರಡುವಾಗ ಬಾಮುಕೆಲ್ಲರು ಸಿರಿಗೆ ಉಡುಗೊರೆಯಾಗಿ ಗದ್ದೆಯೊಂದನ್ನು ನೀಡಿದ್ದರಂತೆ. ಇದನ್ನು 'ಸಿರಿನಪಲ್ಲ' (ಸಿರಿಯ ಹಳ್ಳ) ಎಂಬ ಹೆಸರಿನಿಂದ ಕರೆಯುತ್ತಾರೆ. ಸಿರಿ ಜಾತ್ರೆಯ ನಿಮಿತ್ತ ಅಂಬೊಡಿ ಆಡುವುದು, ಚೆಂಡು ಹಾಕುವುದು ಎಲ್ಲ ಈ ಗದ್ದೆಯಲ್ಲಿಯೇ. ದೈಲೊಟ್ಟು ದೇವಸ್ಥಾನದ ಹಿಂದೆಯೇ ಈ ಗದ್ದೆ ಇದೆ. ಅಲ್ಲದೆ ಸಿರಿ ಹೆಣ್ಣುಮಗುವನ್ನು ಹೆತ್ತು ಕೈಕಾಲು ಮುಖ ತೊಳೆದು

ಬರುವಾಗ ನರಿಯೊಂದು ಮಗುವಿನ ಮಾಸನ್ನು ತಿಂದುದರಿಂದ ಅಂಗಡಿಜಾಲ ಬರ್ಕೆಯ ಸೊನ್ನೆ ಗುರಿಯಲ್ಲಿ ನರಿಯ ಸಂತಾನ ಇರಬಾರದೆಂಬ ಶಾಪ ಕೊಡುತ್ತಾರೆ. ಇದನ್ನು ಇಂದಿಗೂ ನೆನಪಿಸಿ ಕೊಳ್ಳುವ ಈ ಗ್ರಾಮದ ಜನರು ಒಂದು ವೇಳೆ ನರಿ ಬಂದರೆ ಇಂದಿಗೂ ಹುಚ್ಚು ಬಂದಂತೆ ಓಡುತ್ತದೆ ಎಂದು ಅಂಗಡಿಜಾಲ ಬರ್ಕೆಯ ಹಿರಿಯರಾದ ಮಾನ್ಯ ಶೇಖರ ಶೆಟ್ಟಿಯವರು ಹೇಳುವುದನ್ನು ನನ್ನ ಕ್ಷೇತ್ರೀಯ ಅಧ್ಯಯನದ ಸಂದರ್ಭ ದಾಖಲಿಸಿಕೊಂಡಿದ್ದೇನೆ. ಇಲ್ಲಿ ನಡೆದಿದೆ ಎನ್ನಬಹುದಾದ ಸಿರಿಯ ಕಥಾನಕದ ಎಲ್ಲ ಕುರುಹುಗಳನ್ನು ಸ್ಥಳೀಯರು ನಮಗೆ ಕ್ಷೇತ್ರಕಾರ್ಯದ ಸಂದರ್ಭ ತೋರಿಸಿದ್ದಾರೆ. ಸಿರಿಯಂಥ ದಿಟ್ಟ, ಅನ್ಯಾಯದ ವಿರುದ್ಧ ಹೋರಾಡಿದ, ತನ್ನ ಬದುಕಲ್ಲಿ ಹೋರಾಟವನ್ನೇ ಕಂಡಂಥ ಮಹಿಳೆ ಅಂತ್ಯವಾದ ಸ್ಥಳವನ್ನು ಒಂದು ಸ್ಮಾರಕವಾಗಿ ಇಂದಿಗೂ ನೆನಪಿಸದೇ ಇರುವುದು ದುಃಖದ ವಿಚಾರ. ಈ ಬಗೆಗೆ ವಿದ್ವಾಂಸರು ಸರಕಾರದ ಗಮನವನ್ನು ಸೆಳೆಯುವ ಪ್ರಯತ್ನವನ್ನು ಮಾಡಬೇಕಾಗಿದೆ.

ಅಮೃತರ ಪಠ್ಯದಲ್ಲಿ ಎಲ್ಲ ಪಠ್ಯಗಳಂತೆ ಸಿರಿ ಸಾಮು ಅಂಗಡಿಜಾಲ ಬರ್ಕೆಯಿಂದ ಔತಣ ಮುಗಿಸಿ ಕೊಟ್ರಾಡಿಗೆ ಹಿಂತಿರುಗುವ ದಾರಿ ಮಧ್ಯೆ ಸನ್ನೆತೋಡಿನ ಸಮೀಪ ಬರುವಾಗ ಬಿಳಿ ಹೊನ್ನೆಯ ಮರದಡಿ ಮಂಗಳವಾರ ಸಿಂಹರಾಶಿಯಲ್ಲಿ ಅಮವಾಸ್ಯೆಯ ಫಲದಲ್ಲಿ ಹೆಣ್ಣು ಮಗುವೊಂದನ್ನು ಹೆರುತ್ತಾಳೆ. ಸಾಮು ಹೇಳುತ್ತಾಳೆ ನೀನು ಹೆತ್ತರೂ ನನ್ನ ಮಗುವಿನಂತೆ ಕೊಂಡಾಟದಿಂದ ಸಾಕಿ ಸಲಹುವೆ. ನಾವು ಕೊಟ್ರಾಡಿಗೆ ಹೋಗುವ ಎನ್ನಲು ಸಿರಿ ಈ ಮಗುವನ್ನು ಸಾನೆಬೊಟ್ಟಿನಲ್ಲಿ ಇದ್ದಾರೆ ನನ್ನ ಅಜ್ಜನವರ ಬಳಿಯವರು. ಈಗ ಮುಕ್ಕಾಲು ಮೂರು ಘಳಿಗೆಯಲ್ಲಿ ಬಂದು ತಲಪುವರು. ಅವರ ಕೈಗೆ ಮಗುವನ್ನು ಕೊಟ್ಟುಬಿಡಿ. ನೀವು ಕೊಟ್ರಾಡಿಗುತ್ತಿಗೆ ಹೋಗಿ ಅಕ್ಕನವರೇ. ನಾನು ನನ್ನ ಕುಮಾರನಿಗೆ ಕೊಟ್ಟ ಮಾತಿನಂತೆ ಬೊಲ್ಯೊಟ್ಟು ಸಾನಕ್ಕೆ ಹೋಗುತ್ತೇನೆ ಎನ್ನುತ್ತಾಳೆ. ಸಾನಬೆಟ್ಟು ಅಜ್ಜನವರು ಬಂದು ಮಗುವನ್ನೆತ್ತಿಕೊಂಡು ಸಾನೆಬೆಟ್ಟಿಗೆ ಹೋಗುತ್ತಾರೆ. ಸಿರಿಯ ಶವವನ್ನು ಸಾನೆಬೆಟ್ಟಿಗೆ ಹೊರಿಸಿಕೊಂಡು ಹೋಗುವ ವಿಚಾರ ಇದೆ. ಸಿರಿಯ ಶವವನ್ನು ಸಾನೆಬೆಟ್ಟಿಗೆ ಕೊಂಡುಹೋಗುವ ವಿವರ ಬೇರೆ ಪಠ್ಯಗಳಲ್ಲಿ ಇಲ್ಲ.

ಗೋಪಾಲ ನಾಯ್ಕರ ಪಠ್ಯದಲ್ಲಿ ಕೆಲವು ವಿವರಗಳು ಲಭ್ಯವಾಗುತ್ತವೆ. ಸಿರಿ ಗರ್ಭವತಿಯಾಗಿ ಎಂಟು ತಿಂಗಳಾಗುತ್ತಾ ಬರುವಾಗ ಸಾಮು ಆಳ್ವೆದಿ ಸಿರಿಗೆ ಕೂಡು ಕುಟುಂಬವಿಲ್ಲ. ಹೋದೇನು ಬಂದೇನು ಎನ್ನಲು ತನ್ನವರಾರೂ ಇಲ್ಲ. ತುಂಬಿದ ಗರ್ಭಿಣಿಯನ್ನು ನನ್ನ ಅಣ್ಣನವರ ಅರಮನೆ ಅಂಗಡಿಜಾಲಬರ್ಕೆ ಉಜೆಮಾರ ಗುತ್ತಿಗೆ ಆಮಂತ್ರಿಸುವಂತೆ ತಿಳಿಸಿ ಸಾಮು ಓಲೆಯನ್ನು ಕಳುಹಿಸುತ್ತಾಳೆ. ಉಜೆಮಾರ ಗುತ್ತಿನ ಕೆಲ್ಲರಿಗೆ ಬಹು ಸಂತೋಷವಾಗಿ ಮೇಲಿನ ಮಂಗಳವಾರದಂದು ಸಿರಿಯನ್ನು ಕರೆದುಕೊಂಡು ಬರುವಂತೆ ತಿಳಿಸುತ್ತಾರೆ. ಹಾಗೆ ಅಕ್ಕ ತಂಗಿ ಇಬ್ಬರೂ ಶೃಂಗಾರವಾಗಿ ಹೊರಟು ಉಜೆಮಾರ ಗುತ್ತಿಗೆ ಬರುತ್ತಾರೆ. ಕೊಡ್ಸರಾಳ್ವರು ಇಬ್ಬರಲ್ಲಿಯೂ ಉಜೆಮಾರ ಗುತ್ತಲ್ಲಿ ಹೆಚ್ಚುತಡ ಮಾಡಬೇಡಿ, ಬೇಗನೆ ಬಂದು ಬಿಡಿ ಎಂದು ತಿಳಿಸಿ ಕಳುಹಿಸಿ

ಕೊಡುತ್ತಾರೆ. ಹೀಗೆ ಇಬ್ಬರೂ ಜೊತೆಯಾಗಿ ಹೊಗುತ್ತಿರಲು ಸಿರಿಗೆ ಎಡದಲ್ಲಿ ಕಾಣಿಸುತ್ತದೆ ಎಲಿಕುಂಜದ ಕಾಡು, ಬಲದಲ್ಲಿ ಕಾಣಿಸುತ್ತದೆ ಪಿಲಿಕುಂಜದ ಕಾಡು. ಪುಂಜದ ನಡವೆಯಲ್ಲಿ ಹೋಗುವಾಗ ಸಿರಿ ಅಕ್ಕನನ್ನು ಕುರಿತು ಎಲಿಕುಂಜ ಪಿಲಿಕುಂಜ ಅಂದರೆ ಎಲ್ಲಿ, ಪುಂಜದ ನಡವೆ ಎಲ್ಲಾಯಿತು ಅಕ್ಕನವರೇ ಎಂದು ಕೇಳುತ್ತಾಳೆ. ಸಾಮು ಈ ಮಾತನ್ನು ಕೇಳಿ ಯಾಕೆ ನಿನಗದು ಎಂದು ಕೇಳಲು ಸಿರಿ ನನಗದನ್ನು ನೋಡಲು ಆಸೆಯಾಗಿದೆ ಎನ್ನುತ್ತಾಳೆ. ಹೋಗುವಾಗ ನೇರವಾಗಿಹೋಗುವ ಮಗಾ, ಬರುವಾಗ ನಾನು ನಿನಗೆ ತೋರಿಸುತ್ತೇನೆ ಎಂದು ಹೇಳಿ ಸಾಮು ಕರೆದುಕೊಂಡು ಹೋಗುತ್ತಾಳೆ. ಬಾಮು ಕೆಲ್ಲರಿಗೆ ಇಬ್ಬರು ಸಹೋದರಿಯರ ಆಗಮನದಿಂದ ಬಲು ಸಂತೋಷವಾಗುತ್ತದೆ. ಬಸುರಿ ಸಿರಿಗೆ ಔತಣ ಬಡಿಸುವ ವಿವರಗಳು ಈ ರೀತಿ ಇವೆ. ಕೊಟ್ಟುಮಣೆ ಇಡಿಸಿದ್ದಾರೆ ಬಾಮು ಕೆಲ್ಲರು. ಬಂಗಬಾಳೆಯ ತುದಿ ಎಲೆ ಹಾಕಿಸಿಎತ್ತರದ ಮಣೆಯಲ್ಲಿ ಸತ್ಯಮಲೋಕಂದ ಸಿರಿಯನ್ನು ಕೈ ಹಿಡಿದು ಕೂರಿಸಿ ಈವರೆಗೆ ಮಾಡದ ಕಜ್ಜಾಯಗಳನ್ನು ಮಾಡಿ ಬಡಿಸಿದ್ದಾರೆ. ಮುಡಿ ಅವಲಕ್ಕಿ ಹಾಗೂ ಅರಳು ಅವಲಕ್ಕಿಯ ಮಿಶ್ರಣ ಮಾಡಿ ಬಾಮುಕೆಲ್ಲರು ಬಡಿಸಿದ್ದಾರೆ. ಬೇರೆಬೇರೆ ತರಕಾರಿಗಳ ಪದಾರ್ಥಗಳನ್ನು ಮಾಡಿ ಅನ್ನದೊಂದಿಗೆ ಬಡಿಸಿ ಸಿರಿಯ ಬಾಯಿಯ ಆಸೆ ಕಳೆಯುವ ಕೆಲಸವನ್ನು ಮಾಡಿದ್ದಾರೆ. ಸಿರಿ ನಮ್ಮನ್ನು ಹೊತ್ತ ಭೂ ದೇವಿಯನ್ನು ಸ್ಮರಿಸಿ, ನಾರಾಯಣ ದೇವರನ್ನು ಸ್ಮರಿಸಿ ಅರಳು ಅವಲಕ್ಕಿ ತಿಂದು ಬಾಯಿಯ ಆಸೆ ಕಳೆಯುತ್ತಾಳೆ.

ಮರುದಿನ ಬೆಳಗ್ಗೆದ್ದು ನಿತ್ಯ ಕರ್ಮಗಳನ್ನು ಮುಗಿಸಿ ಬೇಗನೆ ಕೊಟ್ರಾಡಿಯ ಕಡೆಗೆ ಹೊರಡುತ್ತಾರೆ. ದಾರಿಯಲ್ಲೆ ಬರುವಾಗ ಎಲಿಕುಂಜ ಪಿಲಿಕುಂಜ ಪುಂಜದ ನಡವೆ ಕಾಡಿನ ಬಗೆಗೆ ಬೇಡ ಬೇಡವೆಂದರೂ ಹಠಹಿಡಿದು ನನಗೆ ನೋಡಲು ಆಸೆಯಾಗಿದೆ ತೋರಿಸಿಎಂದು ಕೇಳುತ್ತಾಳೆ ಸಿರಿ. ಆ ಕಾಡನ್ನು ತೋರಿಸಿದರೆ ಆಗುವ ಅನಾಹುತಗಳ ಬಗೆಗೆ ಸಾಮು ತಿಳಿಸಿ ಹೇಳಿದರೂ ಕೇಳುವುದಿಲ್ಲ ಸಿರಿ. ಈ ಕಾಡಿನ ಕಾರಣಿಕವನ್ನು ಹೇಳಿದರೆ ಗಬ್ಬದ ದನಕ್ಕೆ ಗರ್ಭಪಾತವಾಗುತ್ತದೆ, ಬೆರಳಲ್ಲಿ ತೋರಿಸಿ ಹೇಳಿದರೆ ಗದ್ದೆಯ ಪೈರಲ್ಲಿ ಜಳ್ಳು ಹುಟ್ಟುತ್ತದೆ, ಗರ್ಭಿಣಿ ಹೆಣ್ಣಿಗೆ ಹೆರಿಗೆಯಾಗುತ್ತದೆ ಎಂದರೂ ಕೇಳದೆ ಹಠ ಹಿಡಿದು ಹೇಳಿಯೇ ತೀರಬೇಕೆನ್ನುತ್ತಾಳೆ. ಒಂದು ವೇಳೆ ನೀವು ಹೇಳದಿದ್ದರೆ ಇಟ್ಟ ಹೆಜ್ಜೆ ತೆಗೆಯಲಾರೆ, ನಿಮ್ಮ ಬೆನ್ನು ಹಿಡಿದು ಬರಲಾರೆ ಎನ್ನುತ್ತಾಳೆ. ಆಗ ಸಾಮು ಹೇಳಿದ್ದನ್ನು ಕೇಳುವುದಿಲ್ಲ ಸಿರಿ ನೀನು ಎಂದು ಹೇಳಿ ನಡು ಬೆರಳಲ್ಲಿ ನೇರವಾಗಿ ತೋರಿಸಿ ಬಲದ ಬಲಭಾಗದಲ್ಲಿ ಕಾಣಿಸುವುದು ಎಲಿಕುಂಜ, ಎಡದ ಎಡಭಾಗದಲ್ಲಿ ಕಾಣಿಸುವುದು ಪಿಲಿಕುಂಜ, ಪುಂಜದ ನಡವೆ ಎಂದರೆ ಇದುವೇ ಎಂದು ಹೇಳುತ್ತಾರೆ. ಅಷ್ಟು ಕೇಳಲು ಸಿರಿಯ ಹೂವಿನಂಥ ಮುಖ ಬಾಡುತ್ತಾ ಬರುತ್ತದೆ, ಕಸ್ತೂರಿಯಂಥ ಘಾಟು ಸಿರಿಯ ಮೂಗಿಗೆ ಬಡಿಯುತ್ತದೆ. ಮಲ್ಲಿಗೆ ಪರಿಮಳ ಬಂದು, ಕುಂಕುಮದ ಹನಿ ಬಿತ್ತು, ತಂಪು ಹನಿ ಮೈಯನ್ನು ಸ್ಪರ್ಶಿಸಿತು. ಅಷ್ಟು ಹೊತ್ತಿಗೆ ಸಿರಿ ಅಕ್ಕನವರೇ ನನಗೆ ಕಾಲಲ್ಲಿ ಕಾಲ ಸೆಳೆತ, ಬೆನ್ನಲ್ಲಿ ಬೆನ್ನ ಸೆಳೆತ ಬರುತ್ತಿದೆ ಎನ್ನುತ್ತಾಳೆ. ಕಾಡಲ್ಲಿ ನಾವಿಬ್ಬರೇ ಇರುವುದು, ಏನು ಮಾಡಲಿ ಎನ್ನಲು

ತುಳುಪಠ್ಯ

ಆತೆನ ಪೊರ್ತುಗು ಮಾರಿ ಬೊಲ್ಲೊ ನನ ಓ
ಮೂಡಾಯಿಡ್ ಮೂಡ್‌ಂಡ್ ಓ ಮೂಡ್ ಮುಗಲ್
ಪಡ್ಡಾಯಿಡೆ ಮೂಡ್‌ಂಡೆ ಪಡು ಮುಗಲ್
ಜಾಂಬವೆ ಪನ್ಪಿ ತೆಡಿಲ್ ಪುಡವುಂಡು
ಕರಿಯ ಮುಗಲ್ ಬತ್ತ್‌ಂಡ್ ದಾನೆ
ಮಾರಿ ಬೊಲ್ಲೊ ಜನನಾಪುಂಡು

ಕನ್ನಡಾನುವಾದ

ಅಷ್ಟು ಹೊತ್ತಿಗೆ ದೊಡ್ಡ ಪ್ರವಾಹ ಅಲ್ಲಿ ಓ
ಮೂಡಣದಲ್ಲಿ ಕಾಣಿಸಿತು ಮೂಡಣದ ಮೋಡ
ಪಡುವಣದಲ್ಲಿ ಕಾಣಿಸಿತು ಪಡುವಣದ ಮೋಡ
ಜಾಂಬವ ಎಂಬ ಸಿಡಿಲು ಹೊಡೆಯಿತು
ಕಪ್ಪು ಮೋಡ ಕಾಣಿಸಿಕೊಂಡು
ಮಹಾಮಳೆಯ ಪ್ರವಾಹ ಬಂತು (ಪುಟ 458).

ಇಷ್ಟಾಗುವಾಗ ಸಿರಿಗೆ ಎಲಿಕುಂಜ ಪಿಲಿಕುಂಜ ಪುಂಚದ ನಡವೆಯಲ್ಲಿ, ಸನ್ನೆ ತೋಡಿನ ಬದಿಯಲ್ಲಿ, ಸಿರಿಹೊನ್ನೆಯ ಮರದ ಬುಡದಲ್ಲಿ ಹೆರಿಗೆನೋವು ಕಾಣಿಸಿಕೊಂಡು ಹೆಣ್ಣು ಮಗುವಿಗೆ ಜನ್ಮ ನೀಡುತ್ತಾಳೆ. ಆ ಹೊತ್ತಿಗೆ ಕುಮಾರ ಬ್ರಾಹ್ಮಣ ವೇಷ ತಾಳಿ ಬರುತ್ತಾನೆ. ನಿಮಗೆ ಗಂಡಸರು ಯಾರು ಇಲ್ಲವೇ, ಬರಿಯ ಹೆಂಗಸರು ಮಾತ್ರ ಕಾಣಿಸುತ್ತೀರಿ ಎನ್ನುತ್ತಾನೆ. ಮಗುವಿನ ಹೊಕ್ಕುಳ ಬಳ್ಳಿ ತುಂಡರಿಸಲು ಗೆಜ್ಜೆಕತ್ತಿ, ಮಗು ಮಲಗಿಸಲು ಹಾಳೆ ಇಲ್ಲವೇ? ಸಮೀಪದಲ್ಲಿ ಮನೆಯಲ್ಲಿ ತೋಟ ಇದ್ದರೆ ತನ್ನಿ ಎಂದು ಹೇಳುತ್ತಾನೆ ಬ್ರಾಹ್ಮಣ ವೇಷದ ಕುಮಾರ. ಸಾಮುವಿನ ಪರಿಚಯ ಕೇಳಲು ಆಕೆ ನಾನು ಕೊಟ್ರಾಡಿ ಕೊಡ್ಸರಾಳ್ವರ ಮಡದಿ, ನಿಮ್ಮ ಪರಿಚಯ ಏನೆಂದು ಕೇಳಲು ಬ್ರಾಹ್ಮಣ ನನ್ನ ಊರು ನಾಲ್ಕು ರಾಜ್ಯ, ನಾಲ್ಕು ದೇಶ, ನಾಲ್ಕು ದಿಕ್ಕು, ನಾಲ್ಕು ಸೀಮೆ. ನನ್ನ ಸತ್ತುಗುತ್ತು ಸತ್ಯಲೋಕದಿಂದ, ನಾಗಲೋಕದಿಂದ ಉದಯವಾಗಿ ಬಂದ ಬ್ರಾಹ್ಮಣ ಮಾಣಿ ಎನ್ನುತ್ತಾನೆ. ಸಿರಿಯ ಹೆರಿಗೆಯಾದ ಜಾಗ ಪುಂಜದ ನಡವೆ ಬಹಳ ಕಾರಣಿಕದ ಜಾಗ. ನಾನು ಮಗು ಮಲಗಿಸುವ ಸಾಹಿತ್ಯಗಳನ್ನು ಜೋಡಿಸಿ ಕೊಡುತ್ತೇನೆ ಎಂದು ಬ್ರಾಹ್ಮಣ ಸಾಮುವಿಗೆ ತಿಳಿಸಿ ಇಂದು ಎಲಿಕುಂಜ ಪಿಲಿಕುಂಜ ಪುಂಜದ ನಡವೆಯಲ್ಲಿ ಸಿರಿಹೊನ್ನೆಯ ಮರದ ಬುಡದಲ್ಲಿ ಸಣ್ಣ ಹೊಯ್ಗೆಯ ಸಣ್ಣ ತೋಡಿನ ಬದಿಯಲ್ಲಿ ಆದಂಥ ಘಟನೆಗಳನ್ನು ಯಾರಲ್ಲಿಯೂ ಹೇಳಲು ಹೋಗಬೇಡ. ಯಾರಲ್ಲಿಯೂ ಹೇಳಲಾರೆ ಎಂದು ಸಾಮು ಆಳ್ವೆದಿ ಬ್ರಾಹ್ಮನಿಗೆ ಭಾಷೆ ಕೊಡುತ್ತಾಳೆ. ಮತ್ತೂ ಛಲ ಹಿಡಿದು ಕೇಳಿದರೆ ಸಾಮು

ತುಳುಪಠ್ಯ

ಆಯೆರೆ ಕುಕ್ಕಿಮರ ಕಡ್ಪಾವ್ಡಡ್
ಈಯೆರೆ ಪೆಲಮರ ಕಡ್ಪಾವೊನ್ಲಾ
ಅಸನೊದ ಕೋಡಿಡ್ ಮಸನೊದ ಕಾಟೊ ಗೂರಾದ್
ಬುಕ್ಕೊ ಪನ್ಲ ಮೂಲು ನಡತ್ತಿ ಕತೆನ್‌ಂದ್ ಪಂಡೆರ್ ಬಡ ಬೆರಮ್ಮನೆ

ಕನ್ನಡಾನುವಾದ

ಆ ಬದಿಯ ಮಾವಿನಮರ ಕಡಿಸಿ
ಈ ಬದಿಯ ಹಲಸಿನ ಮರ ಕಡಿಸಿ
ಅಸನದ ಕೋಡಿಯಲ್ಲಿ ಮಸಣದ ಕಾಷ್ಠ ಪೇರಿಸಿ
ಆ ನಂತರ ಹೇಳು ಇಲ್ಲಿ ನಡೆದ ಕತೆಯನ್ನು ಎನ್ನುತ್ತಾನೆ ಬಡ ಬ್ರಾಹ್ಮಣ (ಪುಟ 466).

ಅಷ್ಟು ಹೇಳಿದ ಬ್ರಾಹ್ಮಣ ಜೋಳಿಗೆಯಿಂದ ಅಡಿಕೆಯೊಂದನ್ನು ತೆಗೆದು ಬಂಗಾರದ ಚೂರಿಯ ತುದಿಗೆ ಸಿಕ್ಕಿಸಿ ಅಲಿಕುಂಜ ಪಿಲಿಕುಂಜ ಪುಂಜದ ನಡವೆಯಲ್ಲಿ ಬಂಗಾರದ ಚೂರಿ ಅಡಿಕೆಯ ಮರವಾಗಿ ಬೆಳೆಯುವಂತೆ ಮಾಡಿ ಅದರಿಂದ ಬಿದ್ದ ಹಾಳೆಯನ್ನು ತೆಗೆದಿರಿಸಿ ಅಡಿಕೆಯ ಮರವನ್ನು ಮುರಿದು ಮತ್ತೆ ಬಂಗಾರದ ಚೂರಿಯಾಗಿ ಮಾಡಿ ಈ ಹಾಳೆಯ ತುದಿಬುಡ ತುಂಡರಿಸಿ ಮಗುವನ್ನು ಮಲಗಿಸಲು ಕೊಟ್ಟು ಸಾಮುವಿನಲ್ಲಿ ಇಂದು ನಿನ್ನನ್ನು ನಾನು ಕರೆದುಕೊಂಡು ಹೋಗುವುದಿಲ್ಲ. ನನ್ನ ತಾಯಿಯವರಾದ ಸಿರಿಯನ್ನು ಕರೆದುಕೊಂಡು ಹೋಗುತ್ತೇನೆ ಎನ್ನುತ್ತಾನೆ. ಮಗುವನ್ನೆತ್ತಿ ಹಾಳೆಯಲ್ಲಿ ಮಲಗಿಸಿ ಸನ್ನೆ ತೋಡಿನಲ್ಲಿ ಹರಿಯುವ ನೀರಲ್ಲಿ ತೇಲಿಬಿಟ್ಟು ನೀನು ನನ್ನ ಪ್ರೀತಿಯ ತಂಗಿ ಎಂದು ಕರೆದು ತೇಲಿಕೊಂಡು ಹೋಗಿ ಕಾನಬೆಟ್ಟು ದುರ್ಗಲ್ಲ ಪೆರ್ಗಡೆಯವರಿಗೆ ಸಿಗುವಂತೆ ಹೇಳುತ್ತಾನೆ.

ತುಳುಪಠ್ಯ

ದುಂಬತ್ತ ಪೋನಗ ಓ ಅಮ್ಮ ಬಾಲೇ
ಕಾನಬೊಟ್ಟು ದುರ್ಗಲ್ಲ ಪೆರ್ಗಡೆನಜ್ಜೆರೆ ಯೆರಮನೆದ ಬಾಕಿಲ್‌ಡ್
ಸನ್ನೆ ತೋಡು ಓ ಪೋದು ಮಲ್ಲ ತೋಡಾವೊಡು ಆವೊನು ಓ ನೀರ ನಿದಿಟ್ಟ್
ಅಜ್ಜೆರೆ ಕಣ್ಣ್‌ಗ್ ತಿಕ್ಕೊಡು ಮಗಾ
ಅಜ್ಜೆರ್ ರಚ್ಚನೆ ನಿನನ್ ಮಲ್ಪೆರ್ ಮಗಾ

ಕನ್ನಡಾನುವಾದ

ಮುಂದೆ ಹೋಗುವಾಗ ಓ ಅಮ್ಮ ಮಗೂ
ಕಾನಬೆಟ್ಟು ಅಜ್ಜನವರ ಅರಮನೆಯ ಬಾಗಿಲಲ್ಲಿ

ಸನ್ನೆ ತೋಡು ಹೋಗಿ ಓ ದೊಡ್ಡ ತೋಡಾಗಿ ಓ ನೀರ ನಿಧಿಯಲ್ಲಿ
ಅಜ್ಜನವರ ಕಣ್ಣಿಗೆ ಕಾಣಿಸಬೇಕು ಮಗಾ
ಅಜ್ಜನವರು ನಿನ್ನನ್ನು ರಕ್ಷಣೆ ಮಾಡಿಯಾರು ಮಗಾ (ಪುಟ 468)

ಸಿರಿಯ ಎದುರಿಗೆ ಬ್ರಾಹ್ಮಣ ವೇಷದ ಕುಮಾರ ಬಂದು ನಾನು ನೋಡಲು ಬ್ರಾಹ್ಮಣ. ಆದರೆ ಅಂದು ಬೋಲದ ಪದವಲ್ಲಿ ನಿಮಗೆ ಭಾಷೆ ನೀಡಿದ್ದೇನೆ ತಾಯಿಯವರೇ. ಇಂದಿನ ದಿನ ಬಂದಿದ್ದೇನೆ. ನಿಮ್ಮ ಮಗ ಕುಮಾರ ನಾನು ತಾಯಿಯವರೇ. ತಡ ಮಾಡದೆ ನಾವು ಹೊರಡುವ ತಾಯಿಯವರೇ, ನಾವು ಸತ್ಯಲೋಕದಿಂದ ಬಂದವರು. ತುಳುನಾಡ ಕತೆ ಮಾಡಿದೆವು. ನಾವಿನ್ನು ಹೊರಡುವ. ನಾಲ್ಕು ರಾಜ್ಯ, ನಾಲ್ಕು ಸೀಮೆಗಳಲ್ಲಿ ಮೂಡು, ಪಡು, ತೆಂಕು, ಬಡಗುಗಳಲ್ಲಿ ನಾವು ಇಟ್ಟ ದೃಷ್ಟಿಗೆ, ನಾವು ಹಾಕಿದ ಕಾವಲಿಗೆ ಆಲಡೆಯೆಂಬ ಹೆಸರು ಇಂದಲ್ಲ ನಾಳೆಯಲ್ಲ ಶತಕಾಲದವರೆಗೆ ಬಂತು ತಾಯಿಯವರೇ. ಬೊಲ್ಯೊಟ್ಟುವಿಗೆ ನನ್ನನ್ನು ಕಳುಹಿಸಿದ್ದೀರಿ ತಾಯಿಯವರೇ. ನನ್ನ ಬಲಭಾಗದಲ್ಲಿ ಒಂದು ಹೆಜ್ಜೆಯಷ್ಟು ಜಾಗ ನಿಮಗೆ ಇಟ್ಟಿದ್ದೇನೆ. ಅಲ್ಲಿ ನಿಮಗೆ ಸ್ಥಾನಮಾನ ಕಟ್ಟಿಸುತ್ತೇನೆ. ಎಡದ ಎಡ ತುದಿಯ ಒಂದು ಹೆಜ್ಜೆ ಜಾಗದಲ್ಲಿ ತಾಯಿಯವರೇ ಬೆರ್ಮೆರ್‌ಗೆ ಗುಡಿ ಕಟ್ಟಿಸಿದ್ದೇನೆ. ಬೊಲ್ಯೊಟ್ಟು ನನ್ನ ಬೊಳ್ಳಿ ಮಾಡ ನೋಡಿ ತಾಯಿಯವರೇ, ಬಿಳಿಯ ಸಾಸ್ರ ಹುಂಜದ ಲಿಂಗ ನನ್ನದು ನೊಡಿಕೊಳ್ಳಿ. ನಂದಳಿಕೆಸ್ಥಾನಕ್ಕೆ ಆ ನಂತರ ಹೋಗಿ ನೀವು, ನಿಮ್ಮ ಸಹಾಯಕ್ಕಾಗಿ ನಂದಿಗೋಣ, ಮೈಸಂದಾಯನನ್ನು ಕೊಡುತ್ತೇನೆ. ನಾರಾಯಣ ತಾಯಿಯವರೇ ಸೋಯದ (ನಿಜ) ರೂಪ ನಾವು ಬಿಟ್ಟು ಮಾಯದ ರೂಪ ಪಡೆಯುವ ಎಂದು ಹೇಳಿ ತಾಯಿಯವರ ಕೈ ಹಿಡಿದು ಅಲಿಕುಂಜ ಪಿಲಿಕುಂಜ ಪುಂಜದ ನಡವೆಯಲ್ಲಿ ಮಾಯವಾಗುತ್ತಾರೆ.

ಇತ್ತ ಸಾಮು ಒಬ್ಬಳೇ ಅಲಿಕುಂಜ ಪಿಲಿಕುಂಜ ಪುಂಜದ ನಡವೆಯಿಂದ ತಲೆತಲೆ ಚಚ್ಚಿಕೊಂಡು ಅಳುತ್ತಾ ಬಂದು ಕೊಟ್ಟರಾಡಿಯ ಅರಮನೆ ಹೊಕ್ಕುತ್ತಾಳೆ. ಇವಳನ್ನು ಕಂಡ ಕೊಡ್ಸರಾಳ್ವರು ಹೋಗುವಾಗ ನೀವಿಬ್ಬರು ಅಕ್ಕತಂಗಿ ಜೊತೆಯಾಗಿ ನಗುನಗುತ್ತಾ ಹೋಗಿದ್ದೀರಿ. ಈಗ ಏನು ನೀನೊಬ್ಬಳೇ ಅಳುತ್ತಾ ಬಂದಿದ್ದಿ ಎಂದು ವಿಚಾರಿಸುತ್ತಾರೆ. ಸಾಮು ಏನನ್ನೂ ಹೇಳದೆ ಸುಮ್ಮನಾಗುತ್ತಾಳೆ. ಆಗ ಕೊಡ್ಸರಾಳ್ವರು ಏನಾಯಿತೆಂದು ಹೇಳದೆ, ಸತ್ಯಮಲೋಕಂದ ಸಿರಿಯನ್ನು ಕರೆದುಕೊಂಡು ಬಾರದಿದ್ದರೆ ಕೊಟ್ರಾಡಿಯ ಅರಮನೆ ಹೊಕ್ಕಲು ಬಿಡೆನು ಎನ್ನುತ್ತಾರೆ. ಇಲ್ಲಿಂದ ಒಂದು ಹೆಜ್ಜೆ ತೆಗೆಯಲು ಬಿಡೆನು ಎನ್ನುತ್ತಾ ಸಿಡಿಮಿಡಿಗೊಳ್ಳುತ್ತಾರೆ. ಆಗ ಸಾಮು ನನ್ನ ಪ್ರೀತಿಯ ಮದುಮಗಾ. ನಿಮ್ಮ ಉರಿಸಿರಿ(ಕೋಪ)ಯನ್ನು ಬಿಟ್ಟುಬಿಡಿ. ನಾನು ನಿಮಗೆ ಸತ್ಯ ಹೇಳಬೇಕೆಂದಿದ್ದರೆ ಆ ಕಡೆಯ ಮಾವಿನ ಮರ, ಈ ಕಡೆಯ ಹಲಸಿನ ಮರ ಕಡಿಸಿ ಅಸನಂದ ಕೋಡಿಯಲ್ಲಿ ಮಸಣದ ಕಾಷ್ಠವನ್ನು ನಮ್ಮ ಬಾಕಿಮಾರು ಗದ್ದೆಯಲ್ಲಿ ಮಾಡಿಸಿ ಎನ್ನುತ್ತಾಳೆ. ಒಕ್ಕಲು ಮಕ್ಕಳನ್ನು ಬರಹೇಳಿ ಸಾಮು ಹೇಳಿದಂತೆ ಮರ ಕಡಿಸಿ ಕಾಷ್ಠ ಮಾಡಿಸಿದರು. ಆ

ಹೊತ್ತಿಗೆ ಸಾಮು ಬಂದು ಮದುಮಗಾ ನೀವು ಚಾವಡಿ ಏರಿ ನಿಲ್ಲಿ. ನಾನು ಹೊಸ್ತಿಲ ಹೊರಗೆ ನಿಂತು ನಡೆದ ಘಟನೆಯನ್ನು ಹೇಳುತ್ತೇನೆ ಎಂದಳು. ಹಾಗೆ ಆಳ್ವರು ಹೋಗಿ ಚಾವಡಿ ನಡುವಿನ ಬಾಜಿರದ (ಚಾವಡಿಯ ಅಂಚಿನಲ್ಲಿ ಕುಳಿತುಕೊಳ್ಳಲು ಹಾಸಿದ ಉದ್ದವಾದ ಹಲಗೆ) ಹತ್ತಿರ ಬೊದಿಗೆಯ ಕಂಬದ ನಡುವಲ್ಲಿ ನಿಂತರು. ಸಾಮು ಮೆಟ್ಟಿಲೇರಿ ಹೊಸ್ತಿಲ ಹೊರಗೆ ನಿಂತಳು. ಒಂದು ಕಾಲು ಒಳಗೆ, ಒಂದು ಕಾಲು ಹೊರಗಿಟ್ಟು ಹೇಳಿದರು, ನಾರಾಯಣ ಮದುಮಗ, ನಾವು ಸಿರಿಯ ಬಾಯಿಯ ಆಸೆ ಕಳೆಯಲು ಜೊತೆಯಾಗಿ ಉಜೆಮಾರ ಗುತ್ತಿಗೆ ಹೋದೆವು. ಹೋಗುವ ಕಾಡುದಾರಿ ಯಲ್ಲಿ ಬಹಳ ಕಟಾಕ್ಷದ ಕಾಡಿನ ಬಗೆಗೆ ನೀವು ಕಿವಿಯಾರೆ ಕೇಳಿರ ಬಹುದು. ಎಲಿಕುಂಜ ಪಿಲಿಕುಂಜ ಪುಂಜದ ನಡವೆ ಎಂಬ ನಡವೆಗೆ ಬಂದು ತಲಪುವಾಗ ನನ್ನ ತಂಗಿ ಸಿರಿ ಹಠ ಕಟ್ಟಿದಳು, ಸಿಟ್ಟುಗೊಂಡಳು, ಆ ಕಾಡನ್ನು ನನಗೆ ತೋರಿಸಬೇಕೆಂದು ಹಠ ಕಟ್ಟಿದಳು. ಬೇಡಬೇಡವೆಂದರೂ ಕೇಳದೆ ಛಲ ಹಿಡಿದಳು. ನಾನು ಆ ಮೂರು ಕಾಡನ್ನೂ ಬೆರಳು ತೋರಿಸಿ ಹೇಳಿದೆ ಮದುಮಗಾ. ಅಷ್ಟು ಹೊತ್ತಿಗೆ ಅವಳ ತಿಳಿಯಾದ ಮುಖದಲ್ಲಿ ಹೆರಿಗೆ ನೋವು ಕಾಣಿಸಿಕೊಂಡು ಹೆಣ್ಣುಮಗುವನ್ನು ಹಡೆದಳು ಹಾಗೂ ಆನಂತರ ನಡೆದ ಎಲ್ಲ ಘಟನೆಗಳನ್ನೂ ವಿವರವಾಗಿ ಹೇಳಿ ಸಿರಿ ಕುಮಾರನ ಜೊತೆ ಮಾಯವಾದ ವಿಚಾರವನ್ನು ತಿಳಿಸುತ್ತಾಳೆ. ನಿಮ್ಮ ಕೈ ಬಿಟ್ಟು ಮದುಮಗಾ ನನ್ನ ಮಗು ಕುಮಾರನ ಸನ್ನಿಧಾನಕ್ಕೆ ನಾನು ಹೋಗುತ್ತೇನೆಂದರು ಸಾಮು. ಅಷ್ಟು ಹೇಳಿಯಾಗುವಷ್ಟ ರಲ್ಲಿ ಸಾಮುವಿನ ಕಣ್ಣಾಲಿ ಮೇಲೆ ಬಂತು ಬಿಳಿಯಾಲಿ ಮುಚ್ಚಿತು. ಸಾಮು ಕಾಯಬಿಟ್ಟು ಕೈಲಾಸ ಸೇರಿದರು. ಬೊಲ್ಯೊಟ್ಟುವಿನಲ್ಲಿ ಎಡಬಲ ಮುಂದು ಹಿಂದಿನಲ್ಲಿ ನೆಲೆವೂರಿ ನಾಲ್ಕು ರಾಜ್ಯ ನಾಲ್ಕು ದಿಕ್ಕಿನಲ್ಲಿ ಸಾಮು ಎಂಬ ಸತ್ಯ ಕಲೆ ಬರುವಂತೆ ಮಾಡಿದರು. ಸಾಮುವನ್ನು ಕಾಷ್ಠದಲ್ಲಿರಿಸಿ ಉರಿಸಿದಾಗ ಸಾಮು ಬಿಳಿಯ ದುಂಬಿಯಾಗಿ ಕುಮಾರನ ಸುತ್ತು ಬಲಿಯಲ್ಲಿ ಬರುವ ವಿವರಗಳಿವೆ. ನಂದಳಿಕೆ ನಾಲ್ಕು ಸ್ಥಾನದಲ್ಲಿ ದೇವರ ಪೀಠದಲ್ಲಿ ಸಾಮು ಬಿಳಿಯ ದುಂಬಿಯಗಿದ್ದಾಳೆ. ಈ ವಿವರಗಳು ಬೇರೆ ಪಠ್ಯಗಳಲ್ಲಿ ಲಭ್ಯವಿಲ್ಲ.

ರಾಮಕ್ಕ ಅವರ ಪಠ್ಯದಲ್ಲಿ ಸಿರಿ ಗರ್ಭಧರಿಸಿ ಒಂಬತ್ತನೇ ತಿಂಗಳಲ್ಲಿ ಬಾಮುಕೆಲ್ಲರ ಆಮಂತ್ರಣದಂತೆ ಸಾಮುವಿನ ಜೊತೆಗೆ ಅಂಗರಾಜೆ ಬಾವು ಗೂವೆದೋಡು ಗುತ್ತಿಗೆ (ಅಂಗರಾಜೆ ಬರ್ಕೆಯ ಇನ್ನೊಂದು ಹೆಸರು) ಹೋಗುತ್ತಾರೆ. ಔತಣ ಮುಗಿಸಿ ಹಿಂತಿರುಗುವ ದಾರಿಯಲ್ಲಿ ಅಲಿಕುಂಜ ಪಿಲಿಕುಂಜದ ಬಗೆಗೆ ಕೇಳುತ್ತಾಳೆ ಸಿರಿ. ಅದು ಹಿಂದೆ ಮತ್ತು ಮುಂದೆ ಉಳಿಯಿತು ಎನ್ನಲು ಸಿರಿ

ತುಳುಪಠ್ಯ

ರನ್ನೆ ತೋಡು ಪೊನ್ನೆ ತಾರ್‌ಂದ್ ಪಂಡ ಒವ್ವಕ್ಕೆರೇ
ಒಯಿಪಲ್ಲ ಕಲ್ಲ್ ಮಂಜಲಲ್ಲ ಪಾದೆ ಓಲಕ್ಕೆರೆ
ಪನ್ಲೆಕ್ಕೆರೇ ಪಂಡೆರ್ ಅಟೊ ಕಟ್ಯೆರ್ ಚಲೊ ಪತ್ಯೆರ್

ಕನ್ನಡಾನುವಾದ

ರನ್ನೆ ತೋಡು ಪೊನ್ನೆ ತಾರ್(ಹೊಳೆಯ ಹೆಸರು) ಎಂದರೆ ಯಾವುದು ಅಕ್ಕನವರೇ ಒಯಿಪಲ್ಲ ಕಲ್ಲು ಮಂಜಲಲ್ಲ ಪಾದೆ (ದೊಡ್ಡ ಬಂಡೆಯ ಹೆಸರು) ಎಲ್ಲಿ ಅಕ್ಕನವರೇ ಹೇಳಿ ಎಂದರು ಹಠ ಕಟ್ಟಿದರು ಛಲ ಹಿಡಿದರು (ಪುಟ 264).

ಈ ಜಾಗದ ವಿವರಗಳು ಬೇರೆ ಪಠ್ಯಗಳಲ್ಲಿ ಇಲ್ಲ. ಸಾಮು ಈ ಕುರಿತು ಹೇಳಿದ ಕೂಡಲೇ ಸಿರಿಗೆ ಹೆರಿಗೆ ನೋವು ಕಾಣಿಸಿಕೊಳ್ಳುತ್ತದೆ. ನಮಗೆ ಎಲ್ಲವೂ ಇದ್ದು ದಾರಿಯಲ್ಲಿ ಹೆರುವ ಕಾಲ ಬಂತಲ್ಲ ಎಂದು ಸಾಮು ದುಃಖಿಸುತ್ತಾಳೆ. ಮಗುವಿನ ಹೊಕ್ಕುಳ ಬಳ್ಳಿ ಕತ್ತರಿಸಲು ಚೂರಿ ಹಾಗೂ ಮಗು ಮಲಗಿಸಲು ಹಾಳೆಯನ್ನು ತನ್ನಿ ಅಕ್ಕನವರೇ ಎಂದು ಸಾಮುವನ್ನು ಕಳುಹಿಸಿ ಸಿರಿ ತನ್ನ ಸೊಂಟದಿಂದ ಗೆಜ್ಜೆಕತ್ತಿ ತೆಗೆದು ಮಗುವಿನ ಹೊಕ್ಕುಳ ಬಳ್ಳಿ ತುಂಡರಿಸಿ, ಮಡಿಲಲ್ಲಿ ಇದ್ದ ಅಡಕೆಯಿಂದ ಸಸಿಯನ್ನು ನಿರ್ಮಿಸಿ ಹಾಳೆ ತೆಗೆದು ಮಗುವನ್ನು ಮಲಗಿಸಿ

ತುಳುಪಠ್ಯ

ಸೋಯೊದ ಬಾಲೆಗ್‌ಮಾಯೊದ ಬರ್ಸೊ ಬರೊಡು
ಕಾಡ ಬೊಲ್ಲೊ ಸೋಡ ನೀರ್ ಒಂಜಾದ್ ಬರೊಡು
ನಡುತಾರ್‌ಡ್ ಉಂತ್ಯೆರಪ್ಪಾ ಆರಾಂಡ.... ಬಾಲೆನ್ ಬುಡ್ಯೆರ್

ಕನ್ನಡಾನುವಾದ

ಸೋಯ(ನಿಜರೂಪ)ದ ಮಗುವಿಗೆ ಮಾಯದ ಮಳೆ ಬರಬೆಕು
ಕಾಡ ಪ್ರವಾಹ ತೋಡಿನ ನೀರು ಒಂದಾಗಿ ಬರಬೇಕು
ನಡು ಹೊಳೆಯಲ್ಲಿ ನಿಂತರು ಅವರು.......... ಮಗುವನ್ನು ಬಿಟ್ಟರು.

ಅಷ್ಟು ಹೊತ್ತಿಗೆ ಕುಮಾರ ತನ್ನ ನಿಜರೂಪ ಬಿಟ್ಟು ಬಡ ಬ್ರಾಹ್ಮಣನ ರೂಪ ತಾಳಿ ಸತ್ಯನಾಪುರದರಮನೆಗೆ ಬಡ ಬ್ರಾಹ್ಮಣ ಬರುವ ರೀತಿಯಲ್ಲಿ ಬರುವ ವಿವರಗಳಿವೆ. ಕಬ್ಬು ಕಡಿದು ಜೋತಿಕೋಲು ಮಾಡಿಕೊಂಡು, ಕಾಲಿಗೆ ಉರಿಗೆಜ್ಜೆ ಕಟ್ಟಿಕೊಂಡು, ಬಾಯಲ್ಲಿ ಕೊಳಲು ಹಿಡಿದು.... ಈ ರೀತಿಯ ವೇಷದಲ್ಲಿ ಕೆಳ ಅಂಗರಾಜೆ, ಮೇಲಿನ ಅಂಗರಾಜೆಯಾಗಿ ಮೂರು ಕಡೆ ಸೇರುವ ಹೊಳೆ ದಾಟಿಕೊಂಡು ಅಲಿಕುಂಜ ಪಿಲಿಕುಂಜ ಕಾಡುದಾರಿಯಲ್ಲೆ ಬರಲು ಸಿರಿ ಕಡೆ ಕಣ್ಣಲ್ಲಿ ದುಖಿಸುತ್ತಿದ್ದಾಳೆ. ಯಾಕೆ ದುಖಿಸುತ್ತೀರಿ ಎಂದು ಕೇಳಲು ಸಿರಿ ನಿನ್ನಂಥ ಬೇಡುವ ಬ್ರಾಹ್ಮಣನಲ್ಲಿ ಹೇಳಿ ಏನು ಪ್ರಯೋಜನ ಎಂದು ಹೇಳುತ್ತಾಳೆ. ಹಾಗಾದರೆ ನಾನು ಹೋಗುತ್ತೇನೆ ಎನ್ನುತ್ತಾನೆ. ಅಷ್ಟು ಹೊತ್ತಿಗೆ ಬಡಬ್ರಾಹ್ಮಣನ ರೂಪದಿಂದ ಕುಮಾರನ ರೂಪ ತಾಳಿ ಸಿರಿಯೆದುರು ನಿಲ್ಲುತ್ತಾನೆ.

ಸಿರಿ ಮತ್ತು ಕುಮಾರನ ನಡುವೆ ಸುದೀರ್ಘ ಸಂಭಾಷಣೆ ನಡೆಯುತ್ತದೆ. ತಾಯಿಯವರೇ ನನ್ನನ್ನು ಇನ್ನೊಬ್ಬರ ಮನೆಯಲ್ಲಿ ಚಾಕರಿ ಮಾಡಿಸಬೇಕೆಂದಿದ್ದಿರಿ. ನಾನು ಬರಲಾರೆ ಎಂದಾಗ ಬೋಲದ ಕಾಡಲ್ಲಿ ಮಾಯಮಾಡಿದಿರಿ ತಾಯಿಯವರೇ. ನನ್ನ ಕರುಳ ಒಂದು ತುಂಡು ನಿಮ್ಮ ಗರ್ಭದಲ್ಲಿ ಉಳಿದು ನನಗೊಂದು ತಂಗಿಯ ಫಲವನ್ನು ಕೊಟ್ಟಿರಿ. ಕೊಟ್ಟರಾಡಿಯ ಕೊಡ್ಸರಾಳ್ವರಿಗೆ ನೀವು ಎರಡನೇ ಹೆಂಡತಿಯಾಗಿ ಹೋಗಿದ್ದು ಸರಿಯೇ ತಾಯಿಯವರೇ? ನನ್ನನ್ನು ನೀವು ಬೊಲ್ಯೊಟ್ಟುವಿನ ಆಲಡೆಯ ಬೆಳ್ಳಿಯ ಮುಗುಳಿಯಲ್ಲಿ ಕೂರಿಸಿ ಬಲಿಬೋಗ ಕೊಡಿಸಿದಿರಿ. ದಾರುವನ್ನೂ ಕಲ್ಲು ಮಾಡಿ ಬೋಲಮಲ್ಲಿಗೆಯ ಸತ್ತಿರಿಕುಲು ಜೊತೆಗೆ ಸತ್ಯ ದಂಡಿಗೆಯಲ್ಲಿ ಕುಳಿತು ಬೋಲಮಲ್ಲಿಗೆಗೆ ಹೋದಿರಿ. ಕೊಡ್ಸರಾಳ್ವರ ಜೊತೆಗಿನ ಬದುಕಲ್ಲಿ ನಿಮಗೆ ಸುಖದ ಅನ್ನ ದೊರೆಯಿತೆ ಅಥವಾ ಕಷ್ಟದ ಅನ್ನ ದೊರಕಿತೆ ತಾಯಿಯವರೇ? ಇದೆಲ್ಲವನ್ನು ತಿಳಿಯಲು ನಾನು ಬಂದಿದ್ದೇನೆ. ಇಷ್ಟು ಮಾತನಾಡುವಾಗಲೂ ಸಿರಿ ಒಂದು ಮಾತನ್ನೂ ಆಡುವುದಿಲ್ಲ. ನನ್ನ ಚಿಕ್ಕ ತಂದೆಯವರಾದ (ಸಿದ್ಯಮ್ಮೆರ್) ಕೊಟ್ಟರಾಡಿಯ ಕೊಡ್ಸರಾಳ್ವರ ಎಷ್ಟು ಆಸ್ತಿ, ಬದುಕು ತೆಗೆದಿರಿ ತಾಯಿಯವರೇ? ನನ್ನ ತಂದೆಯವರ ಜೊತೆ ಒಂದು ದಿನದ ಸುಖ, ಪುಣ್ಯ ಪಡೆಯಲಿಲ್ಲ ನೀವು. ಅವರಿಗೆ ಎಡಬಲದಲ್ಲಿ ಜೋಳಿಗೆ ಹಾಕಿಸಿ, ಕುತ್ತಿಗೆಗೆ ಬೆಳ್ಳಿಯ ನೊಗ ನೇಗಿಲು ಕಟ್ಟಿಸಿ, ಕಾಲಿಗೆ ಬಿಳಿಯ ಬಟ್ಟೆ ಸುತ್ತಿಸಿ ನಾಲ್ಕು ಮನೆಗಳಲ್ಲಿ ಬೇಡುವಂತೆ ಮಾಡಿದಿರಿ. ಬೇಡುವ ನರಲೋಕಕ್ಕೆ ತಳ್ಳಿದಿರಿ.ಇಷ್ಟೆಲ್ಲ ಸುಖಭಾಗ್ಯ ಸಿಕ್ಕಿತಲ್ಲಾ ನಿಮ್ಮಿಂದ ನನ್ನ ತಂದೆಯವರಿಗೆ ಎಂದಾಗಲೂ ಸಿರಿ ಒಂದು ಮಾತೂ ಆಡುವುದಿಲ್ಲ. ನೀವೂ ನಾನೂ ಇಬ್ಬರಿದ್ದು ನನ್ನ ತಂಗಿಯನ್ನು ರನ್ನೆ ತೋಡು ಪೊನ್ನೆ ತಾರಿನಹೊಳೆಯಲ್ಲಿ ಮಾಯ ಮಾಡಿದೆವು. ನನ್ನನ್ನು ಬಲಭಾಗದಲ್ಲಿ ನಿಲ್ಲಿಸಿ ಸಿಡಿಲು ಮಿಂಚು ಮಳೆ ಬರಿಸಿ ಪ್ರವಾಹದ ನೀರಲ್ಲಿ ಹೆಣ್ಣು ಮಗುವನ್ನು ತೇಲಿ ಬಿಟ್ಟಿರಿ. ಕಾನಬೆಟ್ಟಿನ ಅಜ್ಜನವರಿಗೆ ಸಿಗುವಂತೆ ಹೇಳಿದಿರಿ ಎಂದಾಗಲೂ ಸಿರಿ ತನ್ನ ಅಸಹಾಯತೆ ಯನ್ನು ವ್ಯಕ್ತಪಡಿಸಿ ನನ್ನನ್ನು ಏನು ಮಾಡುತ್ತಿ ಮಗಾ? ನನಗೊಂದು ಗುಡಿ ಕಟ್ಟಿಸಿ ಅದನ್ನು ಬೆಳಗಿಸಿ ಕೊಡು ಎನ್ನುತ್ತಾಳೆ. ನಿನಗೂ ಒಂದು ಗುಡಿ ಕಟ್ಟಿ ಬೆಳಗಿಸು ಎಂದು ಹೇಳಿ ಆದಿ ಬಡಗಣ ಲಂಕೆ ಲೋಕನಾಡಿಗೆ ಹೋಗುವ ಮಗಾ,

ತುಳುಪಠ್ಯ

ನಿನ್ನ ಬೆರಿಯಪ್ಪ ಬರ್ಪೆ ಮಗ ಬಾಲೆ ಕೇನ್‌ಲಾ
ಮೂಜಿ ಪಜ್ಜ ನಿಕ್ಕ್ ಮಗಾ ಜಾಗೆ ಮೂಜಿ ಪಜ್ಜ ಎಂಕ್ ಕೊರ್ಲ ಮಗ ಎಡತ್ತ್ ಬಲತ್ತ್
ಮಾಯೊಡು ಪೋಯೆರಪ್ಪಾ

ಕನ್ನಡಾನುವಾದ

ನಿನ್ನ ಬೆನ್ನು ಹಿಡಿದು ಬರುತ್ತೇನೆ ಮಗಾ ಕೇಳು

ಮೂರು ಹೆಜ್ಜೆ ಜಾಗ ನಿನಗೆ ಮಗಾ ಮೂರು ಹೆಜ್ಜೆ ಜಾಗ ನನಗೆ ಕೊಡು ಎಡಬಲದಲ್ಲಿ ಮಾಯದಲ್ಲಿ ಹೋದರಪ್ಪಾ..... (ಪುಟ 275).

ಹೀಗೆ ಇಬ್ಬರೂ ಮಾಯವಾಗಿ ಕುಮಾರ ಸಿರಿಯನ್ನು ಬೊಲ್ಯೊಟ್ಟಿಗೆ ಕರೆದುಕೊಂಡು ಹೋಗುತ್ತಾನೆ.

ಲೀಲಾ ಅವರ ಪಠ್ಯದಲ್ಲಿ ಮೊದಲ ಭಾಗ ಎಲ್ಲ ಪಠ್ಯಗಳಂತೆ ಇದೆ. ಸಿರಿ ಗರ್ಭಿಣಿಯಾಗಿ ಸಾಮುವಿನ ಜೊತೆ ಅಂಗಡಿಜಾಲ ಬರ್ಕೆಗೆ ಔತಣಕ್ಕಾಗಿ ಹೋಗುವುದು. ಬಾಮುಕೆಲ್ಲರು ಸಿರಿ ಹಾಗೂ ಸಾಮುವಿಗೆ ಒಂದೇ ಎಲೆಯಲ್ಲಿ ಔತಣ ಹಾಕುವುದು. ಸಾಮು ಎಲೆಗೆ ಕೈ ಹಾಕುವಾಗ ಎಲೆ ಹರಿಯುವ ವಿವರಗಳಿವೆ. ಇದರಿಂದ ಸಾಮುವಿನ ಮನಸ್ಸಲ್ಲಿ ಭೇದ ಇತ್ತೆಂದು ತಿಳಿದು ಸಿರಿಗೆ ಪ್ರತ್ಯೇಕ ಎಲೆಯಲ್ಲಿ ಔತಣ ಹಾಕುತ್ತಾರೆ. ಔತಣ ಸ್ವೀಕರಿಸಿ ಇಬ್ಬರೂ ಅಡ್ಕರೆ (ಹೊತ್ತಲ್ಲದ ಹೊತ್ತು) ಹೊತ್ತಲ್ಲಿ ಹೊರಟು ಕೊಟ್ರಾಡಿಗೆ ಹೋಗುತ್ತಾರೆ. ಹೊರಡುವಾಗ ಬಾಮುಕೆಲ್ಲರು ಎಲಿಕುಂಜದಲ್ಲೆ ಹೋಗಿ, ಪಿಲಿಕುಂಜದಲ್ಲೆ ಹೋಗಬೇಡಿ, ಅಲ್ಲಿ ಹುಲಿ ಇರುತ್ತದೆ ಎಂದು ಹೇಳಿ ಕಳುಹಿಸುತ್ತಾರೆ. ಬೈಲೊಟ್ಟು ಬೈಲು ದಾಟಿ ಬರಲು ಸಿರಿಗೆ ಹೆರಿಗೆ ನೋವು ಕಾಣಿಸಿಕೊಂಡು ಸನ್ನೆ ತೋಡಿನ ಬದಿಯಲ್ಲಿ ಸೊನ್ನೆಯನ್ನು ಹೆರುತ್ತಾಳೆ. ತನ್ನ ಸೊಂಟದ ಗೆಜ್ಜೆ ಕತ್ತಿಯಿಂದ ನೆಲದಲ್ಲಿ ಮೂರು ಗೆರೆ ಎಳೆದು ನೀರು ಚಿಮ್ಮಿಸಿ ಮಗುವನ್ನು ಸ್ನಾನ ಮಾಡಿಸಿ ಸತ್ಯನಾಪುರದ ಗೋಟು ಅಡಿಕೆಯನ್ನಿಟ್ಟು ಸಸಿಯಾಗಿ ನಿರ್ಮಿಸಿ ಅದರ ಹಾಳೆಯಲ್ಲಿ ಮಗುವನ್ನು ಮಲಗಿಸಿ ನೀರ ದಲೆಂಬಿ (ಪ್ರವಾಹ)ಯಲ್ಲಿ ಮಗುವನ್ನು ಬಿಟ್ಟು ಕಾನಬೊಟ್ಟು ಅಜ್ಜನವರಿಗೆ ಮಕ್ಕಳಿಲ್ಲ. ಅವರಿಗೆ ದೊರೆತು ಅಲ್ಲಿ ಬೆಳೆಯಬೇಕೆಂದು ಹೇಳುತ್ತಾಳೆ.

ಇತ್ತ ಕುಮಾರ ಮಾಯದಲ್ಲಿ ಬಂದು ಸಿರಿಯಲ್ಲಿ ನೀವು ಕೊಟ್ಟ ವರವನ್ನು ನಾನು ಪಾಲಿಸಿದ್ದೇನೆ. ಬೊಲ್ಯೊಟ್ಟುವಿನಲ್ಲಿ ಜೋಡುಗುಡಿ ಕಟ್ಟಿಸಿದ್ದೇನೆ. ನನ್ನ ಜೋಡುಸೇವೆಯ ಹೊತ್ತಾಯಿತು. ನನ್ನ ಬಲಭಾಗದಲ್ಲಿ ಒಂದು ಹೆಜ್ಜೆ ಜಾಗವಿರಿಸಿದ್ದೇನೆ. ನೀವು ಬನ್ನಿ ತಾಯಿಯವರೇ ಎಂದು ಕುಮಾರ ಕರೆಯುತ್ತಾನೆ. ಸಿರಿ ಒಣಗಿದ ಪಂಚೋಲೆ ವೀಳ್ಯದ ಎಲೆಯನ್ನು ಅಡಿಕೆ ಸಸಿಯ ಬುಡದಲ್ಲಿ ನೆಟ್ಟು ಕ್ಷಣದಲ್ಲಿ ಚಿಗುರಿ ಬಳ್ಳಿಯಾಗಿ ಹರಡಬೇಕೆಂದರು. ಪಂಚೋಲೆ ವೀಳ್ಯದ ಬಿಳಲಿಗೆ ಸಿರಿ ಕೈ ಕೊಟ್ಟರು. ಸಿರಿ ಬೈಲೊಟ್ಟು ಬೈಲಲ್ಲಿ ಮಾಯವಾದರು. ಇತ್ತ ಸಾಮು ಒಬ್ಬರೇ ಕೊಟ್ಟರಾಡಿಗೆ ಹೋಗುತ್ತಾರೆ, ಕೊಡ್ಸರಾಳ್ವರು "ಹೋಗುವಾಗ ಇಬ್ಬರು ಹೋಗಿದ್ದೀರಿ. ಈಗ ಏನು ಒಬ್ಬಳೇ ಬಂದಿದ್ದಿ?" ಎಂದು ವಿಚಾರಿಸಲು ಸಾಮು ಬೈಲೊಟ್ಟು ಬೈಲಲ್ಲಿ ನಡೆದ ಘಟನೆಗಳನ್ನು ವಿವರಿಸಿ ಸಿರಿ ಮಾಯವಾದ ಬಗೆಯನ್ನು ತಿಳಿಸಿ ಸಾಮು ಕೊಟ್ಟರಾಡಿಯ ಏಳು ಅಂತರದ ಕತ್ತಲೆಯ ಕೋಣೆಗೆ ಹೋಗುತ್ತೇನೆಂದು ಹೊಸ್ತಿಲ ಹತ್ತಿರ ಬರುವಾಗ ಅವಳೂ ಹೊಸ್ತಿಲಲ್ಲಿ ಮಾಯವಾಗುತ್ತಾಳೆ.

ಸೊನ್ನೆ ಗಿಂಡೆಯರು

ಕರ್ಗಿಯವರ ಪಠ್ಯದಲ್ಲಿ ಗುರ್ಗಲಾಡಿ ಚಂದು ಪೆರ್ಗಡೆಯವರು ಬೆಳಗ್ಗೆ ಎದ್ದು ಬೈಲಲ್ಲಿ ಗದ್ದೆಯಲ್ಲಿ ಪ್ರವಾಹದ ನೀರು ಏರಿದೆ. ಅದನ್ನು ತಗ್ಗಿಸಬೇಕೆಂದು ಹಾರೆ ಹಿಡಿದುಕೊಂಡು ಹೋಗುತ್ತಾರೆ. ಹೀಗೆ ಹೋಗುವಾಗ ಹಾಳೆಯಲ್ಲಿ ಮಲಗಿದ ಸ್ಥಿತಿಯಲ್ಲಿ ಹೆಣ್ಣುಮಗುವೊಂದು ಕಾಣಿಸುತ್ತದೆ.

ತುಳುಪಠ್ಯ

ರಡ್ಡ್ ಕೈಟ್ ಓ ಬಾಲೆನ್ ಪೆಜ್ಯೆರೇ
ಜೋಕುಲು ಬಾಲೆಲೂ ಓ ಇಜ್ಜಾಂದಿನಾಯೆ ಯಾನ್
ಆನಿದ ಕಾಲೊಡೂ ಓ ಬಿರ್ಮು ಮಾಲವೆರೆಗ್
ಸಂತಾನೊ ತಿಕ್‌ದ್‌ಂಡ್‌ಗೇ ಓ ಅಂಚಿತ್ತಿ ಯೇಲ್ಯೋ ಓ
ದೇವೆರ್ ಬಿರ್ಮೆರ್ ಓ ಎಂಕ್ ಕೊರ್ಯೆರೋ ಓ ಪಂಡೆರಜ್ಜೆರ್

ಕನ್ನಡಾನುವಾದ

ಎರಡು ಕೈಯಲ್ಲಿ ಓ ಮಗುವನ್ನು ಎತ್ತಿಕೊಂಡರು
ಮಕ್ಕಳು ಓ ಇಲ್ಲದವ ನಾನು
ಅಂದಿನ ಕಾಲದಲ್ಲಿ ಓ ಬಿರ್ಮುಮಾಲವರಿಗೆ
ಸಂತಾನ ಸಿಕ್ಕಿದೆಯಂತೆ ಓ ಅಂಥ ವೇಳೆ ಓ
ದೇವರು ಬೆರ್ಮೆರ್ ಓ ನಮಗೆ ಕೊಟ್ಟರೆಂದು ಹೇಳಿದರಜ್ಜನವರು (ಪುಟ 342)

ಮಗುವನ್ನೆತ್ತಿಕೊಂಡು ತನ್ನರಮನೆಗೆ ತಂದು ಚಾಕರಿಯ ಹೆಣ್ಣುಗಳಲ್ಲಿ ಮಗುವಿಗೆ ಸ್ನಾನ ಮಾಡಿಸಿ ಹಾಲು ಕೊಟ್ಟು ಮಲಗಿಸಲು ತಿಳಿಸಿ ಮತ್ತೆ ಬೈಲಿನ ಕಡೆಗೆ ಹೋಗುತ್ತಾರೆ. ಅಲ್ಲಿ ಇನ್ನೊಂದು ಹೆಣ್ಣುಮಗು ದೊರೆಯುತ್ತದೆ. ಈಕೆಯೇ ಗಿಂಡೆ. ಗಿಂಡೆಯನ್ನು ಕುರಿತಾಗಿ ಬೇರೆ ಬೇರೆ ಸಂಧಿಗಳು ತಿಳಿಸುವ ವಿವರಗಳನ್ನು ಪ್ರತ್ಯೇಕವಾಗಿಯೇ ಕೊಡಲಾಗಿದೆ.

ಗೋಪಾಲ ನಾಯ್ಕರ ಪಠ್ಯದಲ್ಲಿ ಕಾನಬೆಟ್ಟಿನ ಅಜ್ಜನವರು ಬೈಲು ಹಾಗೂ ಬೆಟ್ಟಿನಲ್ಲಿರುವ ತನ್ನ ಕೃಷಿಯನ್ನು ನೋಡುತ್ತಾ ಬರುತ್ತಿರುವಾಗ ಅಜ್ಜನವರ ಕಣ್ಣಿಗೆ ಸಮೀಪದ ಹೊಳೆಯ ನೀರಿನ ಆಳ ಮತ್ತು ಸುಳಿಯಲ್ಲಿ ಹಿಂಗಾರದ ಹಾಳೆ ತೇಲುತ್ತಿರುವಂತೆ ಕಾಣಿಸುತ್ತದೆ. ಇದೇನೆಂದು ನೋಡಬೇಕೆಂದು ಅಜ್ಜನವರು ಹೊಳೆಗಿಳಿದರು. ಹೋಗಿ ನೋಡುವಾಗ ಬಲು ಅಂದವಾದ ಹೆಣ್ಣು ಮಗುವೊಂದು ಅಜ್ಜನವರ ಕಣ್ಣಿಗೆ ಕಾಣಿಸುತ್ತದೆ. ನೀರ ನಿಧಿಯಲ್ಲಿ, ನೀರ ಸುಳಿಯಲ್ಲಿ ಸಿಕ್ಕು ಮಗು ತೇಲಾಡುತ್ತಾ ಇದೆ. ಇದೊಂದು ಮಗುವನ್ನು ಹೇಗಾದರು ಮಾಡಿ ಹಿಡಿಯಬೇಕೆಂದು ಯೋಚಿಸಿದರು.

ತುಳುಪಠ್ಯ

ಮೆಯಿಟ್ಟ್ ಪೊದೆತ್ತ್‌ದಿ ಪಚ್ಚಡೆನ್ ದೆತ್ತೆರ್ ಓ
ನಾರಾಯಿನ ನಾರಾಯಿನ ಅಜ್ಜೆರ್ ಓ
ನೀರಗುಂಡಿಡ್ ಜಾಸಿಯೆರ್ ಅಜ್ಜೆರ್
ನಾರಾಯಿನ ದುರ್ಗಲ್ಲ ಪೆರ್ಗಡೆ ಅಜ್ಜೆರ್
ಪೆರ್ಗಡೆ ಬರಿ ಬಂದ್ರೊಗು ತಿಕ್ಕ್‌ಬಿ ಬಾಲೆ ಅಂದ್‌ಂದಾಂಡ
ಎನ್ನ ಸೆರಂಗ್‌ಗ್ ಬರೊಡು ಪಂಡೆರ್ ಅಜ್ಜೆರ್
ಪಚ್ಚಡೆದ ಕೋಡಿಗ್ ಬಾಲೆ ಪಿಂಗಾರದ ಬಾಲೆ
ಪಿಂಗಾರ ನಲಿತ್ತೊಂದು ಬತ್ತಿ ಸಂದ ಬತ್ತ್‌ಂಡ್

ಕನ್ನಡಾನುವಾದ

ಮೆಯಿ ಮೇಲೆ ಹೊದೆದ ಹಚ್ಚಡವನ್ನು ತೆಗೆದರು ಓ
ನಾರಾಯಣ ನಾರಾಯಣ ಅಜ್ಜನವರು ಓ
ನೀರಗುಂಡಿಯಲ್ಲಿ ಹಾಸಿದರು ಅಜ್ಜನವರು
ನಾರಾಯಣ ದುರ್ಗಲ್ಲ ಪೆರ್ಗಡೆ ಅಜ್ಜನವರು
ಪೆರ್ಗಡೆ ಬಳಿಬಂದ್ರ (ವಂಶ)ಕ್ಕೆ ದೊರೆಯುವ ಮಗುವಾದರೆ
ನನ್ನ ಸೆರಗಿಗೆ ಬರಬೇಕೆಂದರು ಅಜ್ಜನವರು
ಹಚ್ಚಡೆಯ ತುದಿಗೆ ಮಗು ಹಿಂಗಾರದ ಮಗು
ಹಿಂಗಾರ ಕುಣಿದುಕೊಂಡು ಬರುವ ರೀತಿಯಲ್ಲಿ ಬಂತು (ಪುಟ 498).

ಮಕ್ಕಳು ಮರಿಗಳಿಲ್ಲದ ಅರಮನೆಗೆ ದೇವರು ಬೆರ್ಮರು ಮಗುವೊಂದನ್ನು ಕೊಟ್ಟರು ಎಂದರು. ಮಗುವನ್ನೆತ್ತಿಕೊಂಡು ಬಲು ಹರ್ಷದಿಂದ ತನ್ನರಮನೆಯಕಡೆಗೆ ಹೋದರು. ಸಗ್ಮಾಲ್ ಹೆಣ್ಣುಗಳಲ್ಲಿ 'ನೀರ ನಿದಿಟ್ಟ್ ಗಂಗಾಜಲೊಟ್ಟು ದೇವೆರ್ ಕೊರಿ ಪುರ್ಸಾದಂದ್ ಪಂಡೆರ್' (ನೀರ ನಿಧಿಯಲ್ಲಿ ಗಂಗಾಜಲದಲ್ಲಿ ದೇವರು ಕೊಟ್ಟ ಪ್ರಸಾದವೆಂದು ಹೇಳಿದರು). ಮಗುವನ್ನು ತೊಟ್ಟಿಲಲ್ಲಿ ಹಾಕಿಸಿದರು ಅಜ್ಜನವರು. ನಾಲ್ಕು ಹಗ್ಗ ಹಿಡಿದು ನಾರಾಯಣ ಪದ ಹಾಡಿದರು. ಮಗುವಿಗೆ ಹೆಸರೇನು ಇಡುವುದೆಂದು ಆಲೋಚಿಸಿ 'ಗಂಗಾ ನಿದಿಟ್ಟ್ ತಿಕ್ಕಿನ ಬಾಲೆ, ನೀರ ಕಯಟ್ಟ್ ತಿಕ್ಕಿನ ಬಾಲೆ, ಉರುಂಟು ತಿರ್ಗ್‌ದ್ ಇತ್ತಿಂಚಿ ಸುಳಿಟ್ಟ್ ತಿಕ್ಕಿನ ಬಾಲೆ, ಸೊನ್ನೆ ಸೊನ್ನೆಂದ್ ಪುದರ್' (ಗಂಗಾನಿಧಿಯಲ್ಲಿ ಸಿಕ್ಕಿದ ಮಗು, ನೀರ ಆಳದಲ್ಲಿ ದೊರೆತ ಮಗು, ಸುತ್ತಿ ಸುತ್ತಿ ತಿರುಗುವ ಸುಳಿಯಲ್ಲಿ ಸಿಕ್ಕಿದ ಮಗು, ಸೊನ್ನೆಯೆಂಬ ಹೆಸರೆಂದರು). ಹೀಗೆ ಹೆಸರಿಟ್ಟು ಅತಿಪ್ರೀತಿಯಿಂದ ಸಾಕುತ್ತಿದ್ದಾರೆ ಮಗುವನ್ನು ಕಾನಬೆಟ್ಟು ಅರಮನೆಯಲ್ಲಿ.

ಅಮೃತರ ಪಠ್ಯದಲ್ಲಿ ಕೆಲವು ವ್ಯತ್ಯಾಸಗಳಿರುವುದು ಕಂಡುಬರುತ್ತದೆ. ಸಿರಿ

ಸನ್ನೆತೋಡಿನಲ್ಲಿ ಬಿಳಿಯ ಸಿರಿಹೊನ್ನೆಯ ಮರದಡಿಯಲ್ಲಿ ಹೆಣ್ಣುಮಗುವಿಗೆ ಜನನ ನೀಡಿದಾಗ ಸಿರಿಯ ಅಜ್ಜನವರ ಬಳಿಯವರಾದ ಸಾನೆಬೆಟ್ಟಿನ ಅಜ್ಜನವರು ಬರುತ್ತಾರೆ. ಸಿರಿಯನ್ನು ಕಂಡು ನಿನಗೆ ಈ ರೀತಿಯ ಕಷ್ಟವೂ ಬಂದೊದಗಿತೇ ಎಂದು ಹೇಳಿ ಮಗುವನ್ನು ತನ್ನ ಹಚ್ಚಡದ ತುದಿಯಲ್ಲಿ ಎತ್ತಿಕೊಂಡು ಸಿರಿಯ ಶವವನ್ನು ಸಾನೆಬೆಟ್ಟಿಗೆ ಹೊರಿಸಿಕೊಂಡು ಹೋಗುತ್ತಾರೆ. ಹೀಗಾಗಿ ಸಿರಿ ಮಗುವನ್ನು ಸನ್ನೆ ತೋಡಿನಲ್ಲಿ ಬಿಡುವ ಪಠ್ಯಗಳಿಗಿಂತ ಇದು ಭಿನ್ನವಾಗಿದೆ. ಆದರೆ ಸನ್ನೆತೋಡಿನ ಬದಿಯಲ್ಲಿ ಅಜ್ಜನವರಿಗೆ ಗಿಂಡೆ ಸಿಗುತ್ತಾಳೆ. ಇದನ್ನು ಗಿಂಡೆಯ ಸಂದರ್ಭದಲ್ಲಿ ವಿವರಿಸಲಾಗಿದೆ.

ಗಿಡಿಕೆರೆ ರಾಮಕ್ಕ ಮಗ್ಗೇರ್ತಿಯವರ ಪಠ್ಯದಲ್ಲಿ ಸಿರಿ ಸಿರಿಹೊನ್ನೆಯ ಬುಡದಲ್ಲಿ ಸನ್ನೆತೋಡಿನ ಸಮೀಪ ಹೆಣ್ಣು ಮಗುವಿಗೆ ಜನನವೀಯುತ್ತಾಳೆ. ಬಳಿಕ ಕುಮಾರನ ಜೊತೆ ಬೊಲ್ಯೊಟ್ಟುವಿನಲ್ಲಿ ನೆಲೆಯೂರುವ ಮೊದಲು ಮಗುವನ್ನೆತ್ತಿ ಸಾಮುವಿನ ಕೈಯಲ್ಲಿಟ್ಟು ಇದನ್ನು ಕೊಡ್ಸರಾಳ್ವರ ಕೈಯಲ್ಲಿ ನೀಡಿ ಸನ್ನೆ ತೋಡಿನಲ್ಲಿ ಹುಟ್ಟಿದ ಮಗುವಾದುದರಿಂದ ಸೊನ್ನೆ ಎಂಬ ಹೆಸರಿಡಬೇಕೆಂದು ತಿಳಿಸುತ್ತಾಳೆ. ಅನಂತರ ಸಾಮುವೂ ಮಾಯವಾಗುತ್ತಾಳೆ. ನನ್ನ ಒಬ್ಬರು ಹೆಂಡಿರೂ ಇಲ್ಲವಾದ ಮೇಲೆ ಮಗುವನ್ನು ನಾನು ಹೇಗೆ ಸಾಕಲಿ ಎಂದು ಯೋಚಿಸಿದ ಕೊಡ್ಸರಾಳ್ವರು ಕಾನಬೆಟ್ಟಿನ ಅಜ್ಜನವರಾದ ದುರ್ಗಲ್ಲಾಯ ಪೆರ್ಗಡೆಯವರಿಗೆ ನೀಡುತ್ತಾರೆ.

ಶ್ಯಾಮರಾಯ ಶೆಟ್ಟಿಯವರ ಪಠ್ಯದಲ್ಲಿ ಸಿರಿಯ ಅಂತ್ಯವಾದ ಅನಂತರ ಸಾಮು ಮಗುವನ್ನೆತ್ತಿಕೊಂಡು ಬಂದು ಅಂಗಡಿಜಾಲ ಬರ್ಕೆಯ ಬಾಮುಕೆಲ್ಲರು, ನಾರ್ನ ಕೆಲ್ಲರಿಗೆ ಮಗುವನ್ನು ತೋರಿಸುತ್ತಾಳೆ. ಕೊಟ್ಟರಾಡಿಯ ಕೊಡ್ಸರಾಳ್ವರಲ್ಲಿ ಮಗುವನ್ನು ತೋರಿಸುತ್ತಾಳೆ, ಕಾನೊಟ್ಟು ಮಾನೊಟ್ಟಿನವರಲ್ಲಿ ಮಗುವನ್ನು ತೋರಿಸುತ್ತಾಳೆ. ಉರ್ಕಿದೊಟ್ಟಿನ ಅರಮನೆಯಲ್ಲಿ ದುರ್ಗಲ್ಲ ಪೆರ್ಗಡೆ ಓ ನಮ್ಮ ಅಜ್ಜನವರು ಅವರಲ್ಲಿ ಸಾಕಲು ಸೊನ್ನೆಯನ್ನು ಕೊಡುತ್ತಾಳೆ ಸಾಮು. ಸಿರಿ ಸಾಯುವ ಮೊದಲೇ ಸಾಮುವಿನ ಕೈಯಲ್ಲಿ ಮಗುವನ್ನು ಕೊಟ್ಟು ಕಾನಬೊಟ್ಟಿನ ಅಜ್ಜನವರ ಕೈಯಲ್ಲಿ ಮಗುವನ್ನು ಸಾಕಲು ಕೊಟ್ಟು ಮಗುವಿಗೆ ಹೆಸರು ಅವರಾಗಿ ಇಡಬಾರದು, ನೀವೂ ಇಡಬೇಡಿ. ಸಣ್ಣ ತೋಡಿನ ಬದಿಯಲ್ಲಿ ಹುಟ್ಟಿದ ಮಗು ಸೊನ್ನೆ ಮದುಮಗಳೆಂದು ಇಡಿ ಎಂದು ಸಿರಿಯೇ ಹೇಳುವ ವಿವರಗಳಿವೆ.

ರಾಮಕ್ಕ ಅವರ ಪಠ್ಯದಲ್ಲಿ ಕಾನಬೆಟ್ಟಿನ ಅಜ್ಜನವರಿಗೆ ಗದ್ದೆಯ ಬದಿಯಲ್ಲಿ ಮಗುವೊಂದು ದೊರೆಯುತ್ತದೆ. ಅದನ್ನು ತನ್ನರಮನೆಗೆ ತಂದು ಸೊನ್ನೆ ಎಂಬ ಹೆಸರಿಟ್ಟು ತುಂಬ ಪ್ರೀತಿಯಿಂದ ಸಾಕುವ ವಿವರಗಳಿವೆ. ಗಿಂಡೆಯ ವಿಚಾರ ಸುದೀರ್ಘ ವಾಗಿದೆ. ಅದನ್ನು ಪ್ರತ್ಯೇಕವಾಗಿಯೇ ಕೊಡಲಾಗಿದೆ. ಲೀಲಾ ಅವರ ಪಠ್ಯದಲ್ಲಿ ಸಿರಿ ಹೆಣ್ಣು ಮಗುವನ್ನು ಹೆತ್ತು ನೀರ ಪ್ರವಾಹದಲ್ಲಿ ತೇಲಿಬಿಟ್ಟು ಕಾನಬೊಟ್ಟು ಅಜ್ಜನವರಿಗೆ ಸಿಗಬೇಕೆಂದು ಹೇಳಿ ತಾನು ಮಾಯವಾಗುತ್ತಾರೆ. ಈ ಮಗು ಪ್ರವಾಹದಲ್ಲಿ ತೇಲುತ್ತಾ ಹೋಗಿ ಕಾನಬೊಟ್ಟಿನ ಅಜ್ಜನವರ ಗದ್ದೆಗೆ ನೀರು ಬರುವ ದಾರಿಯಲ್ಲಿ ಹೋಗಿ

ನಿಂತಿದೆ. ಅಜ್ಜನವರು ಗದ್ದೆಯಲ್ಲಿ ಏರಿದ ನೀರನ್ನು ತಗ್ಗಿಸುತ್ತಾ ಬರುವ ಹೊತ್ತಲ್ಲಿ ಅವರ ಕಣ್ಣಿಗೆ ಮಗು ಕಾಣಿಸುತ್ತದೆ. ಸಂತಾನವಿಲ್ಲದ ನನಗೆ ದೇವರು ಸಂತಾನವನ್ನು ಕೊಟ್ಟರು ಎಂಬ ಸಂತೋಷದಲ್ಲಿ ಮಗುವನ್ನೆತ್ತಿಕೊಂಡು ಮನೆಗೆ ತಂದು ಸನ್ನೆ ತೋಡಿನಲ್ಲಿ ಸಿಕ್ಕಿದ ಮಗು ಸೊನ್ನೆ ಎಂಬ ಹೆಸರಿಟ್ಟು ದಾರುವಿನಲ್ಲಿ ಮಗುವನ್ನು ಬಹಳ ಜಾಗ್ರತೆಯಿಂದ ಸಾಕುವಂತೆ ಹೇಳುತ್ತಾರೆ. ದಾರು ಮೊದಲೇ ಮಾಯವಾಗಿರುವುದರಿಂದ ಇಲ್ಲಿ ಆಕೆ ಹೇಗೆ ಬಂದಳು ಎಂಬುದು ತಿಳಿಯದು. ಬಹುಷಃ ಕೆಲಸದ ಹೆಣ್ಣು ಎಂಬರ್ಥದಲ್ಲಿ ಈ ಹೆಸರು ಬಂದಿರಲೂಬಹುದು.

ಗಿಂಡೆಯ ಪ್ರಸ್ತಾವ

ಕರ್ಗಿಯವರ ಪಠ್ಯ : ಪೇಜನಾರರ ತಂಗಿ ಜೇವು ಕೇದಗ ಗರ್ಭಿಣಿ. ಈಕೆಗೆ ತಂದೇವು ಎಲೆಯ ಕಡುಬು ತಿನ್ನ ಬೇಕೆಂಬ ಆಸೆ ಆಗುತ್ತದೆ. ಒಂದು ದಿನ ಪೇಜನಾರರು ಕುಂಬಳೆ ದೇವಸ್ಥಾನದಲ್ಲಿ ಮೂರು ಪಿಂಡ ಬಿಡಲು ಇದೆ. ನಾನು ಹೋಗಿ ಬರುತ್ತೇನೆ ಎಂದರು. ಜೇವು ಕೇದಗ ನನಗೆ ಎಂಟು ತಿಂಗಳು ಕಳೆದು ಒಂಭತ್ತನೆಯ ಹೆರುವ ತಿಂಗಳು. ನನ್ನನ್ನು ಬಿಟ್ಟು ಹೋಗಬೇಡಿ ಎನ್ನುತ್ತಾಳೆ. ಆದರೆ ಪೇಜನಾರರು ಈಗ ಬರುವೆ ಎಂದು ಹೇಳಿ ಹೊರಟು ಹೋಗುತ್ತಾರೆ. ಇತ್ತ ಜೇವು ಕೇದಗ ತನ್ನ ಮೂಲದ ಮುದ್ದ ಕಲಳನನ್ನು ಕರೆದು ತಂದೇವಿನ ಎಲೆ ತರಬೇಕು. ಅದರ ಗಟ್ಟಿ ತಿಂದು ನನ್ನ ಬಾಯಿಯ ಆಸೆ ಕಳೆಯಬೇಕೆಂದು ಹೇಳಿ ಅವನನ್ನು ಕಳುಹಿಸುತ್ತಾಳೆ. ಆತ ಹೋಗಿ ಮರವನ್ನು ನೋಡುವಾಗ ಅದರಲ್ಲಿ ಹುಲಿಯೊಂದು ಕುಳಿತಿರುವ ಕಾರಣ ಎಲೆ ಕೊಯ್ಯದೆ ಹಿಂತಿರುಗಿ ಬರುತ್ತಾನೆ. ಆಗ ಜೇವು ಕೇದಗ ತಾನು ಹೆಣ್ಣು ಹೆತ್ತರೆ ಹುಲಿಗೆ ಕೊಡುವುದಾಗಿಯೂ, ಗಂಡು ಹೆತ್ತರೆ ತಾನೇ ಇಟ್ಟು ಕೊಳ್ಳುವೆನೆಂಬುದನ್ನು ಹುಲಿಗೆ ತಿಳಿಸಿ ಎಲೆ ಕೊಯ್ದು ತರಲು ಹೇಳುತ್ತಾಳೆ. ಹಾಗೇ ಹುಲಿಗೆ ತಿಳಿಸಿ ಎಲೆ ಕೊಯ್ದು ತರುತ್ತಾನೆ ಮೂಲದ ಮುದ್ದ ಕಲಳ. ಈಕೆಗೆ ತಂದೇವು ಎಲೆಯ ಕಡುಬು ತಿಂದು ಬಾಯಿಯ ಆಸೆ ಕಳೆಯುತ್ತದೆ. ಹೆಣ್ಣು ಮಗುವೊಂದನ್ನು ಹೆರುತ್ತಾಳೆ. ಹುಲಿಗೆ ಮಗುವನ್ನು ಕೊಡುತ್ತೇವೆಂದು ಹೇಳಿದ್ದೇವೆ ಎಂದಾಗ ಜೇವುಕೇದಗ 'ಪಂಡಿ ಪಾತೆರ ಇತ್ತ್‌ಂಡನೇ ಇಲ್ಲ್ ಬದ್ಕ್ ಒರಿಯಂದ್, ಜೇವುನು ಏನ್ ಕೊರ್ಪುಜಪ್ಪಾಂದ್ ಪನ್ಪೊಲು' (ಕೊಟ್ಟ ಮಾತಿನಂತೆ ನಡೆದರೆ ಮನೆಮಠ ಉಳಿಯದು.ಹೆಣ್ಣುಮಗುವನ್ನು ನಾನು ಕೊಡಲಾರೆ ಎನ್ನುತ್ತಾಳೆ). 30 ದಿನ ಕಾದ ಹುಲಿ 31ನೆಯ ದಿನ ಜೇವು ಕೇದಗ ಮಗುವಿನ ಅನ್‌ಸೀರೆ (ಪಟ್ಟೆಸೀರೆ)ಒಗೆದುಕೊಂಡು ಬರುತ್ತೇನೆಂದು ಹೋದ ಸಂದರ್ಭ ನೋಡಿ ಮಗುವನ್ನೆತ್ತಿಕೊಂಡು ಹೋಗಿ ತಂದೇವು ಮರದ ಮೇಲೆ ಇಡುತ್ತದೆ.

ಗುರ್ಗಲಾಡಿ ಚಂದು ಪೆರ್ಗಡೆಯವರು ಬೈಲಲ್ಲೆ ನಡೆದುಕೊಂಡು ಬರಲು ತಂದೇವು ಮರದಲ್ಲಿ ಮಗುವಿನ ಅಳು ಕೇಳಿಸುತ್ತದೆ. ಅರಮನೆಯಲ್ಲಿ ಮಗುವನ್ನು ಮಲಗಿಸಿ ಬಂದಿದ್ದೇನೆ. ಇದೆಲ್ಲಪ್ಪಾ ಮಗು ಅಳುವ ಸದ್ದು ಎಂದು ದೇವರು ಬೆರ್ಮೆರನ್ನು

ನೆನೆದು ತೋಡಿನ ಬದಿ ಪೊದರಿನ ಕಡೆ ಹೋಗಿ ನೋಡಿದಾಗ ತಂದೇವು ಮರದ ದೊಡ್ಡ ಪೊಟರೆಯಲ್ಲಿ ಮಗು ಕಾಣಿಸುತ್ತದೆ. ಸಂತೋಷಗೊಂಡು ಮಗುವನ್ನೆತ್ತಿಕೊಂಡು ತನ್ನರಮನೆಗೆ ಬಂದು ಎರಡು ಮಕ್ಕಳನ್ನೂ ಒಂದೇ ತೊಟ್ಟಿಲಲ್ಲಿ ಮಲಗಿಸಬೇಕೆಂದು ಒಳ್ಳೆಯ ಮುಹೂರ್ತ ನೋಡಿ ಮುಲ್ಕಿ ಸೇರಿ ಒಂಭತ್ತು ಮಾಗಣೆ, ಹನ್ನೆರಡು ಗ್ರಾಮದ ಜನರನ್ನು ಸೇರಿಸಿ ತೊಟ್ಟಿಲಿನಲ್ಲಿ ಹಾಕಿಸಿ ಗದ್ದೆಯ ಬದಿಯಲ್ಲಿ ಮೊದಲು ಸಿಕ್ಕಿದ ಮಗುವಿಗೆ ಸೊನ್ನೆ ಎಂದೂ ಕಾಡ ಬದಿಯಲ್ಲಿ ತೋಡಿನ ಬುಡದಲ್ಲಿ ತಂದೇವು ಮರದ ದೊಡ್ಡ ಪೊಟರೆಯಲ್ಲಿ ಬಳಿಕ ಸಿಕ್ಕಿದ ಮಗುವಿಗೆ ಗಿಂಡೆ ಎಂದೂ ನಾಮಕರಣ ಮಾಡಿಸಿದರು. ಮಕ್ಕಳು ಮರಳಿನ ವಿದ್ಯೆ ಕಲಿತು 10–12 ವರ್ಷದ ಮಕ್ಕಳಾಗಿ ಬೆಳೆಯುವ ವಿವರಗಳಿವೆ.

ಅಮೃತ ಸೋಮೇಶ್ವರರ ಪಠ್ಯ : ಅದೊಂದು ದಿನ ಸಾನೆಬೆಟ್ಟಿನ ಅಜ್ಜನವರು ಸನ್ನೆತೋಡಿನ ಬದಿಯಲ್ಲೆ ಹೋಗುವಾಗ ಪ್ರವಾಹದಲ್ಲಿ ಬಂದು ಒಂದು ಬೆಳ್ಳಿಯ ಸಿರಿಗಿಂಡ್ಯೆ ಅವರ ಬಲದ ಕೈಗೆ ಬಂದು ಬೀಳುತ್ತದೆ. ಬಹಳ ಪ್ರೀತಿ ಮತ್ತು ಸಂತೋಷದಿಂದ ಅದರ ಅಂದ ನೋಡಿದರು. ಬಲದ ಬದಿಯಲ್ಲಿ ಅದನ್ನೆತ್ತಿಕೊಂಡು ಬಂದು ಸಾನೆಬೆಟ್ಟಿನ ನಾಲ್ಕು ಸೂತ್ರದ ಕೋಣೆಯಲ್ಲಿ ಮಗುವನ್ನು ಮಲಗಿಸಿದ್ದ ಎಡ ಭಾಗದಲ್ಲಿ ತಂದು ಇಟ್ಟರು. ಅದರಿಂದ ಹೆಣ್ಣುಮಗುವೊಂದು ಹುಟ್ಟಿ ಅಳುವ ಸ್ವರ ಕೇಳಿಸಿತು. ಇದರಿಂದ ಅಜ್ಜನವರಿಗೆ ಬಲು ಸಂತೋಷವಾಯಿತು.

ತುಳುಪಠ್ಯ

ಯಾನ್ ಕುಟುಮ ಸಂಸಾರ ಇಜ್ಜಿಂದ್ ತಂಗಡಿ ಮರ್ಮಾಲ್ ಇಜ್ಜಿಂದ್ ಪಂಡ್‌ದ್
ಕಣ್ಣ್‌ಡ್ ಕಡ್‌ದುಃಖ ಬುಡೊಂದು ಇತ್ತೆ, ದೇವೆರ್ ಬೆರ್ಮೆರ್ ಉಲ್ಲಾಯ ಉಲ್ಲಾಕುಲು
ಎಂಕ್ ಸಕಾಯ ಪಡೆಯೆರ್ ಸತ್ಯೊಡು ಪುಟ್ಟಿನ ಬಾಲೆಲೆಗ್ ಮೋವ ಮೋಕೆದ
ಪುದಾರ್ ಪುರಾಪು ಪಾಡೊಡುಂದು ಪಂಡೆರ್
ಬಾಲೆಕ್ಕೆ ಸಿರಿನ ಬಂಜಿಡ್ದ್ ಸನ್ನೆ ತೋಡುಡು ಪುಟ್ಟಿನ ಮಗಳೆಗ್
ಮಾಯಂದ ಸೊನ್ನೆಂದ್ ಪುದರ್ ಪುರಾಪು ಲೆತ್ತೆರ್
ಗಂಗಮ್ಮ ದೇವಿನ ಮೈಮೆಡ್ ಬೊಳ್ಳಿನ ಸಿರಿಗಿಂಡ್ಯೆಡ್
ಪುಟ್ಟಿನ ಮಗಳೆಗ್ ಮಾಯಂದ ಗಿಂಡ್ಯೆಂದ್ ಪುದರ್ ಪುರಾಪು ದೀಯೆರ್
ಅವು ರಡ್ಡ್ ಬಾಲೆಲು ಸಾನೆಬೊಟ್ಟು ಎಲ್ಯಜ್ಜೆರೆನ ಅರಮನೆಡ್ ಬಲತ್ತೊನು ನಿರೆವೊನು ಉಲ್ಲೊ

ಕನ್ನಡಾನುವಾದ

ನಾನು ಕಟುಂಬ ಸಂಸಾರ ಇಲ್ಲ ಎಂದು ತಂಗಿ ಸೊಸೆ ಇಲ್ಲ ಎಂದು
ಕಣ್ಣಲ್ಲಿ ಕಡುದುಃಖ ದುಃಖಿಸುತ್ತಿದ್ದೆ, ದೇವರು ಬೆರ್ಮರು, ಉಲ್ಲಾಯ ಉಲ್ಲಾಕುಲು

ನನಗೆ ಸಹಾಯ ಮಾಡಿದರು, ಸತ್ಯದಲ್ಲಿ ಹುಟ್ಟಿದ ಮಕ್ಕಳಿಗೆ ಹೆಸರು ಇಡಬೇಕೆಂದರು
ಬಾಲಕ್ಕೆ ಸಿರಿಯ ಗರ್ಭದಿಂದ ಸನ್ನೆ ತೋಡಿನಲ್ಲಿ ಹುಟ್ಟಿದ ಮಗಳಿಗೆ
ಮಾಯದ ಸೊನ್ನೆ ಎಂಬ ಹೆಸರನ್ನಿಟ್ಟು ಕರೆದರು
ಗಂಗಾದೇವಿಯ ಮಹಿಮೆಯಿಂದ ಬೆಳ್ಳಿಯ ಸಿರಿಗಿಂಡ್ಯೆಯಲ್ಲಿ
ಹುಟ್ಟಿದ ಮಗಳಿಗೆ ಮಾಯದ ಗಿಂಡ್ಯೆ ಎಂಬ ಹೆಸರಿನಿಂದ ಕರೆದರು
ಅವೆರಡು ಮಕ್ಕಳು ಸಾನೆಬೆಟ್ಟು ಸಣ್ಣಜ್ಜನವರ ಅರಮನೆಯಲ್ಲಿ ಬೆಳೆಯುತ್ತಾ ಬದುಕುತ್ತಾ ಇದ್ದಾರೆ (ಪುಟ 209).

ರಾಮಕ್ಕ : ರಾಮಕ್ಕ ಅವರ ಪಠ್ಯದಲ್ಲಿ ಗಿಂಡೆಯ ವಿಚಾರ ಉಳಿದ ಎಲ್ಲ ಪಠ್ಯಗಳಿಗಿಂತ ಭಿನ್ನವಾಗಿದೆ. ಒಂದು ದಿನ ದೇವು ದೇಸಿಂಗ, ಬಬ್ಬು ನರಸಿಂಗ, ಸಣ್ಣ ಮಂಗಲೆ – ಹೀಗೆ ಮೂರು ಜನ ಮಾದೆರಿ ಮಲೆ ಕಾಡಿಗೆ ಬೇಲಿಗೆ ತೂನ (ಗೂಟ) ತರುವುದಕ್ಕಾಗಿ ಹೋಗುತ್ತಾರೆ. ಅಡಿಕಂಚಿ, ಮೇಲ್ ಕಂಚಿ, ಕಂಚಿ ಕಡಗಂದ ಅರಮನೆಯಲ್ಲಿ ಇದ್ದಾರೆ ಅಬ್ಬಯಮಾದುರು. ಆಕೆಗೆ ಹೆರುವ ತಿಂಗಳು ತುಂಬಿದೆ. ತನ್ನ ಗಂಡನನ್ನು ಕರೆದು ಹೇಳುತ್ತಾಳೆ, ಅಯ್ಯೋ ಮದುಮಗ, ನೀವು ಕೇಳಬೇಕು. ನೀವಿಂದು ಮಾದೆರಿ ಕಾಡಿಗೆ ಹೋಗಬೇಕು. ಅಲ್ಲಿ ಎಡ ಇದೆ ಎಡಚಂದನ, ಬಲ ಇದೆ ಬಲಚಂದನ. ನಡುವೆ ಇದೆ ನಾಪಾರ ಚಂದನದ ಮರ. ಅದರ ಎಲೆ ತರಬೇಕು. ಅಕ್ಕಿ ಅರೆದು ಆ ಎಲೆಯ ತಿಂಡಿ ನನಗೆ ತಿನ್ನಬೇಕು ಎನ್ನುತ್ತಾಳೆ. ಹಾಗೆ ಗಂಡ ಕಾಡಿಗೆ ಈ ಮರವನ್ನು ಹುಡುಕಿಕೊಂಡು ಹೋಗುತ್ತಾನೆ. ಹೋಗಿ ಮರವನ್ನು ನೋಡುವಾಗ ಆ ಮರದ ದೊಡ್ಡ ಪೊಟರೆ (ಮಾಟೆ)ಯಲ್ಲಿ ದೊಡ್ಡ ಗಾತ್ರದ ಬೇಂಗಲೆ ಹುಲಿಯೊಂದು ಇರುವುದು ಕಾಣಿಸುತ್ತದೆ. ಈ ಮರದ ಎಲೆ ತೆಗೆಯಲು ಹೋದಾಗ ಹುಲಿ ನಿನ್ನ ಹೆಂಡತಿ ಹೆಣ್ಣು ಹೆತ್ತರೆ ನನಗೆ ಕೊಡುವುದಾದರೆ ಮಾತ್ರ ನಿನ್ನನ್ನು ಎಲೆ ತೆಗೆಯಲು ಬಿಡುವೆನು ಎನ್ನುತ್ತದೆ. ಹಾಗಾದರೆ ನನ್ನ ಮದುಮಗಳಲ್ಲಿ ಕೇಳಿ ಬರುವೆನೆಂದು ಹಿಂತಿರುಗಿ ಬಂದು ಹೆಂಡತಿಗೆ ವಿಷಯ ತಿಳಿಸುತ್ತಾನೆ. ಏನಾದರೂ ಮಾಡಿ ನನಗೆ ಆ ಮರದ ಎಲೆಯಲ್ಲಿ ಮಾಡಿದ ತಿಂಡಿ ತಿನ್ನಲೇಬೇಕೆಂದು ಹಠ ಹಿಡಿಯುತ್ತಾಳೆ. ಹಾಗಾಗಿ ಗಂಡ ಮತ್ತೆ ಕಾಡಿಗೆ ಹೊಗಿ ಹುಲಿಯ ಮಾತಿಗೆ ಒಪ್ಪಿಗೆ ನೀಡಿ ಎಲೆ ಕೊಯ್ದು ತರುತ್ತಾನೆ. ಈ ಎಲೆಯಲ್ಲಿ ಮಾಡಿದ ತಿಂಡಿ ತಿಂದು ಬಾಯಿಯ ಆಸೆ ಕಳೆಯುತ್ತಿದ್ದಂತೆ ಹೆರಿಗೆ ನೋವು ಕಾಣಿಸಿಕೊಂಡು ಹೆಣ್ಣು ಮಗುವನ್ನು ಹೆರುತ್ತಾಳೆ. ಹೇಳಿದ ಮಾತಿನಂತೆ ಕಂಚಿ ಕಡಗಂದ ಅರಮನೆಗೆ ಬಂದ ಹುಲಿಗೆ ಮಗುವನ್ನು ಎತ್ತಿ ಇವರೇ ಕೊಡುತ್ತಾರೆ. ಹುಲಿಯು ಮಗುವನ್ನೆತ್ತಿಕೊಂಡು ಹೋಗಿ ನಾಪಾರ ಚಂದನದ ದೊಡ್ಡ ಪೊಟರೆಯಲ್ಲಿ ಇಡುತ್ತದೆ. ಒಂದು ದಿನ ಹುಲಿ ಮಗುವಿಗೆ ನೀನು ಈ ಪೊಟರೆಯ ಒಳಗೆ ಮಲಗಿಕೊಂಡಿರು. ನಾನು ಹೋಗಿ ನಿನ್ನ ಹೊಟ್ಟೆ ಹಸಿವಿಗೆ ಏನಾದರೂ ತರುತ್ತೇನೆ ಎಂದು ಹೇಳಿ ಹೊರಟುಹೋಗುತ್ತದೆ. ಕಾನಬೆಟ್ಟಿನ ಅಜ್ಜನವರು, ದೇವು ದೇಸಿಂಗ ಬಬ್ಬು ನರಸಿಂಗ ಸಣ್ಣ ಮಂಗಲೆ ಇವರಲ್ಲಿ

ಬೇಲಿಯ ಗೂಟ ತರಲು ಹೇಳಿದವರು ಹೋಗಿ ಮಾದೆರಿ ಮಲೆ ಕಾಡಲ್ಲಿ ಕಡಿಯುತ್ತಿದ್ದಾರೆ. ಇವರಲ್ಲಿ ದೇವು ದೇಸಿಂಗ ಚಂದನದ ಮರದಡಿ ಹೋಗುತ್ತಾನೆ. ಅದು ಮೀನ ಮೇಷದ (ಸುಗ್ಗಿ ಪಗ್ಗು)ವಿನ ಕಡು ಬೇಸಿಗೆ ಕಾಲ. ಮರದಡಿ ಹೋಗುವಾಗ ಇವನ ತಲೆಗೆ ಮಳೆಯ ನೀರಿನಂತೆ ಬೀಳುತ್ತದೆ. ಈ ಬೇಸಿಗೆಯಲ್ಲಿ ನೀರು ಎಲ್ಲಿಂದ ಬೀಳುವುದೆಂದು ಕತ್ತೆತ್ತಿ ನೋಡಲು ಹೆಣ್ಣು ಮಗುವೊಂದು ಮರದ ದೊಡ್ಡ ಪೊಟರೆಯಲ್ಲಿ ಕಾಣಿಸುತ್ತದೆ. ದೇವು ದೇಸಿಂಗ ಉಳಿದ ಇಬ್ಬರನ್ನು ಕರೆದು ಮರದ ಮೇಲಿರುವ ಮಗುವನ್ನು ತೋರಿಸಿ ಈ ಮಗುವನ್ನೆತ್ತಿಕೊಂಡು ಹೋಗಿ ನಮ್ಮ ಅಜ್ಜನವರಿಗೆ ಕೊಡುವ. ಅವರಿಗೆ ಈಗಾಗಲೇ ಒಂದು ಹೆಣ್ಣುಮಗು ದೊರೆತಿದೆಯಲ್ಲ ಎಂದು ಹೇಳಿ ಇಬ್ಬರು ಕಡಿದ ಗೂಟ ಹೊತ್ತುಕೊಂಡು ಒಬ್ಬ ಮಗುವನ್ನೆತ್ತಿಕೊಂಡು ಕಾನಬೊಟ್ಟು ಅರಮನೆಗೆ ಬರುತ್ತಾರೆ. ಕಾನಬೊಟ್ಟು ಅಜ್ಜನವರಾದ ದುರ್ಗಲಾಡಿ ಪೆರ್ಗಡೆಯವರು ಮಗುವನ್ನು ಕಂಡು ಮನಸ್ಸಲ್ಲಿ ತುಂಬ ಸಂತೋಷಪಡುತ್ತಾರೆ. ಸಂತಾನದ ಸಿರಿಫಲ ಇಲ್ಲದವ, ಕೂಡು ಕುಟುಂಬ ಇಲ್ಲದವನಿಗೆ ಸಂತಾನದ ಸಿರಿಫಲ ತೋರಿ ಬಂತಲ್ಲ ಎಂದು ಸಂತೋಷದಿಂದ ಮೈ ಮರೆಯುತ್ತಾರೆ ಅಜ್ಜನವರು. ಕಾಸಿಗೆ ಹೋದ ಕಪಿಲೆ ದನದ ಹಾಲನ್ನು ಕರೆದು ಬೆರಳಿಗೆ ಬಟ್ಟೆ ಸುತ್ತಿ ಸಂಚನಂಗಡಿ ಜಲ್ಮಭೂಮಿಯರಮನೆಯಲ್ಲಿ ಉದಯವಾದ ಸಿರಿಯ ಮೊಲೆಹಾಲೆಂದೆಣಿಸಿ ಕುಡಿಯಿರಿ ಎಂದು ಕುಡಿಸಿ ಬೆಳೆಸುತ್ತಾರೆ. ಎರಡು ಮಕ್ಕಳನ್ನು ಬೆಳ್ಳಿಯ ಒಂದೇ ತೊಟ್ಟಿಲನ್ನು ಎರಡಾಗಿ ವಿಭಾಜಿಸಿದ ಕೋಣೆಗಳಲ್ಲಿ (ಅದೆ) ಮಲಗಿಸುತ್ತಾರೆ. ತೊಟ್ಟಿಲ ಬಲ ಬದಿಯಲ್ಲಿ ಮೊದಲು ಸಿಕ್ಕಿದ ಮಗುವನ್ನು ಮಲಗಿಸಿ ಸೊನ್ನೆ ಎಂಬ ಹೆಸರಿಟ್ಟರು. ಎಡದ ಬದಿಯಲ್ಲಿ ಅನಂತರ ಸಿಕ್ಕಿದ ಮಗುವನ್ನು ಮಲಗಿಸಿ ಗಿಂಡೆಗಿಳಿರಾಮು ಎಂದು ಹೆಸರಿಟ್ಟರು.

ಹೀಗೆ ಎರಡು ಮಕ್ಕಳೂ ಅರಮನೆಯಲ್ಲಿ ಬೆಳೆಯುತ್ತಿರಲು ಊರವರು ಅಜ್ಜನವರ ಅರಮನೆಯಲ್ಲಿ ಎರಡು ಮಕ್ಕಳಿವೆಯಂತೆ. ಯಾವ ಕಾಡ ಸೂಳೆಯ ಮಕ್ಕಳೋ ಏನೋ ಎಂದು ಅಪವಾದದ ಮಾತುಗಳನ್ನು ಆಡುತ್ತಾರೆ. ಮಾತ್ರವಲ್ಲದೆ ಅಜ್ಜನವರನ್ನು ನಮ್ಮ ಜಾತಿ ಸಂಗಡದಲ್ಲಿ ಇಟ್ಟುಕೊಳ್ಳದೆ ಅವರನ್ನು ಜಾತಿಯಿಂದ ಹೊರ ಹಾಕಬೇಕೆಂದು ಮಾತನಾಡಿಕೊಳ್ಳುತ್ತಾರೆ.

ತುಳುಪಠ್ಯ

ಆರ್ ಜಾತಿ ಸಂಗತೊಗು ಬೊಡ್ಚಿ ಆರೆನ್ ಕಲೆದ್ ದೀವೊಡು
ಕಕ್ಕೆ ಕರು ತಿಂದ್‌ದ್ ಪೋವೊಡು
ಆರೆಗ್ ಸಾವು ಸಲರ ಇಪ್ಪರೆ ಬಲ್ಲಿ

ಕನ್ನಡಾನುವಾದ

ಅವರು ಜಾತಿ ಕೂಡುಕಟ್ಟಿಗೆ ಇರಬಾರದು ಅವರನ್ನು ಜಾತಿಯಿಂದ ಹೊರ ಹಾಕಬೇಕು

ಅವರನ್ನು ಕಾಗೆ ಗೂಬೆ ತಿಂದು ಹೋಗಬೇಕು
ಅವರಿಗೆ ಸಾವಿನ ಆಚರಣೆ ಮಾಡಬಾರದು (ಪುಟ 286).

ಮುಂದುವರಿದು ಅವರೇ ನಾಲ್ಕು ಜನಕ್ಕೆ ಬುದ್ಧಿ ಹೇಳುವವರು. ಅವರಿಗೆ ಈ ರೀತಿಯ ಕೆಟ್ಟ ಬುದ್ಧಿ ಬಂತಲ್ಲಾ ಎಂದು ಮಾತನಾಡಿಕೊಳ್ಳುತ್ತಾರೆ. ಅಜ್ಜನವರು ಈ ಮಾತಿನಿಂದ ತುಂಬ ಚಿಂತಿತರಾಗುತ್ತಾರೆ. ಇದನ್ನು ತಿಳಿದ ಮಕ್ಕಳು ನೀವು ಯಾಕಾಗಿ ಚಿಂತಿತರಾಗಿದ್ದೀರಿ ಅಜ್ಜನವರೇ? ನೀವು ಅನ್ನ ಕೊಡುವಾಗ 'ಅನ್ನ' ಎಂದು ಹೇಳಲು ತಿಳಿಯದ ಮಕ್ಕಳು ನಾವು. ಹೊಸ್ತಿಲು ದಾಟಲಾಗದವರು. ನಿಮ್ಮ ಚಿಂತೆಯೇನೆಂದು ಹೇಳಿ ಎನ್ನುತ್ತಾರೆ. ಅಜ್ಜನವರು ಮಕ್ಕಳಿಗೆ ವಿಷಯ ತಿಳಿಸಲು ನೀವು ಚಿಂತಿತರಾಗಬೇಡಿ ಅಜ್ಜನವರೇ, ನಾವು ಸತ್ಯದ ಮಕ್ಕಳಾದರೆ ಸತ್ಯ ತೋರಿಸಿ ಕೊಡುತ್ತೇವೆ ಎನ್ನುತ್ತಾರೆ. ಅಜ್ಜನವರಲ್ಲಿ ನೀವು ಕೂಟದ ಕಳ ಕರೆಯಿರಿ. ಯಾರನ್ನೆಲ್ಲ ಕರೆಯಬೇಕೆಂದರೆ

ತುಳುಪಠ್ಯ
ತಿರ್ತ ಪಾಲ್‌ದ ಪಾಲವೆರ್ ಮಿತ್ತ ಪಾಲ್‌ದ ಪಾಲವೆರ್
ಪತ್ತ್‌ಕೂಡಿ ಪಾಲವೆರ್ ಪದಿನೆಣ್ಮೊ ಬರಿಸಾಲೆರ್
ಸೆಟ್ಟಿ ಸೇನವೆರ್ ಕೋಟೆ ಪೇಟೆದ ಆಣ್‌ಂಜೋವು
ತಿರ್ತ ಕರೆ ಪೊಣ್ಜೋವುಲು ಮಿತ್ತ ಕರೆ ಪೊಣ್ಜೊವುಲು
ಸರ್ಕಾರಿ ಮಾಟೊದ ಆಣ್ಜೊವೆನ್ ಕೂಟು ಪಾಡ್‌ಲೆಂಬೋ
ಅಪಗ ಕೇನೊಡು ಅಜ್ಜೆರೇ ಈರೆಗ್ ಪಂಡ್ ಕೊರ್ಪಜ್ಜೆರೋ ಪಂಡ್ ನಿರೆಪ್ಪೊ
ಪಂಡೆರ್ ಸೊನ್ನೆ ಗಿಂಡೆ ರಡ್ಡ್ ಬಾಲೆಲುದೇ

ಕನ್ನಡಾನುವಾದ
ಕೆಳಪಾಲಿನ ಪಾಲವರು ಮೇಲಿನ ಪಾಲಿನ ಪಾಲವರು(ಹಿರಿಯರು)
ಹತ್ತು ಕಡೆಯ ಪಾಲವರು ಹದಿನೆಂಟು ಬರಿಸಾಲರು
ಸೆಟ್ಟಿ ಸೇನವರು ಕೋಟೆಪೇಟೆಯ ಗಂಡಸರು
ಕೆಳ ಕರೆಯ ಹೆಂಗಸರು ಮೇಲಿನ ಕರೆಯ ಹೆಂಗಸರು
ಸರಕಾರಿ ವರ್ಗದ ಗಂಡಸರನ್ನು ಸೇರಿಸಿ
ಅಲ್ಲಿ ಕೇಳಬೇಕು ಅಜ್ಜನವರೇ ಆಗ ನಾವು ನಿಮಗೆ ತಿಳಿಸಿಕೊಡುತ್ತೇವೆ
ಎಂದರು ಸೊನ್ನೆ ಗಿಂಡೆ ಎರಡು ಮಕ್ಕಳು (ಪುಟ 288).

ಅಂತೆಯೇ ಕೂಟದ ಕಳ ಕರೆದರು ಅಜ್ಜನವರು. ನೀವಾದರೋ ಉಪ್ಪನ್ನು ಅನ್ನ ಎಂದು ತಂದು ಕೊಡಬೇಕು ಅಜ್ಜನವರೇ ನಮಗೆ. ನಾವು ಹೊಸಿಲು ದಾಟಲಾರದ

ಮಕ್ಕಳೆಂಬುದನ್ನು ಸೇರಿದವರು ನೋಡುತ್ತಾರಲ್ಲಾ. ಕಾನಮಾನ ಬೊಟ್ಟಿನ ಅರಮನೆಯ ತೊಳಸಿ ಮಂಟಪದ ಸಮೀಪ ಜೋಡು ಗದ್ದಿಗೆ ಏರಿಸಬೇಕು. ಪಂಚದಲಿಯ ಹಾಕಿಸಬೇಕು. ನಾವು ಸ್ನಾನ ಮಾಡಿ ಬಂದು ಏರಿದ ಬ್ರಹ್ಮ ಗದ್ದುಗೆಯಲ್ಲಿ, ಹಾಕಿರುವ ಪಂಚ ದಲಿಯದಲ್ಲಿ ಪಯಣವಾಗುತ್ತೇವೆ. ನೀವು ಭಯಪಡಬೇಡಿ ಅಜ್ಜನವರೇ ಎಂದರು.

ಮಕ್ಕಳು ಹೇಳಿದಂತೆ ಮಾಡಿಸಿದರು ಅಜ್ಜನವರು. ಹತ್ತು ಜನ ಪಾಲವರ(ಹಿರಿಯರ) ಮುಂದೆ ಉಪ್ಪು ತಂದು ಅನ್ನ ಎಂದು ಕೊಟ್ಟರು ಮಕ್ಕಳಿಗೆ. ಉಪ್ಪನ್ನು ಅನ್ನ ಎಂದು ತಿನ್ನುವ ಹೊಸಿಲು ದಾಟಲಾಗದ ಮಕ್ಕಳ ಚಟುವಟಿಕೆಗಳನ್ನು ಕಣ್ಣಾರೆ ನೋಡಿದರು ಪಾಲವರು. ಆ ಹೊತ್ತಿಗೆ ಸಿಗಡಿಮೀನು ಹಾರಿಕೊಂಡು ಹೋಗುವ ಹಾಗೆ ಹಾರಿ ಹೋದರು. ಮೈಂದ್‌ನ್ಯಾರೆ ಗುಂಡಿಯಲ್ಲಿ ಸೊನ್ನೆಗಿಂಡೆ ಸ್ನಾನ ಮಾಡಿ ಬರುವ ಹೊತ್ತಿಗೆ ತೊಳಸಿಕಟ್ಟೆಯ ಮುಂದೆ ಅಜ್ಜನವರು ಬ್ರಹ್ಮ ಗದ್ದಿಗೆ ಏರಿಸಿದ್ದಾರೆ. ಇಬ್ಬರು ಮಕ್ಕಳೂ ಬಲದ ಕಾಲು ಹಾಕಿ ಬ್ರಹ್ಮ ಗದ್ದಿಗೆ ಏರಿ ದಲಿಯದಲ್ಲಿ ನೆಲೆಯಾಗಿದ್ದಾರೆ. ಮಕ್ಕಳು ಅಜ್ಜನವರಲ್ಲಿ ಈಗ ನಾವು ಯಾರೆಂಬುದನ್ನು ಕೇಳಿ ಹತ್ತು ಸೇರಿದ ಕೂಟದ ಜನರ ಮುಂದೆ ಎನ್ನುತ್ತಾರೆ ಮಕ್ಕಳು. ಆಗ ಅಜ್ಜನವರು ನೀವು ಯಾರೆಂಬುದನ್ನು ಸೇರಿದ ಜನರಿಗೆ ತಿಳಿಸಿ ಕೊಡಿ ಮಕ್ಕಳೇ ಎಂದಾಗ ಸೊನ್ನೆ ಹೇಳಿದಳು. ಹತ್ತು ಸಮಸ್ತರೇ ಕಿವಿಕೊಟ್ಟು ಕೇಳಿ, ನನ್ನ ತಂದೆ ಕೊಟ್ಟರಾಡಿಯ ಕೊಡ್ಸರಾಳ್ವರು. ಸಂಚನಂಗಡಿ ಜಲ್ಮಭೂಮಿಯ ಸತ್ಯನಾಪುರದ ಸಿರಿಯ ಗರ್ಭದಲ್ಲಿ ಜನಿಸಿದವಳು ನಾನು. ನಮ್ಮ ಆದಿಮೂಲ ಲಂಕೆಲೋಕನಾಡು ಎನ್ನುತ್ತಾಳೆ. ನಿನ್ನ ತಂದೆತಾಯಿ ಯಾರು? ಆದಿ ಎಲ್ಲಿ ಎಂದು ಹೇಳು ಮಗಾ ಗಿಂಡೆ ಎನ್ನಲು ಅವಳು ನನ್ನ ತಂದೆ ಕಡಮಯಿತ್ತೆರ್, ತಾಯಿ ಅಡಿಕಂಚಿ ಮೇಲ್ ಕಂಚಿ ಕಂಚಿ ಕಡಗಣದ ಅರಮನೆಯಲ್ಲಿರುವ ಅಬ್ಬಯಮಾದುರು. ಅವರ ಗರ್ಭದಲ್ಲಿ ಜನಿಸಿದ ಮಗಳು ಗಿಂಡೆ ಗಿಳಿರಾಮು. ನನ್ನ ಆದಿ ಕಟ್ಟ್‌ಬಡೆಕ್ಕಾಯಿ ಲಂಕೆಲೋಕನಾಡು. ನನ್ನ ಕುಟುಂಬ ಅಜಿಲೊಟ್ಟು ಮುಜಿಲೊಟ್ಟು ಎನ್ನುತ್ತಾಳೆ. ನಮಗೆ ಕಪಿ ಕಟ್ಟಿ ಕಪಿತನ ಹೇಳಿದಿರಿ ನೀವು ಹತ್ತು ಸಮಸ್ತರೇ ಎಂದು ಹೇಳುತ್ತಾರೆ ಮಕ್ಕಳು. ನಮ್ಮ ಅಜ್ಜನವರಿಗೆ ನಾವು ಕಾಡಸೂಳೆಯ ಮಕ್ಕಳು ಎಂದಿರಿ. ಅಜ್ಜನವರನ್ನು ಜಾತಿ ಸಂಗತದಿಂದ ಬಿಡಬೇಕು. ಅವರನ್ನು ಕಾಗೆ ಗಿಡುಗ ತಿಂದು ಹೋಗಬೇಕೆಂದಿರಿ ಪಾಲವರೇ ನೀವು ಎಂದು ಸಿಟ್ಟುಗೊಂಡರು ಮಕ್ಕಳು. ಆದಿಬಡಗಣ ಲಂಕೆಲೋಕನಾಡಿನ ಈಶ್ವರಸ್ವಾಮಿಯ ಬಲಭಾಗದಲ್ಲಿ ಜೋಗ ಕೊಡಿ ಎಂದು ಕೂಡಿದ ಮಂದಿಗೆ ಶಪಿಸಿದರು ಮಕ್ಕಳು. ಅಯ್ಯಯ್ಯೋ ಅಜ್ಜನವರೇ, ಅಯ್ಯೋ ಮಕ್ಕಳೇ, ನಮಗೆ ತಿಳಿಯದೆ ನಾವು ಕಪಿತನ ಹೇಳಿದೆವು. ನಮ್ಮದು ಸರ್ವ ತಪ್ಪಾಯಿತು. ನಮಗೆ ಮಾಫಿ ಕೊಡಿ ಎಂದು ಬೇಡಿಕೊಳ್ಳುತ್ತಾರೆ. ಆಗ ಅಜ್ಜನವರು ಮಕ್ಕಳಿಗೆ 'ಅಕ್ಲೆ ಉರಿಉಗ್ಗಲೊ ನಿಜರಂಗ್ ದರ್ಸನೊ ದೆತ್ತ್ ಕಲೆಲೆ ಬಾಲೆಲೆ, ಉರಿ ಬೆರ್ಮ ಗದ್ದಿಗೆಡ್ದ್ ಅಕ್‌ಲಕ್‌ಲೆ ಅರಮನೆಗ್ ಕಡಾಲೆ' (ಅವರ ಸಿಟ್ಟುಕೋಪ, ನಿಜ ರಂಗಿನ ದರ್ಶನ ತೆಗೆದು ಅವರನ್ನು ಉರಿ ಬೆರ್ಮೆರ್ ಗದ್ದಿಗೆಯಿಂದ ಅವರವರ ಅರಮನೆಗೆ ಕಳುಹಿಸಿ ಕೊಡಿ ಎನ್ನುತ್ತಾರೆ.)

ಆಗ ಮಕ್ಕಳು ನಾವು ಸತ್ಯದ ಮಕ್ಕಳು ಎಂಬುದನ್ನು ನಿಮಗೆ ತೋರಿಸಿ ಕೊಟ್ಟೆವು. ನೀವು ಮಾಯ ಬಿಟ್ಟು ಸೋಯ(ನಿಜರೂಪ)ದ ನೆಲೆಯಾಗಿ ಬನ್ನಿ ಎಂದರು. ಹಾಗೇ ಸೋಯದ ನೆಲೆಗೆ(ನಿಜರೂಪ) ಬಂದ ಹತ್ತು ಸೇರಿದ ಪಾಲವರು ನಮ್ಮದು ಸರ್ವ ತಪ್ಪಾಯಿತೆಂದು ಅಜ್ಜನವರ ಕಾಲಿಗೆ ಅಡ್ಡಬಿದ್ದು ಅವರವರ ಅರಮನೆಗಳಿಗೆ ಹೊರಟು ಹೋದರು. ಇತ್ತ ಎರಡು ಮಕ್ಕಳೂ ಏರಿದ ಬ್ರಹ್ಮ ಗದ್ದಿಗೆಯಲ್ಲಿ ಹಾಕಿರುವ ಪಂಚ ದಲಿಯದಲ್ಲಿ ಶರಣು ಸಲ್ಲಿಸುತ್ತಾ ದೇವರು ಬೆರ್ಮೆರ ಸೇವೆ ಮಾಡುತ್ತಾ ದಲಿಯ ತೆಗೆದುಕೊಳ್ಳುತ್ತಿದ್ದಾರೆ ಕಾನಮಾನ ಬೊಟ್ಟಿನ ಅರಮನೆಯಲ್ಲಿ.

ಶ್ಯಾಮರಾಯ ಶೆಟ್ಟಿ : ಗಿಂಡೆಯ ವಿಚಾರ ಇವರ ಪಠ್ಯದಲ್ಲಿ ಈ ರೀತಿ ಇದೆ. ಬ್ರಾಹ್ಮಣ ಗರ್ಭಿಣಿ ಹೆಂಗಸಿಗೆ ಉಪ್ಪಳಿಗೆಯ ಎಲೆಯ ತಿಂಡಿ ತಿನ್ನಲು ಆಸೆಯಾಗುತ್ತದೆ. ಇವಳ ಗಂಡ ಎಲೆ ತರಲು ಕಾಡಿಗೆ ಹೋದಾಗ ಹುಲಿಯೊಂದು ಮರದಲ್ಲಿರುತ್ತದೆ. ನನ್ನ ಹೆಂಡತಿ ಹೆಣ್ಣುಮಗು ಹೆತ್ತರೆ ನಿನಗೆ ಕೊಡುವುದಾಗಿ ಹೇಳಿ ಎಲೆತಂದು ಅದರಿಂದ ಗಟ್ಟಿ ಮಾಡಿ ತಿಂದು ಆಕೆ ಹೆಣ್ಣುಮಗುವನ್ನು ಹೆರುತ್ತಾಳೆ. ಹೇಳಿದ ಮಾತಿನಂತೆ ಹುಲಿಗೆ ಮಗುವನ್ನು ಕೊಡದ ಕಾರಣ ಅದು ಮಗುವನ್ನೆತ್ತಿಕೊಂಡು ಹೋಗಿ ಹುಲಿಯ ಗುಹೆಯಲ್ಲಿಡುತ್ತದೆ. ಕಾನಬೆಟ್ಟಿನ ಅಜ್ಜನವರು ಗದ್ದೆಯ ಹೆಚ್ಚಾದ ನೀರನ್ನು ತಗ್ಗಿಸುತ್ತಾ, ತಗ್ಗಿದ ನೀರನ್ನು ಏರಿಸುತ್ತಾ ಹೋಗುವಾಗ ಹುಲಿಯೊಂದು ಘರ್ಜಿಸುವುದು ಕೇಳಿಸುತ್ತದೆ. ಹತ್ತಿರ ಹೋಗಿ ನೊಡುವಾಗ ಹುಲಿಯ ಗುಹೆಯಲ್ಲಿ ಮಗುವೊಂದು ಇರುವುದು ಕಾಣಿಸುತ್ತದೆ. ಆ ಮಗುವನ್ನು ಎತ್ತಿಕೊಂಡು ಬಂದು ಮನೆಯಲ್ಲಿ ಸಾಕುತ್ತಾರೆ. ಮಗುವಿಗೆ ಗಿಂಡೆಗಿಳಿರಾಮು ಎಂಬ ಹೆಸರಿಟ್ಟು ತುಂಬ ಮುದ್ದಾಗಿ ಸೊನ್ನೆಯ ಜೊತೆಗೆ ಬೆಳೆಸುವ ವಿವರಗಳಿವೆ.

ಗೋಪಾಲ ನಾಯ್ಕ : ಕಾನೆಬೆಟ್ಟಿನ ಅಜ್ಜರಿಗೆ ಬೇಟೆಯಾಡದೆ ಬಹುದಿನವಾಯಿತೆಂಬ ಯೋಚನೆ ಮನದಲ್ಲಿ ಬರುತ್ತದೆ. ಹೀಗಿರಲು ಅಡಿಕಂಚಿ ಮೇಲ್ ಕಂಚಿ ಕಂಚಿ ಕಡಗಣಂದ ಅರಮನೆಯಲ್ಲಿ ಇದ್ದಾರೆ ಪಡ್ಡಂತಾಯರೆಂಬ ಬ್ರಾಹ್ಮಣ. ಇವರ ಕೈ ಹಿಡಿದ ಪತ್ನಿ ಗಿಂಡೆ ಗಿಳಿರಾಮು. ಇವರು ಮುಟ್ಟಾಗದೆ ಇದ್ದ ಕಾಲದಲ್ಲಿ ಕಾಂತೇಶ್ವರ ದೇವರಿಗೆ ಹರಕೆ ಹೊರುತ್ತಾರೆ. ಕಾಂತೇಶ್ವರ ದೇವರಿಗೆ ಹೇಳಿಕೊಂಡ ಹರಕೆಯ ಫಲದಿಂದ ಗರ್ಭಧರಿಸಿದ ಪಡ್ಡಂತಾಯರ ಹೆಂಡತಿಯ ಗರ್ಭಕ್ಕೆ ಒಂಭತ್ತು ತಿಂಗಳಾಗುವಾಗ ಅಡ್ಡ ಆರು ಮಾಗಣೆಯ ಕೃಷ್ಣ ಭಟ್ಟರ ಮನೆಗೆ ಔತಣಕ್ಕೆ ಕರೆಯುತ್ತಾರೆ. ಹೋಗುವ ದಾರಿಯಲ್ಲಿ ಉಪ್ಪಳಿಗೆ ಎಲೆಯ ತಿಂಡಿ ತಿನ್ನಲು ಗರ್ಭಿಣಿ ಗಿಳಿರಾಮುವಿಗೆ ಆಸೆಯಾಗುತ್ತದೆ. ಹಿಂತಿರುಗಿ ಹೋಗುವಾಗ ತೆಗೆದುಕೊಂಡು ಹೋಗುವ ಎನ್ನುತ್ತಾನೆ ಗಂಡ. ಮನೆಗೆ ಹಿಂತಿರುಗಿದ ಕೂಡಲೇ ಎಲೆಯ ವಿಷಯ ನೆನಪಿಸಲು ಗಂಡ ಕೆಲಸದಾಳು ಬಬ್ಬುವನ್ನು ಎಲೆ ತರಲು ಕಳುಹಿಸಿಕೊಡುತ್ತಾಳೆ. ಆತ ಹೋಗಿ ಪಡ್ಡಂತಾಯರು ನೋಡಿರುವ ಮರ

ಇದೇ ಇರಬಹುದೆಂದು ತಿಳಿದು ಮೇಲೆ ನೋಡಲು ಕಣ್ಣಿಗೆ ಕಾಣುವ ಎಲೆಗಳೆಲ್ಲ ತೂತಾಗಿದ್ದವು. ಇನ್ನು ಒಳ್ಳೆಯ ಎಲೆ ಮೇಲಿನ ಗೆಲ್ಲಿನಲ್ಲಿದೆ ಎಂದು ತಾನುಟ್ಟ ಬಟ್ಟೆಯನ್ನು ಬಿಚ್ಚಿ ಮರ ಹತ್ತುವ ಹಗ್ಗವಾಗಿ ಬಳಸಿ ಹತ್ತಿ ಹೋಗಿ ಬೇಕಾದಷ್ಟು ಎಲೆಗಳನ್ನು ಕೊಯ್ದು ತಡವಾಯಿತೆಂದು ಅವಸರವಸರವಾಗಿ ಮರ ಇಳಿಯುತ್ತಿರಲು ಮರವನ್ನು ತಬ್ಬಿಕೊಂಡು ಹುಲಿಯೊಂದು ನಿಂತಿದೆ. ಹುಲಿಯನ್ನು ಬಬ್ಬು ಈ ರೀತಿ ಕೇಳಿಕೊಳ್ಳುತ್ತಾನೆ. ನಾನು ಕೆಳಗೆ ಇಳಿಯಬೇಕು ಹುಲಿಯೇ. ನನ್ನ ಒಡತಿ ಒಂಭತ್ತು ತಿಂಗಳು ತುಂಬಿದ ಗರ್ಭಿಣಿ. ಅವರಿಗೆ ಇದರ ಎಲೆಯಿಂದ ಮಾಡಿದ ತಿಂಡಿ ತಿನ್ನಲು ಬಯಕೆಯಾಗಿದೆ. ನೀನು ನನ್ನನ್ನು ಹೋಗಲು ಬಿಡದಿದ್ದರೆ ಅವರ ಆಸೆಯನ್ನು ನಿರಾಸೆಗೊಳಿಸಿದಂತಾಗುತ್ತದೆ. ಎರಡು ಜೀವಗಳ ಪಾಪ ನೀನು ಕಟ್ಟಿಕೊಳ್ಳಬೇಡ ಹುಲಿಯೇ ಎಂದು ಮರದ ಮೇಲೆ ಕುಳಿತು ಹೇಳುತ್ತಾನೆ. ಮತ್ತೂ ಹುಲಿ ಹೋಗದುದನ್ನು ಕಂಡ ಬಬ್ಬು ಒಂದು ಉಪಾಯ ಮಾಡಿ ಹುಲಿಗೆ ಈ ರೀತಿ ಹೇಳುತ್ತಾನೆ.

ತುಳುಪಠ್ಯ

ಆಣ್ ಬಾಲೆ ಎನ್ನ ದೆತ್ತಿ ಪೆದ್‌ಂಡ
ಕಾಂತೇಶ್ವರಗ್ ಚವಲಬೀಜಿಯೆರೆಗ್ ಬುಡುಪ್ಪಾಬೆ
ಯೆನ್ನ ದೆತ್ತಿ ಪೊಣ್ಣು ಬಾಲೆ ಪೆದ್‌ಂಡ
ನಿಕ್ಕ್ ತಿನಿಯೆರೆ ಕೊರ್‌ಪೆ ಪಂಡೆ
ನಾರಾಯಿನ ಮೂಲೊದ ದಿಕ್ಕೆ

ಕನ್ನಡಾನುವಾದ

ಗಂಡು ಮಗು ನನ್ನ ಒಡತಿ ಹೆತ್ತರೆ
ಕಾಂತೇಶ್ವರ ದೇವರಿಗೆ ಚವಲ ಬೀಸಲು ಬಿಡಿಸುತ್ತೇನೆ
ನನ್ನ ಒಡತಿ ಹೆಣ್ಣು ಮಗು ಹೆತ್ತರೆ
ನಿನಗೆ ತಿನ್ನಲು ಕೊಡುತ್ತೇನೆ ಎಂದ ಮೂಲದ ಹುಡುಗ (ಪುಟ 510).

ಹುಲಿಗೆ ಒಡತಿ ಗಂಡು ಮಗು ಹೆತ್ತರೆ ಕಾಂತೇಶ್ವರ ದೇವರ ಚಾಕರಿಗೂ ಹೆಣ್ಣು ಹೆತ್ತರೆ ನಿನಗೆ ಕೊಡುವೆನೆಂಬ ಮಾತು ಕೊಡುತ್ತಿದ್ದಂತೆ ಮರಬಿಟ್ಟು ಹೋಗುತ್ತದೆ. ಇತ್ತ ಬಬ್ಬು ಎಂಜಿರ ಎಲಿಮಲೆ ಕಾಡುಬಿಟ್ಟು ಕಂಚಿ ಕಡಗಣಂದ ಅರಮನೆಗೆ ಓಡೋಡಿ ಬರುತ್ತಾನೆ. ಈ ಎಲೆಯಿಂದ ತಿಂಡಿ ತಯಾರಿಸಿ ಬಾಲೆ ಕೇದಗ ತಿಂದು ಹೆಣ್ಣುಮಗುವಿಗೆ ಜನನವೀಯುತ್ತಾರೆ. ಇತ್ತ ಬಬ್ಬುವಿಗೆ ತಾನು ಹುಲಿಗೆ ಕೊಟ್ಟಿರುವ ಮಾತನ್ನು ಪಡ್ಡಂತಾಯರಿಗೆ ತಿಳಿಸಲು ಮರೆತುಹೋಗಿರುತ್ತದೆ. ಇತ್ತ ಮಗುವನ್ನು ಬಚ್ಚಲ ಮನೆಗೆ ಸ್ನಾನಕ್ಕೆಂದು ತೆಗೆದುಕೊಂಡು ಹೋಗುತ್ತಾರೆ ಬಾಲೆ ಕೇದಗ. ಸ್ನಾನ ಮಾಡಿಸಿ ಮಗುವಿನ

ಮೆಯಿ ಒರೆಸುವ ಬಟ್ಟೆ ಮರೆತು ಬಂದಿರುವ ಕಾರಣ ಮಗುವನ್ನು ಅಲ್ಲೆ ಕಲ್ಲಲ್ಲಿ ಮಲಗಿಸಿ ಕಡಗಣಂದ ಅರಮನೆಗೆ ಬಂದು ಬಟ್ಟೆ ತೆಗೆದುಕೊಂಡು ಹೋಗುವ ಹೊತ್ತಿಗೆ ಮಗು ಅಲ್ಲಿರುವುದಿಲ್ಲ. ಇದರಿಂದಾಗಿ ಪಡ್ಡಂತಾಯರು ಹಾಗೂ ಅವರ ಹೆಂಡತಿ ಬಹಳ ಚಿಂತಿತರಾಗುತ್ತಾರೆ.

ಇತ್ತ ಕಾನೆಬೆಟ್ಟಿನ ಅಜ್ಜನವರು ಬೇಟೆ ಮಾಡಬೇಕೆಂದು ಬೇಟೆನಾಯಿಗಳನ್ನು, ಕೋವಿಯವರನ್ನು, ಈಡುಗಾರರನ್ನು ಸೇರಿಸಿ ಬೇಟೆಗೆ ಹೋಗುತ್ತಾರೆ. ಬೇಟೆ ಈವರೆಗೆ ಮಾಡದ ಕಾಡು, ಸೀಮುಳ್ಳ ಕಾಡಲ್ಲಿ ಬೇಟೆ ಮಾಡುತ್ತಾ ಎಂಜಿರ ಎಲಿಮಲೆ ಕಾಡಿಗೆ ಬರುತ್ತಾರೆ ಅಜ್ಜನವರು. ಎಷ್ಟು ಬೇಟೆ ಮಾಡಿದರೂ ಏನೊಂದೂ ಬೇಟೆ ದೊರೆಯದಿದ್ದಾಗ ಅಜ್ಜನವರು ಎದುರಿರುವ ಪುಂಜದ ಕಾಡು ಬೇಟೆ ಮಾಡಬೇಕೆಂದು ಹೋಗುತ್ತಾರೆ. ಅಲ್ಲಿ ಬೇಟೆ ಮಾಡುತ್ತಿರುವ ಹೊತ್ತಿಗೆ ಕಲ್ಲಿನ ದೊಡ್ಡ ಗುಹೆಯ ಒಳಗಿಂದ ಅಜ್ಜನವರ ಕಿವಿಗೆ ಅಳುವ ಸದ್ದು ಕೇಳಿಸುತ್ತದೆ. ಇದು ಹಕ್ಕಿಯ ಕೂಗು ಅಲ್ಲ, ಮೃಗದ ಕೂಗು ಅಲ್ಲ. ಮಗುವಿನ ಸ್ವರ ಎಲ್ಲಿಂದ ಬರುವುದೆಂದು ಹುಡುಕುತ್ತಾ ಹೋಗುವಾಗ ಕಲ್ಲಿನ ಗುಹೆಯಿಂದ ಮಗುವಿನ ಅಳು ಕೇಳಿಸುತ್ತದೆ. ಗುಹೆಯ ಒಳಗೆ ಹೋಗುವಷ್ಟು ಎಡೆ ಇಲ್ಲ, ಏನು ಮಾಡಲಿ ಎಂದು ಯೋಚಿಸಿ ಅಜ್ಜನವರು ತನ್ನ ಚೀಲದಲ್ಲಿದ್ದ ವರಹದ ಗಂಟನ್ನು ಬಿಚ್ಚಿ ಮಾಟೆಯ ಎದುರುಗಡೆ ಗಣಗಣ ಎಂದು ಸದ್ದಾಗುವ ಹಾಗೆ ಚೆಲ್ಲಿದರು. ಆದರೂ ಮಗು ಕಾಣಿಸದಿದ್ದಾಗ ಅರಮನೆಯಿಂದ ಕಂಚಿನ ಗಿಂಡೆಯನ್ನು ತರಿಸಿ ಮಾಟೆಯ ಎದುರು ನಿಂತು ಡಣಡಣ ಎಂದು ಬಡಿದರು. ಈ ಸದ್ದಿಗೆ ಮಗು ಹೊಟ್ಟೆ ಎಳೆಯುತ್ತಾ ಗುಹೆಯಿಂದ ಹೊರಗೆ ಬರುತ್ತದೆ. ಅಜ್ಜನವರು ಪೆರ್ಗಡೆ ಬರಿ ಬಂದ್ರೊದ (ವಂಶಾವಳಿ) ಮಗುವಾದರೆ ನನ್ನ ಹಚ್ಚಡೆಗೆ ಬಂದು ಬೀಳ ಬೇಕೆಂದು ಹಚ್ಚಡೆ ಹಾಸಿದರು. ಹೆಣ್ಣು ಮಗುವೊಂದು ಬಂದು ಅಜ್ಜನವರ ಹಚ್ಚಡೆಗೆ ಬಂದು ಬಿತ್ತು. ನಾನು ಸಂತಾನದ ಸಿರಿಫಲ ಇಲ್ಲದವ, ನನಗೆ ದೇವರು ಬೆರ್ಮರು ಸಂತಾನ ಕೊಟ್ಟರೆಂದು ಅಜ್ಜನವರು ಬಹಳ ಸಂತೋಷದಿಂದ ಮಗುವನ್ನು ಅರಮನೆಗೆ ಎತ್ತಿಕೊಂಡು ಬರುತ್ತಾರೆ. ಎರಡು ಮಕ್ಕಳನ್ನೂ ಒಂದೇ ತೊಟ್ಟಿಲಲ್ಲಿ ಮಲಗಿಸಿ ನೀರ ಸುಳಿಯಲ್ಲಿ ಸಿಕ್ಕಿದ ಮಗುವಿಗೆ ಸೊನ್ನೆ ಎಂಬ ಹೆಸರಿಟ್ಟು ಕಲ್ಲಿನ ಗುಹೆಯಲ್ಲಿ ಗಿಂಡ್ಯೆ ಬಡಿದಾಗ ಅದರ ಸ್ವರಕ್ಕೆ ದೊರಕಿದ ಮಗುವಿಗೆ ಗಿಂಡ್ಯೆ ಎಂಬ ಹೆಸರಿಟ್ಟರು. ಎರಡು ಮಕ್ಕಳೂ ಬಹಳ ಪ್ರೀತಿಯಿಂದ ಅರಮನೆಯಲ್ಲಿ ಬೆಳೆಯುತ್ತಿದ್ದಾರೆ.

ಗಿಡಿಕೆರೆ ರಾಮಕ್ಕ ಮುಗ್ಗೇರ್ತಿ : ಮಡಕೆದರಿಯ ಬ್ರಾಹ್ಮಣನ ಹೆಂಡತಿ ಗರ್ಭಿಣಿಗೆ ಹೆರುವ ತಿಂಗಳಾಗುವಾಗ ಹಲಸಿನ ಹಣ್ಣಿನಿಂದ ತಯಾರಿಸಿದ ತಿಂಡಿ ತಿನ್ನಬೇಕೆಂಬ ಆಸೆಯಾಗುತ್ತದೆ. ಇದಕ್ಕಾಗಿ ಗಂಡ ಹೋಗಿ ಮರಹತ್ತಿ ಹಲಸಿನ ಹಣ್ಣನ್ನು ಕೊಯ್ದು ತರುತ್ತಾರೆ. ಬೆಳ್ಮಣ್ಣಿನ ತನ್ನರಮನೆಯಲ್ಲಿ ಹಲಸಿನ ಹಣ್ಣನ್ನು ಕೊಯ್ದು ತುಂಡರಿಸಿ ಅದರ ಸೋಳೆಗಳನ್ನು ಅಕ್ಕಿ ಹಾಕಿ ಅರೆದು ಗಟ್ಟಿ ಮಾಡಿ ಮಡಚಲು ತಂದೇವು

ಮರದ ಎಲೆ ಬೇಕಾಗಿತ್ತು. ಈ ಮರ ಒಂದು ಹುಲಿಯ ಗುಹೆಯ ಹತ್ತಿರ ಇತ್ತು. ಇದನ್ನು ತಿಳಿಯದ ಗರ್ಭಿಣಿ ಹೆಣ್ಣು ಎಲೆಯನ್ನು ತರುವುದ್ಕಾಗಿ ಈ ಮರದ ಹತ್ತಿರ ಹೋದರು. ಮರದ ಎಲೆಯ ಚಂದವನ್ನು ನೋಡುತ್ತಿರುವಾಗ ಹುಲಿ ಗುಹೆಯಿಂದ ಹೊರಗೆ ಬಂದು ಏನು ನೋಡುತ್ತಿದ್ದೀರಿ ಎಂದು ಕೇಳುತ್ತದೆ. ಆಗ ಗರ್ಭಿಣಿ ಹೆಣ್ಣು ತಂದೇವು ಮರದ ಎಲೆ ಹಲಸಿನ ಗಟ್ಟಿ ಮಾಡಲು ಬೇಕಾಗಿತ್ತು ಎನ್ನುತ್ತಾಳೆ. ಹಾಗಿದ್ದರೆ ನೀವು ಹೆರುವ ಮಗು ಗಂಡಾಗಿದ್ದರೆ ನಿಮಗಿರಲಿ, ಹೆಣ್ಣಾದರೆ ನನಗೆ ಕೊಡಬೇಕು. ಹಾಗಿದ್ದರೆ ಮಾತ್ರ ಎಲೆ ಕೊಯ್ಯಲು ಬಿಡುವೆ ಎಂದಿತು. ಇದಕ್ಕೆ ಒಪ್ಪಿಕೊಂಡ ಗರ್ಭಿಣಿ ಹೆಣ್ಣು ಮರದ ಎಲೆ ಕೊಯ್ದುಕೊಂಡು ಮನೆಗೆ ಬರುತ್ತಾಳೆ. ಹಲಸಿನ ಗಟ್ಟಿ ಮಾಡಿ ತಿನ್ನುತ್ತಾಳೆ. ಬಾಯಿಯ ಬಯಕೆ ಕಳೆದ ಗರ್ಭಿಣಿಹೆಣ್ಣಿಗೆ ಕೂಡಲೇ ಹೆರಿಗೆ ನೋವು ಕಾಣಿಸಿಕೊಳ್ಳುತ್ತದೆ. ಹೆರಿಗೆ ಮಾಡಿಸಲು ಬಂಬೆ ಬಲಲ್ದಿ ತುಂಬೆ ಮಾದುರುವನ್ನು ಕರೆಸುತ್ತಾರೆ. ಅವಳು ಬಂದು ಹೆರಿಗೆಗೆ ನೇಲೆ ಹಾಕಿಸಿ ಹೊಟ್ಟೆಗೆ ಸಕಣಂದೆಣ್ಣೆ ಹಾಕಿ ಸವರುತ್ತಾಳೆ. ಸ್ವಲ್ಪ ಹೊತ್ತಲ್ಲೇ ಬ್ರಾಹ್ಮಣನ ಹೆಂಡತಿ ಹೆಣ್ಣು ಮಗುವನ್ನು ಹೆರುತ್ತಾಳೆ. ಮಗು ಹೆತ್ತ ಪುರುಡು ತೆಗೆಸಿ, ಹದಿನಾರರಲ್ಲಿ ಮಗುವನ್ನು ತೊಟ್ಟಿಲಿಗೆ ಹಾಕಿಸಿ, ಮೂವತ್ತರಂದು ತಿಂಗಳು ಮಾಡಿಸಿ ಬಾವಿ ಮುಟ್ಟಿಸುವ ಕ್ರಿಯೆಗಳನ್ನು ಮಾಡಿಸಿದರು. ಮಗು ಬೆಳೆದು ಒಂದು ವರ್ಷವಾಗುತ್ತಾ ಬರುವಾಗ ಅಂಗಳದಲ್ಲಿ ಆಟವಾಡುತ್ತಿದ್ದಾಗ ಹುಲಿ ಎತ್ತಿಕೊಂಡು ಹೋಗಿ ತನ್ನ ಗುಹೆಯಲ್ಲಿ ಇಡುತ್ತದೆ. ಬ್ರಾಹ್ಮಣನ ಹೆಂಡತಿ ತುಂಬ ದುಃಖಿಸುತ್ತಾರೆ.

ತುಳುಪಠ್ಯ

ಇನಿಡ್ದ್ ಮಿತ್ತ್‌ಗೆನಾ ಭೂಮಿಚಂದ್ರ ಕಾಲ ಮುಟ್ಟಗೆನಾ
ತಂದೇವುದ ಇರೆಟ್ಟ್ ಪಿಲಕ್ಕಾಯಿದ ಗಟ್ಟಿ ಮಲ್ಪೆರೆ ಆವಂದ್‌ಗೆನಾ
ಲಾವಾ ಬಟ್ಟೆರೆ ಮದಿಮ್ಮಾಳ್ ಸಾಪೊ ಪಾಲಿಯೆರತ್ತೋ
ಬೊಳ್ಮಣ್ಣ್‌ದ ಎರಮಾನೆಡ್‌ದೇ

ಕನ್ನಡಾನುವಾದ

ಇಂದಿನಿಂದ ಭೂಮಿಚಂದ್ರ ಕಾಲದವರೆಗೆ
ತಂದೇವಿನ ಎಲೆಯಲ್ಲಿ ಹಲಸಿನ ಗಟ್ಟಿ ಮಾಡಬಾರದು
ಎಂದು ಭಟ್ಟರ ಮದುಮಗಳು ಶಾಪ ಹಾಕಿದರು
ಬೆಳ್ಮಣ್ಣಿನ ಅರಮನೆಯಲ್ಲೀ (ಪುಟ 203).

ಹೀಗೆ ಮಗುವನ್ನು ಕೊಂಡು ಹೋದ ಹುಲಿ ಅದರ ಗುಹೆಯಲ್ಲಿಟ್ಟು ಆಟವಾಡುತ್ತಿರುವಾಗ ಕಾನಬೆಟ್ಟಿನ ಅಜ್ಜನವರು ತನಗೆ ಬೈಲಲ್ಲಿ ಸಾವಿರ ಮುಡಿ ಗದ್ದೆ,

ಬೆಟ್ಟಿನಲ್ಲಿ ನೂರಾರು ಮುಡಿ ಗದ್ದೆ ಇದೆ. ಅದು ಏನಾಗಿದೆ ಎಂದು ನೋಡಿಕೊಂಡು ಬರಬೇಕೆಂದು ಹೋದಾಗ ಹುಲಿ ಮಗುವಿನ ಜೊತೆ ಆಟವಾಡುವುದು ಕಾಣಿಸುತ್ತದೆ. ಅಲ್ಲಿಂದಲೇ ಹಿಂತಿರುಗಿ ತನ್ನರಮನೆಗೆ ಬಂದು ಕಲ್ಲ ಕಲೆಂಬಿಯಿಂದ ಬೆಳ್ಳಿಯ ಒಂದು ರೂಪಾಯಿ ಬೊಂಬೆ ಹಣ ಹಿಡಿದುಕೊಂಡು ಬಂದು ಹುಲಿಯನ್ನು ಕುರಿತು, ಹುಲಿಯೇ ನೀನೂ ಸತ್ಯದವ, ನಾನೂ ಸತ್ಯದ ಮಗ. ನಿನಗೊಂದು ಬೆಳ್ಳಿಯ ಬೊಂಬೆಯನ್ನು ಕೊಡುತ್ತೇನೆ. ಅದನ್ನು ಆಡಿಸುತ್ತಿರು, ಮಗುವನ್ನು ನನಗೆ ಕೊಡೆಂದು ಕೇಳುತ್ತಾರೆ.

ತುಳುಪಠ್ಯ
ಒಂಜಿ ವರಣ್ ಬೊಂಬೆದ ಪಣವು ಪಾರಾನಗ
ಪಿಲಿ ಯೇತ್‌ದ್ ಪತ್ತ್‌ಂಡ್
ಇನಿ ವರನ್‌ನ್ ಗೊಬ್ಬಾನಗ
ಅವಾ ಬಾಲೆನ್ ಪತೊಂದು ಅಜ್ಜೆರ್ ಬರ್ಪೇರ್

ಕನ್ನಡಾನುವಾದ
ಒಂದು ವರಹ ಬೊಂಬೆಯ ಹಣ ಹಾರಿಸುವಾಗ
ಹುಲಿ ಹಾರಿ ಹಿಡಿಯಿತು
ಇಂದು ವರಣ್‌ನಲ್ಲಿ ಆಡುತ್ತಿರುವಾಗ
ಆ ಮಗುವನ್ನೆತ್ತಿಕೊಂಡು ಅಜ್ಜನವರು ಬಂದರು (ಪುಟ 205).

ದಾರುವನ್ನು ಕರೆದು ಸಿರಿಯ ಮಗಳು ಸೊನ್ನೆ, ಮಡಕೆದರಿಯ ಬ್ರಾಹ್ಮಣ ಸ್ತ್ರೀಯ ಮಗಳು ಗಿಂಡೆ. ಒಳ್ಳೆಯ ರೀತಿಯಲ್ಲಿ ಇವರನ್ನು ಸಾಕಬೇಕೆನ್ನುತ್ತಾರೆ. ಅಂತೆಯೇ ದಾರು ಬಲು ಪ್ರೀತಿಯಿಂದ ಸಾಕುತ್ತಾಳೆ. ಮಕ್ಕಳ ಸುದ್ದಿ ನಾಲ್ಕು ಊರು, ನಾಲ್ಕು ದೇಶಕ್ಕೆ ಹರಡುತ್ತದೆ.

ಲೀಲಾ ಶೆಟ್ಟಿ: ಮಡ್ಕದಾರೆ ಅಬ್ಬೆ ಮಗಳು ಸುಂದರಗೆ ಜೇವು. ಒಂದು ದಿನ ಅವಳು ತನ್ನ ಮಾವನ ಮಗನ ನೂಲ ಮದುವೆಗೆಂದು ಹೋಗುತ್ತಾಳೆ. ಕಾನಬೆಟ್ಟಿನ ಅರಮನೆಯ ಎದುರಿಂದ ಹೋಗುತ್ತಿರಲು ಸುಂದರಗೆ ಜೇವು ತಂದೇವು ಮರದ ಎಲೆ ನೋಡುತ್ತಾಳೆ. ಇದರ ಎಲೆಯಿಂದ ಮಾಡಿದ ಗಟ್ಟಿ ತಿನ್ನಬೇಕೆಂಬ ಆಸೆಯಾಗುತ್ತದೆ. ಮನೆಗೆ ಹಿಂತಿರುಗಿದ ಅನಂತರ ತನ್ನ ಮದುಮಗನನ್ನು ಎಲೆ ತರುವುದಕ್ಕಾಗಿ ಕಳುಹಿಸಿ ಕೊಡುತ್ತಾಳೆ. ಆತ ಹೋಗಿ ನೋಡುವಾಗ ಮರದ ಗುಹೆಯಲ್ಲಿ ದೊಡ್ಡ ಹುಲಿಗಳು ಕೂತಿರುತ್ತವೆ. ಇವನನ್ನು ಎಲೆ ತೆಗೆಯಲು ಬಿಡದೆ ಹುಟ್ಟಿದ ಮಗುವನ್ನು ನಮಗೆ ನೀಡುವುದಾದರೆ ಮಾತ್ರ ಎಲೆ ತೆಗೆಯಲು ಬಿಡುತ್ತೇವೆ ಎನ್ನುತ್ತವೆ. ನನ್ನ ಮದುಮಗಳಲ್ಲಿ

ಕೇಳಿ ಬರುತ್ತೇನೆಂದು ಹಿಂತಿರುಗಿ ಬಂದು ಅಲ್ಲಿನ ವಿಚಾರವನ್ನು ಹೆಂಡತಿಗೆ ತಿಳಿಸುತ್ತಾನೆ. ಹೆಂಡತಿ ಮಗುವನ್ನು ಹುಲಿಗಳಿಗೆ ಕೊಡಲು ಒಪ್ಪುತ್ತಾಳೆ. ಮತ್ತೆ ತಿರುಗಿ ಮರದ ಹತ್ತಿರ ಹೊಗಿ ಹುಟ್ಟಿದ ಮಗುವನ್ನು ಕೊಡಲು ಹೆಂಡತಿ ಒಪ್ಪಿರುವ ವಿಚಾರವನ್ನು ಹುಲಿಗಳಿಗೆ ತಿಳಿಸಲು ಅವು ಮರಬಿಟ್ಟು ದೂರ ಹೋಗುತ್ತವೆ. ಈತ ಬೇಕಾದಷ್ಟು ತಂದೇವಿನ ಎಲೆಗಳನ್ನು ಕೊಯ್ದು ತರುತ್ತಾನೆ. ಇದರಿಂದ ಮಾಡಿದ ತಿಂಡಿಯನ್ನು ತಿಂದ ಸುಂದರಗೆ ಜೇವಿಗೆ ಬಾಯಿಯ ಆಸೆ ಕಳೆದು ಹೆಣ್ಣುಮಗುವಿಗೆ ಜನ್ಮ ನೀಡುತ್ತಾಳೆ. ಮಗುವನ್ನು ಸ್ನಾನ ಮಾಡಿಸಿ ಬಚ್ಚಲು ಮನೆಯಿಂದ ಹೊರತರಬೇಕಾದರೆ ಬಚ್ಚಲು ಮನೆಯ ಹಿಂದೆ ಕಾದು ಕುಳಿತಿದ್ದ ಜೋಡಿ ಹುಲಿಗಳು ಮಗುವನ್ನು ಎಳೆದುಕೊಂಡು ಹೋಗಿ ಮತ್ತೆ ತಂದೇವು ಮರದ ಗುಹೆಯಲ್ಲಿ ಇಡುತ್ತವೆ. ಒಂದು ದಿನ ಕಾನಬೆಟ್ಟಿನ ಅಜ್ಜನವರು ಕೆಲಸದಾಳುಗಳನ್ನು ಕರೆದುಕೊಂಡು ಬೇಲಿಗೆ ತೂನ(ಗೂಟ) ಕಡಿಯಲು ಕಾಡಿಗೆ ಹೋಗುತ್ತಾರೆ. ಗೂಟ ಕಡಿಯುತ್ತಿರುವಾಗ ಮರದಲ್ಲಿರುವ ಈ ಮಗುವನ್ನು ನೋಡಿ ಕಾನಬೆಟ್ಟಿನ ಅರಮನೆಗೆ ಎತ್ತಿಕೊಂಡು ಬರುತ್ತಾರೆ. ದಾರುವಿನ ಕೈಯಲ್ಲಿ ಮಗುವನ್ನು ಚೆನ್ನಾಗಿ ಸಾಕುವಂತೆ ಹೇಳಿ ಮರದ ಬಾಂಗ್ (ದೊಡ್ಡಪೊಟರೆ)ನಲ್ಲಿ ದೊರೆತ ಮಗುವಿಗೆ ಗಿಂಡೆ ಎಂಬ ಹೆಸರಿಡುತ್ತಾರೆ.

ಪೊಳಲಿ ಶೀನಪ್ಪ ಹೆಗ್ಗಡೆ: ಬೆಳ್ಮಣ್ಣು ಮಡಿತ್ತಿಲ್ ಬ್ರಾಹ್ಮಣರ ಪತ್ನಿ ಗರ್ಭಿಣಿಗೆ ಮುಚ್ಚಿಲು ಮರದೆಲೆಯ ಕಡುಬು ತಿನ್ನಲು ಬಯಕೆ ಆಗುತ್ತದೆ. ಇದನ್ನು ತರಲು ಮೊಯಿಲಿಯನ್ನು ಕಳುಹಿಸಿ ಕೊಡುತ್ತಾರೆ. ಮರದ ಮೇಲೆ ಜೋಡಿಹುಲಿಗಳನ್ನು ಕಂಡು ಅಲ್ಲೇ ಸ್ವಲ್ಪ ಹೊತ್ತು ಕಾಯುತ್ತಾ ಕುಳಿತುಕೊಳ್ಳುತ್ತಾನೆ. ಹುಲಿಗಳು ಹಂದಾಡದ್ದನ್ನು ಕಂಡ ಮೊಯಿಲಿಯು ಹಿಂತಿರುಗಿ ಬಂದು ಧಣಿಗಳ ಹೆಂಡತಿಗೆ ವಿಚಾರ ತಿಳಿಸುತ್ತಾನೆ. ಆಕೆ ನಮಗೆ ಎಲೆಗಳನ್ನು ತೆಗೆಯಲು ಬಿಟ್ಟರೆ ಹೆತ್ತ ಮಗುವನ್ನು ಹುಲಿಗಳಿಗೆ ಕೊಡುವಂತೆ ಹೇಳಿ ಮತ್ತೆ ಅವನನ್ನು ಕಳುಹಿಸಿ ಕೊಡುತ್ತಾಳೆ. ಹುಲಿಗಳಿಗೆ ಹೆತ್ತ ಮಗುವನ್ನು ನೀಡುವ ವಿಚಾರ ತಿಳಿಸಿದಾಗ ಮರಬಿಟ್ಟು ಹೋಗುತ್ತವೆ. ಈತ ಎಲೆ ಕೊಯ್ದು ತರುತ್ತಾನೆ. ಅದರಿಂದ ಮಾಡಿದ ಕಡುಬು ತಿಂದ ಮಡ್ತಿಲ್ಲಾಯರ ಹೆಂಡತಿ ಅಂದೇ ರಾತ್ರಿ ಹೆಣ್ಣುಮಗುವನ್ನು ಹೆರುತ್ತಾರೆ. ಹೇಳಿದ ಮಾತಿನಂತೆ ವರ್ಷ ಕಳೆದರೂ ಹುಲಿಗಳಿಗೆ ಮಗುವನ್ನು ಕೊಡದಿದ್ದಾಗ ಒಂದು ದಿನ ಅವರು ಮಗುವಿನ ಬಟ್ಟೆ ಒಗೆಯಲು ಹೋದಾಗ ಮನೆಯ ಚಾವಡಿಯಿಂದ ಜೋಡಿ ಹುಲಿಗಳು ಮಗುವನ್ನೆತ್ತಿಕೊಂಡು ಹೋಗುತ್ತವೆ. ಎಷ್ಟು ಹುಡಿಕಿಸಿದರೂ ಮಗು ಸಿಗಲೇ ಇಲ್ಲ.

ಒಂದು ದಿನ ಕಾನಬೆಟ್ಟು ಅರಮನೆಯ ಕೂಸಾಳು ಅಕ್ಕಚ್ಚು ಸೊಪ್ಪು ತರುವುದಕ್ಕಾಗಿ ಕಾಡಿಗೆ ಹೋದಾಗ ದೂಪದ ಮರದ ದೊಡ್ಡ ಪೊಟರೆಯಲ್ಲಿ ಮಗುವನ್ನು ಜೋಡು ಹುಲಿಗಳು ಸಾಕುವುದನ್ನು ಕಂಡು ಓಡೋಡಿ ಅರಮನೆಗೆ ಬಂದು ತಿಳಿಸುತ್ತಾನೆ. ಕಾನಬೆಟ್ಟಿನ ಅರಮನೆಯ ಮಂಜುಲ್ಲ ಪೆರ್ಗಡೆಯವರು ಜನರನ್ನು ಕೂಡಿಕೊಂಡು

ಹುಲಿಯಿದ್ದ ಜಾಗಕ್ಕೆ ಹೋಗಿ ಹುಲಿಗಳಿಗೆ ಕೈ ಮುಗಿದು ಪ್ರಾರ್ಥಿಸಿಕೊಂಡು ಈ ಮಗುವನ್ನು ನನಗೆ ಕೊಟ್ಟರೆ ನಾನಿದನ್ನು ಸಾಕುತ್ತಿದ್ದೆ ಎನ್ನುತ್ತಾರೆ. ಇದನ್ನು ಕೇಳಿದ ಹುಲಿಗಳು ಮಗುವನ್ನು ಬಿಟ್ಟು ಹೋಗುತ್ತವೆ. ಅಜ್ಜನವರು ಮಗುವನ್ನು ಹಿಡಿದುಕೊಂಡು ತನ್ನರಮನೆಗೆ ಬರುತ್ತಾರೆ.

ಇತ್ತ ಸೊನ್ನೆ ಅರಮನೆಯಲ್ಲಿ ತನಗೆ ಹಾಲು ಕುಡಿಯಲು ಗಿಂಡೆ ಬೇಕೆಂದು ಹಠ ಹಿಡಿದು ಕೂಗುತ್ತಿದ್ದಳು. ಇದನ್ನು ಕಂಡ ಪೆರ್ಗಡೆಯವರು ಮಗುವನ್ನು ಹತ್ತಿರ ಕರೆದು ನಿನಗೆ ಗಿಂಡೆ ತಂದಿದ್ದೇನೆ ಎಂದು ಹೇಳಿ ತಂದಿರುವ ಮಗುವನ್ನು ಅವಳ ಬಳಿ ಕುಳ್ಳಿರಿಸುತ್ತಾರೆ. ಈ ಮಗುವನ್ನು ಕಂಡ ಸೊನ್ನೆ ಸಂತೋಷಗೊಂಡು ಇಬ್ಬರೂ ಅರಮನೆಯಲ್ಲಿ ಜೊತೆಯಾಗಿ ಆಟವಾಡುತ್ತಾ ಬೆಳೆಯುತ್ತಾರೆ.

ಸೊನ್ನೆಯ ಮದುವೆ

ಕರ್ಗಿಯವರ ಪಠ್ಯದಲ್ಲಿ ಉರ್ಕಿದೊಟ್ಟು ಅರಮನೆಯಲ್ಲಿ ಗುರುಮಾರ್ಲರು ಹಾಗೂ ಕೆಲೆಂಜ ಪರಾರಿಯಲ್ಲಿ ಅಣ್ಣ ಜಾರುಮಾರ್ಲರು ಆಡಳಿತ ನಡೆಸುತ್ತಿದ್ದು ಗುರುಮಾರ್ಲರು ಉರ್ಕಿದೊಟ್ಟು ನಾಲ್ಕು ತುದಿಯ ಗ್ರಾಮಿಗಳನ್ನು ಬರಹೇಳಿ ತನ್ನ ಬೀಡಿನ ಕುಂದು ಕೊರತೆಗಳನ್ನು ಕೇಳುವ ವಿವರಗಳಿವೆ. ಅವರು ಯೋಗ್ಯದ ಬೀಡಿಗೆ ಭಾಗ್ಯದ ಸಿರಿ ಬೇಕು, ಕತ್ತಲೆಯ ಕೋಣೆಗೆ ನಂದಾದೀಪ ಬೇಕೆಂದು ಹೇಳಿ ಗುರ್ಗಲಾಡಿ ಚಂದು ಪೆರ್ಗಡೆಯ ಮೊಮ್ಮಕ್ಕಳು ಇದ್ದಾರೆಂಬ ಸುದ್ದಿ ತಿಳಿದು ಹೆಣ್ಣು ನೋಡಲು ಜನ ಕಳುಹಿಸುತ್ತಾರೆ. ಗುರುಮಾರ್ಲರಿಗೆ ಸೊನ್ನೆಯ ಜೊತೆ ಮದುವೆ ನಿಶ್ಚಯವಾಗಿ ಅದ್ದೂರಿಯ ಮದುವೆ ನಡೆಯುತ್ತದೆ.

ಶ್ಯಾಮರಾಯ ಶೆಟ್ಟಿಯವರ ಪಠ್ಯದಲ್ಲಿಯೂ ಕೆರ್ಂಜ ಪರಾರಿಯಿಂದ ಉರ್ಕಿದೊಟ್ಟಿನ ಅರಮನೆಗೆ ಸೊನ್ನೆಗೆ ಮದುವೆ ಸಂಬಂಧ ಬರುವ ವಿವರ ಇದೆ. ಉರ್ಕಿದೊಟ್ಟು ಅರಮನೆಯ ಗುರುಮಾರ್ಲರಿಗೆ ಸಂಬಂಧ ಮಾತನಾಡುತ್ತಾರೆ. ಆಗ ಜಾರು ಮರ್ಲರು ಹೇಳುತ್ತಾರೆ ನೀನು ಮತ್ತೆ ಮದುವೆಯಾಗು ಸೊನ್ನೆಯನ್ನು ನಾನು ಮದುವೆಯಾಗುತ್ತೇನೆ ಎಂದು. ಗುರುಮಾರ್ಲರು ಒಪ್ಪದ ಕಾರಣ ಅಣ್ಣ ಮತ್ತು ತಮ್ಮನ ನಡುವೆ ವಾದ, ನ್ಯಾಯ ಬರುತ್ತದೆ. ಜಾರುಮಾರ್ಲರು ಬೇಸರಿಸಿಕೊಂಡು ಹೋಗಿ (ಕಾನೆಬೆಟ್ಟಿನಲ್ಲಿ ಎಂದಿದೆ) ಕೆದಿಂಜ ಪರಾರಿಯ ಅರಮನೆಯಲ್ಲಿ ಕುಳಿತುಕೊಳ್ಳುತ್ತಾರೆ. ಗುರುಮಾರ್ಲರು ಉರ್ಕಿದೊಟ್ಟು ಅರಮನೆಯಲ್ಲೇ ಉಳಿಯುತ್ತಾರೆ. ಇತ್ತ ಕಾನಬೆಟ್ಟಿನ ಅಜ್ಜನವರು ಸೊನ್ನೆಯನ್ನು ಉರ್ಕಿದೊಟ್ಟು ಅರಮನೆಯ ಗುರುಮಾರ್ಲರಿಗೆ ಧರ್ಮದಾರೆ ರೆದು ಕೊಟ್ಟು ವೈಭವದಿಂದ ಮದುವೆ ಮಾಡುತ್ತಾರೆ. ಸೊನ್ನೆಯ ಮದುವೆ ಕಳೆದು ವರ್ಷ ಆರು ಕಳೆದರೂ ಆಕೆ ಋತುಮತಿ ಯಾಗುವುದಿಲ್ಲ. ಇತ್ತ ಅಣ್ಣ ಜಾರುಮಾರ್ಲರು ನಾನಿನ್ನು ಬ್ರಹ್ಮಚಾರಿಯಾಗಿಯೇ ಉಳಿಯು ತ್ತೇನೆಂದು ಹೇಳುತ್ತಾರೆ. ಸೊನ್ನೆಯನ್ನು ಉರ್ಕಿದೊಟ್ಟಿಗೆ ಮದುವೆ ಮಾಡಿಕೊಡುತ್ತಾರೆ. ಆಕೆಯ ಸಹಾಯಕ್ಕೆ ಗಿಂಡೆಯನ್ನು ಕರೆದುಕೊಂಡು ಹೋಗುವ ವಿವರ ಇದೆ.

ಅಮೃತರ ಸಂಗ್ರಹಿತ ಪಠ್ಯದಲ್ಲಿ ಸೊನ್ನೆಗೆ ಉರ್ಕಿದೊಟ್ಟಿನ ಗುರುಮಾರ್ಲರಿಂದ ಮದುವೆ ಸಂಬಂಧ ಬರುತ್ತದೆ. ಇತ್ತ ಎಲ್ಯಜ್ಜೆರ್ (ಕಾನ ಬೆಟ್ಟಿನ ಅಜ್ಜನವರನ್ನು ಸಣ್ಣ ಅಜ್ಜನವರೆಂದು ಕರೆಯಲಾಗಿದೆ) ಮದುವೆ ಸಂಬಂಧಕ್ಕೆ ಒಪ್ಪಿಗೆ ನೀಡಿ ಮಂಗಳವಾರದಂದು ಸಿಂಹರಾಶಿಯಲ್ಲಿ ಸೂರ್ಯೋದಯಕ್ಕೆ ಸರಿಯಾಗಿ ಮದುವೆ ನಡೆಯಬೇಕು. ನಾವು ದಿಬ್ಬಣ ತರುತ್ತೇವೆಂದು ಹೇಳಿದರು. ಹೀಗೆ ನಿಗದಿತ ಮುಹೂರ್ತಕ್ಕೆ ಸರಿಯಾಗಿ ಆರ್ಯ ಬನ್ನಾಯ ಬಳಿಯ ಸತ್ಯಮಲೋಕದ ಸಿರಿಯ ಮಗಳನ್ನು ಉರ್ಕಿತೋಟದ ಬಂಗೇರ ಬಳಿಯ ಗುರುಮಾರ್ಲರಿಗೆ ಮದುವೆ ಮಾಡಿಕೊಟ್ಟು ಹೆಣ್ಣೊಪ್ಪಿಸಿಕೊಡುತ್ತಾರೆ. ಮದುವೆ ಕಳೆದು ವರ್ಷ ಕಳೆದರೂ ಸೊನ್ನೆ ಮುಟ್ಟಾಗದಿರುವ ಬಗೆಗಿನ ವಿವರಗಳಿವೆ.

ಗಿಡಿಕೆರೆಯವರ ಪಠ್ಯದಲ್ಲಿ ಕೆದಿಂಜೆ ಪರಾರಿಯಲ್ಲಿ ಇದ್ದಾರೆ ಅಣ್ಣ ಜಾರುಮಾರ್ಲರು, ಉರ್ಕಿತೋಟದ ಅರಮನೆಯಲ್ಲಿ ಇದ್ದಾರೆ ತಮ್ಮ ಗುರುಮಾರ್ಲರು. ಕಾನೆಬೆಟ್ಟಿನ ಅರಮನೆಯಲ್ಲಿ ಸೊನ್ನೆ ಇದ್ದಾಳೆ. ತಮ್ಮ ಗುರುಮಾರ್ಲನಿಗೆ ಸಂಬಂಧ ಬೆಳೆಸಬೇಕೆಂದು ಅಣ್ಣ ಜಾರು ಮಾರ್ಲರು ಹೇಳುತ್ತಾರೆ. ನೆರೆಕರೆ ಸೇರಿಸಿ ಕಾನಬೆಟ್ಟಿಗೆ ಹೋಗುತ್ತಾರೆ. ಸೊನ್ನೆ ಏನೂ ತಿಳಿಯದ ಸಣ್ಣ ಪ್ರಾಯದವಳು ಎನ್ನಲು ನನ್ನ ತಮ್ಮನಿಗೂ ಏನೂ ತಿಳಿಯದು. ಇಬ್ಬರಿಗೂ ಸರಿ ಜೋಡಿ ಎಂದರು. ಅಜ್ಜನವರಲ್ಲಿ ಸೊನ್ನೆಯ ಬಳಿ (ವಂಶಾವಳಿ) ತಿಳಿಸಬೇಕು, ಇಂದೇ ನಿಶ್ಚಯ ಮಾಡಬೇಕೆಂದರು.

ತುಳುಪಠ್ಯ

ಸೊನ್ನೆನ ಬರಿಗೆನಾ ಕೆದಿಂಜ ಪರಾರಿ ಜಾರುಮರ್ಲ ಕೇನಿದನಗೆನಾ
ಪುತ್ರ ಬನ್ನಾರ್‌ಗೆನಾ ಸೊನ್ನೆಗೆನಾ ಸಿರಿನ ಮಗಲ್‌ಗೆನಾ
ನಿನ್ನ ಬರಿಮಗಾ ಈಯಾಂಡ ತೆರಿಪ್ಪುಲಾಂದೆರ್ ಅಜ್ಜೆರ್ ಪನ್ನಾಗ
ನಾರಾಯಣ ಅಜ್ಜೆರೇ ಕೇಂಡಾರ ಪನ್ಪೆರಾ ಜಾರು ಮರ್ಲೆರ್
ಆರಿಯ ಬಣ್ಣಾಕುಲುಂದ್‌ದ್ ಬರಿಬಣ್ಣ ತೆರಿಪ್ಪುವೆರ್

ಕನ್ನಡಾನುವಾದ

ಸೊನ್ನೆಯ ಬಳಿ ಕೆದಿಂಜ ಪರಾರಿಯ ಜಾರು ಮರ್ಲರೇ ಕೇಳಿದ್ದೀರೇ
ಪುತ್ರ ಬನ್ನಾಯ ಬಳಿ ಸೊನ್ನೆ ಸಿರಿಯ ಮಗಳು ಎಂದರು
ನಿನ್ನ ಬಳಿಯನ್ನು ನೀನಾದರೂ ತಿಳಿಸು ಮಗಾ ಎಂದು ಅಜ್ಜನವರು ಹೇಳುವಾಗ
ನಾರಾಯಣ ಅಜ್ಜನವರೇ ಕೇಳಿರಿ ಎಂದರು ಜಾರು ಮರ್ಲರು
ಆರ್ಯಬನ್ನಾಯ ಎಂದು ಬಳಿಯನ್ನು ತಿಳಿಸುತ್ತಾರೆ (ಪುಟ 212).

ಹೀಗೆ ಬಳಿಯನ್ನು ತಿಳಿದುಕೊಂಡು ನಿಶ್ಚಯ ತಾಂಬೂಲ ಬದಲಿಸಿಕೊಂಡು ಮದುವೆಗೆ ದಿನ ನಿಶ್ಚಯಿಸುತ್ತಾರೆ. ಕಾನಬೆಟ್ಟಿನ ಮನೆಯಲ್ಲಿ ಮದುವೆ ನಡೆಯುತ್ತದೆ.

ಮದುಮಗನ ದಿಬ್ಬಣ ಕಾನಬೆಟ್ಟಿಗೆ ಬರುತ್ತದೆ. ವೈಭವದ ಮದುವೆ ನಡೆದು ದಿಬ್ಬಣ ಉರ್ಕಿದೊಟ್ಟಿಗೆ ಹೋಗುತ್ತದೆ. ಅಲ್ಲಿಯೂ ಮದುಮಗ–ಮದುಮಗಳಿಗೆ ಆರತಿ ಮಾಡಿ ಕಂಚು ಇಟ್ಟು ಸೇಸೆ ನಡೆಸುತ್ತಾರೆ. ಹೀಗೆ ಕಾನಬೆಟ್ಟಿನಿಂದ ಉರ್ಕಿದೊಟ್ಟಿಗೆ, ಇಲ್ಲಿಂದ ಅಲ್ಲಿಗೆ ಹೋಗಿ ಬರುವ ವಿಚಾರ ಇದೆ. ಗಿಡಿಕೆರೆಯವರ ಕಾವ್ಯದ ವಿಶೇಷತೆಯೆಂದರೆ ಸಿರಿಯ ಬಳಿಯನ್ನು ಅವರು ಪುತ್ರಬನ್ನಾಯ ಎಂದು ಕರೆದಿರುವುದು. ಹೀಗಾಗಿ ಸಿರಿಯ ಮಗಳಾದ ಸೊನ್ನೆಯ ಬಳಿಯೂ ಪುತ್ರ ಬನ್ನಾಯ ಎಂದು ತಿಳಿಸಿ ಆರ್ಯ ಬನ್ನಾಯ ಬಳಿಯ ಗುರುಮಾರ್ಲರೊಂದಿಗೆ ಮದುವೆ ನಡೆಯುತ್ತದೆ. ಸಿರಿಯ ಗಂಡನಾದ ಕಾಂತುಪೂಂಜರ ಬಳಿಯೂ ಆರ್ಯಬನ್ನಾಯ ಎಂದು ಗಿಡಿಕೆರೆಯವರ ಕಾವ್ಯದಲ್ಲಿ ಮಾತ್ರ ವ್ಯಕ್ತವಾಗಿದೆ. ಒಟ್ಟು ಗಿಡಿಕೆರೆಯವರ ಕಾವ್ಯವನ್ನು ಗಮನಿಸುವಾಗ ಒಂದೇ ಬಳಿಯ ನಡುವೆ ಮದುವೆ ನಡೆಯಬಾರದೆಂಬ ತಿಳುವಳಿಕೆ ಅವರಿಗೆ ಇದ್ದಂತಿದೆ. ಯಾಕೆಂದರೆ ಉಳಿದ ಎಲ್ಲ ಪಠ್ಯಗಳೂ ಸತ್ಯನಾಪುರದ ಅಜ್ಜನವರ ಬಳಿ ಆರ್ಯಬನ್ನಾಯ ಎಂದು ತಿಳಿಸುತ್ತವೆ. ಹಾಗಾದರೆ ಅಜ್ಜನವರ ಮೊಮ್ಮಗಳು ಎಂದು ಸ್ವೀಕರಿಸಿರುವ ಸಾಕುಮಗುವಾದ ಸಿರಿಯ ಬಳಿಯೂ ಆರ್ಯಬನ್ನಾಯವೇ ಆಗುತ್ತದೆ. ಅಜ್ಜನವರು ಸಿರಿಯನ್ನು ಮದುವೆ ಮಾಡಿಕೊಡುವುದು ತನ್ನ ಸಹೋದರಿಯಾದ ಸಂಕರುಪೂಂಜೆದಿಯ ಮಗನಾದ ಕಾಂತುಪೂಂಜನಿಗೆ. ಇವರ ಬಳಿಯನ್ನು ಪುತ್ರಬನ್ನಾಯ ಎಂದು ಹೆಸರಿಸಲಾಗಿದೆ. ಸಂಕರುಪೂಂಜೆದಿ ಅಜ್ಜನವರ ತಂಗಿಯಾದರೆ ಅವಳ ಬಳಿಯೂ ಆರ್ಯಬನ್ನಾಯವೇ ಆಗಿರಬೇಕು. ಅವಳ ಮಗನಾದ ಕಾಂತುಪೂಂಜನ ಬಳಿಯೂ ಅದೇ ಆಗಿರುವಾಗ ಒಂದೇ ಬಳಿಯ ನಡುವೆ ಮದುವೆ ನಡೆದಂತಾಗುತ್ತದೆ. ಹೀಗಾಗಿ ರಾಮಕ್ಕ ಮುಗ್ಗೇರ್ತಿಯವರ ಪಠ್ಯವು ಈ ರೀತಿಯಲ್ಲಿ ಬಳಿಯನ್ನು ಅದಲುಬದಲು ಮಾಡಿರುವ ಸಾಧ್ಯತೆಗಳಿವೆಯೇ? ಸಿರಿಯ ಮಗಳಾದ ಸೊನ್ನೆಗೂ ಸಿರಿಯ ಗಂಡನ ಬಳಿಯಾದ ಆರ್ಯಬನ್ನಾಯ ಬಳಿಯ ಗುರುಮಾರ್ಲರ ಜೊತೆ ಮದುವೆಯಾಗಿ ಅವಳ ಬದುಕೂ ಸಿರಿಯಂತೆ ದುರಂತಮಯವಾಗುವುದನ್ನು ಕಾಣುತ್ತೇವೆ.

ಗೋಪಾಲ ನಾಯ್ಕರ ಪಠ್ಯದಲ್ಲಿ ಕಾನೆಬೆಟ್ಟು ಅರಮನೆಯಲ್ಲಿ ಸೊನ್ನೆ ಗಿಂಡೆಯರನ್ನು ಅಜ್ಜನವರು ಬಹಳ ಚೆನ್ನಾಗಿ ಬೆಳೆಸುವ ವಿವರಗಳಿವೆ. ಉರ್ಕಿದೊಟ್ಟಿನಲ್ಲಿ ಇದ್ದಾರೆ ಗುರುಮಾರ್ಲರು, ಕೆಲಿಂಜ ಪರಾರಿಯಲ್ಲಿ ಜಾರುಮಾರ್ಲರು ಇದ್ದಾರೆ. ಜಾರು ಮರ್ಲರು ಗುರುಮಾರ್ಲರನ್ನು ಕರೆದು ನಿನಗೆ ಮದುವೆಯ ಹೆಣ್ಣು ನೋಡಬೇಕೆಂದರು. ಕಾನೆಬೆಟ್ಟು ಅಜ್ಜನವರ ಮೊಮ್ಮಗಳು ಸೊನ್ನೆ ಇದ್ದಾಳೆ ಅವಳನ್ನು ಹೋಗಿ ನೋಡುವ ಎನ್ನುತ್ತಾರೆ. ಹಾಗೆ ಹೊರಟು ಅಣ್ಣತಮ್ಮ ಕಾನಬೆಟ್ಟಿನ ಕಡೆಗೆ ಬರುವುದನ್ನು ತೂಗುಯ್ಯಾಲೆಯಲ್ಲಿ ಕುಳಿತು ನೋಡಿದ ಅಜ್ಜನವರು ಈವರೆಗೆ ಬಾರದ ಗುತ್ತುಸತ್ತಿನ ಬಂಟರು ಬರುತ್ತಿದ್ದಾರೆ ಏನೆಂದು ಯೋಚಿಸಿದರು. ಅರಮನೆಗೆ ಬಂದವರನ್ನು ಸರಿಯಾಗಿ ಉಪಚರಿಸಿ ಬಂದ ವಿಷಯ ಕೇಳಿದರು. ಆಗ ಜಾರುಮಾರ್ಲರು ಹೇಳುತ್ತಾರೆ 'ಅಜ್ಜನವರೇ ಉರ್ಕಿದೊಟ್ಟಿನ ಅರಮನೆಯಲ್ಲಿ ಹೆಂಗಸರಿಲ್ಲದ ಕೊರತೆ ಇದೆ. ಅಲ್ಲಿ ಒಬ್ಬಂಟಿಯಾಗಿ ನನ್ನ ಸಹೋದರ

ಗುರುಮಾರ್ಲ 'ಗುತ್ತಿನಬಂಟ' ಎಂಬ ಹೆಸರು ಪಡೆಯುತ್ತಾ 'ಬರ್ಕೆಯಲ್ಲಿ ಬಾರಗ' ಎಂದು ಕರೆಸಿಕೊಳ್ಳುತ್ತಿದ್ದಾನೆ. ಅವನಿಗೆ ಹೆಣ್ಣು ನೋಡಲು ಬಂದವರು ನಾವು ಎನ್ನುತ್ತಾರೆ. ನಿಮ್ಮ ಮೊಮ್ಮಗಳು ಸೊನ್ನೆ ಇದ್ದಾಳೆ ಎಂಬ ವಿಷಯ ತಿಳಿದು ಅವಳನ್ನೊಮ್ಮೆ ನೋಡಲು ಬಂದದ್ದು ಎನ್ನುತ್ತಾರೆ. ಅಜ್ಜನವರು ಸೊನ್ನೆಯನ್ನು ಅಡುಗೆ ಮಾಡುವಲ್ಲಿಂದ ಕರೆದು ತೋಡಿಸಿರುವ ಕೆರೆಗೆ ಹೋಗಿ ಒಂದು ಕೊಡ ನೀರು ತರುವಂತೆ ತಿಳಿಸುತ್ತಾರೆ. (ಆ ಕಾಲದಲ್ಲಿ ಹೆಣ್ಣು ತೋರಿಸುವ ಕ್ರಮ ಹೀಗಿತ್ತು). ಅವಳು ನೀರು ತರುವಾಗ ಹೆಣ್ಣನ್ನು ನೋಡಿದ ಗುರುಮಾರ್ಲರು ಅಜ್ಜನವರಲ್ಲಿ ನಮಗೆ ಹೆಣ್ಣು ಒಪ್ಪಿಗೆಯಾಯಿತು, ಹೆಣ್ಣಿನ ಒಪ್ಪಿಗೆ ಕೇಳಿ ತಿಳಿಸಿಬಿಡಿ ಎನ್ನುತ್ತಾರೆ. ಅಂತೆಯೇ ಅಜ್ಜನವರು ಸೊನ್ನೆಯನ್ನು ಗುರುಮಾರ್ಲರ ಹಿನ್ನೆಲೆಯ ಬಗೆಗೆ ತಿಳಿಸಿ ಅಭಿಪ್ರಾಯ ಕೇಳಲು ಮೊದಲಿಗೆ ಬಂದ ಸಂಬಂಧಕ್ಕೆ ಮಾತುಕೊಡಿ ಅಜ್ಜನವರೇ ಎನ್ನುತ್ತಾಳೆ. ಸಾಲುವಳಿ ನೋಡಲು ಜ್ಯೋತಿಷ್ಯರಲ್ಲಿಗೆ ಹೋಗಿ ಕೇಳಲು ಹೆಣ್ಣು ಗಂಡಿನ ಸಾಲುವಳಿ ಸೇರಿ ಬರುತ್ತದೆ. ಮುಂದಿನ ಮಂಗಳವಾರ ಜಾನುವಾರುಗಳು ಹಟ್ಟಿಸೇರುವ ಹೊತ್ತು ಧಾರೆಗೆ ಮುಹೂರ್ತ ಎಂದರು. ಅಲ್ಲಿಂದ ಹೊರಟು ಇನ್ನು ಮದುವೆಗೆ ಹೆಚ್ಚಿನ ದಿನ ಉಳಿದಿಲ್ಲ. ಮದುವೆಯ ಸಿದ್ಧತೆಗಳು ಆದಷ್ಟು ಶೀಘ್ರವಾಗಿ ನಡೆಯಬೇಕೆಂದರು. ಮುಂದಿನ ಗುರುವಾರದಂದು ಗಂಡಿನ ಮನೆ ನೋಡುವ ಪದ್ಧತಿಯಂತೆ ನಾವು ನಾಲ್ಕು ಮಾಗಣೆಯ ಮುಖ್ಯಸ್ಥರನ್ನು ಕೂಡಿಕೊಂಡು ಬರುತ್ತೇವೆ ಎಂದರು. ಅಂದೇ ತಾಂಬೂಲ ಬದಲಿಸಿ ನಿಶ್ಚಯದ ಕ್ರಮ ಮಾಡಿಕೊಂಡರು. ಗಂಡಿನ ದಿಬ್ಬಣ ಕಾನಬೆಟ್ಟಿಗೆ ಬರುತ್ತದೆ. ಅಜ್ಜನವರು ಊರ ಮುಖಂಡರ ಸಮ್ಮುಖ ದಿಬ್ಬಣವನ್ನು ಸ್ವಾಗತಿಸಿ ಧಾರೆಯ ಮುಹೂರ್ತದ ಹೊತ್ತಿಗೆ ಸರಿಯಾಗಿ ಧಾರೆ ಎರೆದರು. ಹೂಮಾಲೆ ಪರಸ್ಪರ ಹಾಕಿಕೊಂಡರು. (ಗೋಪಾಲ ನಾಯ್ಕರ ಪಠ್ಯದಲ್ಲಿ ಮದುವೆಯ ಆಧುನಿಕ ಕ್ರಮಗಳಾದ ಬ್ರಾಹ್ಮಣರಲ್ಲಿ ಜಾತಕ ಕೇಳುವ, ತಾರಾಬಲ ನೋಡುವ, ನಕ್ಷತ್ರ ಕೇಳುವ, ಮದುವೆಯಲ್ಲಿ ಹಾರ ಬದಲಾಯಿಸಿಕೊಳ್ಳುವ ವಿವರಗಳು ಹೆಚ್ಚಾಗಿ ಇವೆ). ಮದುವೆಯ ಊಟೋಪಚಾರವಾಗಿ ಎಲೆಅಡಿಕೆ ತಿಂದು ನೆಂಟರು ನಮಗೆ ಹೊರಡುವ ಹೊತ್ತಾಯಿತು. ದಿಬ್ಬಣ ಇಳಿಸಿಕೊಡಿ ಅಜ್ಜನವರೇ ಎಂದರು. ಅಜ್ಜನವರು ಸೊನ್ನೆಯ ಕೈ ಹಿಡಿದು "ಸಂತಾನವಿಲ್ಲದ ನನಗೆ ದೇವರು ಬೆರ್ಮೆರ್ ಕೊಟ್ಟ ಫಲ ಇದು. ಈವರೆಗೆ ಕಾನಬೆಟ್ಟಿನರಮನೆಯಲ್ಲಿ ಒಳಿತು ಕೆಡುಕು, ವಿದ್ಯೆಬುದ್ಧಿ, ಶಾಸ್ತ್ರವೇದ ಕಲಿಸಿದೆ. ಇನ್ನು ಮುಂದಕ್ಕೆ ಇವಳ ಜವಾಬ್ದಾರಿಯನ್ನು ನೀವು ನೋಡಬೇಕು" ಎಂದು ಹೇಳಿ ಅವರ ಕೈಗೆ ಕೊಡುತ್ತಾರೆ. ಹಾಗೆಯೇ ಜಾರುಮಾರ್ಲರು ಗುರುಮಾರ್ಲರ ಕೈ ಹಿಡಿದು ಅಜ್ಜನವರೇ ಈವರೆಗೆ ನನ್ನ ತಮ್ಮನಿಗೆ ಒಂದು ತಿಳಿದರೆ ಇನ್ನೊಂದು ತಿಳಿಯದು. ಈತನಿಗೆ ವಿದ್ಯೆ ಇದ್ದರೆ ಬುದ್ಧಿ ಇಲ್ಲ, ಬುದ್ಧಿ ಇದ್ದರೆ ವಿದ್ಯೆ ಇಲ್ಲ. ಈತನನ್ನು ನಿಮ್ಮ ಮೊಮ್ಮಗನೆಂದು ಪರಿಗಣಿಸಿ ಮುಂದಿನ ಇವನ ಒಳಿತನ್ನು ನೀವು ನೋಡಬೇಕೆಂದು ಹೇಳುತ್ತಾರೆ.

ತುಳುಪಠ್ಯ

ಬುದ್ದಿ ತತ್ತ್‌ದ್ ಪಾತೆರ್ಯೆ‌ಂಡ ಬುದ್ದಿ ಪಂಡೊಂದು ಬುದ್ದಿ ಕಲ್ಪಾವೊಂದು
ಈರ್ ಇಪ್ಪುಲೆ ಅಜ್ಜೆರೆಂದ್ ಪಂಡೆರ್ ಕೆಲೆಂಜ ಪರಾರಿದ ಜಾರುಮರ್ಲೆ
ಆಣನ್ ಒಚ್ಚಿತ್ತ್‌ದ್ ಅಜ್ಜೆರೆ ಕೈಟ್ ಕೊರ್ಪೆರ್ ನಾರಾಯಿನ ಕಾನಬೊಟ್ಟುದ ಪೆರಿಯ
ಮುಂದಿಲ್‌ಡ್

ಕನ್ನಡಾನುವಾದ

ಬುದ್ಧಿ ತಪ್ಪಿ ಮಾತನಾಡಿದರೆ ಬುದ್ಧಿ ಹೇಳಿ ತಿದ್ದಿಬಿಡಿ
ನೀವು ಅಜ್ಜನವರೇ ಎಂದು ಕೆಲಿಂಜ ಪರಾರಿಯ ಜಾರುಮರ್ಲ ಹೇಳಿ
ಗಂಡನ್ನು ಒಪ್ಪಿಸಿ ಅಜ್ಜನವರ ಕೈಯಲ್ಲಿ ಕೊಡುತ್ತಾರೆ ನಾರಾಯಣ ಕಾನಬಟ್ಟಿನ ಮನೆಯ
ಮುಂದಿದೆ (ಪುಟ 556).

ಎಲ್ಲ ಮದುವೆಗಳ ಕೊನೆಗೆ ಹೆಣ್ಣನ್ನು ಗಂಡಿನ ಕಡೆಯವರಿಗೆ ಒಪ್ಪಿಸಿಕೊಡುವ ವಿಧಿ ಇದೆ. ತುಳುವಲ್ಲಿ ಇದನ್ನು 'ಪೊಣ್ಣೊಚ್ಚಿದ್ ಕೊರ್ಪಿನಿ' (ಹೆಣ್ಣೊಪ್ಪಿಸಿ ಕೊಡುವುದು) ಎನ್ನುತ್ತಾರೆ. ಇದು ಮದುವೆಯ ಕೊನೆಯ ಭಾಗ ಹಾಗೂ ತವರು ಮನೆಯವರಿಗೆ ಹೆಣ್ಣಿನ ಜವಾಬ್ದಾರಿಯನ್ನು ಗಂಡಿನ ಮನೆಯವರಿಗೆ ಒಪ್ಪಿಸಿ ಕೊಡುವ ಕಷ್ಟದ, ದುಃಖದ ಕೆಲಸವೂ ಹೌದು. ಗಂಡನ್ನು ಹೆಣ್ಣಿನ ಕಡೆಯರಿಗೆ ಒಪ್ಪಿಸಿ ಕೊಡುವ ಕ್ರಮ ಇರುವುದು ತಿಳಿದಿಲ್ಲ. ಬಹುಶಃ ಹೆಣ್ಣನ್ನು ಒಪ್ಪಿಸಿಕೊಟ್ಟ ಹಾಗೆ ಗಂಡನ್ನೂ ಒಪ್ಪಿಸಿಕೊಡುವ ಕ್ರಮ ಆ ಕಾಲದಲ್ಲಿ ಇತ್ತೇ ಎಂಬುದನ್ನು ಗೋಪಾಲ ನಾಯ್ಕರ ಪಠ್ಯದ ಈ ಹೊಸ ವಿವರಗಳಿಂದ ತಿಳಿದುಕೊಳ್ಳಬಹುದು.

ಕಾನಬೆಟ್ಟಿನ ಅರಮನೆಯಿಂದ ಸೊನ್ನೆಯನ್ನು ಕರೆದುಕೊಂಡು ದಿಬ್ಬಣ ಉರ್ಕಿದೊಟ್ಟಿಗೆ ಬರುತ್ತದೆ. ಅರಮನೆ ಪ್ರವೇಶಿಸುವ ಮೊದಲು ದೃಷ್ಟಿ ತೆಗೆದು ಆರತಿ ಬೆಳಗಿ ಚಾವಡಿಯಲ್ಲಿ ಕುಳ್ಳಿರಿಸಿಹಾಲು ಕೊಡುತ್ತಾರೆ. ಗುರುಮಾರ್ಲ ಹಾಲು ಸ್ವಲ್ಪ ಕುಡಿದು ಸೊನ್ನೆಗೆ ನೀಡುತ್ತಾರೆ. ಹೀಗೆ ಉರ್ಕಿದೊಟ್ಟಿನ ಅರಮನೆಯಲ್ಲಿ ಗಂಡ ಹೆಂಡತಿ ಎಣೆ ಹಕ್ಕಿಗಳಂತೆ, ಸೂಜಿ ನೂಲಿನಂತೆ ಒಂದಾಗಿ, ಒಟ್ಟಾಗಿ ಅನ್ಯೋನ್ಯವಾಗಿ ಇದ್ದಾರೆ.

ರಾಮಕ್ಕ ಅವರ ಪಠ್ಯವು ಸೊನ್ನೆಗಿಂಡೆ ಮಕ್ಕಳು ಗೆರಟೆಯಲ್ಲಿ, ಮರಳಿನಲ್ಲಿ ಆಟವಾಡುತ್ತಾ ಬೆಳೆಯುವ ಹೊತ್ತಿಗೆ ಗುರುಮಾರ್ಲರು ಹಾಗೂ ಜಾರುಮರ್ಲರು ಮದುವೆ ಸಂಬಂಧ ಮಾತನಾಡುವುದಕ್ಕಾಗಿ ಕಾನಬೆಟ್ಟಿಗೆ ಬರುತ್ತಾರೆ. ಸೊನ್ನೆಯನ್ನು ಗುರುಮಾರ್ಲರಿಗೆ ಮದುವೆ ಮಾಡಿಕೊಡಬೇಕೆಂದು ಹಠ ಹಿಡಿಯುತ್ತಾರೆ. ಕೊನೆಗೆ ಅಜ್ಜನವರು ಒಪ್ಪಿ ಗುರುಮಾರ್ಲರ ಜೊತೆ ಸೊನ್ನೆಯ ವಿವಾಹವಾಗುತ್ತದೆ. ಬಹಳ ಸಂತೋಷದಿಂದ ಉರ್ಕಿದೊಟ್ಟಿನ ಅರಮನೆಯಲ್ಲಿ ಕಾಲ ಕಳೆಯುತ್ತಿದ್ದಾರೆ.

ಲೀಲಾ ಅವರ ಪಠ್ಯದಲ್ಲಿ ಸೊನ್ನೆಗೆ ಏಳು ಏಳೂವರೆ ಪ್ರಾಯವಾಗುವಾಗ

ಅಂಗಡಿಜಾಲ ಬರ್ಕೆಯ ಬಾಮುಕೆಲ್ಲರು, ಉರ್ಕಿದೊಟ್ಟಿನ ಗುರುಮಾರ್ಲರು ಹಾಗೂ ಕೇಂರ್ಜ ಪರಾರಿಯ ಜಾರುಮರ್ಲರು ಕಾನಬೆಟ್ಟಿನರಮನೆಗೆ ಮದುವೆ ಸಂಬಂಧ ಮಾತನಾಡುವುದಕ್ಕಾಗಿ ಹೋಗುತ್ತಾರೆ. ಹಾಗೂ ಎಲ್ಲ ಪಠ್ಯಗಳಂತೆ ಗುರುಮಾರ್ಲರ ಜೊತೆ ಸೊನ್ನೆಯ ವಿವಾಹವಾಗುತ್ತದೆ.

ಗಿಂಡೆಯ ನೀರ ಪೆರತ್ತ (ಋತುಮತಿಯಾದುದರ ಆಚರಣೆ)

ಕರ್ಗಿಯವರ ಪಠ್ಯವು ಗುರ್ಗಲಾಡಿ ಅರಮನೆಯಲ್ಲಿ ಗಿಂಡೆ ಮೈಯಿನೆರೆಯುವುದನ್ನು ತಿಳಿಸುತ್ತದೆ. ಊರ ಹೆಂಗಸರು ಸೇರಿ ಋತುಮತಿಯಾದುದರ ಆಚರಣೆ (ತುಳುವಿನಲ್ಲಿ ನೀರ ಪೆರತ್ತ ಅಥವಾ ಮದ್ಮಲ್‌ಮದ್ಮೆ) ಯನ್ನು ನೆರವೇರಿಸಲು ಸಿದ್ಧತೆ ನಡೆಸುತ್ತಾರೆ. "ಅಕ್ಕ ಸೊನ್ನೆ ಇನ್ನೂ ಮುಟ್ಟಾಗಲಿಲ್ಲ. ಅವಳು ಬಂಜೆ, ಬರಡು. ಅವಳು ತಂಗಿಯ ಆಚರಣೆಗೆ ಬಂದರೆ ನಾವು ಇಲ್ಲಿ ನಿಲ್ಲಬಾರದು" ಎಂದು ಮಾತನಾಡಿಕೊಳ್ಳುತ್ತಾರೆ. ಋತುಮತಿಯಾದುದರ ಆಚರಣೆಗೆ ಸೊನ್ನೆಗೆ ಆಮಂತ್ರಣವೂ ಹೋಗುವುದಿಲ್ಲ. ಆದರೂ ತನ್ನ ಗಂಡನಲ್ಲಿ ಹಠ ಕಟ್ಟಿ ತಾನು ಈ ಕಾರ್ಯಕ್ಕೆ ಹೊರಡುತ್ತಾಳೆ. ಆಗ ಗುರುಮಾರ್ಲರು ನೀನು ಮಾನದಿಂದ ಹೋಗಿ ಮಾನದಿಂದ ಬರುವುದಾದರೆ ಅಡ್ಡಿಯಿಲ್ಲ. ಮಾನ ತೆಗೆದುಕೊಂಡು ಬಂದರೆ ಅರಮನೆಯಲ್ಲಿ ಸೇವಕಿಯಾಗಿ ಇರಬೇಕಾದೀತು ಎಂದು ಹೇಳಿ ಕಳುಹಿಸುತ್ತಾರೆ. ಅಂತೆಯೇ ಸೊನ್ನೆ ಹೊರಟು ಗುರ್ಗಲಾಡಿಗೆ ಹೋಗುತ್ತಾಳೆ. ಸೊನ್ನೆಯ ದಂಡಿಗೆ ದೂರದಿಂದ ಬರುವುದನ್ನು ಕಂಡ ಊರವರು "ಸೊನ್ನೆ ಬಂಜೆ ಬರಡು. ಅವಳು ಇಲ್ಲಿ ಇರುವುದು ನಮಗೆ ಅವಮಾನ" ಎಂದು ತಿಳಿದು ತಮ್ಮ ತಮ್ಮ ಕೆಲಸಗಳನ್ನು ಬಿಟ್ಟು ಹೊರಡುತ್ತಾರೆ. ಚಂದು ಪೆರ್ಗಡೆಯವರು ಎಷ್ಟು ಸಮಾಧಾನಿಸಿದರೂ ಅವರು ಕೇಳುವುದಿಲ್ಲ. ಕೊನೆಗೆ ಚಂದುಪೆರ್ಗಡೆಯವರು ಹೊರಟು ಕಂಬಳದ ಗದ್ದೆಯ ಬದುವಿಗೆ ಬಂದು ಈ ದಿನ ನೀನು ನಿನ್ನ ತಂಗಿಯ ಚಂದ ನೋಡಲು ಬರಬೇಡ ಮಗಳೇ. ಊರ ಹೆಂಗರಿಂದ ಅವಮಾನವಾಗುವುದನ್ನು ನಾನು ನೋಡಲಾರೆ ಎನ್ನುತ್ತಾರೆ. ಇದಕ್ಕೆ ಸೊನ್ನೆ ಒಪ್ಪಿ ತಾನು ಗದ್ದೆಯ ಬದಿಯಲ್ಲಿ ನಿಂತೇ ಗಿಂಡೆಯ ಅಂದ ನೋಡುವುದಾಗಿ ತಿಳಿಸುತ್ತಾಳೆ.

ಇತ್ತ ಗಿಂಡೆಯನ್ನು ಮದುಮಗಳಂತೆ ನಾಲ್ಕು ಊರಿನ ಹೆಂಗಸರ ನಾಲ್ಕು ಕರಂಡೆ (ಪೆಟ್ಟಿಗೆ) ಆಭರಣಗಳನ್ನಿಟ್ಟು ಸಿಂಗರಿಸಿ ಋತುಮತಿಯಾದುದರ ಕಾರ್ಯವನ್ನು ಮುಂದುವರಿಸುತ್ತಾರೆ. ಇದೆಲ್ಲದರ ಅಂದ ನೋಡಿದ ಸೊನ್ನೆ ಕೊನೆಗೆ ಸಿಟ್ಟುಗೊಂಡು ಗದ್ದೆ ಬದಿಯಲ್ಲೇ ನಿಂತು ಮೂರು ಹಿಡಿ ಮಣ್ಣು ತೆಗೆದು ತನ್ನ ತಾಯಿ ಸಿರಿಯನ್ನು ಸ್ಮರಿಸಿ ಈ ಮಾತುಗಳನ್ನು ಹೇಳುತ್ತಾಳೆ.

ತುಳುಪಠ್ಯ

ಬಡೆಕ್ಕಾಯಿ ಲಂಕೆಲೋಕನಾಡ್‌ಡ್ ಆನೆ ಕಲ್ಲ ಅಡ್ಡೊಡು ದಂಬೆಕಲ್ಲ ದುಂಬುಡೂ
ಗಜಮರತ್ತ ಕೊಡಿನಿರೆಲ್‌ಡ್ ಕಾಂಟ್ಯದ ಅಯ್ಯೋಜಿಡ್ ಓ ಮಡಾಯಿದ ಮುರ್ಪೊಡು

ಗಂದೊದ ಗುಲಿಗೆಡ್ ಪಿಂಗಾರೊದ ಎಸಲ್‌ಡ್ ಓಮೊದ ಗುರಿಟ್ಟಪ್ಪೆರೇ
ಒಕ್ಕೆತ್ರಿ ಒಂಸೊಡು ಪಾರ್ವತಿ ಜನನೊಡ್ದು ಕೋಡೆಗ್ ಉದಿಪ್ಪಾನೊ
ಓ ಅಜ್ವತ್ತಾಜಿ ಕೋಟಿ ನಾಗಬೆರ್ಮೆರ್ ಬಲಬಾಗೊಡು ಮುಪ್ಪತ್ತಮೂಜಿ ಕೋಟಿ ದೇವೆರೆ ಎಡಭಾಗೊಡು
ಕೋಡೆಗ್ ಜನನೊ ಆತಿ ಅಪ್ಪೆರೆ ಸತ್ಯದ ಪಲೊಟ್ಟು ಸತ್ಯಮಲೋಕಂದ ಸಿರಿ
ಸತ್ಯೊಡು ಉದಿಪ್ಪಾನ ಆತಿನಾರಂದ್‌ಂಡಾ ಮಾಯೊದೆನ್ನಪ್ಪೆರ್ ಓ ಕೇನ್‌ಲೆಯೇ
ಮಾಯೊದ ಬಂಜಿಡೇ ಜೋಗದ ಗರ್ಭೊಡು ಓ ಈರೆ ಬಂಜಿಡ್ದೇ ಬಲಿರ್‌ದ್ ಬತ್ತಿ ಮಗಲ್
ಯಾನ್ ಸೊನ್ನೆ ಅಂದ್‌ಂಡಪ್ಪೆರೇ ಒಂಜಿ ಕೊಂಡೆ ಕೈಪೆ ಪರ್‌ಜಂಡಲಾ
ಒಂಜಿ ತಿಪ್ಪೀ ಬೆಂದ್ರ್ ಮೀಯಂದೆ ಇತ್‌ಂಡಲಾ
ಅಲಿಕುಂಜ ಪಿಲಿಕುಂಜ ಕಾಡ್‌ಡ್ ಓ ಪೆದ್ದ್ ಪೆದ್ಮಾನ ಬುಡ್ತರ್ಡಲಾ ಓ
ಈರೆ ಸತ್ಯೊಡು ಓ ಅಪ್ಪೆರೇ ಎನ್ನ ಮೆಗ್‌ದಿ ಗಿಂಡೆನ್ ಮಾಯ ಸುಪೊರ್ ಮಲ್ಪುಬೆಪ್ಪೆರೆಂದೊಲೋ

ಕನ್ನಡಾನುವಾದ

ಬಡಗಣ ಲಂಕೆಲೋಕನಾಡಲ್ಲಿ ಆನೆಕಲ್ಲ ಅಡ್ಡದಲ್ಲಿ ದಂಬೆಕಲ್ಲ ಎದುರಿನಲ್ಲಿ
ಗಜಮರದ ತುದಿನೆರಳಲ್ಲಿ ಬುಟ್ಟಿಯಲ್ಲಿನ ಫಲವಸ್ತು, ಹೆಡಿಗೆಯ ಪುಷ್ಪದಲ್ಲಿ
ಗಂಧದ ಗುಳಿಗೆಯಲ್ಲಿ ಹಿಂಗಾರದ ಎಸಳಿನಲ್ಲಿ ಹೋಮದ ಕುಂಡದಲ್ಲಿ ತಾಯಿಯವರೇ
ಒಕ್ಕೆತ್ರಿವಂಶ ಪಾರ್ವತಿಜನನದಲ್ಲಿ ನಿನ್ನೆಗೆ ಉದಯಿಸಿದ ಅರುವತ್ತಾರು ಕೋಟಿ ನಾಗಬ್ರಹ್ಮರ
ಬಲಭಾಗದಲ್ಲಿ ಓ ಮೂವತ್ತಮೂರುಕೋಟಿ ದೇವರ ಓ ಎಡಭಾಗದಲ್ಲಿ
ನಿನ್ನೆಗೆ ಜನನ ಆದ ತಾಯಿಯವರು ಸತ್ಯಮಲೋಕಂದ ಸಿರಿ ಸತ್ಯದಲ್ಲಿ ಉದಯವಾದವರು
ಹೌದಾದರೆ ಮಾಯದ ಓ ನನ್ನ ತಾಯಿಯವರೇ ಕೇಳಿ
ಮಾಯದ ಬಸಿರಲ್ಲಿ ಓ ಮಾನವ ಗರ್ಭದಲ್ಲಿ ಓ
ನಿಮ್ಮ ಗರ್ಭದಲ್ಲಿ ಬೆಳೆದು ಬಂದ ಮಗಳು ನಾನು ಸೊನ್ನೆ ಹೌದಾದರೆ ತಾಯಿಯವರೇ
ಒಂದು ಲೋಟ ಕಹಿ ಔಷಧಿ ಕುಡಿಯದಿದ್ದರೂ ಗೆರಟೆಯಲ್ಲಿ ಬಿಸಿನೀರು ಸ್ನಾನ ಮಾಡದಿದ್ದರೂ
ಅಲಿಕ್ಕುಂಜ ಪಿಲಿಕ್ಕುಂಜ ಕಾಡಿನಲ್ಲಿ ಹೆತ್ತು ನನ್ನನ್ನು ಬಿಟ್ಟಿದ್ದರೂ
ನಿಮ್ಮ ಸತ್ಯದಲ್ಲಿ ಓ ತಾಯಿಯವರೇ ನನ್ನ ತಂಗಿ ಗಿಂಡೆಯನ್ನು ಮಾಯಾ ಸ್ವರೂಪ ಮಾಡುವೆನು (ಪುಟ 406–408).

ಸತ್ಯದಲ್ಲಿ ನೀವು ಉದಯ ಆದವರಾದರೆ ಮಾಯದಲ್ಲಿ ನೀವು ಕೇಳಿರಿ. ಅಲಿಕುಂಜ

ಪಿಲಿಕುಂಜದಲ್ಲಿ ನಿಮ್ಮಲ್ಲಿ ಸತ್ಯದಲ್ಲಿ ಉದಯಿಸಿದ ಮಗಳು ನಾನಾದರೆ ಗಿಂಡೆ ಮಾಯವಾಗ ಬೇಕೆಂದು ಶಪಿಸಿ ಮಾಯ ಮಾಡುತ್ತಾಳೆ. ಇತ್ತ ನಾಲ್ಕು ಮನೆಯ ಹೆಣ್ಣುಗಳು ಗಿಂಡೆಯೂ ಇಲ್ಲ, ನಮ್ಮ ನಾಲ್ಕು ಪೆಟ್ಟಿಗೆ ಆಭರಣವೂ ಇಲ್ಲ. ಜೋಗದ (ನೈಜ) ಗಿಂಡೆ ಎಂದು ತಿಳಿದೆವು. ಇವಳು ಮಾಯದ ಗಿಂಡೆ ಎಂದು ತಿಳಿಯದಾದೆವು ಎಂಬುದಾಗಿ ತಲೆಗೆ ತಲೆ ಬಡಿಯುತ್ತಾ ದುಃಖಿಸಿದರು. ಚಂದು ಪೆರ್ಗಡೆಯವರಿಗೆ ಈ ಬೆಳವಣಿಗೆಯಿಂದ ಅತೀವ ದುಃಖವಾಗುತ್ತದೆ. ಗಿಂಡೆಯನ್ನು ಮಾಯಮಾಡಿ ಬಂದಿರುವ ವಿಚಾರವನ್ನು ಸೊನ್ನೆ ಜಾರುಮರ್ಲ ಗುರುಮಾರ್ಲರಿಗೆ ತಿಳಿಸುತ್ತಾಳೆ. ನೀನು ಕಪಟನಾಟಕದ ಮಗಳು. ಉರ್ಕಿದೊಟ್ಟಿನ ಮಾನಮರ್ಯಾದೆ ಉಳಿಸಿ ಬಂದೆ ಎನ್ನುತ್ತಾರೆ. ಹೀಗಿರಲು ಒಂದುದಿನ ಸೊನ್ನೆ ಋತುಮತಿಯಾಗದಿರುವ ಬಗೆಗೆ ಉರ್ಕಿದೊಟ್ಟುವಿನ ಮಂದಿ ಮಾತನಾಡಿಕೊಳ್ಳುವ ವಿಚಾರ ಗುರುಮಾರ್ಲರ ಮೂಲಕ ಸೊನ್ನೆಗೆ ತಿಳಿಯುತ್ತದೆ. ಮರುದಿನ ಬೆಳಗ್ಗೆದ್ದು ಸೊನ್ನೆ ಕರುಗಳನ್ನು ಬಿಟ್ಟುಕೊಂಡು ಅಜಿಲೊಟ್ಟು ಮುಜಿಲೊಟ್ಟು ಕಾಡಿಗೆ ಹೋಗುತ್ತಾಳೆ. ಅಲ್ಲಿ ಗಿರಿಗಿರಿಯಂತರದಲ್ಲಿ ಕಲ್ಲೊಂದು ಕಾಣಿಸುತ್ತದೆ ಸೊನ್ನೆಗೆ. ಕಾಡಿನ ಕೇಪುಳ ಹೂ ಕೊಯ್ದಳು ಸೊನ್ನೆ ಕಲ್ಲಿನ ಮೇಲಿಟ್ಟು ಇದೊಂದು ದೇವರ ಜಾಗವಾಗಿದ್ದೀತು ಎಂದು ನೆನೆದು ಮೂಡಣಕ್ಕೆ ಮುಖ ಮಾಡಿ ಹತ್ತು ಬೆರಳಿಂದ ವಂದಿಸಿಕೊಂಡಳು. ದೇವರನ್ನು ನೆನೆದು

ತುಳುಪಠ್ಯ

ಯಾನ್ ಮದಿಮ್ಮಲಾಯೆಡೋ ಮದಿ ಮುಟ್ಟೆಲ್ ಪೋಯೆಡಾ ಓ
ತಿಂಗೊಲಡಿ ಕುಲ್ಲುದೂ ಒರ್ಸಾಡಿ ಬಿಜ್ಜೆಲ್ಯೆಡೋ ಓ
ಓಲೆ ಅರಿತ್ತ್‌ದ್ ಅಂಕನೊ ಪಾಡ್‌ಬೆ ಮೂಂಕುತ್ತಿ ಅರ್ತ್‌ದ್ ಓ ಮುಗುಲಿ ದೀಪೆಂದ್
ಪಂಡೊಲು ಪರಕ್ಕೆ ಓ ಮುಗ್ಯೊಲು ಕೈ ಸೊನ್ನೇ ಓ..

ಕನ್ನಡಾನುವಾದ

ನಾನು ಋತುಮತಿಯಾದರೆ ಮೆಯ್ನೆದರೆ ಓ
ತಿಂಗಳ ಮುಟ್ಟಾಗಿ ವರ್ಷದೊಳಗೆ ಹೆತ್ತರೆ ಓ
ಓಲೆ ಕರಗಿಸಿ ಅಂಕಣ ಹಾಕಿಸುತ್ತೇನೆ ಮೂಗುತಿ ತೆಗೆದು ಮುಗುಳಿ ಇಡಿಸಿಯೇನು
ಹೇಳಿಕೊಂಡಳು ಹರಕೆ ಓ ಮುಗಿದಳು ಕೈ ಸೊನ್ನೇ ಓ (ಪುಟ 416).

ಹೀಗೆ ದೇವರಿಗೆ ಹರಿಕೆ ಹೇಳಿಕೊಂಡ ಮರುದಿನವೇ ಸೊನ್ನೆ ತನ್ನ ಅರಮನೆಯ ನಿತ್ಯದ ಕಾರ್ಯಗಳನ್ನು ನಿರ್ವಹಿಸುತ್ತಿರುವಾಗ ಋತುಮತಿಯಾಗುವ ವಿವರಗಳು ಇವೆ.

ಗೋಪಾಲ ನಾಯ್ಕರ ಸಂಧಿಯಲ್ಲಿ ಗಿಂಡೆ ಕಾನೆಬೆಟ್ಟಿನರಮನೆಯಲ್ಲಿ ಬೆಳಗ್ಗೆದ್ದು

ಹಾಲು ಕರೆಯಲು ಹೋದಲ್ಲಿ ಮುಟ್ಟಾಗುತ್ತಾಳೆ. ಅಜ್ಜನವರು ಬೈಲಲ್ಲೆ ಹೋದವರು ಅರಮನೆಗೆ ಬಂದು ಗಿಂಡೆಯನ್ನು ಕರೆಯಲು ಆಕೆ ಕಾಣಿಸುವುದಿಲ್ಲ.ಎಲ್ಲ ಕಡೆ ಹುಡುಕಿ ಕೊನೆಗೆ ಮಾರಿಹಟ್ಟಿಯಕಡೆ ಬಂದಾಗ ಗಿಂಡೆ ಅಲ್ಲಿ ಉಗುರು ಚಿವುಟುತ್ತಾ ನಿಂತಿರುವುದು ಕಾಣಿಸುತ್ತದೆ. ಅಜ್ಜನವರು ಕೆಳಗಿನ ಕರೆಯ, ಮೇಲಿನ ಕರೆಯ ಪಾಲವರ ಹೆಂಗಸರು, ಕೆಳಗಿನ, ಮೇಲಿನ ಉರ್ಕಿದೊಟ್ಟಿನ ಹೆಂಗಸರು, ಕೆಳಗಿನ, ಮೇಲಿನ ಕರೆಯ ಬೋಲದ ಹೆಂಗಸರನ್ನು ಬರಹೇಳಿ ಗಿಂಡೆಯನ್ನು ಕೈ ಹಿಡಿದು ಕೊಟ್ಟಿಗೆಗೆ ಕರೆತಂದು ಕೂರಿಸಿದರು. ಐದು ಬಳಿಯ ಹೆಂಗಸರು ಗಿಂಡೆಯ ತಲೆಗೆ ನೀರು ಹೊಯ್ದು ಆಕೆಯನ್ನು ಕುಳಿತುಕೊಳ್ಳಿಸಿದರು. ಎಲ್ಲರಿಗೂ ಊಟವಾದ ಮೇಲೆ ಅಜ್ಜನವರು ಹನ್ನೊಂದನೆಯ ದಿನದಂದು ಮದುಮಗಳಾದ ಮದುವೆಯ (ಋತುಮತಿಯಾದುದರ ಆಚರಣೆ) ಕಟ್ಟುಕಟ್ಟಳೆ ಮಾಡಬೇಕೆಂದರು. ದೂರದವರಿಗೆ ಓಲೆ ಕಳುಹಿಸಿ ಹತ್ತಿರದವರಿಗೆ ಹೋಗಿ ಹೇಳಿಕೆ ನೀಡಿದರು. ಉರ್ಕಿದೊಟ್ಟಿನ ಅರಮನೆಗೆ ಓಲೆಯ ಮಾನಿ ಒಸಗೆ ತೆಗೆದುಕೊಂಡು ಬಂದ. ಸೊನ್ನೆಯೂ ಗುರುಮಾರ್ಲರೂ ಬರಬೇಕೆಂದು ಓಲೆಯಲ್ಲಿ ಬರೆದು ತಿಳಿಸಲಾಗಿದೆ. ಉಕಿದೊಟ್ಟಿನ ಅರಮನೆಯಲ್ಲಿ ಗುರುಮಾರ್ಲರು ಒಸಗೆ ತಂದ ವ್ಯಕ್ತಿಗೆ ದನಕರು ಕೊಟ್ಟರೆ ಸತ್ತು ಹೋದೀತು. ಆದ ಕಾರಣ ಆತನ ಕೈಗೆ ಅಂಗೈ ಸರಪಳಿ ಮುಂಗೈ ಬಳೆ ಇಟ್ಟು ನಾಲ್ಕು ರಾಜ್ಯ, ನಾಲ್ಕು ದೇಶದಲ್ಲಿ ಹೆಸರು ಬಂದೀತು ಎಂದು ಹೇಳಿ ಜೊತೆಗೆ ಬೆಳ್ಳಿ ಝರಿಯ ಎಲೆವಸ್ತ್ರವನ್ನು ಹೆಗಲಿಗೆ ಹಾಕಿ ಅವನನ್ನು ಕಳುಹಿಸಿ ಕೊಟ್ಟರು. ಸೊನ್ನೆ ಹೇಳುತ್ತಾಳೆ ತನ್ನ ಮದುಮಗನಲ್ಲಿ 'ಮದುಮ್ಮಾಳೆ ಮದಿಮ್ಮೆಗ್ ಪೋನಗ 'ಅರಕ್ಕ್ ಕಟ್ಟುನ ಪನ್ಪಿ ಕಟ್ಟಳೆ ನಂಕ್ ಉಂಡು' (ಪುಟ 570) (ಮದುಮಗಳಾದ ಮದುವೆಗೆ ಹೋಗುವಾಗ 'ಅರಕ್ಕ್ ಕಟ್ಟುವ' ಕಟ್ಟಳೆ ನಮ್ಮಲ್ಲಿದೆ). ನಾವದನ್ನು ಕಟ್ಟಿ ಸಹಸ್ರ ಬಿರುದಾವಳಿಯಲ್ಲಿ, ಆನೆ ಪಲ್ಲಕ್ಕಿಯಲ್ಲಿ ದಂಡು ಹಿಲಾಲಿನಲ್ಲಿ ನಮಗೆ ಹೋಗಬೇಕೆಂದಳು ಸೊನ್ನೆ. ಆಗ ನಾವು ಕಾನಬೆಟ್ಟು ಅರಮನೆಗೆ ಹೋಗುವುದು ಬೇಡ ಎನ್ನುತ್ತಾರೆ ಗುರುಮಾರ್ಲರು. ಆದರೆ ಸೊನ್ನೆ ಹಠ ಕಟ್ಟುತ್ತಾಳೆ. ನಾವು ಗಿಂಡೆಯ ಅಂದ ನೋಡುವುದು ಬೇಡವೇ ಎನ್ನುತ್ತಾಳೆ. ನೀನು ಹೋಗುವುದಾದರೆ ಹೋಗು, ನಾನು ಬರಲಾರೆ ಎನ್ನಲು ಯಾಕಾಗಿ ನೀವು ಬರುವುದಿಲ್ಲ ಎಂದು ಕೇಳುತ್ತಾಳೆ ಸೊನ್ನೆ. ಉಕಿದೊಟ್ಟಿನ ಗುರುಮಾರ್ಲರು ನಾಲ್ಕು ರಾಜ್ಯ, ಸೀಮೆಯಲ್ಲಿ ಹೆಸರು ಪಡೆದವರು. ಕಾನಬೆಟ್ಟಿನರಮನೆಗೆ ಬಂದು ಮಾನ ತೆಗೆದುಕೊಂಡು, ಮುಖ ಅಡಿಗೆ ಹಾಕಿಕೊಂಡು ಬರಲಾರೆ ಎಂದರು. ಉರ್ಕಿದೊಟ್ಟಿನ ಅರಮನೆಯಲ್ಲಿ ಮಾನದಿಂದ ಮರ್ಯಾದೆಯಿಂದ ನನ್ನ ಜೊತೆ ಬಾಳಬೇಕೆಂದಿದ್ದರೆ ನೀನೂ ಹೋಗಬೇಡ ಎನ್ನುತ್ತಾರೆ. ಯಾಕೆ ನನ್ನ ತಂಗಿಯನ್ನು ನೋಡಲು ಬಿಡುವುದಿಲ್ಲ. ನನಗೆ ಹೋಗಲೇಬೇಕೆನ್ನುತ್ತಾಳೆ ಸೊನ್ನೆ. ಸೊನ್ನೆಗೆ ಸತ್ಯ ದಂಡಿಗೆ ಸಿಂಗರಿಸಿ ಕೊಟ್ಟು ಒಳ್ಳೆಯ ರೀತಿಯಲ್ಲಿ ನೀನು ಕಾನಬೊಟ್ಟಿಗೆ ಹೋಗಿ ಬಂದರೆ ನಿನಗೆ ಉರ್ಕಿದೊಟ್ಟಲ್ಲಿ ಮುಂದೆಯೂ ಪ್ರೀತಿ ದೊರೆಯಬಹುದು. ಅಪಕೀರ್ತಿ ತೆಗೆದುಕೊಂಡು ಬಂದರೆ ಉರ್ಕಿದೊಟ್ಟಲ್ಲಿ ಅರಮನೆಯ ಹೊರಗೆ ನಿಲ್ಲಬೇಕಾದೀತು

ಎನ್ನುತ್ತಾರೆ. ಸೊನ್ನೆಯನ್ನು ಎತ್ತಿ ದಂಡಿಗೆಯಲ್ಲಿ ಕೂರಿಸಿ ಕಳುಹಿಸಿಕೊಡುತ್ತಾರೆ. ಕಾನಬೆಟ್ಟು ಅರಮನೆಯ ಹೂ ಹಾಕುವ ಕಂಬಳದ ಬದುವಲ್ಲೆ ಸೊನ್ನೆಯ ದಂಡಿಗೆ ಬರುವುದನ್ನು ಕಂಡ ಕಾನಬೆಟ್ಟಿನಲ್ಲಿ ಸೇರಿದ ಹೆಂಗಸರು ತಾವು ಮಾಡುತ್ತಿರುವ ಕೆಲಸಗಳನ್ನು ನಿಲ್ಲಿಸಿದರು. ಸೊನ್ನೆ ಮಂಜ ಮರಡ್ಡೆ, ಗೋನಿಗೊಡ್ಡು, ಋತುಮತಿಯಾಗದವಳು ಅವಳು. ಅವಳು ಇಲ್ಲಿಗೆ ಬಂದರೆ ನಾವೆಲ್ಲ ಹೊರಟು ಹೋಗಬೇಕೆಂದರು. ಸೊನ್ನೆಯ ದಂಡಿಗೆ ಬಂದು ತಲಪುತ್ತಿದ್ದಂತೆ ಅಜ್ಜನವರು ಬಲು ಸಂತೋಷಿತರಾಗಿ ಸೊನ್ನೆಯನ್ನು ಕೈ ಹಿಡಿದುಕೊಂಡು ಒಳಗೆ ಕರೆದುಕೊಂಡು ಹೋಗುತ್ತಾರೆ. ಆ ಹೊತ್ತಿಗೆ ಸೇರಿರುವ ಎಲ್ಲ ಹೆಂಗಸರು ಅವರವರು ಮಾಡುತ್ತಿದ್ದ ಕೆಲಸಗಳನ್ನು ನಿಲ್ಲಿಸಿ ಎಲ್ಲವನ್ನೂ ಅಜ್ಜನವರೇ ಮಾಡಲಿ ಎಂದು ಹೇಳಿ ನಿಲ್ಲಿಸುತ್ತಾರೆ. ಇತ್ತ ಗಿಂಡೆಯ ಶೃಂಗಾರವನ್ನು ಮಾಡದಿರುವುದನ್ನು ಕಂಡ ಅಜ್ಜನವರು ಮನದಲ್ಲಿ ಬಲು ಚಿಂತಿತರಾಗುತ್ತಾರೆ. ಅಷ್ಟು ಹೊತ್ತಿಗೆ ಸೊನ್ನೆಯೇ ಗಿಂಡೆಯ ಶೃಂಗಾರ ಮಾಡಿ ಕೈ ಹಿಡಿದುಕೊಂಡು ಮೇಲುಪ್ಪರಿಗೆಯಿಂದ ಕರೆತರುತ್ತಾಳೆ. ಆಗ ಸೇರಿದ ಹೆಂಗಸರು ನಿಮ್ಮ ಮೊಮ್ಮಗಳು ಅವಳು ಗೊಡ್ಡು, ಅವಳು ಮುಟ್ಟಾಗಲಿಲ್ಲ. ಇಂಥ ಸಭೆಯಲ್ಲಿ ನಾವು ನಿಲ್ಲಲಾರೆವು, ಊಟ ಮಾಡಲಾರೆವು ಎಂದು ಹೇಳಿ ಹೊರಡುತ್ತಾರೆ. ಇದರಿಂದ ಅಜ್ಜನವರು ಬಲು ಚಿಂತಿತರಾಗುತ್ತಾರೆ. ಆಗ ಸೊನ್ನೆ ಅಜ್ಜನವರೇ ಸೇರಿದ ಸಭೆಯನ್ನು ಹೋಗಲು ಬಿಡಬೇಡಿ. ನಾನೇ ಹೊರಟು ಹೋಗುತ್ತೇನೆ. ನಾನು ಈ ಮನೆಯಲ್ಲಿ ಹಾಲುಂಡು ಬೆಳೆದ ಮಗಳು. ಇಂದಲ್ಲದಿದ್ದರೆ ನಾಳೆ ಬಂದೇನು ಎಂದು ಹೇಳಿ ಹೊರಡುತ್ತಾಳೆ. ದಂಡಿಗೆಯ ಹತ್ತಿರ ಹೋಗಿ ದಂಡಿಗೆಯ ಒಳಗಿಂದ ಕಟ್ಟಿಗೆ ಮೇಲಾದ ಸೀರೆ ತೆಗೆದು, ಪೆಟ್ಟಿಗೆಗೆ ಮೇಲಾದ ಬೆಳ್ಳಿ ಬಂಗಾರ ತೆಗೆದುಕೊಂಡು ಬಂದು ಸೇರಿದ ಸಭೆಯಲ್ಲಿ ನೀವು ಇಂದು ಹೋಗಬಾರದು. ನಾನೇ ಹೊರಟು ಹೋಗುತ್ತೇನೆ. ಅದಕ್ಕಿಂತ ಮೊದಲು ನನ್ನ ತಂಗಿಯನ್ನು ತಂದಿರುವ ಸೀರೆ ಹಾಗೂ ಆಭರಣದಿಂದ ಅಲಂಕರಿಸಿ ಹೋಗುತ್ತೇನೆ ಎಂದಳು. ಹೀಗೆ ಚಿನ್ನಾಭರಣಗಳಿಂದ ಅಲಂಕರಿಸಿದ ತಂಗಿಯ ಅಂದವನ್ನು ಕಾಲ ಉಂಗುಷ್ಠದಿಂದ ತಲೆಕೂದಲ ತುದಿಯವರೆಗೆ ನೋಡಿದ ಸೊನ್ನೆ ದಂಡಿಗೆ ಏರಿ ಹೊರಟು ಕಾನಬೆಟ್ಟಿನ ಅರಮನೆ ಬಿಟ್ಟು ಅಜ್ಜನವರು ನೆಟ್ಟ ಕೆಂದಾಳೆ ಪದ್ಮಕಟ್ಟೆಯ ಬುಡದ ಹತ್ತಿರ ಬಂದು ದಂಡಿಗೆಯಿಂದ ಇಳಿದು ಹಿಂತಿರುಗಿ ನೋಡಿ ಮಣ್ಣು ಮುಟ್ಟಿ 'ನಾರಾಯಣ ಮಗ ಗಿಂಡೆ ಕಾನಬೆಟ್ಟಿನರಮನೆಯಲ್ಲಿ ನೀನು ಮಾಯವಾಗಿ ಹೋಗೆಂದು' ಹೆಣ್ಣುಶಾಪ ನೀಡುತ್ತಾಳೆ.

ತುಳುಪಠ್ಯ

ಕಾನೆಬೊಟ್ಟುಡು ಮಾಯೊ ಆವೊಡು ಗಿಂಡ್ಯೆ ಮಗ ಈಯೆ
ಕೇಪಟಿ ಪರ್ವತೊಡು ಯಾಗೊ ಪೂಜೆ ಮಲ್ಪೊಡು ಮಗ ಓ
ಅಣ್ಣೆರೆ ಸಿರಿಪಾದೊ ತೂಲ ಮಗ ಗಿಂಡ್ಯೆ
ಅಣ್ಣೆರೆ ಸನ್ನಿದಾನೊಡು ಯಿಪ್ಪುಲ ಮಗ ಗಿಂಡ್ಯೆ

ಪೋಲ ಮಗ ಪೋಲಂದ್ ಪಂಡ್‌ದ್‌ಮಣ್ಣ್ ಮುಟ್ಟೆರ್ ಪೊಣ್ಣ ಸಾಪೊ
ಸೊನ್ನೆ ಕೊರುವಲ್ ದಾನೆ

ಕನ್ನಡಾನುವಾದ

ಕಾನಬೆಟ್ಟಿನಲ್ಲಿ ಮಾಯವಾಗಬೇಕು ಗಿಂಡ್ಯೆ ಮಗ ನೀನು
ಕೇಪಟಿ ಪರ್ವತದಲ್ಲಿ ಯಾಗ ಪೂಜೆ ಮಾಡಬೇಕು
ಅಣ್ಣನವರ ಸಿರಿಪಾದ ನೋಡ ಬೇಕು ಮಗ ಗಿಂಡ್ಯೆ
ಅಣ್ಣನವರ ಸನ್ನಿಧಾನದಲ್ಲಿ ಇರು ಮಗ ಗಿಂಡ್ಯೆ
ಹೋಗು ಮಗ ಹೋಗೆಂದು ಹೇಳಿ ಮಣ್ಣು ಮುಟ್ಟಿದಳು ಹೆಣ್ಣುಶಾಪ ಕೊಟ್ಟಳು
ಸೊನ್ನೆ (ಪುಟ 592).

ಕಾನಬೆಟ್ಟು ಅರಮನೆಯಲ್ಲಿ ಅಜ್ಜನವರ ಭೂಮಿಯಲ್ಲಿ ಸೊನ್ನೆಯ ಶಾಪದಿಂದ ಗಿಂಡೆ ಮಾಯವಾಗುತ್ತಾಳೆ. ಕೇಪಾಡಿ ಪರ್ವತಕ್ಕೆ ಹೋಗಿ ಒಬ್ಬ ಕುಮಾರನ ಜಪದಲ್ಲಿರುವ ವಿವರಗಳಿವೆ. ಸೊನ್ನೆ ಉರ್ಕಿದೊಟ್ಟಿನ ಬೈಲಲ್ಲೆ ಬರುವುದನ್ನು ದೂರದಿಂದ ನೋಡುತ್ತಾರೆ ಗುರುಮಾರ್ಲರು. ತನ್ನ ತಂಗಿಯ ಮದುಮಗಳ ಮದುವೆಯನ್ನು ಪ್ರೀತಿಯಿಂದ ನೆರವೇರಿಸಿ ಬಂದುದಾದರೆ ಆನೆ ಬಾಗಿಲಿಂದ ಹೊಕ್ಕಾಳು. ನಾಚಿಕೆ ಕೆಟ್ಟು, ಮರ್ಯಾದೆ ತೆಗೆದುಕೊಂಡು ಬಂದಿದ್ದಾದರೆ ಕಿರು ಬಾಗಿಲಿನಿಂದ ಹೊಕ್ಕಾಳು ಎಂದರು. ಅಷ್ಟು ಹೊತ್ತಿಗೆ ಸೊನ್ನೆಯ ದಂಡಿಗೆ ಹೋಗಿ ಕಿರುಬಾಗಿಲಲ್ಲಿ ನಿಂತಿತು. ಗುರುಮಾರ್ಲರು ಹೇಗೆ ಬಂದಿ ಸೊನ್ನೆ. ಹರ್ಷದಿಂದ ಬಂದರೆ ನನಗೆ ನೀನು ಹರುಷದ ಮದುಮಗಳು, ಕುರುಕುಚ್ಚನೆಯ (ಅವಮಾನದ) ಮಾತು ಕೇಳಿ ಬಂದವಳಾದರೆ ಕತ್ತೆ ಚಾಕರಿ ಮಾಡಿಸಿಯೇನು ಎಂದು ಹೋಗುವಾಗಲೇ ನಿನಗೆ ಹೇಳಿದ್ದೇನೆ ಎಂದರು. ಇಂದಿನಿಂದ ನಿನಗೆ ಅರಮನೆಯ ಮುಂದಿನ ಅಂಗಳ ಗುಡಿಸುವ, ಜಾನುವಾರುಗಳಿಗೆ ಅಕ್ಕಚ್ಚು ಇಡುವ, ಮಾರಿಹಟ್ಟಿಯಲ್ಲಿ ಜಾನುವಾರುಗಳಿಗೆ ಬೈ ಹುಲ್ಲು ಹಾಕುವ ಕೆಲಸ ಎಂದರು. ಇಂದಿನವರೆಗೆ ನಿನಗೆ ಒಳಗಿನ ಆಡಳಿತವಿತ್ತು. ಇಂದಿನಿಂದ ನಿನಗೆ ಹೊರಗಿನ ಆಡಳಿತೆ ಎಂದರು ಗುರುಮಾರ್ಲರು. ನನ್ನ ಗಂಡ ನೀಡಿದ ಎಚ್ಚರಿಕೆಯನ್ನು ಕೇಳದ ನನಗೆ ದೇವರು ಬೆರ್ಮೆರ್ ಸರಿಯಾದ ಶಿಕ್ಷೆ ನೀಡಿದ್ದಾರೆ ಎಂದು ಕಣ್ಣೀರಿಡುತ್ತಾಳೆ ಸೊನ್ನೆ.

ಹೀಗೆ ದನಕರುಗಳನ್ನು ಮುಜಲೊಟ್ಟು ಪದವಿನಲ್ಲಿ ಮೇಯಲು ಬಿಟ್ಟು ತಾನು ಹೋಗಿ ಗೋಳಿಯ ಮರದ ಬುಡದಲ್ಲಿ ಕುಳಿತಿರಲು ಸೂರ್ಯನ ಪ್ರಕಾಶ ಸೊನ್ನೆಯ ಮೇಲೆ ಬೀಳಲು ಅವಳಿಗೆ ನಿದ್ದೆ ಆವರಿಸುತ್ತದೆ. ಎದ್ದು ನೋಡುವಾಗ ಮೇಯುತ್ತಿದ್ದ ಜಾನುವಾರುಗಳು ಕಾಣಿಸುವುದಿಲ್ಲ. ಇದರಿಂದ ಬೇಸರಗೊಂಡ ಸೊನ್ನೆ ನಾರಾಯಣ ಬೆರ್ಮೆರೇ ಯಾಕಾಗಿ ನನಗೆ ಈ ರೀತಿಯ ಶಿಕ್ಷೆ ನೀಡುತ್ತಿದ್ದೀರಿ ಎನ್ನುತ್ತಾಳೆ. ನಾನಿನ್ನು ನಾಲ್ಕು ಮನೆ ಭಿಕ್ಷೆ ಬೇಡಿ ಬದುಕುವಂತೆ ಮಾಡುತ್ತೀರೇ ಬೆರ್ಮೆರೇ. ಉರ್ಕಿದೊಟ್ಟಿಗೆ

ಹೀಗೆ ಹೋದರೆ ನನ್ನ ಗಂಡ ಕೊಡಬಾರದ ಶಿಕ್ಷೆ ಕೊಟ್ಟಾರು ಎಂದು ಹೇಳಿ ಚಿಂತೆಯಲ್ಲಿರಲು ಸೊನ್ನೆಗೆ ಮುಜಲೊಟ್ಟು ಪದವಿನಲ್ಲಿ ಸ್ಮೃತಿ ತಪ್ಪುತ್ತದೆ. ಸ್ಮೃತಿ ಬರುವಾಗ ಸೊನ್ನೆಯ ಮನದಲ್ಲಿ ಏನು ಚಿಂತಿಸುತ್ತಿ?, ಚಿಂತೆ ಬಿಡು ಎಂಬ ಭಾವನೆ ಬರುತ್ತದೆ. ನಿನ್ನ ಜಾನುವಾರುಗಳು ಉರ್ಕಿದೊಟ್ಟು ಹಟ್ಟಿಯಲ್ಲಿ ಮತ್ತು ನಿನ್ನ ಸುತ್ತಲ್ಲೇ ಇದ್ದಾವೆ ಎಂದು ಸ್ವಪ್ನದಲ್ಲಿ ಬ್ರಾಹ್ಮಣ ಮಾಣಿಯೊಬ್ಬ ಬಂದು ಹೇಳಿದಂತೆ ಅಗುತ್ತದೆ ಸೊನ್ನೆಗೆ. ಅಲ್ಲದೆ ಸೊನ್ನೆಗೆ "ನೀನು ದೇವರಿಗೆ ಹರಕೆ ಇಡು. ನೀನು ಮದುಮಗಳಾಗುತ್ತಿ" ಎಂದು ಹೇಳುತ್ತಾನೆ. ನಂದೊಲಿಗೆ ನಾಲ್ಕು ಸ್ಥಾನಕ್ಕೆ ಬಂಗಾರದ ಮಗು, ಬೆಳ್ಳಿಯ ತೊಟ್ಟಿಲು, ಹಿಡಿ ಹಣ ಹರಕೆ ಇಡು. ಒಂದು ಹೊಕ್ಕುಳ ಬಳ್ಳಿಯಲ್ಲಿ ಎರಡು ಹೆಣ್ಣುಮಕ್ಕಳು ಜನನವಾಗುತ್ತಾರೆ. ನೀನು ಹೆದರಬೇಡ" ಎಂದು ಮುಜಲೊಟ್ಟು ಪದವಿನಲ್ಲಿ ಬ್ರಾಹ್ಮಣ ಕನಸಲ್ಲಿ ಬಂದು ಹೇಳುತ್ತಾನೆ. ಕನಸಿಂದ ಎದ್ದು ನೋಡುವಾಗ ಸೊನ್ನೆಗೆ ಎಡದಲ್ಲಿ ಎಡ ಹುತ್ತ, ಬಲದಲ್ಲಿ ಬಲ ಹುತ್ತ, ನಡುವಲ್ಲಿ ನಾಗರ ಹುತ್ತ ಕಾಣಿಸುತ್ತದೆ. ಜಾನುವಾರುಗಳು ಕಾಣಿಸುತ್ತವೆ. ಅವನ್ನು ಒಟ್ಟು ಸೇರಿಸಿ ಅಟ್ಟಿಸಿಕೊಂಡು ಉರ್ಕಿದೊಟ್ಟಿಗೆ ಬರುತ್ತಾಳೆ. ತನ್ನ ಗಂಡನನ್ನು ಕುರಿತು ನಾನು ಮದುಮಗಳಾಗದೆ ನಿಮ್ಮ ಅರಮನೆಗೊಂದು ಕುಂದಾಯಿತು. ನಿಮಗೆ ನನ್ನಿಂದ ಅವಮಾನವಾಯಿತು. ನನ್ನ ಒಂದು ಮನವಿಯನ್ನು ನೀವು ಮನ್ನಿಸಬೇಕು. ನಂದೊಲಿಗೆ ನಾಲ್ಕು ಸ್ಥಾನಕ್ಕೆ ಒಂದು ಹರಕೆ ಇಡಬೇಕು ಮದುಮಗ ಎನ್ನುತ್ತಾಳೆ. ನಿನ್ನ ಇಚ್ಛೆ ಹಾಗಿದ್ದರೆ ಹಾಗೆಯೇ ಮಾಡುವ ಎನ್ನುತ್ತಾರೆ ಗುರುಮಾರ್ಲರು. ಕೈಯಲ್ಲಿ ವರಹ ಹಿಡಿದು ಹಾಲೆ ಮಂಟಪ, ತೊಳಸಿಕಟ್ಟೆಯ ಬಳಿ ಜೊತೆಯಾಗಿ ಕೈ ಮುಗಿದು ನಿಂತು "ನಮಗೆ ಸಂತಾನದ ಸಿರಿಫಲ ಕೊಟ್ಟರೆ ಬಂಗಾರದ ಮಗು, ಬೆಳ್ಳಿಯ ತೊಟ್ಟಿಲು, ಹಿಡಿಹಣ ನಂದೊಲಿಗೆ ನಾಲ್ಕು ಸ್ಥಾನಕ್ಕೆ ಒಪ್ಪಿಸುತ್ತೇವೆ" ಎಂದು ಹರಕೆ ಹೇಳಿಕೊಳ್ಳುತ್ತಾರೆ. ಸೊನ್ನೆಯನ್ನು ಕರೆದುಕೊಂಡು ಉರ್ಕಿದೊಟ್ಟು ಅರಮನೆಗೆ ಬರುತ್ತಾರೆ ಗುರು ಮರ್ಲರು.

ಅಮೃತರ ಪಠ್ಯವು ಸೊನ್ನೆಯ ಅನಂತರ ಹುಟ್ಟಿದ ಗಿಂಡೆ ಮದುಮಗಳಾಗುವುದನ್ನು ತಿಳಿಸುತ್ತದೆ. ಸಾನಬೆಟ್ಟಿನ ಸಣ್ಣ ಅಜ್ಜನವರು ನಾಲ್ಕು ಗುತ್ತಿನ ಹೆಣ್ಣುಗಳನ್ನು ಬರಹೇಳಿಸಿ ನಡುಅಂಗಳದಲ್ಲಿ ಮಂಡಲ ಹಾಕಿಸಿದರು. ನಾಲ್ಕು ಮೂಲೆಯಲ್ಲಿ ನಾಲ್ಕು ಕಲಶ ಇರಿಸಿದರು. ನಾಲ್ಕು ತೆಂಗಿನಕಾಯಿ ಜೋಡಿಸಿ ಮಂಡಲದ ಮಧ್ಯೆ ಇರಿಸಿದ್ದಾರೆ. ಅಷ್ಟು ಹೊತ್ತಿಗೆ ಸೊನ್ನೆ ತನ್ನ ಗಂಡನಿಗೆ ಹೇಳುತ್ತಾಳೆ. ನನ್ನ ಅನಂತರ ಹುಟ್ಟಿದ ಮಾಯದ ಗಿಂಡೆ ಮದುಮಗಳಾಗಿದ್ದಾಳೆ. ಅವಳ ಮದುಮಗಳ ಮದುವೆಗೆ ನಾಲ್ಕು ಊರಿಗೆ, ನಾಲ್ಕು ಗುತ್ತಿಗೆ ಹೇಳಿಕೆ ಮಾಡಿದ್ದಾರೆ. ಆದರೆ ನನಗೆ ಹೇಳಿಕೆ ಇಲ್ಲ. ಇಲ್ಲದಿದ್ದರೂ ತಂಗಿಯ ಮೈಲೆ ಕಳೆಯುವ ಕಾರ್ಯಕ್ಕೆ ನಾನು ಹೋಗ ಬೇಕೆನ್ನುತ್ತಾಳೆ. "ಹೇಳಿಕೆಯಿಲ್ಲದೆ ಹೋದರೆ ನಾಲ್ಕು ಗುತ್ತಿನವರ ಮರ್ಯಾದೆ ನಿನಗೆ ಸಿಗದು. ಅವರು ಹೇಳದ ಮಾತು ಹೇಳಿಯಾರು. ಮಾನಕ್ಕೆ ಹೀನ ಮಾಡಿಯಾರು. ನೀನು ಹೋಗಬಾರದು. ನಮ್ಮ ಅರಮನೆಗೆ ಕೊರತೆ ತಂದರೆ ಮತ್ತೆ ನಿನ್ನನ್ನು ಒಳಗೆ ಬರಲು ಬಿಡಲಾರೆ" ಎನ್ನುತ್ತಾರೆ.

ಆದರೂ ಹಠ ಹಿಡಿದು ಹೋಗುತ್ತಾಳೆ. ಅಲ್ಲಿ ಸೊನ್ನೆಯನ್ನು ಯಾರೂ ಮಾತನಾಡಿಸಲಿಲ್ಲ. ಗಿಂಡೆಯನ್ನು ನಡುಮಂಡಲಕ್ಕೆ ಮೂರುಸುತ್ತು ತಂದು ಮಂಡಲದ ನಡುವೆ ತೆಂಗಿನಕಾಯಿ ಜೋಡಿಸಿಟ್ಟಿದ್ದರ ಮೇಲೆ ಕುಳಿತುಕೊಳ್ಳಿಸುತ್ತಾರೆ. ನಾಲ್ಕು ಗುತ್ತಿನ ಹೆಂಗಸರು ನಾಲ್ಕು ಕಲಶ ಹಿಡಿದಾಗ ಸೊನ್ನೆ ಅವರಲ್ಲಿ ನನ್ನ ತಂಗಿಯ ಮೈಲೆ ಕಳೆಯುವ ಕಾರ್ಯಕ್ಕೆ ನನಗೆ ಹೇಳಿಕೆ ಕೊಡದಿರುವ ಕಾರಣ ಏನು? ನನಗೆ ಉರ್ಕಿದೊಟ್ಟಿನ ಮರ್ಯಾದೆ ಕೊಡಬೇಕು. ಒಂದು ಕಲಶ ನನಗೆ ಕೊಡಬೇಕೆಂದಳು. ಆಗ ನಾಲ್ಕು ಗುತ್ತಿನ ಹೆಂಗಸರು ನಿನಗೆ ಮಾನಮರ್ಯಾದೆ ಕೊಡಲು

ತುಳುಪಠ್ಯ

ಈ ಪೊಣ್ಣು ಪೋದು ಪೊಂಜೋವು ಆತನ ಸೊನ್ನೆ
ನಿನ್ನ ಅಲೆಪಿಲೆ ಕಳೆತ್ಂಡಯಾ ಸೊನ್ನೆ
ಈಯಿಂದ್ ಪಂಡ್ಂಡಯಾ ಸೊನ್ನೆ
ಆಣಗ್ ಆಣ್ಲಾ ಅತ್ತ್ ಪೊಣ್ಣಗ್ ಪೊಣ್ಣುಲಾ ಅತ್ತ್
ನಿಕ್ಕ್ ಎಂಕಲೆನ ಕೂಟ ಕಲ ತಿಕ್ಕಂದ್ ಪಂಡೆರ್

ಕನ್ನಡಾನುವಾದ

ನೀನು ಹೆಣ್ಣು ಹೋಗಿ ಹೆಂಗಸಾಗಿದ್ದಿಯಾ ಸೊನ್ನೆ
ನಿನ್ನ ಅಲೆಪಿಲೆ ಕಳೆದಿದೆಯಾ ಸೊನ್ನೆ
ನೀನೆಂದರೆ ಸೊನ್ನೆ
ಗಂಡಿಗೆ ಗಂಡೂ ಅಲ್ಲ ಹೆಣ್ಣಿಗೆ ಹೆಣ್ಣೂ ಅಲ್ಲ
ನಿನಗೆ ನಮ್ಮ ಕೂಟಕಳ ಸಿಗದು ಎಂದರು (ಪುಟ 209).

ನೀನು ನಮ್ಮ ಕೂಟದ ಕಳದಿಂದ ಇಳಿದು ಹೋಗು ಎನ್ನುತ್ತಾ ಸೊನ್ನೆಯ ಮಾನಕ್ಕೆ ಹೀನದ ಮಾತು ಹೇಳಿ ಸಾನಬೆಟ್ಟಿನ ಸಣ್ಣ ಅಜ್ಜನವರ ಅರಮನೆಯಿಂದ ಇಳಿಸುತ್ತಾರೆ. ಇತ್ತ ಅವಮಾನಿತಳಾದ ಸೊನ್ನೆ ಉರ್ಕಿದೊಟ್ಟಿಗೆ ಬರಲು ಗುರು ಮರ್ಲರು ಹೇಳಿದ ಮಾತಿನಂತೆ ಸೊನ್ನೆಯನ್ನು ಶಿಕ್ಷಿಸುತ್ತಾರೆ. ಅದು ಮೇಲಿನ ಪಠ್ಯಗಳಂತೆ ಇದೆ. ಈ ವಿಚಾರ ಜಾರುಮಾರ್ಲರಿಗೆ ತಿಳಿದು ನೀನು ಕಷ್ಟ ಬಂದರೂ ನಾವು ನಂಬಿದ ಬೆರ್ಮೆರ್ ನಮ್ಮ ಸಹಾಯಕ್ಕೆ ಇದ್ದಾರೆ ಎನ್ನುತ್ತಾರೆ. ಒಂದು ದಿನ ಜಾನುವಾರುಗಳನ್ನು ಮೇಯಿಸಲು ಮುಜಿಲೊಟ್ಟು ಪದವಿಗೆ ಹೋಗುತ್ತಾಳೆ. ಆಗ ಲಂಕೆಲೋಕನಾಡಿನ ಜಯವುಲ್ಲ ಬೆರ್ಮೆರ್ ಬ್ರಾಹ್ಮಣ ಮಾಣಿಯ ರೂಪದಲ್ಲಿ ಬಂದು ಸೊನ್ನೆಯನ್ನು ಕುರಿತು ನೀನು ಮದುಮಗಳಾಗಿ ಸಂತಾನದ ಫಲ ಸಿಕ್ಕರೆ ಲಂಕೆಲೋಕನಾಡಿನ ಜಯವುಲ್ಲ ಬೆರ್ಮೆರ್, ಉಳ್ಳಾಯ ಉಳ್ಳಾಕುಳು ದೈವಗಳಿಗೆ ಭಂಡಾರ ಕಾಣಿಗೆ ತುಂಬಿ, ಜೋಡು

ತೊಟ್ಟಿಲ ಮಗು, ಹಂಡೆಯ ಹಾಲು, ಹಿಡಿ ಹಣ ಹಾಕಬೇಕು ಎಂದು ಹೇಳುತ್ತಾರೆ. ಅಷ್ಟು ಹೇಳಿ ಮುಜಿಲೊಟ್ಟು ಪದವಿನಲ್ಲಿ ಮಾಯವಾಗುತ್ತಾರೆ. ಇತ್ತ ಸೊನ್ನೆ ಜಾನುವಾರುಗಳನ್ನು ಹಟ್ಟಿಗೆ ಅಟ್ಟಿಸಿಕೊಂಡು ಬಂದು ಹಾಲು ಕರೆಯುತ್ತಿರುವ ಹೊತ್ತಿಗೆ ಶುದ್ಧದಲ್ಲಿ ಇದ್ದ ಸೊನ್ನೆ ಸೂತಕವಾಗುತ್ತಾಳೆ. ಹೆಣ್ಣು ಹೋಗಿ ಹೆಂಗಸಾಗುತ್ತಾಳೆ. ಇದನ್ನು ತಿಳಿದ ಗುರುಮಾರ್ಲರು ಬಲು ಸಂತೋಷ ಪಡುತ್ತಾರೆ. ಸೊನ್ನೆ ಮದುಮಗಳಾದ ಮೈಲೆ ಕಳೆಯಲು ನಾಲ್ಕು ಗುತ್ತಿನ ಹೆಂಗಸರನ್ನು ಬರಹೇಳಿದಾಗ ಇದು ಸೊನ್ನೆಯ ಕಪಟ ಎಂದು ಹೇಳಿ ಅವರು ಬರುವುದಿಲ್ಲ. ಸೊನ್ನೆಯೇ ಕೆಂದಾಳೆ ಎಳನೀರಿನಿಂದ, ಕಪಿಲೆ ದನದ ಹಾಲಿನಿಂದ ಜಯವುಲ್ಲ ಬೆರ್ಮೆರ್ ತೀರ್ಥ ಪಡೆದು ಇದುವೇ ನನಗೆ ಶುದ್ಧ ಎನ್ನುತ್ತಾಳೆ. ಆದ ಸೂತಕದ ಶುದ್ಧದಲ್ಲಿ ಸೊನ್ನೆಗೆ ಸಂತಾನದ ಫಲ ಕಂಡುಬರುವ ವಿವರಗಳಿವೆ.

ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಪಠ್ಯದಲ್ಲಿ ಸೊನ್ನೆ ಗಿಂಡೆ ಜೋಡು ಮಾರಿಹಟ್ಟಿಗೆ ಹಾಲು ಕರೆಯಲು ಹೋದಲ್ಲಿ ಗಿಂಡೆ ಮದುಮಗಳಾಗುತ್ತಾಳೆ. ದಾರು ಇವಳನ್ನು ಕರೆದುಕೊಂಡು ಏಳು ಅಂತರದ ಕತ್ತಲೆ ಕೋಣೆಯಲ್ಲಿ ಕೊಂಡುಹೋಗಿ ಕಲ್ಲ ಕಲೆಂಬಿಯ ಮೇಲೆ ಕೂರಿಸುತ್ತಾಳೆ. ಅಜ್ಜನವರು ಬೈಲಲ್ಲೆ ಹೋದವರು ಮನೆಗೆ ಬರಲು ಗಿಂಡೆ ಮದುಮಗಳಾದ ವಿಚಾರವನ್ನು ತಿಳಿಸಿ ನಿಮಗೆ 'ಪಿಲೆತ ಪೇರ್‌ನ್ ಎಂಚ ಕೊರಡ್' (ನಿಮಗೆ ಮೈಲಿಗೆಯ ಹಾಲನ್ನು ಹೇಗೆ ಕೊಡಲಿ) ಎನ್ನುತ್ತಾಳೆ. ಆಗ ಅಜ್ಜನವರು

ತುಳುಪಠ್ಯ

ಓ ಮಗ ದಾರೂ ಕೇನಿದನಾ
ಒಂಜಿ ಇಲ್ಲಡ್ ಇನಿ ಮರಣ ಆದ್ ಪೋಂಡಲಾ
ಪೇರ್‌ಗಾ ಅಲೆಕಾ ಮಗ ಅಮೆ ಪಿಲೆ ಇಜ್ಜಿಗೆ

ಕನ್ನಡಾನುವಾದ

ಓ ಮಗ ದಾರೂ ಕೇಳಿದ್ದೀಯೇ
ಒಂದು ಮನೆಯಲ್ಲಿ ಮರಣವಾಗಿಹೋದರೂ
ಹಾಲು ಮಜ್ಜಿಗೆಗೆ ಸೂತಕ, ಅಶುದ್ಧ ಎಂಬುದು ಇಲ್ಲ ಎನ್ನುತ್ತಾರೆ (ಪುಟ 237).

ಮಡಿವಾಳಗಿತ್ತಿಯನ್ನು ಬರಹೇಳಲು ಅಜ್ಜನವರೇ ಹೋಗುತ್ತಾರೆ. ಅವಳು ಹೇಳುತ್ತಾಳೆ

ತುಳುಪಠ್ಯ

ನಾಲಿಲ್ಲ ಪೊಂಜೋವು ಬರೊಡು
ನಾಲ್ ಕನ್ಯಾವು ಬಾಲೆಲೆನ್ ಈರ್ ಪನೊಡು

ಕನ್ನಡಾನುವಾದ

ನಾಲ್ಕು ಮನೆಯ ಹೆಂಗಸರು ಬರಬೇಕು
ನಾಲ್ಕು ಕನ್ಯಾ ಮಕ್ಕಳನ್ನು ನೀವು ಕರೆಸಬೇಕು (ಪುಟ 240).

ಮಡಿವಾಳಗಿತ್ತಿ ಬಂದು ಮದುಮಗಳ ಮದುವೆಗೆ ಬೇಕಾದ ಸಿದ್ಧತೆಗಳಾದ ಮಂಡಲದ ರಚನೆ, ನಾಲ್ಕು ಸಿಂಬಿಗಳನ್ನು ತಯಾರಿಸಿ ಮಂಡಲದ ನಾಲ್ಕು ಮೂಲೆಗಳಲ್ಲಿಟ್ಟು ನಾಲ್ಕು ಕಲಶಗಳಿಗೆ ನೀರು ತುಂಬಿ ಸಿಂಬಿಯ ಮೇಲಿರಿಸುವ ಕೆಲಸಗಳನ್ನು ನೆರವೇರಿಸುತ್ತಾಳೆ. ಮೈಲೆಗೆ ಮೈಲೆ ನೀರು ಮೀಯಿಸಿ ಮುಗಿಸುತ್ತಾಳೆ ಮಡಿವಾಳಗಿತ್ತಿ. ಇನ್ನು ಒಂಭತ್ತರಲ್ಲಿ ನೀರು ಮೀಯುವ 'ನೀರ ಪೆರತ್ತ್' (ಮದುಮಗಳ ಮದುವೆ) ಎಂದರು ಅಜ್ಜನವರು. ನೀರ ಪೆರತ್ತಕ್ಕೆ (ಋತುಮತಿಯಾದುದರ ನೀರು ಮೀಯುವ ಆಚರಣೆ) ಅಜ್ಜನವರು ಚಪ್ಪರ ಹಾಕಿಸಿ ಮದುವೆಯ ತಯಾರಿಯಂತೆ ತಯಾರಿ ನಡೆಸುತ್ತಾರೆ. ಅಜ್ಜನವರು ಹೇಳುತ್ತಾರೆ

ತುಳುಪಠ್ಯ

ಎನ್ನ ಮುತ್ತು ಮೋವ ಮೋಕೆಂದ ಪುಲ್ಲಿ ಗಿಂಡೆಗ್
ಒರ್ವಾರೊದ ಮದ್ಮೆ ಮಗಾ ಕೇನಿದರಾ ನಿಗುಲು
ಇರ್ವಾರೊದಾ ಮದ್ಮೆ ಇಜ್ಜಿ ಎನ್ನ ಪುಲ್ಲಿಗ್ ಗಿಂಡೆಗ್ಂದ್ ಪಂಡೆರಜ್ಜೆರೋ

ಕನ್ನಡಾನುವಾದ

ನನ್ನ ಮುದ್ದು ಮೋಹದ ಮೊಮ್ಮಗಳು ಗಿಂಡೆಗೆ
ಒಂದು ಬಾರಿಯ ಮದುವೆ ಮಗಾ ಕೇಳಿದ್ದೀರೇ ನೀವು
ಎರಡನೆಯ ಮದುವೆ ಇಲ್ಲ ನನ್ನ ಮೊಮ್ಮಗಳು ಗಿಂಡೆಗೆಂದರು ಅಜ್ಜನವರು
(ಪುಟ 246).

ಗಿಂಡೆಗೆ ನೀರಪೆರತ್ತ (ಮದುಮಗಳಾದ ಮದುವೆ) ಮದುವೆ ಮಾತ್ರ. ಎರಡನೇ ಮದುವೆ ಇಲ್ಲ ಎಂಬುದನ್ನು ಅಜ್ಜನವರು ಮುಂಚಿತವಾಗಿ ಯಾಕೆ ಹೇಳುತ್ತಾರೆ ಎಂಬುದು ತಿಳಿಯುವುದಿಲ್ಲ. ಗಿಂಡೆ ಮಾಯವಾಗುವ ವಿಚಾರ ಅಜ್ಜನವರಿಗೆ ಮೊದಲೇ ತಿಳಿದಿತ್ತೇ? ಗಿಂಡೆಯ ನೀರಪೆರತ್ತಕ್ಕೆ ಎಲ್ಲರನ್ನೂ ಆಮಂತ್ರಿಸಬೇಕೆಂದು ಅಜ್ಜನವರು ಊರ ಹೆಂಗಸರಿಗೆ ಹೇಳುತ್ತಾರೆ. ಅವರು ಎಲ್ಲರನ್ನು ಕರೆದು ಸೊನ್ನೆ ಮದುಮಗಳಾಗಲಿಲ್ಲ. ಅವಳನ್ನು ಹೇಗೆ ಕರೆಯುವುದೆಂದು ಬಿಟ್ಟು ಬಿಡುತ್ತಾರೆ. ಅಜ್ಜನವರು ವಿಚಾರಿಸಲು ನೀವು ಕೊಟ್ಟಿರುವ ಎಲೆ ಅಡಕೆಯಲ್ಲಿ ಒಂದು ಕಡಿಮೆಯಾಯಿತು. ಆದುದರಿಂದ ಕರೆಯಲಿಲ್ಲ ಎನ್ನುತ್ತಾರೆ. ಕೊನೆಗೆ ಎಲ್ಲ ತಯಾರಿಗಳ ಮಧ್ಯೆ ಅಜ್ಜನವರೇ ಉರ್ಕಿದೊಟ್ಟಿಗೆ ಹೋಗಿ ಸೊನ್ನೆ ಗುರುಮಾರ್ಲರನ್ನು ಆಮಂತ್ರಿಸುತ್ತಾರೆ.

ತುಳುಪಠ್ಯ
ಆಲೆಗ್ ಇರ್ವಾರೊದ ಮದ್ಮೆ ಇದ್ದಿ ಮಗಾ
ನಿನ್ನ ಮೆಗ್ದಿಗ್ ಉಂದು ಒರ್ವಾರೊದ ಮದ್ಮೆ ಮಗಾ
ಒಂಜಿಲ್ಲ್ ಒರಿಯಂದೆ ಒಂಜಿಲ್ಲ್ ಕರಿಯಂದೆ
ಕಾಯಿಪಾಡ್ ಮೂರ್ತೊ ಯಾನೇ ಲೆಪ್ಪಾದೆನೆ ಮಗಾ
ಓ ಸೊನ್ನೆ ಕೇಂಡನಾ

ಕನ್ನಡಾನುವಾದ
ಅವಳಿಗೆ ಎರಡನೇ ಮದುವೆ ಇಲ್ಲ ಮಗಾ
ನಿನ್ನ ತಂಗಿಗೆ ಇದೇ ಒಂದು ಮದುವೆ ಮಗಾ
ಒಂದೂ ಮನೆ ಬಿಡದೆ ಒಂದೂ ಮನೆ ಕರೆಯದೆ
ಕಾಯಿಕೊಟ್ಟು ಮುಹೂರ್ತಕ್ಕೆ ಕರೆಸಿದ್ದೇನೆ ಮಗಾ (ಪುಟ 255).

ನೀನು ಬಂದು ನಿನ್ನ ತಂಗಿಯ ಅಂದ ನೋಡಬೇಕೆಂದರು ಅಜ್ಜನವರು. ಗುರುಮಾರ್ಲರನ್ನೂ ಕರೆದು ಅಜ್ಜನವರು ಹಿಂತಿರುಗಿದಾಗ ಗುರುಮಾರ್ಲರು ಹೇಳುತ್ತಾರೆ, ಹೆಂಗಸರು ನಿನ್ನನ್ನು ಬಿಟ್ಟು ಉಳಿದ ಎಲ್ಲರನ್ನೂ ಕರೆದಿದ್ದಾರೆ.

ತುಳುಪಠ್ಯ
ಮನೊಟು ಮಚ್ಚರ ಮಲ್ದೆರ್ ಉಡಲ್‌ಡ್ ಕಿಚ್ಚಿ ಮಚ್ಚರ ಮಲ್ದೆರ್
ಕಪಿಕಟ್ಟ್ ಕಪಿತನ ಓದುವೆರ್, ಮೆಗ್ದಿ ನೀರ ಪೆರತ್ತೊಗು ಪೋವಡಾ

ಕನ್ನಡಾನುವಾದ
ಮನದಲ್ಲಿ ಮತ್ಸರ ತೋರಿದರು ಒಡಲಲ್ಲಿ ಕಿಚ್ಚು ಮತ್ಸರ ಮಾಡಿದರು
ಇಲ್ಲಸಲ್ಲದ ಮಾತುಗಳನ್ನಾಡಿ ನಿನಗೆ ಅವಮಾನಿಸಿಯಾರು,
ತಂಗಿಯ ಮದುಮಗಳ ಮದುವೆಗೆ ಹೋಗಬೇಡ ಎಂದರು (ಪುಟ 256).

ಸೊನ್ನೆ ಹೋಗಬೇಕೆಂದು ಹಠ ಹಿಡಿದಾಗ ನಿನ್ನ ಭಾವನವರಾದ ಜಾರುಮರ್ಲರಲ್ಲಿ ಕೇಳಿ ಹೋಗು ಎನ್ನುತ್ತಾರೆ. ಜಾರುಮರ್ಲರು ಹೊರಟು ಸೊನ್ನೆಯ ಜೊತೆ ಉಕಿದೊಟ್ಟಿಗೆ ಬರುತ್ತಾರೆ. ನಡೆದ ವಿಚಾರವನ್ನು ಗುರುಮಾರ್ಲರು ಅಣ್ಣನಿಗೆ ತಿಳಿಸುತ್ತಾರೆ. ಅಣ್ಣ ಸೊನ್ನೆಯನ್ನು ಕಾನಬೆಟ್ಟಿಗೆ ಕಳುಹಿಸುವಂತೆ ತಮ್ಮನಿಗೆ ಸೂಚಿಸುತ್ತಾರೆ. ಇದರಂತೆ ದಂಡಿಗೆಯಲ್ಲಿ ಕುಳ್ಳಿರಿಸಿ ಸೊನ್ನೆ ಕಾನಬೆಟ್ಟಿಗೆ ಹೋಗುತ್ತಾಳೆ. ಅಜ್ಜನವರಿಗೆ ಸಂತೋಷವಾಗಿ ಸ್ವತಃ ತಾನೇ ದಂಡಿಗೆಯಿಂದ ಸೊನ್ನೆಯ ಕೈ ಹಿಡಿದು ಇಳಿಸುತ್ತಾರೆ. ಇದನ್ನು ನೋಡಿದ

ಊರ ಹೆಂಗಸರು ಎಲ್ಲ ಕೆಲಸಗಳನ್ನು ಬಿಟ್ಟು ಅರ್ಧದಲ್ಲಿಯೇ ಎದ್ದು ಹೋಗುತ್ತಾರೆ. ಇದರಿಂದ ಬೇಸರಗೊಂಡ ಅಜ್ಜನವರು ಈ ಮಾತನ್ನು ಹೇಳುತ್ತಾರೆ

ತುಳುಪಠ್ಯ

ಊರ ಪೊಂಜೆನಕುಲು ಕಿಚ್ಚಿ ಮಚ್ಚರೊ ತೋಜಾಯೆರ್‌ಂಡಲಾ ಮಗಾ
ನಿನ್ನ ತಂಗಡಿಗ್ ಉಂದು ಒರ್ವಾರೊದ ಮದ್ಮೆ ಮಗಾ
ನಿನ್ನ ಮೆಗ್ದಿನ ಪೊರ್ಲುಳ ಪೊಲ್ಯೊನು ಈಯೇ ಮಲ್ಪೊಡು
ಮುತ್ತುಡು ದೇಸೆ ಪಕಲೊಡು ಆರೆತಿ ಮಲ್ಪೊಡು
ಗಿಂಡೆನ ನಡುನೆತ್ತಿಗ್ ನಾಲರಿ ಪಾಡೊಡು

ಕನ್ನಡಾನುವಾದ

ಊರ ಹೆಂಗಸರು ಕಿಚ್ಚು ಮತ್ಸರ ತೋರಿಸಿದರೂ ಮಗಾ
ನಿನ್ನ ತಂಗಿಯದ್ದು ಇದು ಒಂದು ಬಾರಿಯ ಮದುವೆ ಮಗಾ
ನಿನ್ನ ತಂಗಿಯ ಅಂದಚಂದವನ್ನು ನೀನೇ ಮಾಡ ಬೇಕು ಮಗಾ
ಮುತ್ತಲ್ಲಿ ಸೇಸೆ ಹವಳದಲ್ಲಿ ಆರತಿ ಮಾಡಬೇಕು
ಗಿಂಡೆಯ ನಡುನೆತ್ತಿಗೆ ನಾಲ್ಕು ಅಕ್ಕಿ ಹಾಕಬೇಕೆಂದರು (ಪುಟ 267).

ಅರಮನೆಯನ್ನು ಪ್ರವೇಶಿಸಿದ ಸೊನ್ನೆ ಗಿಂಡೆಯಿದ್ದಲ್ಲಿಗೆ ಹೋಗಿ ತಾನೇ ಸೊನ್ನೆಯ ಅಲಂಕಾರ ಮಾಡಿ

ತುಳುಪಠ್ಯ

ಕೊಟ್ಟುಲ್ಲ ಮಣೆಟ್ ತನ್ನ ಮೆಗ್ದಿನ್ ಕುಲ್ಲಾದೆರ್
ಬೊಲ್ಲಿನ್ನ ಕಂಚಿಂದೇ ದೀಪಾದೆರತ್ತೋ ಸೊನ್ನೆ ಆರ್
ಗೆಂದದೀಪ ಏರಾದೆರ್ ತನ್ನ ಮುತ್ತು ಮೋವಂದ ಮೆಗ್‌ದಿಗ್‌ಗೆನಾ
ಮುತ್ತುಡು ದೇಸೆ ಪಕಲೊಡು ಆರೆತಿ ಮಲ್ಪೊಲುಗೆನಾ

ಕನ್ನಡಾನುವಾದ

ಎತ್ತರದ ಮಣೆಯಲ್ಲಿ ತನ್ನ ತಂಗಿಯನ್ನು ಕುಳ್ಳಿರಿಸಿದ್ದಾರೆ
ಬೆಳ್ಳಿಯ ಕಂಚು ಇರಿಸಿದ್ದಾರೆ ಸೊನ್ನೆ ಅವರು
ನಂದಾದೀಪ ಏರಿಸಿದ್ದಾರೆ ತನ್ನ ಮದ್ದು ಮೋಹದ ತಂಗಿಗಂತೆ
ಮುತ್ತಲ್ಲಿ ಸೇಸೆ ಹವಳದಲ್ಲಿ ಆರತಿ ಮಾಡಿದರಂತೆ (ಪುಟ 269).

ಸೊನ್ನೆ ಇನ್ನು ತನ್ನರಮನೆಗೆ ಹೋಗುತ್ತೇನೆಂದು ಹೊರಟು ಬಂದು ಉರ್ಕಿದೊಟ್ಟು ಅರಮನೆಯ ಕಿರುಬಾಗಿಲಲ್ಲೆ ಒಳಪ್ರವೇಶಿಸುತ್ತಾಳೆ. ಸೊನ್ನೆ ಕಾನಬೆಟ್ಟು ಅರಮನೆಗೆ ಹೋಗಿ ಮಾನ ಮರ್ಯಾದಿ ಕಳೆದು ಬಂದಳೆಂದು ತಮ್ಮ ಅಣ್ಣನಿಗೆ ಹೇಳುತ್ತಾರೆ. ಗುರುಮಾರ್ಲರು ನಡೆದ ಘಟನೆಯ ಬಗೆಗೆ ಸೊನ್ನೆಯಲ್ಲಿ ಕೇಳಲು ಅವಳು ಊರ ಹೆಂಗಸರು ಮತ್ಸರದಿಂದ ಕಂಡ ವಿಚಾರವನ್ನು ತಿಳಿಸುತ್ತಾಳೆ. ಜಾರುಮರ್ಲರಿಗೆ ವಿಷಯ ಗೊತ್ತಾಗಿ ಅವರು ಸೊನ್ನೆಗೆ ಸಮಾಧಾನ ಹೇಳುತ್ತಾರೆ. ನೀನು ಸ್ನಾನ ಮಾಡಿ ಬಾ ಸೊನ್ನೆ. ನಾನು ಹರಕೆ ಹೇಳಿಕೊಂಡು ಮುಡಿಪು ಕಟ್ಟುತ್ತೇನೆ ಎಂದರು. ಸೊನ್ನೆ ಜಳಕವಾಗಿ ಬರುತ್ತಾಳೆ. ಮೂವರೂ ತೊಳಸಿ ಮಂಟಪದ ಎದುರು ನಿಂತು ಜಾರುಮಾರ್ಲರು ಉಜಿಲೊಟ್ಟು ಉರಿಬೆರ್ಮರಿಗೆ ಹರಕೆ ಹೇಳಿಕೊಳ್ಳುತ್ತಾರೆ.

ತುಳುಪಠ್ಯ

ಸೊನ್ನೆ ಆಂಡಲಗೆನ ಮದಿಮ್ಮಲ್ ಆವಂದೆಗೆನಾ ಮದಿಮುಟ್ಟೆಲ್ ಪೋಯಿಜಲ್‌ಗೆನಾ

ಇನಿ ಸೊನ್ನೆನ ಬಂಜಿಡ್‌ಗೆನಾ ನೀರ್ ಉಂತೊಡು ಬೆರ್ಮೆರೆ ಗರ್ಭೊ ಬಲಿರೊಡು ಇನಿಯಾಂಡಲಗೆನಾ

ಇನಿ ಸೊನ್ನೆಗಾಂಡಲ ಪುತ್ರಾಡಿ ಸಂತಾನಗೆನಾ ಉಜಿಲೊಟ್ಟು ಉರಿಬೆರ್ಮೆರ್ ಕೊರಿಯೆರ್ಡಗೆನಾ

ಸೊನ್ನೆನ ಪುದರ್‌ಡ್ ಯಾನಾಂಡಲಗೆನಾ ಕೊಂಡೆಲ್ಲ ಪೇರ್ ಪನ್ನೆಲ್ಲ ಪಂರ್ದ್‌ಗೆನಾ

ತೊಟ್ಲು ಪಾಲೆ ಪಿಂಗಾರಗೆನಾ ದಂಡ್ ಬೊಂಡಗೆನಾ ಪುಂಡಿಲ್ಲ ಪಣವು

ಬಂಗಾರಿನ್ನ ಬಾಲೆ, ಬೊಲ್ಲಿನ್ನ ತೊಟಿಲ್‌ಗೆನಾ ಉಜಿಲೊಟ್ಟು ಬೆರ್ಮೆರೆಗ್ ಯಾನೇ ಒಪ್ಪಾವೆಂದೆರ್

ಕನ್ನಡಾನುವಾದ

ಸೊನ್ನೆಯಾದರೋ ಮದುಮಗಳಾಗಲಿಲ್ಲ ಮದಿಮುಟ್ಟೆಲ್(ಮೆಯಿ ನೆರೆಯಲಿಲ್ಲ) ಹೋಗಲಿಲ್ಲ

ಇಂದು ಸೊನ್ನೆಯ ಗರ್ಭದಲ್ಲಿ ಗರ್ಭ ನಿಲ್ಲಬೇಕು ಬೆರ್ಮೆರ್ ದಯದಿಂದ ಗರ್ಭ ಬೆಳೆಯುತ್ತಾ ಬರಬೇಕು

ಇಂದು ಸೊನ್ನೆಗಾದರೋ ಪುತ್ರಾಡಿ ಸಂತಾನದ ಫಲ ಉಜಿಲೊಟ್ಟು ಉರಿಬೆರ್ಮರು ಕೊಟ್ಟರೆ

ಸೊನ್ನೆಯ ಹೆಸರಲ್ಲಿ ನಾನಾದರೋ ಕುಡ್ತೆ ಹಾಲು ಹೆಣಿಗೆ ಹಣ್ಣು

ಜೋಡು ಹಿಂಗಾರ ದಂಡು ಎಳನೀರು ಹಿಡಿಹಣ

ಬಂಗಾರದ ಮಗು ಬೆಳ್ಳಿಯ ತೊಟ್ಟಿಲು ಉಜಿಲೊಟ್ಟು ಬೆರ್ಮೆರ್‌ಗೆ ನಾನೇ ಒಪ್ಪಿಸುವೆನೆಂದರು (ಪುಟ 276).

ಜಾರುಮರ್ಲರು ಹೊರಟು ತನ್ನರಮನೆಗೆ ಹೋಗುತ್ತಾರೆ. ಹೀಗೆ ದಿನ ಕಳೆಯಲು ಒಂದು ದಿನ ಸೊನ್ನೆ ಗರ್ಭವತಿಯಾಗುತ್ತಾಳೆ. ಗುರುಮಾರ್ಲರಿಗೆ ಬಲು ಸಂತೋಷ ವಾಗುತ್ತದೆ.

ಶ್ಯಾಮರಾಯ ಶೆಟ್ಟಿಯವರ ಪಠ್ಯದಲ್ಲಿ ಅಲ್ಲಲ್ಲಿ ಕೆಲವು ವಿಚಾರಗಳು ಉಳಿದ ಪಠ್ಯಗಳಿಗಿಂತ ಭಿನ್ನವಾಗಿರುವುದನ್ನು ಕಾಣಬಹುದು. ಸೊನ್ನೆಯನ್ನು ಉರ್ಕಿದೊಟ್ಟು ಅರಮನೆಗೆ ಮದುವೆ ಮಾಡಿ ಕೊಟ್ಟ ಅನಂತರ ಆಕೆಯ ಸಹಾಯಕ್ಕಾಗಿ ತಂಗಿ ಗಿಂಡೆಯನ್ನು ತರುವ ವಿಚಾರ ಇದೆ. ಹೀಗಿರಲು ಗಿಂಡೆ ಒಂದು ದಿನ ಮದುಮಗಳಾಗು ತ್ತಾಳೆ. ಇದರ ಆಚರಣೆಯಾದ ಕರಪತ್ತಾವುನಿ (ಮಡಿಕೆ ಹಿಡಿಸುವುದು ಎಂದರೆ ಅಡಿಗೆಯ ಕೆಲಸಕ್ಕೆ ಅಧಿಕೃತವಾಗಿ ನೇಮಿಸುವ ಕ್ರಿಯೆ) ಹಾಗೂ ನೀರಮದ್ಮೆ (ನೀರು ಹೊಯ್ಯುವ ಮದುವೆ ಅಥವಾ ಋತುಮತಿಯಾದುದರ ಆಚರಣೆ)ಯ ಕ್ರಮ ಮಾಡಬೇಕೆಂದು ಕಾನಬೆಟ್ಟು ಅಜ್ಜನವರು ಹೇಳುತ್ತಾರೆ. ಹೆಣ್ಣುಗಳು ಹೇಳಿಕೆ ಕೊಡುವಾಗ ಸೊನ್ನೆಗೆ ಹೇಳಿಕೆ ಮಾಡದಿರುವ ಕಾರಣ ಅಜ್ಜನವರೇ ಉರ್ಕಿದೊಟ್ಟಿಗೆ ಹೋಗಿ ಹೇಳಿಕೆ ಮಾಡುತ್ತಾರೆ. ಇದರಿಂದ ಸೊನ್ನೆಯ ಗಂಡ ಗುರುಮಾರ್ಲರು ಈ ಆಚರಣೆಗೆ ಬರಲು ನಿರಾಕರಿಸುತ್ತಾರೆ. ಸೊನ್ನೆ ಭಾವ ಜಾರುಮರ್ಲರಲ್ಲಿಗೆ ಹೋಗಿ ವಿಷಯ ತಿಳಿಸಿ ಕಾನಬೆಟ್ಟಿಗೆ ಹೋಗಬೇಕೆನ್ನುತ್ತಾಳೆ. ಗುರುಮಾರ್ಲರು ಮತ್ತು ಜಾರುಮರ್ಲರ ನಡುವಿನ ಸಂಭಾಷಣೆ ಸುದೀರ್ಘವಾಗಿದೆ. ಜಾರು ಮರ್ಲರು ಮತ್ತು ಸೊನ್ನೆ ಜೊತೆಯಾಗಿ ಹೋಗುತ್ತಾರೆ. ಅಲ್ಲಿ ಸೇರಿರುವ ಹೆಂಗಸರಿಂದ ಸೊನ್ನೆಗೆ ಅವಮಾನವಾಗುತ್ತದೆ. ಸೊನ್ನೆ ಹೋಗಿ ಕತ್ತಲೆ ಕೋಣೆ ಸೇರುತ್ತಾಳೆ. ಗಿಂಡೆಯನ್ನು ಸಿಂಗರಿಸಿ ಕೈ ಹಿಡಿದುಕೊಂಡು ಚಾವಡಿಗೆ ಕರೆದುಕೊಂಡು ಬಂದು ಅಜ್ಜರಲ್ಲಿ ಹೇಳಿ ಹೊರಟು ಹಿಂತಿರುಗಿ ಬರುತ್ತಾಳೆ. ದಂಡಿಗೆ ಉರ್ಕಿದೊಟ್ಟಿನ ಕೆಂದಾಳೆಯ ಪದ್ಮಕಟ್ಟೆಯಲ್ಲಿಗೆ ಬರುವಾಗ ಗುರುಮಾರ್ಲ ದಂಡಿಗೆಯಿಂದ ಇಳಿಸಿ ಮಾನ ಕಳೆದು ಬಂದವಳು ನನ್ನ ಅರಮನೆಗೆ ಬರಬಾರದು ಎನ್ನುತ್ತಾರೆ. ಅಣ್ಣ ಸಮಾಧಾನದ ಮಾತುಗಳನ್ನು ಹೇಳುತ್ತಾರೆ. ಇದನ್ನೂ ಕೇಳದ ಗುರುಮಾರ್ಲರು ಕ್ಷೌರಿಕನನ್ನು ಕರೆಸಿ ಸೊನ್ನೆಯ ತಲೆಬೋಳಿಸಿ ಜಾನುವಾರುಗಳ ಹಟ್ಟಿಯ ಹೊರಗಿನ ಕೆಲಸಗಳಿಗೆ ನೇಮಿಸುತ್ತಾರೆ. ಜಾನುವಾರುಗಳನ್ನು ಮೇಯಿಸಲು ಉರ್ಕಿದೊಟ್ಟು ಪದವಿಗೆ ಹೋದಾಗ ಉರಿಬೆರ್ಮರು ಬ್ರಾಹ್ಮಣ ವೇಷದಲ್ಲಿ ಬಂದು ವಿಚಾರಿಸುತ್ತಾರೆ. ನಿನ್ನಲ್ಲಿ ಮಾತನಾಡಿದರೆ ನನಗೆ ಬೇಡದ ಮಾತು ಹೇಳಿಯಾರು, ಬದಿಗೆ ನಿಲ್ಲು ಎಂದು ಹೇಳಿ ಜಾನುವಾರುಗಳನ್ನು ಅಟ್ಟಿಸಿಕೊಂಡು ಉರ್ಕಿದೊಟ್ಟಿಗೆ ಬರುತ್ತಾಳೆ. ಬ್ರಾಹ್ಮಣ ಕಾನಬೆಟ್ಟು ಅಜ್ಜನವರಿಗೆ ವಿಷಯ ತಿಳಿಸಿ ಏನು ಮಾಡಬೇಕೆಂಬುದನ್ನು ತಿಳಿಸಿಕೊಡುತ್ತಾನೆ. ಅಜ್ಜನವರು ಗುರುಮಾರ್ಲ ಜಾರುಮರ್ಲರನ್ನು ಕರೆಸಿ ಸೊನ್ನೆಗೆ ಕೊಟ್ಟ ಶಿಕ್ಷೆಯ ಬಗೆಗೆ ವಿಚಾರಿಸುತ್ತಾರೆ. ಆಕೆಗೆ ನಿಮ್ಮ ಅರಮನೆಯಲ್ಲಿ ಊರ ಹೆಂಗಸರು ಮಾಡಿದ ಅವಮಾನವನ್ನು ನೀವು ಕೇಳಿಲ್ಲವೇ ಎನ್ನುತ್ತಾರೆ ಗುರುಮಾರ್ಲ. ಅಜ್ಜನವರು ಹಾಗು ಗುರುಮಾರ್ಲರ ನಡುವಿನ ಸಂಭಾಷಣೆ ಸುದೀರ್ಘವಾಗಿದೆ. ಅಜ್ಜನವರು ಸೊನ್ನೆಯ ಹುಟ್ಟಿನ ಹಿನ್ನೆಲೆಯ ಬಗೆಗೆ

ತಿಳಿಸಿ ಸೊನ್ನೆಯನ್ನು ಸಾಕಿ ಸಂರಕ್ಷಣೆ ನೋಡಲು ಬೆರ್ಮೆರ್ ಕೊಟ್ಟ ವರ ಅವಳು ಎನ್ನುತ್ತಾರೆ. ಬೆರ್ಮೆರ್‌ಗೆ ಹೇಳಿರುವ ಹರಕೆ ಹಿಂದೆ ಇಟ್ಟು ನಿಮ್ಮ ಮದುವೆ ಮಾಡಿಬಿಟ್ಟೆ ನಾನು. ಅದಕ್ಕೆ ಏನಾದರೂ ಕ್ಷಮಾಪಣೆಯ ವಿಧಿ ಮಾಡುವ ಎನ್ನುತ್ತಾರೆ ಅಜ್ಜನವರು. ಸೊನ್ನೆಯನ್ನು ಕರೆದು ಮಿಂದು ಬರುವಂತೆ ಹೇಳುತ್ತಾರೆ ಅಜ್ಜನವರು. ಆಕೆ ಮಿಂದು ಮಡಿಯುಟ್ಟು ಬರುತ್ತಾಳೆ. ಅಜ್ಜನವರು ಹರಕೆ ಹೇಳಿಕೊಳ್ಳುತ್ತಾರೆ.

ತುಳುಪಠ್ಯ

ಸೊನ್ನೆ ಸತ್ಯದ ಸಿರಿನ ಬಂಜಿಡ್ ಜನನಾಯಿನ ಪಲ ಇತ್ತ್‌ಂಡ
ಇನಿಕ್ ಪಲಬಕರ ತೋಜಿದ್ ಬರೊಡು
ಸೊನ್ನೆನ ಕರಿಯಣಿ ಅರಿಪ್ಪಾವೆ
ಅಂಕಣ ಕಟ್ಟಾವೆ ದೇವೆರೆ ಓ
ಮೂಂಕುತ್ತಿ ಅರ್ಪಾವೆ ಮುಗುಲಿ ದೀಪಾವೆ
ಸೊಂಟೊದ ಒಗ್ಗಿ ನೇವಲೊ ದೆಪ್ಪಾವೆ
ಪಾಣಿಪೀಟೊಗು ಸಿಂಗಾರ ಮಲ್ಪಾಡ್ದುವೆ
ಸೊನ್ನೆ ಪೊಣ್ಣು ಪೋದು ಪೊಂಜೋವು ಆಯಲ್‌ಂಡ

ಕನ್ನಡಾನುವಾದ

ಸೊನ್ನೆ ಸತ್ಯದ ಸಿರಿಯ ಗರ್ಭದಲ್ಲಿ ಜನನವಾದ ಫಲ ಇದ್ದರೆ
ಇಂದು ಫಲ ಕಾಣಿಸಿಕೊಳ್ಳಬೇಕು
ಸೊನ್ನೆಯ ಕರಿಮಣಿ ಅಳಿಸಿ ಅಂಕಣ ಕಟ್ಟಿಸಿಯೇನು
ಮೂಗಿನ ಮೂಗುತಿ ಕರಗಿಸಿ ಮುಗುಳಿ ಇಡಿಸಿಯೇನು
ಸೊಂಟದ ಜೋಡು ನೇವಳ ಕರಗಿಸಿ ಪಾಣಿ ಪೀಠದ ಸಿಂಗಾರ ಮಾಡಿಸಿಯೇನು
ಸೊನ್ನೆ ಹೆಣ್ಣು ಹೋಗಿ ಹೆಂಗಸಾದರೆ (ಪುಟ 331)

ಎಂದು ಹರಕೆ ಹೇಳಿಕೊಳ್ಳುತ್ತಾರೆ. ಹಿಂತಿರುಗಿ ಕಾನಬೆಟ್ಟಿಗೆ ಹೋಗುತ್ತಾರೆ. ಹೇಳಿಕೊಂಡ ಹರಕೆಯಂತೆ ಸೊನ್ನೆ ಮದುಮಗಳಾಗುತ್ತಾಳೆ.

ರಾಮಕ್ಕ ಅವರ ಪಠ್ಯವು ಗಿಂಡೆಗಿಳಿರಾಮು ಕಾನಬೆಟ್ಟಿನರಮನೆಯಲ್ಲಿ ಋತುಮತಿಯಾದುದನ್ನು ತಿಳಿಸುತ್ತದೆ. ಇದರ ಮೈಲೆ ಕಳೆಯುವ ಆಚರಣೆಗೆ ಊರ ಹೆಣ್ಣುಗಳು ಎಲ್ಲ ಕಡೆ ಹೇಳಿಕೆ ನೀಡಿ ಸೊನ್ನೆ ಋತುಮತಿಯಾಗಲಿಲ್ಲ ಎಂಬ ಕಾರಣಕ್ಕೆ ಅವಳನ್ನು ಬಿಡುತ್ತಾರೆ. ಇದನ್ನು ತಿಳಿದ ಅಜ್ಜನವರು ಸ್ವತಃ ಅವರೇ ಉರ್ಕಿದೊಟ್ಟಿಗೆ ಹೋಗಿ ಸೊನ್ನೆಯನ್ನು ಆಮಂತ್ರಿಸುತ್ತಾರೆ. ಆ ಹೊತ್ತಿಗೆ ಅರಮನೆಯಲ್ಲಿ ಗುರುಮಾರ್ಲರು ಇರದೆ ಬೈಲು ಗದ್ದೆಯ ಕಡೆಗೆ ಹೋಗಿರುತ್ತಾರೆ. ನನ್ನ ಗಂಡನಿಗೆ ನಾನು ಹೇಳುತ್ತೇನೆ

ಅಜ್ಜನವರೇ ಎಂದು ಆಮಂತ್ರಣದ ವೀಳ್ಯವನ್ನು ಸೊನ್ನೆಯೇ ತೆಗೆದುಕೊಳ್ಳುತ್ತಾಳೆ. ಇತ್ತ ಬೈಲಲ್ಲೆ ಹೋದ ಗುರುಮಾರ್ಲರ ಕಿವಿಗೆ ಸೊನ್ನೆ ಸೇರಿದ ಕಳಕ್ಕೆ ನಾವು ಸೇರಬಾರದು ಎಂದು ನಾಲ್ಕು ಮನೆಯ ಹೆಣ್ಣುಗಳು ಮಾತನಾಡಿಕೊಳ್ಳುವುದು ಬೀಳುತ್ತದೆ. ಮನೆಗೆ ಬಂದ ಕೂಡಲೇ ಅಜ್ಜನವರು ಬಂದು ಆಮಂತ್ರಿಸಿರುವ ವಿಚಾರವನ್ನು ಗಂಡನಿಗೆ ಹೇಳಿ ನಮಗೆ ತಂಗಿಯ ನೀರ ಪೆರತ್ತಕ್ಕೆ ಹೋಗಬೇಕೆನ್ನುತ್ತಾಳೆ. ಆಗ ಗುರುಮಾರ್ಲರು ನೀನು ಅಲ್ಲಿಗೆ ಹೋದರೆ ನಾಲ್ಕು ನಕರದ ಹೆಣ್ಣುಮಕ್ಕಳು ನಿನಗೆ ಕಪಿ ಕಟ್ಟಿ ಕಪಿತನ ಹೇಳುವುದನ್ನು ನಾನೇ ಕಿವಿಯಿಂದ ಕೇಳಿದ್ದೇನೆ. ಆದುದರಿಂದ ಅಲ್ಲಿಗೆ ಹೋಗುವುದು ಬೇಡ ಎನ್ನಲು ಸೊನ್ನೆ ನಾವಿಬ್ಬರೂ ಒಂದೇ ತೊಟ್ಟಿಲಲ್ಲಿ ಮಲಗಿದವರು. ನಾನು ಹೋಗಿ ತಂಗಿಯ ಅಂದ ನೋಡಬೇಕೆಂದು ಹಠ ಕಟ್ಟುತ್ತಾಳೆ. ಹಾಗಾದರೆ ನನ್ನ ಅಣ್ಣ ನಿನ್ನ ಭಾವನವರಾದ ಜಾರುಮ್ಮಾರ್ಲರು ಕೆಲೆಂಜ ಪರಾರಿಯಲ್ಲಿ ಇದ್ದಾರೆ. ಅವರಲ್ಲಿ ಕೇಳಿ ಹೋಗು ಎನ್ನುತ್ತಾರೆ. ಅಲ್ಲಿಗೆ ಸೊನ್ನೆ ಓಡೋಡಿ ಹೋಗುತ್ತಾಳೆ. ವಿಷಯ ತಿಳಿಸಿ ನಾನು ಹೋಗಲೇಬೇಕೆನ್ನುತ್ತಾಳೆ. ಆಗ ಜಾರುಮಾರ್ಲರು ವಿಷಯ ತಿಳಿದುಕೊಂಡು ನೀನು ಹೋಗಬೇಡವೆಂದು ತಮ್ಮ ಹೇಳಿದ್ದು ಸರಿಯಾಗಿಯೇ ಇದೆ ಎನ್ನುತ್ತಾರೆ. ಅಲ್ಲಿಂದ ಹಿಂತಿರುಗಿದ ಸೊನ್ನೆ ನೆರವಾಗಿ ತನ್ನರಮನೆಗೆ ಬಂದು ದಂಡಿಗೆಯನ್ನು ಸಿದ್ಧಗೊಳಿಸಿ ಕಾನಬೆಟ್ಟಿಗೆ ಹೊರಡಲು ತಯಾರಾಗುತ್ತಾಳೆ. ಆಗ ಗುರುಮಾರ್ಲರು ಜಾರುಮಾರ್ಲರು ಬಂದು ಕಾನಬೆಟ್ಟಿನಲ್ಲಿ ಅವಮಾನಿತಳಾಗಿ ಬಂದರೆ ಉರ್ಕಿದೊಟ್ಟು ಅರಮನೆಯ ಮೆಟ್ಟುಕಲ್ಲಿಗೆ ಕಾಲಿಡಲು ಬಿಡಲಾರೆವು ಎಂದು ಹೇಳುತ್ತಾರೆ. ಆದರೂ ಹೇಳಿದ ಮಾತನ್ನು ಕೇಳದೆ ಸೊನ್ನೆ ಹೊರಟು ಹೋಗುತ್ತಾಳೆ.

ಸೊನ್ನೆಯ ದಂಡಿಗೆ ಬರುವುದನ್ನು ಕಂಡ ಸೇರಿದ ಮಂದಿ ಸೊನ್ನೆ ಸೇರಿದ ಸಭೆಯಲ್ಲಿ ನಾವು ನಿಲ್ಲಲಾರೆವು ಎಂದು ಹೇಳಿ ಎಲ್ಲ ಕೆಲಸಗಳನ್ನೂ ಅರ್ಧದಲ್ಲೇ ಬಿಟ್ಟು ಹೊರಡುತ್ತಾರೆ. ಇದನ್ನು ತಿಳಿದುಕೊಂಡ ಅಜ್ಜನವರು ತಾವೇ ಹೊರಟು ಮಧ್ಯ ದಾರಿಗೆ ಹೋಗಿ ಸೊನ್ನೆಯನ್ನು ತಡೆದು ನಡೆದ ವಿಷಯ ತಿಳಿಸಿ ಇಂದಿನ ಒಂದು ದಿನ ಬಾರದೆ ನನ್ನ ಮರ್ಯಾದೆ ಉಳಿಸು ಎಂದು ಬೇಡಿಕೊಳ್ಳುತ್ತಾರೆ. ನೀನು ಋತುಮತಿ ಯಾದರೆ ಆ ಕಾರ್ಯಕ್ರಮವನ್ನು ಇದೇ ರೀತಿಯಲ್ಲಿ ವಿಜೃಂಭಣೆಯಿಂದ ಮಾಡುವೆನು. ಇಂದು ಮಾತ್ರ ಹಿಂದೆ ಹೋಗು ಎಂದು ವಿನಂತಿಸಿಕೊಳ್ಳುತ್ತಾರೆ.

ಗಿಂಡೆಯ ಋತುಮತಿಯಾದುದರ ಮದುವೆಗೆ ತಯಾರಿ ನಡೆಯುತ್ತದೆ. ಹೆಂಗಸರು ಗಿಂಡೆಯನ್ನು ಶೃಂಗಾರ ಮಾಡುತ್ತಾರೆ. ಗಿಂಡೆಗೆ ಎಲ್ಲ ರೀತಿಯ ಆಭರಣಗಳನ್ನು ತೊಡಿಸುತ್ತಾರೆ. ಕೈ ಹಿಡಿದುಕೊಂಡು ಚಾವಡಿಗೆ ಕರೆ ತರಬೇಕಾದರೆ ಸೊನ್ನೆ ಗಿಂಡೆಯನ್ನು ಮಾಯಮಾಡಿ ದಂಡಿಗೆಯಲ್ಲಿ ಕುಳಿತು ಉರ್ಕಿದೊಟ್ಟು ಅರಮನೆಗೆ ಹಿಂತಿರುಗಿ ಬರುತ್ತಾಳೆ. ಗುರುಮಾರ್ಲರು ಜಾರುಮರ್ಲರು ಸೊನ್ನೆಯನ್ನು ಅರಮನೆಯೊಳಗಡೆ ಬರದಂತೆ ತಡೆದು ಹೊರಗಿನ ಕೆಲಸಕ್ಕೆ ನೇಮಿಸುವುದು ಇತ್ಯಾದಿ ಉಳಿದ ಪಠ್ಯಗಳಂತೆ ಇದೆ.

ರಾಮಕ್ಕನವರ ಪಠ್ಯದಲ್ಲಿ ಬರುವ ವ್ಯತ್ಯಾಸವೆಂದರೆ ಲಂಕೆಲೋಕನಾಡಿನ ಬೆರ್ಮೆರ್

ಬ್ರಾಹ್ಮಣ ಮಾಣಿಯಾಗಿ ಬಂದು ಸೊನ್ನೆಗೆ ಮೂರು ಕಲ್ಲುಗಳನ್ನು ಮಂತ್ರಿಸಿ ಕೊಟ್ಟು ಇದರಲ್ಲಿ ಒಂದು ಕಲ್ಲನ್ನು ಕೊಂಡುಹೋಗಿ ಮದರಂಗಿ ಗಿಡಕ್ಕೆ ಹಾಕಿ ಮದರಂಗಿ ಮುಟ್ಟಬೇಕು. ಎರಡನೇ ಕಲ್ಲನ್ನು ಪದ್ಮಕಟ್ಟೆ ಕೆಂದಾಳೆಯ ಬುಡಕ್ಕೆ ಹಾಕಬೇಕು, ಮೂರನೆ ಕಲ್ಲನ್ನು ದೇವರ ಕೆರೆಗೆ ಹಾಕಬೇಕು. ಹಾಗೆ ಮಾಡಿದರೆ ನೀನು ಋತುಮತಿಯಾಗಿ ಗರ್ಭ ನಿಲ್ಲುತ್ತದೆ. ಸೂಡ ನಂದಳಿಕೆ ನಾಲ್ಕು ಸ್ಥಾನಕ್ಕೆ ನಾನು ಹರಕೆ ಹೇಳಿಕೊಳ್ಳುತ್ತೇನೆ. ಅವಳಿ ಮಕ್ಕಳನ್ನು ನೀನು ಹೆರುತ್ತಿ. ಆ ಮಕ್ಕಳಿಗೆ ಮದುವೆ ಸಂಬಂಧ ಬಂದು ಮದುವೆ ಮಾಡುವ ಮೊದಲು ಸೂಡದ ನಂದಳಿಕೆಯ ಹರಕೆ ತೀರಿಸಿ ಆ ನಂತರ ಮದುವೆ ಸಂಬಂಧ ಹಿಡಿಯಬೇಕೆನ್ನುತ್ತಾರೆ. ಸೂಡ ನಂದಳಿಕೆಯ ನಾಲ್ಕು ಸ್ಥಾನಕ್ಕೆ ಬಂಗಾರದ ಮಗು, ಬೆಳ್ಳಿಯ ತೊಟ್ಟಿಲು, ದಂಡು ಕುಂಬಳ, ಜೋಡಿ ತೆಂಗಿನಕಾಯಿ, ಹಿಡಿಹಣ, ಕವಳೆ ವೀಳ್ಯ ಅಡಿಕೆ, ಹಂಡೆ ಹಾಲು, ಗಿಂಡೆಯ ನೀರು–ಹರಕೆ ಹೇಳಿಕೊಂಡೆ. ನಾನು ಹೇಳಿರುವ ವಿಚಾರವನ್ನು ಸರಿಯಾಗಿ ನೆನಪಿಟ್ಟುಕೋ ಸೊನ್ನೆ ಎಂದು ಹೇಳಿ ಆಕಡೆ ನೋಡಿ ಈ ಕಡೆ ನೋಡಬೇಕಾದರೆ ಬ್ರಾಹ್ಮಣ ಮಾಯವಾಗುತ್ತಾನೆ. ಬ್ರಾಹ್ಮಣ ಹೇಳಿದಂತೆ ಮಾಡಿದ ಸೊನ್ನೆ ಋತುಮತಿಯಾಗುತ್ತಾಳೆ. ಈ ವಿಚಾರವನ್ನು ಗುರುಮಾರ್ಲ ರಿಗೆ ತಿಳಿಸಲು ಅವರಿಗೆ ಸಂತೋಷವಾಗುತ್ತದೆ. ಸೊನ್ನೆಗೆ ಋತುಮತಿಯಾದುದರ ಮದುವೆ ಮಾಡಬೇಕೆಂದು ಮಡಿವಾಳಗಿತ್ತಿಯನ್ನು ಬರಹೇಳಿ ಊರ ಹೆಂಗಸರಿಗೆ ತಿಳಿಸಲು ಇದು ಸೊನ್ನೆಯ ಉಪಾಯ ಎಂದು ಮತ್ತೆ ಕಪಿತನ ಹೇಳುವ ವಿವರಗಳಿವೆ.

ಲೀಲಾ ಅವರ ಪಠ್ಯದಲ್ಲಿ ಗಿಂಡೆ ಮದುಮಗಳಾಗುವುದು, ಮದುಮಗಳ ಮದುವೆಗೆ ಸೊನ್ನೆಗೆ ಹೇಳಿಕೆಯನ್ನು ನಾಲ್ಕು ಊರಿನ ಹೆಂಗಸರು ಕೊಡದಿರುವುದು, ಕೊನೆಗೆ ಅಜ್ಜನವರೇ ಉರ್ಕಿದೊಟ್ಟಿಗೆ ಹೋಗಿ ಸೊನ್ನೆಯನ್ನು ಆಮಂತ್ರಿಸುವುದು, ಗುರುಮಾರ್ಲ ಜಾರುಮರ್ಲರಿಂದ ವಿರೋಧ, ಸೊನ್ನೆ ಹಠಕಟ್ಟಿ ಕಾನಬೆಟ್ಟಿಗೆ ಹೋಗುವುದು, ಸೇರಿದ ಹೆಂಗಸರಿಂದ ಸೊನ್ನೆಗೆ ಅವಮಾನ, ಇದನ್ನು ತಿಳಿದ ಅಜ್ಜನವರು ನೀನು ಬಂದ ದಾರಿಯಲ್ಲೆ ಹಿಂದೆ ಹೋಗಿ ನಿನ್ನದೂ ನನ್ನದೂ ಮರ್ಯಾದೆ ಉಳಿಸು ಎಂದು ಕೇಳಿಕೊಳ್ಳುವ ವಿಚಾರಗಳು ಮೇಲಿನ ಪಠ್ಯಗಳಂತೆ ಇದೆ. ಆದರೆ ಉಳಿದ ಪಠ್ಯಗಳಲ್ಲಿ ಇಲ್ಲದ ಕೆಲವು ವ್ಯತ್ಯಾಸಗಳು ಈ ಪಠ್ಯದಲ್ಲಿ ಕಂಡುಬರುತ್ತವೆ. ಅವಮಾನಿತಳಾದ ಸೊನ್ನೆ ಹೊರಟು ಕಾನಬೆಟ್ಟಿನಿಂದ ಹೊರಟು ಬಂದು ಬಿಳಿಯ ಹುಣಸೆ ಮರದಡಿ ಕುಳಿತುಕೊಂಡು ನನಗೆ ಈ ಗತಿ ಬಂತಲ್ಲಾ ಎಂದು ದುಃಖಿಸುತ್ತಾಳೆ.ಇವಳ ಕಣ್ಣೀರು ಹೋಗಿ ಕುಮಾರನಿಗೆ ಅರ್ಪಿತವಾಗುತ್ತದೆ. ಮಾಯದಲ್ಲಿ ಬಂದ ಕುಮಾರ ಸೊನ್ನೆಗೆ ಈ ರೀತಿ ಹೇಳುತ್ತಾನೆ. ಕಾನಬೆಟ್ಟಿನ ಅರಮನೆಯಲ್ಲಿ ಗಿಂಡೆಯ ಋತುಮತಿಯಾದುದರ ಆಚರಣೆ ಮುಗಿಸಿ ಊಟಕ್ಕೆ ಕುಳಿತುಕೊಳ್ಳುವಾಗ ನೀನು ಹೋಗು. ಗಿಂಡೆಯನ್ನು ಊಟದ ಪಂಕ್ತಿಯಿಂದ ಎಳೆದುಕೊಂಡು ದಂಡಿಗೆಯಲ್ಲಿ ಹಾಕಿಕೊಂಡು ಈ ಬಿಳಿಯ ಹುಣಸೆ ಮರದಡಿಗೆ ತಾ. ದಂಡಿಗೆಯಿಂದ ಎಳೆದು ಹುಣಸೆ ಮರದಡಿ ಹಾಕಿ ನಿನ್ನ ತಾಯಿ ಸಿರಿಯ ವರ ಪಡೆದುಕೊಂಡು –

ತುಳುಪಠ್ಯ
ಈ ಇಡೆಟ್ಟೆ ಬತ್ತಿನ ಮಗಲ್ ಇಡೆಟ್ಟೆ ಪೋವೊಡುಂದು ಮೂಜಿ ಗೆರೆ ಒಯ್ತ್‌ದ್ ಗಿಂಡ್ಯೆನ ನೆತ್ತಿಗ್ ಕೈ ಕೊರ್ದ್ ಮಾಯ ಮಲ್ಪೊಡು.

ಕನ್ನಡಾನುವಾದ
ನೀನು ಎಡೆಯಲ್ಲಿ ಬಂದ ಮಗಳು ಎಡೆಯಲ್ಲೇ ಹೋಗಬೇಕೆಂದು ಮೂರು ಗೆರೆ ಎಳೆದು ಗಿಂಡೆಯ ನೆತ್ತಿಗೆ ಕೈ ಕೊಟ್ಟು ಮಾಯ ಮಾಡಬೇಕೆಂದು ಹೇಳುತ್ತಾನೆ.

ಅದೇ ರೀತಿಯಲ್ಲಿ ಗಿಂಡೆಯನ್ನು ಮಾಯಮಾಡಿ ದಂಡಿಗೆಯಲ್ಲಿ ಕುಳಿತು ಉರ್ಕಿದೊಟ್ಟಿಗೆ ಬರುತ್ತಾಳೆ. ಗಿಂಡೆಯನ್ನು ಮಾಯ ಮಾಡಿ ಬಂದ ವಿಚಾರವನ್ನು ಗಂಡನಿಗೆ ತಿಳಿಸುತ್ತಾಳೆ. ಆಗ ಜಾರುಮಾರ್ಲರು ಸಿಟ್ಟುಗೊಂಡು ಉರ್ಕಿದೊಟ್ಟಲ್ಲಿ ನೀನೂ ಕೇಂಜ ಪರಾರಿಯಲ್ಲಿ ಜಾರುಮಾರ್ಲರೂ ನೀವಿಬ್ಬರು ಭಾವ ನಾದಿನಿ ಸೇರಿಕೊಂಡು ಏನು ಬೇಕಾದರೂ ಮಾಡಿ. ನಾನು ಹೊರಟು ಹೋಗುತ್ತೇನೆಂದು ಉರ್ಕಿದೊಟ್ಟು ಇಳಿದು ಹೋಗುತ್ತಾರೆ. ಆಗ ಸೊನ್ನೆ ಎದುರಿಗೆ ಹೋಗಿ “ನಿಮ್ಮ ಭಾವನವರು ನನ್ನ ಅಣ್ಣನವರಾದ ಕುಮಾರ ಮಾಯದಲ್ಲಿ ಬಂದು ಹೇಳಿದ್ದಾರೆ. ಬಡೆಕ್ಕಾಯಿ ಲಂಕೆಲೋಕನಾಡು, ಮೂಡಾಯಿ ಮಜಲೊಟ್ಟುವಿಗೆ ಹರಕೆ ಹೇಳಿಕೊಂಡರೆ ನಾನು ಋತುಮತಿಯಾಗಿ ಸಂತಾನದ ಫಲ ದೊರೆಯುತ್ತದೆಯೆಂದು ಹೇಳಿದ್ದಾರೆ ಎನ್ನುತ್ತಾಳೆ. ಹೀಗಾಗಿ ಕಾನಬೆಟ್ಟು ಅಜ್ಜನವರನ್ನು ಬರಹೇಳಿ ಅವರಿಗೆ ಹಾಗೂ ಕೇಂಜ ಪರಾರಿಯ ಜಾರುಮಾರ್ಲರಿಗೆ ಈ ವಿಷಯವನ್ನು ತಿಳಿಸಲು ಅವರು ಸಂತೋಷದಿಂದ ಒಪ್ಪುತ್ತಾರೆ. ಸೊನ್ನೆ ಹೋಗಿ ಸ್ನಾನ ಮಾಡಿ ಮಡಿಯುಟ್ಟು ಬಂದು ತೊಳಸಿ ಮಂಟಪದ ಹತ್ತಿರ ನಿಲ್ಲುತ್ತಾಳೆ. ಕಾನಬೆಟ್ಟಿನ ಅಜ್ಜನವರು, ಜಾರುಮರ್ಲರು ಹಾಗೂ ಗುರುಮಾರ್ಲರು ಜೊತೆಯಾಗಿ ಸೇರಿ ಬಡಗಣ ಲಂಕೆಲೋಕನಾಡಿಗೆ ಬಂಗಾರದ ಮಗು, ಬೆಳ್ಳಿಯ ತೊಟ್ಟಿಲು, ಹಿಡಿಹಣ ಹರಕೆ ಹೇಳಿಕೊಳ್ಳುತ್ತಾರೆ. ಮೂಡಾಯಿ ಮುಜಲೊಟ್ಟು ಉರಿಬೆರ್ಮ ರಿಗೆ ಓಲೆ ಕರಗಿಸಿ ಹಂಚು ಹಾಕಿಸುತ್ತೇವೆ, ಮೂಗುತಿ ಕರಗಿಸಿ ಮುಗುಳಿ ಇರಿಸುತ್ತೇವೆ, ಅಂಕಿನಿ (ಕೈಯ ಬಳೆ) ಕರಗಿಸಿ ಕಿಂಕಿನಿ ಕಟ್ಟಿಸುತ್ತೇವೆ ಎಂಬ ಹರಕೆ ಹೊತ್ತುಕೊಳ್ಳುತ್ತಾರೆ. ಹೇಳಿಕೊಂಡ ಹರಕೆಯಲ್ಲೇ ಸೊನ್ನೆ ಋತುಮತಿಯಾಗುತ್ತಾಳೆ. ಮಡಿವಾಳರ ಹರಿವಿನಲ್ಲಿ ಮಿಂದು ಬಂದು ಸ್ವಲ್ಪ ದಿನಗಳಲ್ಲೇ ಹರಕೆಯಿಂದ ಮೂಡಾಯಿ ಮುಜಲೊಟ್ಟು ಉರಿಬೆರ್ಮರು ಸೊನ್ನೆಯ ಗರ್ಭದಲ್ಲಿ ಅವಳಿ ಮಕ್ಕಳ ಜನನ ಹಾಗೂ ಅದರ ಬೆನ್ನಿಗೇ ಮರಣವನ್ನೂ ಬರೆಯುತ್ತಾರೆ.

ಸೊನ್ನೆಯ ಋತುಮತಿಯಾದುದರ ಆಚರಣೆ ಹಾಗೂ ಸೀಮಂತದ ಮದುವೆ

ಕರ್ಗಿಯವರ ಪತ್ನಿಯವು ಸೊನ್ನೆ ಹೇಳಿಕೊಂಡ ಹರಕೆಯ ಕಾರಣದಿಂದ ಋತುಮತಿ ಯಾಗುತ್ತಾಳೆ. ಗುರ್ಗಲಾಡಿ ಚಂದು ಪೆರ್ಗಡೆಯವರಿಗೆ ವಿಷಯ ತಿಳಿಸುತ್ತಾರೆ. ಅವರು

ಸಂತೋಷದಿಂದ ಹೊರಟು ಉರ್ಕಿದೊಟ್ಟುವಿಗೆ ಬಂದು ಸೊನ್ನೆಯ ಮದುಮಗಳ ಮದುವೆ (ಋತುಮತಿಯಾದುದರ ಆಚರಣೆ) ಗೆ ಸಿದ್ಧತೆ ನಡೆಸುತ್ತಾರೆ. ಕೆಳ ಹಾಗೂ ಮೇಲಿನ ಕರೆಯ ಹೆಣ್ಣುಗಳಿಗೆ ಸೊನ್ನೆ ಮದುಮಗಳಾಗಿದ್ದಾಳೆ. ನೀರು ಹೊಯ್ಯಲು ಬರಬೇಕೆಂದು ಹೇಳಿಕೆ ಕೊಡುತ್ತಾರೆ ಗುರುಮಾರ್ಲರು. ಮಡಿವಾಲಗಿತ್ತಿ ಚೆಲುವೆಯನ್ನು ಕರೆಸುತ್ತಾರೆ. ಅವಳು ಅಜ್ಜನವರಲ್ಲಿ ನಾಲ್ಕು ಮನೆಯ ಹೆಣ್ಣುಗಳು ಇದು ಸೊನ್ನೆಯ ಕಣ್ಣುಕಟ್ಟು ವಿದ್ಯೆ ಎಂದು ಮಾತನಾಡಿಕೊಳ್ಳುವ ಬಗೆಗೆ ತಿಳಿಸುತ್ತಾಳೆ. ಸೊನ್ನೆ ಮದುಮಗಳಾಗಲಿಲ್ಲ. ಕಾಡಿನ ಉಣ್ಣಿಯನ್ನು ತಂದು ತಾಗಿಸಿಕೊಂಡಿದ್ದಾಳೋ ಏನೋ (ರಾಮಕ್ಕ ಅವರ ಪಠ್ಯದಲ್ಲಿ ಕಾಡಿನ ಜೆಂಕೆ ಸೊಪ್ಪು ಉಜ್ಜಿಕೊಂಡು) ಎಂದು ತಮಾಷೆಯ ಮಾತುಗಳನ್ನಾಡುತ್ತಿರುವ ಬಗೆಗೆ ತಿಳಿಸುತ್ತಾಳೆ. ಕೊನೆಗೂ ಮಡಿವಾಳಗಿತ್ತಿ ಬಂದು ಋತುಮತಿಯಾದುದರ ಮೊದಲ ಆಚರಣೆಯನ್ನು ನೆರವೇರಿಸುತ್ತಾಳೆ. ಕೊನೆಗೂ ನಾಲ್ಕು ಮನೆಯ ಹೆಣ್ಣುಗಳು ಒಬ್ಬರಿಗೊಬ್ಬರು ಮಾತನಾಡಿಕೊಂಡು ಬಂದು ಈ ಆಚರಣೆಯಲ್ಲಿ ಭಾಗವಹಿಸುತ್ತಾರೆ. ಮಡಿವಾಳರ ಮಾಬುಕರಿಯ ಹೊಳೆಗೆ ಸೀಗೆಬಾಗೆಯೊಂದಿಗೆ ಸೊನ್ನೆಯನ್ನು ಕರೆದುಕೊಂಡು ಹೋದ ಹೆಂಗಸರು ಅವಳು ಶುದ್ಧವಾದ ಮೇಲೆ ಕರೆದುಕೊಂಡು ಬಂದು ಹಸಿ ಮಡಲಿನ ಗುಂಡ ಕಟ್ಟಿಸಿ(ಹಸಿ ತೆಂಗಿನ ಮಡಲಿನಿಂದ ತಯಾರಿಸಿದ ಗುಡಿಯ ರಚನೆ) ಅದರೊಳಗೆ ಕುಳ್ಳಿರಿಸಿ ಊಟ ಮಾಡಿ ಅವರವರ ಮನೆಗೆ ತೆರಳುವ ಸಂದರ್ಭ ಸೊನ್ನೆ ಮದುಮಗಳಾಗಿದ್ದಾಳಂತೆ ಎಂದು ಮುಖ ಮುಖ ನೋಡಿಕೊಂಡು ನಗುತ್ತಾ ಹೋಗುತ್ತಾರೆ. ಈ ಎಲ್ಲ ಬೆಳವಣಿಗೆಗಳಿಂದ ಸೊನ್ನೆಗೆ ಅತೀವ ನೋವಾಗುತ್ತದೆ. ಇದಕ್ಕೆಲ್ಲಾ ನಾವು ಉತ್ತರಿಸುವುದಿಲ್ಲ. ಆಕೆಯ ತಾಯಿ ಮಾಯದ ಸಿರಿ ಇವೆಲ್ಲವನ್ನೂ ನೋಡಿಕೊಂಡರೆ ಸಾಕೆಂದು ಮನದಲ್ಲಿ ನೆನೆಯುತ್ತಾರೆ ಜಾರುಮಾರ್ಲರು. ಇತ್ತ ತನ್ನ ಮೊಮ್ಮಗಳು ಮದುಮಗಳಾದುದಕ್ಕೆ ಕಾನಬೆಟ್ಟಿನಿಂದ ಹಂಡೆ ಹಂಡೆ ತುಪ್ಪ, ಮುಡಿ ಮುಡಿ ಅವಲಕ್ಕಿ ಹೊರೆ ಕಳುಹಿಸಿದ್ದಾರೆ. ತಮ್ಮನ ಹೆಂಡತಿಗಾಗಿ ಜಾರುಮಾರ್ಲರೂ ಹೊರೆ ಕಳುಹಿಸಿಕೊಡುತ್ತಾರೆ. ಹನ್ನೆರಡನೇ ದಿನದಲ್ಲಿ ಮದುಮಗಳ ಮದುವೆ ಓ ಮಾಡಬೇಕೆಂದರು. ನಾಲ್ಕು ಮನೆಯ ಹೆಣ್ಣುಗಳು ಮೊದಲು ನೀರು ಎರೆದವರನ್ನು ಬರಹೇಳಿದರು. ಮದುಮಗಳ ಸಿಂಗಾರ ಮಾಡಲು ನಾಲ್ಕು ಕರಂಡೆ (ಪೆಟ್ಟಿಗೆ) ಆಭರಣ ಹಿಡಿದುಕೊಂಡು ಬನ್ನಿ ಎಂದರು ಜಾರುಮಾರ್ಲರು. ಆಗ ಹೆಂಗಸರು ಒಂದು ಬಾರಿಯ ನಮ್ಮ ನಾಲ್ಕು ಕರಂಡೆ ಆಭರಣ ಗಿಂಡೆ ಮಾಯವಾಗು ವಾಗ ಹೋಗಿದೆ ಎಂದರು. ಅವರ ಆಭರಣ ಬೇಡ ಭಾವನವರೇ. ನನ್ನದೇ ಒಂದು ಕರಂಡೆ ಆಭರಣ ಒಳಗೆ ಕಲ್ಲಕಲೆಂಬಿಯಲ್ಲಿದೆ. ಅದರಲ್ಲಿ ಸಿಂಗಾರ ಮಾಡಿದರೆ ಸಾಕೆನ್ನುತ್ತಾಳೆ ಸೊನ್ನೆ. ಬಂಗಾರದ ಕುರ್ಚಿಯಲ್ಲಿ ಗುರುಮಾರ್ಲರು ಸೊನ್ನೆಯನ್ನು ಕೂರಿಸಿ ಮದುಮಗಳ ಮದುವೆ ಮಾಡಿಸಿದರು. ಊಟೋಪಚಾರವಾದ ಮೇಲೆ ಅಜ್ಜನವರು ಕಾನಬೆಟ್ಟಿಗೆ ಸೊನ್ನೆಯನ್ನು ಕರೆದುಕೊಂಡು ಹೋಗುತ್ತಾರೆ. ಸಂಜೆ ಗುರುಮಾರ್ಲರು ಬಂದು ಮತ್ತೆ ಉರ್ಕಿದೊಟ್ಟಿಗೆ ಕರೆದುಕೊಂಡು ಬರುತ್ತಾರೆ. ಹೀಗೆ

ಹೋಗುತ್ತಾ ಬರುತ್ತಾ ಇರಲು ಒಂದುದಿನ ಸೊನ್ನೆ ಗರ್ಭವತಿಯಾಗುತ್ತಾಳೆ.

ಸೊನ್ನೆಯ ಗರ್ಭಕ್ಕೆ ಏಳು ತಿಂಗಳಾದದ್ದನ್ನು ತಿಳಿದುಕೊಂಡ ಗುರುಮಾರ್ಲರು ಕಾನಬೆಟ್ಟಿನ ಅಜ್ಜನವರಿಗೆ ಹಾಗೂ ಕೆಲಿಂಜ ಪರಾರಿ ಜಾರುಮರ್ಲರಿಗೆ ತಿಳಿಸುತ್ತಾರೆ. ಮೂರೂ ಜನ ಒಟ್ಟಿಗೆ ಹೋಗಿ ಬಲ್ಯಾಯನಲ್ಲಿ ಬಯಕೆಗೆ ಒಳ್ಳೆಯ ದಿನಮಾನ ಕೇಳುತ್ತಾರೆ. ಬಲ್ಯಾಯ ಸೀಮಂತದ ಆಚರಣೆಯ ವಿಧಿಯಾದ ಕೋಳಿ ಬಿಟ್ಟು, ಹೂಸೀರೆ ಕೊಡುವ ಹೊತ್ತು ಮತ್ತು ದಿನವನ್ನು ತಿಳಿಸಿದ. ಅದರಂತೆ ಸೊನ್ನೆಯ ಸೀಮಂತವನ್ನು ಈವರೆಗೆ ಮಾಡದ ರೀತಿಯಲ್ಲಿ ಮಾಡಬೇಕೆಂದು ಮನದಲ್ಲಿ ಬಯಸುತ್ತಾರೆ. ಊರವರೆಲ್ಲರಿಗೂ ಹೇಳಿಕೆ ಮಾಡುತ್ತಾರೆ. ಆದರೆ ನಾಲ್ಕು ಮನೆಯ ಹೆಣ್ಣುಗಳು ಮಾತ್ರ ಬರುವುದಿಲ್ಲ. ಅಜ್ಜನವರು ಕೆಳಕರೆಯ ಪಾಲವರು, ಮೇಲಿನ ಕರೆಯ ಪಾಲವರ ಹೆಣ್ಣುಮಕ್ಕಳಿಗೆ ಓಲೆ ಕಳುಹಿಸುತ್ತಾರೆ. ಅದಕ್ಕೆ ಅವರು

ತುಳುಪಠ್ಯ

ಸೊನ್ನೆ ಬಂಜಿನಾಲ್ ಅತ್ತಪ್ಪಾ
ಓ ಕುಡ್ಪು ಕೈ ಸಟ್ಟೀ ದೀವೊಂಡಲ್ ಸೊನ್ನೇ
ಓ ಬಂಜಿನಾಲೆನ ಬಯಕೆ ಸೀರೆ ತುತ್ಯರ ಸಲಾದ್
ಎಂಕುಲು ಬರಯೊಂದು ಪಂಡನೆ ಪೊಣ್ಣುಲು

ಕನ್ನಡಾನುವಾದ

ಸೊನ್ನೆ ಗರ್ಭಿಣಿ ಅಲ್ಲಪ್ಪಾ
ಓ ಎಸರುತಟ್ಟೆ ಕೈಸಟ್ಟೆ ಹೊಟ್ಟೆಗೆ ಕಟ್ಟಿಕೊಂಡು ಸೊನ್ನೆ
ಓ ಸೀಮಂತದ ಸೀರೆ ಉಡುವ ಸಲುವಾಗಿ ಕಪಟ ಮಾಡಿದ್ದಾಳೆ
ನಾವು ಬರಲಾರೆವು ಎಂದರು ಹೆಣ್ಣುಗಳು (ಪುಟ 456).

ಗುರುಮಾರ್ಲರು ಜಾರುಮಾರ್ಲರು ಪುನಃ ಹೋಗಿ ಕರೆಯಲು ಅವರು ಬಂದು ಸೊನ್ನೆಗೆ ಕೋಳಿ ನೀವಾಳಿಸಿ ಬಿಟ್ಟು (ತುಳುವರಲ್ಲಿ ಸೀಮಂತದ ಸಂದರ್ಭ ಕೋಳಿ ಯೊಂದನ್ನು ಗರ್ಭಿಣಿ ಹೆಂಗಸಿನ ತಲೆಗೆ ನೀವಾಳಿಸಿ ಬಿಡುವ ಆಚರಣೆ) ಹೂ ಸೀರೆ ಕೊಡಿಸಿ ಸೀಮಂತದ ಔತಣ ಹಾಕಿ ಬಾಯಿಯ ಆಸೆಯನ್ನು ಕಳೆಯುತ್ತಾರೆ. ಎಲ್ಲರೂ ಊಟಕ್ಕೆ ಕುಳಿತಾಗ ಸೊನ್ನೆ ಹೋಗಿ ಅಜ್ಜನವರು, ಗುರುಮಾರ್ಲ, ಜಾರುಮಾರ್ಲರಲ್ಲಿ ವಿನಂತಿಸಿಕೊಂಡು ಒಂದು ಬಾರಿಗೆ ಸಭೆಗೆ ತುಪ್ಪ ನಾನು ಬಡಿಸುತ್ತೇನೆ ಎನ್ನುತ್ತಾ ಹಠ ಹಿಡಿಯುತ್ತಾಳೆ. ಬಯಕೆಯ ಸೀರೆಯನ್ನು ಕಳಚಿ ಬರೇ ಒಂದು ತುಂಡು ಬಟ್ಟೆ ಉಟ್ಟುಕೊಂಡು ಬಂಗಾರದ ಚಮಚ, ಬೆಳ್ಳಿಯ ಕುಡಿಕೆ ಹಿಡಿದುಕೊಂಡು ಸಭೆಗೆ ತುಪ್ಪ ಬಡಿಸುತ್ತಾ ಬರುತ್ತಾಳೆ. ಸೊನ್ನೆಗೆ ಕುರುಕುಚ್ಚನೆಯ (ಇಲ್ಲಸಲ್ಲದ) ಮಾತು ಹೇಳಿದ

ಹೆಂಗಸರಿಗೆ ತುಪ್ಪ ಬಡಿಸುವಾಗ ಓ ನಾಲ್ಕು ಮನೆಯ ಹೆಂಗಸರೇ, ಒಂದು ಚಮಚ ತುಪ್ಪ ಜಾಸ್ತಿ ತಿನ್ನಿ. ಒಂದು ಚಮಚ ನಾನು ಗರ್ಭಿಣಿಯಾದ ಲೆಕ್ಕದಲ್ಲಿ, ಇನ್ನೊಂದು ಚಮಚ ಎಸರುತಟ್ಟಿ, ಕೈಸಟ್ಟಿ ಹೊಟ್ಟೆಗೆ ಕಟ್ಟಿಕೊಂಡದ್ದಕ್ಕೆ ಎಂದು ಹಂಗಿಸಿ ಬಡಿಸುತ್ತಾಳೆ. ಆ ಬಳಿಕ ನಾನು ಗೊಡ್ಡು, ಋತುಮತಿಯಾಗಲಿಲ್ಲ ಇತ್ಯಾದಿಯಾಗಿ ನನಗೆ ಬೇಡದ ಮಾತುಗಳನ್ನು ಹೇಳಿದಿರಿ ಹೆಂಗಸರೇ ಎಂದು ಸೊನ್ನೆ ನಾಲ್ಕು ಮನೆಯ ಹೆಂಗಸರನ್ನೂ ಹೀಯಾಳಿಸುತ್ತಾಳೆ. ಆ ನಂತರ ಬಂದು ತುಂಡು ಬಟ್ಟೆಯನ್ನು ಕಳಚಿ ಮತ್ತೆ ಸೀಮಂತದ ಸೀರೆಯನ್ನು ಉಟ್ಟು ದಂಡಿಗೆಯಲ್ಲಿ ಕುಳಿತು ಕಾನಬೆಟ್ಟಿಗೆ ಹೊರಡುತ್ತಾಳೆ. ಗುರುಮಾರ್ಲರು ದಂಡಿಗೆಯಲ್ಲಿ ಸೊನ್ನೆಯನ್ನು ಎತ್ತಿ ಕುಳ್ಳಿರಿಸಿ ದಂಡಿಗೆಯನ್ನು ದಾರಿಯಲ್ಲಿ ನಿಲ್ಲಿಸದೆ ನೇರವಾಗಿ ಕಾನಬೆಟ್ಟು ಅರಮನೆಗೆ ಕೊಂಡುಹೋಗಿ ಎಂದು ಹೇಳಿ ಕಳುಹಿಸುತ್ತಾರೆ. ದಂಡಿಗೆ ಗುರ್ಗಲಾಡಿ ಚಂದು ಪೆರ್ಗಡೆ ಬನ್ನಾರರ ಬೈಲಲ್ಲೆ ಬರುತ್ತಾ ಪೂಕರೆ ಹಾಕುವ ಕಂಬಳ ಗದ್ದೆಯ ಬದುವಲ್ಲೆ ಬರಲು ಸೊನ್ನೆ ಹೇಳುತ್ತಾಳೆ

ತುಳುಪಠ್ಯ

ಆನಿದ ಕಾಲೊಡು ಎನ್ನ ಮೆಗ್ದಿ ಗಿಂಡೆನ್
ಉಂದೊಂಜಿ ತಾರೆದ ಮುದೆಲ್‌ಡ್ ಉಂತುದು
ಮಾಯೊ ಓ ಮಲ್ತ್‌ದ್ ಯಾನ್ ಓ ಒಂಜತ್ತ್ ಒಂಜಿ ದಿನೊಕ್ಕು ಗಿಂಡೆ ಓ
ಇತ್ತ್‌ಂಡಲಾ ಒಂಜಿ ಬೂಡೂ ಓ ಸೈತ್‌ಂಡಲಾ ಒಂಜಿ ಕಾಟ ನಂಕ್
ಕೂಡ್ಯಡ ಒಂಜಿ ಕೂಟೊ ಓ ಮಾಯೊ ಆಯೊಡಾ ಒಂಜಿ ಮಾಯೊ ಓ
ಒಂಜತ್ತ್ ಒಂಜಿ ದಿನೊಕ್ಕೂ ಗಿಂಡೆ ಓ ಒಂಜಿ ವೊರ್ಸೊಡ್ದು ಓ ಒಂಜಿ ವೊರ್ಸೊಗು
ನಿನಡ ಯಾನೇ ಓ ಉತ್ತರ ಕೇನುವೆ ಆನಿಗ್ ನಿನ್ನಲಕ್ಕೆರ್ ಸೊನ್ನೆ ಉತ್ತರ ಓ ನಿಕ್ಕ ಪಾಲಿವೆರ್

ಕನ್ನಡಾನುವಾದ

ಆ ಕಾಲದಲ್ಲಿ ನನ್ನ ತಂಗಿ ಗಿಂಡೆಯನ್ನು
ಇದೊಂದು ತೆಂಗಿನ ಮರದ ಬುಡದಲ್ಲಿ ನಿಂತು
ಮಾಯ ಮಾಡಿ ನಾನು ಓ ಒಂದಲ್ಲ ಒಂದು ದಿನಕ್ಕೆ ಗಿಂಡೆ ಓ
ಇದ್ದರೂ ನಮಗೆ ಒಂದು ಬೀಡು ಓ ಸತ್ತರೂ ನಮಗೆ ಒಂದು ಕಾಷ್ಠ
ಸೇರಿದರೆ ನಮಗೆ ಒಂದು ಕೂಟ ಓ ಮಾಯವಾದರೂ ಒಂದು ಮಾಯ ಓ
ಒಂದಲ್ಲ ಒಂದು ದಿನಕ್ಕೆ ಗಿಂಡೆ ಓ ಒಂದು ವರ್ಷದಿಂದ ಒಂದು ವರ್ಷಕ್ಕೆ
ನಿನ್ನಲ್ಲಿ ನಾನೇ ಉತ್ತರ ಕೇಳುತ್ತೇನೆ ಅಂದು ನಿನ್ನ ಅಕ್ಕ ಸೊನ್ನೆ ನಿನಗೆ ಓ ಉತ್ತರ ನೀಡುವರು (ಪುಟ 466)

ಎಂದು ಹೇಳಿ ಕಾನಬೆಟ್ಟಿಗೆ ದಂಡಿಗೆಯಲ್ಲಿ ಹೋಗುತ್ತಾಳೆ. ಮರುದಿನ ಮತ್ತೆ ದಂಡಿಗೆ

ತೆಗೆದುಕೊಂಡು ಗುರುಮಾರ್ಲ, ಜಾರುಮಾರ್ಲರು ಕಾನಬೆಟ್ಟು ಅಜ್ಜರಲ್ಲಿಗೆ ಹೋಗಿ ಸೊನ್ನೆಯನ್ನು ನಾವು ಉರ್ಕಿದೊಟ್ಟುಗೆ ಕರೆದುಕೊಂಡು ಹೋಗುತ್ತೇವೆ. ಹೆರಿಗೆ ನಾವೇ ಮಾಡಿಸುತ್ತೇವೆ ಎಂದು ಹೇಳಲು ಸೊನ್ನೆಯೂ ಸಮ್ಮತಿಸುತ್ತಾಳೆ. ಅಜ್ಜನವರು ಪ್ರೀತಿಯಿಂದ ಕಳುಹಿಸಿ ಕೊಡುತ್ತಾರೆ. ಸೊನ್ನೆಗೆ ಹೆರಿಗೆನೋವು ಕಾಣಿಸಿಕೊಳ್ಳುವಾಗ ಗುರುಮಾರ್ಲರು ಓಡಿಹೋಗಿ ಕಾನಬೆಟ್ಟು ಅಜ್ಜನವರನ್ನು ಬರಹೇಳುತ್ತಾರೆ. ಜಾರುಮಾರ್ಲರಿಗೂ ತಿಳಿಸಲು ಅವರು ಬರುತ್ತಾರೆ. ಸೊನ್ನೆಗೆ ಹೆರಿಗೆ ನೋವು ಬರುತ್ತಿರುವಾಗ ಕಾನಬೆಟ್ಟು ಅಜ್ಜನವರು ಜೋಡಿ ನೇವಳ ತೆಗೆದು

ತುಳುಪಠ್ಯ

ಸೊನ್ನೆಗ್ ಪೊರ್ಲು ಪೊಲ್ಯೊಡು ಓ ತೋಜಿ ಬೇನೆ ಓ ಪಾಡಿ ನೇಲೆಗೇ ಓ
ಪೆದ್ದ್ ಪೆದ್ಮಾನ ಓ ಪೋಯೊಲುಡ ಬಂಗಾರ್ ಬಾಲೆ ಬೊಲ್ಲಿನ್ನ ತೊಟಿಲ್
ಓ ಪುಂಡಿ ಪಣವು ದಂಡ್ ಕುಂಬುಡೊ ಓ ಪಟ್ಟ್ ಪರಕ್ಕೆ ಓ ಪನ್‌ಂಬೆರಜ್ಜೆರ್
ಪಂಡಿ ನಾಲಯಿ ದೊಂಡೆಡಾವೊಡಾಂಡ ಓ ನೇಲೆದ ಬಲ್ಲ್‌ಗ್ ಕೈ ಕೊರ್ನಗ
ಸೊನ್ನೆ ಓ ಒಂಜಿ ಬೇನೆಗೇ ಓ ರಡ್ಡ್ ಬಾಲೆಲೆ ಓ ಪೆದ್ದ್ ಪೆದ್ಮಾನ ಪೋಯೊಲೆ

ಕನ್ನಡಾನುವಾದ

ಸೊನ್ನೆಗೆ ಚೆನ್ನಾಗಿ ತೋರಿರುವ ಹೆರಿಗೆ ನೋವಿಗೆ ಹಾಕಿರುವ ಆಧಾರ ಹಗ್ಗದಲ್ಲಿ ಹೆರಿಗೆಯಾದರೆ

ಬಂಗಾರದ ಮಗು ಬೆಳ್ಳಿಯ ತೊಟ್ಟಿಲು ಹಿಡಿಹಣ ದಂಡು ಕುಂಬಳ ಓ ಹರಕೆ ಹೇಳುತ್ತಾರೆ ಅಜ್ಜನವರು

ಹರಕೆ ಹೇಳಿಕೊಂಡ ಕ್ಷಣದಲ್ಲಿ ಓ ನೇಲೆಯ ಹಗ್ಗಕ್ಕೆ ಕೈ ಕೊಡಬೇಕಾದರೆ

ಸೊನ್ನೆ ಒಂದೇ ನೋವಲ್ಲಿ ಎರಡು ಮಕ್ಕಳನ್ನು ಹೆತ್ತಳು (ಪುಟ 474). ಹೀಗೆ ಸೊನ್ನೆ ಅವಳಿ ಮಕ್ಕಳನ್ನು ಹೆರುತ್ತಾಳೆ.

ರಾಮಕ್ಕ ಅವರ ಪಠ್ಯದಲ್ಲಿ ಕರ್ಗಿಯವರ ಪಠ್ಯದಂತೆಯೇ ಈ ವಿವರಗಳಿವೆ. ಆದರೆ ಸೊನ್ನೆ ಮುಟ್ಟಾಗುವ ಹೊತ್ತಿಗೆ ಅಂದು ಮಾಯದಲ್ಲಿ ಬಂದು ಬ್ರಾಹ್ಮಣ ಕೊಟ್ಟಿರುವ ಮೂರು ಕಲ್ಲುಗಳಲ್ಲಿ ಒಂದನ್ನು ಅವರು ತಿಳಿಸಿರುವಂತೆ ಕೊಂಡುಹೋಗಿ ದೇವರ ತಾವರೆಯ ಕೆರೆಗೆ ಹಾಕುತ್ತಾಳೆ. ಇದರಿಂದಾಗಿ ಮುಟ್ಟಾದ ಅದೇ ತಿಂಗಳಲ್ಲಿ ಸೊನ್ನೆ ಗರ್ಭವತಿಯಾಗುತ್ತಾಳೆ. ಗರ್ಭಕ್ಕೆ ಏಳು ತಿಂಗಳಾಗಲು ಭಾರೀ ಸಂಭ್ರಮದ ಸೀಮಂತ ಮಾಡಬೇಕೆಂದರು. ಎಲ್ಲ ತಯಾರಿ ನಡೆಸಿ ಕಾಪು ಕಟಪಾಡಿ, ಬೋಲ ಬೊಲ್ಮಾನ, ಇನ್ನ ಮುಂಡೇರ್ – ಹೀಗೆ ನಾಲ್ಕು ಅರಮನೆಯ ಹೆಂಗಸರಿಗೆ ಹೇಳಿಕೆ ಮಾಡಿಸುತ್ತಾರೆ. ಅವರು ಸೊನ್ನೆಯನ್ನು ಕಪಿತನ ಹೇಳಿ ಹೀಯಾಳಿಸುವ ವಿವರಗಳಿವೆ. ಕೊನೆಗೂ ಸೀಮಂತದ ಸಂದರ್ಭ ಅವರನ್ನು ಸೊನ್ನೆ ಹೀಯಾಳಿಸಿ ಅವರಿಗೆ ತುಪ್ಪ

ಬಡಿಸುವ ಪ್ರಸ್ತಾವವಿದೆ. ಈ ವಿವರಗಳು ಕರ್ಗಿಯವರ ಪಠ್ಯದಂತೆ ಇವೆ. ಸೊನ್ನೆಯ ಗರ್ಭಕ್ಕೆ ಒಂಭತ್ತು ತಿಂಗಳು ಕಳೆದು ಹತ್ತು ಆರಂಭವಾಗುವಾಗ ಹೆರಿಗೆ ನೋವು ಕಾಣಿಸಿಕೊಳ್ಳುತ್ತದೆ. ಕಾನಬೆಟ್ಟು ಅಜ್ಜನವರು ತನ್ನ ಕೈಯ ಮುತ್ತು ಮುದ್ರೆಯ ಉಂಗುರ ತೆಗೆದು ಸೊನ್ನೆಗೆ ಏನೂ ತೊಂದರೆಯಾಗದೆ ಹೆರಿಗೆಯಾದರೆ ನಂದಳಿಕೆ ನಾಲ್ಕು ಸ್ಥಾನಕ್ಕೆ ಬಂಗಾರದ ಮಗು, ಬೆಳ್ಳಿಯ ತೊಟ್ಟಿಲು, ದಂಡು ಕುಂಬಳ, ಕೆರ್ಚಿಯ (ಒಂದಕ್ಕೊಂದು ಜೊತೆ ಸೇರಿಸಿದ) ತೆಂಗಿನಕಾಯಿ ಒಪ್ಪಿಸುತ್ತೇನೆಂದು ಹರಕೆ ಹೇಳಿಕೊಳ್ಳುತ್ತಾರೆ. ಹೇಳಿಕೊಂಡ ಹರಕೆಯಂತೆ ಸೊನ್ನೆ ಅವಳಿ ಮಕ್ಕಳಿಗೆ ಜನ್ಮ ನೀಡುತ್ತಾಳೆ. ಶ್ಯಾಮರಾಯ ಶೆಟ್ಟಿಯವರ ಪಠ್ಯ, ಗೋಪಾಲನಾಯ್ಕರ ಪಠ್ಯ, ಅಮೃತರ ಪಠ್ಯ, ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಪಠ್ಯ ಹಾಗೂ ಲೀಲಾ ಅವರ ಪಠ್ಯಗಳಲ್ಲಿ ಹೆಚ್ಚಿನ ವಿವರಗಳಿರುವುದು ಕಂಡುಬರುವುದಿಲ್ಲ. ಅಮೃತರ ಪಠ್ಯದಲ್ಲಿ ಮಾತ್ರ ಸೊನ್ನೆ ಹೆರುವ ಹೊತ್ತು 'ಅಂಗಾರೆ ವಾರೊ ಅಮಾಸೆದ ಪಲೊಟ್ಟು ಸಿಂಗಂದ ರಾಸಿಡ್ ಅಮರ್ ಬಾಲೆಲೆನ್ ಪೆದ್ದ್ ಪೆದ್ಮಾನ ಪೋಪೆರ್' (ಮಂಗಳವಾರ ಅಮವಾಸ್ಯೆಯ ಫಲದಲ್ಲಿ ಸಿಂಹ ರಾಶಿಯಲ್ಲಿ ಅವಳಿ ಮಕ್ಕಳನ್ನು ಹೆರುತ್ತಾಳೆ) ಎಂದು ಬರುತ್ತದೆ. ಉಳಿದ ವಿವರಗಳು ಎಲ್ಲ ಪಠ್ಯಗಳಲ್ಲಿಯೂ ಸಮಾನವಾಗಿವೆ.

ಅಬ್ಬಯ ದಾರಯರು (ಅಬ್ಬಗ ದಾರಗರು)

ಕರ್ಗಿಯವರ ಪಠ್ಯವು ಅಜ್ಜನವರು ಅಬ್ಬಯ ದಾರಯರುಮಕ್ಕಳ ಹುಟ್ಟಿದ ಜಾತಕ ನೋಡಬೇಕೆಂದು ಬಲ್ಯಾಯ(ಬಲ್ಮೆಯವ)ನಲ್ಲಿಗೆ ಹೋಗುವುದನ್ನು ತಿಳಿಸುತ್ತದೆ. ಜಾತಕ ನೋಡಿದ ಬಲ್ಯಾಯ ಮಕ್ಕಳು ಹುಟ್ಟಿದ ದಿನ, ನಕ್ಷತ್ರ ನೋಡಿ ಒಂದೇ ಹೆರಿಗೆಕಳದಲ್ಲಿ ಹುಟ್ಟಿದ ಅವಳಿ ಮಕ್ಕಳು. ಹೆಸರು ಅಬ್ಬಯ ದಾರಯ. ಇವರು ಹರಕೆಯ ಮಕ್ಕಳು ಅಲ್ಲವೇ ಎಂದು ಕೇಳುತ್ತಾನೆ. ಹೌದೆನ್ನುತ್ತಾರೆ ಅಜ್ಜನವರು. ಮಕ್ಕಳು ಒಳ್ಳೆಯ ರಾಶಿ, ನಕ್ಷತ್ರದಲ್ಲಿ ಹುಟ್ಟಿದ್ದಾರೆ. ಆದರೆ ಇವರ ಮದುವೆ ಕಾರ್ಯ ನಿಮಗೆ ನೋಡಲು ಸಿಗದು ಎನ್ನುತ್ತಾನೆ.

ತುಳುಪಠ್ಯ

ಪಟ್ಟ್ ಪರಕ್ಕೆದ ಬಾಲೆಲು ಎಡ್ಡೆ ಗಳಿಗೆ ಎಡ್ಡೆ ರಾಸಿಡೇ ಓ ಎಡ್ಡೆ ಜಾತಗೊಡು ಓ ಎಡ್ಡೆ ನಕ್ಷತ್ರೊಡು

ಪುಟ್ಟಿನ ಬಾಲೆಲು ಓ ನಡ್ತರೆಕ್ಕ್ ನಾಲರಿ ಪಾಡುವರ್ ಓ ನಿಕುಲು

ಪುಲ್ಯರ್ಲೆ ಪೊರ್ಲುರ್ ಓ ತೂಪಿ ಬಾಗ್ಯೊ ಓ ನಿಕ್ಲೆಗ್ ಇಜ್ಜಂದೆ ಪೋಪುಂಡುಂದು ಓ ಬಲ್ಯಾಯೆ ಪನ್ಪುಂಡು

ಆತ್ ಪನ್ನಗ ಓ ಅಜ್ಜೆರ್ ಪನ್ಪೆರ್ ಪಟ್ಟ್ ಪರಕ್ಕೆದ ಬಾಲೆಲೆ ಪರಕ್ಕೆ ಓ ಬೂಟುಬ ಎಂಕುಲು ಎಂಕ್ಲೆ ಬಾಲೆಲೆ ಪೊರ್ಲುರ್ ಓ ಎಂಕ್ಲೆಗ್ .ತೂವೊಡುನ್ಪೆರ್

ಕನ್ನಡಾನುವಾದ
ಹರಕೆಯ ಮಕ್ಕಳು ಒಳ್ಳೆಯ ಘಳಿಗೆ,ರಾಶಿ,ನಕ್ಷತ್ರ, ಜಾತಕದಲ್ಲಿ
ಹುಟ್ಟಿದ ಮಕ್ಕಳು ಓ ನಡುತಲೆಗೆ ನಾಲ್ಕು ಅಕ್ಕಿಕಾಳು ಹಾಕುವಿರಿ ನೀವು
ಮೊಮ್ಮಕ್ಕಳ ಅಂದ ನೋಡುವ ಭಾಗ್ಯ ಓ ನಿಮಗೆ ಇಲ್ಲದೆ ಹೋದೀತೆಂದು ಓ ಬಲ್ಲಾಯ ಹೇಳುತ್ತಾನೆ.
ಅಷ್ಟು ಹೇಳಲು ಅಜ್ಜನವರು ಹೇಳುತ್ತಾರೆ ಹರಕೆಯ ಮಕ್ಕಳ ಹರಕೆಯನ್ನು ನಾವು ತೀರಿಸುತ್ತೇವೆ
ನಮ್ಮ ಮಕ್ಕಳ ಅಂದ ಓ ನಮಗೆ ನೋಡಬೇಕೆಂದರು (ಪುಟ 476).

ಇತ್ತ ಮಕ್ಕಳ ಪುರುಡು ಕಳೆದು ಮಕ್ಕಳನ್ನು ತೊಟ್ಟಿಲಿಗೆ ಹಾಕಬೇಕೆಂದು ಹನ್ನೆರಡುಗುತ್ತು, ಹನ್ನೆರಡು ಮಾಗಣೆಯವರನ್ನು ಆಮಂತ್ರಿಸಿದರು. ಉರ್ಕಿದೊಟ್ಟಿನ ಅರಮನೆಯಲ್ಲಿ ಅರುವತ್ತು ತೂಕದ ಬಂಗಾರದ ತೊಟ್ಟಿಲು, ಮೂವತ್ತು ತೂಕದ ಬೆಳ್ಳಿಯ ತೂಗುದಾರ ಮಾಡಿಸಿ ಕಾನಬೆಟ್ಟು ಅಜ್ಜನವರು ತಂದರು. ಅಂದು ಸೊನ್ನೆಗೆ ಕಲೆಪಿಲೆ (ಅವಮಾನದ ಮಾತು) ಹೇಳಿದ ಹೆಣ್ಣುಗಳನ್ನು ಬರಲು ಹೇಳಿದರು. ಮಗುವನ್ನು ಸೊನ್ನೆ ಮದುಮಗಳು, ಗುರುಮಾರ್ಲ‌ರು, ಜಾರುಮಾರ್ಲರು ಹಾಗೂ ಕಾನ ಬೆಟ್ಟಿನ ಅಜ್ಜನವರ ಸಮ್ಮುಖ ತೊಟ್ಟಿಲಿಗೆ ಹಾಕಿದರು. ಮಕ್ಕಳಿಗೆ ಅಬ್ಬಯದಾರಯ ಎಂಬ ನಾಮಕರಣ ಮಾಡಿದರು. ಇತ್ತ ಮಕ್ಕಳು ಬಹಳ ಪ್ರೀತಿಯಿಂದ ಉರ್ಕಿದೊಟ್ಟಿನಲ್ಲಿ ಬೆಳೆಯುತ್ತಿರಲು ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸಬೇಕೆಂದು ಉರ್ಕಿದೊಟ್ಟುವಿನಲ್ಲಿ ಅಜ್ಜನವರು ಮರಳಿನ ಓದು ಬರಹ ಕಲಿಸಿದರು. ಇತ್ತ ಮಕ್ಕಳು ತುಳು ಭಾಷೆ, ಕನ್ನಡ ಭಾಷೆ ಹಾಗೂ ದೇವರ ಸ್ಮರಣೆಗಳನ್ನು ಕಲಿತರು.

ಶ್ಯಾಮರಾಯ ಶೆಟ್ಟಿಯವರ ಪಠ್ಯದಲ್ಲಿ ಅಂದು ಸೊನ್ನೆಗೆ ಅವಮಾನದ ಮಾತನ್ನು ಹೇಳಿದ ಹೆಂಗಸರು ಮಕ್ಕಳನ್ನು ನೋಡಲು ಬಂದಾಗ ಸೊನ್ನೆ ಮಕ್ಕಳನ್ನು ನೋಡ ಬೇಕಾದರೆ ನಿಮ್ಮ ಕರಿಮಣಿ, ಮೂಗುತಿ ಹಾಗೂ ಕೈಯ ಬಳೆಗಳನ್ನು ತೆಗೆಯಬೇಕು, ಸೊಂಟಕ್ಕೆ ಕಟ್ಟಿರುವ ಬಟ್ಟೆ ತೆಗೆದು ಮಕ್ಕಳನ್ನು ನೋಡಬೇಕೆನ್ನುತ್ತಾಳೆ. ಹಾಗೆಯೇ ಮಾಡಿ ಮಕ್ಕಳನ್ನೆತ್ತಿಕೊಂಡು ಸೊನ್ನೆ ಹೆತ್ತದ್ದು ಹೌದೆಂದರು. ಸೊನ್ನೆ ಈ ಹೆಂಗಸರಿಗೆ ನೀವು ನಿಮ್ಮ ಕರಿಮಣಿ, ಮೂಗುತಿ ತೆಗೆದು 'ರಂಡೆ ಕಳೆದು ಮುಂಡೆ ಮುಚ್ಚಿ ನನ್ನ ಮಕ್ಕಳ ಅಂದ ನೋಡಿದಿರಿ ಹೆಂಗಸರೇ' (ನೀವು ನಿಮ್ಮ ಮುತ್ತೈದೆತನವನ್ನು ಕಳೆದು ವಿಧವೆಯರಾಗಿ ನನ್ನ ಮಕ್ಕಳ ಅಂದ ನೋಡಿದಿರಿ ಹೆಂಗಸರೇ) ಎಂದು ಹೀಯಾಳಿಸುವ ಪ್ರಸಂಗ ಇದೆ. ಅಮೃತರ ಪಠ್ಯ, ಗಿಡಿಕೆರೆಯರ ಪಠ್ಯ, ಲೀಲಾ ಅವರ ಪಠ್ಯಗಳಲ್ಲಿ ಹೆಚ್ಚಿನ ವ್ಯತ್ಯಾಸಗಳಿರುವುದು ಕಂಡುಬರುವುದಿಲ್ಲ. ರಾಮಕ್ಕ ಅವರ ಪಠ್ಯದಲ್ಲಿ ಸೊನ್ನೆ ಅವಳಿ ಮಕ್ಕಳನ್ನು ಹೆತ್ತು ಮಕ್ಕಳ ಪುರುಡು ಕಳೆದ ಅನಂತರ ಮಕ್ಕಳ ಜಾತಕ ಅಜ್ಜನವರು ತೋರಿಸುವಾಗ ಬಲ್ಲಾಯ 'ಬಾಲೆಲು ಎಡ್ಡೆ ಏಲ್ಯೊ ಎಡ್ಡೆ ಗಳಿಗೆಡ್

ಭೂಮಿಗ್ ಜನನ ಆತೆರ್, ಬಾಲೆಲೆಗ್ ಕಷ್ಟೊ ಇದ್ದಿ, ಬಾದಗೊ ಇದ್ದಿಂದ್ ಪನ್ಪೆರ್' (ಮಕ್ಕಳು ಶುಭ ವೇಳೆ ಘಳಿಗೆಯಲ್ಲಿ ಭೂಮಿಗೆ ಜನನವಾಗಿದ್ದಾರೆ. ಮಕ್ಕಳಿಗೆ ಕಷ್ಟವಿಲ್ಲ, ಬಾಧದಕವಿಲ್ಲವೆಂದು ಹೇಳಿದರು) ಆದರೆ ಈ ಭವಿಷ್ಯ ಮಕ್ಕಳ ಬದುಕಲ್ಲಿ ಸುಳ್ಳು ಎಂಬುದು ಮಕ್ಕಳ ದುರಂತಮಯ ಸಾವಿನಿಂದ ತಿಳಿಯುತ್ತದೆ. ಗೋಪಾಲ ನಾಯ್ಕರ ಪಠ್ಯದಲ್ಲಿ ಸೊನ್ನೆಯ ಹೆರಿಗೆ ಕಾನಬೆಟ್ಟು ಅರಮನೆಯಲ್ಲಿ ನಡೆಯುತ್ತದೆ. ಸೊನ್ನೆಗೆ ಹಾಕಿರುವ ನೇಲೆಯಲ್ಲಿ ಹೆರಿಗೆ ನೋವು ಕಾಣಿಸಿಕೊಂಡಾಗ ಅಜ್ಜನವರು ಭತ್ತದಷ್ಟು ಭಾರವಾಗದೆ ನೂಲಿನಷ್ಟು ಸುಲಲಿತವಾಗಿ ಹೆರಿಗೆಯಾದರೆ ನಂದಳಿಕೆ ನಾಲ್ಕು ಸ್ಥಾನದ ಮಾತನಾಡದ ಈಶ್ವರ ದೇವರಿಗೆ ರುದ್ರಾಭಿಷೇಕ, ಬೆರ್ಮೆರ್‌ಗೆ ತಂಬಿಲ ಕಟ್ಟಿಸುತ್ತೇನೆ ಎಂದು ಹರಕೆ ಹೇಳಿಕೊಳ್ಳುತ್ತಾರೆ. ಹೇಳಿಕೊಂಡ ಹರಕೆಯಂತೆ ಸೊನ್ನೆ ಕಾಣಿಸಿಕೊಂಡ ನೋವಲ್ಲಿ ಅವಳಿ ಹೆಣ್ಣುಮಕ್ಕಳನ್ನು ಹೆರುತ್ತಾಳೆ. ಮಕ್ಕಳ ಹುಟ್ಟಿದ ನಕ್ಷತ್ರ ನೋಡಬೇಕೆಂದು ಅಜ್ಜನವರು ಅಡ್ಡ ಆರುಮಾಗಣೆಯ ಜ್ಯೋತಿಷ್ಯರಲ್ಲಿಗೆ ಹೋಗುತ್ತಾರೆ. ಅವರು ಮಕ್ಕಳ ಹುಟ್ಟಿದ ಘಳಿಗೆ ಜಾತಕ ನೋಡಿ ಅಜ್ಜನವರಲ್ಲಿ

ತುಳುಪಠ್ಯ

ಎಡ್ಡೆ ನಕ್ಷತ್ರೊಡು ಎಡ್ಡೆ ಪೊರ್ತುಡು ಜನನಾತಿ ಬಾಲೆಲು
ದೇವೆರೆ ಗದ್ದಿಗೊದ ಬಾಲೆಲುಂದು ಅಜ್ಜೆರೆ ಕೇನಿಲೆ
ದೇವೆರೆಗ್ ಸಮನಾಯಿ ಜೋಕುಲುಂದು
ಕನ್ನಿಗೆಗ್ ಸಮನಾಯಿ ಜೋಕುಲುಂದುಂಬಾ
ಉಂದೊಂಜಿ ಜೋಕುಲೆಗ್ ಪುದರ್ ಪುರಪ್ಪು ಉಂಡು ಅಜ್ಜೆರೇ
ಒಂಜಿ ಪೂವೊಲಿನ್ನ ದಂಡ್‌ಡ್ ರಡ್ಡ್ ಬಾಲೆಲು
ದುಂಬು ಪುಟ್ಟಿನ ಬಾಲೆಗ್ ಅಬ್ಬಯಂದ್ ಪುದರ್
ಬುಕ್ಕೊ ಪುಟ್ಟಿನ ಬಾಲೆಗ್ ದಾರಯಂದ್ ಪುದರ್ ಪುರಪ್ಪು ಅಜ್ಜರೆಂದ್ ಪನ್ಪುಂಡೆ ಬೆರಮ್ಮನೇ

ಕನ್ನಡಾನುವಾದ

ಶುಭ ಹೊತ್ತು ನಕ್ಷತ್ರದಲ್ಲಿ ಜನನವಾದ ಮಕ್ಕಳು
ದೇವರ ಗದ್ದುಗೆಯ ಮಕ್ಕಳಿವರೆಂದು ಕೇಳಿರಿ ಅಜ್ಜನವರೇ
ದೇವರಿಗೆ ಸಮನಾದ ಮಕ್ಕಳಿವರು
ಕನ್ನಿಗೆಗೆ ಸಮನಾದ ಮಕ್ಕಳಿವರು
ಈ ಮಕ್ಕಳಿಗೆ ಹೆಸರು ಇದೆ ಅಜ್ಜನವರೇ
ಒಂದೇ ಹೊಕ್ಕುಳ ಬಳ್ಳಿಯ ದಂಡಿನಲ್ಲಿ ಹುಟ್ಟಿದ ಅವಳಿ ಮಕ್ಕಳು
ಮೊದಲು ಹುಟ್ಟಿದ ಮಗುವಿಗೆ ಅಬ್ಬಯ ಎಂಬ ಹೆಸರು

ಅನಂತರ ಹುಟ್ಟಿದ ಮಗುವಿಗೆ ದಾರಯ ಎಂಬ ಹೆಸರು ಅಜ್ಜನವರೇ
ಎಂದು ಹೇಳಿದರು ಬ್ರಾಹ್ಮಣ (ಪುಟ 650).

ಹೀಗೆ ಮಕ್ಕಳ ನಕ್ಷತ್ರ, ಜಾತಕ ನೋಡಿದ ಬ್ರಾಹ್ಮಣರೇ ಮಕ್ಕಳಿಗೆ ಹೆಸರನ್ನೂ ಸೂಚಿಸುವ ವಿವರಗಳು ಈ ಪಠ್ಯದಲ್ಲಿ ಇದೆ. ಅಲ್ಲಿಂದ ಇಳಿದುಕೊಂಡು ಅಜ್ಜನವರು ಕಾನಬೆಟ್ಟು ಅರಮನೆಗೆ ಬಂದು ಜೋಡು ಬೆಳ್ಳಿಯ ತೊಟ್ಟಿಲುಗಳನ್ನು ಮಾಡಿಸಿ ಇವುಗಳಿಗೆ ಕಂಚಿನ ಸರಪಳಿಗಳನ್ನು ಬಿಗಿದು ಅರುವತ್ತು ಮೊಳ ಬಾರೆಪಟ್ಟೆಯನ್ನು ಎರಡು ತುಂಡು ಮಾಡಿ ಎರಡು ತೊಟ್ಟಿಲುಗಳಿಗೆ ಹಾಸಿ ಮಕ್ಕಳನ್ನು ಮಲಗಿಸುತ್ತಾರೆ. ಅಬ್ಬಯ ದಾರಯ ಎಂಬ ಹೆಸರನ್ನು ಮಕ್ಕಳಿಗಿಟ್ಟು ಮಕ್ಕಳನ್ನು ಬಲು ಪ್ರೀತಿಯಿಂದ ಸಾಕುತ್ತಿದ್ದಾರೆ. ತಿಂಗಳು ಮೂರು ಕಳೆಯಲು ಅಜ್ಜನವರು ಸೊನ್ನೆಯನ್ನು ಕರೆದು ನಾವಿನ್ನು ಉರ್ಕಿದೊಟ್ಟು ಅರಮನೆಗೆ ತೊಟ್ಟಿಲಮಗು ಹೋಗೋಣವೇ ಎನ್ನುತ್ತಾರೆ. ಸೊನ್ನೆ ಆಯಿತು ಎನ್ನಲು ಅಜ್ಜನವರು ಸತ್ಯದಂಡಿಗೆ ಸಾವಿರ ಬಿರುದಾವಳಿಗಳೊಂದಿಗೆ ಕಾನಬೆಟ್ಟಿನಿಂದ ಉರ್ಕಿದೊಟ್ಟು ಅರಮನೆಗೆ ಸೊನ್ನೆಯ ತೊಟ್ಟಲಮಗು ಕೊಂಡುಹೋಗುತ್ತಾರೆ. ಉರ್ಕಿದೊಟ್ಟಿನ ತೊಳಸಿ ಮಂಟಪದ ಹತ್ತಿರ ದಂಡಿಗೆ ಇಳಿಸಿ ಮೆಟ್ಟಲೇರುವ ಹೊತ್ತಿಗೆ ತಾಯಿ ಮಕ್ಕಳಿಗೆ ನೀವಾಳಿಸಿ ದೃಷ್ಟಿ ಕಳೆಯುವ ಕ್ರಿಯೆ ಮಾಡುತ್ತಾರೆ. ಹೀಗೆ ಉರ್ಕಿದೊಟ್ಟಿನಲ್ಲಿ ಮಕ್ಕಳು ಬಹಳ ಪ್ರೀತಿಯಿಂದ ಬೆಳೆಯುತ್ತಿದ್ದಾರೆ.

ಅಬ್ಬಯ ದಾರಯರ ಚೆನ್ನೆ ಆಟ

ಕರ್ಗಿಯವರ ಪಠ್ಯವು ಅಬ್ಬಯ ದಾರಯರ ಚೆನ್ನೆ ಆಟವನ್ನು ಕುರಿತು ಈ ಕೆಳಗಿನ ವಿವರಗಳನ್ನು ನೀಡುತ್ತದೆ. ತಮಗೆ ಆಡಲು ಏನಾದರೂ ಕೊಡಬೇಕೆಂದು ಮಕ್ಕಳು ಹಠ ಹಿಡಿಯುತ್ತಾರೆ. ಸೊನ್ನೆ ಗುರುಮಾರ್ಲರು ಬೆಳ್ಳಿಯ ಚೆನ್ನೆಮಣೆ, ಬಂಗಾರದ ಕಾಯಿ ಮಾಡಿಸಿಕೊಟ್ಟರು. ಅಜ್ಜನವರು ಮಕ್ಕಳಿಗೆ ಚೆನ್ನೆ ಆಟ ಕಲಿಸಿಕೊಟ್ಟರು. ಒಂದು ದಿನ ಸೊನ್ನೆಗೆ ಅಪವಾದದ ಮಾತು ಹೇಳಿದ ಹೆಂಗಸರು ಸೊನ್ನೆಯ ಮಕ್ಕಳನ್ನು ನೋಡುವುದಕ್ಕಾಗಿ ಬರುತ್ತಾರೆ. ಸೆಗಣಿ ಸಾರಿಸುವಲ್ಲಿ ನಿಂತಿದ್ದ ಸೊನ್ನೆ ಆ ಕೆಲಸವನ್ನು ಬಂದ ಹೆಂಗಸರಿಗೆ ಒಪ್ಪಿಸಿ ಅವರೇ ಪರಸ್ಪರ ಜಗಳಾಡಿ ಸೆಗಣಿ ಎರಚಿಕೊಂಡು ತಮ್ಮೊಳಗೇ ಹೊಡೆದುಕೊಳ್ಳುವಂತೆ ಮಾಡುತ್ತಾಳೆ. ಇತ್ತ ಸೊನ್ನೆಯ ತಲೆಯ ಹೇನು ತೆಗೆಯಲು ಕುಳಿತುಕೊಳ್ಳುತ್ತಾರೆ ಮಕ್ಕಳು. ಈ ಸಂದರ್ಭ ಅರಮನೆಯ ಕಡೆಗೆ ನೆಂಟರು ಬರುವುದನ್ನು ನೋಡುತ್ತಾರೆ. ಗುರುಮಾರ್ಲರು ಬಂದ ನೆಂಟರನ್ನು ಉಪಚರಿಸಿದರು. ಬಂದ ಕಾರಣ ತಿಳಿಯಲು ತಾವು ಕಡೆರಿ ಕಾರ್ಲದ ಬೊಲಿಯ ಸಂದ್ರಾಮು ಸೆಟ್ಟಿಯ ಅವಳಿ ಮಕ್ಕಳಾದ ರಾಮ ಲಕಣರಿಗೆ ಅಬ್ಬಯ ದಾರಯರನ್ನು ಮದುವೆ ಸಂಬಂಧ ಕೇಳಲು ಬಂದದ್ದು ಎಂದರು. ಮಕ್ಕಳ ಹರಕೆ ಬಾಕಿಯಿದ್ದುದನ್ನು ತಿಳಿದ ಗುರುಮಾರ್ಲರು ಹೆಣ್ಣು ಕೊಡೆವು ಎಂದರು. ಸೊನ್ನೆ ಗುರುಮಾರ್ಲರನ್ನು ಒಳಗೆ ಕರೆದು ಹರಕೆ

ಇಬ್ಬರಿಗೆ ನಾಲ್ವರಾದಾಗ ಸಲ್ಲಿಸಿದರಾಯಿತು. ಮೊದಲು ಬಂದ ಸಂಬಂಧವನ್ನು ಬಿಡಬೇಡಿ ಎಂದು ಒತ್ತಾಯಿಸಿದಳು. ಗುರ್ಗಲಾಡಿ ಚಂದು ಪೆರ್ಗಡೆಯವರಲ್ಲಿ ಮಾತನಾಡಿ ಸಂಬಂಧವನ್ನು ಒಪ್ಪಿದರು.

ಇತ್ತ ಮದುವೆಯ ಸಿದ್ಧತೆ ನಡೆಯುತ್ತದೆ. ಮದುವೆಗೆ ದಿನ ಕೇಳಲು ಬಲ್ಯಾಯನಲ್ಲಿಗೆ ಹೋದರು ಅಜ್ಜನವರು. ಆತ ಮಕ್ಕಳ ಜಾತಕ ಬಿಡಿಸಿ ನೋಡಿ 'ನಿಮಗೆ ಮಕ್ಕಳ ನಡುತಲೆಗೆ ನಾಲ್ಕು ಅಕ್ಕಿ ಸೇಸೆ ಹಾಕುವ ಯೋಗವಲ್ಲದೆ ಅವರು ಹತ್ತಿರ ಕುಳಿತು ಹಾಲು ಕುಡಿವ ಯೋಗವಿಲ್ಲ' ಎಂದ. ಅಜ್ಜನವರ ಒತ್ತಾಯಕ್ಕೆ ದಿನ ಮುಹೂರ್ತ ತಿಳಿಸಿದ. ಆದರೂ ಮದುವೆಯ ಎಲ್ಲ ಸಿದ್ಧತೆಗಳು ನಡೆಯುತ್ತವೆ. ಸೊನ್ನೆ ಗುರುಮಾರ್ಲೆರು ಮದುವೆ ಹೇಳಿಕೆಗೆ ಹೊರಟರು. ನಡೆದು ಆಯಾಸವಾದಾಗ ದಾರಿಮಧ್ಯೆ ಅಬ್ಬಂದಡ್ಕ ಗೋಳಿಯ ಮರದಡಿ ನೆರಳಲ್ಲಿ ವಿಶ್ರಾಂತಿಗಾಗಿ ಕುಳಿತರು. ಆ ಹೊತ್ತಿಗೆ ಬಡಬ್ರಾಹ್ಮಣ (ಬೆರ್ಮೆರ್ ಬ್ರಾಹ್ಮಣ ಹುಡುಗನ ರೂಪಧರಿಸಿ) ಮಾಣಿಯೊಬ್ಬ ಕಾಣಿಸಿಕೊಂಡು ಎಲ್ಲಿಗೆ ಹೋಗುವುದೆಂದು ವಿಚಾರಿಸಿದ, ಆಗ ಇವರು ನಿಜ ವಿಚಾರ ತಿಳಿಸಲು ಮಕ್ಕಳ ಹರಕೆಯನ್ನು ನೆನಪಿಸುತ್ತಾನೆ. ಸೊನ್ನೆ ಸಿಟ್ಟುಗೊಂಡು ಬ್ರಾಹ್ಮಣ ಮಾಣಿಯನ್ನು ಕುರಿತು ನಾವು ಹರಕೆ ಹೇಳುವಾಗ ನೀನಲ್ಲಿ ಇದ್ದೆಯಾ? ಎಂದು ಬಯ್ಯುತ್ತಾಳೆ. ಗುರುಮಾರ್ಲೆರು ಈತನನ್ನು ಕುರಿತು ವಿಚಾರಿಸಲು ನಾನು ನಾಲ್ಕು ಮನೆಗಳಲ್ಲಿ ಬೇಡಿ ತಿನ್ನುವ ಬಡ ಬ್ರಾಹ್ಮಣ ಎನ್ನುತ್ತಾನೆ. ಹಾಗಾದರೆ ನಾವು ಮದುವೆ ಹೇಳಿಕೆ ಮುಗಿಸಿ ಹಿಂದಿರುಗುವಾಗ ನಿನಗೆ ಭಿಕ್ಷೆ ನೀಡುತ್ತೇವೆ ಎಂದು ಹೇಳಿ ಮುಂದುವರಿಯುತ್ತಾರೆ. ಅಷ್ಟರಲ್ಲಿ ಬ್ರಾಹ್ಮಣ ಮಾಯವಾಗುತ್ತಾನೆ. ಸೊನ್ನೆ ಗುರುಮಾರ್ಲೆರು ಒಂಭತ್ತು ಮಾಗಣೆ, ಹನ್ನೆರಡು ಗುತ್ತು ಹಾಗೂ ಹನ್ನೆರಡು ಬರ್ಕೆಗಳಿಗೆ ಮದುವೆ ಹೇಳಿಕೆ ನೀಡುತ್ತಾರೆ.

ಅಲ್ಲಿಂದ ಮಾಯವಾದ ಬ್ರಾಹ್ಮಣ ನೇರವಾಗಿ ಉರ್ಕಿದೊಟ್ಟು ಅರಮನೆಗೆ ಬರುತ್ತಾನೆ. ಅಬ್ಬಯ ದಾರಯ ಮಕ್ಕಳನ್ನು ಚೆನ್ನೆ ಆಡುವಂತೆ ಪ್ರೇರೇಪಿಸಿ ಪ್ರತಿ ಆಟದಲ್ಲಿ ಅಕ್ಕ ಸೋಲುವಂತೆ ಮಾಡುತ್ತಾನೆ. ತಂಗಿ ಅಕ್ಕನನ್ನು ನಿಂದಿಸಲು ಸಿಟ್ಟುಗೊಂಡ ಅಕ್ಕ ತಂಗಿಯ ತಲೆಗೆ ಚೆನ್ನೆ ಮಣೆಯಿಂದ ಹೊಡೆದು ಕೊಲ್ಲುತ್ತಾಳೆ. ಇದರಿಂದ ದುಃಖಿತಳಾದ ಅಕ್ಕ ತಂಗಿಯ ಹೆಣವನ್ನು ಉರ್ಕಿದೊಟ್ಟು ಬಾವಿಗೆ ಹಾಕಿ ಬಾವಿಯ ಕಟ್ಟೆಯ ಮೇಲೆ ವೀಳ್ಯದಲ್ಲಿ ನಮ್ಮ ಅಜ್ಜನವರಾದ ಗುರ್ಗಲಾಡಿ ಚಂದು ಪೆರ್ಗಡೆಯವರು ಬಂದು ಹೊಸ ಬುಟ್ಟಿ ಇಳಿಸಿ ತಮ್ಮ ಹೆಣವನ್ನು ಬಾವಿಯಿಂದ ಮೇಲಕ್ಕೆತ್ತಬೇಕು ಎಂದು ಬರೆದು ತಾನೂ ಬಾವಿಗೆ ಹಾರಿ ಪ್ರಾಣ ಕಳೆದುಕೊಳ್ಳುತ್ತಾಳೆ.

ಇತ್ತ ಮದುವೆ ಹೇಳಿಕೆ ಮುಗಿಸಿ ಮನೆಯ ಕಡೆ ಬರುತ್ತಿರುವ ಸೊನ್ನೆ ಗುರುಮಾರ್ಲೆರಿಗೆ ಅಬ್ಬಂದಡ್ಕದಲ್ಲಿ ಮತ್ತೆ ಬ್ರಾಹ್ಮಣ ಎದುರಾಗಿ ಉರ್ಕಿದೊಟ್ಟಿನಲ್ಲಿ ನಡೆದ ಅಬ್ಬಯ ದಾರಯರ ದುರಂತ ಸಾವಿನ ಬಗೆಗೆ ತಿಳಿಸುತ್ತಾನೆ. ಇದನ್ನು ತಿಳಿದ ಸೊನ್ನೆ ಗುರುಮಾರ್ಲೆರು ಮನೆಯ ಕಡೆ ಓಡೋಡಿ ಬರುತ್ತಾರೆ. ಬಂದು ನೋಡಲು ಬಾವಿಯ ಕಟ್ಟೆಯಲ್ಲಿ ವೀಳ್ಯದಲ್ಲಿ ಬರೆದಿಟ್ಟ ವಿಚಾರ ತಿಳಿಯುತ್ತದೆ. ಅದರಂತೆ ಚಂದು

ಪೆರ್ಗಡೆ ಹಾಗೂ ಜಾರು ಮಾರ್ಲರು ಹೊಸ ಬುಟ್ಟಿ ಬಾವಿಗೆ ಇಳಿಸಿ ಜೋಡು ಹೆಣಗಳನ್ನು ಬಾವಿಯಿಂದ ತೆಗೆಸಿ ಕಾಷ್ಠದಲ್ಲಿರಿಸಿ ಬೆಂಕಿ ಕೊಟ್ಟು ಉರಿಸುತ್ತಾರೆ. ಅಕ್ಕ ತಂಗಿಯರು ಬಂಗಾರದ ಜೋಡು ದುಂಬಿಗಳಾಗಿ ಮೇಲುಲೋಕದ ಬೆರ್ಮೆರ್ ಅವರ ಪಾದ ಸೇರುತ್ತಾರೆ. ಸೊನ್ನೆಯನ್ನು ಸಮಾಧಾನಪಡಿಸುತ್ತಾರೆ ಚಂದು ಪೆರ್ಗಡೆಯವರು. 'ಇದು ಮಾಯದ ದೃಷ್ಟಿ ಎಂದರು. ಇನ್ನು ಮೂರು ದಿನದಲ್ಲಿ ಬೂದಿ ಮುಚ್ಚಬೇಕು, ಎಳನೀರು ಇಡಬೇಕೆನ್ನುತ್ತಾರೆ.

ಶ್ಯಾಮರಾಯ ಶೆಟ್ಟಿಯವರ ಪಠ್ಯದಲ್ಲಿ ಸೊನ್ನೆ ಮಕ್ಕಳಿಗೆ ಚೆನ್ನೆ ಆಡಲು ಕಲಿಸಿಕೊಡುವ ವಿವರಗಳಿವೆ. ಮಕ್ಕಳಿಗೆ ಯಾವುದರಲ್ಲಿ ಹೆಸರು ಬಾರದಿದ್ದರೂ ಚೆನ್ನೆಯಲ್ಲಿ ಒಳ್ಳೆಯ ಹೆಸರು ಬರಬೇಕೆಂದು ಹೇಳುತ್ತಾಳೆ. ಮಕ್ಕಳಿಗೆ ಮದುವೆಯ ಸಂಬಂಧ ಬರುವಾಗ ಗುರುಮಾರ್ಲರು ಮಕ್ಕಳ ಹರಕೆಯ ಬಗೆಗೆ ನೆನಪಿಸುತ್ತಾರೆ. ಸೊನ್ನೆ ಹಠ ಕಟ್ಟುತ್ತಾಳೆ. ಕೊನೆಗೆ ಕಾನೆಬೊಟ್ಟು ಅಜ್ಜನವರು ಹಾಗೂ ಜಾರುಮರ್ಲರು ಬಂದು ಅವರೂ ಮಕ್ಕಳ ಹರಕೆಯ ಬಗೆಗೆ ನೆನಪಿಸಿದರೂ ಸೊನ್ನೆ ಕೇಳದಿದ್ದಾಗ ಕೊನೆಗೆ ಮದುವೆಗೆ ಒಪ್ಪಿಗೆ ಸೂಚಿಸುವ ವಿವರಗಳೆಲ್ಲ ಮೇಲಿನ ಪಠ್ಯದಂತೆ ಇದೆ. ಸೊನ್ನೆ ಹಾಗೂ ಗುರುಮಾರ್ಲರು ಮದುವೆಯ ಹೇಳಿಕೆಗೆ ಹೊರಡುವ ಸಂದರ್ಭ ಆನೆಬಾಗಿಲ ಹತ್ತಿರ ಬಂದಾಗ ಹಲ್ಲಿಯೊಂದು ಅಪಶಕುನ ನುಡಿಯುತ್ತದೆ. ಮತ್ತೂ ಮುಂದುವರಿದಾಗ ಮರಕುಟಿಗ ಹಕ್ಕಿಯು ಅಪಶಕುನ ನುಡಿಯುತ್ತದೆ. ಆದರೂ ಮುಂದುವರಿದು ಕಾರ್ಲದ ಪೇಟೆಯಲ್ಲಿ ನಡೆದು ಆಯಾಸಗೊಂಡಾಗ ವಿಶ್ರಾಂತಿಗಾಗಿ ಗೋಳಿಯ ಮರದಡಿ ನೆರಳಲ್ಲಿ ಕುಳಿತುಕೊಳ್ಳುತ್ತಾರೆ. ಆಗ

ತುಳುಪಠ್ಯ

ಒರಿ ಕುಮಾರೆ ಒರಿ ಬೆರ್ಮೆರ್‌ದೇ
ಏರ್ ಬೆರ್ಮೆರೇ ಈರ್ ನಾಲಿಲ್ಲ್ ನಟ್ಟುನ ರೂಪಾವೊಡು
ಸೊನ್ನೆನ ಮರ್ಲ್‌ನ್ ಪರಿಸೋದನೆ ಮಲ್ಪೊಡುಂದು ಪನ್ಪಿನಿದೇ

ಕನ್ನಡಾನುವಾದ

ಒಬ್ಬ ಕುಮಾರ ಒಬ್ಬರು ಬೆರ್ಮೆರ್‌ಗೆ
ಯಾರು ಬೆರ್ಮರೇ ನೀವು ನಾಲ್ಕು ಮನೆ ಬೇಡುವ ರೂಪ ತಾಳಬೇಕು
ಸೊನ್ನೆಯ ಹುಚ್ಚನ್ನು ಪರಿಶೋಧನೆ ಮಾಡಬೇಕೆಂದು ಹೇಳುತ್ತಾರೆ (ಪುಟ 397).

ಹೀಗೆ ಉರ್ಕಿದೊಟ್ಟಿನ ಉರಿಬೆರ್ಮರು ಬ್ರಾಹ್ಮಣನ ವೇಷದಲ್ಲಿ ಬಂದು ಸೊನ್ನೆ ಗುರುಮಾರ್ಲರಲ್ಲಿ ನೀವು ಮಕ್ಕಳ ಮದುವೆಗೆ ಕೌಡಿಗೆ ಹಾಕಿಸಿ, ಪಂಚಾಂಗ ಬಿಡಿಸಿ, ಸಾರಿ ಹಾಕಿಸಿ ನೋಡಿದ್ದೀರೇ ಎಂದು ವಿಚಾರಿಸುತ್ತಾನೆ. ಆಗ ಸೊನ್ನೆ ನಮ್ಮ ಅಜ್ಜನವರು

ಈವರೆಗೆ ಇಟ್ಟ ದಿನಗಳಲ್ಲಿ ಏನೂ ದೋಷ ಆಗಲಿಲ್ಲ ಎನ್ನುತ್ತಾಳೆ. ಆಗ ಬ್ರಾಹ್ಮಣ ನಾನು ಒಂದು ಬಾರಿ ಪಂಚಾಂಗ ನೋಡುತ್ತೇನೆ ಎಂದು ನೋಡಿ ಮಕ್ಕಳ ತಲೆಕೂದಲ ನ್ನಾದರೂ ಲೆಕ್ಕ ಮಾಡಬಹುದು. ಆದರೆ ಅವರಿಗೆ ಹೇಳಿರುವ ಹರಕೆ ಲೆಕ್ಕ ಮಾಡಲು ಸಾಧ್ಯವಿಲ್ಲ. ಮಕ್ಕಳ ಹರಕೆ ಹಿಂದೆ ಇಟ್ಟು ದೇವ ನಿಶ್ಚಯಕ್ಕೆ ಹೊರಟದ್ದು ಮಹಾತಪ್ಪು ಎನ್ನುತ್ತಾನೆ. ಸೊನ್ನೆ ಬ್ರಾಹ್ಮಣನನ್ನು ಬೈಯುತ್ತಾಳೆ. ಅಲ್ಲಿಂದ ಹೊರಟ ಬ್ರಾಹ್ಮಣ ಉರ್ಕಿದೊಟ್ಟಿಗೆ ಬಂದು ಮಕ್ಕಳನ್ನು ಚೆನ್ನೆ ಆಡಲು ಪ್ರೇರೇಪಿಸುತ್ತಾನೆ. ಆಟದಲ್ಲಿ ಅಕ್ಕನ ಸೋಲು ತಂಗಿಯ ಗೆಲುವಿನಿಂದ ಸಿಟ್ಟುಗೊಂಡ ಅಕ್ಕ ತಂಗಿಯ ಜೊತೆ ಜಗಳಾಡಿ ಕೊಲೆಯಲ್ಲಿ ಪರ್ಯವಸಾನವಾಗುವುದು ಮೇಲಿನ ಪಠ್ಯದಂತೆ ಇದೆ. ಮಕ್ಕಳನ್ನು ಕಾಷ್ಠದಲ್ಲಿಟ್ಟು ಗುರುಮಾರ್ಲರು ಬೆಂಕಿ ಕೊಡುತ್ತಾರೆ. ಕಾಷ್ಠ ಉರಿದರೂ ನಡು ಸೇರುವುದಿಲ್ಲ. ಮಕ್ಕಳು ಜೋಡು ಕರಿದುಂಬಿಗಳ ರೂಪದಲ್ಲಿ ಉರ್ಕಿದೊಟ್ಟು ಉರಿಬೆರ್ಮರ ಗುಡಿ ಪ್ರವೇಶಿಸುತ್ತಾರೆ. ಉಕಿದೊಟ್ಟು ದೇವಸ್ಥಾನವನ್ನು ಗಿರಿಗೀಟ್ ಮಾಡುತ್ತವೆ. ಬೊಲ್ಯೊಟ್ಟಲ್ಲಿ ನಿಮಗೆ ನಿಲ್ಲಲು ದಲಿಯ, ನಡೆಯಲು ನಡೆದಲ್ಯ ಕೊಡುತ್ತೇನೆ. ನನ್ನ ಎದುರಿಗೆ ಬನ್ನಿ ಎಂದು ಕುಮಾರ ಉರ್ಕಿದೊಟ್ಟಿನಿಂದ ಬೊಲ್ಯೊಟ್ಟಿಗೆ ಕರೆಯುವ ವಿವರಗಳಿವೆ.

ಗಿಡಿಕೆರೆಯವರ ಪಠ್ಯದಲ್ಲಿ ಬರುವ ಹೆಚ್ಚಿನ ವಿವರಗಳು ಮೇಲಿನಂತೆ ಇವೆ. ಕಡೆರಿಕಾರ್ಲದ ಕೋಡಿ ಕುಂಬಳೆಯ ಚಂದ್ರಾಮು ಸೆಟ್ಟಿಯ ಮಕ್ಕಳಾದ ರಾಮಲಕಣರು ಉರ್ಕಿದೊಟ್ಟಿನ ಅರಮನೆಗೆ ಹೆಣ್ಣು ನೋಡಲು ಬಿಳಿಯ ಕುದುರೆಯಲ್ಲಿ ಬರುವ ವಿವರಗಳಿವೆ. ಗುರುಮಾರ್ಲರು, ಜಾರು ಮರ್ಲರು ಇಬ್ಬರೂ ಮಕ್ಕಳ ಹರಕೆ ಮುಂದು ಆ ನಂತರ ಮದುವೆ ಎಂದಾಗ ಸೊನ್ನೆ ಹಠ ಕಟ್ಟಿ ಮದುವೆಗೆ ಮುಂದಾಗುತ್ತಾಳೆ. ಹೆಣ್ಣು ನೋಡಲು ಬಂದ ಮಕ್ಕಳಲ್ಲಿ

ತುಳುಪಠ್ಯ

ಬಾಲೆಲೆ ನಿಕುಲೆ ಅಪ್ಪೆ ಏರ್‌ಗೆ ಅಮ್ಮೆ ಏರ್‌ಗೆ
ಅಪ್ಪೆಲಮ್ಮನ ಪುದರ್ ಪುರಪ್ಪು ತೆರಿಪ್ಪುಲೆಂದ್ ಪನ್ನಗ
ಎಂಕಲೆ ಅಪ್ಪೆನ ಅಂತುಗೊಂತು ಎಂಕಲೆಗ್ ಇಜ್ಜಿಗೆನ
ಅಮ್ಮೆರ್ ಕಡೆರಿಕಾರ್ಲ ಕೊಡಿ ಕುಂಬ್ಳೆದಾರ್‌ಗೆ ಚಂದ್ರಾಮು ಸೆಟ್ಟಿ ಪಣ್ಪಿನಾರ್‌ಗೆ

ಕನ್ನಡಾನುವಾದ

ಮಕ್ಕಳೇ ನಿಮ್ಮ ತಂದೆ ತಾಯಿ ಯಾರು
ಅಪ್ಪ ಅಮ್ಮನ ಹೆಸರು ಹಿನ್ನೆಲೆ ತಿಳಿಸಿ ಎಂದಾಗ
ನಮಗೆ ತಾಯಿಯವರ ಹಿಂದುಮುಂದು ತಿಳಿಯದು
ನಮ್ಮ ತಂದೆಯವರು ಕಡೆರಿ ಕಾರ್ಲದ ಕೊಡಿ ಕುಂಬಳೆಯ ಚಂದ್ರಾಮು ಸೆಟ್ಟಿ ಎನ್ನುವವರಂತೆ (ಪುಟ 295)

ಎಂದು ತಿಳಿಸುತ್ತಾರೆ. ಉರ್ಕಿದೊಟ್ಟಿನರಮನೆಯಲ್ಲಿ ಬಳಿಬಂದ್ರ (ವಂಶಾವಳಿ) ತಿಳಿಯುವಾಗ ಸಂಬಂಧ ಆಗಿ ಬರುತ್ತದೆ. ಸಂಬಂಧ ಹಿಡಿಯುತ್ತೇನೆ, ಹೆಣ್ಣು ಕೊಡುತ್ತೇನೆ ಎನ್ನುತ್ತಾರೆ. (ಈ ವಿಚಾರ ಸ್ವಲ್ಪ ಅಸಹಜವಾಗಿ ಕಾಣಿಸುತ್ತದೆ. ಯಾಕೆಂದರೆ ಇವರ ತಾಯಿಯವರು ಯಾರು ಎಂಬುದು ತಿಳಿಯದೆ ತಂದೆಯನ್ನು ತಿಳಿದುಕೊಂಡು ಮದುವೆಯ ಸಂಬಂಧ ಹಿಡಿಯುವ ವಿವರಗಳಿವೆ. ಬಂಟರಲ್ಲಿ ಯಾವತ್ತೂ ತಾಯಿ ಮೂಲಕ ಬಳಿಯನ್ನು ಗುರುತಿಸಿಕೊಳ್ಳುತ್ತಾರೆ). ಮುಂದೆ ಮದುವೆ ನಿಶ್ಚಿತಾರ್ಥವಾಗುತ್ತದೆ. ಸೊನ್ನೆ ಗುರುಮಾರ್ಲರು ಮದುವೆಗೆ ಕಾಯಿ ಹಾಕಿ ಮುಹೂರ್ತಕ್ಕೆ ಕರೆಯಲು ಹೊಗುತ್ತಾರೆ. ನಡೆದು ಆಯಾಸವಾಗಿ ಗಾಳಿಯ ಭರಕ್ಕೆ ಗೋಳಿಯ ಬುಡದಲ್ಲಿ ವಿಶ್ರಾಂತಿ ಪಡೆಯುತ್ತಿರಲು ದೇವರು ಬೆರ್ಮರು ಸೊನ್ನೆ ಗುರುಮಾರ್ಲರ ಕಣ್ಣಿಗೆ ಪಗರಿ(ಬಾಣ) ಆಗಿ ನಾಟುವ ವಿವರ ಇದೆ. ಇವರಿಬ್ಬರಿಗೂ

ತುಳುಪಠ್ಯ

ಪುತ್ರಾಡಿ ಸಂತಾನೊದ ಬರಿಬಂದ್ರೊಗು ಪಣ್ತರ್ ಪರಕೆ
ಮುಗಿತ್ತರ್ ಕಯಿ ಕಟ್ಟ್‌ದಾರ್ ಪುಂಡಿಪಣವು

ಕನ್ನಡಾನುವಾದ

ಪುತ್ರಾಡಿ ಸಂತಾನದ ಬಳಿಬಂದ್ರಕ್ಕೆ ಹೇಳಿದ್ದೀರಿ ಹರಕೆ
ಕೈ ಮುಗಿದಿದ್ದೀರಿ ಕಟ್ಟಿದ್ದೀರಿ ಹಿಡಿಹಣ

ಎಂಬುದನ್ನು ಮಾಯಾರೂಪದ ಬೆರ್ಮೆರ್ ನೆನಪಿಸುತ್ತಾರೆ. ಅಲ್ಲದೆ ಮದುವೆ ಮೊದಲಾ, ಅಲ್ಲ ಹರಕೆ ಮೊದಲಾ? ಎಂಬುದನ್ನು ನೆನಪಿಸಲು ಸೊನ್ನೆ ಸಿಟ್ಟುಗೊಂಡು ಬ್ರಾಹ್ಮಣ ಎಂದು ತಿಳಿದು ಈ ಕೆಳಗಿನ ಮಾತುಗಳನ್ನು ಆಡುತ್ತಾಳೆ.

ತುಳುಪಠ್ಯ

ನಾಲಿಲ್ಲ್ ನಟ್ಟುನ ಮೂಜಿಲ್ಲ್ ಬೇಡುನ ಬೆರಮ್ಮಣಾ
ಕುಕ್ಕುದ ಇರೆಟ್ಟ್ ಕೋಮಣ ಕಟ್ಟುನ ಬೆರಮ್ಮಣಾ
ಬಾರೆದ ಬಲ್ಲ್ ಡ್ ಜನಿವಾರ ಪಾಡುನ ಬೆರಮ್ಮಣಾ
ಇನಿ ಕೊರುಂಗುದ ಪೀ ನಾಮೊ ಒಯ್ಪುನ ಬೆರಮ್ಮಣಾ ಈರ್ ಕೇನಿದರಾ
ಕೋರಿದ ಪೀ ಗಂದೊ ಪಾಡುನ ಬೆರಮ್ಮಣಾ ಈರ್ ಕೇನಿದರಾ
ಕಕ್ಕೆದ ಮಡೆ ತಿನ್ಪುನ ಬೆರಮ್ಮಣಾ ಈರ್ ಕೇನಿದರಾ
ಈರೆಗ್ ಎಂಚಿನ ಪಾರ್‌ಪತ್ತಿಗೆಯೇಂದ್ ಸೊನ್ನೆ ಕೇಣುವೆರತ್ತೋ
ಎಂಕುಲು ಪರಕೆ ಪನ್ನಗ ಎಂಕಲೆ ಬಾಲೆಲೆನ ಕಾರತಿರ್ಶ್ ತರೆಮಿತ್ತ್ ಇತ್ತರಾ

ಕನ್ನಡಾನುವಾದ

ನಾಲ್ಕು ಮನೆ ಬೇಡುವ ಮೂರು ಮನೆ ಭಿಕ್ಷೆ ಎತ್ತುವ ಬ್ರಾಹ್ಮಣಾ
ಮಾವಿನ ಎಲೆಯಲ್ಲಿ ಲಂಗೋಟಿ ಕಟ್ಟುವ ಬ್ರಾಹ್ಮಣಾ
ಬಾಳೆಯ ನಾರಿನಿಂದ ಜನಿವಾರ ಹಾಕುವ ಬ್ರಾಹ್ಮಣಾ
ಇಂದು ಕೊಕ್ಕರೆಯ ಹಿಕ್ಕೆಯಿಂದ ನಾಮ ಎಳೆಯುವ ಬ್ರಾಹ್ಮಣಾ ನೀವು ಕೇಳಿದ್ದೀರೇ
ಕೋಳಿಯ ಹಿಕ್ಕೆಯಿಂದ ಗಂಧ ಹಾಕುವ ಬ್ರಾಹ್ಮಣಾ ನೀವು ಕೇಳಿದ್ದೀರೇ
ಕಾಗೆಯ ಎಂಜಲು ತಿನ್ನುವ ಬ್ರಾಹ್ಮಣಾ ನೀವು ಕೇಳಿದ್ದೀರೇ
ನಿಮಗೇನು ಪಾರುಪತ್ಯೆಯೆಂದು ಸೊನ್ನೆ ಕೇಳುತ್ತಾಳೆ
ನಾವು ಹರಕೆ ಹೇಳಿಕೊಳ್ಳುವಾಗ ನಮ್ಮ ಮಕ್ಕಳ ಕಾಲಕೆಳಗೆ ತಲೆಮೇಲೆ ನೀವಿದ್ದಿರೇ
ಎಂದು ಕೇಳುತ್ತಾಳೆ (ಪುಟ 304).

ಉಳಿದ ವಿವರಗಳೆಲ್ಲ ಮೇಲಿನ ಪಠ್ಯದಂತೆ ಇದೆ.

ಅಬ್ಬಯ ದಾರಯರ ಮರಣದ ಅನಂತರ ಅವರ ಹೆಣಗಳನ್ನು ಬಾವಿಯಿಂದ ಮೇಲೆತ್ತಿ ಹೆಣವನ್ನು ಕಾಷ್ಠಕ್ಕೆ ಕೊಂಡು ಹೋಗುವ ಮೊದಲು ಎಣ್ಣೆ ಅರಶಿಣವನ್ನು ಲೇಪಿಸಿ ಮಾವಿನ ತೊಗಟೆ ಹಾಕಿ ಮಾಡಿರುವ ಬಿಸಿ ನೀರಿನಿಂದ ಹೆಣಗಳನ್ನು ಸ್ನಾನ ಮಾಡಿಸಿ ಆ ನಂತರ ಉರ್ಕಿದೊಟ್ಟು ಅರಮನೆಯೊಳಗಡೆ ತಂದು ತೆಂಕು ಬಡಗಾಗಿ ಮಲಗಿಸಿ ಹೆಣದ ಶೃಂಗಾರ ನಡೆಸಿ ಸಕಲಬಿರುದಾವಳಿಗಳೊಂದಿಗೆ ಕಾಷ್ಠಕ್ಕೆ ಕೊಂಡು ಹೋಗಿ ಮೂರು ಸುತ್ತು ಅಪ್ರದಕ್ಷಿಣೆ ತಂದು ಕಾಷ್ಠದಲ್ಲಿಟ್ಟು ಬೆಂಕಿಕೊಡುವ ವಿವರಗಳಿವೆ. ಬಂಟರಲ್ಲಿ ಹೆಣ ತೆಗೆಯುವ ಪ್ರಾಚೀನ ಆಚರಣೆಗಳ ವರ್ಣನೆ ಇಲ್ಲಿ ಇದೆ.

ಅಬ್ಬಯದಾರಯರನ್ನು ಕಾಷ್ಠದಲ್ಲಿರಿಸಿ ಉರಿಸಿದ ಅನಂತರ ಅವರು ಬಂಗಾರದ ದುಂಬಿಗಳಾಗಿ ಬುರ್ರನೆ ಹಾರಿಹೋಗಿ ಮೇಲಿನಲೋಕದ ಸ್ವಾಮಿ ಸೂರ್ಯನಾರಾಯನ ದೇವರ ಕತ್ತಲೆಯ ಕೋಣೆಯಲ್ಲಿರುವ ಬಂಗಾರದ ಗಜಕಂಬದಲ್ಲಿ ಕುಳಿತುಕೊಳ್ಳುವಾಗ ಸ್ವಾಮಿ ನಾರಾಯಣ ದೇವರು ಬಾಗಿಲು ಹಾಕಿಕೊಂಡು ಬೀಗದಿಂದ ಮುಚ್ಚುತ್ತಾರೆ. ಕತ್ತಲೆಯ ಕೋಣೆಯಲ್ಲಿ ಎರಡು ದುಂಬಿಗಳು ನಾರಾಯಣ ದೇವರಿಗೆ ಸಹಿಸಲಾರದಷ್ಟು ಗದ್ದಲ ಮಾಡುತ್ತವೆ. ತಡೆಯಲಾರದೆ ಕತ್ತಲೆ ಕೋಣೆಯ ಬಾಗಿಲು ತೆಗೆಸುತ್ತಾರೆ ನಾರಾಯಣ ದೇವರು. ನಿಮಗೇನಾಗಬೇಕೆಂದು ಕೇಳಲು ನಾವು ಮುಜಲೊಟ್ಟು ಉರಿಬೆರ್ಮೆರ ಹರಕೆಯ ಮಕ್ಕಳು. ಕೆಳಗಿನ ಸಿರಿಬಾರಿ ಲೋಕಕ್ಕೆ ನಮಗೆ ಹೋಗಬೇಕು. ನಮ್ಮ ತಂದೆ ತಾಯಿಯವರನ್ನು ನೋಡ ಬೇಕೆನ್ನುತ್ತಾರೆ. ಸೂರ್ಯ ನಾರಾಯಣ ದೇವರು ದುಂಬಿಗಳಿಗೆ ಜೋಗ(ನಿಜರೂಪ) ಕೊಟ್ಟು ಕೆಳಗಿನ ಸಿರಿಬಾರಿ ಲೋಕಕ್ಕೆ ಹೋಗಿ ನಿಮ್ಮ ತಂದೆ ತಾಯಿಯವರನ್ನು ನೋಡಿ ಬನ್ನಿ ಎಂದು ಹೇಳಿ ಕಳುಹಿಸುತ್ತಾರೆ.

ತುಳುಪಠ್ಯ

ತಿರ್ತ್ ಸಿರಿಬಾರಿ ಲೋಕೊಗು ಪೋನಗ ತುಂಬಿದಾ ಒರುವಾದ್ ರಾವೊಂದು ಪೋವೊಡು
ಅಬ್ಬನಡ್ಕದಾ ಗೋಳಿದ ಕಟ್ಟೆಡ್ ಜೋಗ ಬೆನೊಡು

ಕನ್ನಡಾನುವಾದ

ಕೆಳ ಸಿರಿಬಾರಿ ಲೋಕಕ್ಕೆ ಹೋಗುವಾಗ ದುಂಬಿಯ ರೂಪದಲ್ಲಿ ಹಾರಿಕೊಂಡು ಹೋಗಬೇಕು
ಅಬ್ಬನಡ್ಕದ ಗೋಳಿಯ ಕಟ್ಟೆಯಲ್ಲಿ ಜೋಗವಾಗ (ನಿಜರೂಪ) ಬೇಕೆಂದರು

(ಪುಟ 314–315).

ಹೀಗೆ ಮಕ್ಕಳಿಗೆ ಜೋಗ ಕೊಟ್ಟು ಕೆಳಗಿನ ಸಿರಿಬಾರಿ ಲೋಕಕ್ಕೆ ಕಳುಹಿಸಿ ಕೊಡುವ ವಿವರಗಳಿವೆ.

ಗೋಪಾಲ ನಾಯ್ಕರ ಪಠ್ಯವೂ ಹೆಚ್ಚು ಕಮ್ಮಿ ಇದೇ ವಿವರಗಳನ್ನು ನೀಡುತ್ತದೆ. ಕಡೆರಿಕಾರ್ಲದ ಬೊಲಿಯ ಸಂದ್ರಾಮು ಸೆಟ್ಟಿ ಉರ್ಕಿದೊಟ್ಟಿಗೆ ತನ್ನ ಅವಳಿ ಮಕ್ಕಳಾದ ರಾಮ ಲಕಣರಿಗೆ ಹೆಣ್ಣು ನೋಡಲು ಬರುವ ವಿವರಗಳಿವೆ. ಗುರುಮಾರ್ಲರು ಮಕ್ಕಳ ಹರಕೆ ತೀರಿಸದೆ ಸಂಬಂಧದ ಮಾತು ಕೊಡಲಾಗದು ಎಂದಾಗ ಸೊನ್ನೆ ಹರಕೆ ಹೇಳಲು ಮುಕ್ಕಾಲು ಮೂರು ಘಳಿಗೆ, ಆದರೆ ಅದನ್ನು ತೀರಿಸಲು ಹನ್ನೆರಡು ವರ್ಷ ಎಂಬುದನ್ನು ಕೇಳಿದ್ದೇನೆ. ಹಾಗಾಗಿ ನಮಗೆ ಹರಕೆ ಸಲ್ಲಿಸಲು ಬೇಕಾದಷ್ಟು ಸಮಯವಿದೆ. ಮೊದಲ ಸಂಬಂಧವನ್ನು ಮಾತ್ರ ಬಿಡುವುದು ಬೇಡ ಎಂದು ಹಠ ಕಟ್ಟುತ್ತಾಳೆ. ಕಾನಬೆಟ್ಟಿನ ಅಜ್ಜನವರಲ್ಲಿ ಸೊನ್ನೆ ಹೇಳಲು ಅವರೂ ಮಕ್ಕಳ ಹರಕೆ ತೀರಿಸದೆ ಸಂಬಂಧ ಮುಂದುವರಿಸಬಾರದು ಎನ್ನುತ್ತಾರೆ. ನಾನು ಈ ಕುರಿತಾಗಿ ಮಾತನಾಡಲು ಬರಲಾರೆ ಎನ್ನುತ್ತಾರೆ ಅಜ್ಜನವರು. ಅಲ್ಲಿಂದ ನೇರವಾಗಿ ಭಾವನವರಾದ ಕೆಲೆಂಜ ಪರಾರಿ ಜಾರು ಮರ್ಲರಲ್ಲಿಗೆ ಹೋಗಿ ವಿಷಯ ತಿಳಿಸುತ್ತಾಳೆ. ಅವರು ಕೂಡಲೇ ಹೊರಟು 'ನನ್ನ ತಮ್ಮನಿಗೆ ಹುಚ್ಚೋ, ಮೊದಲು ಬಂದ ಸಂಬಂಧವನ್ನು ಬಿಡಬಾರದೆಂದು ಹೇಳುತ್ತಾರೆ'. ಕೂಡಲೇ ಉರ್ಕಿದೊಟ್ಟಿನ ಅರಮನೆಗೆ ಬಂದು ನೆಂಟರಲ್ಲಿ ವಿವರಗಳನ್ನು ತಿಳಿದುಕೊಂಡು ತಮ್ಮ ಮಕ್ಕಳ ಹರಕೆಯ ಬಗೆಗೆ ಎಷ್ಟು ಹೇಳಿದರೂ ಕೇಳದೆ ಮಾತು ಕೊಡುತ್ತಾರೆ. ಅಲ್ಲಿಂದ ಗುರುಮಾರ್ಲರು, ಜಾರುಮರ್ಲರು ಹಾಗೂ ಬೊಲಿಯ ಸಂದ್ರಾಮು ಸೆಟ್ಟಯವರು ಒಟ್ಟಾಗಿ ಬೆರಂಬಿ (ಜ್ಯೋತಿಷಿ/ಬ್ರಾಹ್ಮಣ)ಗಳಲ್ಲಿಗೆ ಮದುವೆ ಮುಹೂರ್ತ ಕೇಳಲು ಹೋಗುತ್ತಾರೆ. ಪಂಚಾಂಗ ನೋಡಿ ಗುಣಿಸಿ ಹೇಳಿದರು ಬೆರಂಬಿಗಳು

ತುಳುಪಠ್ಯ

ನಾರಾಯಿನ ಜಾರುಮರ್ಲ ಬಾಲೆಲೆಗ್ ಪಾತೆರೊ ಕೊರ್ಪುನ ಕಟ್ಟ್ ಬರ್ಪುಂಡ್ಯಾ
ನಾರಾಯಿನ ಪಟ್ಟ್ ಪರಕೆ ದುಂಬುಡ್ದು ತೋಜುಂಡೆ

ಪನ್ಪೆರ್ ದಾನೆ ಬೆರಮ್ಮನೆ
ನಾರಾಯಿನ ಬೆರಮ್ಮನ ನಾರಾಯಿನ ಬೆರಮ್ಮನ
ಪಟ್ಟ್ ಪರಕ್ಕೆ ಬಾಕಿ ಒರಿಂಡ ಬೂಟುನಕುಲು ಎಂಕುಲುಯೆ
ಹಾಲ್ ಎಡ್ಡೆ ಇತ್ತ್ಂಡ ಕಷ್ಟೊ ತೂಪಿನಕುಲು ಎಂಕುಲುಯೇ
ಮೂರ್ತೊ ಪನ್ಂಬರಯೇ ಈರ್

ಕನ್ನಡಾನುವಾದ
ನಾರಾಯಣ ಜಾರುಮರ್ಲ ಮಕ್ಕಳಿಗೆ ಮಾತು ಕೊಡುವುದು ಕಟ್ಟಿಬರುತ್ತದೆ (ಸರಿಯಾಗಿ ಒಪ್ಪಿತವಾಗದೆ ಇರುವುದು)
ನಾರಾಯಣ ಮಕ್ಕಳ ಹರಕೆ ಮುಂದೆ ಕಾಣಿಸುತ್ತದೆ
ಎಂದು ಹೇಳುತ್ತಾರೆ ಬ್ರಾಹ್ಮಣ
ಮಕ್ಕಳ ಹರಕೆ ಬಾಕಿಯಿದ್ದರೆ ಸಲ್ಲಿಸುವವರು ನಾವು
ಒಳಿತು ಕೆಡುಕು ಇದ್ದರೆ ಆ ಕಷ್ಟ ನೋಡುವವರು ನಾವು
ನೀವು ಮುಹೂರ್ತ ತಿಳಿಸಿ ಅಷ್ಟೆ ಎನ್ನುತ್ತಾರೆ (ಪುಟ 708– 710).

ಈ ಬರುವ ಮಂಗಳವಾರವಲ್ಲ ಮೇಲಿನ ಮಂಗಳವಾರ ಗೋಧೂಳಿ ಲಗ್ನ ಒಳ್ಳೆಯ ಮುಹೂರ್ತ ಕೊಡುತ್ತಾರೆ. ಅಲ್ಲಿಂದ ಹೊರಟು ಉರ್ಕಿದೊಟ್ಟಿನ ಅರಮನೆಗೆ ಬಂದು ಹದಿನಾರು ಮಾಗಣೆಯ ಮುಖ್ಯರನ್ನು ಬರಹೇಳಿ ಹೆಚ್ಚು ಸಮಯವಿಲ್ಲದ ಕಾರಣ ಮುಹೂರ್ತಕ್ಕೆ ಸರಿಯಾಗಿ ದಿಬ್ಬಣ ತರಬೇಕೆಂದು ಸಂದ್ರಾಮು ಸೆಟ್ಟಿಗೆ ತಿಳಿಸುತ್ತಾರೆ. ಮದುವೆಯ ತಯಾರಿ ಎರಡೂ ಕಡೆ ಸಂಭ್ರಮದಿಂದ ನಡೆಯುತ್ತದೆ. ಮದುವೆಗೆ ಹೇಳಿಕೆ ಕೊಡಲು ಗುರುಮಾರ್ಲರು ಹೋಗುತ್ತಾರೆ. ಕೆಳಗಿನ ಬೋಲ, ಮೇಲಿನ ಬೋಲ, ಬೋಲ ಬೊಲ್ಮ, ಇಂಡ್ (ಇನ್ನ?) ಮುಂಡೆರ್, ಕಾಪು ಕಡಂದಲೆ, ಜಪ್ಪು ಅಡೆಪ್ಪು, (ಎರ್ಮಾಳ್, ಕಂಡೇವು?) ಸೂಲೆ ಸುನ್ನಡ್ಕ, ಪೇರೊಟ್ಟು ಪೆರಿಯಡ್ಕ – ಇಲ್ಲೆಲ್ಲ ಆಮಂತ್ರಿಸುತ್ತಾರೆ. ಕಾನಬೆಟ್ಟು ಅಜ್ಜನವರನ್ನು ಕರೆಯಲು ಗುರುಮಾರ್ಲ ಸೊನ್ನೆ ಹೋಗಬೇಕೆಂದು ಜಾರುಮಾರ್ಲರು ಹೇಳಿದರು. ಅವರು ಹೊರಡುವ ವಿವರಗಳಿವೆ. ಸೊನ್ನೆ ಒಬ್ಬಳೇ ಒಂದು ಹಾಳೆ ಹಿಂಗಾರವನ್ನು ತಲೆಗೆ ಮುಡಿಯಲು ಮಕ್ಕಳು ನಮಗೆ ಒಂದು ಎಸಳೂ ಕೊಡದೆ ನೀವೇ ಎಲ್ಲ ಮುಡಿದಿರಲ್ಲ ಎನ್ನುತ್ತಾರೆ. ಅದಕ್ಕೆ ಸೊನ್ನೆ ಇಂದಲ್ಲ ನಾಳೆಯ ದಿನ ನಿಮಗೂ ಇಡೀ ಹಾಳೆ ಹಿಂಗಾರವನ್ನು ಮುಡಿಯುವ ದಿನ ಬರುತ್ತದೆ ಎನ್ನುತ್ತಾಳೆ. ಹೀಗೆ ಇಬ್ಬರೂ ಹೊರಟು ಹೋಗಿ ಬೋವಂದಡ್ಕದ ಗೋಳಿಯ ಬುಡದಲ್ಲಿ ಬಿಸಿಲಿಗೆ ಕುಳಿತುಕೊಳ್ಳುವ ಎನ್ನುತ್ತಾರೆ. ಗುರುಮಾರ್ಲರ ಕಣ್ಣಿಗೆ ನಿದ್ದೆ ಆವರಿಸಲು ಸೊನ್ನೆಯ ತೊಡೆಯ ಮೇಲೆ ತಲೆಯಿರಿಸಿ ಮಲಗುತ್ತಾರೆ ಗುರುಮಾರ್ಲರು. ಮುಜಲೊಟ್ಟು ಪದವಿನಲ್ಲಿ ಗೋಳಿಯ ಮರದ ಬುಡದಲ್ಲಿ ಕಣ್ಣಿಗೆ ನಿದ್ದೆ ಆವರಿಸುವಾಗ

ಬೆನ್ನ ಮೇಲಿನ ಗಂಟು, ಕೈಯಲ್ಲಿ ಜೋತಿಕೋಲು, ನಿಲ್ಲುವಾಗ ವಾಲುವ, ಕುಳಿತಾಗ ತೂಕಡಿಸುವ ಬ್ರಾಹ್ಮಣನೊಬ್ಬ ಬರುವುದು ಸೊನ್ನೆಗೆ ಕಾಣಿಸುತ್ತದೆ. ಮದುಮಗ ಮದುಮಗಳಂತೆ ಹೊರಟು ನೀವು ಎಲ್ಲಿಗೆ ಹೋಗುತ್ತೀರಿ, ಎಲ್ಲಿಂದ ಬಂದಿರಿ ಎಂದು ಬ್ರಾಹ್ಮಣ ಕೇಳಲು ಸೊನ್ನೆ ಒಳ್ಳೆಯ ಕಾರ್ಯಕ್ಕೆ ಹೋಗುವಾಗ ಒಂಟಿ ಬ್ರಾಹ್ಮಣ ಎದುರಾದರೆ ಅಪಶಕುನ. ಅದರ ಮೇಲೆ ಎಲ್ಲಿಗೆ ಹೋಗುತ್ತಿದ್ದೀರಿ ಎಂದು ಕುಷ್ಠ ಹಿಡಿದ ನಾಲಿಗೆಯಿಂದ ಕೇಳುತ್ತೀರಿ ಎಂದು ಕೋಪಿಸಿಕೊಳ್ಳುತ್ತಾಳೆ. ನಾಲ್ಕು ಮನೆಯಲ್ಲಿ ಭಿಕ್ಷೆ ಬೇಡುವ, ಕಾಗೆಯ ಎಂಜಲು ತಿನ್ನುವ ನಿಮ್ಮಂಥ ಬ್ರಾಹ್ಮಣನಿಗೆ ನಮ್ಮಲ್ಲಿ ಎಲ್ಲಿಗೆ ಹೋಗುವುದೆಂದು ಕೇಳುವ ಹಕ್ಕು ಯಾರು ಕೊಟ್ಟರೆಂದು ಹೀಯಾಳಿಸುತ್ತಾಳೆ. ನನ್ನದು ತಪ್ಪಾಯಿತೆಂದು ಹೇಳಿ ಬ್ರಾಹ್ಮಣ ಅಲ್ಲಿಂದ ತೆರಳಲು ಗುರುಮಾರ್ಲರು ನಿದ್ದೆಯಿಂದ ಏಳುತ್ತಾರೆ. ಎದ್ದು ಸೊನ್ನೆಯಲ್ಲಿ ನನಗೆ ನಿದ್ದೆಯಲ್ಲಿ ಸ್ವಪ್ನವೊಂದು ಬಿತ್ತು. ಅದರಲ್ಲಿ ಬ್ರಾಹ್ಮಣನೊಬ್ಬ ಬಂದದ್ದು ನನಗೆ ಕಂಡಿತು ಎನ್ನುತ್ತಾರೆ. ಅದು ನಿಮಗೆ ಪಿತ್ತದಲ್ಲಿ ಕಂಡ ಕನಸು. ಆದರೂ ಇಲ್ಲೆ ಒಬ್ಬ ಬ್ರಾಹ್ಮಣ ಬಂದು ಹೋದ. ನನ್ನಲ್ಲಿ ಎಲ್ಲಿಂದ ಬಂದವರು, ಎಲ್ಲಿಗೆ ಹೋಗುವವರು ಎಂದು ಅಪಶಕುನದ ಮಾತುಗಳನ್ನಾಡಿದರೆ ನಾನು ಸಿಟ್ಟುಗೊಂಡು 'ನಾಲ್ಕು ಮನೆ ಭಿಕ್ಷೆ ಬೇಡುವ ಬ್ರಾಹ್ಮಣನಿಗೆ ನಿಮಗೆ ಯಾಕೆ' ಎಂದು ಕೇಳಿದೆ ಎನ್ನುತ್ತಾಳೆ. ಗುರುಮಾರ್ಲರು ಬ್ರಾಹ್ಮಣನನ್ನು ಹುಡುಕಿಕೊಂಡು ಹೋಗಿ ಸೊನ್ನೆಯ ಮಾತಿನಿಂದ ನೋವಾಗಿದ್ದರೆ ನಾನು ಕ್ಷಮೆ ಕೇಳುತ್ತೇನೆಂದು ಹೇಳುತ್ತಾರೆ. ನಾನು ನಂದಳಿಕೆ ನಾಲ್ಕು ಸ್ಥಾನದಿಂದ ಬಂದೆ. ಭಿಕ್ಷೆ ಬೇಡುತ್ತಾ ಲಂಕೆಲೋಕನಾಡಿಗೆ ಹೋಗಬೇಕೆನ್ನುತ್ತಾನೆ ಬ್ರಾಹ್ಮಣ. ಆಗ ಗುರುಮಾರ್ಲರು ನಾವು ಇಬ್ಬರು ಹೆಣ್ಣುಮಕ್ಕಳನ್ನು ಉರ್ಕಿದೊಟ್ಟು ಅರಮನೆಯಲ್ಲಿ ಬಿಟ್ಟು ಬಂದಿದ್ದೇವೆ. ನೀವು ಆ ಕಡೆ ಹೋಗುವಾಗ ಮಾತನಾಡಿಸಿ ಹೋಗಿ ಎನ್ನುತ್ತಾರೆ.

ಇತ್ತ ಬ್ರಾಹ್ಮಣ ಹೊರಟು ಉರ್ಕಿದೊಟ್ಟಿನ ಅರಮನೆಗೆ ಬರುತ್ತಾನೆ. ಮೇಲು ಮೆಂಚಿಯಲ್ಲಿರುವ ಅಬ್ಬಯ ದಾರಯ ಮಕ್ಕಳು ಬ್ರಾಹ್ಮಣನನ್ನು ನೋಡುತ್ತಾರೆ. ಅರಮನೆಗೆ ಬನ್ನಿ ಎಂದು ಕರೆಯುತ್ತಾರೆ. ನಮ್ಮಲ್ಲಿ ನಿಮಗೆ ಭಿಕ್ಷೆ ಕೊಡಲು ತಾಯಿಯವರು ಕಾಯಿ ಹಾಕಿ ಕಾಯಿಯ ಮುಹೂರ್ತ ಕರೆಯಲು (ಮದುವೆಗೆ ವೀಳ್ಯ ಅಡಿಕೆ ನೀಡಿ ಆಮಂತ್ರಿಸಲು) ಹೋಗುವಾಗ ಎಲ್ಲ ಬೀಗಹಾಕಿ ಹೋಗಿದ್ದಾರೆ ಎನ್ನಲು ಬ್ರಾಹ್ಮಣ ನೀವು ಏನೂ ಕೊಡದಿದ್ದರೂ ತೊಂದರೆಯಿಲ್ಲ. ನಾನು ನಾಲ್ಕು ಊರಲ್ಲೆ ಭಿಕ್ಷೆ ಬೇಡುವಾಗ ಅಬ್ಬಯ ದಾರಯ ಮಕ್ಕಳು ಚೆನ್ನೆ ಆಟದಲ್ಲಿ ಬಲು ಶೂರರು ಎಂಬುದನ್ನು ಕೇಳಿದ್ದೇನೆ. ನಿಮ್ಮ ಹಾಗೆ ಇರುವಾಗ ನನಗೆ ಚೆನ್ನೆ ಎಂದರೆ ಬಲು ಇಷ್ಟ. ಈಗ ಆಡಲು ಆಗುವುದಿಲ್ಲ ಎಂದು ಮಕ್ಕಳನ್ನು ಚೆನ್ನೆ ಆಡಲು ಪ್ರೇರೇಪಿಸುತ್ತಾನೆ. ಮಕ್ಕಳು ಒಳಗೆ ಕಲ್ಲಕಲೆಂಬಿಯಲ್ಲಿ ಇಟ್ಟಿದ್ದ ಚೆನ್ನೆಮಣೆಯನ್ನು ತಂದು ಮೂಡು ಪಡು ಕುಳಿತುಕೊಂಡು ಅದೇ ದಿಕ್ಕಿನಲ್ಲಿ ಮಣೆ ಇಟ್ಟು ಆಡಲು ಪ್ರಾರಂಭಿಸುತ್ತಾರೆ. ಹೀಗೆ ಆಡುತ್ತಾ ಮುಂದುವರಿದು ಮೂರು ಆಟಗಳಲ್ಲಿಯೂ ದಾರಯಳಿಗೆ ಸೋಲಾಗುತ್ತದೆ. ಆಗ ಅಬ್ಬಗ ಮೂರು ಆಟಗಳಲ್ಲಿಯೂ ನಿನಗೆ ಸೋಲಾಯಿತು. ನಾಳೆಯ ದಿನ ನಿನ್ನ ಯಜಮಾನನನ್ನು ಬರಹೇಳಿ ಅರಳಿನ

ಔತಣ ಹಾಕಬೇಕೆಂದು ತಮಾಷೆ ಮಾಡುತ್ತಾಳೆ. ಬ್ರಾಹ್ಮಣ ಬಾಕಿಮಾರು ಗದ್ದೆಯಲ್ಲಿ ಕರುಗಳು ನೇಜಿ ಮೇಯುತ್ತಿವೆ. ಹೋಗಿ ಓಡಿಸಿ. ಇಲ್ಲದೇ ಹೋದರೆ ನಿಮ್ಮ ತಂದೆ ತಾಯಿಯವರು ಬಂದು ಬೈದಾರು ಎಂದಾಗ ಇಬ್ಬರೂ ಎದ್ದು ಹೋಗುತ್ತಾರೆ. ಮಕ್ಕಳು ಹೋಗಿ ನೋಡುವಾಗ ಗದ್ದೆಯಲ್ಲಿ ಕರುಗಳು ಇಲ್ಲದೆ ಅವು ಹಟ್ಟಿಯಲ್ಲಿರುತ್ತವೆ. ಅಬ್ಬಗ ದಾರಯ ಮತ್ತೆ ಬರಲು ಬ್ರಾಹ್ಮಣ ಚೆನ್ನೆಮಣೆಯನ್ನು ತಿರುಗಿಸಿಟ್ಟು ಇನ್ನೊಂದು ಆಟ ಆಡುವಂತೆ ಹೇಳುತ್ತಾನೆ. ಹೀಗೆ ಆಡಲು ಮೂರೂ ಆಟಗಳಲ್ಲಿಯೂ ಅಬ್ಬಯನಿಗೆ ಸೋಲಾಗುತ್ತದೆ. ಆಗ ದಾರಯ ಅಕ್ಕನಿಗೆ ಇಂದಲ್ಲ ನಾಳೆಯ ದಿನದಲ್ಲಿ ನನ್ನ ಭಾವನವರು ನಿಮ್ಮ ಮದುಮಗ ಬಂದಾಗ ಅವರಿಗೆ ಅರಳಿನ ಔತಣ ಹಾಕಬೇಕೆಂಬ ತಮಾಷೆಯ ಮಾತುಗಳನ್ನಾಡುತ್ತಾಳೆ. ಇದನ್ನು ಕೇಳಿದ ಬ್ರಾಹ್ಮಣ ನನ್ನ ಸಹೋದರರರು ಈ ರೀತಿಯ ಮಾತುಗಳನ್ನಾಡುತ್ತಿದ್ದರೆ ನಾನಾದರೆ ದೊಡ್ಡದೊಂದು ಆಳದ ಗುಂಡಿಗೆ ಹಾರಿ ಪ್ರಾಣ ಕಳೆದುಕೊಳ್ಳುತ್ತಿದ್ದೆ ಎಂದು ಪ್ರೇರೇಪಣೆಯ ಮಾತುಗಳನ್ನಾಡುತ್ತಾನೆ. ಹಾಗಾದರೆ ನಾನು ಏನು ಮಾಡಬೇಕೆಂದು ಕೇಳಿದಾಗ ಬ್ರಾಹ್ಮಣ

ತುಳುಪಠ್ಯ

ಎನ್ನಲೆಕೊಂದಿನಾಯೆಂದಾಂಡ ಚೆನ್ನೆದ ಮಣೆನ್ ದೆರ್ತ್‌ದ್ ಪತ್ತುವೆ
ಕಡೆಕೊಡಿ ಪಿಜಿತ್ತ್‌ದುವೆ ನಡು ನೆತ್ತಿಗ್ ನಚ್ಚ ಬೆನ್ತುವೆ ಯಾನ್
ಎನ್ನ ಮೆಗ್ಯಗಾಂಡ ಓ ಪನ್ಪುಂಡೆ ಬೆರಮ್ಮನೆ

ಕನ್ನಡಾನುವಾದ

ನನ್ನ ಹಾಗಿರುವವನಾದರೆ ಚೆನ್ನೆ ಮಣೆಯನ್ನು ಎತ್ತಿ ಹಿಡಿಯುತ್ತಿದ್ದೆ
ತುದಿ ಬುಡ ತಿರುಗಿಸುತ್ತಿದ್ದೆ ನಡು ನೆತ್ತಿಗೆ ಹೊಡೆಯುತ್ತಿದ್ದೆ ನಾನು
ನನ್ನ ತಮ್ಮನಿಗಾಗುತ್ತಿದ್ದರೆ ಎಂದು ಹೇಳುತ್ತಾನೆ ಬ್ರಾಹ್ಮಣ (ಪುಟ 742).

ಅಷ್ಟು ಹೇಳಲು ಏಳೇಳು ಲೋಕದ ಕೋಪ ಕೋಪಿಸಿದಳು ಅಬ್ಬಯ. ಚೆನ್ನೆಮಣೆಯನ್ನು ತಿರುಗಿಸಿ ದಾರಯನ ನಡುನೆತ್ತಿಗೆ ಹೊಡೆದಳು. ದಾರಯ ಕಾಯಬಿಟ್ಟು ಕೈಲಾಸ ಸೇರುತ್ತಾಳೆ, ಜೀವ ಬಿಟ್ಟು ವೈಕುಂಠ ಸೇರುತ್ತಾಳೆ. ಆಗ ಬ್ರಾಹ್ಮಣ ನಾನು ಹೋಗುತ್ತೇನೆಂದು ಹೊರಡಲು ಅಬ್ಬಯ ಬ್ರಾಹ್ಮಣನನ್ನು ಹೋಗಲು ಬಿಡುವುದಿಲ್ಲ.

ತುಳುಪಠ್ಯ

ಪನ್ನಿಗ್ ಪಂಡರಾ ಓ ಬೆರಮ್ಮನಾ
ಬೆನ್ನಿಗ್ ಎಂಕ್ಲೆಗೇ ಬೆಂದಿನ ಬೆರಮ್ಮನೆ ಈರ್
ಪೋಯರ ಯಾನ್ ಬುಡಯೆ

ಕನ್ನಡಾನುವಾದ

ನಮಗೆ ಬುದ್ಧಿಗೆ ಹೇಳಿದಿರೇ ಬ್ರಾಹ್ಮಣ?
ಈ ಕೆಲಸ ಮಾಡಲು ಹೇಳಿ ಕೊಟ್ಟವರು ನೀವು
ನಿಮ್ಮನ್ನು ಹೋಗಲು ಬಿಡೆನು ಎನ್ನುತ್ತಾಳೆ ಅಬ್ಬಯ (ಪುಟ 744).

ಕಪಟ ನಾಟಕ ತಂದಿರಿ. ಈ ಕಪಟ ನಾಟಕವಾಡಿ ನಮ್ಮನ್ನು ಆಡಿಸಿದಿರಿ ಬ್ರಾಹ್ಮಣ. ಈಗ ನನಗೆ ಧೈರ್ಯ ಹೇಳದೆ ನಿಮ್ಮನ್ನು ಹೋಗಲು ಬಿಡಲಾರೆ ಎನ್ನುತ್ತಾಳೆ. ಆಗ ಬ್ರಾಹ್ಮಣ ಅಬ್ಬಯನಲ್ಲಿ ಪಂಚೋಲೆ ವೀಳ್ಯದೆಲೆ ತರಹೇಳಿ ಅದರಲ್ಲಿ ನಾಗ ಬರಹ ಬರೆಯುತ್ತಾನೆ. ಕಾನಬೆಟ್ಟು ದುರ್ಗಲ್ಲ ಅಜ್ಜನವರಿಗೆ ನಮ್ಮ ಹೆಣ ನೋಡಲು ಸಿಗಬೇಕು. ನೀವು ಮೇಲಿನ ಮೇಗಿಮ ಲೋಕದಿಂದ ಬಂದ ಮಕ್ಕಳು. ಕೆಳ ಸಿರಿಲೋಕದಲ್ಲಿ ನರಜನ್ಮ ತಾಳಿದಿರಿ. ನಿಮ್ಮ ಹೊತ್ತಾಯಿತು. ನಂದಳಿಕೆ ನಾಲ್ಕು ಸ್ಥಾನಕ್ಕೆ ಹೋಗಿ. ದೇವರ ಗದ್ದುಗೆಯಲ್ಲಾಗುವ ಹೊತ್ತಾಗುತ್ತಾ ಬಂತು ನಿಮಗೆ. ಇದನ್ನು ನಿಮ್ಮ ಬಾವಿಯ ಬೈಕಲ್ಲಿನಲ್ಲಿಟ್ಟು ತಂಗಿಯನ್ನು ಎತ್ತಿಕೊಂಡು ಹೋಗಿ ಉರ್ಕಿದೊಟ್ಟಿನ ಬಾವಿಗೆ ಹಾಕಿ ನೀನೂ ಹಾರು ಎಂದು ಹೇಳುತ್ತಾನೆ. ನೀವು ಸೋಯ (ನಿಜರೂಪ) ಬಿಟ್ಟು ಮಾಯ ತಾಳಿ ಎಂದು ಹೇಳುತ್ತಾನೆ ಬ್ರಾಹ್ಮಣ. ಉರ್ಕಿದೊಟ್ಟಿನ ಬಾವಿಯ ಕಲ್ಲಿನಲ್ಲಿ ನಿಂತು ಮಾಯ ಮಾಡಿದ ಬ್ರಾಹ್ಮಣ. ಹಿಂಗಾರದ ಹಾಳೆಗೆ ಸಮನಾಗಿ ತೇಲುತ್ತಾ ಇದ್ದಾರೆ ಅಬ್ಬಯದಾರಯರು. ಇತ್ತ ಬ್ರಾಹ್ಮಣನೂ ಮಾಯವಾಗುತ್ತಾನೆ.

ಇತ್ತ ಮದುವೆಯ ಆಮಂತ್ರಣ ನೀಡಿ ಉರ್ಕಿದೊಟ್ಟು ಅರಮನೆಗೆ ಹಿಂತಿರುಗಿ ಬಂದಾಗ ಗುರುಮಾರ್ಲರಿಗೆ ಕತ್ತಲೆ ಕತ್ತಲೆ ಕಾಣಿಸುತ್ತದೆ. ಮಕ್ಕಳನ್ನು ಕರೆದರೆ ಅವರೂ ಕಾಣಿಸುವುದಿಲ್ಲ. ಮಕ್ಕಳನ್ನು ಹುಡುಕುತ್ತಾ ಹೋಗುವಾಗ ಚಾವಡಿ ನಡುವಲ್ಲಿ ರಕ್ತದ ಓಕುಳಿ ಕಾಣಿಸುತ್ತದೆ. ಬಿಡಿಸಿರುವ ಚಾಪೆ ಕಾಣಿಸುತ್ತದೆ. ಬಂಗಾರದ ಚೆನ್ನೆಮಣೆ ರಕ್ತದಲ್ಲಿ ಮುಳುಗಿದೆ. ಬೆಳ್ಳಿಯ ಕಾಯಿ ಚೆಲ್ಲಿ ಹೋಗಿದೆ. ಕಾನಬೆಟ್ಟಿಗೆ ಜನ ಕಳುಹಿಸುತ್ತಾರೆ. ಅಜ್ಜನವರು ಬಂದು ತಾವರೆ ಕೆರೆ ಹುಡುಕಿಸುತ್ತಾರೆ. ಅಂಕಾನಂದ ಬಾವಿಯ ಹತ್ತಿರ ಬಂದು ಬೈ ಕಲ್ಲಲ್ಲಿ ನಿಂತು ನೋಡುವಾಗ ಅಜ್ಜನವರ ಕಣ್ಣಿಗೆ ಪಂಚೋಲೆ ವೀಳ್ಯದೆಲೆ ಕಾಣಿಸುತ್ತದೆ. ಅದನ್ನು ಹಿಡಿದು ನೋಡುವಾಗ ನಾಗಬರಹ ಕಾಣಿಸುತ್ತದೆ. ಅದರಲ್ಲಿ ಕಾನಬೆಟ್ಟು ಅಜ್ಜನವರು ಹೊಸ ಹಗ್ಗ ಮತ್ತು ಹೊಸ ಹೆಡಿಗೆ ತಂದು ಉರ್ಕಿದೊಟ್ಟಿನ ಬಾವಿಗೆ ಇಳಿಸಬೇಕೆಂದು ನಾಗ ಬರಹದಲ್ಲಿ ಬರೆದಿದೆ. ಮನುಷ್ಯ ಜನ್ಮ ನಮಗೆ ಮುಗಿಯಿತು, ಮಾಯದ ಹೊತ್ತು ನಮಗೆ ಬಂತು ಅಜ್ಜನವರೇ, ದೇವರ ಗದ್ದುಗೆಗೆ ಹೋಗುವ ಹೊತ್ತು ನಮಗೆ ಬಂತು ಅಜ್ಜನವರೇ ಎಂದು ಪಂಚೋಲೆ ವೀಳ್ಯದಲ್ಲಿ ನಾಗಬರಹದಲ್ಲಿ ಬರೆದದ್ದನ್ನು ಅಜ್ಜನವರು ನೋಡುತ್ತಾರೆ. ಬಾಕಿಮಾರ ಗದ್ದೆಯಲ್ಲಿ ನಮಗೆ ಕಾಷ್ಠ ಮಾಡಿಸಿ ತಲೆಮೇಲೆ ಕಾಲ ಕೆಳಗೆ ನೀವೇ ಬೆಂಕಿ ಕೊಟ್ಟುಬಿಡಿ ಅಜ್ಜನವರೇ ಎಂದು ಬರೆದಿದೆ. ಇದನ್ನು ನೋಡಿದ ಅಜ್ಜನವರು ಹೊಸ ಹಗ್ಗ ಹೊಸ ಹೆಡಿಗೆ ತರಿಸಿ

ಅದರಲ್ಲಿ ಎರಡು ಹಾಳೆ ಹಿಂಗಾರ ಇರಿಸಿ ಬಾವಿಗೆ ಇಳಿಸುತ್ತಾರೆ. ಎರಡು ಹಿಂಗಾರದ ಹಾಳೆ ತೇಲುವಂತೆ ಅಬ್ಬಯದಾರಯರು ಅಜ್ಜನವರ ಕಣ್ಣಿಗೆ ಕಾಣಿಸುತ್ತಾರೆ. ಹೆಣಗಳನ್ನು ಬಾವಿಯಿಂದ ತೆಗೆಸಿದ ಅಜ್ಜನವರು ದುಃಖಿಸುತ್ತಾರೆ. ಹೆಣದ ಮೀಹ ನಡೆದ ಮೇಲೆ ಹೆಣಗಳನ್ನು ಸಿಂಗರಿಸಿ ತಲೆಯ ಕಡೆ ಅಜ್ಜನವರು ಕಾಲಿನ ಕಡೆ ಗುರುಮಾರ್ಲ‍ರು ಹೊತ್ತುಕೊಂಡು ಹೋಗಿ ಅಬ್ಬಯ ಸಾವಿನಗದ್ದೆ ಎಂದು ಹೇಳಿ ಬಾಕಿಮಾರ ಗದ್ದೆಗೆ ಇಳಿದು ಕಾಷ್ಠಕ್ಕೆ ಮೂರು ಸುತ್ತು ಅಪ್ರದಕ್ಷಿಣೆ ಬಂದು ಹೆಣಗಳನ್ನು ಕಾಷ್ಠದಲ್ಲಿರಿಸಿ ತಲೆಯ ಕಡೆ ಕಾಲಿನ ಕಡೆಯಿಂದ ಬೆಂಕಿ ಕೊಟ್ಟರು ಕಾನಬೆಟ್ಟಿನ ದುರ್ಗಲ್ಲ ಪೆರ್ಗಡೆಯವರು. 'ಕೆಳಗಿನ ಸಿರಿಲೋಕಕ್ಕೆ ಹೋಗಿ ಮಕ್ಕಳೇ, ಮೇಲಿನ ಮಿರಿಲೋಕದ ನಾರಾಯಣ ಸ್ವಾಮಿಯ ಪಾದಕ್ಕೆ ಹೋಗಿಯಮ್ಮ ಮಕ್ಕಳೇ' ಎಂದರು ರಾಮ ರಾಮ ಎಂದರು ಕಾಷ್ಠಕ್ಕೆ ಬೆಂಕಿ ಕೊಟ್ಟರು. ಕಾಷ್ಠದ ನಡು ಸೇರುತ್ತಾ ಬರುವಾಗ ಅಬ್ಬಯ ದಾರಯರ ಎದೆಯಿಂದ ಎರಡು ಬಿಳಿಯ ದುಂಬಿಗಳು ಸಾವಿನ ಗದ್ದೆಯಾದ ಬಾಕಿಮಾರು ಗದ್ದೆಯಿಂದ ಮೇಲೆ ಹಾರಿ ಹೋಗುವುದು ಅಜ್ಜನವರ ಕಣ್ಣಿಗೆ ಕಾಣಿಸುತ್ತದೆ.

ಅಮೃತರ ಪಠ್ಯದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಬಿಟ್ಟರೆ ಹೆಚ್ಚಿನ ವಿವರಗಳು ಕಂಡು ಬರುವುದಿಲ್ಲ. ಅಬ್ಬಯ ದಾರಯರಿಗೆ ಮದುವೆಯ ಸಂಬಂಧ ಬಡಗಣ ಕಡೆ ಕಾರ್ಲ‍ಂಗಡಿ ಗುತ್ತು ಮಾನಿಕ್ಯದ ಎರಮನೆದ ಬಾಲೆ ಚಂದ್ರಪೂಂಜೆರೆನ ಬಾಲೆಲು ರಾಮೆ ಲಚ್ಮಣೆನ್ಪಿನ ಬಾಲೆಲು (ಬಡಗಣ ಕಡೆಕಾರ್ಲ‍ಂಗಡಿ ಗುತ್ತಿನ ಮಾಣಿಕ್ಯದ ಅರಮನೆಯ ಮಗು ಚಂದ್ರ ಪೂಂಜರ ಮಕ್ಕಳು ರಾಮಲಕಣ ಎನ್ನುವ ಮಕ್ಕಳು) ಎಂದು ಬರುತ್ತದೆ. ಮದುವೆಯ ಹೇಳಿಕೆಗೆ ಸೊನ್ನೆ ಗುರುಮಾರ್ಲ‍ರು ಹೋಗುವಾಗ ಅಬ್ಬಂದಡ್ಕದಲ್ಲಿ ಬಡಬ್ರಾಹ್ಮಣ ಎದುರಾಗಿ ನೀವು ಎಲ್ಲಿಗೆ ಹೊರಟಿರೆಂದು ಕೇಳಲು ಸೊನ್ನೆ ಅಪಶಕುನದ ಮಾತುಗಳನ್ನಾಡಿದಿರಿ ಎಂದು ಬ್ರಾಹ್ಮಣನನ್ನು ಬೈಯುತ್ತಾಳೆ. ಬ್ರಾಹ್ಮಣ ಮಕ್ಕಳ ಹರಕೆಯ ಬಗೆಗೆ ನೆನಪಿಸಲು ನನಗೆ ಹರಕೆ ಹೇಳಲು ಒಂದು ಕಾಲವಾದರೆ ಅದನ್ನು ಸಲ್ಲಿಸಲು ಎಪ್ಪತ್ತು ಕಾಲ ಎನ್ನುತ್ತಾಳೆ. ಅಬ್ಬಯ ದಾರಯರ ಅಂತ್ಯದ ಅನಂತರ ಸೊನ್ನೆ ಗುರುಮಾರ್ಲ‍ರು ಉರ್ಕಿದೊಟ್ಟಿಗೆ ಹಿಂತಿರುಗುವ ವೇಳೆ ಮತ್ತೆ ಅಬ್ಬಂದಡ್ಕದಲ್ಲಿ ಅದೇ ಬ್ರಾಹ್ಮಣ ಎದುರಾಗಿ ಉರ್ಕಿದೊಟ್ಟಲ್ಲಿ ಅರಿಯೋ ಮುರಿಯೋ (ಜೋರಾದ ಅಳು) ಕೇಳಿಸುತ್ತದೆ ಎನ್ನುತ್ತಾನೆ. ಅಲ್ಲಿಂದ ಓಡೋಡಿ ಬರುತ್ತಾರೆ. ಬಾವಿಯಿಂದ ಮಕ್ಕಳ ಹೆಣ ತೆಗಿಸಿ ಜೋಡು ಕಾಷ್ಠದಲ್ಲಿರಿಸಿ ಬೆಂಕಿ ಕೊಟ್ಟಾಗ ಆಕಾಶಕ್ಕೆ ಹೊಗೆ ಏಳುವಾಗ ಜೋಡು ವಜ್ರ ದುಂಬಿಗಳಾಗಿ ಮೇಲಿನ ಮಿರಿಲೋಕಕ್ಕೆ ಹೋಗುತ್ತಾರೆ ಇಬ್ಬರು ಮಾಯದ ಮಕ್ಕಳು. ಅಮೃತರ ಸಂಗ್ರಹಿತ ಕಾವ್ಯ ಇಲ್ಲಿಗೆ ಮುಕ್ತಾಯವಾಗುತ್ತದೆ.

ರಾಮಕ್ಕ ಅವರ ಪಠ್ಯದಲ್ಲಿ ಕೆಲವು ಹೊಸ ವಿವರಗಳು ದೊರೆಯುತ್ತವೆ. ಅಬ್ಬಯ ದಾರಯ ಮಕ್ಕಳು ಬೆಳೆಯುತ್ತಿದ್ದಂತೆ ಅವರಿಗೆ ಸೊನ್ನೆ ಗುರುಮಾರ್ಲ‍ರು ಬನ್ನದ ಕೊಟ್ಯ ಬರವಿನ್ನ ಸಾಲೆಯಲ್ಲಿ (ಬರಹದ ಶಾಲೆ) ವಿದ್ಯಾಬುದ್ಧಿ ಕಲಿಯಬೇಕೆಂದು ಮಕ್ಕಳಿಗೆ ಮರಳಿನ ಬರಹ ಕಲಿಸುತ್ತಾರೆ. ಬರಹದ ಶಾಲೆಯಿಂದ ಅರಮನೆಗೆ ಬರುವಾಗ

ದಾರಿಯಲ್ಲಿ ಗೋವು ಮೇಯಿಸುವ ಗೋವಳರ ಮಕ್ಕಳು ಮಣ್ಣಿನ ಗುಳಿ ಮಾಡಿ ಕಾಟುಕಾಯಿಯನ್ನು ಹೆಕ್ಕಿ ತಂದು ಮಣ್ಣಿನ ಗುಳಿಗೆ ಹಾಕಿ ಚೆನ್ನೆಯ ರೀತಿ ಆಡುತ್ತಿದ್ದಾರೆ. ಕೇಕೆ ಹಾಕಿ ಅಟ್ಟಹಾಸ ಹೋಗುತ್ತಿದ್ದಾರೆ. ಇದನ್ನು ಆ ದಾರಿಯಾಗಿ ಬರುವ ಅಬ್ಬಯ ದಾರಯರು ನೋಡುತ್ತಾರೆ. ನಮಗೊಂದು ಆಟ ಕೊಡಬಹುದೆಂದು ಕೇಳಲು ಅವರು ನೀವಾದರೋ ಉರ್ಕಿದೊಟ್ಟಿನ ಅರಮನೆಯ ಮಕ್ಕಳು, ನಾವಾದರೋ ಗೋವು ಮೇಯಿಸುವ ಗೋವಳರ ಮಕ್ಕಳು. ನೀವು ನಮ್ಮ ಹಾಗೆ ಕಾಟುಕಾಯಿ, ಮಣ್ಣಿನ ಗುಳಿಯಲ್ಲಿ ಆಡಬಾರದು ಎನ್ನುತ್ತಾರೆ. ಉರ್ಕಿದೊಟ್ಟು ಅರಮನೆಯಲ್ಲಿ ಏನು ಕೊರತೆ ಬಂದಿದೆ. ನೀವು ಬಂಗಾರದ ಹರಳು ಬೆಳ್ಳಿಯ ಚೆನ್ನೆಮಣೆಯಲ್ಲಿ ಆಡಬೇಕೆನ್ನುತ್ತಾರೆ. ಇದರಿಂದ ಸಿಟ್ಟಾದ ಮಕ್ಕಳು ಉರ್ಕಿದೊಟ್ಟಿನ ಅರಮನೆಯ ಕತ್ತಲೆ ಕೋಣೆಗೆ ಹೋಗಿ ಕವುಚಿ ಮಲಗುತ್ತಾರೆ. ಸೊನ್ನೆ ಹೋಗಿ ಮಕ್ಕಳನ್ನು ಸಮಾಧಾನಿಸಿ ಸಿಟ್ಟಾದ ವಿಷಯ ಕೇಳಲು ನಮಗೆ ಚೆನ್ನೆಮಣೆ ಮಾಡಿಸಿ ಕೊಡಬೇಕೆಂದು ಮಕ್ಕಳು ಹೇಳುತ್ತಾರೆ. ಸೀಂಕ್ರೋಡಿ ಬನ್ನವಾಚಾರಿಯ ಮನೆಗೆ ಬಂಗಾರ ಬೆಳ್ಳಿಯನ್ನು ತೆಗೆದುಕೊಂಡು ಹೋಗಿ ಗುರುಮಾರ್ಲರು ಬಂಗಾರದ ಮಣೆ, ಬೆಳ್ಳಿಯ ಹರಳು ಮಾಡಿಸಿಕೊಡುತ್ತಾರೆ. ಈ ವಿವರಗಳು ಬೇರೆ ಪಠ್ಯಗಳಲ್ಲಿ ಇಲ್ಲ. ಅಬ್ಬಗ ದಾರಗರಿಗೆ ಕಡೆರಿಕಾರ್ಲ ಕೊಡಿಕುಂಬ್ಳೆಯ ಕರಿಯಾಮು ಬೊಲಿಯಾಮು ಸೆಟ್ಟಿಗಳ ಮಕ್ಕಳಾದ ರಾಮ ಲಕಣರಿಂದ ಮದುವೆ ಸಂಬಂಧ ಬರುವ ಪ್ರಸ್ತಾವ ಇದೆ. ಉಳಿದ ವಿವರಗಳು ಮೇಲಿನ ಪಠ್ಯಗಳಂತೆ ಇವೆ.

ಇತ್ತ ಗುರುಮಾರ್ಲರು ಮತ್ತು ಸೊನ್ನೆ ಕಾಯಿಹಾಕಿ ಕಾಯಿಯ ಮುಹೂರ್ತ ಕರೆಯಲು ಮೊದಲು ಕರಿಯಾಮು ಬೊಲಿಯಾಮು ಸೆಟ್ಟಿಯವರ ಮನೆಗೇ ಹೋಗುತ್ತಾರೆ. ಮದುವೆ ಹೇಳಿಕೆಯ ಜೊತೆಗೆ ಮನೆ ನೋಡುವ ಮರ್ಯಾದೆಯೂ ಆಯಿತು ಎಂದು ಹೇಳಿ ಹೊರಡುವ ವಿವರಗಳಿವೆ. ಅಬ್ಬಂದಡ್ಕ ಗೋಳಿಮರದ ಬುಡದಲ್ಲಿ ವಿಶ್ರಾಂತಿಗಾಗಿ ಕುಳಿತಾಗ ಲಂಕೆಲೋಕನಾಡಿನ ಬೆರ್ಮೆರ್ ಬ್ರಾಹ್ಮಣ ಮಾಣಿಯ ರೂಪದಲ್ಲಿ ಬಂದು ಇವರನ್ನು ಎಲ್ಲಿಗೆ ಹೋಗುವುದೆಂದು ವಿಚಾರಿಸುತ್ತಾನೆ. ಸೊನ್ನೆ ಸಿಟ್ಟುಗೊಂಡು ಬ್ರಾಹ್ಮಣನನ್ನು ಬೈಯುವ ವಿವರಗಳಿವೆ. ಕೊನೆಗೆ ಗುರುಮಾರ್ಲರು ಸಮಧಾನಿಸಿ ತಾವು ಎಲ್ಲಿಗೆ ಹೋಗುವುದೆಂಬುದನ್ನು ತಿಳಿಸಿ ಎಲೆಅಡಿಕೆ ತಿನ್ನುವಂತೆ ಕರೆಯುತ್ತಾರೆ. ಸೊನ್ನೆ ಮುಟ್ಟಿದ ಎಲೆಅಡಿಕೆ ನಾನು ಮುಟ್ಟಲಾರೆ ಎನ್ನುತ್ತಾನೆ ಬ್ರಾಹ್ಮಣ. ಅಲ್ಲಿಂದ ಬ್ರಾಹ್ಮಣ ನೇರವಾಗಿ ಉರ್ಕಿದೊಟ್ಟಿನ ಅರಮನೆಗೆ ಬಂದು ಮಕ್ಕಳನ್ನು ಚೆನ್ನೆ ಆಡಲು ಪ್ರೇರೇಪಿಸುತ್ತಾನೆ. ಚೆನ್ನೆ ಆಟದಲ್ಲಿ ಮೊದಲು ದಾರಯ ಗೆಲುವನ್ನು ಪಡೆಯುತ್ತಾಳೆ. ಆ ನಂತರ ಗದ್ದೆಯಲ್ಲಿ ಜಾನುವಾರುಗಳಿವೆ ಎಂಬ ನೆಪದಲ್ಲಿ ದಾರಯನನ್ನು ಕಳುಹಿಸಿ ಕೊಡುತ್ತಾನೆ. ಅವಳು ಹೋಗಿ ಬರುವ ಹೊತ್ತಿಗೆ ಚೆನ್ನೆಮಣೆಯನ್ನು ತಿರುಗಿಸಿಟ್ಟು ಕಾಯಿಗಳನ್ನು ಕದ್ದು ಇರಿಸಿಕೊಂಡಿರು ಎಂದು ಬ್ರಾಹ್ಮಣ ಅಬ್ಬಯನಿಗೆ ಹೇಳಿಕೊಡುತ್ತಾನೆ. ಹಾಗೆ ಮಾಡುತ್ತಾಳೆ ಅಬ್ಬಯ. ಇತ್ತ ಜಾನುವಾರುಗಳನ್ನು ಹಟ್ಟಿಗೆ ಸೇರಿಸಿ ದಾರಯ ಬಂದು ಮತ್ತೆ ಆಟ ಮುಂದುವರಿಸಿದಾಗ ನಾಲ್ಕೂ ಆಟಗಳಲ್ಲಿ ಅಕ್ಕ ಅಬ್ಬಯ ಗೆಲ್ಲುತ್ತಾಳೆ.

ಇದರಿಂದ ಸಿಟ್ಟುಗೊಂಡ ದಾರಯ ನೀವು ಚೆನ್ನೆಮಣೆಯನ್ನು ತಿರುಗಿಸಿಟ್ಟಿರಿ, ಕಾಯಿ ಕದ್ದು ಮೋಸದಾಟ ಆಡಿದಿರಿ ಎಂದು ಜಗಳವಾಡುತ್ತಾಳೆ. ಆಗ ಬ್ರಾಹ್ಮಣ ಏನು ನೋಡುವುದು, ದಾರಯನ ನಡು ನೆತ್ತಿಗೆ ಚೆನ್ನೆ ಮಣೆಯಿಂದ ಹೊಡೆ ಎಂದು ಹೇಳಿ ಕೊಡುತ್ತಾನೆ. ಅಬ್ಬಯ ಹೊಡೆಯುತ್ತಾಳೆ. ದಾರಯ ಸಾವನ್ನಪ್ಪುತ್ತಾಳೆ. ಕಾನಬೆಟ್ಟು ಅಜ್ಜನವರು ಬಂದು ಹೆಣ ತೆಗೆಸುತ್ತಾರೆ. ಓಡ ಮುಗ್ಗೇರರು ಬಂದು ದಿಲ್ಲಿ ದಿವಾನಂದ ಕಾಷ್ಠ ಪೇರಿಸುವ ಕೆಲಸ ಮಾಡುತ್ತಾರೆ. ಅಜ್ಜನವರು ತಲೆ ಹಾಗೂ ಕಾಲ ಬದಿಯಲ್ಲಿ ಬೆಂಕಿ ಕೊಡುತ್ತಾರೆ. ಕಾಷ್ಠದ ನಡು ಸೇರುತ್ತಾ ಬರುವಾಗ ಅಕ್ಕತಂಗಿ ಕರಿಯ ದುಂಬಿಗಳಾಗಿ ಮೇಗಿಮ ಲೋಕದ ದೇವರ ಗದ್ದುಗೆಯಲ್ಲಿ ಆಗುತ್ತಾರೆ.

ಲೀಲಾ ಅವರ ಪಠ್ಯದಲ್ಲಿ ಕಡೆರಿಕಾರ್ಲದ ಬೊಲಿಯ ಚಂದ್ರಾಮು ಸೆಟ್ಟಿಯ ಅವಳಿ ಮಕ್ಕಳಾದ ರಾಮ ಲಕಣರ ಜೊತೆ ಮದುವೆಯ ಮಾತುಕತೆ ನಡೆಯುತ್ತದೆ. ಗುರುಮಾರ್ಲರು, ಕಾನಬೆಟ್ಟು ಅಜ್ಜನವರು ಮಕ್ಕಳ ಹರಕೆಯ ಬಗೆಗೆ ನೆನಪಿದಾಗ ಸೊನ್ನೆ ಮೇಲ್ಕಾಲಕ್ಕೆ ಇಬ್ಬರಿಗೆ ನಾಲ್ವರಾದಾಗ ಸಲ್ಲಿಸಿದರಾಯಿತು ಎಂದು ಹಠಕಟ್ಟಿ ಮದುವೆ ಸಂಬಂಧಕ್ಕೆ ಒಪ್ಪಿಗೆ ಸೂಚಿಸುತ್ತಾಳೆ. ಅಜ್ಜನವರಲ್ಲಿ ನೆಂಟರು ಕಡೆರಿಕಾರ್ಲಕ್ಕೆ ದಿಬ್ಬಣ ತನ್ನಿ ಎಂದು ಹೇಳಿ ಹೋಗುತ್ತಾರೆ. ಇತ್ತ ಸೊನ್ನೆ ಗುರುಮಾರ್ಲ ಮದುವೆಯ ಮುಹೂರ್ತಕ್ಕೆ ಕರೆಯಲು ಹೋಗುತ್ತಾರೆ. ಅಬ್ಬಂದಡ್ಕಕ್ಕೆ ಬರುವಾಗ ಅಡಿಕಾಲಿಗೆ ಕಲ್ಲು ನಾಟುತ್ತದೆ, ಮೇಲಿನಿಂದ ಬಿಸಿಲು ಹೊಡೆಯುತ್ತದೆ. ಗೋಳಿಯ ಮರದಡಿ ಕಾಯಿದ ಬೋಗ(ಎಲೆ ಅಡಿಕೆ ತಿನ್ನಲು)ಕ್ಕೆ ಕುಳಿತುಕೊಳ್ಳುತ್ತಾರೆ. ಮುಡಾಯಿ ಮುಜಲೊಟ್ಟು ಉರಿಬೆರ್ಮರು ಬ್ರಾಹ್ಮಣನ ರೂಪದಲ್ಲಿ ಬರುತ್ತಾರೆ. ಸೊನ್ನೆ ಗುರುಮಾರ್ಲರನ್ನು ನೋಡಿ ನೀವಿಬ್ಬರೂ ಇಷ್ಟು ಸಿಂಗಾರ ಮಾಡಿಕೊಂಡು ಜೊತೆಯಾಗಿ ಹೋಗುವುದನ್ನು ಈವರೆಗೆ ನೋಡಲಿಲ್ಲ. ಇಂದೇನು ಎಂದು ಕೇಳುತ್ತಾನೆ. ಮಕ್ಕಳಿಗೆ ಮದುವೆ ನಿಶ್ಚಯವಾಗಿ ಕಾಯಿಯ ಮುಹೂರ್ತ ಕರೆಯಲು ಹೋಗುವ ಬಗೆಗೆ ತಿಳಿಸಿ ಮಕ್ಕಳ ದಿಬ್ಬಣ ಕೊಂಡುಹೋಗಲು ಒಳ್ಳೆಯ ಮುಹೂರ್ತ ತಿಳಿಸುವಂತೆ ಬ್ರಾಹ್ಮಣನನ್ನು ಕೇಳುತ್ತಾರೆ. ಆತ ತನ್ನಲ್ಲಿರುವ ಪಂಚಾಂಗ ಬಿಡಿಸಿ ಮಕ್ಕಳು ಉರ್ಕಿದೊಟ್ಟಲ್ಲಿ ಹುಟ್ಟುವಾಗ ಹೇಳಿರುವ ಹರಕೆ ಬಾಕಿ ಇದೆ ಎಂಬುದನ್ನು ತಿಳಿಸಿ ಮಕ್ಕಳ ತಲೆ ಕೂದಲಾದರೂ ಲೆಕ್ಕ ಮಾಡಬಹುದು. ಆದರೆ ಹೇಳಿರುವ ಹರಕೆ ಲೆಕ್ಕಮಾಡಲು ಸಾಧ್ಯವಿಲ್ಲ ಎನ್ನಲು ಸಿಟ್ಟುಗೊಂಡ ಸೊನ್ನೆ ಬ್ರಾಹ್ಮಣನನ್ನು ಬೈಯುತ್ತಾಳೆ. ಬ್ರಾಹ್ಮಣ ಇಳಿದು ಹೋಗಲು ಗುರುಮಾರ್ಲರು ಸಮಾಧಾನಿಸುತ್ತಾರೆ. ಅಲ್ಲಿಂದ ಉರ್ಕಿದೊಟ್ಟಿಗೆ ಬಂದು ಅಬ್ಬಯ ದಾರಯರನ್ನು ಚೆನ್ನೆ ಆಡಲು ಪ್ರೇರೇಪಿಸುವುದು ಹಾಗೂ ಮುಂದೆ ಅಬ್ಬಯ ದಾರಯರ ದುರಂತ ಸಾವು ಈ ವಿವರಗಳೆಲ್ಲ ಮೇಲಿನ ಪಠ್ಯಗಳಂತೆ ಇವೆ.

ಅಬ್ಬಯ ತಂಗಿಯ ಹೆಣವನ್ನು ಉರ್ಕಿದೊಟ್ಟಿನ ರಸಮಯನಂದ ಬಾವಿಗೆ ಹಾಕಿ ಪಂಚೋಲೆ ವೀಳ್ಯದಲ್ಲಿ ತನ್ನ ಮೂಗುತಿಯ ದಂಡಿನಲ್ಲಿ ಬರೆದು ಈ ಬರಹ ಯಾರಿಗೂ ಕಾಣಿಸಬಾರದು. ಕಾನಬೆಟ್ಟಿನ ಅಜ್ಜನವರಿಗೆ ಮಾತ್ರ ಕಾಣಿಸಬೇಕು. ಅವರು ಬಂದು

ಅವರ ಕೈಯ ಮುತ್ತುಮುದ್ರೆಯ ಉಂಗುರವನ್ನು ಬಾವಿಗೆ ಹಾಕಿದಾಗ ಮಾತ್ರ ಹೆಣಗಳು ಹಿಂಗಾರದ ಹಾಳೆಯಾಗಿ ಮೇಲೆ ಕಾಣಿಸಿಕೊಳ್ಳಬೇಕು. ಹೊಸ ಹಗ್ಗದಲ್ಲಿ ಹೊಸ ಬುಟ್ಟಿ ಇಳಿಸಿ ಹೆಣ ಮೇಲೆ ತೆಗೆಸಬೇಕೆಂದು ಬರೆದು ಬಾವಿಯ ಕಲ್ಲಿನ ಮೇಲಿಟ್ಟು ತಾನೂ ಬಾವಿಗೆ ಹಾರುತ್ತಾಳೆ. ಅಜ್ಜನವರು ಅಬ್ಬಯ ಬರೆದಿಟ್ಟಂತೆ ಎಲ್ಲವಿಧಿಗಳನ್ನು ಮಾಡುತ್ತಾರೆ. ಜೋಡು ಕಾಷ್ಠದಲ್ಲಿಟ್ಟು ಉರಿಸಿದಾಗ ಮಕ್ಕಳು ಬಂಗಾರದ ಜೋಡುದುಂಬಿಗಳಾಗಿ ಮೇಗಿಮ ಲೋಕಕ್ಕೆ ಹೋಗುವ ವಿವರಗಳಿವೆ, ಹೆಚ್ಚಿನ ಸಿರಿಪಠ್ಯಗಳು ಅಬ್ಬಯದಾರಯರ ದುರಂತ ಸಾವಿಗೆ ಮುಕ್ತಾಯವಾದರೆ ಕೆಲವು ಪಠ್ಯಗಳು ಇದಕ್ಕಿಂತ ಹೆಚ್ಚಿನ ವಿವರಗಳನ್ನು ನೀಡುತ್ತವೆ.

ಅಬ್ಬಯ ದಾರಯರ ಸಾವಿನ ಅನಂತರದ ಘಟನೆಗಳು

ಕರ್ಗಿಯವರ ಪಠ್ಯದಲ್ಲಿ ಮಾಯವಾದ ಅಬ್ಬಯದಾರಯ ಮಕ್ಕಳು ಬೆರ್ಮೆರ್ ಪಾದಗಳಿಗೆರಗಿ ನಮಗೆ ಮೂರು ದಿನದ ಜೋಗಬೇಕೆಂದು ಕೇಳುತ್ತಾರೆ. ನಿಮಗೆ ಯಾಕೆ ಜೋಗಬೇಕೆಂದು ಕೇಳಲು ನಮ್ಮ ತಂದೆ ತಾಯಿಯ ದುಃಖ ಕಳೆಯಬೇಕು. ನಮಗೆ ಮದುವೆ ನಿಶ್ಚಯವಾಗಿದೆಯೇ ಹೊರತು ಮದುವೆಯಾಗಲಿಲ್ಲ. ಮದುವೆಯಾಗಿ ಬರಬೇಕು ಎನ್ನುತ್ತಾರೆ. ನಿಮಗೆ ಜೋಗ ಕೊಟ್ಟರೆ ನನಗೇನು ತರುವಿರಿ ಎಂದು ದೇವರು ಬೆರ್ಮೆರ್ ಕೇಳಲು ನಿಮಗೆ ಎರಡು ಕೈಯಲ್ಲಿ ಚವಲ ಬೀಸಲು ಎರಡು ಹೆಣ್ಣುಗಳನ್ನು ತರುವೆವು ಎನ್ನುತ್ತಾರೆ. ಬೆರ್ಮೆರು ಮೂರು ದಿನದ ಜೋಗ ಕೊಟ್ಟರು. ಅದರಂತೆ ಮೇಲಿನ ಲೋಕದಲ್ಲಿ ಮಾಯವಾದ ಮಕ್ಕಳು ಮತ್ತೆ ಉರ್ಕಿದೊಟ್ಟುವಿನಲ್ಲಿ ನಿಜರೂಪವನ್ನು ಪಡೆಯುತ್ತಾರೆ. ಇತ್ತ ತಂದೆ ಗುರುಮಾರ್ಲೆರು ಬೈಲಿನಲ್ಲಿ ನಡೆದು ಬರುತ್ತಿರಲು ಮಕ್ಕಳು ಇವರಿಗೆ ಎದುರಾಗುತ್ತಾರೆ. ಎಲ್ಲಿಂದ ಬಂದಿರಿ ಮಕ್ಕಳೆ ಎಲ್ಲಿಗೆ ಹೊರಟಿರಿ ಎಂದು ಕೇಳಲು ಬೋಲದರಸು ಮಕ್ಕಳಿಗೆ ಮದುವೆಯಂತೆ, ಅಲ್ಲಿಗೆ ಹೋಗುವುದೆಂದರು. ಗುರುಮಾರ್ಲೆರು ಮಕ್ಕಳನ್ನು ದಿಟ್ಟಿಸಿ ನಿಮ್ಮನ್ನು ನೋಡುವಾಗ ನನ್ನ ಮಕ್ಕಳನ್ನು ನೋಡಿದಂತಾಗುತ್ತದೆ ಎಂದರು. ಏನಾಗಿದ್ದಾರೆ ನಿಮ್ಮ ಮಕ್ಕಳು ಎನ್ನಲು "ಬೆರ್ಮೆರ್ ಎದೆಗೆ ಜೋಡು ಒಲೆ ಹಾಕಿಸಿದ್ದೇನೆ" (ಬೆರ್ಮೆರ್ ಅವರಿಂದಾಗಿ ಮಕ್ಕಳ ಅಂತ್ಯವಾಗಿದೆ) ಎಂದರು. ಆಗ ಮಕ್ಕಳು ಬೆರ್ಮೆರನ್ನು ಯಾಕೆ ಬೈಯುತ್ತೀರಿ, ನಿಮ್ಮದೇ ತಪ್ಪಲ್ಲವೇ? ಮಕ್ಕಳ ಹರಿಕೆ ಹಿಂದಿಟ್ಟು ಮದುವೆ ಮುಂದುವರಿಸಿದಿರಿ ಎನ್ನಲು ಗುರುಮಾರ್ಲೆರಿಗೆ ಸ್ಮೃತಿ ತಪ್ಪುತ್ತದೆ. ಆಗ ಮಕ್ಕಳು ಇವರು ನಮ್ಮನ್ನು ಪಾಪಕ್ಕೆ ಹುಟ್ಟಿಸಿದ್ದಾರೆ, ಪುಣ್ಯಕ್ಕೆ ಸಾಕಿದ್ದಾರೆ ಎಂದು ಅವರನ್ನು ಕೈಹಿಡಿದು ಎಬ್ಬಿಸಲು ಗುರುಮಾರ್ಲೆರಿಗೆ ಸ್ಮೃತಿ ಬರುತ್ತದೆ. ಅಷ್ಟು ಹೊತ್ತಿಗೆ ಅವಳಿ ಮಕ್ಕಳು ಮಾಯವಾಗುತ್ತಾರೆ. ಇದ್ದೂ ಬಿಡಲಿಲ್ಲ ಮಕ್ಕಳೇ ನೀವು ಸತ್ತೂ ಬಿಡಲಿಲ್ಲ ಎನ್ನುತ್ತಾರೆ ಗುರುಮಾರ್ಲೆರು. ಅಲ್ಲಿಂದ ಹೊರಟ ಮಕ್ಕಳು ನೇರವಾಗಿ ಬಂದು ಉರ್ಕಿದೊಟ್ಟು ಚಾವಡಿಯಲ್ಲಿ ಬಂಗಾರದ ತೂಗುಯ್ಯಾಲೆ ಯಲ್ಲಿ ಜೋಗವಾಗುತ್ತಾರೆ. ಸೊನ್ನೆ ಬಂದು ಮಕ್ಕಳನ್ನು ವಿಚಾರಿಸಲು ಬೋಲದರಸು

ಮಕ್ಕಳಿಗೆ ಕನ್ಯಾ ಮುಹೂರ್ತವಂತೆ. ಅಲ್ಲಿಗೆ ಹೋಗುವುದೆಂದರು. ನಮಗೆ ಎರಡು ಗಿಂಡ್ಯೆ ಹಾಲು ಬೇಕೆಂದು ಕೇಳಲು ಸೊನ್ನೆ ಹಾಲು ತಂದುಕೊಟ್ಟು ಮಕ್ಕಳ ಗುರುತು ಹಿಡಿದಳು. ನಿಮ್ಮನ್ನು ನೋಡುವಾಗ ನನ್ನ ಮಕ್ಕಳನ್ನು ಕಂಡಂತೆಯೇ ಆಗುತ್ತದೆ ಎನ್ನಲು ನಿಮ್ಮ ಮಕ್ಕಳು ಏನಾಗಿದ್ದರು ಎಂದು ಕೇಳುತ್ತಾರೆ. ಆಗ ಸೊನ್ನೆ 'ಮುಜಿಲೊಟ್ಟು ಬೆರ್ಮೆರ್ ಎದೆಗೆ ಜೊಡು ಒಲೆ ಹಾಕಿಸಿ ಮೂರು ದಿನ ಆಯಿತು' ಎಂದಳು. ಆಗ ಮಕ್ಕಳು ದೇವರನ್ನು ಯಾಕೆ ಬೈಯುತ್ತಿರಿ, ನಿಮ್ಮದೇ ತಪ್ಪಲ್ಲವೇ? ಹರಕೆಗಿಂತ ಮೊದಲು ಮದುವೆಯಲ್ಲವೇ? ಎನ್ನಲು ಸೊನ್ನೆ ಸ್ಮೃತಿ ಕಳೆದುಕೊಳ್ಳುತ್ತಾಳೆ. ನಮ್ಮನ್ನು ಹತ್ತು ತಿಂಗಳು ಹೊತ್ತು ಸಾಕಿದ ತಾಯಿ ಎಂದು ಎಡಬಲಗೈಯಲ್ಲಿ ಹಿಡಿದು ಮಕ್ಕಳು ಎಬ್ಬಿಸಲು ಸ್ಮೃತಿ ಬರುತ್ತದೆ. ಆ ಹೊತ್ತಿಗೆ ಮಕ್ಕಳು ಮಾಯವಾಗುತ್ತಾರೆ. ಇದ್ದೂ ಬಿಡಲಿಲ್ಲ ಮಕ್ಕಳೆ ನೀವು ಸತ್ತೂ ಬಿಡಲಿಲ್ಲ ಎನ್ನುತ್ತಾಳೆ ಸೊನ್ನೆ. ಉರ್ಕಿದೊಟ್ಟುವಿನಲ್ಲಿ ಮಾಯವಾದ ಮಕ್ಕಳು ಅಬ್ಬನಡ್ಕ ಗೋಳಿಯ ಮರದಡಿ ಮತ್ತೆ ಜೋಗವಾಗುತ್ತಾರೆ. ಆ ದಾರಿಯಲ್ಲೆ ಮದುವೆಯ ಕಾರ್ಯಕ್ಕೆ ಕಲಶ ಕೊಂಡುಹೋಗುವ ಕುಂಬಾರ, ಮಲ್ಲಿಗೆಯ, ಬೇಂಡಿನವ ಹಾಗೂ ಗರ್ನಾಲಿನವನನ್ನು ಮಾಯ ಮಾಡುತ್ತಾರೆ ಮಕ್ಕಳು.

ಮಲ್ಲಿಗೆಯ ಕ್ರಿಶ್ಚನ್ ಹೆಂಗಸು(ಬಾಯಿ ಹೆಂಗಸು) ಮಕ್ಕಳಿಗೆ ಎದುರಾಗುತ್ತಾಳೆ. ಮಕ್ಕಳು ಈ ಹೆಂಗಸನ್ನು ಎಲ್ಲಿಗೆ ಹೋಗುತ್ತಿದ್ದೀರಿ ಎಂದು ವಿಚಾರಿಸಲು ಬೋಳದರಮನೆಗೆ ಮಲ್ಲಿಗೆ ಹೂ ಕೊಂಡು ಹೋಗುವುದೆನ್ನುತ್ತಾಳೆ. ಮಕ್ಕಳು ಹೂ ಕೇಳಿದಾಗ ಅವರಿಗೂ ಎರಡೆರಡು ಚೆಂಡು ಮಲ್ಲಿಗೆ ಹೂ ಕೊಡುತ್ತಾಳೆ. ಕ್ರಿಶ್ಚಿಯನ್ ಹೆಂಗಸಿನಲ್ಲಿ ಉರ್ಕಿದೊಟ್ಟುವಿಗೆ ಹೋಗಿ ತಲೆ ಬಾಚಲು ಬಾಚಣಿಗೆ ಸೀರಣಿಗೆ ತಾ ಎನ್ನುತ್ತಾರೆ. ಬಾಯಿ ಓಡೋಡಿ ಹೋಗಿ ತರುತ್ತಾಳೆ. ವಿಷಯ ತಿಳಿದ ತಾಯಿ ಸೊನ್ನೆ ಮರುಗಿದಳು. ಹತ್ತು ತಿಂಗಳು ಮಕಳನ್ನು ಹೊತ್ತೆ. ಆದರೆ ಕಣ್ಣಲ್ಲಿ ಕಾಣುವ ಭಾಗ್ಯ ನಿನಗೆ ದೊರೆಯಿತೆಂದರು. ಮಕ್ಕಳನ್ನು ಮಲ್ಲಿಗೆಯ ಬಾಯಿ ಹೆಂಗಸು ಸಿಂಗರಿಸಿ ಹೂ ಮುಡಿಸಿದಳು. ಸಂತೋಷಗೊಂಡ ಮಕ್ಕಳು ನೀನು ಗುಡ್ಡದ ಬದಿಯಲ್ಲಿ ಕುಳಿತರೂ ಕೇನೆ, ಗೆಣಸು ಬೆಳೆದು ಬದುಕು ನಡೆಸು ಎಂಬ ವರ ನೀಡಿದರು. ಅಲ್ಲಿಂದ ಮಾಯವಾದ ಮಕ್ಕಳು ಬೋಲದರಮನೆಗೆ ಬರುತ್ತಾರೆ. ಅಲ್ಲಿ ಕಡೆರಿ ಕಾರ್ಲದ ಬೊಳಿಯ ಸಂದ್ರಾಮು ಸೆಟ್ಟಿಯು ಅವಳಿ ಮಕ್ಕಳಾದ ರಾಮ ಲಕಣರಿಗೆ ಚೆನ್ನಗ ಚೆಲುವಗರ ಜೊತೆ ಮದುವೆಗೆ ಸಿದ್ಧತೆ ನಡೆದಿರುತ್ತದೆ. ಆದರೆ ಮಡಿ ಇಡಲು ಮಡಿವಾಳ ಬರಲಿಲ್ಲ. ಕಲಶ ಇಡಲು ಕುಂಬಾರ ಬರಲಿಲ್ಲ. ಮೋಂದಲೆಗೆ (ಮುಖಕ್ಷೌರ) ಕ್ಷೌರಿಕ ಇಲ್ಲ. ಜನರೆಲ್ಲ ಅಂದು ಅಬ್ಬಯ ದಾರಯ ಸಾಯದೆ ಇರುತ್ತಿದ್ದರೆ ಇಂದು ಅವರ ಜೊತೆ ರಾಮಲಕಣರ ಮದುವೆ ನಡೆಯುತ್ತಿತ್ತು ಎಂದು ಮಾತನಾಡಿಕೊಳ್ಳುತ್ತಾರೆ

ಧಾರೆಯ ಮುಹೂರ್ತ ಹತ್ತಿರ ಬರುವಾಗ ತಮಗೆ ರಾಮಲಕಣರ ಜೊತೆ ಧಾರೆ ಆಗ ಬೇಕಾದರೆ ಚೆನ್ನಗ ಚೆಲುವಗರನ್ನು ಮಾಯ ಮಾಡಬೇಕೆಂದರು ಮಾಯದ ಮಕ್ಕಳು. ಹಾಗೆ ಮಾಯ ಮಾಡಬೇಕಾದರೆ ಸತ್ಯದಲ್ಲಿ ಹುಟ್ಟಿದ ದೊಡ್ಡತಾಯಿ (ಸಿರಿ),

ಮಾವನವರಾದ ಕುಮಾರ ಹಾಗೂ ತಾಯಿ ಸೊನ್ನೆಯವರ ಹುಟ್ಟು ಕಟ್ಟನ್ನು ಹೇಳ ಬೇಕೆಂದರು. (ಇಲ್ಲಿ ಸಿರಿ, ಕುಮಾರ ಹಾಗು ಸೊನ್ನೆಯ ಬಗೆಗಿನ ಸಂಧಿಯ ಭಾಗವನ್ನು ಪುನರಪಿ ಕರ್ಗಿ ಹಾಡಿದ್ದಾರೆ). ರಾವಿನ್ನ ಗೆಜ್ಜೆಕತ್ತಿ ತೆಗೆದರು ಅಬ್ಬಯ ದಾರಯರು ಮೂಡು ಪಡು ಗೆರೆ ಎಳೆದು ಚೆನ್ನಗ ಚೆಲುವಗ ಮಾಯಯವಾಗ ಬೇಕೆಂದರು. ಅವರು ಮಾಯಯವಾದಾಗ ಆ ಜಾಗದಲ್ಲಿ ತಾವು ನಿಂತು ರಾಮ ಲಕಣರ ಜೊತೆ ಮದುವೆಯಾದರು. ಮದುವೆಯ ಅನಂತರ ಹಾಲು ಕುಡಿಯಲು ಕೊಟ್ಟಾಗ ಮೈಲಿಗೆಯಾದೀತೆಂದು ತಿಳಿದು ಬೋಲದರಮನೆಯಲ್ಲಿ ಮಾಯವಾದರು. ಮದುವೆಯಾಗಿ ತಾಯಿಯ ದುಃಖ, ತಂದೆಯ ಚಿಂತೆ ಹೋಗಲಾಡಿಸಿದರು. ದೇವರು ಬೆರ್ಮರಿಗೆ ಕೊಟ್ಟ ಮಾತಿನಂತೆ ಬೆಳ್ಳಿಯ ಚವಲ ಬೀಸಲು ಚೆನ್ನಗ ಚೆಲುವಗರನ್ನು ಕರೆತಂದರು. ಅಬ್ಬಯ ದಾರಯರು ಬಂಗಾರದ ಪುಂಚಲ ಹಿಡಿದು ದೇವರ ಗದ್ದಿಗೆ ಏರುವ ವಿವರಗಳು ಇವೆ.

ಗೋಪಾಲ ನಾಯ್ಕರ ಪಠ್ಯದಲ್ಲಿ ಅಬ್ಬಯದಾರಯರನ್ನು ಕಾಷ್ಠದಲ್ಲಿಟ್ಟು ಉರಿಸಿದಾಗ ಅವರು ಬಿಳಿಯ ದುಂಬಿಗಳಾಗಿ ಮೇಲಿನ ಮಿರಿಲೋಕಕ್ಕೆ ಹೋಗಿ ಸ್ವಾಮಿಯ ಸಿರಿಪಾದಕ್ಕೆ ಎರಗುತ್ತಾರೆ. ಅಷ್ಟು ಹೊತ್ತಿಗೆ ನಾರಾಯಣ ದೇವರು ಎಲ್ಲಿಂದ ಬಂದಿರಮ್ಮ ಮಕ್ಕಳೇ ನೀವು ಎಂದು ಕೇಳುತ್ತಾರೆ. ಆಗ ಮಕ್ಕಳು ನಾವು ಕೆಳಗಿನ ಸಿರಿಲೋಕದಿಂದ ಬಂದಿದ್ದೇವೆ. ನಮ್ಮ ಹರಕೆ ಉಳಿಯಿತು ಸ್ವಾಮಿ, ನಮ್ಮದು ಮದುವೆಯ ಮಾತು ಮುಂದೆ ಆಯಿತು, ನಮ್ಮ ಉರಿಬೆರ್ಮರು ನಮ್ಮನ್ನು ಸೋಯ (ನಿಜರೂಪ) ಬಿಡಿಸಿ ಸ್ವಾಮಿಯವರೇ ಮಾಯ ಮಾಡಿದರು. ನಾವು ನಿಮ್ಮ ಸಿರಿಪಾದಕ್ಕೆ ಬಂದೆವು ಎನ್ನುತ್ತಾರೆ ಮಕ್ಕಳು. ಸತ್ಯನಾರಾಯಣ ಸ್ವಾಮಿಯವರಲ್ಲಿ, ನಮಗೆ ಮದುವೆ ನಿಶ್ಚಿತಾರ್ಥವಾಗಿದೆ, ನಾಳೆಯ ದಿನ ನಮ್ಮ ಮದುವೆಯ ದಿನ ಸ್ವಾಮಿಯವರೇ ಎನ್ನಲು ದೇವರು ಹಾಗಾದರೆ ನಿಮಗೆ ನನ್ನ ಸಿರಿ ಪಾದದಲ್ಲಿ ನಿಲ್ಲುವ ಹೊತ್ತು ನಿಮಗೆ ಇಲ್ಲಮ್ಮ. ನೀವು ಕೆಳಗಿನ ಸಿರಿ ಲೋಕಕ್ಕೆ ಹೋಗ ಬೇಕಮ್ಮ ಮಕ್ಕಳೆ. ಧಾರೆ ನೀರು ತೆಗೆದುಕೊಳ್ಳಬೇಕಮ್ಮ ನೀವು. ಆಯಸ್ಸು ಇದ್ದ ಮಕ್ಕಳನ್ನು ಅಪಮೃತ್ಯುವಿನ ರೀತಿಯಲ್ಲಿ ಕೊಂದ ನಾಗಬೆರ್ಮೆರ್ ಸುತ್ತು ಬಲಿಗೆ ಹೋಗಿಯಮ್ಮ ನೀವು. ಈಶ್ವರ ಗದ್ದಿಗೆಯಲ್ಲಿ ಆಗಿಯಮ್ಮ ಮಕ್ಕಳೆ ಹೋಗಿ ಎನ್ನುತ್ತಾರೆ. ಹೀಗೆ ಮೂರು ದಿನದ ಬಿಡುವು ತೆಗೆದುಕೊಳ್ಳುತ್ತಾರೆ. ನಾವು ಹೋಗುತ್ತೇವೆ ಸ್ವಾಮಿಯವರೇ, ಯಾರು ದುಃಖದಲ್ಲಿ ಇದ್ದಾರೆ, ಯಾರು ಕಷ್ಟದಲ್ಲಿದ್ದಾರೆಂದು ನೋಡಿಕೊಂಡು ಧಾರೆಯ ನೀರಿಗೆ ನಾವು ಕೈ ಕೊಟ್ಟು ದೇವರ ಗದ್ದಿಗೆಗೆ ನಾವು ಹೋಗುತ್ತೇವೆ ಸ್ವಾಮಿ ಎನ್ನುತ್ತಾರೆ. ದೇವರು ಹೋಗಿಯಮ್ಮ ಮಕ್ಕಳೇ. ನಿಮಗೆ ಮೂರು ದಿನದ ಬಿಡುವು ನೀಡಿದ್ದೇನೆ. ನೀವು ಕೆಳಗಿನ ಸಿರಿ ಲೋಕಕ್ಕೆ ಹೋಗಿ ನರ ಮಾನವರ ಸುಖ, ಕಷ್ಟ ದುಃಖಗಳನ್ನು ನಿವಾರಣೆ ಮಾಡಿಕೊಂಡು ಬನ್ನಿ. ಧಾರೆಯ ನೀರನ್ನು ತೆಗೆದುಕೊಂಡು ಹೇಳಿರುವ ಹರಕೆಗಳನ್ನು ಮಾಯದಲ್ಲಿ ಸಲ್ಲಿಸಿ ಮೋಕ್ಷ ಪಡೆದು ಮಾತನಾಡದ(ಮನಿಪ್ಪಾನ) ಈಶ್ವರ ಸ್ವಾಮಿಯ ಗದ್ದಿಗೆಯಲ್ಲಿ ಆಗಿಯಮ್ಮ ಮಕ್ಕಳೇ, ಹೋಗಿ ಎಂದು ಕೆಳಗಿನ ಸಿರಿ ಲೋಕಕ್ಕೆ ಕಳುಹಿಸಿಕೊಡುತ್ತಾರೆ. ಬಿಳಿಯ

ದುಂಬಿಗಳಾಗಿ ಕೆಳಸಿರಿ ಲೋಕಕ್ಕೆ ಬರುತ್ತಾರೆ ಮಕ್ಕಳು. ಬಂದು ಅಬ್ಬಂದಡ್ಕ ಗೋಳಿಯ ಬುಡದಲ್ಲಿ ಕಂಚಿಕಲ್ಲ ಉರಿಗಂಡಾಲ ಬಿಸಿಲಿನ ಪಾದೆಯಲ್ಲಿ ಇದ್ದಾರೆ ಅಬ್ಬಯ ದಾರಯ ಮಕ್ಕಳು. ಅಷ್ಟು ಹೊತ್ತಿಗೆ ಆ ದಾರಿಯಾಗಿ ಬೇಂಡಿನವರು, ವಾಲಗದ ಸೇರಿಗಾರರು ಬರುತ್ತಾರೆ. ನೀವು ಎಲ್ಲಿಗೆ ಹೋಗುವವರೆಂದು ಮಕ್ಕಳು ವಿಚಾರಿಸಲು ಅವರು ನಾವು ಕಡೆರಿಕಾರ್ಲದ ಬೊಲಿಯ ಸಂದ್ರಾಮು ಸೆಟ್ಟಿಯ ಮನೆಗೆ ಹೋಗುವವರು. ಅವರ ಮಕ್ಕಳಾದ ರಾಮ ಲಕಣರಿಗೆ ಇಂದು ಮದುವೆ ಎನ್ನಲು ಇಬ್ಬರು ಹೆಣ್ಣುಗಳು ಇಲ್ಲಿ ಒಂದು ಬಾರಿ ಬೇಂಡು ವಾಲಗ ಬಾರಿಸಬಹುದೇ ಎಂದು ಕೇಳುತ್ತಾರೆ. ಆಗಬಹುದು ಎಂದು ಅಬ್ಬಂದಡ್ಕ ಗೋಳಿಯ ಮರದ ಬುಡದಲ್ಲಿ ಬೇಂಡು ವಾಲಗ ಬಾರಿಸುತ್ತಾರೆ. ಇನ್ನು ಹೋಗಿ ವಾಲಗದವರೇ, ನಿಮ್ಮ ವಾಲಗ ಶತಕಾಲದವರೆಗೆ ಸರಸ್ವತಿಯಾಗಿರಲಿ ಎಂದು ಹೇಳುತ್ತಾರೆ. ಅವರು ಹೋಗುವಾಗ ಬರುತ್ತಾಳೆ ಗಾಣದ ಬೋಯೀ(ಬೋವಿ). ಎಣ್ಣೆ ಹೊತ್ತುಕೊಂಡು ಎಲ್ಲಿಗೆ ಹೋಗುತ್ತಿ ಎಂದು ಕೇಳಲು ಅವಳು ಕಡೆರಿಕಾರ್ಲದ ಬೊಲಿಯ ಸಂದ್ರಾಮು ಸೆಟ್ಟಿಯ ಮಕ್ಕಳಿಗೆ ಮದುವೆ. ಮದುವೆ ಗಂಡು ಹೆಣ್ಣಿನ ಮೆಯಿಗೆ ಸವರಲು ಎಣ್ಣೆ ಕೊಂಡು ಹೋಗುತ್ತಿದ್ದೇನೆ ಎನ್ನುತ್ತಾಳೆ. ಆಗ ನಮಗೆ ಒಂದು ತಕಣ(ಚಮಚ) ಎಣ್ಣೆ ನೆತ್ತಿಗೆ ಹಾಕಬಹುದೇ ಎಂದು ಕೇಳುತ್ತಾರೆ ಅಬ್ಬಯ ದಾರಯ ಮಕ್ಕಳು. ಆಗಬಹುದೆಂದು ಹೇಳಿ ಹೆಣ್ಣುಗಳ ತಲೆಗೆ ಎಣ್ಣೆ ಹಾಕುತ್ತಾಳೆ ಗಾಣದ ಬೋಯೀ. ಇವಳು ಅಲ್ಲಿಂದ ಹೊರಡಲು ಹೂ ಮಾರುವ ಕ್ರೈಸ್ತ ಹೆಂಗಸು (ಬಾಯಿ) ಬರುತ್ತಾಳೆ. ಅವಳನ್ನು ವಿಚಾರಿಸಿ ಉರ್ಕಿದೊಟ್ಟಿನ ಅಬ್ಬಯದಾರಯರಿಗೆ ಇಂದು ಕಡೆರಿ ಕಾರ್ಲದ ಬೊಲಿಯ ಸಂದ್ರಾಮು ಸೆಟ್ಟಿಯ ಮಕ್ಕಳಾದ ರಾಮ ಲಕಣರ ಜೊತೆಗೆ ಮದುವೆ. ಅಲ್ಲಿಗೆ ಹೂ ಕೊಂಡು ಹೋಗುತ್ತಿದ್ದೇನೆ ಎನ್ನಲು ನಮಗೆ ಎರಡು ಚೆಂಡು ಹೂ ಕೊಡಬಹುದೇ ಎಂದು ಕೇಳಲು ಬಾಯಿ ಎರಡು ಚೆಂಡು ಮಲ್ಲಿಗೆ ಹೂ ಮಕ್ಕಳಿಗೆ ಕೊಡುತ್ತಾಳೆ. ಅದನ್ನು ಮೂಸಿ ನೊಡಿದ ಮಕ್ಕಳು ಗೋಳಿಯ ಜಂತಿಗೆ (ಗೆಲ್ಲಿಗೆ)ಕಟ್ಟುತ್ತಾರೆ. ಅದನ್ನು ಯಾಕಾಗಿ ನೀವು ತಲೆಗೆ ಮುಡಿಯುವುದಿಲ್ಲಮ್ಮ ಮಕ್ಕಳೆ ಎಂದು ಬಾಯಿ ಕೇಳಿ ನಾನೇ ನಿಮ್ಮ ತಲೆಗೆ ಮುಡಿಸುತ್ತೇನೆ ಎಂದು ನೋಡಿದಾಗ ತಲೆಗೆ ಬಾಚಣಿಗೆ ಹಾಕಿದಂತಿಲ್ಲ. ಬಾಚುವ ಎಂದರೆ ಬಾಚಣಿಗೆ ಇಲ್ಲ ಎಂದಾಗ ಅಬ್ಬಯದಾರಯರು ಉರ್ಕಿದೊಟ್ಟು ಅರಮನೆಯಲ್ಲಿ ಬಂಗಾರದ ಬಾಚಣಿಗೆ ಬೆಳ್ಳಿಯ ಸೀರಣಿಗೆ ಇದೆ. ಅಲ್ಲಿಗೆ ಹೋಗಿ ನಿಮ್ಮ ಮಕ್ಕಳು ಮಾಯದ ಮಕ್ಕಳಾಗಿದ್ದಾರೆ. ಆದರೆ ಅಬ್ಬಂದಡ್ಕ ಗೋಳಿಯ ಮರದ ಬುಡದಲ್ಲಿರುವ ಕಂಚಿಕಲ್ಲ ಪಾದೆಯಲ್ಲಿ ನಿಮ್ಮ ಮಕ್ಕಳಂತಿರುವ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಅವರ ತಲೆಬಾಚಲು ಒಂದು ಬಾಚಣಿಗೆ ಕೊಡಬೇಕೆಂದು ಕೇಳಿತನ್ನಿ ಎಂದು ಬಾಯಿಯನ್ನು ಉರ್ಕಿದೊಟ್ಟು ಅರಮನೆಗೆ ಕಳುಹಿಸಿ ಕೊಡುತ್ತಾರೆ. ಬಾಯಿ ಓಡೋಡುತ್ತಾ ಉರ್ಕಿದೊಟ್ಟಿನ ಅರಮನೆಗೆ ಬಂದು ಸೊನ್ನೆಯನ್ನು ಕರೆದು ಅಬ್ಬಂದಡ್ಕದ ಗೋಳಿಯ ಮರದ ಬುಡದಲ್ಲಿ ನಿಮ್ಮ ಮಕ್ಕಳಂತೆ ಕಾಣುವ ಇಬ್ಬರು ಮಕ್ಕಳಿದ್ದಾರೆ. ಅವರು ಅರಮನೆಯ ಕಲ್ಲಕಲೆಂಬಿಯಲ್ಲಿ ಬಂಗಾರದ ಬಾಚಣಿಗೆ

ಬೆಳ್ಳಿಯ ಸೀರಣಿಗೆ ಇದೆ. ಅದನ್ನು ತರುವಂತೆ ನನ್ನನ್ನು ಕಳುಹಿಸಿದರು ಎನ್ನುತ್ತಾಳೆ. ನನ್ನ ಮಕ್ಕಳನ್ನು ಮತ್ತೆ ಕಾಣುವ ಭಾಗ್ಯ ನನಗೆ ದೊರೆಯಲಿಲ್ಲ. ಆದರೆ ಅಂಥ ರೂಪದ ಮಕ್ಕಳನ್ನು ಕಾಣುವ ಭಾಗ್ಯ ನಿನಗೆ ಸಿಕ್ಕಿತು ಬಾಯಿ ಎಂದು ಹೇಳಿ ಸೊನ್ನೆ ಮರುಗುತ್ತಾರೆ. ನನಗಿನ್ನು ಈ ಬಂಗಾರದ ಬಾಚಣಿಗೆ ಬೆಳ್ಳಿಯ ಸೀರಣಿಗೆ ಯಾಕೆ? ಕೊಂಡು ಹೋಗೆಂದು ಬಾಯಿಯ ಕೈಗೆ ನೀಡುತ್ತಾಳೆ ಸೊನ್ನೆ. ಅದನ್ನು ಹಿಡಿದುಕೊಂಡು ಬಾಯಿ ಅಬ್ಬಂದಡ್ಕ ಗೋಳಿಯ ಮರದಡಿಗೆ ಬಂದು ಪೆಟ್ಟಿಗೆ ತೆರೆಯುತ್ತಾಳೆ. ಪೆಟ್ಟಿಗೆ ತೆರೆಯುವಾಗ ಮಕ್ಕಳ ಶೃಂಗಾರದ ಚಿನ್ನಾಭರಣಗಳು ಪೆಟ್ಟಿಗೆಯಲ್ಲಿವೆ. ಬಂಗಾರದ ಬಾಚಣಿಗೆಯಲ್ಲಿ ಇಬ್ಬರು ಹೆಣ್ಣು ಮಕ್ಕಳ ತಲೆ ಬಾಚಿದ ಬಾಯಿ ಬಂಗಾರವನ್ನು ತೊಡಿಸಿ ಕೆಂಪು, ಬೆಳ್ಳಿಯನ್ನು ತೊಡಿಸಿ ಬಿಳಿ ಮಾಡುತ್ತಾಳೆ. ಮಲ್ಲಿಗೆ ತೆಗೆದು ಎರಡು ಮಕ್ಕಳ ಮುಡಿ ತುಂಬ ಮುಡಿಸಲು ಮಕ್ಕಳು ಬಾಯಿಯ ಈ ಕೆಲಸದಿಂದ ಮೆಚ್ಚಿ ಗುಡ್ಡೆಯ ತುದಿಯಲ್ಲಿ ಕುಳಿತರೂ ಅನ್ನಕ್ಕೆ ತೊಂದರೆ ಬಾರದಿರಲಿ ಎಂಬ ವರ ನೀಡುತ್ತಾರೆ. ವರ ಪಡೆದ ಬಾಯಿ ಹೆಂಗಸು ನಾನಿನ್ನು ಕಡೆರಿಕಾರ್ಲ್‌ದ ಅರಮನೆಗೆ ಹೋಗುತ್ತೇನೆಂದು ಹೊರಟು ಹೋಗುತ್ತಾಳೆ.

ಇತ್ತ ಅಬ್ಬಯ ದಾರಯರು ಮಾಯದಲ್ಲಿ ಮಂದೆ ಸೇರಿಸಿದರು ಅಬ್ಬಂದಡ್ಕದಲ್ಲಿ. ಸಾವಿರ ಬಿರುದಾವಳಿ, ಆನೆ ಪಲ್ಲಕ್ಕಿ, ಸಹಸ್ರ ವಿನೋದದೊಂದಿಗೆ (ಮಿನದನ) ಅಬ್ಬಯ ದಾರಯರ ದಿಬ್ಬಣ ಕಡೆರಿಕಾರ್ಲ್‌ಕ್ಕೆ ಹೋಗುತ್ತದೆ. ದಿಬ್ಬಣ ಎದುರ್ಗೊಂಡರು ಸಂದ್ರಾಮು ಸೆಟ್ಟಿಯವರು. ಧಾರೆಯ ವೇಳೆ ಸಮೀಪಿಸುತ್ತಾ ಬಂತು. ಹೆಣ್ಣುಗಳನ್ನು ಧಾರೆ ಮಂಟಪಕ್ಕೆ ಕರೆತನ್ನಿ ಎಂದಾಗ ಆ ಕಡೆಯಿಂದ ರಾಮಲಕಣ ಹುಡುಗರನ್ನು ಸಿಂಗರಿಸಿ ಕರೆದುಕೊಂಡು ಬಂದರು, ಈ ಕಡೆಯಿಂದ ಅಬ್ಬಗ ದಾರಯರನ್ನು ಕರೆ ತಂದರು. ಮೊಟ್ಯರಿ (ಮೆಟ್ಟಿ ನಿಲ್ಲುವ ಅಕ್ಕಿ?) ಹಾಕಿಸಿ ಅದರ ಮೆಲೆ ನಿಲ್ಲಿಸಿ ಧಾರೆ ಎರೆದರು. ಮಲ್ಲಿಗೆಯ ಮಾಲೆಯನ್ನು ಪರಸ್ಪರ ಬದಲಿಸಿಕೊಂಡರು. ರಾಮ ಲಕಣರನ್ನು ಧಾರೆ ನೀರಲ್ಲಿ ಪಡೆದ ಅಬ್ಬಯ ದಾರಯ ಮಕ್ಕಳು ಸೇರಿದ ಸಭೆಯಲ್ಲಿ, ಮಾವನವರಲ್ಲಿ ಹಾಗೂ ಮದುಮಗಂದಿರಲ್ಲಿ ಹೀಗೆ ಹೇಳುತ್ತಾರೆ. ನಾವು ಹೇಳುವ ಮಾತುಗಳನ್ನು ಕಿವಿಕೊಟ್ಟು ಕೇಳಿರಿ. ನಾವು ನಿಜ ಮಕ್ಕಳಲ್ಲ, ನಾವು ಮಾಯದಲ್ಲಿ ಬಂದವರು. ನಿಮ್ಮಿಂದ ಧಾರೆ ನೀರು ಪಡೆದೆವು ನಾವು. ನಾವು ನಿಮಗೆ ಸಿಗುವ ಮಕ್ಕಳಲ್ಲ ರಾಮ ಲಕಣರೇ, ಬೊಲಿಯ ಸಂದ್ರಾಮು ಸೆಟ್ಟಿಯವರೇ. ನಿಮಗೆ ಸಿಗುವ ಮಕ್ಕಳನ್ನು ನಾವು ನಿಂತ ಮಂಟಪದಲ್ಲಿ ಒದಗಿಸಿ ಕೊಡುವೆವು ಎಂದರು. ನಾವು ದೇವರ ಗದ್ದುಗೆಗೆ ಹೋಗುವ ಮಕ್ಕಳೆಂಬುದನ್ನು ತಿಳಿಯಿರಿ ಎಂದರು. ನಮಗೆ ಹೋಗುವ ಹೊತ್ತಾಯಿತು ಎಂದರು ಅಬ್ಬಯ ದಾರಯರು. ಮುಕ್ಕಾಲು ಮೂರು ಘಳಿಗೆಯಲ್ಲಿ ಬನ್ನಂದ ಕೊಟ್ಟಿಗೆ, ಚಿನ್ನಂದ ಕೋಟೆಯಲ್ಲಿ ಇದ್ದಾರೆ ಚೆನ್ನಗ ಚೆಲುವಗ ಎಂಬ ಮಕ್ಕಳು. ಅವರನ್ನು ಅಲ್ಲಿಂದ ಮಾಯ ಮಾಡಿದರು ಅಬ್ಬಯ ದಾರಯರು. ಕಡೆರಿ ಕಾರ್ಲ್‌ದ ಧಾರೆಯ ಮಂಟಪದಲ್ಲಿ ತಂದು ನಿಲ್ಲಿಸಿದರು. ಧಾರೆಯ ನೀರು ಕೊಟ್ಟಿದ್ದೇವೆ, ಅಬ್ಬಯ ದಾರಯರ ಕುತ್ತಿಗೆಗೆ ಹಾಕಿರುವ ಹಾರ ಚೆನ್ನಗ

ಚೆಲುವಗರ ಕುತ್ತಿಗೆಯಲ್ಲಿದೆ. ಕಡೆರಿ ಕಾರ್ಲದಲ್ಲಿ ರಾಮಲಕಣರ ಜೊತೆ ಚೆನ್ನಗ ಚೆಲುವಗರಿಗೆ ಕೈ ಮುಟ್ಟಿ ಕೈಧಾರೆ ಮಾಡಿದರು, ಮೆಯಿ ಮುಟ್ಟಿ ಸೇಸೆ ಹಾಕಿದರು. ಸೇರಿದ ಸಭೆಗೆ ಊಟೋಪಚಾರವಾಗಿ ಸಭೆಯವರು ಚದುರಿದರು. ರಾಮ ಲಕಣರು ಚೆನ್ನಗ ಚೆಲುವಗರ ಜೊತೆ ಬಲು ಅಂದ ಚಂದದಿಂದ ಕಡೆರಿ ಕಾರ್ಲದಲ್ಲಿ ಕಾಲಕಳೆಯುತ್ತಿದ್ದಾರೆ.

ಕಡೆರಿಕಾರ್ಲದಲ್ಲಿ ಮಾಯವಾದ ಅಬ್ಬಯ ದಾರಯರು ಉರ್ಕಿದೊಟ್ಟಿನ ಅರಮನೆಗೆ ಬರುತ್ತಾರೆ. ಅರಮನೆಯ ಚಾವಡಿಯಲ್ಲಿರುವ ತೂಗುಯ್ಯಾಲೆಯಲ್ಲಿ ಕುಳಿತು ಮಕ್ಕಳು ಗಿರಿಗೀಟನೆ ತಿರುಗುವ ಸದ್ದು ಕೇಳಿಸುತ್ತದೆ ಸೊನ್ನೆಗೆ. ಮಲ್ಲಿಗೆಯ ಪರಿಮಳ ಹಾಗೂ ಅಬ್ಬಯ ದಾರಯರ ಕಾಲಿನ ಗೆಜ್ಜೆಯ ಸದ್ದು ಕೇಳಿಸುತ್ತದೆ. ನನ್ನ ಮಕ್ಕಳು ತೂಗುಯ್ಯಾಲೆಯಲ್ಲಿ ಕುಳಿತು ಆಡುವ ಸದ್ದು, ಅವರು ಮುಡಿದ ಮಲ್ಲಿಗೆಯ ಪರಿಮಳ, ಅವರ ಕಾಲಿನ ಗೆಜ್ಜೆಯ ಸದ್ದು ಇದೆಲ್ಲ ಎಲ್ಲಿಂದ ಕೇಳುವುದೆಂದು ಸೊನ್ನೆ ತಲೆ ಕೆದರಿಕೊಂಡು ಅಳುತ್ತಾ ಒಳಗಿಂದ ಚಾವಡಿಗೆ ಬರುತ್ತಾಳೆ. ಹಾಗೆ ಬಂದು ನೋಡುವಾಗ ತೂಗುಯ್ಯಾಲೆಯಲ್ಲಿ ಕುಳಿತ ತನ್ನ ಮಕ್ಕಳನ್ನು ಕಂಡ ಹಾಗೆ ಕಾಣಿಸುತ್ತದೆ ಸೊನ್ನೆಗೆ. ನೀವು ಎಲ್ಲಿಂದ ಬಂದಿರಮ್ಮ ಮಕ್ಕಳೇ, ನಿಮ್ಮನ್ನು ನೋಡುವಾಗ ನನ್ನ ಮಕ್ಕಳಾದ ಅಬ್ಬಯ ದಾರಯರನ್ನು ಕಂಡಂತಾಗುತ್ತದೆ ಎನ್ನುತ್ತಾಳೆ. ಆಗ ಮಕ್ಕಳು ನಿಮ್ಮ ಮಕ್ಕಳಾದ ಅಬ್ಬಯ ದಾರಯರು ನಾವು. ನಿಮ್ಮ ಮದುಮಗ ನಮ್ಮ ತಂದೆಯವರು ಎಲ್ಲಿದ್ದಾರೆ ತಾಯಿಯವರೇ ಎಂದು ಕೇಳುತ್ತಾರೆ. ಅವರು ಇರಲು ಇದ್ದಾರೆ ಮಕ್ಕಳೆ, ಬೈಲಲ್ಲೆ ಗದ್ದೆಗಳನ್ನು ನೋಡಿಕೊಂಡು ಬರಲು ಹೋಗಿದ್ದಾರೆ ಎನ್ನುತ್ತಾಳೆ ಸೊನ್ನೆ. ಅವರನ್ನೊಮ್ಮೆ ಕರೆಯಬಹುದೇ, ನಮಗೊಮ್ಮೆ ನೋಡಬೇಕಿತ್ತು ತಾಯಿಯವರೇ ಎನ್ನುತ್ತಾರೆ ಮಕ್ಕಳು. ಜನ ಕಳುಹಿಸಿ ಗುರುಮಾರ್ಲರನ್ನು ಬರ ಹೇಳುತ್ತಾಳೆ ಸೊನ್ನೆ. ಅವರು ಬಂದವರೇ ಮಕ್ಕಳನ್ನು ಕಂಡು ನೀವು ಎಲ್ಲಿಂದ ಬಂದವರಮ್ಮ ಮಕ್ಕಳೇ, ಎಲ್ಲಿಗೆ ಹೋಗುವವರೆಂದು ಕೇಳುತ್ತಾರೆ. ನಿಮ್ಮನ್ನು ನೋಡುವಾಗ ನನ್ನ ಮಕ್ಕಳಾದ ಅಬ್ಬಯ ದಾರಯರನ್ನು ಕಂಡಂತಾಗುತ್ತದೆ ಎನ್ನುತ್ತಾರೆ. ಆಗ ಮಕ್ಕಳು ನಾರಾಯಣ ತಂದೆಯವರೇ, ನೀವು ಹೇಳುವ ಅಬ್ಬಯ ದಾರಯ ಮಕ್ಕಳು ನಾವೇ. ಅಂದು ನೀವು ನಮ್ಮನ್ನು ಕಾಷ್ಠದಲ್ಲಿಟ್ಟು ಉರಿಸಿದಾಗ ಬಿಳಿಯ ದುಂಬಿಗಳಾಗಿ ಕೆಳ ಸಿರಿಲೋಕ ಬಿಟ್ಟು ಮೇಲಿನ ಮಿರಿ ಲೋಕ ಹಿಡಿದೆವು ತಂದೆಯವರೇ. ನಾರಾಯಣ ಸ್ವಾಮಿಯವರ ಸುತ್ತು ಬಲಿಯಲ್ಲಾಗಿ ಅವರ ಸಿರಿಪಾದಕ್ಕೆರಗಿದೆವು. ಮೇಲಿನ ಮಿರಿ ಲೋಕದಿಂದ ಮೂರು ದಿನದ ಬಿಡುವು ಪಡೆದುಕೊಂಡು ಕೆಳ ಸಿರಿಲೋಕಕ್ಕೆ ಬಂದೆವು ತಂದೆಯವರೇ. ಕಷ್ಟಸುಖ ನೋಡಲು ಬಂದೆವು ನಾವು. ಕಡೆರಿ ಕಾರ್ಲದ ಕೊಡಿ ಕುಂಬ್ಳೆಯ ಬೊಲಿಯ ಸಂದ್ರಾಮು ಸೆಟ್ಟಿಯ ಮಕ್ಕಳಾದ ರಾಮ ಲಕಣರಿಂದ ಇಂದಿನ ದಿನ ನಾವು ಮಾಲೆ ಹಾಕಿಸಿಕೊಂಡೆವು, ಧಾರೆ ನೀರಿಗೆ ಕೈ ಕೊಟ್ಟೆವು ತಂದೆ ತಾಯಿಯವರೇ. ಚೆನ್ನಂದ ಕೊಟ್ಟೆಗೆ ಬನ್ನಂದ ಅರಮಾನೆಯಿಂದ ಚೆನ್ನಗ ಚೆಲುವಗರನ್ನು ಕಡೆರಿ ಕಾರ್ಲಕ್ಕೆ ಮಾಯದ ಮಕ್ಕಳಾದ ನಾವು ಮಾಯ ಮಾಡಿ ನಿಜ ರೂಪದಲ್ಲಿ ಉದಯ ಮಾಡಿ ಬಂದೆವು ತಂದೆ ತಾಯಿಯವರೇ. ನಾರಾಯಣ

ತಂದೆ ತಾಯಿಯವರೇ, ನೀವು ಚಿಂತೆ ಮಾಡಬಾರದು. ನಿಮಗೆ ಸಿಗುವ ಮಕ್ಕಳಲ್ಲ ನಾವು. ದೇವರ ಗದ್ದಿಗೆಯಿಂದ ಉರ್ಕಿದೊಟ್ಟಿನ ಅರಮನೆಗೆ ಬಂದ ಅಬ್ಬಯ ದಾರಯ ಮಕ್ಕಳು ನಾವು. ನಮ್ಮನ್ನು ನಿನ್ನೆಯವರೆಗೆ ನೀವು ನೋಡಿದ್ದು ಬಂತು. ಇನ್ನು ಮುಂದಕ್ಕೆ ನಮ್ಮನ್ನು ನೀವು ನೋಡುವ ಭಾಗ್ಯವನ್ನು ನಾವು ಪಡೆದುಕೊಂಡು ಬಂದಿಲ್ಲ. ನಮಗಿನ್ನು ನಿಲ್ಲುವ ಅವಕಾಶವಿಲ್ಲ. ನಾವು ಹೊರಡುವ ಹೊತ್ತಾಗುತ್ತಾ ಬಂತು ತಂದೆ ತಾಯಿಯವರೇ. ನಾವು ಹೋಗುತ್ತೇವೆ ಎಂದು ಉರ್ಕಿದೊಟ್ಟಿನ ತೂಗುಯ್ಯಾಲೆಯಲ್ಲಿ ಕುಳಿತಿರುವ ಅಬ್ಬಯ ದಾರಯ ಮಕ್ಕಳು ತಂದೆ ತಾಯಿಯವರಲ್ಲಿ ತಿಳಿಸಿದರು. ಮನಸ್ಸಲ್ಲಿ ಚಂಚಲ ಆಗಬಾರದು ನೆತ್ತಿಯಲ್ಲಿ ಉರಿ, ಹೊಟ್ಟೆಯ ಕಾವುರಿ ಕಳೆದುಬಿಡಿ ನೀವು. ಮೂರು ದಿನದವರೆಗೆ ನಿಮಗೆ ದುಃಖದ ಮನಸ್ಸು ಇರಲಿ. ಮೂರು ದಿನದ ಅನಂತರ ನಿಮ್ಮ ಮನಸ್ಸು ಕಲ್ಲಾಗಿ ಹೋಗಲಿ ಎಂದರು ಅಬ್ಬಯ ದಾರಯ ಮಕ್ಕಳು. ತಂದೆ ತಾಯಿಯವರೇ ನಂದೊಲಿಗೆ ನಾಲ್ಕು ಸಾನಕ್ಕೆ ನೀವು ಹೇಳಿರುವ ಬಂಗಾರದ ಮಗು, ಬೆಳ್ಳಿಯ ತೊಟ್ಟಿಲು, ಹಿಡಿ ಹಣ ಹರಕೆ ಬಾಕಿ ಇದೆ. ನಾವದನ್ನು ಸಲ್ಲಿಸುತ್ತೇವೆ ಎನ್ನುತ್ತಾರೆ. ನಾವು ಹೋಗುತ್ತೇವೆ, ದೇವರ ಗದ್ದುಗೆಗೆ ಹೋಗಿ ಅವರ ನೆತ್ತಿಯಲ್ಲಿ ಹೂವಾಗಿ ಕುಳಿತುಕೊಳ್ಳುತ್ತೇವೆ. ದೇವರ ಗದ್ದುಗೆಯಲ್ಲಿ ನಾವು ಮುತ್ತಿನ ಹರಳಾಗಿ ಇರುತ್ತೇವೆ. ವರ್ಷಾವಧಿಯಲ್ಲಿ ಮತ್ತು ಕಾಲಾವಧಿಯಲ್ಲಿ ಎರಡು ಹಾಳೆ ಹಿಂಗಾರ ಮತ್ತು ಚಕ್ರ ಪಣವು (ರೂಪಾಯಿಯ ನಾಲ್ಕನೆ ಒಂದು ಭಾಗದ ಬೆಲೆಯ ನಾಣ್ಯ) ಉರ್ಕಿತೋಟದ ಅರಮನೆಯಿಂದ ನಂದೊಲಿಗೆ ನಾಲ್ಕು ಸ್ಥಾನಕ್ಕೆ ತನ್ನಿ ತಂದೆ ತಾಯಿಯವರೇ ಎಂದು ಹೇಳುತ್ತಾರೆ ಮಕ್ಕಳು. ಅಷ್ಟು ಹೇಳಿ ಅಬ್ಬಯ ದಾರಯ ಮಕ್ಕಳು ತೂಗುಯ್ಯಾಲೆಯಿಂದ ನಿಜ ರೂಪ ಬಿಟ್ಟು ಮಾಯವಾಗುತ್ತಾರೆ.

ಗಿಡಿಕೆರೆಯವರ ಪತ್ಯದಲ್ಲಿ ಬಂಗಾರದ ಜೋಡುದುಂಬಿಗಳಾಗಿ ಸ್ವಾಮಿ ನಾರಾಯಣ ದೇವರಲ್ಲಿಗೆ ಹೋದ ಅಬ್ಬಯದಾರಯರು ಮೇಲಿನ ಮೇಗಿಮಲೋಕದ ಬಂಗಾರದ ಗಜಕಂಬದಲ್ಲಿ ಹೋಗಿ ಕುಳಿತಾಗ ನಾರಾಯಣ ದೇವರು ಬಾಗಿಲು ಮುಚ್ಚಿದರು. ಆಗ

ತುಳುಪತ್ಯ

ಕತ್ತಲೆದ ಕೋಣೆಡ್‌ಗೆನ ರಡ್ಡ್ ತುಂಬಿಲೆನ ಬಿತ್ತಾರ ಬೀರಗೆನ
ಸ್ವಾಮಿ ನಾರಾಯಣ ದೇವೆರೆಗ್ ಸೈಸೊಣ್ಯೆರೆ ಸಗೆವುಜ್ಜಿಗೆ
ಇನಿ ಕತ್ತಾಲೆ ಕರಿಯ ಕೋಣೆದ ಬಾಕಿಲ್ ದೆಪ್ಪುವೆರ್
ನಿಕ್‌ಲೆಗ್ ದಾನೆ ಆವೊಡು ದಾನೆ ಪೋವೊಡುಂದು ಕೇನ್ನಗ ದುಂಬಿಲು ಪನ್ಪ
ಎಂಕುಲು ಮುಜಿಲೊಟ್ಟು ಉರಿಬೆರ್ಮೆರೆ ಪಟ್ಟ್ ಪರಕ್ಕೆದ ಬಾಲೆಲು
ತಿರ್ತ್ ಸಿರಿಬಾರಿ ಲೋಕೊಗು ಎಂಕಲೆಗ್ ಪೋವೊಡು ಅಪ್ಪೆ ಅಮ್ಮನ್ ತೂವೊಡು.

ಕನ್ನಡಾನುವಾದ

ಕತ್ತಲೆಯ ಕೋಣೆಯಲ್ಲಿ ಎರಡು ದುಂಬಿಗಳ ಪರಾಕ್ರಮವನ್ನು
ಸ್ವಾಮಿ ನಾರಾಯಣ ದೇವರಿಗೆ ಸಹಿಸಲಾಗಲಿಲ್ಲವಂತೆ
ಇಂದು ಕತ್ತಲೆಯ ಕರಿಯ ಕೋಣೆಯ ಬಾಗಿಲು ತೆಗೆದರು
ನಿಮಗೇನಾಗಬೇಕು ಏನು ಹೋಗಬೇಕೆಂದು ಕೇಳಲು ದುಂಬಿಗಳು ಹೇಳುತ್ತವೆ
ನಾವು ಮುಜಿಲೊಟ್ಟು ಉರಿಬೆರ್ಮರ ಹರಕೆಯ ಮಕ್ಕಳು
ನಮಗೆ ಕೆಳಗಿನ ಸಿರಿಬಾರಿ ಲೋಕಕ್ಕೆ ಹೋಗಬೇಕು, ನಮ್ಮ ತಂದೆ ತಾಯಿಯನ್ನು
ನೋಡಬೇಕು ಎನ್ನುತ್ತಾರೆ. (ಪುಟ 314).

ಸ್ವಾಮಿ ನಾರಾಯಣ ದೇವರು ನಿಮ್ಮ ತಂದೆತಾಯಿಯನ್ನು ನೋಡಿ ಬನ್ನಿ ಎಂದು ಹೇಳಿ ಕೆಳಗಿನ ಸಿರಿಬಾರಿ ಲೋಕಕ್ಕೆ ಕಳುಹಿಸಿ ಕೊಡುತ್ತಾರೆ. ಕಳುಹಿಸಿ ಕೊಡುವಾಗ ನೀವು ದುಂಬಿಯ ರೂಪದಲ್ಲಿ ಹಾರಿಕೊಂಡೇ ಹೋಗಬೇಕು. ಅಬ್ಬಂದಡ್ಕದ ಗೋಳಿಯ ಕಟ್ಟೆಯಲ್ಲಿ ನಿಜರೂಪವಾಗಬೇಕೆಂದು ಹೇಳಿ ಕಳುಹಿಸಿದರು. ಹಾಗೆ ದುಂಬಿಗಳಾಗಿ ಹಾರಿ ಬಂದು ಅಬ್ಬಂದಡ್ಕದಲ್ಲಿ ನಿಜರೂಪ ತಳೆಯುತ್ತಾರೆ.

ಇತ್ತ ಋತುಮತಿಯರಾಗಿದ್ದಾರೆ ಬೀಡಿನ ಅಬ್ಬೆಯರು. ಬೀಡಿನ ಅಬ್ಬೆಯರಿಗೆ ಒಂದು ಬಾರಿಯ ಮದುವೆ, ಎರಡನೇ ಮದುವೆ ಇಲ್ಲವಂತೆ. ಹೀಗಾಗಿ ನೀರು ಮೀಹದ ನೀರ ಪೆರತ್ತಕ್ಕೆ (ಋತುಮತಿಯಾದುದರ ಆಚರಣೆ)ದಿನ ಆಗಿದೆಯಂತೆ. ದಾರಿಯಲ್ಲೆ ಹೂ ಮಾರುವ ಬಾಯಿ ಹೂ ಹೊತ್ತುಕೊಂಡು ಹೋಗುತ್ತಾಳೆ. ಬಾಯಿಯಲ್ಲಿ ಎಲ್ಲಿಗೆ ಹೋಗುವವಳು ಎಂದು ಕೇಳುತ್ತಾರೆ ಅಬ್ಬಯ ದಾರಯ ಮಕ್ಕಳು. ಬಾಯಿ ಇಂದು ಬೀಡಿನ ಅಬ್ಬೆಯರಿಗೆ ನೀರು ಮೀಹದ ನೀರ ಪೆರತ್ತದ ಮದುವೆ ಮಗಾ. ಹಾಗಾಗಿ ಹೂ ಕೊಂಡು ಹೋಗುತ್ತಿದ್ದೇನೆ ಎನ್ನುತ್ತಾಳೆ. ಆಗ ಮಕ್ಕಳು ನಮ್ಮ ತಾಯಿಯವರು ಉರ್ಕಿದೋಟದ ಅರಮನೆಯಲ್ಲಿದ್ದಾರೆ. ಅವರಿಗೆ ನಾವು ಜೋಗ ಬೇಡಿ(ನಿಜರೂಪ ತಾಳಿ) ಬಂದು ಅಬ್ಬಂದಡ್ಕದಲ್ಲಿದ್ದೇವೆ ಎಂಬುದನ್ನು ತಿಳಿಸಿ ಎಂದು ಹೇಳುತ್ತಾರೆ. ಅಂತೆಯೇ ಬಾಯಿ ಉರ್ಕಿದೋಟಕ್ಕೆ ಹೋಗಿ ಸೊನ್ನೆಗೆ ವಿಷಯ ತಿಳಿಸುತ್ತಾಳೆ. ಬಾಯಿಯಲ್ಲಿ ಮಕ್ಕಳು ಉರ್ಕಿದೋಟದಲ್ಲಿ ಬಂಗಾರದ ಚಮಚ, ಬೆಳ್ಳಿಯ ಎಣ್ಣೆಯ ಪಾತ್ರೆ ಇದೆ. ಅದನ್ನು ತಾಯಿಯವರಲ್ಲಿ ಕೇಳಿ ತೆಗೆದುಕೊಂಡು ಬಾ ಎನ್ನುತ್ತಾರೆ. ಹಾಗೆ ಬಾಯಿ ತರುತ್ತಾಳೆ. ಅಬ್ಬಯ ದಾರಯರಿಗೆ ಎಣ್ಣೆ ಹಾಕಿ ತಲೆ ಬಾಚಿ ತಲೆತುಂಬ ಹೂ ಮುಡಿಸುತ್ತಾಳೆ. ಸಂತೋಷಗೊಂಡ ಮಕ್ಕಳು ಬಾಯಿಗೆ ತಮ್ಮ ಬೈತಲೆಯ ಹಾಗೂ ಸೀರೆಯ ನೆರಿಗೆಯ ಅಂದವಿರಲಿ ಎಂಬ ವರ ನೀಡಿ ಎಣ್ಣೆ ಪಾತ್ರೆಯನ್ನು ಮತ್ತೆ ಉರ್ಕಿದೋಟಕ್ಕೆ ಕೊಂಡುಹೋಗಿ ಕೊಡುವಂತೆ ಹೇಳಿ ಕಳುಹಿಸಿ ಕೊಡುತ್ತಾರೆ.

ಏಳು ಉಪ್ಪರಿಗೆಯ ಮೇಲೆ ಕಿಟಕಿಯ ಬದಿಯಲ್ಲಿ ಎರಡು ಜನ ಹೆಣ್ಣುಹೋಗಿ ಹೆಂಗಸಾದ (ಋತುಮತಿಯರಾದ)ಬೀಡಿನ ಅಬ್ಬೆಯರು ಇದ್ದಾರೆ. ಮಡಿವಾಳಗಿತ್ತಿ ಚೆಲುವೆ

ನೆರೆಕರೆಯವರನ್ನು ಕರೆಸಿ ಬೀಡಿಗೆ ಬಂದಿದ್ದಾಳೆ. ನೀರ ಪೆರತ್ತದ (ಋತುಮತಿಯಾದುದಕ್ಕೆ ನೀರು ಹೊಯ್ಯುವ ಆಚರಣೆ)ಆಚರಣೆಗೆ ಬೇಕಾದ ಸಿದ್ಧತೆಯನ್ನು ಮಾಡಿಕೊಂಡಿದ್ದಾಳೆ. ಎರಡು ಕನ್ಯಾಮಕ್ಕಳನ್ನು ಏಳು ಉಪ್ಪರಿಗೆಯ ಮೇಲಿನಿಂದ ಮಡಿವಾಳಗಿತ್ತಿ ಕರೆತರುವಾಗ ಅಬ್ಬಂದಡ್ಕದಲ್ಲಿದ್ದ ಅಬ್ಬಗದಾರಗರು ಮಾಯಾ ಸ್ವರೂಪದಿಂದ ಏಳು ಉಪ್ಪರಿಗೆಯಲ್ಲಿ ಜೋಗವಾಗುತ್ತಾರೆ. ಬೀಡಿನ ಇಬ್ಬರು ಅಬ್ಬೆಯರನ್ನು ಮಾಯ ಮಾಡುತ್ತಾರೆ. ಮಡಿವಾಳಗಿತ್ತಿ ಇಬ್ಬರು ಕನ್ಯಾ ಮಕ್ಕಳಾದ ಅಬ್ಬೆಯರನ್ನು ಕೈ ಹಿಡಿದುಕೊಂಡು ಹೊರಗೆ ಕರೆದುಕೊಂಡು ಬರುತ್ತಾರೆ. ಋತುಮತಿಯಾದುದರ ಆಚರಣೆಯ ಅನಂತರ ಮತ್ತೆ ಕೈ ಹಿಡಿದುಕೊಂಡು ಏಳು ಉಪ್ಪರಿಗೆಯ ಮೇಲೆ ಕರೆದುಕೊಂಡು ಹೋಗುತ್ತಾಳೆ. ಬೀಡಿನ ಅಬ್ಬೆಯರನ್ನು ಮತ್ತೆ ಜೋಗ ಮಾಡಿ ಅಬ್ಬಗ ದಾರಯರು ಮಾಯವಾಗುತ್ತಾರೆ. ಅಲ್ಲಿಂದ ಉರ್ಕಿದೋಟದ ಅರಮನೆಗೆ ಬಂದು ಜೋಗವಾಗಿ ತೂಗುಯ್ಯಾಲೆಯಲ್ಲಿ ಕುಳಿತು ತೂಗುತ್ತಿದ್ದಾರೆ. ಇದನ್ನು ನೋಡಿದ ಸೊನ್ನೆ ತನ್ನ ಮದುಮಗ ಬಂದರೆಂದು ಓಡೋಡಿ ಬರುತ್ತಾಳೆ. ಮಕ್ಕಳನ್ನು ನೋಡಿದ ಸೊನ್ನೆ ರಾಮರಾಮಾ ನನ್ನ ಮಕ್ಕಳು, ಸ್ವಾಮಿ ಪಾದಕ್ಕೆ ಸೇರಿದವರು, ಮತ್ತೆ ನಮ್ಮ ಚಾವಡಿಯಲ್ಲಿ ಜೋಗವಾಗಿದ್ದಾರೆ ಎಂದಳು. ತನ್ನ ಮಕ್ಕಳನ್ನು ಮುಟ್ಟಲು ಹೋಗುತ್ತಾಳೆ ಸೊನ್ನೆ. ಆಗ ಮಕ್ಕಳು ತಾಯಿಯವರೇ, ನಮ್ಮನ್ನು ಮುಟ್ಟಬೇಡಿ. ನಾವು ನಿಮಗೆ ಸಿಗುವ ಮಕ್ಕಳು ಅಲ್ಲ ತಾಯಿಯವರೇ. ನಾವು ಮೇಲಿನ ಮೇಗಿಮ ಲೋಕದಿಂದ ಕೆಳ ಸಿರಿಬಾರಿ ಲೋಕಕ್ಕೆ ಸ್ವಾಮಿಯ ವರ ಪಡೆದು ಬಂದವರು. ಇದೇ ಸಿರಿಬಾರಿ ಲೋಕದಲ್ಲಿ ಮಾಯವಾದ ಮಕ್ಕಳು ನಾವು. ನಮ್ಮನ್ನು ಮುಟ್ಟಬೇಡಿ ತಾಯಿಯವರೇ, ಹಿಡಿಯಲು ಬರಬೇಡಿ ಎಂದರು ಅಬ್ಬಯ ದಾರಯರು ಉರ್ಕಿದೊಟ್ಟು ಅರಮನೆಯ ಸಾಲರಿ ಚಾವಡಿಯಲ್ಲಿ ಜೋಗ ಬಿಟ್ಟು ಮಾಯವಾಗುವ ವಿವರಗಳು ಈ ಪಠ್ಯದಲ್ಲಿವೆ.

ರಾಮಕ್ಕ ಅವರ ಪಠ್ಯದಲ್ಲಿ ಅಬ್ಬಯ ದಾರಯರು ಕಪ್ಪು ದುಂಬಿಗಳಾಗಿ ದೇವರ ಗದ್ದಿಗೆಗೆ ನಮಸ್ಕರಿಸಿ ರಾಯಿಗೆ ಹೋಗುವ ವಿವರಗಳಿವೆ. ಮೇಲಿನ ಲೋಕದಲ್ಲಿ ಬೆರ್ಮೆರ್ ದೇವರಲ್ಲಿ ಹೇಳುತ್ತಾರೆ ಮಕ್ಕಳು, ಕಡೆರಿ ಕಾರ್ಲದ ಕೊಡಿ ಕುಂಬಳೆಯ ರಾಮ ಲಕಣ ಎನ್ನುವ ಹುಡುಗರಿಗೆ ಚೆನ್ನಕ್ಕ ಚೆಲುವಕ್ಕ, ಮಾಯಕ ಮಯಿಸಗ ಎನ್ನುವ ಹುಡುಗಿಯರ ಜೊತೆ ಎರಡನೇ ಮದುವೆ ನಿಶ್ಚಯ ಮಾಡಿದ್ದಾರೆ. ಆದುದರಿಂದ ಬೆರಮ್ಮ (ಬೆರ್ಮೆರ್) ದೇವರೇ ನಮಗೆ ಸ್ವಲ್ಪ ಸಮಯದ ಬಿಡುವು ಕೊಡಬೇಕು. ನಾವು ಅವರ ಮದುವೆಗೆ ಹೋಗಿ ಬರುತ್ತೇವೆ ಎಂದು ಹೇಳಿ ಕೆಳಲೋಕಕ್ಕೆ ಬರುತ್ತಾರೆ. ದಾರಿಯಲ್ಲಿ ಮದುವೆಗೆ ಹೂ ಕೊಂಡು ಹೋಗುವ ಬಾಯಿ ಬರುತ್ತಾಳೆ. ಅವಳಲ್ಲಿ ಅಬ್ಬಗ ದಾರಗರು ಉರ್ಕಿದೊಟ್ಟಿನ ಅರಮನೆಗೆ ಹೋಗಿ ಸೊನ್ನೆಯಲ್ಲಿ ಕೇಳಿ ಬೆಳ್ಳಿಯ ಎಣ್ಣೆಯ ಪಾತ್ರೆ, ಬಂಗಾರದ ಚಮಚ ತರಲು ಹೇಳುತ್ತಾರೆ. ಅದನ್ನು ತಂದ ಬಾಯಿಹೆಂಗಸು ಮಕ್ಕಳನ್ನು ಸಿಂಗರಿಸಿ ಹೂ ಮುಡಿಸಿ ಹೋಗುತ್ತಾಳೆ. ಮಡಿವಾಳಗಿತ್ತಿ ಆ ದಾರಿಯಲ್ಲೆ ಬರಲು ಮಕ್ಕಳು ಅವರಲ್ಲಿ ನಮಗೆ ಆಗಬೇಕಾದ ಕಟ್ಟು ಕಟ್ಟಳೆಗಳನ್ನು ಮಾಡಿ ಹೋಗ

ಬೇಕೆನ್ನುತ್ತಾರೆ. ವಾಲಗದವರು ಬರುವಾಗ ಸ್ವಲ್ಪ ತಡಮಾಡಿ ಹೋಗ ಬೇಕೆನ್ನುತ್ತಾರೆ. ಇತ್ತ ಮದುಮಗಳ ಶೃಂಗಾರ ಆಗುತ್ತಾರೆ ಅಬ್ಬಯ ದಾರಯರು. ಮಂಗಳವಾರ ಬೆಳಗ್ಗಿನ ಹೊತ್ತು ಬಂತು. ರಾಮಲಕಣರಿಗೆ ಚೆನ್ನಗ ಚೆಲುವಕ್ಕರ ಜೊತೆ ಮದುವೆಗೆ ಎಲ್ಲ ಸಿದ್ಧತೆ ನಡೆದಿರುತ್ತದೆ. ಧಾರೆಗೆ ನಿಂತ ಚೆನ್ನಗ ಚೆಲುವಕ್ಕರನ್ನು ಮಾಯಮಾಡಿದ ಅಬ್ಬಯದಾರಯರು ರಾಮಲಕಣರ ಜೊತೆ ಮದುವೆಯಾಗಿ ಮತ್ತೆ ಚೆನ್ನಗ ಚೆಲುವಕ್ಕರನ್ನು ಜೋಗದಲ್ಲಿ ನಿಲ್ಲಿಸುತ್ತಾರೆ. ಅಬ್ಬಯ ದಾರಯರು ಮಯವಾಗುತ್ತಾರೆ. ಮಾಯವಾದ ಮಕ್ಕಳು ಉರ್ಕಿದೊಟ್ಟಿನ ಅರಮನೆಗೆ ಬರುತ್ತಾರೆ. ತೂಗುಯ್ಯಾಲೆಯಲ್ಲಿ ಕುಳಿತು ತೂಗುತ್ತಿರಲು ಸೊನ್ನೆ ಬಂದು ನಿಮ್ಮನ್ನು ನೋಡುವಾಗ ನನ್ನ ಮಕ್ಕಳನ್ನು ಕಂಡಂತೆ ಆಗುತ್ತದೆ ಎನ್ನುತ್ತಾಳೆ. ನಿಮ್ಮ ಮಕ್ಕಳು ಏನಾಗಿದ್ದಾರೆ ಎನ್ನಲು ಬ್ರಾಹ್ಮಣನ ಎದೆಗೆ ಇಟ್ಟು ಕುಳಿತಿದ್ದೇವೆ (ಬೆರ್ಮೆರ್ ಇವರ ಅಂತ್ಯಕ್ಕೆ ಕಾರಣ ಎಂಬರ್ಥದಲ್ಲಿ) ಎಂದು ಹೇಳಿ ಸ್ಮೃತಿ ತಪ್ಪುತ್ತಾಳೆ. ಆಗ ಮಕ್ಕಳು ನಮ್ಮ ಅಂದ ನೋಡಿ ಸ್ಮೃತಿ ತಪ್ಪಿದಿರಾ ಅಥವಾ ನಮ್ಮ ಹುಚ್ಚು ನೋಡಿ ಸ್ಮೃತಿ ತಪ್ಪಿದಿರಾ ಎಂದು ಕೇಳುತ್ತಾರೆ. ಅಷ್ಟು ಕೇಳಲು ಸೊನ್ನೆಗೆ ಸ್ಮೃತಿ ಬರುತ್ತದೆ. ನಿಮ್ಮ ಮಕ್ಕಳ ಹಾಗೆ ಇನ್ನೊಬ್ಬರು ಇರುವುದಿಲ್ಲವೇ? ಅದಕ್ಕಾಗಿ ಸ್ಮೃತಿ ಕಳೆದುಕೊಳ್ಳಬೇಡಿ, ಸಂತೋಷವಾಗಿರಿ ಎಂದು ಹೇಳಿ ಮಕ್ಕಳು ಮಾಯವಾಗುತ್ತಾರೆ. ಗುರುಮಾರ್ಲರಿಗೆ ಗದ್ದೆಯ ಹುಣಿಯಲ್ಲಿ ಮಕ್ಕಳು ಎದುರಾಗಲು ಅವರೂ ನಿಮ್ಮನ್ನು ನೋಡುವಾಗ ನನ್ನ ಮಕ್ಕಳನ್ನು ಕಂಡ ಹಾಗೇ ಆಗುತ್ತದೆ ಎಂದು ಹೇಳಿ ಸ್ಮೃತಿ ತಪ್ಪಲು ನಿಮ್ಮ ಮಕ್ಕಳು ಏನಾಗಿದ್ದಾರೆ ಎಂದು ಕೇಳಲು ಅವರೂ ಬ್ರಾಹ್ಮಣನ ಎದೆಗೆ ಇಟ್ಟಿದ್ದೇವೆ ಎಂದು ಹೇಳಿ ಬೇಸರಿಸಿಕೊಳ್ಳುತ್ತಾರೆ. ನಮ್ಮಂತೆ ಬೇರೆ ಮಕ್ಕಳೂ ಇರುವುದಿಲ್ಲವೇ ಎಂದು ಗುರುಮಾರ್ಲರಿಗೆ ಸಮಾಧಾನ ಹೇಳಿ ಅಬ್ಬಯದಾರಯರು ಮಾಯವಾಗುತ್ತಾರೆ. ಮಾಯವಾದವರು ಮೇಲಿನಲೋಕಕ್ಕೆ ಹೋಗಿ ದೇವರ ಗದ್ದುಗೆಯಲ್ಲಾಗುತ್ತಾರೆ.

ಅಲ್ಲಿಂದ ಅಕ್ಕತಂಗಿ ಇಬ್ಬರೂ ಸಂಚನಂಗಡಿ ಜನ್ಮಭೂಮಿಯ ಅರಮನೆಗೆ (ಸತ್ಯನಾಪುರದರಮನೆ) ಬರುತ್ತಾರೆ. ನಮ್ಮ ತಂದೆತಾಯಿಯವರು ಸೂಡ ನಂದೊಲಿಗೆ ನಾಲ್ಕು ಸ್ಥಾನಕ್ಕೆ ಪೂರ್ವಕಾಲದಲ್ಲಿ ಹೇಳಿರುವ ಹರಕೆ ಬಾಕಿ ಇದೆ. ಅದನ್ನು ಹೋಗಿ ಸಲ್ಲಿಸಬೇಕೆಂದು ಹೇಳುತ್ತಾರೆ. ಬೆಳಗ್ಗೆದ್ದು ಸೆಗಣಿಯಿಂದ ಅಂಗಳ ಸಾರಿಸಿ ಹೊಸಿಲು ಬೆಳಗಿ ಅಡುಗೆಯ ತಯಾರಿ ನಡೆಸಿ ಸ್ನಾನ ಮಾಡಿಬಂದು ಮಡಿಯಟ್ಟು ಊಟ ಮುಗಿಸಿ ಆಚಾರಿ ಕೊಟ್ಟಿಗೆಗೆ ಹೋಗಿ ಹರಕೆಯ ವಸ್ತುಗಳಾದ ಬಂಗಾರದ ಮಗು ಬೆಳ್ಳಿಯ ತೊಟ್ಟಿಲು ಮಾಡಿಸಿಕೊಂಡು ಸೂಡ ನಂದೊಲಿಗೆ ನಾಲ್ಕು ಸ್ಥಾನಕ್ಕೆ ಹೋಗುತ್ತಾರೆ. ದಾರಿಯಲ್ಲಿ ಮಾಪುಲ್ಲ ಕರಿಯದ(ಹೊಳೆ) ಹತ್ತಿರ ಬಂದು ಕಂದಡಿಕಯ (ಆಳವಾದ ನೀರಿನ ಹರಿವು) ದಾಟಲು ದೋಣಿಯವ ದೋಣಿಯನ್ನು ಕಬ್ಬಿಣದ ಸರಳಲ್ಲಿ ಕಟ್ಟಿದ್ದಾನೆ. ಆ ಕಡೆಗೆ ದಾಟಲು ಬಿಡುವುದಿಲ್ಲ ನಾಲ್ಕು ಕಾಲಿನ ಮೈಸಂದಾಯ. ಇದೇನು ಸೋಜಿಗ ಮಾಯಕ. ನೀರು ಒಂದೇ ಸವನೆ ಮೇಲೇರುತ್ತಾ ಬರುತ್ತಿದೆಯಲ್ಲಾ, ನಾವು ಯಾವ ರೀತಿಯಲ್ಲಿ ಪಾಂಗಾಳ ಹೊಳೆ, ಕಂದಡಿ ಕಯ ದಾಟುವುದೆಂದು ಹೇಳಿದರು. ನಮಗೆ

ಹೊತ್ತು ಮೀರುತ್ತಾ ಬಂತು. ನಾವು ಸತ್ಯದ ಮಕ್ಕಳಾದರೆ ದೋಣಿಯನ್ನು ಕಟ್ಟಿರುವ ಕಬ್ಬಿಣದ ಸರಳು ತುಂಡಾಗಿ ಬರಬೇಕೆಂದರು. ಹಾಗೇ ಆಯಿತು. ಹೊಳೆ ದಾಟಿಕೊಂಡು ಬೊಲ್ಯೊಟ್ಟು ಕಾಡಲ್ಲೆ ಹೋದರು. ಬೊಲ್ಯೊಟ್ಟಲ್ಲೆ ಹೋಗುವಾಗ ಕುಮಾರ ಬರುತ್ತಾನೆ. ಮಾವನವರೇ ಕೇಳಿರಿ ಎಂದು ಕರೆದರು ಅಬ್ಬಯ ದಾರಯರು. ಎಡಬಲಗಳಿಂದ ಅಪ್ಪಿ ಹಿಡಿದರು ಸೊಸೆಯಂದಿರನ್ನು ಕುಮಾರ. ಸೂಡ ನಂದೊಲಿಗೆಗೆ ದಾರಿ ಹೇಳಿ ಮಾವನವರೇ. ನಮ್ಮ ತಂದೆತಾಯಿಯವರು ಹೇಳಿರುವ ಹರಕೆ ಸಲ್ಲಸಲಿದೆ ಎನ್ನುತ್ತಾರೆ. ನಾನು ದಾರಿ ತೋರಿಸುತ್ತೇನೆಂದು ಬೊಲ್ಯೊಟ್ಟು ಆಲಡೆ ದಾಟಿ ಸೂಡ ನಂದೊಲಿಗೆಗೆ ಕರೆದುಕೊಂಡು ಹೋದರು. ನಂದೊಲಿಗೆಯಲ್ಲಿ ದೇವರು ಬೆರ್ಮೆರನ್ನು ವಂದಿಸಿ ಕೊಂಡರು. ಕುಮಾರ ಬಲದಲ್ಲಿ ನಿಂತು ಎಡ ಬಲಗಳಲ್ಲಿ ಸೊಸೆಯಂದಿರನ್ನು ನಿಲ್ಲಿಸಿ ತಂದೆ ತಾಯಿಯವರು ಹೇಳಿರುವ ಹರಕೆಯನ್ನು ಸಲ್ಲಿಸಿದರು. ದೇವರ ಜೊತೆಗೆ ದೇವ ಬಲಿ, ನಾಗನ ಜೊತೆಗೆ ನಾಗಬಲಿ, ಬೆರ್ಮೆರ್ ಜೊತೆಗೆ ಬೆರ್ಮೆರ್ ಬಲಿ, ಭೂತಗಳ ಜೊತೆಗೆ ಭೂತಬಲಿ ಬಂದರು. ಕುಮಾರ ಹಾಗೂ ಅಬ್ಬಯ ದಾರಯರು ತಂದೆತಾಯಿವರಾದ ಸೊನ್ನೆ ಗುರುಮಾರ್ಲೆರು ಹೇಳಿರುವ ಹರಕೆ ತೀರಿಸಿದರು. ಅಲ್ಲಿಂದ ಹೊರಟು ಆದಿ ಬಡಗಣ ಲಂಕೆಲೋಕನಾಡಿಗೆ ಬಂದರು. ನಾಲ್ಕು ಕಾಲಿನ ನಂದಿಗೋಣ ಮೈಸಂದಾಯನಿಗೆ ಹರಕೆ ಸಲ್ಲಿಸಿದರು. ಕುಮಾರ ಬೊಲ್ಯೊಟ್ಟು ಆಲಡೆಯಲ್ಲಿ ಸ್ಥಳ ಕುಮಾರನಾಗಿ ನೆಲೆ ನಿಂತ. ನಿನ್ನನ್ನು 'ಕೋಟಿಪೂಂಜೆ ಕುಮಾರೆ' ಎಂದು ವಂದನೆ ಮಾಡುವಂತಾಗಲಿ. ನಿಮಗೂ ಹರಕೆ ಸಲ್ಲುವಂತಾಗಲಿ ಎಂದರು. ನಮ್ಮ ಆದಿ ಆಲಡೆಯ ಹುಟ್ಟನ್ನು ಹೊಗಳಲು ಏಳು ಹಗಲು ಏಳು ರಾತ್ರಿ ಸಾಲದು ಎಂಬಲ್ಲಿಗೆ ಇವರ ಪಠ್ಯದ ಮುಕ್ತಾಯವಾಗುತ್ತದೆ.

ಲೀಲಾ ಅವರ ಪಠ್ಯದಲ್ಲಿ ಬಂಗಾರದ ದುಂಬಿಗಳಾಗಿ ಮೇಲಿನಲೋಕದ ಸೂರ್ಯ ನಾರಾಯಣ ದೇವರ ಎಡಬಲಗಳಿಂದ ಹೋದ ಅಬ್ಬಯದಾರಯರು ದೇವರಿಗೆ ಎರಡು ಚವಲ ಹಿಡಿದುಕೊಂಡು ಬೀಸಿದಾಗ ದೇವರು ನೀವು ಎಲ್ಲಿಂದ ಬಂದಿರಿ ಮಕ್ಕಳೇ, ನೀವು ಎಲ್ಲಿಗೆ ಹೋಗುವವರು ಎಂದು ಕೇಳುತ್ತಾರೆ. ಆಗ ಮಕ್ಕಳು 'ಎಂಕುಲು ಉರ್ಕಿದೊಟ್ಟು ಅರಮಮನೆದ ಜೋಕುಲು. ಎಂಕುಲು ಮೂಡಾಯಿ ಮುಜಲೊಟ್ಟು ಉರಿ ಬೆರ್ಮೆರೆ ಕಾರ್ ಪೊಜೆಂಕುಜ, ಬೆರ್ಮೆರೆ ದತ್ತ್ ಬಲತ್ತ್ ಪೋಪುಜ. ದೇವೆರೇ ಈರೆ ಸೊರ್ಗೆಗ್ ಎಂಕ್‌ಲೆನ್ ದೆತೊನೊಡು ಪನ್ಪೆರ್' (ನಾವು ಉರ್ಕಿದೊಟ್ಟು ಅರಮನೆಯ ಮಕ್ಕಳು. ನಾವು ಮೂಡಾಯಿ ಮುಜಲೊಟ್ಟು ಉರಿಬೆರ್ಮೆರ್ ಅವರ ಕಾಲು ಒತ್ತಲಾರೆವು, ಅವರ ಎಡಬಲಗಳಿಂದ ಹೋಗಲಾರೆವು. ದೇವರೇ ನಿಮ್ಮ ಸ್ವರ್ಗಕ್ಕೆ ನಮ್ಮನ್ನು ತೆಗೆದುಕೊಳ್ಳ ಬೇಕೆಂದು ಹೇಳುತ್ತಾರೆ ಮಕ್ಕಳು). ಬೆರ್ಮೆರ್‌ನ ಆಟದಿಂದಲೇ ತಮ್ಮ ಪ್ರಾಣವನ್ನು ಕಳೆದುಕೊಂಡದ್ದಕ್ಕಾಗಿ ಮಕ್ಕಳು ನಾವು ಬೆರ್ಮೆರ್ ರಲ್ಲಿಗೆ ಹೋಗಲಾರೆವು ಎನ್ನುತ್ತಾರೆ. ಆಗ ಸೂರ್ಯನಾರಾಯಣ ದೇವರು ನಿಮ್ಮನ್ನು ದೇವರ ಸೊರ್ಗೆಗೆ (ಅಧೀನಕ್ಕೆ) ತೆಗೆದುಕೊಳ್ಳಲಾಗುವುದಿಲ್ಲ. ಯಾಕೆಂದರೆ ನೀವು ನಿಮ್ಮ ತಾಯಿಯವರಾದ ಸೊನ್ನೆಯ

ಹೆತ್ತ ಮೈಲಿಗೆ (ಪಿಲೆಟ್ಟ್)ಯಲ್ಲಿ ಹುಟ್ಟಿದವರು. ನಿಮ್ಮ ತಾಯಿ ಮದುಮಗಳಾಗಿ (ಋತುಮತಿಯಾಗಿ) ಹಾಲೆ ಮಂಟಪದಲ್ಲಿ ಕುಳಿತು ಕೊಳ್ಳಲಿಲ್ಲ. ಕಲಶ ಕನ್ನಡಿಯ ನೀರು ಸ್ನಾನ ಮಾಡಲಿಲ್ಲ. ಆದುದರಿಂದ ಅವರ ಮಕ್ಕಳಾದ ನಿಮಗೆ ಆ ಹೊಲೆ ತಗಲಿರುವುದರಿಂದ ನಿಮ್ಮ ತಾಯಿಯ ಮೈಲಿಗೆಯ ನೀರು (ಪಿಲೆನೀರು) ನೀವು ಸ್ನಾನ ಮಾಡಿ ಬಾರದೆ ಇದ್ದರೆ ಸೊರ್ಗೆಗೆ(ದೇವರ ಅಧೀನಕ್ಕೆ) ತೆಗೆದುಕೊಳ್ಳಲಾಗುವುದಿಲ್ಲ ಎನ್ನುತ್ತಾರೆ. ನೀವು ಕೆಂಪುಲಜೆಮಲೆ ಕೆಮ್ಮಡೆ ಕರಿಯದ ತಾವರೆ ಕೆರೆಯಲ್ಲಿ ಸ್ನಾನಮಾಡಿ ಮೈಲೆ ಕಳೆದು ಮಡಿಯುಟ್ಟು ಉರ್ಕಿದೊಟ್ಟು ಅರಮನೆಗೆ ಹೋಗಿ ತಾಯಿ ಸೊನ್ನೆಯಲ್ಲಿ ಮೂರು ಮಾತು ಕೇಳಬೇಕು. ನೀವು ಪಿಲೆನೀರು(ಋತುಮತಿಯಾದುದರ ಆಚರಣೆಯ ನೀರು) ಸ್ನಾನ ಮಡಿದ್ದೀರೇ ಎಂದು. ನಿಮ್ಮ ತಾಯಿಯವರ ಪಿಲೆನೀರು ನೀವು ಸ್ನಾನ ಮಾಡಬೇಕು. ನಿಮ್ಮ ಮಾವನವರು ಬೊಲ್ಯೊಟ್ಟಲ್ಲಿ ಇದ್ದು ಜೋಡು ಸೇವೆ ತೆಗೆದು ಕೊಳ್ಳುತ್ತಿದ್ದಾರೆ. ಅಲ್ಲಿಗೆ ಹೋದರೆ ಅವರು ನಿಮ್ಮನ್ನು ಸೊರ್ಗೆಗೆ(ಅಧೀನಕ್ಕೆ) ತೆಗೆದುಕೊಳ್ಳುತ್ತಾರೆ ಎಂದರು.

ದೇವರು ಹೇಳಿದಂತೆ ಮೇಲಿನ ಲೋಕದಿಂದ ಕೆಳಗಿನ ಲೋಕಕ್ಕೆ ಬಂದು ಕೆಂಪುಲಜೆ ಮಲೆ ತಾವರೆ ಕೆರೆಯಲ್ಲಿ ಸ್ನಾನ ಮಾಡಿ ಮಡಿಯುಟ್ಟು ಶೃಂಗಾರ ಆಗಿ ಕೆಂಪುಲಜೆ ಮಲೆ ಕೆಮ್ಮಡೆ ಕರಿಯದಿಂದ ಮಾಯವಾಗಿ ಉರ್ಕಿದೊಟ್ಟಿನ ಕಂಬಳ ಗದ್ದೆಯ ಬದುವಲ್ಲಿ ಜೋಗವಾಗುತ್ತಾರೆ. ಗುರುಮಾರ್ಲರು ಕಂಬಳ ಗದ್ದೆಯ ನೀರು ಕಟ್ಟಲು ಬಂದವರು ಮಕ್ಕಳನ್ನು ನೋಡುತ್ತಾರೆ. ನೋಡಿದ ಕೂಡಲೇ ಪ್ರಜ್ಞೆ ತಪ್ಪಿ ಬೀಳುತ್ತಾರೆ. ಅವರನ್ನು ಎಬ್ಬಿಸಿ ಅವರಿಗೆ ಸೆರದಲ್ಲಿ ನೀರು(ಅಂಗೈ), ಸೆರಗಲ್ಲಿ ಗಾಳಿ ಹಾಕಿ ಸ್ಮೃತಿ ಬರುವಂತೆ ಮಾಡುತ್ತಾರೆ. ಯಾಕಾಗಿ ಪ್ರಜ್ಞೆ ಕಳೆದು ಕೊಂಡಿರೆಂದು ಕೇಳಲು ಅಡಿಕೆ ತಿಂದು ತಲೆಗೆ ಹತ್ತಿತು ಎನ್ನುತ್ತಾರೆ. ನಿಮ್ಮನ್ನು ನೋಡುವಾಗ ನನ್ನ ಮಕ್ಕಳನ್ನು ಕಂಡ ಹಾಗೆ ಆಗುತ್ತದೆ ಎನ್ನುತ್ತಾರೆ. ನಿಮ್ಮ ಮಕ್ಕಳು ಸತ್ತು ಹೋದವರೆಲ್ಲಿಂದ ಬರುವುದು. ಮರದ ಹಾಗೆ ಮರ ಇರುವುದಿಲ್ಲವೇ, ಮಕ್ಕಳ ಹಾಗೆ ಮಕ್ಕಳು ಇರುವುದಿಲ್ಲವೇ ಎಂದು ಹೇಳಿ ಅಲ್ಲಿಂದ ಉರ್ಕಿದೊಟ್ಟಿನ ಅರಮನೆಗೆ ಬಂದು ಚಾವಡಿಯಲ್ಲಿರುವ ತೂಗುಯ್ಯಾಲೆಯಲ್ಲಿ ಕುಳಿತು ತೂಗುತ್ತಿರುತ್ತಾರೆ. ಅಬ್ಬಯ ದಾರಯ ಶಬ್ದ ಕೇಳಿ ಏಳು ಅಂತರದ ಕತ್ತಲೆಯ ಕೋಣೆಯಲ್ಲಿ ದುಃಖಿಸುತ್ತಾ ಕುಳಿತ ಸೊನ್ನೆ ಹೊರಗೆ ಬಂದು ಮಕ್ಕಳನ್ನು ನೋಡಿ ಅವಳೂ ಪ್ರಜ್ಞೆ ಕಳೆದುಕೊಳ್ಳುತ್ತಾಳೆ. ಅವಳಿಗೂ ಸೆರದಲ್ಲಿ ನೀರು, ಸೆರಗಲ್ಲಿ ಗಾಳಿ ಹಾಕಿ ಎಬ್ಬಿಸಿ ಸ್ಮೃತಿ ಬಂದಾಗ ಯಾಕೆ ಪ್ರಜ್ಞೆ ತಪ್ಪಿದಿರೆಂದು ಕೇಳಲು ನಿಮ್ಮನ್ನು ನೋಡುವಾಗ ನನ್ನ ಮಕ್ಕಳನ್ನು ಕಂಡ ಹಾಗೆ ಆಗುತ್ತದೆ ಎನ್ನುತ್ತಾಳೆ. ನಿಮ್ಮ ಮಕ್ಕಳು ನಾವಲ್ಲ ಎನ್ನುತ್ತಾರೆ. ಸೊನ್ನೆಯಲ್ಲಿ 'ನಾರಾಯಣ ಹೆಂಗಸೇ, ನೀವು ಉರ್ಕಿದೊಟ್ಟಿನ ಅರಮನೆಯಲ್ಲಿ ಋತುಮತಿಯಾಗಿದ್ದೀರಾ? ಮೈಲಿಗೆಯ ನೀರು ಸ್ನಾನ ಮಾಡಿದ್ದೀರಾ? ಹಾಲೆ ಮಂಟಪದಲ್ಲಿ ಕುಳಿತಿದ್ದೀರಾ? ನಿಮಗೆ ಕಲಶ ಕನ್ನಡಿಯ ನೀರು ಹೊಯಿದಿದ್ದಾರಾ ಎಂದು ಕೇಳುತ್ತಾರೆ ಮಕ್ಕಳು. ತಾಯಿಯವರ ಶುದ್ಧವಾಗದೆ ಮಕ್ಕಳಿಗೆ ದೇವರ ಸ್ವರ್ಗದಲ್ಲಿ

ನಿಲ್ಲಲಾಗುವುದಿಲ್ಲವಂತೆ ಎಂದರು ಮಕ್ಕಳು. ಅದಕ್ಕೆ ಸೊನ್ನೆ ನನಗೆ ಅದೆಲ್ಲ ಆಗಿಲ್ಲ ಎನ್ನಲು ನಾರಾಯಣ ಹೆಂಗಸೇ ನಮಗೆ ಪಿಂಜಣಿಯಲ್ಲಿ ಹಾಲು ಕೊಡ ಬಹುದೇ ಎನ್ನುತ್ತಾರೆ ಮಕ್ಕಳು. ಸೊನ್ನೆ ಒಳಗೆ ಹೋಗಿ ಹಾಲು ತರುವಾಗ ಮಕ್ಕಳು ಉರ್ಕಿದೊಟ್ಟಿನ ಅರಮನೆಯ ಮೆಟ್ಟಿಲು ಇಳಿದು ಹೋಗುವುದನ್ನು ನೋಡುತ್ತಾಳೆ. ಹಾಲು ಹಿಡಿದುಕೊಂಡು ಮಕ್ಕಳನ್ನು ಹುಡುಕಿಕೊಂಡು ಹೋಗುತ್ತಾಳೆ ಸೊನ್ನೆ. ಆಗ ಮಕ್ಕಳು ತಾಯಿಯವರೇ ಇಂದಿಗೆ ನಮಗೆ ನಿಮ್ಮ ಹಾಲಿನ ಋಣ ಉಕಿದೊಟ್ಟಲ್ಲಿ ತೀರಿತು. ನಮ್ಮ ಬೆನ್ನು ಹಿಡಿದು ಬರಬೇಡಿ. ನಾವು ಹೋಗುವವರು, ನಿಮ್ಮ ಮೈಲಿಗೆಯ ನೀರನ್ನು ನಾವು ಮಿಂದು ಬರುತ್ತೇವೆ ಎಂದು ಹೇಳಿ ಮಾಯವಾಗುತ್ತಾರೆ. ತಂದಿರುವ ಹಾಲನ್ನು ಸೊನ್ನೆ ಕೆಂದಾಳೆಯ ಬುಡಕ್ಕೆ ಚೆಲ್ಲಿ ಉರಿಉರ್ದಾಲಂದ ಪಾದೆ(ಹಾಸುಬಂಡೆ) ಯಲ್ಲಿ ಕುಳಿತು (ಅಕಿಲಾಸ) ದುಃಖಿಸುತ್ತಾ ಕುಳಿತಿದ್ದಾಳೆ.

ಇತ್ತ ಉರ್ಕಿದೊಟ್ಟಲ್ಲಿ ಮಾಯವಾದ ಮಕ್ಕಳು ಬೋಲದ ಕಾಡಲ್ಲಿ ಜೋಗವಾಗುತ್ತಾರೆ. ಬೋಲದ ಕಾಡಲ್ಲಿ ಉಯ್ಯಾಲೆ ಹಾಕಿ ತೂಗುತ್ತಿರುವಾಗ ಆ ದಾರಿಯಾಗಿ ಆಚಾರಿ ಹಾಲೆ ಮಂಟಪ ಹಿಡಿದುಕೊಂಡು ಬರುತ್ತಾನೆ. ಆಚಾರಿಯಲ್ಲಿ ಮಕ್ಕಳು ಇದನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿ? ನಮಗೆ ಕೊಡಬಹುದೇ ಎಂದು ಕೇಳುತ್ತಾರೆ. ಇದನ್ನು ಬೋಲದ ಅಬ್ಬೆಯರಿಗೆ ತೆಗೆದುಕೊಂಡು ಹೋಗುತ್ತಿದ್ದೇನೆ. ನಿಮಗೆ ಕೊಡಲಾರೆ ಎನ್ನಲು ಆಚಾರಿಯನ್ನು ಮಾಯ ಮಾಡುತ್ತಾರೆ. ಓಡಾರಿ (ಕುಂಬಾರ) ಕಲಶ ಕನ್ನಡಿ ಹಿಡಿದುಕೊಂಡು ಆ ದಾರಿಯಾಗಿ ಬರುತ್ತಾನೆ. ಆಗ ಮಕ್ಕಳು ಇದನ್ನು ಎಲ್ಲಿಗೆ ಕೊಂಡು ಹೋಗುತ್ತಿ ಎಂದು ಕೇಳಲು ಆತ ಬೋಲದ ಅಬ್ಬೆಯರಿಗೆ ತೆಗೆದುಕೊಂಡು ಹೋಗುತ್ತಿದ್ದೇನೆ ಎನ್ನಲು ನಮಗೆ ಕೊಡಬಹುದೇ ಎಂದು ಕೇಳಲು ಕುಂಬಾರ ನಿಮಗೆ ಕೊಡಲಾರೆ ಎನ್ನುತ್ತಾನೆ. ಆತನನ್ನು ಬೋಲದ ಕಾಡಲ್ಲಿ ಮಾಯ ಮಾಡುತ್ತಾರೆ. ಮಡಿವಾಳ ಮಡಿ ಹಿಡಿದು ಕೊಂಡು ಬರುತ್ತಾನೆ. ಅವನಲ್ಲಿಯೂ ಇದೇ ರೀತಿ ಕೇಳಲು ಆತನೂ ಮೇಲಿನಂತೆ ಉತ್ತರಿಸಲು ಆತನನನ್ನೂ ಮಾಯ ಮಾಡುತ್ತಾರೆ. ವಾಲಗದವ ಬಂದಾಗ ಆತನಲ್ಲಿಯೂ ಮೇಲಿನಂತೆ ಕೇಳಿ ಆತನನ್ನೂ ಮಾಯ ಮಾಡುತ್ತಾರೆ. ಕುಡುಂಬರ ಹೆಣ್ಣು (ಕ್ರಿಶ್ಚಿಯನ್) ಬುಟ್ಟಿಯಲ್ಲಿ ಹೂಹಿಡಿದುಕೊಂಡು ಆ ದಾರಿಯಗಿ ಬರುತ್ತಾಳೆ. ಮಕ್ಕಳು ಅವಳಲ್ಲಿ ನಮಗೆ ಸ್ವಲ್ಪ ಹೂ ಕೊಡಬಹುದೇ ಎಂದು ಕೇಳುತ್ತಾರೆ. ಕುಡುಂಬರ ಹೆಣ್ಣು ಮಕ್ಕಳನ್ನು ಸಿಂಗರಿಸಿ ಅವರ ತಲೆಗೆ ಹೂ ಮುಡಿಸಿ ಮಕ್ಕಳ ಅಂದ ನೋಡುತ್ತಾಳೆ. ಇದರಿಂದ ಸಂತೋಷಗೊಂಡ ಮಕ್ಕಳು ಕುಡುಂಬ ಹೆಂಗಸಿಗೆ ನಮ್ಮ ಕೈ ಕಾಲಿನ ಅಂದವಿರಲಿ ಎಂಬ ವರ ನೀಡುತ್ತಾರೆ. ಬೋಲದ ಕಾಡಲ್ಲಿ ಮಾಯವಾದ ಮಕ್ಕಳು ಬೋಲದರಮನೆಯ ಮೇಲುಪ್ಪರಿಗೆಯಲ್ಲಿ ಜೋಗವಾಗುತ್ತಾರೆ. ಬೋಲದ ಅಬ್ಬೆಯರನ್ನು ಮಾಯಮಾಡಿ ಅವರ ಜಾಗದಲ್ಲಿ ನಿಂತು ಹಾಲೆ ಮಂಟಪದಲ್ಲಿ ಕುಳಿತು ಕಲಶ ಕನ್ನಡಿ ನೀರು ಸ್ನಾನ ಮಾಡಿ ತಮ್ಮ ತಾಯಿಯವರ ಮೈಲೆ ತೆಗೆಯುತ್ತಾರೆ. ಮತ್ತೆ ಬೋಲದ ಅಬ್ಬೆಯರನ್ನು ಜೋಗ

ಮಾಡಿಸಿ ನೀವಿನ್ನು ಹಾಲೆ ಮಂಟಪದಲ್ಲಿ ಕುಳಿತು ಕಲಶ ಕನ್ನಡಿಯ ನೀರು ಸ್ನಾನ ಮಾಡಿ ಶುದ್ಧ ಆಗಿ ಎಂದು ಹೇಳಿ ಅಲ್ಲಿಂದ ಮಾಯವಾಗಿ ಅಬ್ಬಯ ದಾರಯರು ಮಕ್ಕಳು ಬೊಲ್ಯೊಟ್ಟುವಿಗೆ ಹೋಗುತ್ತಾರೆ. ಕುಮಾರ ಜೋಡು ಗುಂಡದಲ್ಲಿ ಪರಿಣಾಮದ ನಿದ್ದೆಯಲ್ಲಿರುತ್ತಾನೆ. ನಮಗೆ ಹಸಿವು ಬಾಯಾರಿಕೆಯಾಗುತ್ತದೆ ಎನ್ನುತ್ತಾರೆ. ಕುಮಾರ ನಿದ್ದೆಯಿಂದ ಎದ್ದು, ಓ ಸೊಸೆಯಂದಿರೇ ಬಂದಿರಾ ಎಂದು ಪ್ರೀತಿಯಿಂದ ಕರೆದು ಕುಡ್ತೆ ಹಾಲು ಹೆಣಿಗೆ ಬಾಳೆಹಣ್ಣು ತಿಂದು ನಿಮ್ಮ ಹಸಿವನ್ನು ತಗ್ಗಿಸಿ ಕೊಳ್ಳಿ ಎನ್ನುತ್ತಾನೆ. ಆಗ ಮಕ್ಕಳು ಬೊಲ್ಯೊಟ್ಟಲ್ಲಿ ನಾವು ತಣ್ಣೀರು ಮುಟ್ಟ ಬೇಕಾದರೆ, ನಮ್ಮ ಪಾದ ಊರ ಬೇಕಾದರೆ ನಮ್ಮ ತಾಯಿಯವರು ಉರಿ ಉರ್ದಾಲಂದ ಬಂಡೆಯಲ್ಲಿ ದುಃಖಿಸಿ ಅಳುತ್ತಾ ಕೂತಿದ್ದಾರೆ. ನೀವು ಬೊಲ್ಯೊಟ್ಟಲ್ಲಿ ನಿಂತ ಹೆಜ್ಜೆಯಲ್ಲಿ ನಮ್ಮ ತಾಯಿಯವರನ್ನು ಮಾಯ ಮಾಡಬೇಕು. ನಿಮ್ಮ ಎಡದ ಎಡ ಭಾಗದಲ್ಲಿ ನಮ್ಮ ತಾಯಿಯವರಿಗೆ ಒಂದು ಹೆಜ್ಜೆ ಜಾಗ ಕೊಡಬೇಕು ಎಂದರು ಮಕ್ಕಳು. ಕುಮಾರ ಹಾಗೇ ಮಾಡಿದ. ಆ ನಂತರ ಮಕ್ಕಳು ಪಿಂಜಣಿಯ ಹಾಲು, ಹೆಣಿಗೆ ಹಣ್ಣು ತಿಂದು ತಮ್ಮ ಹಸಿವನ್ನು ತಗ್ಗಿಸಿದರು.

ಕುಮಾರ ಹೇಳುತ್ತಾನೆ 'ಈಗ ನಾನು ಒಂದು ಆದಿ ಆಲಡೆ ಕಟ್ಟಿಸಿದ್ದೇನೆ. ಮುಂದಕ್ಕೆ ನಾನು ಬೊಲ್ಯೊಟ್ಟು ಇಳಿದು ತಾಯಿಯವರು ಕೊಟ್ಟ ವರದಂತೆ ಹತ್ತು ಹದಿನಾರು ಸ್ಥಾನ ಮೂಲ ಕಟ್ಟಿಸುತ್ತೇನೆ. ನಾಗ ಬೆರ್ಮೆರನ್ನು ಸೃಷ್ಟಿ ಮಾಡುತ್ತೇನೆ. ಆ ಹೊತ್ತಲ್ಲಿ ನಿಮಗೂ ಗರ್ಭಗುಡಿ ಕಟ್ಟಿಸುತ್ತೇನೆ. ಹತ್ತು ಹದಿನಾರು ಆಲಡೆಗಳಲ್ಲಿ ಸೇವೆ ಮಾಡುವಾಗ ನನ್ನ ಎಡಬಲಗಳಿಂದ ಸಹಾಯದ ಗಾಳಿಯಾಗಿ ಬೀಸುತ್ತಿರಿ. ನನ್ನ ನಾಲಗೆಯ ಅಕ್ಷರವನ್ನು (ನುಡಿ) ಫಲಿಸುವ ಹಾಗೆ ಮಾಡಿ. ಬಂಗಾರದ ಹರಳಾಗಿ ನನ್ನ ವರ್ಣ ಹಚ್ಚಡದಲ್ಲಿರಿ' ಎಂದು ಹೇಳುತ್ತಾನೆ.

ಮನೆಮನೆಗಳಲ್ಲಿ ಜಾಗ ಜಾಗಗಳಲ್ಲಿ ಪಂಚದಲ್ಯ ಹಾಕುವಾಗ, ಬೆರ್ಮೆರ್ ಗದ್ದಿಗೆ ಏರುವಾಗ ತೋಟದ ಅಡಕೆ ಹೂವಿಗೆ ಕೈ ಕೊಡುವಾಗ ಸಹಾಯದ ಗಾಳಿಯಾಗಿ ಬೀಸಿ. ಕಂಚಿಯ ಸಟ್ಟುಗ, ಪೆರ್ನಅಗೊಳಿ(ದೊಡ್ಡಪಾತ್ರೆ) ಬಾಳಿಸಿ ಕೊಡಿ. ಅಂಡೆಯ ಹಾಲಿಗೂ ಗಿಂಡೆಯ ನೀರಿಗೂ ದಾರಿ ಮಾಡಿ ಕೊಡಿ ಎನ್ನುತ್ತಾನೆ.

ನಂದೊಲಿಗೆ ನಾಲ್ಕುಸ್ಥಾನ

ನಮ್ಮ ಅಜ್ಜನವರು ಹಾಗೂ ನಮ್ಮ ತಂದೆ ತಾಯಿಯವರು ನಂದಳಿಕೆ ನಾಲ್ಕು ಸ್ಥಾನಕ್ಕೆ ಹೇಳಿರುವ ಹರಕೆ ಇದೆ. ಅದನ್ನು ಸಲ್ಲಿಸಲು ನಾವು ಅಲ್ಲಿಗೆ ಹೋಗೋಣ ಎಂದು ಹೇಳಿಕೊಳ್ಳುತ್ತಾರೆ ಅಕ್ಕ ತಂಗಿ ಅಬ್ಬಯ ದಾರಯರು. ಮುಂದವರಿದು ಮುಕ್ಕಡಾಪು ಮೂಜಿ ಕರಿಯ ಎಂಬ ಕಡಾವಿಗೆ ಬಂದು ಹೊಳೆ ದಾಟಲು ದೋಣಿಯ ಕುಂಞನನ್ನು ಕರೆಯುತ್ತಾರೆ. ಆತ ಒಂದು ದೋಣಿ ಮೂಡಣಕ್ಕೆ ಅಕ್ಕಿ ತರಲು ಹೋಗಿದೆ, ಇನ್ನೊಂದು ದೋಣಿ ಇದ್ದದ್ದು ಪಡುವಣಕ್ಕೆ ಉಪ್ಪು ತರಲು ಹೋಗಿದೆ. ಒಟ್ಟೆ ದೋಣಿ ಮೋಟು

ಜಲ್ಲ ಇದ್ದದ್ದನ್ನು ತೊಳೆದು ಕಟ್ಟಿದ್ದೇನೆ. ಮುಕ್ಕಡಪ್ಪು ಮೂಜಿ ಕರಿಯ ಎಂಬುದು ಬಹಳ ಕಟಾಕ್ಷದ ಹೊಳೆ. ಆದುದರಿಂದ ಇಂದು ದೋಣಿ ಬಿಡಲಾಗದು ಎನ್ನುತ್ತಾನೆ. ಅಷ್ಟು ಮಾತನ್ನು ಕೇಳಿದ ಹೆಣ್ಣುಗಳು ಬಂಗ ಬಾಳೆಯ ತುದಿ ಇಡಿ ಎಲೆ ತಂದು ನೀರಲ್ಲಿಟ್ಟು ಹತ್ತು ಬೆರಳು ವಂದನೆ ಮಾಡಿ ನಮ್ಮ ಮಾವನವರಾದ 'ಕೋಟಿ ಕುಮಾರ' ಎಂಬ ಹೆಸರಿನವರು ಕೋಟಿ ದೇವತೆಗಳಿಗೆ ಸಮನಾದವರು, ಕೋಟಿ ಮಕ್ಕಳಿಗೆ ಮಿಗಿಲಾದ ಮಾವನವರು. ಅವರ ಕಲೆ ಶಕ್ತಿಯಲ್ಲಿ ನಾವಿಂದು ಈ ಬದಿಯಿಂದ ಆ ಬದಿಗೆ ತೇಲಿ ಕೊಂಡು ಹೋಗಬೇಕೆನ್ನುವಷ್ಟರಲ್ಲಿ ಬಾಳೆ ಎಲೆಯಲ್ಲಿ ಕುಳಿತು ಆ ಬದಿಗೆ ಸೇರಿದರು. ನಡುವಲ್ಲಿ ಹೆದ್ದಾರಿ ಮಾರ್ಗವಾಗುತ್ತಾ ಬಂತು. ಇನ್ನು ಮುಂದಕ್ಕೆ ಹೋಗುವ ಎನ್ನುವಷ್ಟರಲ್ಲಿ ದೋಣಿಯ ಕುಂಞ ಓಡೋಡಿ ಬಂದು ಅಬ್ಬಯ ದಾರಯರ ಕಾಲಿಗೆ ಬಿದ್ದು ಸರ್ವ ತಪ್ಪಾಯಿತೆಂದು ಕೇಳಿಕೊಂಡ. ಆಗ ನಿನಗೆ ವರ್ಷದ ಆರು ತಿಂಗಳು ಮಾತ್ರ ದಾಟಿಸುವ ಕೆಲಸ, ಉಳಿದ ಆರು ತಿಂಗಳು ಅವರಾಗಿಯೇ ದಾಟಿ ಕೊಂಡು ಹೋಗುವಂತಾಗಲಿ ಎಂದು ಶಪಿಸಿ ಮುಂದೆ ಹೋಗುತ್ತಾರೆ. ನಂದಳಿಕೆ ನಾಲ್ಕು ಸ್ಥಾನಕ್ಕೆ ಹೋಗುವ ದಾರಿ ತಿಳಿಯಲಿಲ್ಲ ಎನ್ನುತ್ತಾ ಮುಂದೆ ಸಾಗುವಾಗ ಎಡದಲ್ಲಿ ಕಾಣಿಸುತ್ತದೆ ಎಡ ದಾರಿ, ಬಲದಲ್ಲಿ ಕಾಳಿಸುತ್ತದೆ ಬಲ ದಾರಿ, ಎಡದಲ್ಲಿದೆ ಎಡ ಹುತ್ತ, ಬಲದಲ್ಲಿದೆ ಬಲ ಹುತ್ತ, ನಡುವಲ್ಲಿದೆ ನಾಗರ ಹುತ್ತ. ಅಷ್ಟು ಹೊತ್ತಿಗೆ ನಾರಾಯಣ ಮಾವನವರೇ ಎಂದು ಹತ್ತು ಬೆರಳು ಜೋಡಿಸಿ ನೆನವರಿಕೆ ಮಾಡಿಕೊಂಡರು. ಹೀಗೆ ನೆನವರಿಕೆ ಮಾಡಿಕೊಳ್ಳುವಷ್ಟರಲ್ಲಿ ನಾಲ್ಕು ಕಾಲಿನ ನಂದಿಗೋಣ ಮೈಸಂದಾಯ ಕಾಣಿಸುತ್ತಾನೆ. ನೀವು ಇಬ್ಬರೇ ಹೆಂಗಸರು ಎಲ್ಲಿಗೆ ಹೋಗುವವರು ಎಂದು ಕೇಳುತ್ತಾನೆ ನಂದಿಗೋಣ ಮೈಸಂದಾಯ. ಆಗ ಹೆಣ್ಣುಗಳು ನಾವು ಉರ್ಕಿದೋಟದ ಅರಮನೆಯಿಂದ ಬಂದ ಅಬ್ಬಯ ದಾರಯ ಎನ್ನುವವರು. ನಾವು ಸೊನ್ನೆ ಗುರುಮಾರ್ಲರ ಮಕ್ಕಳು, ಮಾಯದ ಮಕ್ಕಳಾಗಿ ಬಂದವರು ಎನ್ನುತ್ತಾರೆ. ನಮ್ಮ ತಂದೆ ತಾಯಿಯವರು ಹೇಳಿರುವ ಹರಕೆಯನ್ನು ಸಲ್ಲಿಸಲು ನಂದಳಿಕೆ ನಾಲ್ಕು ಸ್ಥಾನಕ್ಕೆ ಹೋಗುವವರು. ದಾರಿಯ ಅರಿವು ನಮಗಿಲ್ಲ. ದಾರಿಯ ಅರಿವನ್ನು ತಿಳಿಸಿ ಕೊಡಬಹುದೇ ಮಾನ್ಯ ಎಂದು ಕೇಳುತ್ತಾರೆ ಮಕ್ಕಳು. ಆಗ ನಂದಿಗೋಣ ಮೈಸಂದಾಯ ಎಡ ದಾರಿ ಬಿಡಿ ಹೆಂಗಸರೇ ಬಲಕ್ಕೆ ತಿರುಗಿದ ಬಲದಾರಿಯನ್ನೂ ಬಿಟ್ಟು ನಡುವಿರುವ ಜಾನುವಾರುಗಳು ಸಾಗುವ ಹೆದ್ದಾರಿ ಮಾರ್ಗದಲ್ಲಿ ಮುಂದೆ ಸಾಗಿದಾಗ ನಂದಳಿಕೆ ಬಾಕಿಮಾರು ಗದ್ದೆ ಕಾಣಿಸುತ್ತದೆ ಹೆಂಗಸರೆ ನಿಮಗೆ. ನಂದಳಿಕೆ ನಾಲ್ಕು ಸ್ಥಾನಕ್ಕೆ ಹೋಗಿ ಹರಕೆ ಒಪ್ಪಿಸಿ ಕೊಳ್ಳಿ ಹೆಂಗಸರೆ. ದೇವರೆ ಗದ್ದುಗೆಯಲ್ಲಿ ಆಗಿ ಹೆಂಗಸರೇ, ಕುಮಾರನ ಸುತ್ತು ಬಲಿಯಲ್ಲಿ ಆಗಿ ಹೆಂಗಸರೇ ಎಂದು ಹೇಳುತ್ತಾನೆ ನಂದಿಗೋಣ ಮೈಸಂದಾಯ. (ಇಲ್ಲಿ ನಂದಿಗೋಣ ಮೈಸಂದಾಯನನ್ನು 'ಮಾನ್ಯ' ಎಂದು ಕರೆದುದರಿಂದ ಮಾನವ ಎಂಬಂತೆ ಪರಿಗಣಿಸಲಾಗಿದೆ). ಅಷ್ಟು ಹೊತ್ತಿಗೆ ಆಕಡೆ ನೋಡಿ ಈಕಡೆ ನೋಡಬೇಕಾದರೆ ನಾಲ್ಕು ಕಾಲಿನ ನಂದಿಗೋಣ ಮೈಸಂದಾಯ ಮಾಯವಾಗಿದ್ದಾನೆ.

ಆಗ ಹೇಳುತ್ತಾಳೆ ಅಕ್ಕ ನೈಜ (ಸೋಯೊದ)ಮನುಷ್ಯನೆಂದು ತಿಳಿದೆವು, ಈತ ಮಾಯದ ಮನುಷ್ಯ ಬಂದದ್ದು. ನಮ್ಮ ಮಾವನವರು ಬಂದು ದಾರಿಯ ಅರಿವು ತಿಳಿಸಿಕೊಟ್ಟದ್ದೆಂದು ಹೇಳುತ್ತಾರೆ ಅಬ್ಬಯ ದಾರಯ ಮಕ್ಕಳು. (ಹೀಗಾಗಿ ನಂದಿಗೋಣ ಮೈಸಂದಾಯನನ್ನು ಕುಮಾರನ ಇನ್ನೊಂದು ಅವತಾರ ಎಂದು ತಿಳಿಯಬಹುದೇ?). ಮುಂದೆ ಸಾಗುವಾಗ ಅಬ್ಬಯ ದಾರಯರಿಗೆ ನಂದಳಿಕೆ ನಾಲ್ಕು ಸ್ಥಾನದ ಬಾಕಿಮಾರು ಗದ್ದೆ ಕಾಣಿಸುತ್ತದೆ. ಅದನ್ನು ಇಳಿದುಕೊಂಡು ತಲೆ ಮೇಲೆತ್ತಿ ನೋಡಿದಾಗ ನಂದಳಿಕೆ ನಾಲ್ಕು ಸ್ಥಾನ ಕಾಣಿಸುತ್ತದೆ ಮಕ್ಕಳಿಗೆ. ಅಲ್ಲಿಗೆ ಹೊದರು ಮಕ್ಕಳು. ಗರ್ಭಗುಡಿ ನೊಡುತ್ತಾರೆ, ಏಳು ಸುತ್ತು ಬಲಿ ಬರುತ್ತಾರೆ. ದೇವರ ಎದುರಿಗೆ ನಿಂತು ಮಕ್ಕಳು ಹತ್ತು ಬೆರಳು ಜೋಡಿಸಿ ನಾರಾಯಣ ಮಾತನಾಡದ ಈಶ್ವರ, ನಾರಾಯಣ ಮಾವನವರೇ , ನಮ್ಮ ಅಜ್ಜನವರು, ತಂದೆ ತಾಯಿಯವರು ಹೇಳಿರುವ ಹರಕೆಯನ್ನು ನಾವು ತಂದಿದ್ದೇವೆ. ಮಾಯದ ಮಕ್ಕಳು ನಾವು. ನಂದಳಿಕೆ ನಾಲ್ಕು ಸ್ಥಾನದಲ್ಲಿ ನಾವು ಒಪ್ಪಿಸಿದ ಹರಕೆಯನ್ನು ಸ್ವೀಕಾರ ಮಾಡಿಕೊಳ್ಳ ಬೇಕೆಂದರು ಅಬ್ಬಯ ದಾರಯರು. ಹೇಳಿದ ಮಾತು ಗಂಟಲಲ್ಲಿ ಆಗ ಬೇಕಾದರೆ ಮನಿಪ್ಪಾನ (ಮಾತನಾಡದವನ) ನಡೆಯಲ್ಲಿ, ಸರ್ಪ ಗದ್ದಿಗೆಯಲ್ಲಿ, ಈಶ್ವರ ಲಿಂಗದಲ್ಲಿ ಕುಮಾರನ ಬೆಳಕು ಕಾಣಿಸುತ್ತದೆ. ಬನ್ನಿಯಮ್ಮ ಮಕ್ಕಳೇ ಎಂದು ಕರೆಯುವ ಧ್ವನಿ ಕೇಳಿಸುತ್ತದೆ ಅಬ್ಬಯದಾರಯ ಮಕ್ಕಳಿಗೆ. ಮಕ್ಕಳ ಹರಕೆ ಒಪ್ಪಿಸಿಯಾಯಿತು ನಂದಳಿಕೆಯಲ್ಲಿ, ದೇವರ ಬಲಭಾಗದಲ್ಲಿ, ಕುಮಾರನ ಎಡ ಭಾಗದಲ್ಲಿ ಹಚ್ಚಡದ ತುದಿಯಲ್ಲಿ ಕುಮಾರನ ಜೊತೆಯಾಗಿದ್ದಾರೆ ಅಬ್ಬಯ ದಾರಯ ಎನ್ನುವ ಮಕ್ಕಳು. ನಂದಳಿಕೆ ನಾಲ್ಕು ಸ್ಥಾನದಲ್ಲಿ ಮಾತನಾಡದ ಈಶ್ವರ ಸ್ವಾಮಿಯ ತಲೆಯಲ್ಲಿ ಹೂವಾಗಿ ಕುಳಿತಿದ್ದಾರೆ, ಮಗ್ಗುಲಲ್ಲಿ ಮುತ್ತಿನ ಹರಳಾಗಿ ಅವರು ಕುಮಾರನ ಹಚ್ಚಡದ ತುದಿಯಲ್ಲಿ ವರಹದ ಗಂಟಾಗಿದ್ದಾರೆ ಅಬ್ಬಯ ದಾರಯ ಮಕ್ಕಳು.

ಬೊಲ್ಯೊಟ್ಟು ಸ್ಥಾನದಲ್ಲಿ

ಸಾಮಾನ್ಯವಾಗಿ ಹೆಚ್ಚಿನ ಎಲ್ಲ ಸಿರಿ ಪಠ್ಯಗಳು ಅಬ್ಬಯದಾರಯರ ದುರಂತ ಸಾವಿನೊಂದಿಗೆ ಮುಕ್ತಾಯವಾಗುತ್ತವೆ. ಆದರೆ ಗೋಪಾಲ ನಾಯ್ಕರ ಕಾವ್ಯಮುಂದುವರಿದು ಸಿರಿ ಕುಟುಂಬದ ಎಲ್ಲರೂ ಮಾಯವಾದ ಅನಂತರ ಬೊಲ್ಯೊಟ್ಟು ಸ್ಥಾನದಲ್ಲಿ ನೆಲೆವೂರುವ ವಿವರಗಳಿವೆ. ಬೋಲದ ಪದವಿನಲ್ಲಿ ಮಾಯವಾದ ಕುಮಾರ ಬೊಲ್ಯೊಟ್ಟು ಬಿಳಿಯ ಬುಗುರಿ ಮರದಲ್ಲಿ ಉದಯವಾಗುತ್ತಾನೆ. ಅಡಿಯಲ್ಲಿ ಕಂಚಿನ ಪಾಣಿ ಪೀಠ ಮೇಲಿನಿಂದ ಬಿಳಿಯ ಸಾಸ್ತ್ರ ಹುಂಜನ ರೂಪದಲ್ಲಿ ಲಿಂಗದಲ್ಲಿ ಮೂಡಿದ್ದಾನೆ ಕುಮಾರ. ಮೂವೆ(ಹುಣ್ಣಿಮೆಯ ಹಿಂದಿನ ದಿನ) ಹಾಗೂ ಹುಣ್ಣಿಮೆಯಂದು ಬೊಲ್ಯೊಟ್ಟು ಬಿಳಿಯ ಬುಗರಿ ಮರದ ಬಡಗಣ ಗೆಲ್ಲಲ್ಲಿ ಕುಳಿತು ಕೋಳಿಯ ರೂಪದಲ್ಲಿ ಕೂಗಿದ. ಇದರಿಂದ ಬೊಲ್ಯೊಟ್ಟು ಗುತ್ತಲ್ಲಿ ನಾನಾ ರೀತಿಯ ತೊಂದರೆಗಳು ತೋರಿ ಬಂದವು. ಭತ್ತದ ತೆನೆ ಪೊಟ್ಟಾಯಿತು. ಗಬ್ಬದ ದನ ಹಾಗೂ ಗರ್ಭಿಣಿ ಹೆಂಗಸಿಗೆ ಗರ್ಭಪಾತವಾಯಿತು.

ಇದೇನೆಂದು ತಿಳಿಯಲು ಪಂಚಾಂಗದಲ್ಲಿ ನೋಡಲು ಹೋದರು. ನೋಡಿದ ಪಂಚಾಂಗದಲ್ಲಿ ಸತ್ಯನಾಪುರದ ಸಿರಿಯ ಮಗ ಕುಮಾರ ಬಂದು (ಪಾರ) ಬಂಧನ ಹಾಕಿದ್ದಾನೆ. ಇವನಿಗೆ ಏನು ಮಾಡುವುದೆಂದು ತಿಳಿಯಲು ಅಡ್ಡ ಆರು ಮಾಗಣೆ, ನೀಟ ಆರು ಮಾಗಣೆಯವರು, ಕುತ್ತಿಲ ಹದಿನಾರು ಮಾಗಣೆಯ ಅರಸರಿಗೆ ವಿಷಯ ತಿಳಿಸುತ್ತಾರೆ. ಅವರು ನೀಲೇಶ್ವರ ತಂತ್ರಿಗಳನ್ನು ಬರಹೇಳಿ ಕುಮಾರ ಬಂದು ಇಲ್ಲಿ ನೆಲೆವೂರಿದ್ದಾನೆ. ಆತನನ್ನು ಇಲ್ಲಿ ನೆಲೆವೂರಲು ಬಿಡಬಾರದು. ಮಂತ್ರವಾದದಲ್ಲಿ ಹಿಡಿದು ಕುಪ್ಪಿಯಲ್ಲಿ ಹಾಕಿ ತುಂಬಿಸಿಕೊಂಡು ಹೋಗುವಂತೆ ತಿಳಿಸುತ್ತಾರೆ. ಅದರಂತೆ ತಂತ್ರಿಗಳು ಕುಮಾರನನ್ನು ಕನ್ನಡ ಮಂತ್ರದಲ್ಲಿ ಕರೆದಾಗ ಬರಲಿಲ್ಲ. ಇಂಗ್ಲಿಷ್ ಮಂತ್ರದಲ್ಲಿ ಕರೆದಾಗ ಬರಲಿಲ್ಲ. ತುಳು, ತೆಲುಗು ಮಂತ್ರದಲ್ಲಿ ಕರೆದಾಗಲೂ ಬರಲಿಲ್ಲ. ಕೊನೆಗೆ ಮಲಯಾಳ ಮಂತ್ರದಲ್ಲಿ ಕರೆದಾಗ ಸಮೀಪಕ್ಕೆ ಬರುತ್ತಾನೆ. ಕುಮಾರ ಸಿಕ್ಕಿದ ಎಂದರು, ಬಿಳಿಯ ಕುಪ್ಪಿಯಲ್ಲಿ ತುಂಬಿಸಿ ಬೆನ್ನಿನ ಗಂಟಲ್ಲಿ ತುಂಬಿಸಿಕೊಂಡು ಅರಸರಿಗೆ ತಿಳಿಸಿ ಹೋಗುತ್ತಾರೆ ತಂತ್ರಿಗಳು. ನೇತ್ರಾವತಿ ಹೊಳೆಯ ದಡಕ್ಕೆ ಬರುವಾಗ ಅವರ ಜಪದ ಹೊತ್ತಾಗುತ್ತದೆ. ಬೆನ್ನ ಗಂಟು ಇಳಿಸಿ ಜಪಕ್ಕೆ ಕುಳಿತುಕೊಳ್ಳುತ್ತಾರೆ. ಆಗ ಕುಮಾರ ಕುಪ್ಪಿಯ ಒಳಗಿಂದ ಯೋಚಿಸುತ್ತಾನೆ. ನಾನು ಹದಿನಾರು ನೆರಿಯೆ(ಹೆಡೆ?) ಹೊಂದಿಕೊಂಡು ಹುಟ್ಟಿದ ಮಗು ಹೌದಾದರೆ, ಪಾದದಲ್ಲಿ ಪನಿನಾಗ, ಬೆನ್ನಲ್ಲಿ ಕಾಳಿಂಗ ಸರ್ಪ, ಎದೆಯಲ್ಲಿ ಕೃಷ್ಣ ಸರ್ಪ, ನೆತ್ತಿಯಲ್ಲಿ ಆದಿ ಮಹಾಶೇಷನ ಹೆಡೆ ಹೊಂದಿಕೊಂಡು ಹುಟ್ಟಿದ ಮಗು ಹೌದಾದರೆ, ಮೂರು ನಾಮ ಹದಿನಾರು ನೆರಿಯೆ(?) ಹೊಂದಿಕೊಂಡು ಹುಟ್ಟಿದ ಮಗು ಹೌದಾದರೆ, ನಾನು ಮೂರು ಮೂರ್ತಿಗಳ ಭಕ್ತ ಹೌದಾದರೆ ಈ ಕುಪ್ಪಿಯ ಒಳಗಿಂದ ಹೊರ ಬರಬೇಕೆಂದು ಯೋಚಿಸಿದ. ಕುಪ್ಪಿಯ ಮುಚ್ಚಳ ತಾನಾಗಿ ಬಿಚ್ಚಿಕೊಂಡು ಹೊರಗೆ ಬಂದ. ನೀಲೇಶ್ವರ ತಂತ್ರಿಗಳಲ್ಲಿ ನಿಮ್ಮ ಜಪ ಮುಗಿಯಿತೇ? ನೀವು ಹೋಗುತ್ತೀರ ಒಬ್ಬರೇ, ನಾನು ನಿಲ್ಲಲೇ ಎಂದು ಕೇಳುತ್ತಾನೆ ಕುಮಾರ. ಅಯ್ಯಯ್ಯೋ ಪಾಪವೇ ಎಂದರು ತಂತ್ರಿಗಳು. ಪಾದ ಮುಳುಗುವ ನೀರಿಗಿಳಿದು ಕುಮಾರನನ್ನು ಕರೆದರು. ಆಗ ಕುಮಾರ ಕುತ್ತಿಗೆ ಮುಳುಗುವ ನೀರಿಗೆ ಹೋದ. ಕುತ್ತಿಗೆಯವರೆಗಿನ ನೀರಿಗೆ ಹೋಗಿ ಜಪ ಕಳೆಯುವಾಗ ಕುಮಾರ ಬೇಡ ತಂತ್ರಿಗಳೇ, ಆಕಾಶಕ್ಕೆ ಏರಲು ಆಗದು ನಿಮ್ಮಿಂದ. ನೀರಿನ ಹೆಜ್ಜೆ ಗುರುತು ಹಿಡಿಯಲಾಗದು ನಿಮ್ಮಿಂದ. ನೆಲ ಕಾಣದ ಆಳಕ್ಕೆ ಇಳಿಯ ಬೇಡಿ ತಂತ್ರಿಗಳೇ ಎನ್ನುತ್ತಾನೆ. ಇಷ್ಟರವರೆಗೆ ನೀವು ಮನುಷ್ಯರ ಗೋರಿ ನೋಡಿರಬಹುದು. ಸತ್ಯದ ಗೋರಿ ನೀವು ನೋಡಿರಲಿಕ್ಕಿಲ್ಲ ತಂತ್ರಿಗಳೇ. ಹಠ ಸಾಧಿಸಬೇಡಿ ತಂತ್ರಿಗಳೇ ನೀವು ಒಬ್ಬರೇ ಬಂದಿದ್ದೀರಿ, ಒಬ್ಬರೇ ಹಿಂತಿರುಗಿ ನೀಲೇಶ್ವರಕ್ಕೆ ಹೋಗಿರಿ ಎಂದು ಹೇಳಿ ಕುಮಾರ ತಿರುಗಿ ಬೊಲ್ಯೊಟ್ಟು ಸ್ಥಳಕ್ಕೆ ಬರುತ್ತಾನೆ. ಬಿಳಿಯ ಬುಗರಿ ಮರದ ಬಡಗಿನ ಗೆಲ್ಲಲ್ಲಿ ಕುಳಿತು ಬಿಳಿಯ ಸಾಸ್ತ್ರ ಹುಂಜನಾಗಿ ಭೂವನೇ ಹಾರಿದ. ಬೊಲ್ಯೊಟ್ಟು ಅಡ್ಡ ಆರು ಮಾಗಣೆ ನೀಟ ಆರು ಮಾಗಣೆ ಕುತ್ತಿಲ ಹದಿನಾರು ಮಾಗಣೆಯ ಬಾಕಿಮಾರಿಗೆ ಬಂದು ರೆಕ್ಕೆ ಬಡಿದು ಕೂಗುತ್ತಾನೆ ಕುಮಾರ. ಆಗ

ಸಾವಿರ ರೋಗಗಳು ತೋರಿ ಬಂದವು. ಕೆಳ ಮಾಗಣೆ, ಮೇಲಿನ ಮಾಗಣೆ, ಕುತ್ತಿಲ ಹದಿನಾರು ಮಾಗಣೆ ಅಲ್ಲಿಂದ ಭೂವನೆ ಹಾರಿಕೊಂಡು ಹೋದ. ಅರಸು ಮಾಗಣೆಯ ಹಟ್ಟಿಗೆ ಹೋದ. ನಂದಿಗೋಣನಾಗಿ ಕೂಗಿದ. ಅರಸರು ಮಾರಿಹಟ್ಟಿಯಲ್ಲಿ ಜಾನುವಾರುಗಳು ಯಾಕೆ ಕೂಗುತ್ತವೆ. ತಿನ್ನಲು ಹಾಕಲಿಲ್ಲವೇ ಎಂದು ಮಲಗಿದಲ್ಲಿಂದ ಎದ್ದು ಹೋಗಿ ನೋಡುವಾಗ ಜಾನುವಾರುಗಳು ಹಾಯಾಗಿ ಮಲಗಿಕೊಂಡಿವೆ. ಅಲ್ಲಿಂದ ಕುಮಾರ ಅರಸು ಚಾವಡಿಗೆ ಹೋದ. ರೆಕ್ಕೆ ಬಡಿದು ಕೂಗಿದ. ಬೆಳಗಾಯಿತೆಂದು ಅರಸರು ಎದ್ದು ನೋಡಲು ಮಧ್ಯ ರಾತ್ರಿ ದಾಟಲಿಲ್ಲ. ಇದೇನು ಅರಮನೆಯಲ್ಲಿ ಸೋಜಿಗ ಮಾಯಕವೆಂದರು ಅರಸರು. ಪಟ್ಟದ ರಾಣಿ ಮಲಗಿದಲ್ಲಿಗೆ ಹೋದರು. ಅವರನ್ನು ಎಬ್ಬಿಸಲು ಅವರು ಏಳಲಿಲ್ಲ. ಹಟ್ಟಿಯ ಜಾನುವಾರುಗಳು, ಕರುಗಳು ಮಲಗಿದಲ್ಲಿಂದ ಏಳದಾದುವು. ತೊಟ್ಟಿಲ ಮಗುವಿಗೆ, ಸೇಜದ ಕುದುರೆಗೆ ನಾನಾ ತೊಂದರೆಗಳು ಕಂಡು ಬಂದುವು. ಇದು ಏನು ಸೋಜಿಗ ಮಾಯಕವೆಂದರು ಅರಸರು. ನಿನ್ನೆಯಾಗಿದ್ದರೆ ಮಾಯದ ಗರ್ಭದಲ್ಲಿ ಜನನವಾಗಿದ್ದ ಸೋಯದ ಮಗನನ್ನು ನಿಲೇಶ್ವರ ತಂತ್ರಿಗಳು ಕೊಂಡು ಹೋಗಿದ್ದಾರೆ. ಇಂದೇನು ಕಾರಣವೆಂದು ತಿಳಿಯಲು ಕುತ್ತಿಲ ಅರಸರು, ಮಾಗಣೆಯವರು ಅಲವೊಲಿ ಪಂಚಾಂಗದಲ್ಲಿ ನೋಡಿದರು. ಸಾರಿ ಇಟ್ಟು ಗುಣಿಸಿ ಹೇಳುತ್ತಾರೆ, ಸತ್ಯನಾಪುರದ ಅರಮನೆಯಲ್ಲಿ ಸತ್ಯಮಲೋಕಂದ ಸಿರಿಯ ಗರ್ಭದಲ್ಲಿ ಜನನವಾದ ಮಗ ಕುಮಾರ ಸೋಯ(ನಿಜರೂಪ)ಬಿಟ್ಟು ಮಾಯದಲ್ಲಿ ತಿರುಗಿ ಈ ಮಾಗಣೆಗೆ ಬಂದಿದ್ದಾನೆ. ಹಾಕಿದ್ದಾನೆ (ಪಾರ)ಬಂಧನ, ಇಟ್ಟಿದ್ದಾನೆ ದೃಷ್ಠಿ, ಆತನಿಗೆ ಬೆಳ್ಳಿಯ ಗುಡಿ ಕಟ್ಟಿಸಬೇಕೆಂದು ಕೇಳುತ್ತಾನೆ. ಅಡಿಯಿಂದ ಬಂದಿದೆ ಕಂಚಿಯ ಪೀಠ, ಮೇಲಿನಿಂದ ಮೂಡಿದೆ ಬಿಳಿಯ ಸಾಸ್ತ್ರ ಹುಂಜನ ಲಿಂಗ. ಬಲದ ಬಲಭಾಗದಲ್ಲಿ ಈತನ ತಾಯಿಯವರ ಗುಡಿ ಹಾಗೂ ಎಡದ ಎಡಭಾಗದಲ್ಲಿ ಬೆರ್ಮೆರ್ ಗುಡಿ ಕೇಳುತ್ತಾನೆಂದು ಹೇಳುತ್ತಾರೆ ಬೆರಂಬಿ(ಜ್ಯೋತಿಷಿ)ಗಳು. ದೇವರ ಬಲಿ ಕೇಳುತ್ತಿದ್ದಾನೆ ಕುಮಾರ ಬೊಲ್ಯೊಟ್ಟಲ್ಲಿ. ದೇವರ ಬಲಿ ತೂಗದಿದ್ದರೆ ದೇವಲ್ಲ ಕುಮಾರ ಎಂಬ ಹೆಸರು ಪಡೆವ ಕುಮಾರ ಇವ. 'ಕೋಟಿ ಕೋಟಿ ಕುಮಾರ' ಎಂದು ಹೆಸರು ಪಡೆದ ಮಗು ಈತ. ಕುಮಾರನಿಗೆ ನಡುವಲ್ಲಿ ಗುಡಿ ಕಟ್ಟಿಸಿ. ನಿಮಗೆ ಹಾಕಿರುವ ಬಂಧನ(ಪಾರ) ತೆಗೆಯುತ್ತಾನೆ. ಎಡದ ಎಡಭಾಗದಲ್ಲಿ ಬೆರ್ಮೆರ್ ಗುಡಿ ಕಟ್ಟಿಸಿ, ಅಡ್ಡ ಆರು ಮಾಗಣೆ, ನೀಟ ಆರು ಮಾಗಣೆ, ಕುತ್ತಿಲ ಹದಿನಾರು ಮಾಗಣೆಯ ರೋಗ, ಆರಭಾರವನ್ನು ಎಲ್ಲ ಕಳೆಯುತ್ತಾನೆ. ಸುಖ ದಾಂಪತ್ಯವನ್ನು ತುಂಬಿಸಿ ಕೊಡುತ್ತಾನೆ ಕುಮಾರ ಎಂದರು ಬೆರಂಬಿಗಳು. ಸ್ವತಃ ಅರಸರೇ ದೇವರಿಗೆ ದೇವಸ್ಥಾನ ಕಟ್ಟಿಸಿ, ಕುಮಾರನಿಗೆ ಗುಡಿ ಕಟ್ಟಿಸಿ, ಬೆರ್ಮೆರ್‌ಗೆ ಗುಡಿ ಕಟ್ಟಿಸಿ, ಸಿರಿಯ ಗುಡಿ ಕಟ್ಟಿಸಿ, ಎದುರಲ್ಲಿ ಬೊಲ್ಯೊಟ್ಟಾಯ ಸ್ಥಾನಮಾನ ಆಗಬೇಕೆಂದರು. ದೇವರ ಬಲಿ ಕೇಳುತ್ತಾನೆ ಆತ. ಜಾತ್ರೆ ಕೇಳುತ್ತಾನೆ. ಒಂಭತ್ತು ದಿನದ ಬಲಿ, ಒಂಭತ್ತು ದಿನದ ಕೂಟ, ಹತ್ತರಲ್ಲಿ ಪಿರಿ (ಮುಕ್ತಾಯ) ಕೇಳುತ್ತಾನೆ. ಪೊನ್ನಿ ತಿಂಗಳಲ್ಲಿ (ಮಕರ ಮಾಸ) ಒಂಭತ್ತು ದಿನದ ಕೂಟ, ಹತ್ತರಂದು

ಪಿರಿ (ಮುಕ್ತಾಯ) ಕೇಳುತ್ತಾನೆ ಕುಮಾರ. ಹೀಗೆ ಮಾಡಿದರೆ ಮಾತ್ರ ಹಾಕಿರುವ ಪಾರ(ಬಂಧನ)ತೆಗೆಯುತ್ತಾನೆ ಕುಮಾರ ಎಂದರು.

ಇದರಂತೆ ಅಡ್ಡ ಆರು ಮಾಗಣೆ, ನೀಟ ಆರು ಮಾಗಣೆ, ಕುತ್ತಿಲ ಹದಿನಾರು ಮಾಗಣೆಯ ಅರಸರು ಸತ್ತುಗುತ್ತುಗಳನ್ನು ಬರ ಮಾಡಿಕೊಂಡು ನಮಗೆ ಬೊಲ್ಯೊಟ್ಟಿಗೆ ಹೋಗ ಬೇಕೆಂದರು. ಕುಮಾರ ಗುಡಿ ನಮಗೆ ಕಟ್ಟಿಸ ಬೇಕೆಂದರು. ಎಲ್ಲರೂ ಸೇರಿ ಬರುತ್ತಾರೆ ಬೊಲ್ಯೊಟ್ಟು ತಾವು ಕಟ್ಟೆಗೆ. ಬಂದು ನೋಡುವಾಗ ಅಡಿಯಿಂದ ಮೂಡಿದೆ ಕಂಚಿಯ ಪೀಠ, ಮೇಲಿನಿಂದ ಇದೆ ಬೆಳ್ಳಿಯ ಸಾಸ್ತ್ರ ಹುಂಜ. ಕುಮಾರನಿಗೆ ಗರ್ಭಗುಡಿ ಕಟ್ಟಿಸಿದರು. ಬಲದ ಬಲಭಾಗದಲ್ಲಿ ಸಿರಿಯ ಗುಡಿ ಕಟ್ಟಿಸಿದರು, ಎಡದ ಎಡ ಭಾಗದಲ್ಲಿ ಬೆರ್ಮೆರ್ ಗುಡಿ ಕಟ್ಟಿಸಿದರು. ಸತ್ತುಗುತ್ತು ಮಾಗಣೆ ಬೊಲ್ಯೊಟ್ಟು ತಾವು ಕಟ್ಟಲ್ಲಿ ನಮಗೆ ವರ್ಷಾವಧಿ ಬಂತು. ಜಾತ್ರೆ ಮಾಡಬೇಕು. ಜಾತ್ರೆಗೆ ದಿನಮಾನ ಕೇಳ ಬೇಕೆಂದು ಗುಡಿಯಲ್ಲಿರುವ ಅಸ್ರಣ್ಣರಲ್ಲಿಗೆ ಹೋದರು. ಅವರು ದಿನಮಾನ ಹೇಳಿದರು. ಅದರಂತೆ ಪೊನ್ನಿ ತಿಂಗಳ (ಮಕರಮಾಸ) ಒಂಭತ್ತರಂದು ಕೂಟ, ಮಕರಮಾಸದ ಹತ್ತರಂದು ಮುಕ್ತಾಯ ಎಂದು ನಿರ್ಧರಿಸಿದರು.

ಹೀಗೆ ಘಟ್ಟದ ಬದಿಯಿಂದ ಹಿಡಿದು ಸಮುದ್ರದ ಬದಿಯವರೆಗಿನ ಜನರನ್ನು ಸೇರಿಸಿದರು. ದರ್ಶನಕ್ಕೆ ಮಾನಿ(ದೈವಮಾಧ್ಯಮ ವ್ಯಕ್ತಿ)ಯನ್ನು ನಿಲ್ಲಿಸಲು ಸ್ನಾನ ಮಾಡಿಸಿ ಶುದ್ಧದಲ್ಲಿ ದರ್ಶನಕ್ಕೆ ಬೊಲ್ಯೊಟ್ಟು ಗರ್ಭಗುಡಿಯ ಎದುರು ನಿಲ್ಲಿಸಿದರು. ಅಷ್ಟು ಹೊತ್ತಿಗೆ ಕುಮಾರ ಬಂಧನ ಹಾಕಿರುವ ಜನ ಬಂದರು. ಘಟ್ಟದ ಬದಿಯಿಂದ ಹಿಡಿದು ಸಮುದ್ರದ ಬದಿಯವರೆಗೆ ಹಾಕಿರುವ ದೃಷ್ಟಿಯಲ್ಲಿ ನೇತ್ರಾವತಿ ಹೊಳೆಯಲ್ಲಿ ಅಡಿಯವರೆಗೆ ಮುಳುಗಿ ಮೇಲೆ ಕಾಣಿಸಿಕೊಂಡು ಮೈಲೆ ಕಳೆದು ಮಡಿಯುಟ್ಟು ಬರುತ್ತಾನೆ ಮಾಧ್ಯಮ ವ್ಯಕ್ತಿ. ಕೊಡಿಮರದ ನೆರಳಲ್ಲಿ, ದಂಬೆಕಲ್ಲ ಎದುರಲ್ಲಿ, ಹೋಮದ ಕುಳಿಯಲ್ಲಿ ಬಂದು ನಿಂತ. ಕುಮಾರನ ಮಹಾಪೂಜೆಯ ಅಂದ ನೋಡಿದ. ದರ್ಶನಮಾನಿ ಹೀಗೆ ನೋಡುವಾಗ ಗದ್ದಿಗೆಯಿಂದ ಕುಮಾರ ದರ್ಶನಕ್ಕೆ ನಿಂತ ಮಾನಿಯ ಕಡೆಗೆ ದೃಷ್ಟಿಯನ್ನು ಕೊಟ್ಟ. ಕುಮಾರ ಕಾಲ ಉಂಗುಷ್ಟಕ್ಕೆ ದೃಷ್ಟಿ ಕೊಟ್ಟು ಅಲ್ಲಿಂದ ಮಾನಿಗೆ ಬೊಲ್ಯೊಟ್ಟು ಸ್ಥಾನದಲ್ಲಿ ಜೋಗ ದರ್ಶನ ಆರಂಭಿಸುತ್ತಾನೆ. ನಡು ಬಿಡಿಸಿದ ಕುಮಾರ ತಲೆಕೂದಲ ತುದಿಯವರೆಗೆ ಒಲಿಜೋಗ ಕೊಟ್ಟ. ತಲೆ ಕೂದಲು ಬಿಚ್ಚಿಸಿ ಶರಣು ಹಾಕಿಸಿದ ಕುಮಾರ. ಮಾನಿಯ ಕೈ ಬಿಡಿಸಿದ ಕುಮಾರ ಬೀಸಣಿಗೆಗೆ ಕೈ ನೀಡಿಸಿದ. ಮಾನಿಯ ನಾಲಿಗೆಯಲ್ಲಿ ಕುಮಾರ ಮಾಣಿಕ್ಯದ ಹರಳಾಗಿ ಕುಳಿತು ಹೊಯಿಗೆಯ ಬರಹ ಓಲೆಯ ಓದು ನಾಲಿಗೆಯಲ್ಲಿ ನುಡಿಸಿದ.

ನಾರಾಯಣ ತಂತ್ರಿಗಳೇ, ನಾರಾಯಣ ಅಸ್ರಣ್ಣರೇ ಎಂಬುದಾಗಿ ದರ್ಶನದಮಾನಿ ಕರೆದ. ನಿನ್ನೆಗೆ ನಾನು ಕೊಟ್ಟ ವರ, ನನ್ನ ತಾಯಿಯವರು ಸತ್ಯಮಲೋಕಂದ ಸಿರಿ ಜೋಲದ ಪದವಲ್ಲಿ ಹೇಳಿದ ಮಾತು ಘಟ್ಟದ ಬದಿಯಿಂದ ಹಿಡಿದು ಸಮುದ್ರದ ಬದಿಯವರೆಗೆ, ಸೂರ್ಯೋದಯದಿಂದ ಹಿಡಿದು ಚಂದ್ರ ಅಸ್ತಮವಾಗುವವರೆಗೆ ಹಾಕು

ಮಗ ಪಾರ(ಬಂಧನ), ಇಡು ಮಗ ದೃಷ್ಟಿ, ಎಂದು ನನ್ನ ತಾಯಿಯವರು ಹೇಳಿದ್ದರು ಎನ್ನುತ್ತಾನೆ ಕುಮಾರ. ಬಿತ್ತು ಬೀಜವನ್ನು, ಸಸಿಯಾಗಿ ಮೊಳಕೆ ಬರಿಸು. ತುಳುನಾಡ ಕಥೆಯನ್ನು ನಾಲ್ಕು ರಾಜ್ಯ, ನಾಲ್ಕು ಸೀಮೆಗೆ, ನಾಲ್ಕು ದಿಕ್ಕಿಗೆ ಸೂರ್ಯಚಂದ್ರರಿರುವ ತನಕ ಬಿತ್ತಿಕೊಂಡು ಬಾ ಎಂದು ನನ್ನ ತಾಯಿಯವರು ಕೊಟ್ಟ ವರ. ಹಾಗೆ ಮಾಡಿಕೊಂಡೆ. ನನಗೆ ಮೂರು ಮೂರ್ತಿಗಳ ಗಂಧದಿಂದ ಸಂಕಷ್ಟಗಳನ್ನು ನಾಶ ಮಾಡಿಕೊಂಡು ಶಿಷ್ಯರನ್ನು ರಕ್ಷಣೆ ಮಾಡಿಕೊಂಡು ನಾನು ಬರುತ್ತೇನೆ. ನೆನೆದಲ್ಲಿ ದೇವಾಲಯವಾಗಿದ್ದೇನೆ, ನೀವು ಮದಿಪು ಹೇಳಿದಲ್ಲಿ ಮಂತ್ರೋಲ್ಲಾಯನಾಗಿದ್ದೇನೆಂದು ಹೇಳಿದ ಕುಮಾರ. ಬೊಲ್ಯೊಟ್ಟು ಗರ್ಭಗುಡಿಯಲ್ಲಿ ಮೂರು ಮೂರ್ತಿಗಳ ಗಂಧ ನನ್ನದು ಎನ್ನುವಂಥದ್ದು ಇಂದು ನಾಲ್ಕು ರಾಜ್ಯದಲ್ಲಿ, ನಾಲ್ಕು ಸೀಮೆಯಲ್ಲಿ ಚಂದ್ರನ ತಂಪಿಗೆ, ಸೂರ್ಯನ ಪ್ರಕಾಶಕ್ಕೆ ಸಮನಾದ ಗಂಧ ಅದು. ಜ್ಯೋತಿಯ ಬೆಳಕಾಗಿ ಇರುವ ಗಂಧ ಅದು ಎಂದು ಹೇಳಿದ ಕುಮಾರ. ಮೂಡಣದಲ್ಲಿ ಮೂಡುವ ಸೂರ್ಯನಿಗೆ ಸಮನಾಗಿ ಪಡುವಣದಲ್ಲಿ ಅಸ್ತಮವಾಗುವ ಚಂದ್ರನಿಗೆ ಸಮನಾಗಿರುವ ಬೆಳಕು ನಾನು. ಇಂದಲ್ಲ ಶತಕಾಲದವರೆಗೆ ಸೂರ್ಯ ಚಂದ್ರರಿರುವ ತನಕ ನನ್ನ ಬೆಳಕು ತುಳುನಾಡ ಕಥೆ ಮಲೆನಾಡ ಸೀಮೆಯಲ್ಲಿ ತುಳುನಾಡ ರಾಜ್ಯದಲ್ಲಿ, ಪರಶುರಾಮ ಸೃಷ್ಟಿಯಲ್ಲಿ ಪವಿತ್ರವಾದ ಗಂಟಾಗಿರಲಿ. ಇದು ವಜ್ರ ಮಲಕಂದ ಕೋಟಿಕುಮಾರ ಹೇಳುವ ಮಾತಿದು. ಬೊಲ್ಯೊಟ್ಟು ಬಿಳಿ ಬುಗರಿಯ ಮರದ ಬುಡದಲ್ಲಿ ಗರ್ಭ ಗುಡಿಯ ಎದುರಲ್ಲಿ ನಿಂತು ಎಡದ ಎಡಭಾಗದ ಬೆರ್ಮೆರ್ ಗುಡಿಯಲ್ಲಿ, ಬಲದ ಬಲಭಾಗದಲಿ ನನ್ನ ತಾಯಿಯವರ ಗುಡಿಯಲ್ಲಿ, ನಡುವಲ್ಲಿ ವಜ್ರಮಲೋಕಂದ ಕುಮಾರನ ಗುಡಿಯ ಬಾಗಿಲಲ್ಲಿ ನಿಂತುಕೊಂಡು ಕುಮಾರ ನುಡಿಯುವ ನುಡಿಯಿದು. ಗುಡಿಯಲ್ಲಿರುವ ಅಸ್ರಣ್ಣರು, ತಂತ್ರ ತೂಗುವ ತಂತ್ರಿಗಳು, ಗುತ್ತಿನ ಬಂಟ, ಬರಿಕ್ಕೆಯ ಬಾರಗ, ಬಡವರನ್ನು ಕುರಿತು ಹೇಳುವ ಮಾತಿದು. ನನ್ನ ತಾಯಿಯವರನ್ನು ಮಾಯ ಮಾಡಿಕೊಂಡೆ, ನನ್ನ ತಂಗಿ ಗಿಂಡೆಯನ್ನು ಮಾಯ ಮಾಡಿಕೊಂಡು ನನ್ನ ಬಲದ ಬಲಭಾಗಕ್ಕೆ ಬಾ ಎಂದು ಕರೆದುಕೊಂಡೆ. ನನ್ನ ಸೊಸೆಯಂದಿರಾದ ಉರ್ಕಿದೊಟ್ಟು ಅರಮನೆಯಲ್ಲಿ ಹುಟ್ಟಿದ ಅಬ್ಬಯ ದಾರಯ ಮಕ್ಕಳನ್ನು ಮಾಯಮಾಡಿಕೊಂಡು ನನ್ನ ಬಲಭಾಗದ ಹಚ್ಚಡದ ತುದಿಯಲ್ಲಿ ವರಹದ ಗಂಟಾಗಿ ಕಟ್ಟಿಕೊಂಡೆ.

ನಾರಾಯಣ ನನ್ನ ಸಹೋದರಿ ಸೊನ್ನೆ, ನರಜನ್ಮ ಬಿಡು, ಕಂಡೇವು ಸ್ಥಾನಕ್ಕೆ ಹೋಗು, ಕಂಡೇವು ಸ್ಥಾನದಲ್ಲಿ ನಿನಗೆ ಸ್ಮೃತಿ ಬೋಧ ತಪ್ಪುವಾಗ ನಾನು ಕಂಡೇವು ಗುಂಡಿಯಲ್ಲಿ ಏಳು ದಿನದ ಶಿಕಾರಿಯ ಮಗುವಾಗಿ ನಾನು ಬರುತ್ತೇನೆ. ನಿನ್ನನ್ನು ಮತಿರ್ಭೋದನೆ ಮಾಡಿ ಸೋಯ ಬಿಡಿಸಿ(ನಿಜರೂಪ) ಮಾಯ ಮಾಡುತ್ತೇನೆಂದು ಹೇಳುತ್ತಾನೆ ಕುಮಾರ. ನನ್ನ ಕೂಟು ಕುಟುಂಬ ನನ್ನ ಸುತ್ತುಬಲಿಯಲ್ಲಿ ಇರಿ ನೀವು ಎಂದು ಹೇಳುತ್ತಾನೆ ಕುಮಾರ. ಬಂಗಾರದ ಕಣಜವಾಗಿ ನಿಮ್ಮನ್ನು ಮೆರೆಸುತ್ತೇನೆ, ಆಕಾಶದ ಕೆಂಡದ ಮಳೆಗೆ ಕಬ್ಬಿಣದ ಕೊಡೆಯಾಗಿ ನಿಂತು ರಕ್ಷಣೆಯನ್ನು ನೀಡುವೆ.

ಧರ್ಮದ ಕಟ್ಟೆಯಲ್ಲಿ ನಿಂತು ಧರ್ಮದ ಗಾಳಿಯಾಗಿ ಬೀಸುವೆನು. ಪುಣ್ಯದ ಕಟ್ಟೆಯಲ್ಲಿ ನಿಂತು ಪುಣ್ಯದ ಗಾಳಿಯಾಗಿ ಬೀಸುವೆನು. ಕರ್ಮದ ಕಟ್ಟೆಯಲ್ಲಿ ನಿಂತು ಕರ್ಮದ ಮಾನವರಿಗೆ ಕರ್ಮದ ಗಾಳಿಯಾಗಿ ಬೀಸುವೆನೆಂದು ಹೇಳಿದ ಕುಮಾರ. ಮಕರಮಾಸ ಒಂಭತ್ತು ಹೋಗುವಂದು ಕೂಟ ಆಯಿತು, ಹತ್ತು ಹೋಗುವಂದು ಮುಕ್ತಾಯ(ಪಿರಿ) ತೆಗೆಯುತ್ತೇನೆ ನಾನು ಎಂದ ಕುಮಾರ. ನಾರಾಯಣ ತಂತ್ರಿಗಳೇ, ಅಸ್ರಣ್ಣರೇ, ನನ್ನ ತಾಯಿಯವರ ಜನನದ ಅಡಿಕೆಯ ಹಿಂಗಾರ ಇದೆ. ರಾಮಲಕ್ಷಣ ಎನ್ನುವ ಹಿಂಗಾರದಲ್ಲಿ ರಾಮ ಎನ್ನುವ ಹೂವನ್ನು ನನ್ನ ಎಡದ ಕೈಗೆ ಕೊಡಿ ಲಕ್ಷಣ ಎನ್ನುವ ಹೂವನ್ನು ನನ್ನ ಬಲದ ಕೈಗೆ ಕೊಡಿ. ತಂತ್ರಿಗಳೇ, ಅಸ್ರಣ್ಣರೇ, ಮುಕ್ಕಾಲು ಮೂರು ಘಳಿಗೆಯ ನನಗೆ ದೇವಲ್ಲ ಕುಮಾರ ಎಂದು ಮೂರು ಬಲಿ, ಐದು ಸುತ್ತಿನ ಬಲಿ ನನಗೆ ಕೊಡಿ ಎಂದು ತಿಳಿಸಿದ ಕುಮಾರ. ದೇವರ ಬಲಭಾಗದಲ್ಲಿ, ಬೆರ್ಮೆರ್ ಎಡಭಾಗದಲ್ಲಿ, ಸ್ವಾಮಿ ನಡೆಯಲ್ಲಿ ಸಂಕಮಾಲ ಹೆಡೆಯಲ್ಲಿ ಹೇಳಿದ ಮಾತಿದು. ಮೇಲೆ ದೃಷ್ಠಿಕೊಟ್ಟ ಕುಮಾರ. ಮುನ್ನೂರ ಅರುವತ್ತು ಜಾತಗ, ಮುನ್ನೂರ ಅರುವತ್ತು ಗ್ರಂಥ ನೀವು ಬಿಡಿಸಿ ನೋಡಿ ತಂತ್ರಿಗಳೇ, ಅಸ್ರಣ್ಣರೇ, ನಾನೂ ನೋಡುತ್ತೇನೆಂದು ಹೇಳಿದ ಕುಮಾರ. ಹಾಗೆ ಗುಣಿಸಿ ನೋಡುವಾಗ ಎಣಿಕೆಗೆ ಸರಿಯಾಗಿ ವಿಷ ಕಳೆದು ಅಮೃತ ಸೇರಿಬಂತು ಕುಮಾರನಿಗೆ. ನನಗಿನ್ನು ಹಿಡಿಯಲು ಹೂ ಈ ಅಮೃತ ಘಳಿಗೆಯಲ್ಲಿ ಕೊಡಿ ಎಂದ. ನಾರಾಯಣ ತಂತ್ರಿಗಳೇ, ಅಸ್ರಣ್ಣರೇ, ಮಕರಮಾಸದಲ್ಲಿ ಒಂಭತ್ತು ಹೋಗುವಂದು ಕೂಟ, ಹತ್ತರ ಮುಕ್ತಾಯ (ಪಿರಿ) ತೆಗೆಯುತ್ತೇನೆ ನಾನೆಂದು ಹೇಳಿದ ಕುಮಾರ. ಬೊಲ್ಯೊಟ್ಟಲ್ಲಿ ಸಿರಿಗಿಂಡೆಯ ನೀರು ಎತ್ತಿ ಹಿಡಿದುಕೊಳ್ಳಿ ಎಂದ ಕುಮಾರ, ಎಲ್ಲ ಬಗೆಯ ಗೌಜಿ ಗದ್ದಲ, ಆನೆ ಪಲ್ಲಕ್ಕಿ, ದಂಡು ಸಿಲಾಲು, ಸಾವಿರ ಬಿರುದಾವಳಿಗಳನ್ನು ಮಾಡಿಕೊಳ್ಳಿ ಎಂದ. ಗಿಂಡ್ಯೆಯ ನೀರನ್ನು ತಂತ್ರಿಗಳು ಹಿಡಿದುಕೊಂಡರು. ರಾಮ ಲಕಣ ಎನ್ನುವ ಹೂವನ್ನು ಕುಮಾರನ ಕೈಗೆ ನೀಡಿದರು. ಸಾವಿರ ಬಿರುದಾವಳಿಗಳೊಂದಿಗೆ ಬೊಲ್ಯೊಟ್ಟುವಿನ ಗರ್ಭಗುಡಿಗೆ ಒಂಭತ್ತು ಸುತ್ತು ಬಲಿ ಬಂದ ಕುಮಾರ. ಗರ್ಭಗುಡಿಗೆ ಹೋದ ಕುಮಾರ. ಕಂಚಿನ ಪೀಠದಲ್ಲಿ ಬಿಳಿಯ ಸಾಸ್ತ್ರ ಹುಂಜನಾಗಿ, ಬೆಳ್ಳಿಯ ಕೋಳಿಯಲ್ಲಿ ಕೋಟಿ ಕೋಟಿ ಕಲೆ ತುಂಬಿಕೊಂಡು ಅಡ್ಡ ಆರು ಮಾಗಣೆ, ನೀಟ ಆರು ಮಾಗಣೆ, ಕುತ್ತಿಲ ಹದಿನಾರು ಮಾಗಣೆಯಲ್ಲಿ ಇದ್ದಾನೆ ಕುಮಾರ. ಮಂಗಳಾರತಿ ತೆಗೆದುಕೊಳ್ಳುತ್ತಾನೆ ಕುಮಾರ. ಪೂಜೆಯ ಪುಷ್ಪವೆಂದು ತೆಗೆದುಕೊಂಡ ಕುಮಾರ. ಪೊನ್ನಿ ಒಂಭತ್ತು (ಮಕರಮಾಸ) ಹೋಗುವಂದು ಜಾತ್ರೆ, ಹತ್ತರಂದು ಪಿರಿ, ಬೊಲ್ಯೊಟ್ಟಲ್ಲಿ ನಡೆದುಕೊಂಡು ಬರುತ್ತಿದೆ. ಆ ನಂತರ ಎಲ್ಲ ದೇವರಿಗೆ ಶರಣ ಕರೆದು ಕಾವ್ಯ ಮುಕ್ತಾಯಗೊಳಿಸುತ್ತಾರೆ. (ಗೋಪಾಲ ನಾಯ್ಕ ಪುಟ 804-838). ಸಿರಿ ಕುಟುಂಬ ಮಾಯವಾದ ಅನಂತರ ಎಲ್ಲರೂ ಬೊಲ್ಯೊಟ್ಟುವಿನಲ್ಲಿ ಬಂದು ನೆಲೆಯಾಗುವುದು ಹಾಗೂ ಅಲ್ಲಿಂದ ಕುಮಾರ ತನ್ನ ಸಹೋದರಿಯಾದ ಸೊನ್ನೆಯನ್ನು ಕಂಡೇವು ಸ್ಥಾನಕ್ಕೆ ಕಳುಹಿಸಿಕೊಟ್ಟು ತಾನು ಕಂಡೇವು ಗುಂಡಿಯಲ್ಲಿ ಮೀನ ಬೇಟೆ ಮಾಡುತ್ತಾ ಬರುವೆನೆಂಬ ವಿಚಾರ ಬೇರೆ ಯಾವುದೇ ಸಿರಿ ಕಾವ್ಯಗಳಲ್ಲಿ ಲಭ್ಯವಿಲ್ಲ. ಕಂಡೇವು ಆಲಡೆಯಲ್ಲಿ ಸೊನ್ನೆಗೆ ಪ್ರಾಶಸ್ತ್ಯ ಇದೆ ಹಾಗೂ

ಇಂದಿಗೂ ವೃಷಭ ಸಂಕ್ರಮಣದಂದು ನಡೆಯುವ ಸಿರಿ ಜಾತ್ರೆಯ ದಿನ ಕಂಡೇವು ಕರಿಯದಲ್ಲಿ ಊರವರು ಸೇರಿ ಮೀನು ಹಿಡಿಯುವ ಆಚರಣೆ ನಡೆಸುತ್ತಾರೆ.

ಈ ಭಾಗದಲ್ಲಿ 'ಎರ್ಮಾಳ್ ಜಪ್ಪು ಕಂಡೇವು ಅಡೆಪ್ಪು' ಎಂಬ ಗಾದೆಯೇ ಇದೆ. ಎಂದರೆ ಧ್ವಜಾರೋಹಣವಾಗಿ ನಡೆಯುವ ಆಚರಣೆಳಲ್ಲಿ ಎರ್ಮಾಳು ಜಾತ್ರೆ ಮೊದಲನೆಯದ್ದಾದರೆ ಕಂಡೇವು ಆಚರಣೆ ಕೊನೆಯದು ಎಂದರ್ಥ, ಈ ಭಾಗದಲ್ಲಿ ಧ್ವಜಾರೋಹಣವಾಗಿ ನಂತರ ಯಾವುದೇ ಜಾತ್ರೆಗಳು ನಡೆಯುವುದಿಲ್ಲ. ಕಂಡೇವು ಮಂಗಳೂರು ತಾಲೂಕಿನ ಹಳೆಯಂಗಡಿಗೆ ಸಮೀಪವಿದೆ. ಇಲ್ಲಿನ ನಂದಿನಿ ಹೊಳೆಯ ದಡದಲ್ಲಿ ಕಂಡೇವು ಸಿರಿಗಳ ಆಲಡೆಯ ಜೊತೆಗೆ ಉಳ್ಳಾಯ ಹಾಗೂ ಪರಿವಾರ ದೈವಗಳ ಸ್ಥಾನವಿದೆ. ತುಳು ತಿಂಗಳ ಪ್ರಕಾರ ಪಗ್ಗು ಎಂದರೆ ಮೇ ತಿಂಗಳ 14–15ರ ವೃಷಭ ಸಂಕ್ರಮಣದಂದು ಇಲ್ಲಿಯ ಜಾತ್ರೆ ನಡೆಯುತ್ತದೆ. ಜಾತ್ರೆಯ ದಿನ ಬೆಳಗ್ಗೆ ಆಲಡೆಗೆ ಸಮೀಪದ ಹೊಳೆಯ ಒಂದು ಭಾಗ (ಇದನ್ನು ಕಂಡೇವು ಕರಿಯ ಎಂದು ಕರೆಯುತ್ತಾರೆ)ದಲ್ಲಿ ಮೀನು ಹಿಡಿಯುವ ಆಚರಣೆ ನಡೆಯುತ್ತದೆ. ಇದನ್ನು ಮಚ್ಚೊಂಗುಲೆ ಬೋಂಟೆ (ಮತ್ಸ್ಯಬೇಟೆ) ಎಂದೇ ಕರೆಯಲಾಗುತ್ತದೆ. ಕಂಡೇವು ಕರಿಯದಲ್ಲಿ ಆಚರಣೆಯ ಭಾಗವಾಗಿ ವರ್ಷದಲ್ಲಿ ಒಂದುಬಾರಿ ಮಾತ್ರ ಊರ ಪರವೂರವರು ಸೇರಿ ನಿಗದಿತ ಸಮಯಕ್ಕೆ ಸರಿಯಾಗಿ ಸರ್ವರಿಗೆ ಸಮಬಾಳು, ಸಮಪಾಲು ಎಂಬ ನೆಲೆಯಲ್ಲಿ ಜಾತಿಭೇದವಿಲ್ಲದೆ ಇಲ್ಲಿಯ ಮೀನುಗಳನ್ನು ಹಿಡಿಯುತ್ತಾರೆ. ಉಳಿದ ದಿನಗಳಲ್ಲಿ ಇಲ್ಲಿ ಮೀನು ಹಿಡಿಯುವುದನ್ನು ನಿಷೇಧಿಸಲಾಗಿದೆ. ಇಲ್ಲಿಯ ಆಲಡೆಯ ಆಡಳಿತ ಮೊಕ್ತೇಸರರಾದ ಶ್ರೀಯುತ ಆದಿತ್ಯ ಮುಕ್ಕಾಲ್ದಿಯವರ ಜೊತೆ ನಡೆಸಿರುವ ಸಂದರ್ಶನದಲ್ಲಿ ಈ ಕಂಡೇವು ಕರಿಯದ ಮೀನುಗಳು ಇಲ್ಲಿಯ ಪ್ರಧಾನ ದೈವವಾದ ಉಳ್ಳಾಯನಿಗೆ ಸೇರಿದ್ದೆಂದೂ, ವರ್ಷಕ್ಕೆ ಒಂದು ಬಾರಿ ಉಳ್ಳಾಯನ ಪ್ರಸಾದವನ್ನು ಹಾಕಿ ಆತನ ಒಪ್ಪಿಗೆಯನ್ನು ಪಡೆದು ಇಡೀ ಊರವರು ಸೇರಿ ಇಲ್ಲಿಯ ಮೀನುಗಳನ್ನು ಏಕ ಕಾಲಕ್ಕೆ ನೀರಿಗಿಳಿದು ಹಿಡಿಯುತ್ತಾರೆ ಎಂಬ ಮಾಹಿತಿಯನ್ನು ನೀಡಿದ್ದರು. ಇಲ್ಲಿ ಮೀನು ಹಿಡಿಯುವ ಜಾತ್ರೆಯ ಮುನ್ನಾದಿನದಂದು ಮಿತ್ರಪಟ್ಣದ ನಿಗದಿತ ಮೊಗವೀರ ಮನೆತನದವರು ಬಂದು ಇಲ್ಲಿಯ ಸ್ವಲ್ಪ ಮೀನುಗಳನ್ನು ಹಿಡಿದು ಕಂಡೇವು ಬೀಡಿಗೆ ತಂದು ಕೊಡಬೇಕು. ಅಂದು ರಾತ್ರಿ ಈ ಮೀನಿನಿಂದ ತಯಾರಿಸಿದ ಪದಾರ್ಥಮಾಡಿ ಸಂದುಹೋದ ಹಿರಿಯರಿಗೆ ಎಡೆ ಹಾಕುವ ಪದ್ಧತಿ ಇದೆ ಎಂಬ ಮಾಹಿತಿಯನ್ನು ನೀಡಿದ್ದರು. ಆದರೆ ಗೋಪಾಲನಾಯ್ಕರ ಈ ಪಠ್ಯವನ್ನು ನೋಡಿದಾಗ ವರ್ಷಕ್ಕೆ ಒಂದು ಬಾರಿ ಕುಮಾರನೇ ಮೀನುಬೇಟೆ ಮಾಡುವ ಪ್ರಸ್ತಾವ ಇದೆ. ಗೋಪಾಲ ನಾಯ್ಕರನ್ನು ಒಂದು ಬಾರಿ ಈ ಬಗೆಗೆ ಮಾತನಾಡಿಸಿದಾಗ ಅವರಿಗೆ ಕಂಡೇವು ಪ್ರದೇಶ ಎಲ್ಲಿ ಇದೆ ಎಂಬುದೇ ತಿಳಿದಿಲ್ಲ ಹಾಗೂ ಸಿರಿಜಾತ್ರೆಯ ಭಾಗವಾಗಿ ಇಲ್ಲಿ ಮೀನಬೇಟೆ ನಡೆಯುವ ವಿಚಾರವೂ ತಿಳಿದಿಲ್ಲ ಎಂದರು. ಆದರೆ ಇವರ ಪಠ್ಯದಲ್ಲಿ ಈ ವಿಚಾರ ಸೇರಿರುವುದು ಹಾಗೂ ಕಂಡೇವು ಆಲಡೆಯಲ್ಲಿ ಈ ಆಚರಣೆ ಇರುವುದು ಮಹತ್ವದ ಸಂಗತಿಯಾಗಿದೆ.

ದಲಿಯ ಇಳಿಯುವ ಮುನ್ನ....

ಪ್ರಕೃತ ಅಧ್ಯಯನದಲ್ಲಿ ಈವರೆಗೆ ಲಭ್ಯವಿರುವ ಐದು ಪ್ರಕಟಿತ ಸಿರಿಕಾವ್ಯಗಳ ಜೊತೆಗೆ ಮೂರು ಅಪ್ರಕಟಿತ ಕಾವ್ಯಗಳನ್ನೂ ಸೇರಿಸಿ ಒಟ್ಟು ಎಂಟು ಸಿರಿಕಾವ್ಯಗಳನ್ನು ತುಲನಾತ್ಮಕವಾಗಿ ನೋಡುವ ಪ್ರಯತ್ನ ವನ್ನು ಮಾಡಿದ್ದೇನೆ. ಸಾಮಾನ್ಯವಾಗಿ ಎಲ್ಲ ಸಿರಿಕಾವ್ಯಗಳೂ ಸತ್ಯನಾಪುರದ ಅರಮನೆಯ ಆರ್ಯಬನ್ನಾಯ ಬಿರ್ಮಾಳುವ ಅಜ್ಜನವರ ಆಡಳಿತ, ಸಂತಾನವಿಲ್ಲದ ಕೊರಗಿನೊಂದಿಗೆ ಆರಂಭವಾಗುತ್ತವೆ. ಈ ಎಲ್ಲ ಕಾವ್ಯಗಳಿಗಿಂತ ಭಿನ್ನ ವಿಚಾರ ಪೊಳಲಿ ಶೀನಪ್ಪ ಹೆಗ್ಗಡೆಯವರ 'ಅಕ್ಕೆರಸು ಪೂಂಜೆದಿ' ಕತೆಯಲ್ಲಿ ಲಭಿಸುತ್ತದೆ. ಸತ್ಯನಾಪುರದರಸು ಆರ್ಯ ಬನ್ನಾಯ ಬಿರ್ಮಾಳ್ವ ಅಜ್ಜನವರ ಪೂರ್ವ ವೃತ್ತಾಂತವನ್ನು ಇಲ್ಲಿ ಕೊಡಲಾಗಿದೆ. ತುಳುನಾಡಿನ ಬಡಗಣ ಸೀಮೆ ಬಸರೂರಿನ ಅರಸಿಯ ಮಗಳು ಹುಡುಗಿ ಹೋಗಿ ಹೆಂಗಸಾದುದರಿಂದ ಅವಳಿಗೆ ಸರಿಯಾದ ವರನನ್ನು ಹುಡುಕಲು ಅವಳ ಬಂಧುಗಳು ನಾಲ್ಕೂ ದಿಕ್ಕುಗಳಿಗೆ ಹೋಗುತ್ತಾರೆ. ತೆಂಕಣಕ್ಕೆ ಬಂದವರಿಗೆ ಮುಜಲೊಟ್ಟು ಎಂಬಲ್ಲಿ 'ತಾರಯಿದ ತಪ್ಪಂಗಾಯಿ' ಎನ್ನುವ ತುಳುನಾಡಿನ ವಿಶಿಷ್ಟ ಜನಪದ ಆಟವನ್ನು ಆಡುತ್ತಿದ್ದ ಯುವಕನೊಬ್ಬನ ಚಾಕಚಕ್ಯತೆಯನ್ನು ಕಂಡು ತಮ್ಮ ಯುವರಾಣಿಗೆ ಈತನೇ ಸೂಕ್ತ ವರನಾಗಬಹುದೆಂದು ನಿಶ್ಚಯಿಸಿ ಅವನಲ್ಲಿ ಆತನ ಸೀಮೆ, ಕುಲಗೋತ್ರಗಳನ್ನು ವಿಚಾರಿಸಿ ತಿಳಿದುಕೊಳ್ಳು ತ್ತಾರೆ. ಆತ ಮುಜಲೊಟ್ಟು ಬೀಡಿನ ಮುಜಲೊಟ್ಟು ಆಲಡೆಯವನು, ಆರ್ಯಬನ್ನಾಯ ಬಳಿಯವನೆಂಬುದನ್ನು ತಿಳಿದು ಮದುವೆ ಪ್ರಸ್ತಾವ ಮಾಡುತ್ತಾರೆ. ಮದುವೆಗೆ ಎರಡೂ ಕಡೆಯವರು ಒಪ್ಪಿ ಸಂಭ್ರಮದ ಮದುವೆ ನಡೆಯುತ್ತದೆ. ಆ ನಂತರ ಬಸರೂರಿನ ರಾಣಿಯು ತನ್ನ ಆಡಳಿತದ ಸಮಸ್ತ ಅಧಿಕಾರವನ್ನು ಅಳಿಯನಿಗೆ ಒಪ್ಪಿಸುತ್ತಾಳೆ. ಈತ

ತನಗೆ ಇರಲಿಕ್ಕಾಗಿ (ಸತ್ಯಂದರಮನೆ) ಸತ್ಯನಾಪುರದ ಅರಮನೆ ಕಟ್ಟಿಸುತ್ತಾನೆ. ಈತನೇ ಬಿರ್ಮಾಳ್ವ, ಈತನ ಪತ್ನಿಯೇ ಸಾಂತಕ್ಕ. ಗೋಪಾಲ ನಾಯ್ಕರ ಪಠ್ಯ ಮಾತ್ರ ಬಿರ್ಮುಪಾಲವರ ಹೆಂಡತಿ ಸೋಮಕ್ಕು ಎಂಬುದಾಗಿ ತಿಳಿಸಿ ಇವರು ಸತ್ತು ಇಪ್ಪತ್ತೈದು ವರ್ಷವಾಯಿತು ಎಂಬ ಸೂಕ್ಷ್ಮ ವಿವರವನ್ನು ನೀಡುತ್ತದೆಯೇ ಹೊರತು ಬೇರೆ ಯಾವುದೇ ಪಠ್ಯಗಳಲ್ಲಿ ಈ ವಿವರಗಳು ಲಭ್ಯವಿಲ್ಲ.

ಸತ್ಯನಾಪುರದ ಅರಮನೆಯ ಬಿರ್ಮಾಳ್ವರ ಶ್ರೀಮಂತಿಕೆ ಮತ್ತು ಆಡಳಿತದ ಬಗೆಗೆ ವಿವಿಧ ಪಠ್ಯಗಳು ಒಂದೊಂದು ವಿವರಗಳನ್ನು ನೀಡುತ್ತವೆ. ಕರ್ಗಿಯವರು ಮತ್ತು ಲೀಲಾ ಅವರ ಪಠ್ಯದಲ್ಲಿ ಅಜ್ಜನವರಿಗೆ ಎಮ್ಮೆಯಲ್ಲಿ ಹೇರುವಷ್ಟು, ದನದಲ್ಲಿ ಹೊರಿಸುವಷ್ಟು, ಮೊರದಲ್ಲಿ ಗೋರುವಷ್ಟು ಸಂಪತ್ತು ಇದ್ದು ಎಲ್ಲರಿಗೆ ಎಲ್ಲ ರೀತಿಯ ದಾನಗಳಾದ ವಸ್ತ್ರದಾನ, ಎಣ್ಣೆದಾನ, ದುಡ್ಡುದಾನ ಮಾಡಿದರೂ ದೇವರು ಸಂತಾನದ ಫಲವನ್ನು ಕರುಣಿಸಲಿಲ್ಲವಲ್ಲಾ ಎಂಬ ಕೊರಗು ಅವರನ್ನು ಬಾಧಿಸುವ ವಿವರಗಳಿವೆ. ಆದರೆ ಗೋಪಾಲ ನಾಯ್ಕ, ರಾಮಕ್ಕ ಮುಗ್ಗೇರ್ತಿ, ರಾಮಕ್ಕ ಹಾಗೂ ಶ್ಯಾಮರಾಯ ಶೆಟ್ಟಿಯವರ ಪಠ್ಯಗಳು ಅಜ್ಜನವರಿಗೆ ಸಂತಾನವಿಲ್ಲದ ಕೊರಗಿನ ಜೊತೆಗೆ ಸತ್ಯನಾಪುರದ ಅರಮನೆಗೆ ಬಲುಬಡತನ ಬಂದಿರುವ ಬಗೆಗೆ ತಿಳಿಸುತ್ತವೆ. ಅರಮನೆಯ ಮುಖ್ಯ ದ್ವಾರದಿಂದ ಕಾಗೆ ಗಿಡುಗ ಹೊಕ್ಕು ಕಿರುಬಾಗಿಲಿನಿಂದ ಹೊರಬರುವಂಥ ದಯನೀಯ ಸ್ಥಿತಿ, ಸತ್ಯನಾಪುದರಮನೆಯಲ್ಲಿ ಬಂಗಾರದ ಮೆಟ್ಟಲಿಳಿದು ಬರುತ್ತಿದ್ದ ಅಜ್ಜನವರಿಗೆ ಉಣ್ಣಲು ಅನ್ನ, ಉಳಲು ಎತ್ತುಗಳಿಗೆ ಕೊರತೆ ಬಂದೊದಗಿದ ಸ್ಥಿತಿಯ ಬಗೆಗೆ ತಿಳಿಸುತ್ತವೆ.

ಇದರಿಂದಾಗಿ ಅಜ್ಜನವರು ಬಲು ದುಃಖಿತರಾಗಿ ಸತ್ಯನಾಪುರದರಮನೆಯ ಕತ್ತಲೆಯ ಕೋಣೆಯಲ್ಲಿ ಮಣ್ಣ ಹಾಸಿಗೆಯಲ್ಲಿ ಕವುಚಿ ಮಲಗಲು ಅವರ ಕಣ್ಣೀರು ಹೋಗಿ ಮೇಲು ಲೋಕದಲ್ಲಿರುವ ಬೆರ್ಮೆರ್ ದೇವರ ಪಾದದ ಮೇಲೆ ಹೋಗಿ ಬೀಳುವ ಪ್ರಸಂಗ ಇದೆ. ಬೆರ್ಮೆರ್ ಇದು ಸತ್ಯನಾಪುರದ ಅರಮನೆಯ ಬಿರ್ಮಾಳ್ವರ ಕಣ್ಣೀರು, ಯಾಕಾಗಿ ಅವರಿಗೆ ಈ ರೀತಿಯ ಸ್ಥಿತಿ ಒದಗಿಬಂತು ಎಂಬುದನ್ನು ತಿಳಿದುಕೊಳ್ಳಲು ತನ್ನ ನಿಜರೂಪ ಬಿಟ್ಟು ಬೇಡುವ ಬ್ರಾಹ್ಮಣಮಾಣಿಯ ವೇಷದಲ್ಲಿ ಬರುವ ವಿವರಗಳು ಎಲ್ಲ ಪಠ್ಯಗಳಲ್ಲಿವೆ. ಕೆಲಸದ ಹೆಣ್ಣು ದಾರು ಬಂದು ಭಿಕ್ಷೆ ನೀಡಲು ಪಡೆಯದೆ ಅಜ್ಜನವರು ಬಂದು ನೀಡಿದಾಗ ಅವರಲ್ಲಿ ಬ್ರಾಹ್ಮಣ ಹುಡುಗ ಅವರ ದುಃಖದ ಬಗೆಗೆ ತಿಳಿದುಕೊಂಡು "ಬಡಗಣ ಲಂಕೆಲೋಕನಾಡು ನಿಮ್ಮ ಆಲಡೆ ಜೀರ್ಣಾವಸ್ಥೆಯಲ್ಲಿದೆ. ಅದನ್ನು ಜೀರ್ಣೋದ್ಧಾರ ಮಾಡಿದರೆ ನಿಮಗೆ ಸಂತಾನದ ಫಲ ದೊರೆಯುತ್ತದೆ" ಎಂದು ಹೇಳಿ ಮಾಯವಾಗುವ ವಿವರ ಇದೆ.

ಬ್ರಾಹ್ಮಣ ಹುಡುಗನ ಈ ಮಾತಿನಿಂದ ಪ್ರೇರಿತರಾದ ಅಜ್ಜನವರು ಮರುದಿನವೇ ಬೇಕಾದಷ್ಟು ಆಳುಗಳನ್ನು ಕರೆದುಕೊಂಡು ಲಂಕೆಲೋಕನಾಡಿಗೆ ಹೋಗಿ ಜೀರ್ಣೋದ್ಧಾರದ ಕೆಲಸಗಳನ್ನು ಕೈಗೊಳ್ಳುತ್ತಾರೆ. ಈ ಎಲ್ಲ ಕೆಲಸಗಳನ್ನು ಮಾಡಿಸಿ ಅಜ್ಜನವರು ಭಕ್ತಿಯಿಂದ ಕೈ ಮುಗಿದು ಪ್ರಸಾದ ಹಿಡಿಯಲು ಅಜ್ಜನವರ ಹಚ್ಚಡದ

ತುದಿಗೆ ಹಿಂಗಾರದ ಹಾಳೆಯಲ್ಲಿ ಹೆಣ್ಣು ಮಗುವಿನ ರೂಪದಲ್ಲಿ ಸಂತಾನ ದೊರೆಯುವ ವಿವರ ಕರ್ಗಿಯವರ ಪಠ್ಯದಲ್ಲಿದೆ.

ಪೊಳಲಿ ಶೀನಪ್ಪ ಹೆಗ್ಡೆಯವರ ಪಠ್ಯದಲ್ಲಿ ಅಜ್ಜನವರು ಈ ರೀತಿಯ ಜೀರ್ಣೋದ್ಧಾರದ ಕೆಲಸಗಳನ್ನು ಮಾಡಿ ದೈವ ದೇವರುಗಳಲ್ಲಿ ತನಗೆ ಬಂದೊದಗಿದ ಆಪತ್ತನ್ನು ನಿವೇದಿಸಿಕೊಂಡಾಗ ದೇವರು ಬೆರ್ಮೆರ್ ಮೇಲು ಲೋಕದಲ್ಲಿರುವ ಕೈಲಾಸಕ್ಕೆ ಹೋಗಿ ವಿಶ್ವನಾಥ ದೇವರಲ್ಲಿ "ಸತ್ಯವನ್ನೇ ನಂಬಿ ಬಾಳುತ್ತಿರುವ ನನ್ನ ಭಕ್ತನಾದ ಬಿರ್ಮಾಳುವ ಸಂತತಿಯಿಲ್ಲದ ಕೊರಗಿನಲ್ಲಿದ್ದಾನೆ. ಆತ ತನ್ನ ಕಷ್ಟವನ್ನೆಲ್ಲ ಸತ್ಯದ ಮುಂದೆ ಕಣ್ಣೀರು ಹಾಕಿ ನಿವೇದಿಸುತ್ತಿದ್ದಾನೆ. ಆದುದರಿಂದ ನಿಮ್ಮ ಬಳಿಯಿರುವ ಏಳ್ವರು ಕನ್ನಿಕೆಯರಲ್ಲಿ ಒಬ್ಬಳನ್ನು ನನ್ನ ವಶವಿತ್ತು ಅವನಿಗೆ ಸಂತತಿಯಾಗಿ ಅನುಗ್ರಹಿಸುವಂತೆ ಕರುಣಿಸಬೇಕು" ಎಂದು ಕೇಳಿಕೊಂಡಾಗ ವಿಶ್ವನಾಥ ದೇವರು ಇದಕ್ಕೊಪ್ಪಿ ಪಾರ್ವತಿ ದೇವಿಯ ಒಪ್ಪಿಗೆ ಪಡೆದುಕೊಂಡು ತನ್ನ ಏಳ್ವರು ಕನ್ನಿಕೆಯರಲ್ಲಿ ಒಬ್ಬಳನ್ನು ಬೆರ್ಮೆರ್ ದೇವರ ವಶಕ್ಕೆ ನೀಡಿ ಅವಳ ರಕ್ಷಣೆಗೆ ಬೇಕಾದ ಪರಿವಾರವನ್ನೂ ಕಳುಹಿಸಿಕೊಡುವ ವಿವರ ಇದೆ.

ಶ್ಯಾಮರಾಯ ಶೆಟ್ಟಿಯವರ ಕಾವ್ಯದಲ್ಲಿ ದೇವರು ಬೆರ್ಮೆರ್ ದೇವಲೋಕದಲ್ಲಿರುವ ಏಳ್ವರಲ್ಲಿ ಒಬ್ಬಳಾದ ಸತ್ಯದ ಸಿರಿಯನ್ನು ನರಲೋಕದಲ್ಲಿ ಬಿರ್ಮಾಳುವನಿಗೆ ಸಂತತಿಯ ರೂಪದಲ್ಲಿ ಕಳುಹಿಸಿ ನರಲೋಕ ಪರಿಶೋಧನೆ ಆಗಬೇಕೆಂದು ತಿಳಿಸುವ ವಿವರಗಳಿವೆ. ನಿನಗಲ್ಲಿ ಕಷ್ಟಗಳು ಒದಗಿಬಂದರೆ ಹಿಂತಿರುಗಿ ಬಾ ಸಿರಿಯೇ ಎಂದಾಗ ಅನ್ಯರ ಕೈ ಸೇರಿದನಂತರ, ಅನ್ಯರ ಎಂಜಲು ಮುಟ್ಟಿದ ನಂತರ ಮತ್ತೆ ಹಿಂತಿರುಗಿ ಬರಲಾರೆ. ನರಲೋಕಕ್ಕೆ ಹೋದ ಅನಂತರ ನರಲೋಕ ನಿರ್ನಾಮವಾಗುವವರೆಗೆ ನನ್ನ ಶಕ್ತಿಯ ಪ್ರಾಬಲ್ಯವನ್ನು ತೋರಿಸಿಯೇನು ಎನ್ನುತ್ತಾಳೆ ಸಿರಿ.

ಕರ್ಗಿಯವರ ಪಠ್ಯವು ಒಕ್ಕೆತ್ರಿವಂಶ (ಬಂಟಕುಲ), ಪಾರ್ವತಿ ಜನನ, ಈಶ್ವರನ ತೊಡೆಶರೀರದಿಂದ ಉದಯವಾಗಿ ಬಂಗಾರದ ಪಿಂಜಾಣಿಗೆ ಹಿಂಗಾರದ ಎಸಳಿನ ರೂಪದಲ್ಲಿ ಕುಂಕುಮದ ಹರಳಂತೆ ಅಜ್ಜನವರ ಹಚ್ಚಡದ ತುದಿಗೆ ಬಿದ್ದು ಹೆಣ್ಣು ಮಗುವಾಗಿ ಉದಯವಾಗುವ ಬಗೆಗೆ ತಿಳಿಸುತ್ತದೆ.

ಲೀಲಾ ಅವರ ಪಠ್ಯದಲ್ಲಿ 'ಬೆರ್ಮೆರು ಏಳುಕೋಲು ಕೆಳಗಿನಲ್ಲಿರುವ ಏಳ್ವರು ಸಿರಿಗಳನ್ನು ಕರೆದು ಏಳ್ವರಲ್ಲಿ ಒಬ್ಬಳಾದ ಮೈಯಗೆ ಸಿರಿಯನ್ನು ಮಾಯಬಿಟ್ಟು ಕಾಯದಲ್ಲಿ ಸತ್ಯನಾಪುರದರಮನೆಯ ಅಜ್ಜನವರಿಗೆ ಸಂತಾನದ ರೂಪದಲ್ಲಿ ಹೋಗಬೇಕೆಂದು ತಿಳಿಸುತ್ತಾರೆ. ಹೀಗೆ ಬಂಗಾರದ ಹರಳಿನ ರೂಪದಲ್ಲಿ ಗಂಧದ ಗುಳಿಗೆಯಲ್ಲಿರಿಸಿ ಹಿಂಗಾರದ ಹೂವಿನ ರೂಪದಲ್ಲಿ ಅಜ್ಜನವರ ಹಚ್ಚಡದ ತುದಿಗೆ ಹಾಕುತ್ತಾರೆ'. ರಾಮಕ್ಕ ಅವರ ಪಠ್ಯವು ಸತ್ಯನಾಪುರದರಮನೆಯನ್ನು ಸಂಚನಂಗಡಿ ಜಲ್ಮಭೂಮಿ ಎಂದು ಕರೆದುದಲ್ಲದೆ ಈ ಪಠ್ಯದಲ್ಲಿ ಲಂಕೆಲೋಕನಾಡನ್ನು 'ಲಂಕೆಲೋಕನಾಡ ಗರಡಿ' ಎಂದು ಕರೆಯಲಾಗಿದೆ. ಬಾಲಬ್ರಾಹ್ಮಣ ಹುಡುಗನ ಆದೇಶದಂತೆ ಅಜ್ಜನವರು ಲಂಕೆಲೋಕನಾಡ

ಗರಡಿಯನ್ನು ಜೀರ್ಣೋದ್ಧಾರಗೊಳಿಸಿದ್ದಕ್ಕಾಗಿ ಅಜ್ಜನವರಿಗೆ ಬಾಲಬ್ರಾಹ್ಮಣ ಹುಡುಗನೇ ಪ್ರಸಾದವನ್ನು ನೀಡುತ್ತಾನೆ. ಇದರಿಂದ ತುಳುವ ಕಟ್ಟಿನ ಬಂಟಕುಲದ ಗುತ್ತುಮನೆತನದಲ್ಲಿ ಆಳ್ವಿಕೆ ನಡೆಸ ಬಲ್ಲಂಥ ಸಿರಿ ಹುಟ್ಟುವ ವಿವರಗಳು ಇವೆ. ಹೀಗೆ ಎಲ್ಲ ಪಠ್ಯಗಳು ಸಿರಿಯ ಹುಟ್ಟನ್ನು ದೈವಿಕಗೊಳಿಸಿ ಅಲೌಕಿಕಗೊಳಿಸಿವೆ.

ಸಿರಿಯನ್ನು ಎಲ್ಲೂ ತುಳುನಾಡಿನ ದೈವಗಳ ರೀತಿಯಲ್ಲಿ ಆರಾಧಿಸಲಾಗುತ್ತಿಲ್ಲ ಮಾತ್ರವಲ್ಲ ಸ್ತ್ರೀ ದೈವವೆಂದೂ ತಿಳಿಯುವುದಿಲ್ಲ. ಸಿರಿ ಆರಾಧನೆ ತುಳುನಾಡಿನ ಒಂದು ಪ್ರತ್ಯೇಕವಾದ ಆರಾಧನಾಪರಂಪರೆ. ಮೇಲಿನ ಎಲ್ಲಾ ಪಠ್ಯಗಳನ್ನು ನೋಡಿದಾಗ ಸಿರಿಯನ್ನು ದೇವಾಂಶಸಂಭೂತ (ಅಪೌರುಷೇಯ)ಳಾಗಿ ನರಲೋಕಕ್ಕೆ (ತುಳುನಾಡಿಗೆ) ಬೆರ್ಮೆರ್ ದೇವರು ಕಳುಹಿಸಿಕೊಡುವ ಬಗೆಗೆ ತಿಳಿಯುತ್ತದೆ. ಸಿರಿಯನ್ನು ನರಲೋಕಕ್ಕೆ ಕಳುಹಿಸಿರುವ ಉದ್ದೇಶವೇ ನರಲೋಕವನ್ನು ಪರಿಶೋಧನೆ ಮಾಡುವುದಕ್ಕಾಗಿದೆ. ಒಂದು ವೇಳೆ ಅಲ್ಲಿ ಕಷ್ಟಗಳು ಒದಗಿಬಂದರೆ ಹಿಂತಿರುಗಿ ಬಾ ಎನ್ನಲು ಸಿರಿ ಒಂದು ಬಾರಿ ಅಲ್ಲಿಗೆ ಹೋದ ನಂತರ ನರಲೋಕ ನಿರ್ನಾಮವಾಗುವವರೆಗೆ ನಾನು ಬರಲಾರೆ ಎನ್ನುತ್ತಾಳೆ. ಹೀಗಾಗಿ ತುಳುನಾಡಿನಲ್ಲಿ ಸಿರಿಯ ಅಸ್ತಿತ್ವ ಗಟ್ಟಿಯಾಗಿ ಬೇರೂರಿದ ಒಂದು ಆರಾಧನಾ ಪರಂಪರೆ ಎಂದು ತಿಳಿಯಬಹುದು. ಬೆರ್ಮೆರ್ ದೇವರ ಅಪ್ಪಣೆಯಂತೆ ದೇವಲೋಕದ ಏಳ್ವರು ಸಿರಿಗಳಲ್ಲಿ ಒಬ್ಬಳನ್ನು ನರಲೋಕಕ್ಕೆ ಕಳುಹಿಸುತ್ತಾರೆ. ಇನ್ನು ಕೆಲವು ಪಠ್ಯಗಳಲ್ಲಿ ಲಂಕೆಲೋಕನಾಡನ್ನು ಜೀರ್ಣೋದ್ಧಾರಗೊಳಿಸಿದ್ದಕ್ಕಾಗಿ ಸತ್ಯನಾಪುರದ ಅಜ್ಜನವರಿಗೆ ಹಿಂಗಾರದ ಹಾಳೆಯಲ್ಲಿ ದೇವರ ವರಪ್ರಸಾದವಾಗಿ ಸಿರಿ ದೊರೆಯುತ್ತಾಳೆ. ಹೀಗಾಗಿ ಇವಳನ್ನು 'ಸತ್ಯದ ಸಿರಿ' ಅಥವಾ ' ಸತ್ಯಮಾಲೋಕಂದ ಸಿರಿ' ಎಂದು ಕರೆಯಲಾಗಿದೆ. ಇಲ್ಲಿ 'ಸತ್ಯ' ಎಂದರೆ ಅಲೌಕಿಕ ಶಕ್ತಿಯನ್ನು ಪಡೆದವಳು ಎಂದು ತಿಳಿಯಬಹುದು. ತುಳುನಾಡಿನಲ್ಲಿ ಆರಾಧನೆಗೊಳ್ಳುವ ಭೂತಗಳನ್ನೂ 'ತುಳುನಾಡಿನ ಸತ್ಯಗಳು'ಎಂಬುದಾಗಿ ಕರೆಯುತ್ತಾರೆ. ಹೀಗಾಗಿ 'ಸತ್ಯದ ಸಿರಿ' ಅಥವಾ 'ಸತ್ಯಮಾಲೋಕಂದ ಸಿರಿ' ಎಂಬರ್ಥವೂ ಇದನ್ನೇ ಸೂಚಿಸುತ್ತದೆ. ಸಿರಿಯ ಈ ರೀತಿಯ ವಿಶೇಷ ರೀತಿಯ ಹುಟ್ಟಿನಿಂದಾಗಿಯೇ ಅವಳಲ್ಲಿ ದೈವಿಕಶಕ್ತಿ ಪ್ರಾಪ್ತವಾಗಿದೆ ಎನ್ನಬಹುದು. ಮಾತ್ರವಲ್ಲ ಅವಳು ಆಳಿದ ತುಳುನಾಡನ್ನು 'ಸಿರಿಬಾರಿಲೋಕ' ಎಂದೂ ಕರೆದರು. ಪಾಡ್ದನಗಳಲ್ಲಿ 'ಮಿತ್ತ್ ಮೇಗಿಮಲೋಕೊ ತಿರ್ತ್ ಸಿರಿಬಾರಿಲೋಕೊ' ಎಂಬ ಸಾಲು ಬರುತ್ತದೆ. 'ಮೇಲೆ ಮೇಲುಲೋಕ, ಕೆಳಗೆ ಸಿರಿ ಆಳಿದ ಲೋಕ' ಎಂಬರ್ಥದಲ್ಲಿ ಇದನ್ನು ತಿಳಿಯಲಾಗಿದೆ.

ರಾಮಕ್ಕ ಅವರ ಪಠ್ಯದಲ್ಲಿ ಇದಕ್ಕೆ ಪೂರಕ ಮಾಹಿತಿಗಳು ಲಭ್ಯವಾಗುತ್ತವೆ. ಸತ್ಯನಾಪುರದ ಅಜ್ಜನವರು ಲಂಕೆಲೋಕನಾಡನ್ನು ಜೀರ್ಣೋದ್ಧಾರಗೊಳಿಸಿದ್ದಕ್ಕಾಗಿ ಬಾಲಬ್ರಾಹ್ಮಣ ಮಾಣಿಯು ಸತ್ಯನಾಪುರದ ಅಜ್ಜನವರಿಗೆ ಪ್ರಸಾದವನ್ನು ನೀಡಿ "ಇದನ್ನು ಯಾರಿಗೂ ತೋರಿಸದೆ, ದಾರಿಯ ಮಧ್ಯೆ ಬಿಡಿಸದೆ ಜಾಗ್ರತೆಯಿಂದ ಅರಮನೆಗೆ ಕೊಂಡುಹೋಗು" ಎಂದು ತಿಳಿಸುತ್ತಾರೆ. ಅಜ್ಜನವರು ಈ ಪ್ರಸಾದವನ್ನು ಬಹಳ ಜಾಗ್ರತೆಯಿಂದ ತಂದು ಕಲ್ಲಕಲೆಂಬಿ (ಕಲ್ಲಿನಿಂದ ರಚಿಸಿದ ಸಾಮಾನುಗಳನ್ನು ದಾಸ್ತಾನು

ಮಾಡುವ ಪೆಟ್ಟಿಗೆ)ಯ ಒಳಗೆ ಇಡುತ್ತಾರೆ. ಏಳನೇ ದಿವಸಕ್ಕೆ ಮಗು ಅಳುವ ಸದ್ದು ಕೇಳಿಸುತ್ತದೆ. ಅಜ್ಜನವರು ಹೋಗಿ ನೋಡಲು ಹೆಣ್ಣು ಮಗುವಿನ ಜನನವಾಗಿರುತ್ತದೆ. ಅಜ್ಜನವರು ಮಗುವನ್ನು ಹೋಗಿ ಎತ್ತಿಕೊಂಡು ದೇವರು ನನಗೆ ಸಂತಾನದ ಫಲ ನೀಡಿದರೆಂದು ಸಂತೋಷಗೊಳ್ಳಲು ಮಗು ಅಜ್ಜನವರನ್ನು ಕುರಿತು ಈ ಮಾತುಗಳನ್ನು ಹೇಳುತ್ತದೆ.

ನಾರಾಯಣ ಅಜ್ಜನವರೇ ತುಳುವ ಕಟ್ಟಿನ ಬಂಟಕುಲದಲ್ಲಿ ಜನನವಾದೆ
ಸೆಟ್ಟಿಮಗ ಸೇನವ ಬಂಟಮಗ ಬಾರಗನ ಗುತ್ತು ಮನೆತನಕ್ಕೆ ಬಂದೆ ಅಜ್ಜನವರೇ
ನಾನಾದರೋ ಅಜ್ಜನವರೇ ಒಂದುಬಾರಿ ಆಳಿದವಳಲ್ಲ ಎರಡು ಬಾರಿಯಲ್ಲ
ಮೂರುಬಾರಿ ಮೂರುಕರೆ ಆಳಿದವಳು ಅಲ್ಲವೇ ಅಜ್ಜನವರೇ
ನಾರಾಯಣ ಅಜ್ಜನವರೇ ಒಕ್ಕೆತ್ತಿರಿ (ಬಂಟ) ಹುಡುಗಿ ಎಂದರೆ ನಾನೇ ಅಜ್ಜನವರೇ
ಆಳಿದವಳು ಬಾಲಕ್ಕೆ ಸಿರಿ ಎಂದರೂ ನಾನೇ (ರಾಮಕ್ಕ ಅಪ್ರಕಟಿತ ಪಠ್ಯ)

ಎಂದು ಹೇಳುತ್ತಾಳೆ. ಹೀಗಾಗಿ ತಾನು ಮೂರುಬಾರಿ ಮೂರು ಕರೆಗಳಲ್ಲಿ ಆಳಿದವಳು ಎಂದಿರುವುದರಿಂದ 'ಸಿರಿಬಾರಿಲೋಕ' ಸಿರಿ ಆಳಿದ ಲೋಕ ಎಂದು ಇದನ್ನೇ ಕರೆಯುತ್ತಾರೆ ಎನ್ನಬಹುದು. ಇಲ್ಲದಿದ್ದರೆ ಯಾಕೆ ಈ ಹೆಸರು ಬಂತು ಎಂಬುದನ್ನು ಯೋಚಿಸಬೇಕಾದದ್ದೇ.

ಸಿರಿಗೆ ಪಟ್ಟವಾಳಿ ಆಳ್ವಿಕೆ ನಡೆಸುವ ಯೋಗ್ಯತೆ ಇತ್ತು ಮತ್ತು ಆ ಬಯಕೆ ಇತ್ತು ಎಂಬುದು ಬೇರೆ ಬೇರೆ ಪಠ್ಯಗಳಲ್ಲಿ ಬರುವ ಬೇರೆ ಬೇರೆ ಸಂದರ್ಭಗಳಿಂದ ನಮಗೆ ತಿಳಿದು ಬರುತ್ತದೆ. ಪೊಳಲಿ ಶೀನಪ್ಪ ಹೆಗ್ಗಡೆಯವರ ಪಠ್ಯ ಮಾತ್ರ ಸಿರಿಗೆ ಪಟ್ಟವಾದುದರ ಬಗೆಗೆ ತಿಳಿಸಿ ಸತ್ಯನಾಪುರದ ಅಜ್ಜನವರು ತೀರಿಕೊಂಡಾಗ ಊರಿನ ಗುತ್ತಿನವರು ಸಿರಿಯನ್ನು ಕುರಿತು ಅಜ್ಜನವರ ಹೆಣವನ್ನು ತೆಗೆಯಬೇಕಲ್ಲ. ಆದರೆ ನಿನ್ನ ಗಂಡ ಇನ್ನೂ ಬಂದಿಲ್ಲ ಎನ್ನಲು ಸಿರಿ "ಅಜ್ಜನವರ ಹೆಣವನ್ನು ನಾನು ಹೊರುತ್ತೇನೆ. ಬಾಕಿ ಕೆಲಸ ನೀವು ಮಾಡಿರಿ" ಎಂದು ತಿಳಿಸುತ್ತಾಳೆ. ಅದರಂತೆ ಕೆಲಸದ ಹೆಣ್ಣು ದಾರುವನ್ನು ಕರೆದು ಹೆಣದ ಮೀಹ ನಡೆಸಿ ಗಂಧಾಕ್ಷತೆ ಪೂಸಿ ಸರ್ವಾಭರಣಗಳಿಂದ ಹೆಣವನ್ನು ಸಿಂಗರಿಸಿ ಗದ್ದಿಗೆಯಲ್ಲಿ ಕುಳ್ಳಿರಿಸಲು ಊರ ಗುತ್ತಿನವರು ಅಜ್ಜನವರ ಬೆರಳಿನಿಂದ ಪಟ್ಟದುಂಗುರವನ್ನು ತೆಗೆದು ಸಿರಿಯ ಕೈಯಲ್ಲಿ ಕೊಟ್ಟು 'ಅಕ್ಕೆರಸು ಪೂಂಜೆದಿಯಾಗಿ ಬಾಳು' ಎಂದು ಹೇಳುವ ವಿವರಗಳಿವೆ. ಹೀಗಾಗಿ ಸಿರಿಗೆ ಅಜ್ಜನವರ ಪಟ್ಟ ದೊರೆತ ಅನಂತರ ಅವಳು 'ಅಕ್ಕೆರಸು ಪೂಂಜೆದಿ'ಯಾಗುತ್ತಾಳೆ (ಪುಟ 312). ಈ ವಿವರಗಳು ಬೇರೆ ಯಾವುದೇ ಪಠ್ಯದಲ್ಲಿ ದೊರೆಯುವುದಿಲ್ಲ.

ಅಜ್ಜನವರ ಮರಣಾನಂತರ ಅಜ್ಜನವರ ಪಟ್ಟವನ್ನು ನನಗೆ ಕಟ್ಟಿ ಪಟ್ಟದುಂಗುರವನ್ನು ನನಗೆ ತೊಡಿಸಿ ಎಂಬುದಾಗಿ ಸಿರಿ ಸೇರಿದ ಕೂಟದ ಕಳದಲ್ಲಿ ಹೇಳುವ ವಿವರಗಳು

ಶ್ಯಾಮರಾಯ ಶೆಟ್ಟಿ, ಗೋಪಾಲ ನಾಯ್ಕ, ಲೀಲಾ ಅವರ ಪಠ್ಯಗಳಲ್ಲಿ ದೊರೆಯುತ್ತವೆ. "ಹೆಣ್ಣುಹೆಂಗಸಿಗೆ ನಾವು ಪಟ್ಟಕಟ್ಟಿ ಪಟ್ಟದುಂಗುರ ತೊಡಿಸಲಾರೆವು, ಪಾದಕಾಣಿಗೆ ಇಡಲಾರೆವು" ಎಂದು ಪಂಚಾಯತಿಯವರು ತಿಳಿಸಲು ಸಹಜವಾಗಿಯೇ ಸಿರಿ "ನನ್ನ ಮಗ ಕುಮಾರನಿಗೆ ಪಟ್ಟಕಟ್ಟಿ ಪಟ್ಟದುಂಗುರ ತೊಡಿಸಿ" ಎನುತ್ತಾಳೆ. ಆಗ ಕೂಟದವರು "ಹೂವಿನಂಥ ಮಗುವಿಗೆ ಬೆಂಕಿಯಂಥ ಪಟ್ಟ, ರಕ್ತದ ಗಟ್ಟಿಗೆ ಪಟ್ಟ ಕೊಡಲಾರೆವು" ಎನ್ನುತ್ತಾರೆ. "ಹಾಗಾದರೆ ನನ್ನ ಮಗ ಪ್ರಾಯಕ್ಕೆ ಬರುವವರೆಗೆ ಅಜ್ಜನವರ ಪಟ್ಟದ ಕತ್ತಿ, ಪಟ್ಟದುಂಗುರವನ್ನು ಅಜ್ಜನವರು ಕುಳಿತ ಪಟ್ಟದಲ್ಲಿಯೇ ಇಟ್ಟು ಅಜ್ಜನವರ ಹೆಸರಲ್ಲಿ ನಾನೇ ಆಳ್ವಿಕೆ ನಡೆಸುತ್ತೇನೆ" ಎನ್ನುತ್ತಾಳೆ. ಇದಕ್ಕೂ ಕೂಟದ ಮಂದಿ ಒಪ್ಪದೆ "ನಮಗೆ ಹೆಣ್ಣು ಹೆಂಗಸರ ಆಳ್ವಿಕೆ ಇರಬಾರದು. ಪಟ್ಟದಲ್ಲಿ ನಮ್ಮಂತೆ ಮೀಸೆ ಇರುವ ಗಂಡಸರು ಬೇಕು" ಎಂದು ತಿಳಿಸುತ್ತಾರೆ. ಈ ಮೇಲಿನ ಎಲ್ಲ ಅಂಶಗಳನ್ನು ನೋಡುವಾಗ ಸಿರಿಗೆ ಸ್ವತಃ ಸತ್ಯನಾಪುರದಲ್ಲಿ ಕುಳಿತು ಅಜ್ಜನವರ ಪಟ್ಟವಾಳುವ ಬಯಕೆ ಸಹಜವಾಗಿ ಇತ್ತು. ಅದನ್ನೇ ಅವಳು ಕೂಟದವರ ಮುಂದೆ ನಿವೇದಿಸಿಕೊಂಡಿದ್ದಳು. ಎಷ್ಟು ಮಾತ್ರಕ್ಕೂ ತನಗೆ ಆ ಪಟ್ಟ ದೊರೆಯುವುದಿಲ್ಲ ಎಂದು ಖಚಿತವಾದಾಗ ತನಗೆ ಹಾಗೂ ತನ್ನ ಮಗನಿಗೆ ದೊರೆಯದ ಪಟ್ಟದಲ್ಲಿ ಬೇರೆಯವರು ಕೂತು ಆಳ್ವಿಕೆ ನಡೆಸಬಾರದು. ಮಾತ್ರವಲ್ಲ ತನ್ನ ಕಷ್ಟಕಾಲದಲ್ಲಿ ನೆರವಿಗೆ ಬಾರದ ತನ್ನ ಪತಿ ಹಾಗೂ ಸತ್ಯನಾಪುರದರಮನೆಗೆ ಕೇಡು ಬಗೆದ ಸೂಡದಣ್ಣುಸೆಟ್ಟಿ ಮಗ ಸಂಕರಾಳ್ವ ಇವರಿಗೆ ಸತ್ಯನಾಪುರದ ಆಡಳಿತ ಸಿಗಬಾರದೆಂದು ಇಡೀ ಸತ್ಯನಾಪುರದರಮನೆಯನ್ನೇ ತನ್ನ ಶಾಪದಿಂದ ಸುಟ್ಟು ಭಸ್ಮ ಮಾಡುತ್ತಾಳೆ.

ಇಂಥ ವಿಶೇಷವಾದ ಅಲೌಕಿಕ ಶಕ್ತಿ ಇರುವ ಸಿರಿ ತನ್ನ ಬದುಕಿನುದ್ದಕ್ಕೂ ಅನೇಕ ಪವಾಡಗಳನ್ನು ತೋರಿಸುತ್ತಾಳೆ. ತನ್ನ ಸೀಮಂತಕ್ಕೆ ತೆಗೆದ ಸೀರೆಯನ್ನು ಸೂಳೆ ಸಿದ್ದು ಉಟ್ಟಿರುವ ವಿಚಾರವನ್ನು ಸ್ವಪ್ನದಲ್ಲಿ ಬೆರ್ಮೆರ್ ದೇವರು ಬಂದು ಸಿರಿಗೆ ತಿಳಿಸುತ್ತಾರೆ. ಆದುದರಿಂದ ಸೂಳೆಯುಟ್ಟ ಸೀರೆಯನ್ನು ಸೀಮಂತದ ಸಂದರ್ಭದಲ್ಲಿ ಕೂಡಿದ ಸಭೆಯ ಮುಂದೆ ಸಿರಿ ನಿರಾಕರಿಸುತ್ತಾಳೆ. ಇದರಿಂದ ಅವಮಾನಿತನಾದ ಗಂಡ ಕಾಂತುಪೂಂಜ ಸಿರಿ ಸೀಮಂತದ ಕಾರ್ಯ ಮುಗಿಸಿ ಸತ್ಯನಾಪುರಕ್ಕೆ ಹೊರಡುವ ಸಂದರ್ಭದಲ್ಲಿ ಆತನ ಪಾದಕ್ಕೆ ನಮಸ್ಕರಿಸಲು ಹೋದಾಗ ಅವಕಾಶ ನೀಡದೆ ಎದ್ದು ಅರಮನೆಯ ಏಳುಮಾಳಿಗೆಯ ಮೇಲೆ ಹೋಗುತ್ತಾನೆ. ಸಹಜವಾಗಿ ಇದು ಸಿರಿಯ ಸಿಟ್ಟಿಗೆ ಕಾರಣವಾಗುತ್ತದೆ. ಸತ್ಯನಾಪುರಕ್ಕೆ ದಂಡಿಗೆ(ಪಲ್ಲಕ್ಕಿ) ಸಿದ್ಧಪಡಿಸಿ ಹೊರಡಲು ತಯಾರಾದಾಗಲೂ ಕಾಂತುಪೂಂಜ ಬಾರದಿದ್ದುದನ್ನು ಕಂಡ ಸಿರಿ'ದಂಡಿಗೆಯನ್ನು ಹೇಗೆ ಕಲ್ಲು ಮಾಡಿದೆನೋ ಅದೇ ರೀತಿ ನಿಮ್ಮನ್ನೂ ಕಲ್ಲು ಮಾಡಿಯೇನು. ಕೈ ಹಿಡಿದ ಗಂಡ ಎಂಬುದನ್ನೂ ನೋಡಲಾರೆ. ಮುಖದಲ್ಲಿ ಮೀಸೆಯಿರುವ ಗಂಡಸು ನೀವಾದರೆ ಎದೆಯಲ್ಲಿ ಮೊಲೆಯಿರುವ ಹೆಂಗಸು ನಾನೂ ಕೂಡಾ' (ಶ್ಯಾಮರಾಯ ಶೆಟ್ಟಿ ಪಠ್ಯ) ಎಂಬ ಕಟುವಾದ ಮಾತುಗಳನ್ನಾಡಲು ಕಾಂತುಪೂಂಜ ಹೆದರಿ ಓಡಿ ಬಂದು ದಂಡಿಗೆಗೆ

ಕೈ ಕೊಡುತ್ತಾನೆ. ದಂಡಿಗೆ ಏಳುತ್ತದೆ. ಸಿರಿ ಸತ್ಯನಾಪುರಕ್ಕೆ ಹೊರಡುತ್ತಾಳೆ. ಹೊರಡುವಾಗ ಗಂಡ ಕಾಂತುಪೂಂಜನನ್ನು ಕುರಿತು "ನೀವು ಸತ್ಯನಾಪುರಕ್ಕೆ ಬಂದರೆ ಮಾತ್ರ ನಾನು ಬಸಲೂರಿಗೆ ಮಗು ಹಿಡಿದುಕೊಂಡು ಬಂದೇನು; ಇಲ್ಲದಿದ್ದರೆ ನೀವು ಗಂಡನೂ ಅಲ್ಲ, ನಾನು ನಿಮ್ಮ ಹೆಂಡತಿಯೂ ಅಲ್ಲ" ಎಂಬ ಮಾತನ್ನೂ ಸಿರಿ ಹೇಳುತ್ತಾಳೆ. ಹೀಗಾಗಿ ಸಿರಿಗೆ ಅನ್ಯಾಯ ಮಾಡಿದವರನ್ನು ಶಪಿಸುವ, ಮಾಯಮಾಡುವಂಥ ವಿಶೇಷ ಶಕ್ತಿಯನ್ನು ಪಡೆದುಕೊಂಡಿದ್ದಾಳೆ. ಇದು ಆಕೆಯ ಅಲೌಕಿಕ ರೀತಿಯ ಹುಟ್ಟಿನಿಂದಾಗಿ ಎಂಬುದನ್ನು ತಿಳಿಯಬಹುದು.

ಸಿರಿಗೆ ಹೆರಿಗೆ ಆದಾಗ ಸತ್ಯನಾಪುರದಿಂದ ಅಜ್ಜನವರು ಹೇಳಿ ಕಳುಹಿಸಿದರೂ ಗಂಡ ಕಾಂತುಪೂಂಜ ಬರುವುದಿಲ್ಲ. ಅಜ್ಜನವರ ಸಾವು ಸಂಭವಿಸಿದಾಗ ಕೂಡ ಸಿರಿ ಮೂರು ಓಲೆಗಳನ್ನು ಕಳುಹಿಸಿದರೂ ಗಂಡ ಬಾರದಿರುವುದನ್ನು ಕಂಡು ಅಜ್ಜನವರಂತೆ ಗಂಡನೂ ಸತ್ತಿದ್ದಾನೆಂದು ತಿಳಿದು ತಾನೊಬ್ಬಳೇ ಅಜ್ಜನವರ ಹೆಣವನ್ನು ಹೊತ್ತು ಶವಸಂಸ್ಕಾರ ಮಾಡುತ್ತಾಳೆ. ಅಜ್ಜನವರ ಶವಸಂಸ್ಕಾರ ಮುಗಿಸಿ ಬಾಕಿಮಾರು ಗದ್ದೆಯಿಂದ ಕಾಲು ಮೇಲಿಡಬೇಕಾದರೆ ಕಾಂತುಪೂಂಜ ಸೂಡದಣ್ಣುಸೆಟ್ಟಿ ಮಗ ಸಂಕರಾಳ್ವನ ಜೊತೆ ಸೇರಿ ಮೋಸದ ಪಂಚಾಯತಿಯನ್ನು ಏರ್ಪಡಿಸಿ ಸಿರಿಯನ್ನು ಸತ್ಯನಾಪುರದ ಒಳಗಿನ ಅಧಿಕಾರಕ್ಕೆ ಮಾತ್ರ ಸೀಮಿತಗೊಳಿಸಿ ಹೊರಗಿನ ಅಧಿಕಾರವನ್ನು ಸೂಡದಣ್ಣುಸೆಟ್ಟಿ ಮಗ ಸಂಕರಾಳ್ವನಿಗೆ (ಕೆಲವು ಪಠ್ಯಗಳಲ್ಲಿ ಕಾಂತುಪೂಂಜನಿಗೆ) ನೀಡಬೇಕೆಂದು ಪಂಚಾಯತಿಯವರ ಮೂಲಕ ಹೇಳಿಸಿದಾಗ ಸಿರಿ ಸಿಟ್ಟುಗೊಂಡು 'ಸತ್ಯನಾಪುರದಲ್ಲಿ ಒಂದೇ ಪಾತ್ರೆಯಲ್ಲಿ ಎರಡು ನಾಯಿಗಳು ಅನ್ನ ತಿನ್ನಲು ಬಿಡಲಾರೆ' ಎನ್ನುತ್ತಾ ಇಡೀ ಪಂಚಾಯತಿಯ ಕೂಟವನ್ನೇ ಕಲ್ಲು ಮಾಡಿಬಿಡುತ್ತೇನೆ ಎಂದು ಕಲ್ಲು ತೆಗೆದು ಮೇಲೆ ಎತ್ತಲು ಪಂಚಾಯತಿಯಕೂಟದಲ್ಲಿ ಸೇರಿದ ಮಂದಿ ಆಕೆಯನ್ನು ಸಮಾಧಾನಿಸುವ ವಿವರ ಗಿಡಿಕೆರೆಯವರ ಪಠ್ಯದಲ್ಲಿದೆ. ಮುಂದೆ ಪಂಚಾಯತಿಯ ಕೂಟ ಇಳಿದು ಬಂದು ಸತ್ಯನಾಪುರದ ಅರಮನೆಯನ್ನು ಸುಟ್ಟುಭಸ್ಮ (ಸುಡುಸೂಕರಿ)ವಾಗುವಂತೆ ಶಪಿಸಿ ಮಗ ಕುಮಾರನ ತೊಟ್ಟಿಲನ್ನು ದಾರುವಿನಲ್ಲಿ ಹೊರಿಸಿಕೊಂಡು ಬಸಲೂರ ಅರಮನೆಗೆ ಬಂದು ಕಾಂತುಪೂಂಜನಿಗೆ 'ಬರ' ಅಥವಾ ವಿಚ್ಛೇದನ (ಆರ್ಯಬನ್ನಾಯ ಬಳಿ, ಪುತ್ರ ಬನ್ನಾಯ ಹಿಡಿಸೆರಗು ಕೆಲವು ಪಠ್ಯಗಳಲ್ಲಿ 'ಸೆರ' ಬದಲಿಸಿ) ನೀಡಿ ದೇಶಾಂತರ ಹೊರಡುತ್ತಾಳೆ. ಹೊರಡುವಾಗ ಬಸಲೂರ ಅರಮನೆಯನ್ನೂ ಶಪಿಸಿ ಗಂಡ ಕಾಂತುಪೂಂಜನನ್ನು ಕುರಿತು "ಇನ್ನು ಮುಂದಕ್ಕೆ ನಾನು ನೀನು ಭೇಟಿಯಾಗ ಬೇಕಾದರೆ ನೀನು ಕುತ್ತಿಗೆಗೆ ಬೆಳ್ಳಿಯ ನೇಗಿಲು, ಭುಜದಲ್ಲಿ ನೊಗ ಹೊತ್ತುಕೊಂಡು, ಕಾಲಿಗೆ ಬಿಳಿಯ ಬಟ್ಟೆ ಸುತ್ತಿ ಬಗಲಲ್ಲಿ ಜೋಳಿಗೆ ಹಾಕಿಕೊಂಡು ಭಿಕ್ಷೆ ಬೇಡುತ್ತಾ ನನ್ನ ಬಳಿ ಬಂದರೆ ಮಾತ್ರ ಒದ್ದೆ ಕೈಯಲ್ಲಿ ಹಿಡಿ ಭಿಕ್ಷೆ ನೀಡುವೆನು" ಎಂಬುದಾಗಿ ಶಪಿಸುತ್ತಾಳೆ. ಸಿರಿಯ ಈ ಮಾತು ಫಲಿಸಿ ಕಾಂತುಪೂಂಜನಿಗೆ ಬಲುಬಡತನ ಬಂದೊದಗಿ ಸಿರಿ ಹೇಳಿದಂತೆ ಕುತ್ತಿಗೆಗೆ ನೇಗಿಲು, ಭುಜದಲ್ಲಿ ನೊಗ ಹೊತ್ತುಕೊಂಡು

ಭಿಕ್ಷೆ ಬೇಡುತ್ತಾ ಊರೂರು ಸುತ್ತಿದರೂ ಒಂದು ಹಿಡಿ ಭಿಕ್ಷೆಯೂ ದೊರೆಯದೆ ಕೊನೆಗೆ ಸಿರಿಯಲ್ಲಿಗೇ ಬರುವ ವಿವರಗಳಿವೆ. ಸಿರಿಯ ಎರಡನೇ ಗಂಡ ಕೊಡ್ಸರಾಳ್ವರಿಗೆ ಕಾಂತುಪೂಂಜನ ಈ ದಯನೀಯ ಸ್ಥಿತಿ ಕಂಡು ಮರುಗಿ 'ನೀವೂ ಒಬ್ಬ ಗುತ್ತಿನ ಬಂಟ, ನಾನೂ ಒಬ್ಬ ಗುತ್ತಿನವ, ಆದರೂ ನೀವೂ ಕುತ್ತಿಗೆಗೆ ನೇಗಿಲು ನೊಗ ಕಟ್ಟಿ ಭಿಕ್ಷೆ ಬೇಡುವುದನ್ನು ನೋಡಲಾರೆ' ಎನ್ನುತ್ತಾ ಅದನ್ನು ತೆಗೆದೆಸೆದು ಕಾಂತುಪೂಂಜನನ್ನು ಕೊಟ್ರಾಡಿ ಅರಮನೆಗೆ ಕರೆದುಕೊಂಡು ಬಂದು ಉಪಚರಿಸಿ ಸಿರಿಯಿಂದ ಶಾಪ ವಿಮೋಚನೆಗೊಳಿಸುವ ವಿವರಗಳಿವೆ. ಹೀಗಾಗಿ ಸಿರಿಯ ಶಾಪ ತನ್ನ ಗಂಡನಾದ ಕಾಂತುಪೂಂಜನಿಗೇ ಫಲಿಸಿ ಆತನೇ "ಸಿರಿಯ ಸತ್ಯ ಮೆರೆಯಿತು, ನನ್ನ ಅಧರ್ಮ ಹೆಚ್ಚಾಯಿತು" ಎಂದು ಹೇಳುತ್ತಾನೆ.

ಸಿರಿ ಬಸಲೂರಿಂದ ಹೊರಟು ಮಗ ಕುಮಾರನ ತೊಟ್ಟಿಲನ್ನು ದಾರುವಿನಲ್ಲಿ ಹೊರಿಸಿಕೊಂಡು ಬೋಲದ ಕಾಡಿಗೆ ಹೋಗುತ್ತಾಳೆ. ಅಲ್ಲಿ ಕರಿಯಕಾಸಿಂಗ ಬೊಲಿಯ ದೇಸಿಂಗರಸರ ಪರಿಚಯವಾಗುತ್ತದೆ. ಸಿರಿ ತನ್ನ ಅಲೌಕಿಕ ಜನನದ ಬಗೆಗೆ ತಿಳಿಸಿದಾಗ ಕಾಸಿಂಗರಸರೂ ತಮ್ಮ ಅಲೌಕಿಕ ಜನನದ ಬಗೆಗೆ ತಿಳಿಸಿ ಬೋಲಮಲ್ಲಿಗೆಗೆ ಬರುವಂತೆ ಸಿರಿಯನ್ನು ಕರೆಯುತ್ತಾರೆ. ಸಿರಿ "ತನ್ನನ್ನು ಕರೆದುಕೊಂಡು ಹೋಗುವ ರೀತಿಯಲ್ಲಿ ಕರೆದರೆ ಬರುವೆನು. ಇಲ್ಲದಿದ್ದರೆ ಬರಲಾರೆ ಎನ್ನುತ್ತಾಳೆ ಮಾತ್ರವಲ್ಲ ಹಾಗೆ ಬಂದರೆ ಬೇಟೆಗೆ ಹೋದವರು ಹೆಣ್ಣು ತಂದಿದ್ದಾರೆ ಎಂಬ ಅಪವಾದದ ಮಾತು ನಾಳೆ ಬಂದೀತು" ಎನ್ನುತ್ತಾಳೆ. ಹೀಗಾಗಿ ಕಾಸಿಂಗರಸರು ಬೋಲಮಲ್ಲಿಗೆಗೆ ಬಂದು ಪಲ್ಲಕ್ಕಿಯ ಜೊತೆಗೆ ಸಕಲಬಿರುದಾವಳಿಗಳೊಂದಿಗೆ ಬಂದು ಸಿರಿಯನ್ನು ಕರೆಯುತ್ತಾರೆ. ಆಗ ಸಿರಿ ಕುಮಾರನನನ್ನು ಬೋಲಮಲ್ಲಿಗೆಗೆ ಕರೆಯಲು ಆತ "ನಾನು ಬರಲಾರೆ. ನನ್ನನ್ನು ಬೋಲದ ಕಾಡಿನಲ್ಲಿ ಮಾಯಮಾಡಿಬಿಡಿ" ಎನ್ನುತ್ತಾನೆ. ಅಂತೆಯೇ ಸಿರಿ ಕುಮಾರನನ್ನು ಮಾಯ ಮಾಡುತ್ತಾಳೆ. ದಾರುವೂ ಸಿರಿಯ ಜೊತೆ ಬರಲು ಒಪ್ಪದಿದ್ದಾಗ ತನ್ನ ಜೊತೆಗೆ ಬೆವರು ಬಿದ್ದಲ್ಲಿ ನೆತ್ತರು ಹರಿಸಲು ತಯಾರಾಗಿದ್ದ, ತನ್ನ ಬದುಕಿನುದ್ದಕ್ಕೂ ಎಲ್ಲ ಕಷ್ಟ ಸುಖಗಳಲ್ಲಿ ತನಗೆ ನೆರಳಾಗಿದ್ದ ದಾರುವನ್ನೂ ಮಾಯ ಮಾಡುತ್ತಾಳೆ.

ಸತ್ಯನಾಪುರದ ಅಜ್ಜನವರು ಮಗುವಿನ ಜನನದ ಸಂದರ್ಭದಲ್ಲಿ ಹೇಳಿದ್ದ ಹರಕೆ ತೀರಿಸಲು ಲಂಕೆಲೋಕನಾಡಿಗೆ ಹೋದಾಗ ಅಲ್ಲಿಯ ಪೂಜೆಯ ಬ್ರಾಹ್ಮಣ "ಇಂದಿನ ಪೂಜೆ ಕಳೆಯಿತು. ನಾಳೆ ಬನ್ನಿ" ಎನ್ನಲು ಸಿರಿ ತನ್ನ ಶಕ್ತಿಯಿಂದಲೇ ಗರ್ಭಗುಡಿಯನ್ನು ತೆರೆಸಿ ಮಗುವಿನ ಹರಕೆ ತೀರಿಸುತ್ತಾಳೆ. ಕಾಂತುಪೂಂಜನಿಗೆ 'ಬರ' (ವಿಚ್ಛೇದನ) ಹೇಳಿ ಮಡಿವಾಳರು ಬಟ್ಟೆ ಒಗೆಯುವ ಮಾಪು ಕರಿಯ ಹೊಳೆ ದಾಟಿಸಲು ದೋಣಿಯ ಕುಂಞನನ್ನು ಕೇಳಿದಾಗ ಆತ ದೋಣಿ ಬಿಡಲು ಒಪ್ಪುವುದಿಲ್ಲ. ಕೊನೆಗೆ ಸಿರಿ ತನ್ನ ಮಹಿಮಾಶಕ್ತಿಯಿಂದ ಬಾಳೆಯ ಎಲೆಯಲ್ಲಿ ಕುಳಿತು ಹೊಳೆ ದಾಟುತ್ತಾಳೆ. ದೇಶಾಂತರ ಹೋಗುವಾಗ ಕೊಂತ್ಯಮ್ಮ ದೇವಿಯ ಮಗನಾದ ಈರಭದ್ರ ಕುಮಾರ ತನ್ನ ಮಾನಭಂಗ ಮಾಡಲು ಬಂದಾಗ ಅವನನ್ನು ಕಲ್ಲಾಗುವಂತೆ ಶಪಿಸುತ್ತಾಳೆ.

ಅಲಿಕುಂಜ ಪಿಲಿಕುಂಜ ಕಾಡಿನಲ್ಲಿ ಸೊನ್ನೆಯನ್ನು ಹೆತ್ತು ತನ್ನ ಕೈಯಲ್ಲಿರುವ ಅಡಿಕೆಯನ್ನು ನೆಟ್ಟು ಸತ್ಯದಿಂದ ಮರವಾಗಿ ನಿರ್ಮಿಸಿ ಅದರ ಹಾಳೆಯಲ್ಲಿ ಮಗುವನ್ನು ಮಲಗಿಸಿ ಬಹುದೊಡ್ಡ ಪ್ರವಾಹವನ್ನು ಸೃಷ್ಟಿಸಿ ಅದರಲ್ಲಿ ಮಗುವನ್ನು ತೇಲಿಬಿಟ್ಟು ಕಾನಬೆಟ್ಟು ಅಜ್ಜನವರಿಗೆ ಸಿಗುವಂತೆ ಹೇಳುತ್ತಾಳೆ. ಕೊನೆಗೆ ತಾನು ಮಾಯವಾಗಿ ಕುಮಾರನ ಬಲಭಾಗದಲ್ಲಿ ಬೊಲ್ಯೊಟ್ಟಿನಲ್ಲಿ ನೆಲೆಗೊಳ್ಳುತ್ತಾಳೆ.

ಇಂಥ ಅತಿಮಾನುಷ ಶಕ್ತಿಯಿರುವ, ಪವಾಡಗಳನ್ನು ಸೃಷ್ಟಿಸಬಲ್ಲಂಥ ಸಿರಿ ಗಂಡ ಕಾಂತುಪೂಂಜ ಹಾಗು ಸೂಡದಣ್ಣು ಶೆಟ್ಟಿಮಗ ಸಂಕರಾಳ್ವನ ಮೋಸದ ಪಂಚಾಯತಿಗೆ ಬೇಸತ್ತು ಸತ್ಯನಾಪುರದ ಅರಮನೆಯನ್ನು ಉಳಿಸಿಕೊಳ್ಳದೆ ಸುಟ್ಟು ಭಸ್ಮಮಾಡುತ್ತಾಳೆ. ಹಾಗೆ ನೋಡಿದರೆ ಕಾಂತುಪೂಂಜನಿಗೆ ಮೋಸದ ಕೂಟದ ಕಳವನ್ನು ಏರ್ಪಡಿಸಿ ಹೊರಗಿನ ಅಧಿಕಾರ ತನಗೆ (ಕೆಲವು ಪಠ್ಯಗಳಲ್ಲಿ ಸಂಕರಾಳ್ವನಿಗೆ) ಒಳಗಿನ ಅಧಿಕಾರ ಸಿರಿಗೆ ಎಂದು ಪಂಚಾಯತಿಯವರಲ್ಲಿ ಹೇಳಿಸುವ ಅಗತ್ಯವೇ ಇರಲಿಲ್ಲ. ಅಜ್ಜನವರು ಸಿರಿಯನ್ನು ಕಾಂತುಪೂಂಜನಿಗೆ ಮದುವೆ ಪ್ರಸ್ತಾವ ಮಾಡುವಾಗಲೇ

ಇಂದು ನಾನು ಹೆಣ್ಣು ಕೊಡೆನು ಸಂಬಂಧ ಹಿಡಿಯೆನು
ನಾನು ತಪ್ಪಿದ ಕಾಲಕ್ಕೆ ಸತ್ಯನಾಪುರದ ಅರಮನೆಗೆ ಗಂಡುಬಲ ಇಲ್ಲದಾಗಿದೆ
ನನ್ನ ಸತ್ಯನಾಪುರದ ಪಟ್ಟ ಆಳಬೇಕು ನನ್ನ ಪಟ್ಟದುಂಗುರ ಇಡಬೇಕು
ನನ್ನ ಸತ್ಯನಾಪುರದ ಅರಮನೆಯ ಪಟ್ಟ ಆಳುವಂಥ ಬಂಟ ಬರಬೇಕು ಎಂದು ಅಜ್ಜನವರು ಹೇಳಿದ್ದರು (ರಾಮಕ್ಕ ಮುಗ್ಗೇರ್ತಿ, ಪುಟ 27–28).

ಸತ್ಯನಾಪುರದ ಅರಮನೆಯ ಆಡಳಿತವನ್ನು ಸಮರ್ಥವಾಗಿ ನಡೆಸಬಲ್ಲಂಥ ಬಂಟನಿಗೆ ಮಾತ್ರ ನಾನು ಸಂಬಂಧ ಕೊಡುವುದೆಂದು ಸಂಕರುಪೂಂಜೆದಿಗೆ ತಿಳಿಸಲು ಆಕೆ "ನೀವು ತಪ್ಪಿದ ಕಾಲಕ್ಕೆ ಕಾಂತಾಳ್ವನೇ ಸತ್ಯನಾಪುರ ಆಳುತ್ತಾನೆ. ಪಟ್ಟದುಂಗುರ ಅವನಿಗೆ ಇಡಿ. ಪಟ್ಟ ಆಳುತ್ತಿರುತ್ತಾನೆ" ಎನ್ನಲು ಅಜ್ಜನವರು "ನೀನು ಕೇಳುವುದು ದೊಡ್ಡದಲ್ಲ, ನನ್ನ ಮಾತು ದೊಡ್ಡದಲ್ಲ. ಹೆಣ್ಣು ಕೊಡುತ್ತೇನೆ, ಸಂಬಂಧ ಹಿಡಿಯುತ್ತೇನೆ" ಎಂದು ಹೇಳಿ ಸಿರಿಯ ಬಳಿಯನ್ನು ತಿಳಿಸಿ ಮದುವೆಗೆ ಒಪ್ಪಿಗೆ ನೀಡುತ್ತಾರೆ. ಹೀಗಾಗಿ ಹೆಣ್ಣನ್ನೂ ಮಣ್ಣನ್ನೂ ಧಾರೆಯೆರೆದು ಕೊಟ್ಟ ಅನಂತರ ಕಾಂತುಪೂಂಜನೇ ಸಹಜವಾಗಿ ಸತ್ಯನಾಪುರದ ಅರಮನೆಗೆ ಅಜ್ಜನವರು ಕಾಲವಾದ ಅನಂತರ ಯಜಮಾನನಾಗುತ್ತಾನೆ. ಇದಕ್ಕೆ ಮೋಸದ ಪಂಚಾಯತಿ ಬೇಕಾಗಿರಲಿಲ್ಲ, ಆದರೆ ಕಾಂತುಪೂಂಜನ ಸೂಳೆಸಿದ್ದುವಿನ ಜೊತೆಗಿನ ಸಂಬಂಧ ಹಾಗು ಸೀಮಂತದ ಅನಂತರ ಕಾಂತುಪೂಂಜ ಹಾಗು ಸಿರಿಯ ನಡುವೆ ಉಂಟಾದ ಭಿನ್ನಾಭಿಪ್ರಾಯಗಳು, ಸಿರಿಯ ಹೆರಿಗೆ ಹಾಗು ಅಜ್ಜನವರ ಮರಣದಂಥ ಕಷ್ಟಕಾಲದಲ್ಲೂ ಕಾಂತುಪೂಂಜ ಸಿರಿಯ ಜೊತೆ ನಿಲ್ಲದಿರುವುದು ಸಹಜವಾಗಿ ಸಿರಿಯ ಸಿಟ್ಟಿಗೆ ಕಾರಣವಾಗಿದೆ. ತುಳುವಿನಲ್ಲಿ ಒಂದು ಗಾದೆಯ ಮಾತಿದೆ: 'ಕುಲ್ಲುದು ಮಾರುನೆನ್

ತುಂಬುದು ಮಾರ್ಯೆ' (ಕುಳಿತು ಮಾರುವುದನ್ನು ಹೊತ್ತು ಮಾರಿದ) ಎಂದು ಅರ್ಥ. ಸುಲಭದಲ್ಲಿ ಸತ್ಯನಾಪುರದ ಅಧಿಕಾರವನ್ನು ಪಡೆಯಬೇಕಾಗಿದ್ದ ಕಾಂತುಪೂಂಜ ತನ್ನ ಸಹಜ ತಪ್ಪುಗಳಿಂದಾಗಿ ಈ ರೀತಿಯ ವಾಮಮಾರ್ಗಗಳನ್ನು ಹಿಡಿಯಬೇಕಾಗಿ ಬಂದದ್ದು ಕಾಂತುಪೂಂಜನ ದುರಂತವಲ್ಲದೆ ಬೇರೇನಲ್ಲ.

ತನಗೇ ಸತ್ಯನಾಪುರದರಮನೆಯ ಪಟ್ಟಕಟ್ಟಿ ಎಂದು ಹೇಳುತ್ತಿದ್ದ ಸಿರಿ ಪಂಚಾಯತಿಯ ಕೂಟಕ್ಕೆ ಹೋಗುವಾಗ ಅಜ್ಜನವರು ಹಿಡಿಯುತ್ತಿದ್ದ ಚಂದ್ರಾಯುಧವನ್ನು ಹಿಡಿದುಕೊಂಡು ಹೋಗಿ ಕೂಟದವರ ಮುಂದೆ ಮೂರು ಕಾಲಿನ ಮರದ ಕುರ್ಚಿಯ ರೀತಿಯ 'ಮುಕ್ಕಲಿಗೆ'ಯಲ್ಲಿ ಇಡುವುದನ್ನು ಲೀಲಾ ಅವರ ಪಠ್ಯ ತಿಳಿಸುತ್ತದೆ. ಇದು ಅಜ್ಜನವರ ಪಟ್ಟದ ಅಧಿಕಾರ ಇನ್ನೂ ನನ್ನಲ್ಲಿಯೇ ಇದೆ ಎಂಬುದನ್ನು ಪಂಚಾಯತಿಯವರಿಗೆ ಹಾಗೂ ಅದನ್ನು ಮೋಸದಿಂದ ಏರ್ಪಡಿಸಿದ ತನ್ನ ಗಂಡ ಹಾಗು ಸಂಕರಾಳ್ವನಿಗೆ ತಿಳಿಸುವುದು ಒಂದಾದರೆ ತನ್ನ ಗಂಡ ಹಾಗು ಸೂಡದಣ್ಣು ಸೆಟ್ಟಿ ಮಗ ಸಂಕರಾಳ್ವ ಜೊತೆಯಾಗಿ ಸೇರಿ ಕರೆದ ಮೋಸದ ಪಂಚಾಯತಿಯಾದುದರಿಂದ ಎದುರಾಗಬಹುದಾದ ಯಾವುದೇ ಅಪಾಯವನ್ನು ಸಮರ್ಥವಾಗಿ ಎದುರಿಸುವ ಉದ್ದೇಶ ಇನ್ನೊಂದಾಗಿರ ಬಹುದು. ಕೊನೆಗೂ ಪಂಚಾಯತಿಯವರ ತೀರ್ಮಾನವನ್ನು ವಿರೋಧಿಸಿದ ಸಿರಿ ಇಂಥ ಸಂದಿಗ್ಧ ಸಂದರ್ಭದಲ್ಲಿ ಸತ್ಯನಾಪುರದರಮನೆ ಬಿಡುವುದೇ ಲೇಸು ಎಂಬ ತೀರ್ಮಾನಕ್ಕೆ ಬಂದು ತನಗೆ ಅನುಭವಿಸಲಾಗದುದನ್ನು ವ್ಯಭಿಚಾರಿಯಾದ ಕಾಂತುಪೂಂಜ ಆ ಪಟ್ಟದಲ್ಲಿ ಕುಳಿತು ಅನುಭವಿಸಬಾರದು ಎಂಬ ಉದ್ದೇಶದಿಂದ ಇಡೀ ಸತ್ಯನಾಪುರದರಮನೆಯನ್ನೇ ಸುಟ್ಟುಭಸ್ಮಮಾಡುತ್ತಾಳೆ. ಇದು ಹೆಣ್ಣೊಬ್ಬಳ ಅತಿ ಆಕ್ರೋಶದ ಪ್ರತಿಕ್ರಿಯೆಯಲ್ಲದೆ ಬೇರೇನಲ್ಲ.

ಸಿರಿಗೆ ಸತ್ಯನಾಪುರದ ಅರಮನೆ ಇಳಿದು ಹೊಗುವ ಆಸೆ ನಿಜವಾಗಿಯೂ ಮನದಲ್ಲಿ ಇತ್ತೇ ಎಂಬ ಸಂದೇಹ ಕೆಲವು ಪಠ್ಯಗಳಲ್ಲಿ ಬರುವ ವಿವರಗಳಿಂದ ತಿಳಿಯುತ್ತದೆ. ವ್ಯಭಿಚಾರಿಯಾದ ತನ್ನ ಗಂಡನಿಗೆ ಬರ (ವಿಚ್ಛೇದನ) ಹೇಳಿ ಮರುಮದುವೆಯಾಗುವ ಬಯಕೆ ಸಿರಿಯಲ್ಲಿ ಇತ್ತು ಎಂಬುದನ್ನು ಶ್ಯಾಮರಾಯ ಶೆಟ್ಟಿಯವರ ಪಠ್ಯ ತಿಳಿಸುತ್ತದೆ. ಸಿರಿ ತನ್ನ ಗಂಡನಿಗೆ ಬರ (ವಿಚ್ಛೇದನ) ಹೇಳಿ ತನ್ನ ಸೊಂಟದ ಜೋಡಿ ನೇವಳ, ಕತ್ತಿನ ಕಿಲವಂದಿ, ಕೈಯ ಬಳೆ, ಅಂಗೈ ಸರಪಳಿ, ಮುಂಗೈ ಬಳೆ ಇತ್ಯಾದಿಯನ್ನು ತೆಗೆದು ಬಸಲೂರಿನ ಬೋದಿಗೆಯ ಕಂಬಕ್ಕೆ ಕಟ್ಟುತ್ತಾಳೆ. ಮೂಗಿನ ನತ್ತಿಗೆ ಕೈ ಕೊಡುವಾಗ ಅತ್ತೆ ಸಂಕರು ಪೂಂಜೆದಿ ಓಡಿ ಬಂದು "ಅದನ್ನು ತೆಗೆಯಬೇಡ ಸಿರಿ. ನನ್ನ ಮಗ ಜೀವಂತವಾಗಿರುವಾಗ ಆತ ಸತ್ತ ವಿಧಿಯನ್ನು ಮಾಡಬೇಡ" ಎನ್ನುತ್ತಾಳೆ. ಆಗ ಸಿರಿ ಈ ಮಾತನ್ನು ಹೇಳುತ್ತಾಳೆ.

ನಿನ್ನ ಮಗನನ್ನು ಗಂಡನಾಗಿ ಸ್ವೀಕರಿಸಲಾರೆ, ಮಗು ಹೆರಲಾರೆ, ತೊಟ್ಟಿಲು ಕಟ್ಟಲಾರೆ

ಗುತ್ತಿನ ಬಂಟನನ್ನು ಗಂಡನಾಗಿ ಪಡೆಯುವೆ, ಮಗು ಹೆರುವೆ, ತೊಟ್ಟಿಲು ಕಟ್ಟುವೆ

ಸಂಕರು ಪೂಂಜೆದಿ ನನ್ನನ್ನು ತಡೆಯಬೇಡ ಮುಟ್ಟಬೇಡ, ಮುಟ್ಟಿದರೆ ಭಸ್ಮವಾಗಿ ಹೋಗುವೆ (ಪುಟ 135) ಎಂಬ ಸಿರಿಯ ಈ ಮೇಲಿನ ಮಾತುಗಳನ್ನು ನೋಡಿದಾಗ ಸಿರಿ ಕಾಂತುಪೂಂಜನಿಗೆ ವಿಚ್ಛೇದನ ಹೇಳಿ ಎರಡನೇ ಮದುವೆಗೆ ಮೊದಲೇ ನಿರ್ಧರಿಸಿದ್ದಂತೆ ತೋರುತ್ತದೆ. ಹೀಗಾಗಿಯೇ ಸಿರಿ ಸತ್ಯನಾಪುರದ ಅರಮನೆ ಹಾಗೂ ಬಸಲೂರ ಅರಮನೆಯಿಂದ ಹೊರಹೋಗುವ ಗಟ್ಟಿ ನಿರ್ಧಾರವನ್ನು ಮಾಡಿದ್ದಳು. ತನ್ನ ಗಂಡ ಹಾಗು ಅತ್ತೆಯ ಜೊತೆಗಿನ ಸಂಬಂಧ ಮೊದಲೇ ಸರಿಯಿಲ್ಲದಿದ್ದದ್ದು ಸಿರಿಯ ಸೀಮಂತದ ಸಂದರ್ಭದ ಕೆಲವು ಘಟನೆಗಳಿಂದಲೇ ತಿಳಿಯುತ್ತದೆ. ಹೀಗೆ ತನಗೆ ವಿಚ್ಛೇದನ ನೀಡಿ ಹೋಗುವ ಸಿರಿಯ ಜೊತೆ ಆಕೆಗೆ ರಕ್ಷಕನಾಗಿ ನಿಲ್ಲಬಲ್ಲಂಥ ಸಂತಾನದ ಕುಡಿಯೂ ಇರಬಾರದೆಂದು ಕಾಂತುಪೂಂಜ ಸೂಳೆಸಿದ್ದುವಿನ ಮನೆಯಲ್ಲಿದ್ದು ಕೊಂಡು ಸಿರಿ ದೇಶಾಂತರ ಹೋಗುವಾಗ ಉಪಾಯದಿಂದ ಕರೆದು ಹಾಲಿಗೆ ವಿಷಬೆರಸಿ ಬಾಯಾರಿಕೆ ಕೊಡುವ ನೆಪದಲ್ಲಿ ಕೊಲ್ಲುವ ತಂತ್ರವನ್ನು ಹೂಡುವುದನ್ನು ಅಮೃತರ ಪಠ್ಯ ಸೂಕ್ಷ್ಮವಾಗಿ ತಿಳಿಸುತ್ತದೆ. ಆದರೂ ಕುಮಾರ ಅದರಿಂದ ಬದುಕಿ ಬರುತ್ತಾನೆ. ಸಿರಿ ಬೋಲದ ಕಾಡಿಗೆ ಹೋಗಿ ದೇಸಿಂಗರಸರ ಜೊತೆ ಬೋಲಮಲ್ಲಿಗೆಗೆ ಹೋಗಲು ಸಿದ್ಧಳಾಗಿ ಮಗ ಕುಮಾರನನ್ನು ಕರೆಯಲು ಸಿರಿಯ ಜೊತೆ ಬರಲು ಆತ ನಿರಾಕರಿಸುತ್ತಾನೆ. "ಸಿರಿ ನಿನ್ನನ್ನು ಅಲ್ಲಿ ಚೆನ್ನಾಗಿ ನೋಡಿಕೊಳ್ಳುವೆ, ಯಾವುದೇ ಕೆಲಸ ಮಾಡಲು ಬಿಡಲಾರೆ" ಇತ್ಯಾದಿ ಸಮಾಧಾನದ ಮಾತುಗಳನ್ನು ಹೇಳಿದರೂ ಕುಮಾರ ಬೋಲಮಲ್ಲಿಗೆಗೆ ಹೋಗಲು ನಿರಾಕರಿಸಿ ಅಲ್ಲಿ ನನ್ನನ್ನು 'ಹಾದರಕ್ಕೆ ಹುಟ್ಟಿದವ' ಎಂದಾರು ಎಂಬ ಉತ್ತರವನ್ನು ನೀಡುತ್ತಾನೆ. ಕೊನೆಗೆ "ನಿಮ್ಮ ಬೆನ್ನು ಹಿಡಿದು ಬರಲಾರೆ. ನನ್ನ ತಂದೆಯವರ ಮಾತು ಮೀರಲಾರೆ" ಎಂಬ ಮಾತನ್ನು ತಾಯಿಯಲ್ಲಿ ಬಾಯಿಬಿಟ್ಟು ಹೇಳುವುದನ್ನು ಶ್ಯಾಮರಾಯ ಶೆಟ್ಟಿಯವರ ಪಠ್ಯ ತಿಳಿಸುತ್ತದೆ.

ತುಳುಪಠ್ಯ

ಆನಿಗ್ ಅಮ್ಮೆರ್ ಪಂತೆರ್
ಪೊಣ್ಣಾಯಿನಾಲೆನ್ ಮೈತೆದೀಂದ್ ಪನ್‌ಂಬೊಲು
ಆಲ್ ಆಣನ ಮರ್ಲ್ ಉಲ್ಲೊಲು
ಆಲೆ ಬೆರಿ ಪತ್ತಡ ಕುಮಾರ
ಎಂಕ್ ಪುಟ್ಟುದು ಮೂಜೆನಕ್ಲೆಗ್ ಪುಟ್ಟಿನ ಪುದರ್ ಕೊಂಡೊದು ಬರಡಂದ್

ಕನ್ನಡಾನುವಾದ

ಅಂದು ತಂದೆಯವರು ಹೇಳಿದ್ದಾರೆ
ಹೆಣ್ಣಾದವಳನ್ನು ನಾದಿನಿ ಎಂದಾಳು
ಗಂಡಸರ ಹುಚ್ಚು ಇದೆ ಅವಳಿಗೆ

ಅವಳ ಬೆನ್ನು ಹಿಡಿಯಬೇಡ ಮಗ ಕುಮಾರ
ನನಗೆ ಹುಟ್ಟಿ ಮೂರನೆಯವನಿಗೆ ಹುಟ್ಟಿದ ಹೆಸರು ತರಬೇಡವೆಂದಿದ್ದಾರೆ
(ಪುಟ 175–176)

ಎಂಬ ಮಾತು ಕುಮಾರನ ಬಾಯಿಂದ ಬರುತ್ತದೆ. ತನ್ನ ತಂದೆ ಮೊದಲೇ ಸಿರಿಯ ಚಾರಿತ್ರ್ಯದ ಬಗೆಗೆ ಅನುಮಾನ ವ್ಯಕ್ತಪಡಿಸಿ ಮಗನಿಗೆ ತಿಳಿಸಿರುವುದನ್ನು ಮಗ ತಾಯಿಗೆ ತನ್ನ ಬದುಕಿನ ಕೊನೆಯ ಘಳಿಗೆಯಲ್ಲಿ ತಿಳಿಸಿ ಬೋಲಮಲ್ಲಿಗೆಗೆ ಯಾಕೆ ಬರಲು ನಿರಾಕರಿಸುತ್ತೇನೆ ಎಂಬುದನ್ನು ತಿಳಿಸುತ್ತಾನೆ. ಅಲ್ಲದೆ 'ಈರ್ ಜತ್ತ್‌ರ್ ಪೋಲೆಪ್ಪೆರೇ' ಎಂದುಹೇಳುತ್ತಾನೆ. ತುಳುವಿನಲ್ಲಿ 'ಜತ್ತ್‌ರ್‌ಪೋಪಿನಿ' ಎನ್ನುವುದಕ್ಕೆ ಇನ್ನೊಬ್ಬನ ಜೊತೆ ಅಕ್ರಮವಾಗಿ ಓಡಿಹೋಗುವುದು ಎಂಬ ಹೀನಾರ್ಥವಿದೆ. ಈ ಮಾತನ್ನು ಕುಮಾರ ತಾಯಿಗೆ ಹೇಳುವ ಮೂಲಕ ತಾಯಿ ಬೋಲಬಾರಿ ಚತ್ತೇರಿಯರ ಜೊತೆಗೆ ಬೋಲ ಮಲ್ಲಿಗೆಗೆ ಹೋಗುವುದಕ್ಕೆ ತನ್ನ ಸಮ್ಮತಿಯಿಲ್ಲ ಎಂಬುದನ್ನು ತಿಳಿಸುತ್ತಾನೆ. ತನ್ನ ತಂದೆ ಹಿಂದೆ ಹೇಳಿರುವ ಮಾತು ನಿಜವಾಯಿತು ಎಂದು ತಿಳಿಯುತ್ತಾನೆ. ನನಗೆ ಒಂದು ದಾರಿ ತೋರಿಸಿ ತಾಯಿಯವರೇ ಎಂದು ಕೇಳಿದಾಗ ಸಿರಿ ಕುಮಾರನನ್ನು ಮಾಯ ಮಾಡಿ ಎಲ್ಲೂರಿಗೆ ಹೋಗಿ ವಿಶ್ವನಾಥ ದೇವರ ಭೇಟಿ ಮಾಡು ಎಂದು ಕಳುಹಿಸುತ್ತಾಳೆ. ಅಮೃತರ ಪಠ್ಯದಲ್ಲಿ ಕುಮಾರ ತಾಯಿಗೆ ತಾನು ಬೋಲಮಲ್ಲಿಗೆಗೆ ಬಂದರೆ ನನ್ನನ್ನು 'ತಂದೆಯಿಲ್ಲದ ಮಗ' ಎಂದಾರು ಎಂಬ ಅನುಮಾನವನ್ನು ವ್ಯಕ್ತಪಡಿಸುತ್ತಾನೆ. ಗೋಪಾಲ ನಾಯ್ಕರ ಪಠ್ಯದಲ್ಲಿ ಸಿರಿ 'ದೇಸಬುಡ್ದು ದೇಸಾಂತ್ರಿ ಪೋಯೆಂಡಲ ಸೊಸಂತ್ರೊ ಇಪ್ಪುಲ ಪನ್ಪಿನ ದೇವೆರೆನ ಅಬಯೊ ಉಬಯೊ ದೆತೊಂಡಲ್' (ದೇಶ ಬಿಟ್ಟು ದೇಶಾಂತರ ಹೋದರೂ ಸ್ವತಂತ್ರವಾಗಿರು ಎಂಬ ಅಭಯ ಉಭಯವನ್ನು ದೇವರಿಂದ ಪಡೆದುಕೊಂಡಳು). ಹೀಗಾಗಿ ಸಿರಿ ದೇಶಾಂತರ ಹೋದರೂ ಸ್ವತಂತ್ರವಾಗಿರಲು ಇಚ್ಛಿಸಿ ತನ್ನ ಗಂಡನ ಹಂಗನ್ನು ತೊರೆದು ಹೋಗುವುದನ್ನು ಇಲ್ಲಿಯ ಪಠ್ಯಗಳು ನಿರೂಪಿಸುತ್ತವೆ. ಮಾತ್ರವಲ್ಲ ತನ್ನ ತಾಯಿಯನ್ನು ಕುರಿತು ಕುಮಾರ ಹೇಳುವ ಮಾತುಗಳು ಈ ರೀತಿ ಇವೆ.

ಬೋಲದ ಚತ್ತೇರಿಗಳು ಇಲ್ಲಿಗೆ ಬರುತ್ತಾರೆ ತಾಯಿಯವರೇ
ಅವರ ಅರಮನೆಗೆ ನೀವು ಹೋಗುವಿರಿ ತಾಯಿಯವರೇ
ಬೋಲಬಾರಿ ಚತ್ತೇರಿಗಳ ಅರಮನೆಯಿಂದ ಕೊಟ್ಟರಾಡಿಯ ಅರಮನೆಗೆ ಜಾತಿ ಕಟ್ಟಿನ ನೀತಿ ಮಾಡಲು
ಎರಡನೇ ಸಂಬಂಧ ಜಾತಿ ಕಟ್ಟಲ್ಲಿ ಉಂಟು ಮಾಡುತ್ತೀರಿ ತಾಯಿಯವರೇ
ನಾನು ಬರಲಾರೆ ನಾನು ಬರಲಾರೆ ನಿಮ್ಮ ಜೊತೆಗೆ ತಾಯಿಯವರೇ
ನನ್ನನ್ನು ಇಲ್ಲಿ ಬೋಲದ ಪದವಲ್ಲಿ ಮಾಯ ಮಾಡಿಬಿಡಿ ತಾಯಿಯವರೇ

ಕೊಟ್ಟರಾಡಿಯ ಕೊಡ್ಸರಾಳ್ವರನ್ನು ಅಪ್ಪ ಎಂದು ಕರೆಯಲಾರೆ ತಾಯಿಯವರೇ
(ಪುಟ 321–322).

ಹೀಗಾಗಿ ಕುಮಾರ ತನ್ನ ತಾಯಿಯಲ್ಲಿ "ನೀವು ಕೊಟ್ರಾಡಿಯ ಕೊಡ್ಸರಾಳ್ವನನ್ನು ಎರಡನೇ ಮದುವೆಯಾಗುವ ಮೂಲಕ ಬಂಟಜಾತಿಯಲ್ಲಿ ಎರಡನೇ ಸಂಬಂಧದ ಕಟ್ಟುಪಾಡನ್ನು ಆರಂಭಮಾಡುತ್ತೀರಿ. ಅವರನ್ನು ಅಪ್ಪ ಎಂದು ಕರೆಯುವ ಸ್ಥಿತಿಗೆ ನಾನು ಬರಲಾರೆ. ಹೀಗಾಗಿ ನಿಮ್ಮ ಜೊತೆ ಬರಲಾರೆ. ನನ್ನನ್ನು ಮಾಯಮಾಡಿ" ಎಂಬುದಾಗಿ ಮುಂಚಿತವಾಗಿಯೇ ಭವಿಷ್ಯ ನುಡಿಯುತ್ತಾನೆ. "ನಿನ್ನನ್ನು ಮಾಯಮಾಡಿ ಮುಂದೆ ಯಾವಾಗ ನಿನ್ನ ಮುಖ ನೋಡಲಿ" ಎಂದು ತಾಯಿ ಕೇಳಿದಾಗ ಕುಮಾರ ಈ ಮಾತನ್ನು ಹೇಳುತ್ತಾನೆ.

ನನ್ನ ಮುದ್ದು ಮುಖವನ್ನು ನೋಡಲು ಸಿಗುತ್ತೇನೆ ನಾನು
ಕೊಟ್ಟರಾಡಿಗೆ ನೀವು ಹೋಗಿ ನಾನೊಂದು ತುಂಡು ಕರುಳನ್ನ
ನಿಮ್ಮ ಗರ್ಭದಲ್ಲಿ ಬಿಟ್ಟು ಬಂದಿದ್ದೇನೆ ನನ್ನ ಬೆನ್ನ ಸಹಾಯಕ್ಕೆ
ಒಬ್ಬಳು ತಂಗಿ ಬೇಕೆಂದು ಬಿಟ್ಟು ಬಂದಿದ್ದೇನೆ ತಾಯಿಯವರೇ
ಕೊಟ್ಟರಾಡಿಯ ಅರಮನೆಯಲ್ಲಿ ತಾಯಿಯವರೇ
ಗರ್ಭವತಿಯಾಗುತ್ತೀರಿ ನೀವು
ನಿಮಗೆ ಬಾಯಿಯ ಆಸೆಯನ್ನು ಕಳೆಯಲು ಕರೆದುಕೊಂಡು ಹೋಗುತ್ತಾರೆ
ಹಿಂತಿರುಗಿ ಬರುವಾಗ ಅಲಿಕುಂಜ ಪಿಲಿಕುಂಜ ಪುಂಜದ ನಡವೆಗೆ ನಾನು ಬರುತ್ತೇನೆ
ನಿಮ್ಮನ್ನು ನೋಡುತ್ತೇನೆ ತಾಯಿಯವರೇ (ಪುಟ 323–324)

ಎನ್ನುತ್ತಾನೆ. ಹೀಗೆ ಕುಮಾರ ತನ್ನ ತಾಯಿಯ ಎರಡನೇ ಮದುವೆಯ ವೃತ್ತಾಂತದಿಂದ ಹಿಡಿದು ತನಗೊಬ್ಬಳು ತಂಗಿಯನ್ನು ಹೆತ್ತು ಬರುವವರೆಗಿನ ಎಲ್ಲ ವಿಚಾರಗಳನ್ನು ತಾಯಿಗೆ ತಿಳಿಸುತ್ತಾನೆ. ತನ್ನ ತಾಯಿಯನ್ನು ಕುರಿತು "ನಾವು ದೇವರ ಸುತ್ತು ಬಲಿಯಲ್ಲಿ ಬರುವಾಗ ನರಲೋಕದಲ್ಲಿ ನಾವು ಮಾನವ ಜನ್ಮ ತಾಳಿಬಂದೆವು. ತುಳುನಾಡಲ್ಲಿ ನಮ್ಮ ಕಥೆ ಉಳಿದು ಬಂತು. ಈಗ ನಾವು ಮತ್ತೆ ದೇವರ ಗದ್ದಿಗೆಗೆ ಹೋಗುವ ಹೊತ್ತಾಯಿತು. ತಡಮಾಡಬೇಡಿ, ನನ್ನನ್ನು ಮಾಯಮಾಡಿ" ಎನ್ನುತ್ತಾನೆ ಕುಮಾರ. ಹೀಗಾಗಿ ಸಿರಿ ಕುಮಾರನ ನೆತ್ತಿಗೆ ಉಂಗುಟ ಕೊಟ್ಟು ಭೂಮಿಗೆ ಒತ್ತಿ ಮಾಯ ಮಾಡುತ್ತಾಳೆ. ಮಕ್ಕಳ ನೆತ್ತಿ ತುಂಬ ಮೃದುವಾದ ಜಾಗ. ಇದನ್ನು 'ಪದೆಪು' ಎಂದು ತುಳುವಲ್ಲಿ ಕರೆಯುತ್ತಾರೆ. ಈ ಭಾಗವನ್ನು ಒತ್ತಿದರೆ ಮಗು ಉಳಿಯುವುದು ಕಷ್ಟ. ಈ ರೀತಿಯಲ್ಲಿ ಸಿರಿ ಮಗುವನ್ನು ಮಾಯದ ಹೆಸರಲ್ಲಿ ಇಲ್ಲವಾಗಿಸಿದ ರೀತಿ ಅಮಾನವೀಯ ವಾಗಿ ಕಾಣಿಸುತ್ತದೆ.

ಮೇಲಿನ ಮಾತಿಗೆ ಪೂರಕವಾಗಿ ರಾಮಕ್ಕ ಅವರ ಪಠ್ಯದಲ್ಲಿ ಬರುವ ವಿವರಗಳು ಇನ್ನಷ್ಟು ಸ್ಪಷ್ಟತೆಯನ್ನು ನೀಡುತ್ತದೆ. ಸಿರಿ ಸೊನ್ನೆಯನ್ನು ಹೆತ್ತ ಸಂದರ್ಭ ಕುಮಾರ ತನ್ನ ನಿಜರೂಪ ಬಿಟ್ಟು ಬಡ ಬ್ರಾಹ್ಮಣನ ರೂಪ ತಾಳಿ ಸತ್ಯನಾಪುರದರಮನೆಗೆ ಬಡ ಬ್ರಾಹ್ಮಣ ಬರುವ ರೀತಿಯಲ್ಲಿ ಬರುವ ವಿವರಗಳಿವೆ. ಕಬ್ಬು ಕಡಿದು ಜೋತಿಕೋಲು ಮಾಡಿಕೊಂಡು, ಕಾಲಿಗೆ ಉರಿಗೆಜ್ಜೆ ಕಟ್ಟಿಕೊಂಡು, ಬಾಯಲ್ಲಿ ಕೊಳಲು ಹಿಡಿದು... ಈ ರೀತಿಯ ವೇಷದಲ್ಲಿ ಕೆಳ ಅಂಗರಾಜೆ, ಮೇಲಿನ ಅಂಗರಾಜೆಯಾಗಿ ಮೂರು ಹೊಳೆಗಳು ಒಂದೇ ಕಡೆ ಸೇರುವಜಾಗ (ಮುಕ್ಕಡಪು) ದಾಟಿಕೊಂಡು ಅಲಿಕುಂಜ ಪಿಲಿಕುಂಜ ಕಾಡುದಾರಿಯಲ್ಲೆ ಬರಲು ಸಿರಿ ಕಡೆ ಕಣ್ಣಲ್ಲಿ ದುಖಿಸುತ್ತಿರುತ್ತಾಳೆ. ಯಾಕೆ ದುಖಿಸುತ್ತೀರಿ ಎಂದು ಕೇಳಲು ಸಿರಿ "ನಿನ್ನಂಥ ಬೇಡುವ ಬ್ರಾಹ್ಮಣನಲ್ಲಿ ಹೇಳಿ ಏನು ಪ್ರಯೋಜನ?" ಎಂದು ಹೇಳಲು "ಹಾಗಾದರೆ ನಾನು ಹೋಗುತ್ತೇನೆ" ಎನ್ನುತ್ತಾನೆ. ಅಷ್ಟು ಹೊತ್ತಿಗೆ ಬಡಬ್ರಾಹ್ಮಣನ ರೂಪ ಬಿಟ್ಟು ಕುಮಾರನ ರೂಪ ತಾಳಿ ಸಿರಿಯೆದುರು ನಿಲ್ಲುತ್ತಾನೆ. ಸಿರಿ ಮತ್ತು ಕುಮಾರನ ನಡುವೆ ಸುದೀರ್ಘ ಸಂಭಾಷಣೆ ನಡೆಯುತ್ತದೆ. ಕುಮಾರ ತನ್ನ ತಾಯಿಯನ್ನು ಕುರಿತು ಈ ರೀತಿ ಪ್ರಶ್ನಿಸುತ್ತಾನೆ:

"ತಾಯಿಯವರೇ ನನ್ನನ್ನು ಇನ್ನೊಬ್ಬರ ಮನೆಯಲ್ಲಿ ಚಾಕರಿ ಮಾಡಿಸಬೇಕೆಂದಿದ್ದಿರಿ. ನಾನು ಬರಲಾರೆ ಎಂದಾಗ ಬೋಳದ ಕಾಡಲ್ಲಿ ಮಾಯಮಾಡಿದಿರಿ. ನನ್ನ ಕರುಳ ಒಂದು ತುಂಡು ನಿಮ್ಮ ಗರ್ಭದಲ್ಲಿ ಉಳಿದು ನನಗೊಂದು ತಂಗಿಯ ಫಲವನ್ನು ಕೊಟ್ಟಿರಿ. ಕೊಟ್ಟರಾಡಿಯ ಕೊಡ್ಸರಾಳ್ವರಿಗೆ ನೀವು ಎರಡನೇ ಹೆಂಡತಿಯಾಗಿ ಹೋಗಿದ್ದು ಸರಿಯೇ ತಾಯಿಯವರೇ? ನನ್ನನ್ನು ನೀವು ಬೊಲ್ಯೊಟ್ಟುವಿನ ಆಲಡೆಯ ಬೆಳ್ಳಿಯ ಮುಗುಳಿಯಲ್ಲಿ ಕುಳ್ಳಿರಿಸಿ ಬಲಿಬೋಗ ಕೊಡಿಸಿದಿರಿ. ದಾರುವನ್ನೂ ಕಲ್ಲು ಮಾಡಿ ಬೋಲಮಲ್ಲಿಗೆಯ ಬೋಲಬಾರಿ ಚತ್ತೇರಿಯರ ಜೊತೆಗೆ ಸತ್ಯ ದಂಡಿಗೆಯಲ್ಲಿ ಕುಳಿತು ಬೋಲಮಲ್ಲಿಗೆಗೆ ಹೋದಿರಿ. ಕೊಡ್ಸರಾಳ್ವರ ಜೊತೆಗಿನ ಬದುಕಲ್ಲಿ ನಿಮಗೆ ಸುಖದ ಅನ್ನ ದೊರೆಯಿತೆ ಅಥವಾ ಕಷ್ಟದ ಅನ್ನ ದೊರೆಯಿತೇ? ಇದೆಲ್ಲವನ್ನು ತಿಳಿಯಲು ನಾನು ಬಂದಿದ್ದೇನೆ." ಇಷ್ಟು ಮಾತನಾಡುವಾಗಲೂ ಸಿರಿ ಒಂದು ಮಾತನ್ನೂ ಆಡದಿದ್ದಾಗ "ನನ್ನ ಚಿಕ್ಕ ತಂದೆಯವರಾದ(ಸಿದ್ಯಮ್ಮೆರ್) ಕೊಟ್ಟರಾಡಿಯ ಕೊಡ್ಸರಾಳ್ವರ ಎಷ್ಟು ಆಸ್ತಿ, ಬದುಕು ತೆಗೆದಿರಿ ತಾಯಿಯವರೇ? ನನ್ನ ತಂದೆಯವರ ಜೊತೆ ಒಂದು ದಿನದ ಸುಖ, ಪುಣ್ಯ ಪಡೆಯಲಿಲ್ಲ ನೀವು. ಅವರಿಗೆ ಎಡಬಲದಲ್ಲಿ ಜೋಳಿಗೆ ಹಾಕಿಸಿ, ಕುತ್ತಿಗೆಗೆ ಬೆಳ್ಳಿಯ ನೊಗ ನೇಗಿಲು ಕಟ್ಟಿಸಿ, ಕಾಲಿಗೆ ಬಿಳಿಯ ಬಟ್ಟೆ ಸುತ್ತಿಸಿ ನಾಲ್ಕು ಮನೆಗಳಲ್ಲಿ ಭಿಕ್ಷೆಬೇಡುವಂತೆ ಮಾಡಿದಿರಿ. ಬೇಡುವ ನರಲೋಕಕ್ಕೆ ತಳ್ಳಿದಿರಿ. ಇಷ್ಟೆಲ್ಲ ಸುಖಭಾಗ್ಯ ನನ್ನ ತಂದೆಯವರಿಗೆ ನಿಮ್ಮಿಂದ ಸಿಕ್ಕಿತಲ್ಲಾ" ಎಂದಾಗಲೂ ಸಿರಿ ಒಂದು ಮಾತನ್ನೂ ಆಡುವುದಿಲ್ಲ. ಮುಂದುವರಿದು "ನೀವೂ ನಾನೂ ಇಬ್ಬರಿದ್ದು ನನ್ನ ತಂಗಿಯನ್ನು ರನ್ನೆ ತೋಡು ಪೊನ್ನೆ ತಾರ್ ಎಂಬ ಹೊಳೆಯಲ್ಲಿ ಮಾಯ ಮಾಡಿದೆವು. ನನ್ನನ್ನು ಬಲಭಾಗದಲ್ಲಿ ನಿಲ್ಲಿಸಿ ಸಿಡಿಲು ಮಿಂಚು ಮಳೆ ಬರಿಸಿ ಪ್ರವಾಹದ ನೀರಲ್ಲಿ ಹೆಣ್ಣುಮಗುವನ್ನು

ತೇಲಿ ಬಿಟ್ಟರಿ. ಕಾನಬೆಟ್ಟಿನ ಅಜ್ಜನವರಿಗೆ ಸಿಗುವಂತೆ ಹೇಳಿದಿರಿ" ಎಂದು ಹೇಳಿದಾಗ ಸಿರಿ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾಳೆ. ಕೊನೆಗೆ ಸಿರಿ "ನನ್ನನ್ನು ಏನು ಮಾಡುತ್ತಿ ಮಗಾ? ನನಗೊಂದು ಗುಡಿ ಕಟ್ಟಿಸಿ ಅದನ್ನು ಬೆಳಗಿಸಿ ಕೊಡು" ಎಂದು ಬೇಡಿಕೊಳ್ಳುತ್ತಾಳೆ. "ನಿನಗೂ ಒಂದು ಗುಡಿಕಟ್ಟಿಸಿ ಬೆಳಗಿಸು" ಎಂದು ಹೇಳಿ "ಆದಿ ಬಡಗಣ ಲಂಕೆ ಲೋಕನಾಡಿಗೆ ಹೋಗುವ ಮಗಾ" ಎಂದು ಹೇಳುವ ವಿವರಗಳಿವೆ. ಕುಮಾರ ತನ್ನ ತಾಯಿಯಲ್ಲಿ ಆಡುವ ಈ ಮೇಲಿನ ಮಾತುಗಳನ್ನು ನೋಡುವಾಗ ಕುಮಾರ ತನ್ನ ತಾಯಿಯನ್ನು ಎಂದೂ ಸಮರ್ಥಿಸುವ ಸ್ಥಿತಿಯಲ್ಲಿ ಇಲ್ಲ ಮಾತ್ರವಲ್ಲ ತನ್ನ ತಂದೆಯವರ ಜೊತೆಗಿನ ಬದುಕು, ಅವರ ಜೊತೆಗಿನ ವಿರಸ, ವಿಚ್ಛೇದನ ಹಾಗೂ ಕೊಟ್ರಾಡಿ ಕೊಡ್ಸರಾಳ್ವರ ಜೊತೆಗಿನ ಮರು ಮದುವೆ ಇವೆಲ್ಲ ಕುಮಾರನಿಗೆ ಸರಿಬಾರದ ಕಾರಣ ಕುಮಾರ ತನ್ನನ್ನು ಮಾಯ ಮಾಡುವಂತೆ ಕೇಳಿಕೊಂಡಿದ್ದಾನೆ. ತಾಯಿಯ ಬದುಕಿನ ಕೊನೆಯ ಕಾಲದಲ್ಲಿ ಬಂದು ತಾಯಿಯನ್ನು ಪ್ರಶ್ನಿಸುವ ಮೂಲಕ ಸಿರಿ ತೆಗೆದುಕೊಂಡ ಎಲ್ಲ ನಿರ್ಧಾರಗಳ ಜೊತೆ ತಾನು ನಿಲ್ಲಲಾರೆ ಎಂಬುದನ್ನು ತಿಳಿಸಿ ತನ್ನನ್ನು ಮಾಯಮಾಡುವಂತೆ ಕೇಳಿಕೊಳ್ಳುತ್ತಾನೆ. ತನ್ನನ್ನು ಮಾಯ ಮಾಡುವ ಮೊದಲು ತನ್ನ ತಂದೆಯವರ ಬಳಿಯ ಹಾಲು ಕೊನೆಯದಾಗಿ ಕುಡಿಯಬೇಕೆಂಬ ಬಯಕೆಯನ್ನು ವ್ಯಕ್ತಪಡಿಸುತ್ತಾನೆ. ಹೀಗಾಗಿ ತಂದೆಯ ಪರವಾದ ಒಲವು ಕುಮಾರನಲ್ಲಿ ಇತ್ತು ಎನ್ನಬಹುದು. ಮಾತ್ರವಲ್ಲ ತಾನು ಮಾಯವಾಗುವ ಮೊದಲು ತಾಯಿಯಲ್ಲಿ 'ನನ್ನ ತಂದೆಯವರಿಗೆ ಒಂದು ಕಲಸೆ ಬೀಜ ಹಾಗು ಎರಡೆತ್ತಿಗೆ ವರ ಕೊಡಿ ತಾಯಿಯವರೇ' ಎಂದು ಕೊನೆಯದಾಗಿ ಬೇಡಿಕೊಳ್ಳುತ್ತಾನೆ.

"ಈ ಕಾರಣಗಳಿಗಾಗಿ ಕುಮಾರ ಸಿರಿಗಿಂತ ಶ್ರೇಷ್ಠನಾಗಿ ಕಾಣುತ್ತಾನೆಯೇ? ಇಲ್ಲದಿದ್ದರೆ ಸಿರಿಜಾತ್ರೆಯಲ್ಲಿ ಕುಮಾರನೇ ಯಾಕೆ ನಿಯಂತ್ರಕನಾಗಿರುತ್ತಾನೆ? ತಾಯಿ ಸಿರಿಯಾದವಳು ಆ ಕೆಲಸ ಮಾಡಬಹುದಿತ್ತಲ್ಲ" ಎಂಬ ನಮ್ಮ ಪ್ರಶ್ನೆಗೆ ಕರ್ಗಿಶೆಡ್ತಿಯವರು ತಟ್ಟನೆ "ಇಲ್ಲ" ಎಂದರು. ಅದು ಕುಮಾರನೇ ಮಾಡಬೇಕೆಂದರು. ಮುಂದುವರಿದು ಗಂಡಸರು ಹೋಗುವಲ್ಲಿಗೆ ಅವರೇ ಹೋಗಬೇಕು. ಹೆಂಗಸರು ಹೋಗುವಲ್ಲಿಗೆ ಅವರೇ ಹೋಗ ಬೇಕು. ಕುಮಾರ ಸಿರಿಗೆ ಮಗ ಇರಬಹುದು. ಆದರೆ ಸಿರಿ ತನ್ನ ರಕ್ಷಕ (ತಮೆರಿ) ಎಂದು ತೋರಿಸುವುದು ಕುಮಾರನನ್ನೇ. ಹೀಗಾಗಿ ಗದ್ದೆಗೆ ಬದು ಗಟ್ಟಿ ಇರಬೇಕು. ಬೇಲಿಗೆ ಆಧಾರ (ತೂನ) ಗಟ್ಟಿ ಇರಬೇಕು. ಹೆಣ್ಣಿಗೆ ತಮೆರಿ (ರಕ್ಷಕ) ಗಟ್ಟಿ ಇರಬೇಕು ಎನ್ನುವ ಮಾತಿನಂತೆ ತಾಯಿಯಾದರೂ ಸಿರಿಗೆ ತಮೆರಿ ಆಗಿ ನಿಲ್ಲುವವನು ಕುಮಾರನೇ ಆದುದರಿಂದ ಅವನೇ ನಿಯಂತ್ರಕನಾಗಿರುತ್ತಾನೆ ಎಂಬ ಮಾತನ್ನು ಕರ್ಗಿಶೆಡ್ತಿಯವರು ಸಂದರ್ಶನದಲ್ಲಿ ತಿಳಿಸಿದ್ದರು (ಸಂದರ್ಶನ, 22.3.2014).

ಕುಮಾರನಿಗೆ ಹುಟ್ಟಿದ ಸಂದರ್ಭ ಹೆಸರನ್ನು ಇಡುವಾಗಲೂ ಆತನ ಸಾಮರ್ಥ್ಯಕ್ಕೆ ತಕ್ಕಂತೆ ಇಡಲಾಗಿದೆ. ಅಮೃತರ ಪಠ್ಯದಲ್ಲಿ 'ಕೋಟಿಪೂಂಜ ಸತ್ಯದ ಕುಮಾರ' ಎಂದು ಕರೆಯಲಾಗಿದೆ. ಶ್ಯಾಮರಾಯ ಶೆಟ್ಟಿಯವರ ಪಠ್ಯದಲ್ಲಿ ಮಗುವಿಗೆ 'ಈಶ್ವರ ಧೂತ

ವಿಷ್ಣು ಅವತಾರದ ಮಗು ಸಿರಿಮಗ ಬಾಮಲ್ಲಕುಮಾರ' ಎಂದು ಹೆಸರಿಡುವ ಮೂಲಕ ಕುಮಾರನನ್ನು ಈಶ್ವರನ ಧೂತ ವಿಷ್ಣು ಅವತಾರದವ ಎಂದು ಹೇಲಾಗಿದೆ. ಗೋಪಾಲ ನಾಯ್ಕರ ಪಠ್ಯದಲ್ಲಿ ಮಗುವಿನ ನಕ್ಷತ್ರ ನೋಡಿದ ಜ್ಯೋತಿಷಿಗಳು ಮಗು ಹುಂಜನಂತೆ ಸಾಮರ್ಥ್ಯ ತೋರುವವ ಎನ್ನುವ ಅರ್ಥದಲ್ಲಿ ಈತನಿಗೆ 'ಕೋಟಿಪೂಂಜ' ಎಂಬ ಹೆಸರಿಡುವ ಬಗೆಗೆ ತಿಳಿಸುತ್ತದೆ. ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಪಠ್ಯದಲ್ಲಿ ಮಗುವಿನ ಹುಟ್ಟಿದ ನಕ್ಷತ್ರ ನೋಡಿ ಕುಮಾರ ಹುಟ್ಟಿದ ವೇಳೆ ಘಳಿಗೆ ಚೆನ್ನಾಗಿದೆ ಎಂದು ಮಗುವಿಗೆ 'ಕುಮಾರ' ಎಂಬ ಹೆಸರಿಡುತ್ತಾರೆ. ರಾಮಕ್ಕ ಅವರ ಪಠ್ಯದಲ್ಲಿ 'ಬಂಜೊಲಿಗೆಡ್ ಪುಟ್ಟುದೇ ಪುಂಜೊಲಿಗೆಡ್ ಪಟ್ಟ ಆಲುನಾ ಕೋಟಿ ಪೂಂಜೆಂದ್ ಪುದರ್ ದೀಪಾದ್' (ಬಂಜೊಳಿಗೆಯಲ್ಲಿ ಹುಟ್ಟಿದ್ದಾನೆ ಪುಂಜೊಳಿಗೆಯಲ್ಲಿ ಪಟ್ಟವಾಳುವ ಕೋಟಿಪೂಂಜ(?)ಎಂಬ ಹೆಸರು) ಎಂದು ಹೆಸರಿಡುವ ಬಗೆಗೆ ತಿಳಿಯುತ್ತದೆ. ಲೀಲಾಶೆಡ್ತಿ ಅವರ ಪಠ್ಯದಲ್ಲಿ "ಸತ್ಯಮಾಲೋಕಂದ ಸಿರಿಮಗ ವಜ್ರಮಾಲೋಕಂದ ಕುಮಾರ" ಎಂದು ಹೆಸರಿಡಲಾಗಿದೆ. ಈ ಎಲ್ಲ ಹೆಸರುಗಳೂ ಕುಮಾರನ ಸಾಮರ್ಥ್ಯ ಮತ್ತು ಅವನಲ್ಲಿನ ವಿಶೇಷ ಗುಣಗಳಿಗಾಗಿ ಪ್ರಾಪ್ತವಾಗಿದೆ ಎನ್ನ ಬಹುದು. ಆದರೆ ಸತ್ಯನಾಪುರದ ಪಟ್ಟದಲ್ಲಿ ಕುಳಿತುಕೊಂಡು ಪಟ್ಟ ಆಳಬೇಕಾಗಿದ್ದ ಅಥವಾ ಬಸಲೂರಿನ ಪಟ್ಟ ಆಳಬೇಕಾಗಿದ್ದ ಕುಮಾರ ಬೋಲದ ಕಾಡಲ್ಲಿ ಮಾಯವಾಗುವುದು ಆತನ ಬದುಕಿನ ದುರಂತವಲ್ಲದೆ ಬೇರೇನಲ್ಲ. ಇದಕ್ಕೆ ಕುಮಾರ ಹುಟ್ಟಿದ ವೇಳೆ, ಘಳಿಗೆ, ನಕ್ಷತ್ರಗಳೇ ಕಾರಣವಾಗಿರುವುದನ್ನು ಬೇರೆ ಬೇರೆ ಪಠ್ಯಗಳು ತಿಳಿಸುತ್ತವೆ.

ಕರ್ಗಿಯವರ ಪಠ್ಯವು ಮಗುವಿನ ರಾಶಿ, ನಕ್ಷತ್ತ ನೋಡಿದ ಬಲ್ಯಾಯರು ಮಗುವಿನ ಮುಖವನ್ನು ಅಜ್ಜನವರು ನೋಡಬಾರದು. ಅಜ್ಜನವರಿಗೆ ಮರಣ, ತಂದೆಗೆ ಬೇಡಿ ತಿನ್ನುವ ಕಾಲ, ತಾಯಿ ದೇಶಾಂತರ ಹೋಗುವ ಫಲ, ಮಗು ಹುಟ್ಟಿದ ಜಾಗ ಸುಟ್ಟು ಭಸ್ಮ ಎಂಬ ಮಾತನ್ನು ಹೇಳುತ್ತಾರೆ. ಗೋಪಾಲ ನಾಯ್ಕರ ಪಠ್ಯವು ಕರಿಯ ಅಮವಾಸ್ಯೆ, ಬಿಳಿಯ ಗ್ರಹಣ, ಉತ್ತರಾ ನಕ್ಷತ್ರದಲ್ಲಿ ಹುಟ್ಟಿದ ಕಾರಣ ಅಜ್ಜನವರಿಗೆ ಮರಣ ಎಂಬುದನ್ನು ತಿಳಿಸುತ್ತಾರೆ. ಅಮೃತರ ಪಠ್ಯ ಮಂಗಳವಾರ, ಸಿಂಹ ರಾಶಿ, ಗಂಡಾಂತರದ ಮೂಲ ನಕ್ಷತ್ರದಲ್ಲಿ ಹುಟ್ಟಿದ ಕಾರಣ ಮೂಲ ನಾಶವಾಗುವ ಬಗೆಗೆ ತಿಳಿಸುತ್ತದೆ. ಶ್ಯಾಮರಾಯ ಶೆಟ್ಟಿಯವ ಕಾವ್ಯ ಉತ್ತರಾ ನಕ್ಷತ್ರದಲ್ಲಿ ಹುಟ್ಟಿದ ಕಾರಣ ಅಜ್ಜನವರಿಗೆ ಮರಣ, ತಾಯಿ ದೇಶಾಂತರ, ತಂದೆಗೆ ಬೇಡಿ ತಿನ್ನುವ ಕಾಲ, ಹುಟ್ಟಿದ ಮನೆ ಸುಟ್ಟು ಭಸ್ಮ ಎಂದು ತಿಳಿದುಬರುತ್ತದೆ. ಕುಮಾರನ ಹುಟ್ಟಿದ ನಕ್ಷತ್ರ, ಘಳಿಗೆ ಸರಿಯಿಲ್ಲದಿದ್ದುದರಿಂದ ಮುಂದೆ ಎದುರಾಗುವ ಎಲ್ಲ ತೊಂದರೆಗಳಿಗೆ ಕುಮಾರನೇ ಕಾರಣನಾಗುವುದು ಎಲ್ಲ ಪಠ್ಯಗಳಿಂದ ತಿಳಿಯುತ್ತದೆ.

ಸಿರಿ ಕುಮಾರನನ್ನು ಮಾಯ ಮಾಡಿದ ಅನಂತರ ದಾರುವನ್ನು ಆಕೆಯ ಇಚ್ಛೆಯಂತೆ ಮಾಯ ಮಾಡುತ್ತಾಳೆ. ಅಜ್ಜನವರ ಕಾಲದಿಂದಲೂ ಸತ್ಯನಾಪುರದರಮನೆಯಲ್ಲಿದ್ದು ಎಲ್ಲ ಚಾಕರಿಗಳನ್ನು ಮಾಡಿಕೊಂಡಿದ್ದ ದಾರು ಅಜ್ಜನವರು ತೀರಿಕೊಂಡ ಕೂಡಲೇ

"ನಾನಿನ್ನು ಈ ಅರಮನೆಯಿಂದ ಹೊರಡುತ್ತೇನೆ ಅಕ್ಕನವರೇ" ಎಂದಿದ್ದಳು. ಯಾಕೆಂದರೆ ಅಜ್ಜನವರ ಕಾಲದಲ್ಲಿ ಅರಮನೆಯಲ್ಲಿದ್ದಂಥ ವಾತಾವರಣ ಸಿರಿಯ ಕಾಲದಲ್ಲಿ ಇರಲಿಕ್ಕಿಲ್ಲ ಎಂಬುದು ದಾರುವಿಗೆ ತಿಳಿದಿತ್ತು. ಹೀಗಾಗಿ ಇನ್ನು ಇಲ್ಲಿ ನಿಲ್ಲಬಾರದು ಎಂಬ ಅಭಿಪ್ರಾಯಕ್ಕೆ ದಾರು ಬಂದಿರಬೇಕು. ಆದರೂ ಸಿರಿ "ಅಜ್ಜನವರನ್ನು ಸುಟ್ಟಬೆಂಕಿ ಆರಬೇಕಿದ್ದರೆ ನನ್ನನ್ನು ಬಿಟ್ಟು ಹೊರಡುತ್ತಿಯಾ? ಹೋಗಬೇಡ ನಿಲ್ಲು" ಎಂಬ ಸಿರಿಯ ಒತ್ತಾಯಕ್ಕೆ ಕಟ್ಟುಬಿದ್ದು ದಾರು ಮತ್ತೆ ಸತ್ಯನಾಪುರದ ಅರಮನೆಯಲ್ಲಿ ಮುಂದುವರಿಯುತ್ತಾಳೆ. ಎಲ್ಲ ಸಂದರ್ಭಗಳಲ್ಲಿಯೂ ಸಿರಿಯ ಪರವಾಗಿದ್ದ ದಾರು ಸಿರಿ ಪಂಚಾಯತಿ ಕಳದಿಂದ ಹಿಂತಿರುಗಿ ಬಂದು ಸತ್ಯನಾಪುರದರಮನೆ ಬಿಟ್ಟು ಹೊರಡುವ ನಿರ್ಧಾರಕ್ಕೆ ಬರುವಾಗ ಸ್ವಲ್ಪ ವಿಚಲಿತಳಾಗುತ್ತಾಳೆ. "ಒಂದು ಬಾರಿಯ ಕೋಪಕ್ಕೆ ಬಾವಿಗೆ ಹಾರಿದರೆ ಅಕ್ಕನವರೇ ಎಷ್ಟುಬಾರಿ ನಮಗೆ ಸಿಟ್ಟುಬಾರದು. ಎಷ್ಟು ಬಾರಿ ನಾವು ಬಾವಿಗೆ ಹಾರಬಹುದು? ಒಂದು ಮಳೆಗೆ ಒಂದು ತತ್ರ ಹರಿದರೆ ಎಷ್ಟು ತತ್ರ ದಿನಕ್ಕೆ ಹರಿಯ ಬಹುದು ಅಕ್ಕನವರೇ? ಪಂಚಾಯತಿ ಕಳದಲ್ಲಿ ನಿಮಗೆ ಏನಾಯಿತು ಅಕ್ಕನವರೇ, ತುರಿಕೆ ತಾಗಿತೇ, ಹುಚ್ಚು ಶುರುವಾಯಿತೇ ಅಥವಾ ನನ್ನ ಭಾವನಂಥವರ ತೊಡೆಶರೀರದವರನ್ನು ಏನಾದರೂ ಕಂಡಿರೇ? (ಶ್ಯಾಮರಾಯ ಶೆಟ್ಟಿ)" ಎಂದು ಪ್ರಶ್ನಿಸುವ ಮೂಲಕ ಸಿರಿಯು ಸತ್ಯನಾಪುರದರಮನೆ ತೊರೆಯುವ ನಿರ್ಧಾರಕ್ಕೆ ಬಂದುದು ಸರಿಯಾದ ನಿರ್ಧಾರವಲ್ಲ ಎಂಬುದನ್ನು ತಿಳಿಸುತ್ತಾಳೆ. ಆಗ ಸಿರಿ ಸೂಡದಣ್ಣು ಸೆಟ್ಟಿ ಮಗ ಸಂಕರಾಳ್ವನ ಕಡೆಬಟ್ಟೆ (ಒಳಉಡುಪು) ಒಗೆಯಲು ನಿಲ್ಲುವುದಾದರೆ ನಿಲ್ಲು ಎಂದಾಗ ದಾರು "ಇಲ್ಲ ಅಕ್ಕನವರೇ, ನಿಮ್ಮ ಬೆವರು ಬಿದ್ದಲ್ಲಿ ನನ್ನ ರಕ್ತ ಬೀಳಬೇಕೆಂದು ಅಂದು ಅಜ್ಜನವರಿಗೆ ಮಾತು ಕೊಟ್ಟಿದ್ದೆ" ಎಂದು ಹೇಳಿ ಕುಮಾರನ ತೊಟ್ಟಿಲು ಹೊತ್ತುಕೊಂಡು ದಾರು ಸತ್ಯನಾಪುರದರಮನೆ ಬಿಟ್ಟು ಹೊರಡುತ್ತಾಳೆ. ಸಿರಿ ಸತ್ಯನಾಪುರದರನೆ ಸುಟ್ಟು ಭಸ್ಮಮಾಡಿ ಇನ್ನು ತಿರುಗಿ ನೋಡಬೇಡ ಎಂದಾಗಲೂ ಸ್ವಲ್ಪ ದೂರ ಹೋಗಿ ಮನಸ್ಸು ತಡೆಯದೆ ಅರಮನೆಯನ್ನು ತಿರುಗಿ ನೋಡುತ್ತಾಳೆ. ಇದು ದಾರುವಿನ ಸಹಜಗುಣ. ಯಾಕೆಂದರೆ ಈ ಅರಮನೆಯಲ್ಲಿ ತಿಂದುಂಡು ಪ್ರೀತಿಯಿಂದ ಮನೆಯವಳಂತೆ ಬೆಳೆದವಳು ದಾರು. ಇಂಥ ಅರಮನೆಯನ್ನು ತೊರೆದು ದೇಶಾಂತರ ಹೋಗುವಾಗ ಕೊನೆಯ ಬಾರಿ ಕಣ್ಣಲ್ಲಿ ನೋಡುವ ಬಯಕೆ ದಾರುವಿನಲ್ಲಿ ಉಂಟಾಗಿರಬೇಕು. ಆಗ ಅರಮನೆ ಸುಟ್ಟು ಭಸ್ಮವಾಗುವುದನ್ನು ಕಂಡ ದಾರು ಸಿರಿಗೆ ತಿಳಿಸಲು ನಿನಗೆ ತಿರುಗಿ ನೋಡಬೇಡವೆಂದರೂ ತಿರುಗಿ ನೋಡಿದೆ. ಅಜ್ಜನವರ ಕೋಣೆ ಹಾಗು ಕುಮಾರನ ತೊಟ್ಟಿಲು ಕಟ್ಟಿದ ಕೋಣೆ ಉಳಿದು ಉಳಿದದ್ದೆಲ್ಲ ಸುಟ್ಟುಭಸ್ಮವಾಗಲಿ ಎಂದು ಶಪಿಸುತ್ತಾಳೆ ಸಿರಿ. ಈ ಎಲ್ಲ ಅಂಶಗಳನ್ನು ಗಮನಿಸುವಾಗ ದಾರುವಿಗೆ ಸಿರಿಯಷ್ಟೇ ಮಮತೆ ಸತ್ಯನಾಪುರದರಮನೆ ಯಲ್ಲಿ ಇದ್ದುದು ತಿಳಿಯುತ್ತದೆ. ಹೀಗಾಗಿ ತಾನು ಆಶ್ರಯಪಡೆದ ಅರಮನೆಯನ್ನು ಬಿಟ್ಟು ಹೋಗುವಾಗಲೂ ಮತ್ತೆ ಮತ್ತೆ ತಿರುಗಿ ನೋಡಿ ಮನಸ್ಸಿಲ್ಲದ ಮನಸ್ಸಿನಿಂದ ತೊರೆಯುತ್ತಾಳೆ. ಶ್ಯಾಮರಾಯ ಶೆಟ್ಟಿಯವರ ಪಠ್ಯದಲ್ಲಿ "ಪಂಚಾಯತಿ ಕಳದಲ್ಲಿ ನನ್ನ

ಭಾವನಂಥವರ ತೊಡೆ ಶರೀರದವರನ್ನು ಕಂಡು ತುರಿಕೆ ಮುಟ್ಟಿತೇ, ಹುಚ್ಚು ಆರಂಭವಾಯಿತೇ" ಎಂದು ದಾರು ಕೇಳುವಲ್ಲಿಯೂ ಸಿರಿಗೆ "ಅನ್ಯ ಪುರುಷರ ಆಕರ್ಷಣೆಗೊಳಗಾದಿರೇ" ಎಂಬ ಮಾತನ್ನೂ ಹೇಳುತ್ತಾಳೆ. ಈ ಎಲ್ಲ ಬೆಳವಣಿಗೆಗಳೂ ದಾರುವಿಗೂ ಸರಿಕಾಣಿಸಲಿಲ್ಲ ಮಾತ್ರವಲ್ಲ ಸಿರಿ ಬೋಲಮಲ್ಲಿಗೆಗೆ ಬೋಲಬಾರಿ ಚತ್ತೇರಿಯರ ಜೊತೆ ಹೋಗುವ ವಿಚಾರವೂ ಕುಮಾರನಂತೆ ದಾರುವಿಗೂ ಪ್ರಿಯವಾಗಲಿಲ್ಲ. ಹೀಗಾಗಿ "ಅಲ್ಲಿ ಇತರರ ತುಂಡುಬಟ್ಟೆ ಒಗೆಯಲು ಬರಲಾರೆ ಅಕ್ಕನವರೇ. ನನ್ನನ್ನು ಕುಮಾರನಂತೆ ಮಾಯಮಾಡಿ ನನಗೊಂದು ದಾರಿತೋರಿಸಿ ಅಕ್ಕನವರೇ" ಎಂದು ಕೇಳಿಕೊಳ್ಳುತ್ತಾಳೆ. ಸಿರಿ ದಾರುವನ್ನು ಮಾಯಮಾಡುತ್ತಾಳೆ.

ದಾರುವಿನ ಹುಟ್ಟನ್ನು ಕುರಿತು ಹೆಚ್ಚಿನ ವಿವರಗಳನ್ನು ದಾಖಲಿಸುವ ಪಠ್ಯಗಳು ನಮಗೆ ದೊರೆಯುವುದಿಲ್ಲ. ಕರ್ಗಿಯವರ ಜೊತೆ 22.3.2014ರಂದು ನಡೆಸಿದ ಸಂದರ್ಶನದಲ್ಲಿ ದಾರು ಸಿರಿಯಂತೆ ಸತ್ಯದಲ್ಲೆ ದೇವರ ಎಡಭಾಗದಲ್ಲಿ ಕಾಲುಂಗುರದ ಸದ್ದು, ಬಳೆಯ ಮಿನದನ(ಸಂಭ್ರಮ)ದಲ್ಲಿ ಉದಯವಾಗಿ ಬಂದವಳು. ಹಾಗಾಗಿ ಅಜ್ಜನವರ ಸತ್ಯನಾಪುರದರಮನೆಯಲ್ಲಿ 'ಕಾಟ್‌ಕೈಯೆಂಕಿ ದಾರು'ವಾಗಿ ಇದ್ದಳು. ಕಾಟ್ ಕೈಯೆಂಕಿ ಎಂದರೆ ಪರಿಶಿಷ್ಟಜಾತಿಯ ಜನ (ತುಳುವಿನಲ್ಲಿ 'ನೀಟಜಾತಿ' ಎಂದು ಕರ್ಗಿಯವರು ಕರೆಯುತ್ತಾರೆ) ಎಂದರ್ಥ. ಇವಳು ಅಜ್ಜನವರು ಹಾಗು ಸಿರಿಯ ಜೊತೆ ತುಂಬ ನಂಬಿಗೆಯ ಕೆಲಸದವಳಾಗಿ ಇದ್ದವಳು. ಮಾತ್ರವಲ್ಲ ಸಿರಿಗೆ ಸಾಕುತಾಯಿ ಯಂತೆ ಅಥವಾ ತಾಯಿಯಂತೆಯೇ ಇದ್ದವಳು. ಹೀಗಾಗಿ ಸಿರಿಯನ್ನು 'ಅಕ್ಕನವರೇ' ಎಂದು ಕರೆದವಳು. ಕಾಂತುಪೂಂಜನನ್ನು 'ಭಾವ' ಎಂದೇ ಕರೆಯುತ್ತಿದ್ದಳು (ಶ್ಯಾಮರಾಯ ಶೆಟ್ಟಿ ಪಠ್ಯ). "ಬೋಲದಪದವಿನಲ್ಲಿ ನನ್ನನ್ನು ಮಾಯಮಾಡಿ ಅಕ್ಕನವರೇ, ನಾನು ಬೋಲಮಲ್ಲಿಗೆಗೆ ಬರಲಾರೆ" ಎಂದಾಗ ಸಿರಿ ದಾರುವನ್ನು ಮಾಯಮಾಡಿ ಈ ಕೆಳಗಿನ ಮಾತುಗಳನ್ನು ಹೇಳುತ್ತಾಳೆ.

ಓ ಮಗ ದಾರೂ ಬೋಲದ ಕಾಡಿಂದ ಹೋದವಳು ನೀಟ ಜಾತಿಗೆ ಹಾಕು ಮಗ ಕಾವಲು
ಹಟ್ಟಿಯಲ್ಲಿ ಹಾಕುಮಗ ಹುಲಿಯ ಕಾವಲು, ಮನೆಯಲ್ಲಿ ಹಾಕುಮಗ ನಾಗರಹಾವಿನ ಕಾವಲು
ವರ್ಷದಿಂದ ವರ್ಷಕ್ಕೆ ಗುಡ್ಡೆಯಜ್ಜಿಯಾಗಿ ಬಾ ತೆಂಗಿನ ಸಿಪ್ಪೆಯಲ್ಲಿ ಬೆಂಕಿ (ಆರತಿ), ಗೆರಸೆಯಲ್ಲಿ ಎಡೆ ತೆಗೆದುಕೋ.
ವರ್ಷದಿಂದ ವರ್ಷಕ್ಕೆ ನಾನು ಒಳ ಅಂಜಣದಲ್ಲಿ ದರ್ಶನಾವೇಶಗೊಳ್ಳುವಾಗ
ಹೊರ ಅಂಜಣದಲ್ಲಿ ನೀಟ ಜಾತಿಯ ಮೇಲೆ ದರ್ಶನಾವೇಶವಾಗು.
ತಲೆಕೂದಲನ್ನು ಬಿಟ್ಟು ಶರಣ ಹೋಗು ಮಗಾ ಬಲದಿಂದ ಬಲಮುಡಿ ಏರಿಸಬೇಡ, ಎಡದಿಂದ ಸಿರಿಮುಡಿ ಇಳಿಸಬೇಡ

ಕೂದಲನ್ನು ಬಿಟ್ಟು ಮಗಾ ನೀಟ ಜಾತಿಗೇ ದರ್ಶನಾವೇಶವಾಗು ಮಗಾ ಎಂದು ಅಂದೇ ಅಕ್ಕನವರು ವರಪಾಲಿಸಿದ್ದಾರೆ ಓ... (ಕರ್ಗಿಯವರ ಜೊತೆಗಿನ ಸಂದರ್ಶನ).

ಈ ರೀತಿಯಲ್ಲಿ ಸಿರಿ ಹೇಳಿರುವ ಮಾತನ್ನು ಸಂದರ್ಶನದಲ್ಲಿ ಕರ್ಗಿಯವರು ಪಾಡ್ದನ ರೂಪದಲ್ಲಿ ಹಾಡಿದ್ದರು. ಹೀಗಾಗಿ ದಾರು ಪರಿಶಿಷ್ಟ ಜನಾಂಗದವರ ಮೇಲೆ ಮಾತ್ರ ಪ್ರಕಟಗೊಳ್ಳಬೇಕು. ಇತರ ಜಾತಿಯವರ ಮೇಲೆ ದಾರು ಪ್ರಕಟಗೊಳ್ಳುವಂತಿಲ್ಲ ಎಂಬುದನ್ನು ಹೇಳಿ ದಾರು ಪರಿಶಿಷ್ಟ ಜಾತಿಯವಳು ಎಂಬ ಅಪೂರ್ವ ಮಾಹಿತಿಯನ್ನು ನೀಡಿದ್ದರು. ದಾರುವಿನ ಗುಡಿಯೂ ಸಾಮಾನ್ಯವಾಗಿ ದೇವಸ್ಥಾನದ ಹೊರ ಆವರಣದಲ್ಲಿ ಇರುವುದು ಕರ್ಗಿಯವರ ಈ ಮಾತಿಗೆ ಹೆಚ್ಚಿನ ಸ್ಪಷ್ಟತೆಯನ್ನು ನೀಡುತ್ತದೆ. ಹೀಗಾಗಿ ಸಿರಿ ಆಚರಣೆಯಲ್ಲಿ ಯಾವ ಜಾತಿಯವರು ಎಲ್ಲಿ ನಿಲ್ಲಬೇಕೆಂಬುದು ಇಂದಿನ ಜಾತೀಯ ವ್ಯವಸ್ಥೆಯ ಭಾಗ ಅಲ್ಲ. ಅಂದು ಸಿರಿಯೇ ಮಾಡಿರುವ ಒಂದು ವ್ಯವಸ್ಥೆ ಎಂಬುದಾಗಿ ತಿಳಿಯುತ್ತದೆ. ದಾರುವನ್ನು ಎಂದೂ ಸಿರಿ ಬಳಗದಲ್ಲಿ ಈ ಕಾರಣಕ್ಕಾಗಿ ಗುರುತಿಸಲಾಗಿಲ್ಲ.

ಲೀಲಾ ಅವರಲ್ಲಿ ಈ ಬಗೆಗೆ ಕೇಳಿದಾಗ "ದಾರು ಯಾವ ಜಾತಿಯವಳು ಎಂದು ಹೇಳಲು ನನಗೆ ತಿಳಿಯದು. ಆದರೆ ಧಾರುವನ್ನು ಸಿರಿ ಮಾಯ ಮಾಡಿ ಮೈಯೊಲ್ದಿ ಯಾಗಿರು, ನಾನು ಒಳ ಅಂಜಣದಲ್ಲಿ ದರ್ಶನಾವೇಶಗೊಳ್ಳುವಾಗ ನೀನು ಹೊರ ಅಂಜಣದಲ್ಲಿ 'ಮಾನ್ಯೆರ್ ಮಕ್ಕಳೆರೆ ಮಿತ್ತ್ ದಡಿಮುಟ್ಟು ದರ್ಸನ ಬಲ' (ಪರಿಶಿಷ್ಟ ಜಾತಿಯವರ ಮೇಲೆ ದರ್ಶನಾವೇಶಗೊಳ್ಳು) ಎಂದು ಹೇಳಿ ಮಾಯ ಮಾಡಿದ್ದಾರೆ. 'ಮಾನ್ಯೆರ್' ಎಂದು ತುಳುವಿನಲ್ಲಿ ಕರೆಯುವುದು ಪರಿಶಿಷ್ಟ ಜಾತಿಯವರನ್ನು. ಅವರ ಮೇಲೆಯೇ ದಾರು ಪ್ರಕಟಗೊಳ್ಳಬೇಕಲ್ಲದೆ ಬೇರೆ ಜಾತಿಯವರ ಮೇಲೆ ಪ್ರಕಟಗೊಳ್ಳು ವಂತಿಲ್ಲ" ಎಂದರು. ಗೋಪಾಲ ನಾಯ್ಕ ಹಾಗು ಅಮೃತರ ಪಠ್ಯಗಳಲ್ಲಿ ದಾರುವನ್ನು ಸಿರಿ ಬೋಲದ ಪದವಲ್ಲಿ ಮಾಯಮಾಡಿ "ನಿನಗೊಂದು ಒಳ್ಳೆಯ ಸ್ಥಾನಮಾನ ತೋರಿಸುತ್ತೇನೆ" ಎಂದು ಹೇಳಿ "ನೀನು ಅಂಗಳದಲ್ಲಿ ಜಾಲಕೊರತಿಯಾಗಿರು" ಎಂಬ ವರವನ್ನು ನೀಡುತ್ತಾಳೆ. ತುಳುವಿನ 'ಕೊರತಿ' ಎಂಬುದು 'ಕೊರಗೆತಿ' ಕೊರಗ ಸ್ತ್ರೀ ಎಂಬುದರಿಂದ ಬಂದಿದೆ ಎಂದು ತಿಳಿಯಬಹುದು. ಶ್ಯಾಮರಾಯ ಶೆಟ್ಟಿ ಹಾಗು ಗಿಡಿಕೆರೆಯವರ ಪಠ್ಯದಲ್ಲಿ "ಜಾಲಬೈಕಡ್ತಿಯಾಗಿರು" ಎಂಬ ವರವನ್ನು ನೀಡುವ ವಿವರಗಳಿವೆ. 'ಬೈಕಡ್ತಿ' ಎಂಬುದು ಬಾಕುಡ ಸ್ತ್ರೀ – ಬಾಕುಡೆದಿ–ಬಾಕುಡ್ತಿ–ಬೈಕಡ್ತಿ ಆಗುವ ಸಾಧ್ಯತೆಗಳಿವೆ. ಅಂತೆಯೇ ಲೀಲಾ ಅವರ ಪಠ್ಯ ತಿಳಿಸುವ 'ಮೈಯೊಲ್ದಿ' ಎಂಬುದು ಮಾಯಿಲ ಸ್ತ್ರೀ–ಮಾಯಿಲೆದಿ–ಮಯೊಲ್ದಿ ಆಗುವ ಸಾಧ್ಯತೆಗಳಿವೆ. ದಾರುವನ್ನು ಸಿರಿ ಮಾಯಮಾಡಿ ಈ ಮೇಲಿನ ಎಲ್ಲ ಸ್ತ್ರೀ ದೈವಗಳ ಹೆಸರಲ್ಲಿ ಆರಾಧನೆಯನ್ನು ಪಡೆಯುವಂತೆ ತಿಳಿಸುತ್ತಾಳೆ. ಈ ದೈವಗಳು ದಲಿತ ಸ್ತ್ರೀದೈವಗಳಾಗಿ ಇಂದಿಗೂ ತುಳುನಾಡಿನಲ್ಲಿ ಆರಾಧನೆಯನ್ನು ಪಡೆಯುತ್ತಿವೆ.

ಈ ಮೇಲಿನ ವಿವರಗಳನ್ನು ಒಪ್ಪಿಕೊಳ್ಳಬಹುದಾದರೆ ಸತ್ಯನಾಪುರದ ಅಜ್ಜನವರು

ಆ ಕಾಲದಲ್ಲೇ ಪರಿಶಿಷ್ಟಜಾತಿಯ ಅನಾಥ ಹೆಣ್ಣು ಮಗುವಿಗೆ ತನ್ನ ಸತ್ಯದ ಅರಮನೆಯಲ್ಲಿ ರಕ್ಷಣೆಯನ್ನು ನೀಡಿದ್ದು ಗಮನಿಸಬೇಕಾದ ಅಂಶ. ತನ್ನರಮನೆಯಲ್ಲಿ ರಕ್ಷಣೆಯನ್ನು ನೀಡಿರುವುದರಿಂದಲೇ ದಾರುವೂ ಅಜ್ಜನವರಿಗೆ ಮಾತ್ರವಲ್ಲ ಸಿರಿಗೂ ಎಲ್ಲ ಕಾಲದಲ್ಲಿ ನಂಬಿಗೆಯ ಸೇವಕಿಯಾಗಿ ನಿಂತಳು. ಸಿರಿಯ ಜೊತೆಗಿದ್ದು ಕೊನೆಯ ತನಕ ತನ್ನ ಕರ್ತವ್ಯವನ್ನು ನಂಬಿಗೆಯವಳಾಗಿಯೇ ನಿರ್ವಹಿದಳು. ಇದುವೇ ದಾರುವಿನ ಸತ್ಯ ಕೂಡಾ ಹೌದು. ಬಹು ಪಠ್ಯಗಳ ಅಧ್ಯಯನದಿಂದ ಈ ವಿಚಾರವನ್ನು ಅಧ್ಯಯನಕಾರರ ಗಮನಕ್ಕೆ ತರಲಾಗಿದೆಯೇ ಹೊರತು ಇದೇ ಅಂತಿಮ ತೀರ್ಮಾನವೆನ್ನುವಂತಿಲ್ಲ. ಈ ಬಗೆಗೆ ಹೆಚ್ಚಿನ ಅಧ್ಯಯನಗಳು ನಡೆದು ಇನ್ನಷ್ಟು ಬೆಳಕು ಬೀಳಲು ಅವಕಾಶ ಇದೆ.

ಸಿರಿ ಕೊಟ್ಟರಾಡಿ ಕೊಡ್ಸರಾಳ್ವರನ್ನು ಎರಡನೆಯದಾಗಿ ಕೈಹಿಡಿದು ಮದುವೆಯಾಗುತ್ತಾಳೆ. ಬಂಟರಲ್ಲಿ ನಡೆಯುವ ಎರಡನೇ ಮದುವೆಯನ್ನು "ಕೈ ಹಿಡಿಸುವ ಮದುವೆ(ಕೈ ಪತ್ತಾವುನೆ)" ಎಂದು ಕರೆಯಲಾಗುತ್ತದೆ. ಕೊಡ್ಸರಾಳ್ವರಿಗೆ ಸಿರಿಯಷ್ಟೇ ಸತ್ಯವಂತೆ ಮತ್ತು ಸಿರಿಯಷ್ಟೇ ದೈವಿಕ ಶಕ್ತಿಯುಳ್ಳ ಮೊದಲ ಹೆಂಡತಿ ಸಾಮು ಆಳ್ವೆದಿ ಇದ್ದಳು. ಅವಳೂ ಸಿರಿಯಂತೆ ಹುಟ್ಟಿದವಳು.

ಎಪ್ಪತ್ತೇಳುವರೆ ಗಂಗೆಯ ಹೊರಗೆ ಬಿಳಿಯ ಸಿರಿಹೊನ್ನೆಯ ಮರದ ಮೂಡಣದ ಗೆಲ್ಲಲ್ಲಿ
ಮದವೂರ ಮಹಾಲಿಂಗೇಶ್ವರ ದೇವರ ತೀರ್ಥದ ಗಿಂಡ್ಯೆಯಲ್ಲಿ ಉದಯವಾದ
ಅದೊಂದು ಸಂಜೀವನ ಕಡ್ಡಿ ಬಿಳಿಯ ಕಮಲದ ಪುಷ್ಪವಾಯಿತು ಕೇಳಿದಿರೇ
ಅದೊಂದು ಪುಷ್ಪ ಅಂಗರಾಜೆ ಬರ್ಕೆ ಉಜೆಮಾರಗುತ್ತಿನ
ಬಾಮುಕೆಲ್ಲರ ಬಲದ ಬದಿಯಲ್ಲಿ ಉದಯವಾದ
ಆ ಒಂದು ಪುಷ್ಪದಲ್ಲಿ ಏಳು ಏಳುವರೆ ಪ್ರಾಯದ ಮಗಳು
ಉದಯವಾದ ಸತ್ಯದ ಮಗಳು ನಾನು (ತುಳು ಪಾಡ್ದನ ಸಂಪುಟ, ಪುಟ 192)

ಎಂಬುದರಿಂದ ಸಿರಿಯ ಹುಟ್ಟಿನಂತೆ ಸಾಮುವಿನ ಹುಟ್ಟನ್ನೂ ಅಲೌಕಿಕಗೊಳಿಸಲಾಗಿದೆ.

ಹೀಗಾಗಿ ಅವಳು ಕೊಟ್ಟರಾಡಿಗೆ ಕಾಲಿರಿಸಿದ ಅನಂತರ ಕೊಟ್ಟರಾಡಿಯ ಅರಮನೆಯ ಅಂಗಳದಲ್ಲಿ ಒಂದು ಭತ್ತದ ಶೇಖರಣೆಯ ತುಪ್ಪೆಯಿದ್ದದ್ದು ಏಳು ತುಪ್ಪೆಯಾಗಿ ಸಂಪತ್ತು ಬೆಳೆದಿತ್ತು. ಒಂದು ಕಾಲದಲ್ಲಿ ಮೂಡಣದ ಬಾಗಿಲಿಂದ ಕಾಗೆ ಗಿಡುಗ ಹೊಕ್ಕು ಪಡುವಣದಿಂದ ಹೊರ ಬರುತ್ತಿದ್ದಂಥ ಅರಮನೆಯ ಕೊಡ್ಸರಾಳ್ವರ ಹೆಸರು ಸಾಮು ಆಳ್ವೆದಿ ಬಂದ ಅನಂತರ ನಾಲ್ಕು ದಿಕ್ಕಿಗೆ ಪಸರಿಸಿತು. ಇಂಥ ಹೆಂಡತಿ ಇರುವಾಗಲೇ ಕೊಡ್ಸರಾಳ್ವರು ಸಿರಿಯ ಆಕರ್ಷಣೆಗೆ ಒಳಗಾಗುತ್ತಾರೆ. ಬೋಲಬಾರಿ ಚತ್ತೇರಿಯರು ಉಪಾಯದಿಂದ ಸಿರಿಯನ್ನು ಮದುವೆ ಮಾಡಲು ಪ್ರಯತ್ನಿಸಿದರೂ ಸಿರಿಗೆ ಈ ಮದುವೆಯಲ್ಲಿ ಒಲವಿತ್ತು ಮಾತ್ರವಲ್ಲ ಸಿರಿ ಎಲ್ಲೂ ಈ ಮದುವೆಗೆ ವಿರೋಧಿಸಿದ್ದು

ಕಾಣುವುದಿಲ್ಲ. ಆದರೆ ಸಾಮು ಆಳ್ವೆದಿ ಕೊಡ್ಸರಾಳ್ವರಿಗೆ ಮೊದಲೇ ಮುನ್ಸೂಚನೆಯೊಂದನ್ನು ನೀಡಿ ಎಚ್ಚರಿಸಿದ್ದಳು.

ಕರಿಯ ಕಾಸಿಂಗ ಬೊಲಿಯ ದೇಸಿಂಗ ಚತ್ತೇರಿಗಳೆಂದರೆ
ನರಹತ್ಯೆ ಮಾಡುವವರು ಮದುಮಗಾ
ಕಾಗೆ ಕೋಳಿಗಳನ್ನು ಕಾದಾಟ ನಡೆಸುವವರು ಸುಳ್ಳು ಕಪಟಿಗರು
ಗಂಡನ ಮನೆಯಲ್ಲಿ ಅಟ್ಟುಂಬ ಹೆಣ್ಣಿನ ಅನ್ನ ತೆಗೆಯುವವರು
ಹೆಣ್ಣ ಮೇಲೆ ಹೆಣ್ಣು ಕೊಡುವವರು ಮದುಮಗಾ
ಈಗ ಎಲ್ಲಿಂದಲೋ ಓಡಿಬಂದ ಹೆಣ್ಣನ್ನು ತಂದು ಕರೆದುಕೊಂಡು ಬಂದಿರಬೇಕು
ನಿಮ್ಮನ್ನು ಮಂಕುಮರುಳು ಮಾಡಲು ಓಲೆ ಬರೆದಿರಬೇಕು, ನೀವು ಹೋಗಬಾರದು
(ತುಳು ಪಾಡ್ದನ ಸಂಪುಟ, ಪುಟ 192)

ಎನ್ನುತ್ತಾಳೆ ಸಾಮು. "ಅದು ನಿನಗೆ ಹೇಗೆ ಗೊತ್ತು?" ಎಂದು ಕೇಳಲು ಸಾಮು "ನಾನು ಸತ್ಯದ ಮಗಳು. ನಾನು ನಂಬಿದ ದೈವಗಳಾದ ಉಳ್ಳಾಯ ಉಳ್ಳಾಕುಲು, ಜೋಗದ ಈಶ್ವರ ದೇವರು ಮಾಯದ ಸ್ವಪ್ನ ಕೊಟ್ಟು ಪಾಲಿಸಿದ್ದಾರೆ" ಎಂದು ಎಚ್ಚರಿಸಿದರೂ ಕೊಡ್ಸರಾಳ್ವರು ಬೋಲಬಾರಿ ಚತ್ತೇರಿಯರ ಮರುಳು ಮಾತನ್ನು ನಂಬಿ ನಾನಾ ರೀತಿಯ ಕಷ್ಟಗಳನ್ನು ಸಾಮುವಿಗೆ ಕೊಟ್ಟು ಅರಮನೆಯಿಂದ ಹೊರ ಹಾಕುತ್ತಾರೆ. ಸಾಮು ಸಿರಿಯನ್ನು ಕುರಿತು "ಎಲ್ಲಿಂದಲೋ ಓಡಿಬಂದ ಹೆಣ್ಣನ್ನು ತಂದು ಇರಿಸಿಕೊಂಡಿರಬೇಕು" ಎಂಬ ಮಾತನ್ನು ಹೇಳುತ್ತಾಳೆ. ತುಳುವಿನ ಈ ಮಾತಿಗೆ 'ಪಾರ್‌ದ್ ಬತ್ತಿನಾಳ್' (ಓಡಿ ಬಂದವಳೆಂಬ) ಹೀನಾರ್ಥವಿದೆ. "ಆಯನೊಟ್ಟುಗು ಪಾರ್ಯಳ್" ಎಂದರೆ ಅನ್ಯ ಹುಡುಗನ ಜೊತೆಗೆ ಅಕ್ರಮವಾಗಿ ಓಡಿಹೋದಳು ಎಂಬ ಹೀನಾರ್ಥವಿದೆ. ಸಾಮು ಈ ರೀತಿಯಲ್ಲಿ ಸಿರಿಯನ್ನು ತಿಳಿಯುತ್ತಾಳೆ. ಸಿರಿ ಅಷ್ಟು ಸತ್ಯವಂತೆಯಾಗಿದ್ದರೆ ಇನ್ನೊಬ್ಬಾಕೆ ಹೆಣ್ಣಿನ ಬದುಕಿಗೆ ತೊಂದರೆ ಆಗಬಹುದೆಂದು ಈ ಮದುವೆಯನ್ನು ನಿರಾಕರಿಸಬಹುದಿತ್ತೋ ಏನೋ? ಆದರೆ ಸಿರಿ ಹಾಗೆ ಮಾಡುವುದಿಲ್ಲ. ಕೊಡ್ಸರಾಳ್ವರ ನಿರ್ಧಾರವನ್ನು ವಿರೋಧಿಸಿ ಸಾಮು ಆಳ್ವೆದಿಯೇ ಹೊರಟು ಅಂಗಡಿಜಾಲ ಬರ್ಕೆ ತನ್ನ ತವರು ಮನೆಗೆ ಹೋಗುತ್ತಾಳೆ. ಹೋಗುವ ಮೊದಲು ತೆಂಗಿನಕಾಯಿಯ ಅರ್ಧಭಾಗದಲ್ಲಿ ಕಪಿಲೆ ದನದ ತುಪ್ಪವನ್ನು ಸುರಿದು ದೀಪವುರಿಸಿ ಚಾವಡಿಯಲ್ಲಿರಿಸಿ ಇದು ನಂದಬಾರದು. ಈ ಅರಮನೆಗೆ ನನ್ನ ಅನಂತರ ಬಂದ ಸಿರಿಯ ಕಣ್ಣಿಗೆ ಈಟಿಯಂತೆ ನಾಟಬೇಕೆಂದು ಶಪಿಸಿ ಹೊರಟು ಹೋಗುತ್ತಾಳೆ. ಕೊಡ್ಸರಾಳ್ವರು ಸಿರಿಯನ್ನು ಮದುವೆಯಾಗಿ ಕೊಟ್ರಾಡಿ ಅರಮನೆಗೆ ಬರುವ ಮುಕ್ಕಡಾಪು ಮೂರು ಕರಿಯ (ಮೂರು ಹೊಳೆಗಳು ಬಂದು ಒಟ್ಟಾಗುವ ಸ್ಥಳ)ದಾಟಿ ಬರಲು ಸಿರಿಯ ಕಣ್ಣಿಗೆ ಸಾಮು ಉರಿಸಿಟ್ಟ ದೀಪ ಈಟಿಯಂತೆ ನಾಟಿ ನಡೆಯಲಾರದೆ ಅಲ್ಲೆ ಕುಳಿತುಕೊಳ್ಳುತ್ತಾಳೆ. ನನ್ನ ಅಕ್ಕನವರಾದ ಸಾಮು ಆಳ್ವೆದಿ ಬಂದು ನನ್ನ ಕೈ ಹಿಡಿದು

ಅರಮನೆಗೆ ಕರೆದುಕೊಂಡು ಹೋದರೆ ಮಾತ್ರ ಬರುವೆ ಎನ್ನುತ್ತಾಳೆ ಸಿರಿ. ಕೊನೆಗೂ ದಾರಿಕಾಣದೆ ಕೊಡ್ಸರಾಳ್ವರು ಅಂಗಡಿಜಾಲಬರ್ಕೆಗೆ ಹೋಗಿ ಸಾಮುವಿನಲ್ಲಿ ಕ್ಷಮೆ ಯಾಚಿಸಿ ಅವಳನ್ನು ಕರೆದುಕೊಂಡು ಬಂದು ಸಿರಿಯ ಕೈ ಹಿಡಿದು ಅರಮನೆಗೆ ಕರೆತರುವ ಚಿತ್ರಣ ಇದೆ. ಹೀಗಾಗಿ ಸಿರಿ ಎಷ್ಟೇ ಸತ್ಯವಂತೆಯಾದರೂ, ಮಾಯ, ಪವಾಡಗಳನ್ನು ಮಾಡಿದರೂ, ಸಾಮುವಿನ ಎದುರು ಅದು ನಡೆಯಲಿಲ್ಲ. ಇಲ್ಲಿ ಸಾಮುವಿನ ಸತ್ಯಕ್ಕೆ ಜಯವಾಗುತ್ತದೆ. ಸಾಮುವೇ ಮೇಲ್ಮೆಯನ್ನು ಸಾಧಿಸುತ್ತಾಳೆ.

ಸಿರಿಯ ಮಗಳಾದ ಸೊನ್ನೆಯಲ್ಲಿಯೂ ಸಿರಿಯದ್ದೇ ಗುಣಗಳಿರುವುದು ಕಂಡು ಬರುತ್ತದೆ. ಸಿರಿಯ ಮಗಳು ಸೊನ್ನೆ ತಂಗಿ ಗಿಂಡೆಗಿಂತ ಮೊದಲು ಮದುವೆಯಾಗಿದ್ದರೂ ಮೊದಲು ಋತುಮತಿಯಾಗುವುದು ತಂಗಿ ಗಿಂಡೆ. ಈಕೆಯ 'ಮದುಮಗಳ ಮದುವೆಯನ್ನು' (ಪ್ರಥಮ ಋತುಮತಿಯಾದುದರ ಆಚರಣೆಯನ್ನು) ಅಜ್ಜನವರು ಕಾನಬೆಟ್ಟಿನಲ್ಲಿ ಆಚರಿಸಲು ನಿಶ್ಚಯಿಸುತ್ತಾರೆ. ಕೆಲವು ಪಠ್ಯಗಳಲ್ಲಿ ಸೊನ್ನೆಯನ್ನು ಈ ಆಚರಣೆಗೆ ಆಮಂತ್ರಿಸಿದರೆ ಕೆಲವು ಪಠ್ಯಗಳಲ್ಲಿ ಸೊನ್ನೆಗೆ ಆಮಂತ್ರಣವಿರುವುದಿಲ್ಲ. ಆದರೂ ಸೊನ್ನೆ ತನ್ನ ಗಂಡನಲ್ಲಿ ಹಠ ಹಿಡಿದು ಗಿಂಡೆಯ ಋತುಮತಿಯಾದುದರ ಆಚರಣೆಗೆ ಹೋಗುತ್ತಾಳೆ. ಆಮಂತ್ರಣವಿಲ್ಲದ ಕಾರ್ಯಕ್ಕೆ ಹೋಗುವುದು ಸೊನ್ನೆಯ ಗಂಡನಾದ ಗುರುಮರ್ಲರಿಗೆ ಸಮ್ಮತಿಯಿರುವುದಿಲ್ಲ. ಗಂಡನ ವಿರೋಧದ ನಡುವೆಯೂ ಸೊನ್ನೆ ಹೋಗುತ್ತಾಳೆ. ಸೊನ್ನೆ ಈ ಆಚರಣೆಗೆ ಬಗುವುದನ್ನು ಕಂಡ ಊರ ಹೆಂಗುಸರು ಋತುಮತಿಯಾಗದ ಬಂಜೆ ಬರಡು ಸೊನ್ನೆ ಗಿಂಡೆಯ ಈ ಆಚರಣೆಯಲ್ಲಿ ಭಾಗವಹಿಸುವುದು ನಮಗೆ ಅವಮಾನ ಎಂದು ತಿಳಿದು ಅವರು ತಮ್ಮ ತಮ್ಮ ಕೆಲಸಗಳನ್ನು ಬಿಟ್ಟು ಹೊರಡುತ್ತಾರೆ. ಇದರಿಂದ ಬೇಸರಗೊಂಡ ಕಾನಬೆಟ್ಟಿನ ಅಜ್ಜನವರು ಸೊನ್ನೆಗೆ ಅವಮಾನವಾಗುವುದನ್ನು ತಡೆಯಲು ಅವಳನ್ನು ದಾರಿಯ ಮಧ್ಯದಲ್ಲಿಯೇ ತಡೆದು ಈ ಆಚರಣೆಗೆ ಬಾರದಂತೆ ಕೇಳಿಕೊಳ್ಳುತ್ತಾರೆ. ಇದಕ್ಕೊಪ್ಪಿದ ಸೊನ್ನೆ ಕಂಬಳದ ಗದ್ದೆಯ ಬದುವಿನಲ್ಲೇ ನಿಂತು ಗಿಂಡೆಯ ಮದುಮಗಳ ಮದುವೆಯ ಆಚರಣೆಯ ಅಂದವನ್ನು ನೋಡುತ್ತಾಳೆ. ಕೊನೆಗೆ ತನ್ನ ತಾಯಿ ಸಿರಿಯನ್ನು ನೆನೆದು ಗಿಂಡೆಯನ್ನು ಮಾಯ ಮಾಡುತ್ತಾಳೆ. ಲೀಲಾ ಅವರ ಪಠ್ಯದಲ್ಲಿ ಅವಮಾನಿತಳಾದ ಸೊನ್ನೆ ಕಾನಬೆಟ್ಟಿನಿಂದ ಹೊರಟು ಬಂದು ಬಿಳಿಯ ಹುಣಸೆ ಮರದಡಿ ಕುಳಿತುಕೊಂಡು ನನಗೆ ಈ ಗತಿ ಬಂತಲ್ಲಾ ಎಂದು ದುಃಖಿಸುತ್ತಾಳೆ. ಇವಳ ಕಣ್ಣೀರು ಹೋಗಿ ಕುಮಾರನಿಗೆ ಅರ್ಪಿತವಾಗುತ್ತದೆ. ಮಾಯದಲ್ಲಿ ಬಂದ ಕುಮಾರ ಸೊನ್ನೆಗೆ ಈ ರೀತಿ ಹೇಳುತ್ತಾನೆ: "ಕಾನಬೆಟ್ಟಿನ ಅರಮನೆಯಲ್ಲಿ ಗಿಂಡೆಯ ಋತುಮತಿಯಾದುದರ ಕಾರ್ಯ ಆಗಿ ಊಟಕ್ಕೆ ಕುಳಿತುಕೊಳ್ಳುವಾಗ ನೀನು ಹೋಗು. ಗಿಂಡೆಯನ್ನು ಊಟದ ಪಂಕ್ತಿಯಿಂದ ಎಳೆದುಕೊಂಡು ದಂಡಿಗೆಯಲ್ಲಿ ಹಾಕಿಕೊಂಡು ಈ ಬಿಳಿಯ ಹುಣಸೆ ಮರದಡಿಗೆ ತಾ. ದಂಡಿಗೆಯಿಂದ ಎಳೆದು ಹುಣಸೆ ಮರದಡಿ ಹಾಕಿ ನಿನ್ನ ತಾಯಿ ಸಿರಿಯ ವರ ಪಡೆದುಕೊಂಡು...

ತುಳುಪಠ್ಯ
ಈ ಇಡೆಟ್ಟೆ ಬತ್ತಿನ ಮಗಲ್ ಇಡೆಟ್ಟೆ ಪೋವೊಡುಂದು ಮೂಜಿ ಗೆರೆ ಒಯ್ತ್‌ದ್
ಗಿಂಡ್ಯೆನ ನೆತ್ತಿಗ್ ಕೈ ಕೊರ್ದು ಮಾಯ ಮಲ್ಪೊಡು.

ಕನ್ನಡಾನುವಾದ
ನೀನು ಎಡೆಯಲ್ಲೆ ಬಂದ ಮಗಳು ಎಡೆಯಲ್ಲೇ ಹೋಗಬೇಕೆಂದು ಮೂರು ಗೆರೆ ಎಳೆದು
ಗಿಂಡೆಯ ನೆತ್ತಿಗೆ ಕೈ ಕೊಟ್ಟು ಮಾಯ ಮಾಡಬೇಕು

ಎಂದು ಹೇಳುತ್ತಾನೆ. ಈ ರೀತಿಯಲ್ಲಿ ಸೊನ್ನೆ ಗಿಂಡೆಯನ್ನು ಮಾಯ ಮಾಡುತ್ತಾಳೆ.

ಇಲ್ಲಿಯ ವಿವರಗಳನ್ನು ನೋಡಿದಾಗ ಅಕ್ಕ ಸೊನ್ನೆಗಿಂತ ಮೊದಲು ತಂಗಿ ಗಿಂಡೆ ಋತುಮತಿಯಾದುದರಿಂದ ಮತ್ತು ಊರವರು ಅಕ್ಕ ಸೊನ್ನೆ ಋತುಮತಿಯಾಗದಿರುವ ಬಗೆಗೆ ಕೆಟ್ಟದಾಗಿ ಮಾತನಾಡಿರುವುದರಿಂದ ಈ ವಿಚಾರ ಸೊನ್ನೆಯ ಗಂಡನಿಗೂ ತಲಪಿರುವುದರಿಂದ ಸಹಜ ಬೇಸರ, ಮಾತ್ಸರ್ಯ ಸೊನ್ನೆಯನ್ನು ಆವರಿಸಿ ಗಿಂಡೆಯನ್ನು ಮಾಯಮಾಡುವ ನಿರ್ಧಾರಕ್ಕೆ ಬಂದಿರಬೇಕು. ಅಲ್ಲದೆ ಗಿಂಡೆಯ ಹುಟ್ಟನ್ನು ನೋಡಿದಾಗ ಆಕೆ ಬ್ರಾಹ್ಮಣ ದಂಪತಿಗಳಿಗೆ ಹುಟ್ಟಿ ಕಾನಬೆಟ್ಟಿನ ಅಜ್ಜನವರಿಗೆ ಆಕಸ್ಮಿಕವಾಗಿ ದೊರೆತ ಮಗು. ಹೀಗಾಗಿ ಆಕೆ ಬಂಟ ಕುಲದವಳಲ್ಲ. ಹೀಗಾಗಿಯೇ ಸೊನ್ನೆ ಗಿಂಡೆಯನ್ನು ಮಾಯ ಮಾಡುವಾಗ "ನೀನು ಎಡೆಯಲ್ಲಿ ಬಂದ ಮಗಳು. ಎಡೆಯಲ್ಲೇ ಹೋಗು" ಎಂದು ನೆತ್ತಿಗೆ ಕೈಕೊಟ್ಟು ಮಾಯ ಮಾಡುತ್ತಾಳೆ. ಇಲ್ಲಿ ಸೊನ್ನೆ ಸತ್ಯದ ಸಿರಿಯ ಮಗಳಾದುದರಿಂದಲೇ ಸೊನ್ನೆಯೂ ತಾಯಿಯಂತೆ ಮಾಯ ಮಾಡುವ ಶಕ್ತಿ ಪಡೆದಿರುವುದನ್ನು ಕಾಣಬಹುದು.

ಇತ್ತ ಸೊನ್ನೆ ಋತುಮತಿಯಾಗಲು ಸೊನ್ನೆಯ ಗಂಡ ಗುರು ಮರ್ಲರು, ಅಣ್ಣ ಜಾರುಮರ್ಲರು ಹಾಗೂ ಕಾನಬೆಟ್ಟಿನ ಅಜ್ಜನವರು ಮೂಡಣದ ಮುಜಲೊಟ್ಟು ಉರಿಬೆರ್ಮರಿಗೆ ಹರಕೆ ಹೇಳಿಕೊಳ್ಳುತ್ತಾರೆ. ರಾಮಕ್ಕನವರ ಪಠ್ಯದಲ್ಲಿ ಲಂಕೆಲೋಕನಾಡಿನ ಬೆರ್ಮೆರ್ ಬ್ರಾಹ್ಮಣ ಮಾಣಿಯಾಗಿ ಬಂದು ಸೊನ್ನೆಗೆ ಮೂರು ಕಲ್ಲುಗಳನ್ನು ಮಂತ್ರಿಸಿ ಕೊಟ್ಟು "ಇದರಲ್ಲಿ ಒಂದು ಕಲ್ಲನ್ನು ಕೊಂಡುಹೋಗಿ ಮದರಂಗಿ ಗಿಡಕ್ಕೆ ಹಾಕಿ ಮದರಂಗಿ ಮುಟ್ಟಬೇಕು. ಎರಡನೇ ಕಲ್ಲನ್ನು ಪದ್ಮಕಟ್ಟೆ ಕೆಂದಾಳೆಯ ಬುಡಕ್ಕೆ ಹಾಕಬೇಕು, ಮೂರನೆ ಕಲ್ಲನ್ನು ದೇವರ ಕೆರೆಗೆ ಹಾಕಬೇಕು. ಹಾಗೆ ಮಾಡಿದರೆ ಋತುಮತಿಯಾಗಿ ಗರ್ಭ ನಿಲ್ಲುತ್ತದೆ. ಸೂಡ ನಂದಳಿಕೆ ನಾಲ್ಕು ಸ್ಥಾನಕ್ಕೆ ನಾನು ಹರಕೆ ಹೇಳಿಕೊಳ್ಳುತ್ತೇನೆ. ಅವಳಿ ಮಕ್ಕಳನ್ನು ನೀನು ಹೆರುತ್ತಿ. ಆ ಮಕ್ಕಳಿಗೆ ಮದುವೆಯ ನೆಂಟಸ್ತಿಗೆ ಬಂದು ಮದುವೆ ಮಾಡುವ ಮೊದಲು ಸೂಡ ನಂದಳಿಕೆಯ ಹರಕೆ ತೀರಿಸಿ ಆ ನಂತರ ಸಂಬಂಧ ಹಿಡಿಯಬೇಕು" ಎಂದು ತಿಳಿಸುತ್ತಾರೆ. "ಸೂಡ ನಂದಳಿಕೆ ನಾಲ್ಕು ಸ್ಥಾನಕ್ಕೆ ಬಂಗಾರದ ಮಗು, ಬೆಳ್ಳಿಯ ತೊಟ್ಟಿಲು, ದಂಡು ಕುಂಬಳ, ಜೋಡಿ ತೆಂಗಿನಕಾಯಿ,

ಹಿಡಿಹಣ, ಕವಳೆ ವೀಳ್ಯ ಅಡಿಕೆ, ಹಂಡೆ ಹಾಲು, ಗಿಂಡೆಯ ನೀರು–ಹರಕೆ ಹೇಳಿಕೊಂಡೆ. ನಾನು ಹೇಳಿರುವ ವಿಚಾರವನ್ನು ಸರಿಯಾಗಿ ನೆನಪಿಟ್ಟುಕೋ ಸೊನ್ನೆ" ಎಂದು ಹೇಳಿ ಆಕಡೆ ನೋಡಿ ಈ ಕಡೆ ನೋಡಬೇಕಾದರೆ ಬ್ರಾಹ್ಮಣ ಮಾಯವಾಗುತ್ತಾನೆ. ಬ್ರಾಹ್ಮಣ ಹೇಳಿದಂತೆ ಮಾಡಿದ ಸೊನ್ನೆ ಋತುಮತಿಯಾಗುತ್ತಾಳೆ ಹಾಗೂ ಗರ್ಭವತಿಯಾಗಿ ಅವಳಿ ಹೆಣ್ಣು ಮಕ್ಕಳಾದ ಅಬ್ಬಯ ದಾರಯರನ್ನು ಹೆರುತ್ತಾಳೆ.

ಮಕ್ಕಳ ಜನನನಕ್ಷತ್ರವನ್ನು ನೋಡಿದ ಬಲ್ಯಾಯರು ಮಕ್ಕಳು ಒಳ್ಳೆಯ ನಕ್ಷತ್ರ, ಘಳಿಗೆಯಲ್ಲಿ ಜನನವಾಗಿದ್ದಾರೆ. ಆದರೆ ಮಕ್ಕಳ ತಲೆಗೆ ನಾಲ್ಕು ಅಕ್ಕಿ ಹಾಕುವ ಭಾಗ್ಯವಲ್ಲದೆ ಮೊಮ್ಮಕ್ಕಳನ್ನು ನೋಡುವ ಭಾಗ್ಯ ನಿಮಗಿಲ್ಲ ಎಂದು ತಿಳಿಸುವ ವಿವರಗಳು ಕರ್ಗಿಯವರ ಪಠ್ಯದಲ್ಲಿದೆ. ಶ್ಯಾಮರಾಯ ಶೆಟ್ಟಿಯವರ ಪಠ್ಯದಲ್ಲಿ ಸೊನ್ನೆ ಮಕ್ಕಳಿಗೆ ಚೆನ್ನೆ ಆಡಲು ಕಲಿಸಿಕೊಡುವ ವಿವರಗಳಿವೆ. ಮಕ್ಕಳಿಗೆ ಯಾವುದರಲ್ಲಿ ಹೆಸರು ಬಾರದಿದ್ದರೂ ಚೆನ್ನೆಯಲ್ಲಿ ಒಳ್ಳೆಯ ಹೆಸರು ಬರಬೇಕೆಂದು ಹೇಳುತ್ತಾಳೆ. ಮಕ್ಕಳಿಗೆ ಮದುವೆಯ ಸಂಬಂಧ ಬರುವಾಗ ಗುರುಮಾರ್ಲೆರು ಮಕ್ಕಳ ಹರಕೆಯ ಬಗೆಗೆ ನೆನಪಿಸುತ್ತಾರೆ. ಸೊನ್ನೆ ಮದುವೆ ಮೊದಲು ಹರಕೆ ಅನಂತರ ಎಂದು ಹಠ ಕಟ್ಟುತ್ತಾಳೆ. ಕೊನೆಗೆ ಕಾನಬೆಟ್ಟು ಅಜ್ಜನವರು ಹಾಗೂ ಜಾರುಮರ್ಲೆರು ಬಂದು ಮಕ್ಕಳ ಹರಕೆಯ ಬಗೆಗೆ ನೆನಪಿಸಿದರೂ ಸೊನ್ನೆ ಕೇಳದಿದ್ದಾಗ ಮದುವೆಗೆ ಒಪ್ಪಿಗೆ ಸೂಚಿಸುತ್ತಾರೆ.

ಸೊನ್ನೆ ಹಾಗೂ ಗುರುಮಾರ್ಲೆರು ಮದುವೆಯ ಹೇಳಿಕೆ ಕೊಡಲು ಹೋಗಿ ದಾರಿಮಧ್ಯೆ ಆಯಾಸವಾಗಿ ಅಬ್ಬಂದಡ್ಕದ ಗೋಳಿಯ ಮರದಡಿಯ ನೆರಳಲ್ಲಿ ವಿಶ್ರಾಂತಿಗಾಗಿ ಕುಳಿತಾಗ

ಒಬ್ಬ ಕುಮಾರ ಒಬ್ಬರು ಬೆರ್ಮೆರ್

ಯಾರು ಬೆರ್ಮೆರೇ ನೀವು ನಾಲ್ಕು ಮನೆ ಬೇಡುವ ರೂಪ ತಾಳಬೇಕು

ಸೊನ್ನೆಯ ಹುಚ್ಚನ್ನು ಪರಿಶೋಧನೆ ಮಾಡಬೇಕೆಂದು ಹೇಳುತ್ತಾರೆ. ಹೀಗೆ ಉರ್ಕಿದೊಟ್ಟಿನ ಉರಿಬೆರ್ಮೆರು ಬ್ರಾಹ್ಮಣನ ವೇಷದಲ್ಲಿ ಬಂದು ಸೊನ್ನೆ ಗುರುಮಾರ್ಲೆರಲ್ಲಿ "ನೀವು ಮಕ್ಕಳ ಮದುವೆಗೆ ಕವಡೆ ಹಾಕಿಸಿ, ಪಂಚಾಂಗ ಬಿಡಿಸಿ ನೋಡಿದ್ದೀರೇ?" ಎಂದು ವಿಚಾರಿಸುತ್ತಾರೆ. ಆಗ ಸೊನ್ನೆ ನಮ್ಮ ಅಜ್ಜನವರು ಈವರೆಗೆ ಇಟ್ಟಿರುವ ದಿನಗಳಲ್ಲಿ ಏನೂ ದೋಷ ಆಗಲಿಲ್ಲ ಎನ್ನುತ್ತಾಳೆ. ಆಗ ಬ್ರಾಹ್ಮಣ "ನಾನು ಒಂದು ಬಾರಿ ಪಂಚಾಂಗ ನೋಡುತ್ತೇನೆ" ಎಂದು ಪಂಚಾಂಗ ನೋಡಿ "ಮಕ್ಕಳ ತಲೆಕೂದಲ ನ್ನಾದರೂ ಲೆಕ್ಕ ಮಾಡಬಹುದು. ಆದರೆ ಅವರಿಗೆ ಹೇಳಿರುವ ಹರಕೆ ಲೆಕ್ಕ ಮಾಡಲು ಸಾಧ್ಯವಿಲ್ಲ. ಮಕ್ಕಳ ಹರಕೆ ಹಿಂದೆ ಇಟ್ಟು ದೇವ ನಿಶ್ಚಯಕ್ಕೆ ಹೊರಟದ್ದು ಮಹಾ ತಪ್ಪು" ಎನ್ನುತ್ತಾನೆ. ಇದರಿಂದ ಸಿಟ್ಟುಗೊಂಡ ಸೊನ್ನೆ ಬ್ರಾಹ್ಮಣನನ್ನು ಬೈಯುತ್ತಾಳೆ. ಅಲ್ಲಿಂದ ಹೊರಟ ಬ್ರಾಹ್ಮಣ ಉರ್ಕಿದೊಟ್ಟಿಗೆ ಹೋಗಿ ಮಕ್ಕಳನ್ನು ಚೆನ್ನೆ ಆಡಲು ಪ್ರೇರೇಪಿಸುತ್ತಾನೆ. ಆಟದಲ್ಲಿ ಅಕ್ಕನಿಗೆ ಸೋಲಾಗುತ್ತದೆ. ತಂಗಿ ಜಯಗಳಿಸುತ್ತಾಳೆ. ತಂಗಿ ಅಕ್ಕನನ್ನು ಹೀಯಾಳಿಸಲು ಇವರ ಮಧ್ಯೆ ಜಗಳವೇರ್ಪಟ್ಟು ಕೊನೆಗೆ ಕೊಲೆಯಲ್ಲಿ

ಪರ್ಯವಸಾನವಾಗುತ್ತದೆ. ಹೀಗಾಗಿ ಸೊನ್ನೆಯೂ ಸಿರಿಯಂತೆ ವಿಶೇಷ ಶಕ್ತಿಯನ್ನು ಪಡೆದಿದ್ದರೂ ತನ್ನ ಸಹಜ ಹಠದಿಂದಾಗಿ ಮಕ್ಕಳಿಗೆ ಹೇಳಿಕೊಂಡ ಹರಕೆ ಸಲ್ಲಿಸದೆ ಮದುವೆಗೆ ಮುಂದುವರಿದಿದ್ದುದರಿಂದ ತನ್ನಿಬ್ಬರು ಮಕ್ಕಳನ್ನು ಉಳಿಸಿಕೊಳ್ಳಲಾಗದೆ ಕಳೆದುಕೊಳ್ಳುತ್ತಾಳೆ. ಹೀಗಾಗಿ ಅಬ್ಬಗ ದಾರಗರ ದುರಂತ ಮರಣಕ್ಕೆ ಸೊನ್ನೆಯ ಹಠವೇ ಪ್ರಮುಖ ಕಾರಣವಾಗುತ್ತದೆ. ಅಬ್ಬಗ ದಾರಗರ ಹುಟ್ಟಿಗೆ ಬೆರ್ಮೆರ್‌ಗೆ ಹೇಳಿಕೊಂಡ ಹರಕೆ ಕಾರಣವಾದರೂ ಅವರ ದುರಂತಕ್ಕೂ ಹೇಳಿದ ಹರಕೆಯನ್ನು ಸಲ್ಲಿಸದೇ ಇದ್ದುದೂ ಕಾರಣವಾಗುತ್ತದೆ.

ಇತ್ತ ಎಲೆಅಡಿಕೆಯೊಂದಿಗೆ ಮದುವೆಯ ಮುಹೂರ್ತಕ್ಕೆ ಕರೆಯಲು ಹೋದ ಸೊನ್ನೆ ಗುರುಮಾರ್ಲರಿಗೆ ಮತ್ತೆ ಅಬ್ಬಂದಡ್ಕದಲ್ಲಿ ಬ್ರಾಹ್ಮಣ ಮಾಣಿ ಎದುರಾಗಿ ಉರ್ಕಿದೊಟ್ಟಲ್ಲಿ ಅಳುವ ಶಬ್ದ ಕೇಳುತ್ತಿರುವುದನ್ನು ತಿಳಿಸುತ್ತಾನೆ. ಅಲ್ಲಿಂದ ಓಡೋಡಿ ಬಂದ ಸೊನ್ನೆ ಗುರುಮಾರ್ಲರಿಗೆ ಉರ್ಕಿದೊಟ್ಟು ಅರಮನೆಯಲ್ಲಿ ಮಕ್ಕಳು ಕಾಣಿಸುವುದಿಲ್ಲ. ರಸಮಯನಂದ ಬಾವಿಯ ಹತ್ತಿರ ಬಂದು ಬಾವಿಯ ಕಲ್ಲಿನಲ್ಲಿ ನಿಂತು ನೋಡುವಾಗ ಕಾನಬೆಟ್ಟಿನ ಅಜ್ಜನವರ ಕಣ್ಣಿಗೆ ಪಂಚೋಲೆ ವೀಳ್ಯದೆಲೆಯಲ್ಲಿ ಬರೆದಿಟ್ಟ ನಾಗಬರಹ ಕಾಣಿಸುತ್ತದೆ. ಅದರಲ್ಲಿ 'ಕಾನಬೆಟ್ಟು ಅಜ್ಜನವರು ಹೊಸ ಹಗ್ಗ ಮತ್ತು ಹೊಸ ಹೆಡಿಗೆ ತಂದು ಉರ್ಕಿದೊಟ್ಟಿನ ಬಾವಿಗೆ ಇಳಿಸಿ ನಮ್ಮ ಹೆಣಗಳನ್ನು ಬಾವಿಯಿಂದ ಮೇಲೆತ್ತಬೇಕು. ಮನುಷ್ಯ ಜನ್ಮ ನಮಗೆ ಮುಗಿಯಿತು, ಮಾಯದ ಹೊತ್ತು ನಮಗೆ ಬಂತು. ದೇವರ ಗದ್ದುಗೆಗೆ ಹೋಗುವ ಹೊತ್ತು ನಮಗೆ ಬಂತು. ಬಾಕಿಮಾರು ಗದ್ದೆಯಲ್ಲಿ ನಮಗೆ ಕಾಷ್ಠ ಮಾಡಿಸಿ ತಲೆಮೇಲೆ ಕಾಲ ಕೆಳಗೆ ನೀವೇ ಬೆಂಕಿ ಕೊಟ್ಟುಬಿಡಿ ಅಜ್ಜನವರೇ' ಎಂದು ಬರೆದಿಟ್ಟದ್ದನ್ನು ಅಜ್ಜನವರು ನೋಡುತ್ತಾರೆ. ಇದರಂತೆ ಹೊಸ ಹಗ್ಗ ಹೊಸ ಹೆಡಿಗೆ ತರಿಸಿ ಅದರಲ್ಲಿ ಎರಡು ಹಾಳೆ ಹಿಂಗಾರ ಇರಿಸಿ ಬಾವಿಗೆ ಇಳಿಸುತ್ತಾರೆ. ಎರಡು ಹಿಂಗಾರದ ಹಾಳೆ ತೇಲುವಂತೆ ಅಬ್ಬಗದಾರಗರು ತೇಲುತ್ತಿರುವುದು ಅಜ್ಜನವರ ಕಣ್ಣಿಗೆ ಕಾಣಿಸುತ್ತದೆ. ಹೆಣಗಳನ್ನು ಬಾವಿಯಿಂದ ತೆಗೆಸಿದ ಅಜ್ಜನವರು ತುಂಬ ದುಃಖಿಸುತ್ತಾರೆ. ಹೆಣದ ಮೀಹ ನಡೆದ ಮೇಲೆ ಹೆಣಗಳನ್ನು ಸಿಂಗರಿಸಿ ತಲೆಯ ಕಡೆ ಅಜ್ಜನವರು ಕಾಲಿನ ಕಡೆ ಗುರುಮಾರ್ಲರು ಹೊತ್ತುಕೊಂಡು ಹೋಗಿ ಅಬ್ಬಗಸಾವಿನ ಗದ್ದೆ ಎಂದು ಹೇಳಿ ಬಾಕಿಮಾರ ಗದ್ದೆಗೆ ಇಳಿದು ಕಾಷ್ಠಕ್ಕೆ ಅಪ್ರದಕ್ಷಿಣೆ ಮೂರು ಸುತ್ತು ತಂದು ಕಾಷ್ಠದಲ್ಲಿರಿಸಿ ತಲೆಯ ಕಡೆ ಕಾಲಿನ ಕಡೆಯಿಂದ ಬೆಂಕಿ ಕೊಡುತ್ತಾರೆ ಕಾನಬೆಟ್ಟಿನ ದುರ್ಗಲ್ಲ ಪೆರ್ಗಡೆಯವರು. "ಕೆಳಗಿನ ಸಿರಿಲೋಕದಿಂದ ಮೇಲಿನ ಮಿರಿಲೋಕದ ನಾರಾಯಣ ಸ್ವಾಮಿಯ ಪಾದಕ್ಕೆ ಹೋಗಿಯಮ್ಮ ಮಕ್ಕಳೇ" ಎಂದು ಹೇಳಿ ರಾಮರಾಮ ಎನ್ನುತ್ತಾ ಕಾಷ್ಠಕ್ಕೆ ಬೆಂಕಿ ಕೊಡುತ್ತಾರೆ. ಕಾಷ್ಠದ ನಡು ಸೇರುತ್ತಾ ಬರುವಾಗ ಅಬ್ಬಯ ದಾರಯರ ಎದೆಯಿಂದ ಎರಡು ಬಿಳಿಯ ದುಂಬಿಗಳು ಸಾವಿನ ಗದ್ದೆಯಾದ ಬಾಕಿಮಾರ ಗದ್ದೆಯಿಂದ ಮೇಲೆ ಹಾರಿ ಹೋಗುವುದು ಅಜ್ಜನವರ ಕಣ್ಣಿಗೆ ಕಾಣಿಸುತ್ತದೆ.

ಹೀಗೆ ಮೇಲಿನ ಲೋಕಕ್ಕೆ ಹೋದ ದುಂಬಿಗಳು ಬೆರ್ಮೆರ್ ದೇವರ (ಕೆಲವು

ಪಠ್ಯಗಳಲ್ಲಿ ನಾರಾಯಣ ದೇವರ, ಇನ್ನು ಕೆಲವು ಪಠ್ಯಗಳಲ್ಲಿ ಸೂರ್ಯನಾರಾಯಣ ದೇವರ ಎಂದಿದೆ) ಪಾದಗಳಿಗೆರಗಿ ಮೂರು ದಿನದ ಜೋಗ ಬೇಕೆಂದು ಕೇಳಿ ಉರ್ಕಿದೊಟ್ಟು ಅರಮನೆಗೆ ಬಂದು ತಂದೆತಾಯಿಯವರನ್ನು ಭೇಟಿ ಮಾಡಿ ತಾವು ಮಾಯದ ಮಕ್ಕಳು ಎಂಬುದನ್ನು ಅವರಿಗೆ ತಿಳಿಸುತ್ತಾರೆ. ಅಲ್ಲಿಂದ ಹೊರಟು ತಮಗೆ ಮದುವೆ ನಿಶ್ಚಿತಾರ್ಥವಾಗಿದ್ದ ಕಡೆರಿಕಾರ್ಲದ ಬೊಲಿಯ ಚಂದ್ರಾಮು ಸೆಟ್ಟಿಯ ಮಕ್ಕಳಾದ ರಾಮಲಕಣರ ಜೊತೆ ಮದುವೆಗೆ ಸಿದ್ಧರಾಗಿದ್ದ ಚೆನ್ನಗ ಚೆಲುವಗರನ್ನು ಮಾಯ ಮಾಡಿ ಆ ಜಾಗದಲ್ಲಿ ತಾವು ಜೋಗದಲ್ಲಿ ನಿಂತು ಮದುವೆಯ ಕಾರ್ಯ ಮುಗಿಸುತ್ತಾರೆ. ಚೆನ್ನಗ ಚೆಲುವಗರಿಗೆ ಜೋಗ ಕೊಟ್ಟು ರಾಮಲಕಣರ ಜೊತೆ ಮದುವೆ ನಡೆಯುವಂತೆ ಮಾಡಿ ತಾವು ಮತ್ತೆ ಮಾಯವಾಗಿ ಮೇಲಿನ ಲೋಕಕ್ಕೆ ಬಂದು ಬೆರ್ಮೆರ್‌ರ ಎಡಬಲಗಳಲ್ಲಿ ಸ್ಥಾನ ಪಡೆಯುತ್ತಾರೆ.

ಲೀಲಾ ಅವರ ಪಠ್ಯದಲ್ಲಿ ಅಬ್ಬಗದಾರಗರು ದುಂಬಿಗಳಾಗಿ ಮೇಲಿನ ಲೋಕದಲ್ಲಿರುವ ನಾರಾಯಣ ದೇವರಲ್ಲಿಗೆ ಹೋಗಿ ನಮ್ಮನ್ನು ದೇವರ ಅಧೀನಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿದಾಗ ಅವರು "ನಿಮ್ಮ ತಾಯಿ ಹಾಲೆ ಮಂಟಪದಲ್ಲಿ ಕುಳಿತುಕೊಂಡು ಋತುಮತಿ ಯಾದುದರ ಕಲಶಕನ್ನಡಿಯ ನೀರು ಸ್ನಾನ ಮಾಡಲಿಲ್ಲ. ಆದುದರಿಂದ ತಾಯಿಯವರ ಮೈಲಿಗೆನೀರು ಸ್ನಾನ ಮಾಡಿ ಬಂದರೆ ಮಾತ್ರ ದೇವರ ಅಧೀನಕ್ಕೆ ತೆಗೆದುಕೊಳ್ಳುವೆ" ಎನ್ನುತ್ತಾರೆ. ಹೀಗಾಗಿ ನಾರಾಯಣದೇವರಲ್ಲಿ ಜೋಗವನ್ನು ಬೇಡಿಕೊಂಡು ಬಂದ ಮಕ್ಕಳು ಬೋಲದ ಅಬ್ಬೆಯರು ಕಲಶ ಕನ್ನಡಿಯ ನೀರು ಸ್ನಾನ ಮಾಡಲು ಸಿದ್ಧರಾದವರನ್ನು ಮಾಯಮಾಡಿ ಅವರ ಜಾಗದಲ್ಲಿ ಅಬ್ಬಯ ದಾರಯರು ನಿಂತು ತಾಯಿ ಸೊನ್ನೆ ಋತುಮತಿಯಾದುದರ ಮೈಲಿಗೆನೀರು(ಕೊಳೆನೀರು) ಸ್ನಾನ ಮಾಡಿ ಮತ್ತೆ ಬೋಲದ ಅಬ್ಬೆಯರನ್ನು ಜೋಗ ಮಾಡಿಸಿ ಆ ಜಾಗದಲ್ಲಿ ನಿಲ್ಲಿಸಿ ತಾವು ಮಾಯವಾಗಿ ನಾರಾಯಣ ದೇವರಲ್ಲಿಗೆ ಹೋಗುವ ವಿವರಗಳಿವೆ. ಅಬ್ಬಯ ದಾರಯರು ತಮ್ಮ ಸಾವಿನ ಅನಂತರ ನೇರವಾಗಿ ದೇವರಲ್ಲಿಗೆ ಹೋಗುವ ಕಾರಣ ಅವರಿಗೆ ದೇವರೊಟ್ಟಿಗೆ ನಿಲ್ಲುವ ಅವಕಾಶ ಒದಗಿದೆ. ಉಳಿದಂತೆ ಸಿರಿಯ ಎಲ್ಲ ಪರಿವಾದವರು ಮಾಯವಾಗಿ ಬೊಲ್ಯೊಟ್ಟುವಿಗೆ ಹೋಗಿ ಕುಮಾರನ ಜೊತೆ ನೆಲೆಯಾಗುವ ಕಾರಣ ಅವರಿಗೆ ದೇವರ ಗುಡಿಯೊಳಗೆ ನಿಲ್ಲುವ ಅವಕಾಶ ಸಿಗಲಿಲ್ಲ. ಹೀಗಾಗಿ ಬಹುತೇಕ ಆಲಡೆಗಳಲ್ಲಿ ಬೆರ್ಮೆರ್ ಅಥವಾ ಬ್ರಹ್ಮಲಿಂಗೇಶ್ವರ ದೇವರ ಎಡಬಲಗಳಲ್ಲಿ ಅಬ್ಬಯ-ದಾರಯರು ಆರಾಧನೆಯನ್ನು ಪಡೆಯುವುದು ಈ ಕಾರಣಕ್ಕಾಗಿ ಎಂದು ತಿಳಿಯಬಹುದು. ಉಳಿದಂತೆ ಆಲಡೆಗಳಲ್ಲಿ ಸಿರಿ, ಕುಮಾರ, ಸೊನ್ನೆ, ಗಿಂಡೆ, ಸಾಮು – ಇವರೆಲ್ಲ ಕುಮಾರನ ಶಕ್ತಿಯಿಂದ ಮಾಯವಾಗಿ ಎಲ್ಲರೂ ಹೋಗಿ ಮೊದಲ ಆಲಡೆಯಾದ ಬೊಲ್ಯೊಟ್ಟಿನಲ್ಲಿ ನೆಲೆಯೂರುತ್ತಾರೆ. ಹೀಗಾಗಿ ಸಿರಿಗೆ ದೇವರ ಜೊತೆಗಿನ ಸಂಪರ್ಕ ಇಲ್ಲ. ಆರಾಧನೆಯೂ ಇಲ್ಲ ಎನ್ನಬಹುದು. ಈ ಅವಕಾಶವನ್ನು ಸಿರಿಯ ಮೊಮ್ಮಕ್ಕಳಾದ ಅಬ್ಬಯ-ದಾರಯರು ಪಡೆದಿರುವುದು ವಿಶೇಷವಾಗಿದೆ.

ಒಟ್ಟು ಸಿರಿ ಕಾವ್ಯ ಹಾಗೂ ಆಚರಣೆಗಳನ್ನು ನೋಡಿದಾಗ ಸಿರಿ ಸಾಂಕೇತಿಕವಾಗಿ ಹಿಂಗಾರದ ಹಾಳೆಯಲ್ಲಿ ಹೆಣ್ಣು ಮಗುವಾಗಿ ದೇವರ ವರಪ್ರಸಾದಿಂದ ಹುಟ್ಟುತ್ತಾಳೆ. ಸಿರಿಯ ತಲೆಮಾರಿನ ಕೊನೆಯ ಕೊಂಡಿಗಳಾದ ಅಬ್ಬಗ-ದಾರಯರು ದುರಂತ ಸಾವಿನ ಅನಂತರ ಕೂಡಾ ಹಿಂಗಾರದ ಹಾಳೆಗಳಾಗಿ ಬಾವಿಯಲ್ಲಿ ತೇಲುತ್ತಾರೆ. ಹೀಗಾಗಿ ಹಿಂಗಾರದ ಹಾಳೆ ಸಿರಿಯ ಹುಟ್ಟು ಮತ್ತು ಸಾವಿನಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದರಿಂದಾಗಿಯೇ ಸಿರಿ ಆಚರಣೆಯಲ್ಲಿ ಹಿಂಗಾರದ ಹಾಳೆಗೆ ಮಹತ್ವ ಪ್ರಾಪ್ತವಾಗಿದೆ.

ಸಿರಿಯ ಕಥೆ ತುಳುನಾಡಿನಲ್ಲಿ ಉಳಿಯಬೇಕು ಎಂಬುದನ್ನು ಸತ್ಯಮಾಲೋಕಂದ ಸಿರಿ ಬೋಲದ ಕಾಡಿನಲ್ಲಿ ಕುಮಾರನಿಗೆ ಹೇಳಿದ ಮಾತು ಹೀಗಿದೆ:- "ಘಟ್ಟದ ಬದಿಯಿಂದ ಹಿಡಿದು ಸಮುದ್ರದ ಬದಿಯವರೆಗೆ, ಸೂರ್ಯೋದಯದಿಂದ ಹಿಡಿದು ಚಂದ್ರ ಅಸ್ತಮವಾಗುವವರೆಗೆ ಹಾಕು ಮಗ ಕಾವಲು, ಇಡು ಮಗ ದೃಷ್ಟಿ" ಎಂದು ತಾಯಿ ಸಿರಿ ಹೇಳಿದ್ದರು. "ತುಳುನಾಡಿನಲ್ಲಿ ಬಿತ್ತು ಬೀಜವನ್ನು, ಸಸಿಯಾಗಿ ಮೊಳಕೆ ಬರಿಸು. ತುಳುನಾಡಿನಲ್ಲಿ ಸಿರಿಯ ಕಥೆಯನ್ನು ನಾಲ್ಕು ರಾಜ್ಯ, ನಾಲ್ಕು ಸೀಮೆಗೆ, ನಾಲ್ಕು ದಿಕ್ಕಿಗೆ ಸೂರ್ಯಚಂದ್ರರಿರುವ ತನಕ ಬಿತ್ತಿಕೊಂಡು ಬಾ" ಎಂದು ತಾಯಿ ಸಿರಿ ಕೊಟ್ಟ ವರ. ಇಂದಲ್ಲ ಶತಕಾಲದವರೆಗೆ ಸೂರ್ಯಚಂದ್ರರಿರುವ ತನಕ ಸಿರಿಯ ಬೆಳಕು ತುಳುನಾಡಲ್ಲಿ ಮಲೆನಾಡ ಸೀಮೆಯಲ್ಲಿ, ತುಳು ರಾಜ್ಯದಲ್ಲಿ, ಪರಶುರಾಮ ಸೃಷ್ಟಿಯಲ್ಲಿ ಈ ಕಥೆ ಎಂಬುದು ಪವಿತ್ರವಾದ ಗಂಟಾಗಿರಲಿ' ಎಂಬುದಾಗಿ ಹೇಳಿದ್ದರು ಎಂಬ ಮಾತನ್ನು ಕುಮಾರ ತನ್ನ ಮೊದಲ ಆಲಡೆ ಬೊಲ್ಯೊಟ್ಟಿನಲ್ಲಿ ನಿಂತು ಹೇಳಿದ ಮಾತೆಂಬುದನ್ನು ಮಾಚಾರು ಗೋಪಾಲ ನಾಯ್ಕರು ತಮ್ಮ ಕಾವ್ಯದ ಕೊನೆಗೆ ಹಾಡಿದ್ದಾರೆ. ಹೀಗಾಗಿ ತುಳುನಾಡಿನಲ್ಲಿ ಸಿರಿಯ ಕಥೆ ಎಂಬುದು ಸೂರ್ಯಚಂದ್ರರಿರುವ ತನಕ ಅಚ್ಚಳಿಯದೆ ಉಳಿಯುತ್ತದೆ ಎಂಬುದು ಬಹುತೇಕ ಸಿರಿಗಳ ನಂಬಿಕೆ. ಕರ್ಗಿಶೆಡ್ತಿ, ಲೀಲಾ ಶೆಡ್ತಿ, ಶ್ಯಾಮರಾಯ ಶೆಟ್ಟಿ, ಮುತ್ತಪ್ಪ ಕುಲಾಲ್ ಮುಂತಾದವರನ್ನು ಸಂದರ್ಶನದಲ್ಲಿ "ಇತ್ತೀಚೆಯ ದಿನಗಳಲ್ಲಿ ಆಲಡೆಗಳಲ್ಲಿ ದರ್ಶನಕ್ಕೆ ನಿಲ್ಲುವ ಸಿರಿಗಳ ಸಂಖ್ಯೆ ಕಡಿಮೆಯಾಗುತ್ತಿದೆಯಲ್ಲ. ನೂರಿನ್ನೂರು ಸಿರಿಗಳು ಸೇರುತ್ತಿದ್ದಲ್ಲಿ ಬರಿಯ ಬೆರಳೆಣಿಕೆಯ ಸಿರಿಗಳು ಮಾತ್ರ ಸೇರುತ್ತಿದ್ದಾರಲ್ಲಾ. ಹೀಗೇ ಮುಂದುವರಿದರೆ ಮುಂದೊಂದು ದಿನ ಸಿರಿ ಜಾತ್ರೆಯೇ ನಿಂತು ಬಿಡುವ ಸಾಧ್ಯತೆ ಇದೆಯೇ?" ಎಂದು ಕೇಳಿದಾಗ ಯಾರೂ ಈ ಮಾತನ್ನು ಒಪ್ಪಲಿಲ್ಲ. "ತುಳುನಾಡು ಇರುವ ತನಕ ಸಿರಿಯೂ ಇರುತ್ತಾಳೆ. ಅವಳ ಕಾರಣಿಕ ಕಡಿಮೆಯಾಗಲು ಸಾಧ್ಯವಿಲ್ಲ. ಆಲಡೆಗಳಿಗೆ ಜನ ಕಡಿಮೆ ಬರಲಿ, ತೊಂದರೆಯಿಲ್ಲ. ಅವಳಿಗೆ ಬೇಕೆಂದರೆ ಯಾರ ಮೇಲಾದರೂ ದೃಷ್ಟಿ ಇಡುತ್ತಾಳೆ. ಅವರು ಇವರು ಎಂದು ಹೇಳಲು ಬರುವುದಿಲ್ಲ. ಅವಳು ದೃಷ್ಟಿ ಇಟ್ಟರೆ ಅದು ನೋಟವೇ. ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ" ಎಂದರು. ಕರ್ಗಿಯವರಂತೂ ಮುಂದುವರಿದು "ಸಿರಿ ಆರಾಧನೆ ನಿಂತುಹೋಗುವ ಸಂದರ್ಭ ಬಂದರೆ ಬೇಲಿಯ ತೂನ(ಗೂಟ)ಕ್ಕೂ ದರ್ಶನ

ಬರಬಹುದು. ತುಳುನಾಡಿನಲ್ಲಿ ಸಿರಿಯ ಅಸ್ತಿತ್ವ ಸೂರ್ಯಚಂದ್ರರಿರುವ ತನಕ ಇರುತ್ತದೆ ಎಂಬುದು ಹಾಲಿನಷ್ಟು ಸತ್ಯ. ತುಳುನಾಡಿನಲ್ಲಿ ಇಂಥ ಒಂದು ಕಥೆ ಅಗಬೇಕೆಂದು ದೇವಲೊಕದಿಂದ ಬೆರ್ಮರೇ ಸತ್ಯದ ಸಿರಿಯನ್ನು ಕಳುಹಿಸಿದ್ದು. ಹೀಗಾಗಿ ಈ ಕಥೆ ತುಳುನಾಡು ಇರುವ ತನಕ ಇರುತ್ತದೆ. ಸಿರಿಯ ಮಹಿಮೆ ಕಡಿಮೆಯಾಗಲು ಸಾಧ್ಯವೇ ಇಲ್ಲ" ಎಂದರು (ಸಂದರ್ಶನದ ಮಾಹಿತಿಗಳು 2014- 2016).

ಸಿರಿಯ ಜೀವನದಲ್ಲಿ ಆಕೆ ಶಾಪವಿಡುವ, ಮಾಯ ಮಾಡುವ ಹಲವು ಸಂದರ್ಭಗಳು ಬರುತ್ತವೆ. ಆಕೆಯ ಜೀವನದ ಕಥೆಯನ್ನು ವಿಮರ್ಶಿಸಿ ನೋಡಿದರೆ ಸಿರಿ ಬರಿಯ ಶಾಪದಂತಹ ಕೆಟ್ಟದ್ದನ್ನೇ ತನ್ನ ಬದುಕಿನುದ್ದಕ್ಕೂ ಮಾಡಿದ್ದಾಳೆ ಎಂಬುದು ಇದರ ಅರ್ಥವಲ್ಲ. ಕೆಲವೊಂದು ಒಳ್ಳೆಯ ಸಂಗತಿಗಳನ್ನು ಮಾಡಿದ್ದಾಳೆ. ಸಿರಿಗೆ ಕೆಟ್ಟದ್ದು ಬಯಸಿದವರಿಗೆ ಕೆಡುಕಾಗುವಂತೆ ಮಾಡಿದ್ದಾಳೆ. ಒಳಿತು ಬಯಸಿದವರಿಗೆ ಒಳ್ಳೆಯ ವರಗಳನ್ನೂ ನೀಡಿದ್ದಾಳೆ. ಉದಾಹರಣೆಗೆ ಸಿರಿ ಬಸಲೂರ ಅರಮನೆ ಇಳಿದು ದೇಶಾಂತರ ಹೋಗುವಾಗ ಬೇರೆ ಬೇರೆ ಜನಾಂಗದ ಹೆಂಗಸರು ಸಿರಿಯನ್ನು ಬರಮಾಡಿಕೊಂಡು ಅವಳನ್ನು ಉಪಚರಿಸಿ ಕಳುಹಿಸುತ್ತಾರೆ. ಅವರಿಗೆಲ್ಲ ಸಿರಿ ಒಳ್ಳೆಯ ವರಗಳನ್ನು ನೀಡಿ ಮುನ್ನಡೆಯುತ್ತಾಳೆ. ಗದ್ದೆಯಲ್ಲಿ ಧಾನ್ಯ ಕೊಯ್ಯುವ ಹೆಂಗಸರಿಗೆ ಇಡೀ ದಿನಕ್ಕೆ ಎರಡು ಬಳ್ಳ ಭತ್ತ ಕೂಲಿ ದೊರೆಯುತ್ತಿತ್ತು. ಸಿರಿಯನ್ನು ಬಹು ಪ್ರೀತಿಯಿಂದ ಕಂಡ ಇವರಿಗೆ ಇನ್ನು ಮುಂದಕ್ಕೆ ಬೆಳಗ್ಗಿನ ಒಂದು ಹೊತ್ತು ಮಾತ್ರ ಧಾನ್ಯ ಕೊಯ್ದು ಎರಡು ಬಳ್ಳ ಭತ್ತ ಕೂಲಿ ಪಡೆಯಬೇಕು. ಅದರ ಮೇಲೆಯೂ ಕೊಯ್ಯಲು ಹೇಳಿದರೆ ಧಾನ್ಯ ಗದ್ದೆಯಲ್ಲೇ ಒಡೆದು ಹೋಗಬೇಕೆಂಬ ವರವನ್ನು ನೀಡುತ್ತಾಳೆ. ಹೂಮಾರುವ ಬಾಯಿ (ಕ್ರೈಸ್ತ) ಹೆಂಗಸು ಸಿರಿಯನ್ನು ಪ್ರೀತಿಯಿಂದ ಕಂಡದ್ದಕ್ಕೆ "ಗುಡ್ಡೆ ತುದಿಯಲ್ಲಿ ಮನೆಮಾಡಿ ಕುಳಿತರೂ ಕೇನೆ ಗೆಣಸು ಬೆಳೆಸಿಯಾದರೂ ಜೀವನ ಸಾಗಿಸು" ಎಂಬ ವರ ನೀಡುತ್ತಾಳೆ. ರಾಮಕ್ಕ ಅವರ ಪಠ್ಯದಲ್ಲಿ ಸಿರಿ ದೇಶಾಂತರ ಹೋಗುವಾಗ ಬಿರುವರ ಹೆಣ್ಣೊಬ್ಬಳು ಕಳ್ಳು ತಲೆಯಲ್ಲಿರಿಸಿಕೊಂಡು ಸಿರಿಯ ಎದುರಿಗೆ ಸಿಗುತ್ತಾಳೆ. ಸಿರಿಯನ್ನು ಸೌಜನ್ಯದಿಂದ ಮಾತನಾಡಿಸಿದ ಆಕೆಗೆ "ಈವರೆಗೆ ಕಳ್ಳನ್ನು ತಲೆಯಲ್ಲಿ ಹೊತ್ತು ಮಾರಿದೆ. ಇನ್ನು ಮುಂದಕ್ಕೆ ಕುಳಿತು ಮಾರು" ಎಂಬ ವರವನ್ನು ನೀಡುತ್ತಾಳೆ. ಮುಂದೆ ಹೋಗುವಾಗ ಮನ್ಸರ ಹೆಂಗಸು ಎದುರಾಗುತ್ತಾಳೆ. "ನನ್ನಲ್ಲಿ ಕೊಡಲು ಏನೂ ಇಲ್ಲ. ಬೆಳೆದ ಸೌತೆಯನ್ನು ತಿಂದು ಒಡಲು ತಂಪು ಮಾಡಿಕೊಳ್ಳಿ" ಎಂದು ಹೇಳಲು ಸಿರಿ ಮೆಚ್ಚಿ ತನ್ನ ಮೊಲೆಯ ಅಂದದಲ್ಲಿ ಎಳ್ಳಿನ ಏಳು ಭಾಗದಷ್ಟು ಅವಳಿಗಿರಲಿ ಎಂಬ ವರ ನೀಡುತ್ತಾಳೆ. ಜೈನರ ಹೆಣ್ಣು ಸಿರಿಯನ್ನು ಕಂಡು ಉಪಚರಿಸಿದ್ದಕ್ಕೆ "ನಿನ್ನ ಮನೆಯಲ್ಲಿ ಮೊಸರಿನ ಗಡಿಗೆ ತಪ್ಪದಿರಲಿ" ಎಂಬ ವರ ನೀಡುತ್ತಾಳೆ. ಆಚಾರಿಗಳ ಹೆಣ್ಣು ಉಪಚರಿದ್ದಕ್ಕೆ "ನಿನ್ನ ಹಣೆಯಲ್ಲಿ ಮುತ್ತೈದೆತನ ತಪ್ಪದಿರಲಿ" ಎನ್ನುವಳು. ಸಮುಗಾರರ ಹೆಣ್ಣು ಸಿಕ್ಕಾಗ ಆಕೆಗೆ ತನ್ನ ತಲೆಯ ಜುಟ್ಟಿನ ಅಂದದ ಎಳ್ಳಿನ ಏಳು ಭಾಗದ ಅಂದವಿರಲಿ ಎಂದು, ನಲಿಕೆಯವರ ಹೆಣ್ಣು ಸಿಕ್ಕಿ ಉಪಚರಿಸಿದ್ದಕ್ಕೆ ವರ್ಷದ ಆರು ತಿಂಗಳ ದರ್ಶನ, ಆರು ತಿಂಗಳು

ಮಳೆಗಾಲ ಇರಲಿ – ಹೀಗೆ ಇವರಿಗೆಲ್ಲ ಸಿರಿ ಒಳ್ಳೆಯ ವರಗಳನ್ನೇ ನೀಡಿದ್ದಾಳೆ.

ಸಿರಿ ತನ್ನ ಗಂಡನಾದ ಕಾಂತುಪೂಂಜ ತನಗೆ ಮಾಡಿರುವ ಅನ್ಯಾಯವನ್ನು ಪ್ರತಿಭಟಿಸಿ ಆತನಿಗೆ ಬರಹೇಳಿ ಬಸಲೂರ ಅರಮನೆಯನ್ನು ಶಪಿಸಿ ದೇಶಾಂತರ ಹೋಗುವ ಸನ್ನಿವೇಶ ಸಾಮಾನ್ಯ ಎಲ್ಲ ಪಠ್ಯಗಳಲ್ಲಿ ಇದೆ. ದೇಶಾಂತರ ಹೊರಡುವ ಸಂದರ್ಭ ಬಸಲೂರ ಅರಮನೆಗೆ ಬಲು ಬಡತನ ಬಂದು ತನ್ನ ಗಂಡನಾದ ಕಾಂತುಪೂಂಜ ಕುತ್ತಿಗೆಗೆ ನೇಗಿಲು ನೊಗ ಕಟ್ಟಿಕೊಂಡು, ಕಾಲಿಗೆ ಬಿಳಿಯ ಬಟ್ಟೆ ಸುತ್ತಿಕೊಂಡು ಬಗಲಲ್ಲಿ ಜೋಳಿಗೆ ಹಾಕಿಕೊಂಡು ನಾಲ್ಕು ಮನೆ ಬೇಡುತ್ತಾ ಕೊನೆಗೆ ತನ್ನಲ್ಲಿಗೆ ಬರಬೇಕು ಎಂದು ಶಪಿಸುತ್ತಾಳೆ. ಸಿರಿಯ ಈ ಶಾಪ ಗಂಡನಿಗೆ ತಟ್ಟಿ ಆತನಿಗೆ ಬಸಲೂರ ಅರಮನೆಯಲ್ಲಿ ಬಲುಬಡತನ ಬಂದು ಉಣ್ಣಲೂ ಗತಿಯಿಲ್ಲದೆ ನೊಗ ನೇಗಿಲನ್ನು ಕುತ್ತಿಗೆಗೆ ಕಟ್ಟಿಕೊಂಡು ಬಗಲಲ್ಲಿ ಜೋಳಿಗೆ ಹಾಕಿಕೊಂಡು ಕಾಲಿಗೆ ಬಿಳಿಯ ಬಟ್ಟೆ ಸುತ್ತಿ ಎಲ್ಲ ಕಡೆ ಭಿಕ್ಷೆ ಬೇಡುತ್ತಾ ಬರುತ್ತಾನೆ. ಆದರೆ ಈತನಿಗೆ ಎಲ್ಲಿಯೂ ಭಿಕ್ಷೆ ದೊರೆಯದೆ ಕೊನೆಗೆ ಕೊಟ್ರಾಡಿಗೆ ಬರುತ್ತಾನೆ. ಕಾಂತುಪೂಂಜನ ಈ ದಯನೀಯ ಸ್ಥಿತಿಯನ್ನು ನೋಡಿದ ಸಿರಿಯ ಎರಡನೆಯ ಗಂಡ ಕೊಡ್ಸರಾಳ್ವರು ನೊಗ ನೇಗಿಲನ್ನು ಕಿತ್ತೆಸೆದು ಅರಮನೆಯ ಒಳಗೆ ಕರೆದುಕೊಂಡು ಹೋಗಿ ಉಪಚರಿಸಿದಾಗ ಕಾಂತುಪೂಂಜ ಕೊಡ್ಸರಾಳ್ವರಲ್ಲಿ ನಿಮ್ಮ ಮದುಮಗಳು(ಮಡದಿ) ಸಿರಿಯಲ್ಲಿ ನನಗೆ ಒಂದು ವರ ಕೊಡಿಸಬೇಕೆನ್ನುತ್ತಾನೆ. ಆಗ ಕೊಡ್ಸರಾಳ್ವರು ಸಿರಿ ಈಗ ನನ್ನ ಮದುಮಗಳಾದರೂ ಹಿಂದೆ ನಿಮ್ಮ ಕೈಹಿಡಿದ ಮದುಮಗಳು. ನೀವೇ ಅವಳಲ್ಲಿ ವರ ಕೇಳಿ ಎನ್ನುತ್ತಾರೆ. ಕಾಂತಾಳ್ವ ಈಗ ಅವಳು ನಿಮ್ಮ ಮದುಮಗಳಾದ ಕಾರಣ ನೀವೊಂದು ಮಾತು ಹೇಳ ಬೇಕೆನ್ನುತ್ತಾನೆ. ಕೊಡ್ಸರಾಳ್ವರು ಸಿರಿಯನ್ನು ಕುರಿತು ನಿನ್ನ ಅಂದು ಕೈ ಹಿಡಿದ ಗಂಡನಿಗೆ ವರವೊಂದನ್ನು ನೀಡು ಎನ್ನಲು ಸಾಮುವೂ ಸಿರಿಯನ್ನು ಒತ್ತಾಯಿಸುತ್ತಾಳೆ. ಆಗ ಸಿರಿ ನನಗೆ ಬೇಕಾದಷ್ಟು ಕಷ್ಟ ಕೊಟ್ಟವ ಇಂದು ಇಲ್ಲಿಗೆ ಯಾಕೆ ಬಂದಿದ್ದಾನೆ. ಆತನ ಮುಖ ಹೇಗೆ ನೋಡಲಿ ಎಂದು ಹೇಳಿ ಕಾಂತಾಳ್ವನನ್ನು ಕುರಿತು ಇಂದು ನೀವು ಮಾಡಿದ ಕರ್ಮವನ್ನು ಅನುಭವಿಸುತ್ತಿದ್ದೀರಿ. ನಾನು ಮಾಡಿದ ಧರ್ಮ ಹೆಚ್ಚಾಯಿತು. ಸಿರಿ ಕೊಟ್ಟರಾಡಿಯ ಬೋದಿಗೆಯ ಕಂಬದ ಸಮೀಪ ನಿಂತು ಕೊಡ್ಸರಾಳ್ವರ ಬುಡುದಾರೆಯ (ಎರಡನೆಯ ಮದುವೆಯ) ಮದುಮಗಳು ಮಣ್ಣು ಮುಟ್ಟಿ ಹೆಣ್ಣುಶಾಪ ನೀಡುತ್ತಾಳೆ. ನಿಮಗೆ ಈವರೆಗೆ ಬಸಲೂರು, ಸತ್ಯನಾಪುರದಲ್ಲಿ ದಾನ ಧರ್ಮಗಳು ಸಿಗಲಿಲ್ಲ ಅಲ್ಲವೇ? ಇನ್ನು ಮುಂದಕ್ಕೆ

ತುಳುಪಠ್ಯ

ಬಸಲೂರ ಅರಮ್ಮನೆಡ್ ಮಾಲೋಕ ಕೊರಲಾತಾವೊಡು
ತನಕ್ ತಿನಲಾತಾವೊಡು ಕಾಟಿ ಕಟ್ಟ್‌ದ್ ಕರ್ಬಾಸ್ ದಪ್ಪಾವೊನುದು
ಪನಿಬತ್ತ ಲಪ್ಪಾವೊನುದು ಪೇರ್ ಪರೊಂದು ಪಾಸ್‌ಡ್ ಒರಗೊಂದು

ಇಪ್ಪುಲೆ ಮದಿಮ್ಮಾಯಾ ಯಾನ್ ಬತ್ತ್ ಪೊಗ್ಗಿ ಕಾಲೊಡು ಎರಮಾನೆ ಎಂಚ ಇತ್ತಂಡ್‌ಗೆನ
ಬಸಲೂರುದ ಎರಮಾನೆ ಅಂಚನೆಲಾವೊಡುಂದು ಪಂಡೆರ್
ಮಣ್ಣ್ ಮುಟ್ಟು ಪೊಣ್ಣ ಸಾಪಾನೆ ಕೊರ್ಯೆರ್

ಕನ್ನಡಾನುವಾದ

ಬಸಲೂರ ಅರಮನೆಯಲ್ಲಿ ಮಹಾಲೋಕಕ್ಕೆ ಹಂಚುವಷ್ಟು ಆಗಬೇಕು
ತನಗೆ ತಿನ್ನುವಷ್ಟು ಆಗಬೇಕು, ಕಾಟಿ (ಕೋಣ) ಕಟ್ಟಿ ಕರ್ಬಾಸ್ (ಎತ್ತುಗಳಿಂದ) ಉಳುಮೆ ಮಾಡಿಕೊಂಡು
ಕೂಲಿ ಅಳೆದು ಕೊಡುತ್ತಾ ಹಾಲು ಕುಡಿದು ಹಾಸಿಗೆಯಲ್ಲಿ ಮಲಗಿಕೊಂಡಿರಿ ಮದುಮಗಾ
ನಾನು ಇದ್ದ ಕಾಲದಲ್ಲಿ ಅರಮನೆ ಹೇಗಿತ್ತಾ ಬಸಲೂರ ಅರಮನೆ ಹಾಗೇ ಆಗಬೇಕೆಂದರು
ಮಣ್ಣು ಮುಟ್ಟಿ ಹೆಣ್ಣ ಶಾಪ ನೀಡಿದರು (ರಾಮಕ್ಕ, ಪುಟ 178).

ಸಿರಿಯು ನೀಡಿದ ವರದಿಂದ ಶಾಪ ಮುಕ್ತರಾಗಿ ಕಾಂತಾಳ್ವ ಬಸಲೂರ ಅರಮನೆಗೆ ಬರಲು ಎಲ್ಲ ಸಂಪತ್ತುಗಳು ತುಂಬಿ ಬರುತ್ತವೆ. ಹೀಗಾಗಿ ಸಿರಿ ತನ್ನ ಬದುಕಲ್ಲಿ ಕಷ್ಟಗಳನ್ನು ನೀಡಿದ ಗಂಡನಾದ ಕಾಂತುಪೂಂಜನ ದಯನೀಯ ಸ್ಥಿತಿಯನ್ನು ನೋಡಿ ಕೊನೆಗೂ ಆತನ ಶಾಪ ವಿಮೋಚನೆಗೊಳಿಸುವ ಮೂಲಕ ಹೃದಯ ವೈಶಾಲ್ಯತೆಯನ್ನು ಮೆರೆಯುತ್ತಾಳೆ. ಇದು ಸಿರಿಯ ಒಳ್ಳೆಯತನಕ್ಕೆ ನಿದರ್ಶನ ಎನ್ನಬಹುದು.

ಸಿರಿ ವ್ಯಭಿಚಾರಿಯಾದ ಕಾಂತುಪೂಂಜನಿಗೆ ವಿಚ್ಛೇದನ ಹೇಳಿದುದರ ಬಗೆಗೆ ಹಾಗೂ ಕೊಡ್ಸರಾಳ್ವರನ್ನು ಮರು ಮದುವೆಯಾದುದರ ಬಗೆಗೆ ಅನೇಕ ಸಿರಿಗಳನ್ನು ಕೇಳಿದಾಗ ನಮಗೆ ದೊರೆಯುವ ಉತ್ತರ ಸಿರಿಯ ಗಂಡ ಕಾಂತುಪೂಂಜ ಸೂಳೆಸಿದ್ದುವಿನ ಸಂಪರ್ಕದಲ್ಲಿ ಇದ್ದದ್ದನ್ನು ಯಾವ ಹೆಂಡತಿಯಾದರೂ ಸಹಿಸಿಯಾಳೇ? ಮಾತ್ರವಲ್ಲ ಬಯಕೆಯ ಸೀರೆಯ ಮಡಿಕೆಡಿಸಿದ ಸೂಳೆಸಿದ್ದುವಿನ ಸಹವಾಸದಲ್ಲಿರುವ ತನ್ನ ಗಂಡನನ್ನು ಸಹಿಸದೆ ವಿಚ್ಛೇದನ ಹೇಳಿದ್ದು ಸರಿ ಎಂಬುದು ಕರ್ಗಿ ಅವರ ಅಭಿಪ್ರಾಯವಾದರೆ ಸೂಳೆಸಿದ್ದುವಿನ ಸಹವಾಸ ಮಾಡಿದ್ದಕ್ಕೆ ಸಿರಿ ಕಾಂತುಪೂಂಜನಿಗೆ ವಿಚ್ಛೇದನ ಹೇಳಿದುದಲ್ಲ. ಯಾಕೆಂದರೆ ಗಂಡಸರು ಕೆಸರಿದ್ದಲ್ಲಿ ತುಳಿಯುತ್ತಾರೆ, ನೀರಿದ್ದಲ್ಲಿ ತೊಳೆಯುತ್ತಾರೆ. ಇದು ಬಹು ದೊಡ್ಡ ವಿಷಯವಲ್ಲ. ಆದರೆ ಹೆಣ್ಣನ್ನೂ ಮಣ್ಣನ್ನು ಧಾರೆಯೆರೆದು ಕೊಟ್ಟ ಸತ್ಯನಾಪುರದ ಅಜ್ಜನವರು ತೀರಿಕೊಂಡಾಗಲೂ ಬಾರದೆ ಮನೆಯಲ್ಲೇ ಕುಳಿತು ಹೆಂಡತಿಯಾದವಳ ಕಷ್ಟವನ್ನು ನೋಡಿ ಸಂತೋಷಪಡುತ್ತಿದ್ದ ಕಾಂತುಪೂಂಜ ಅವನೂ ಒಬ್ಬ ಗಂಡಸೇ? ಹೆಂಡತಿಯಾದವಳ ಕಷ್ಟಕ್ಕೆ ಬಾರದ ಗಂಡ ಇದ್ದರೆಷ್ಟು ಬಿಟ್ಟರೆಷ್ಟು? ಹೀಗಾಗಿ ಇಂಥ ಗಂಡನಿಗೆ ವಿಚ್ಛೇದನ ಹೇಳಿದ್ದಾಳೆ ಎಂಬ ಅಭಿಪ್ರಾಯವನ್ನು ಲೀಲಾ ಅವರು ನೀಡಿದ್ದಾರೆ. ಇಷ್ಟಕ್ಕೇ ಸಿರಿಯನ್ನು ಸೀಮಿತಗೊಳಿಸದೆ ಸಣ್ಣಪ್ರಾಯದಲ್ಲೇ ಗಂಡನನ್ನು ಕಳೆದುಕೊಂಡ ಹೆಣ್ಣುಮಕ್ಕಳು ಕತ್ತಿನ ಕಿಲವಂದಿ, ಕೈಯಬಳೆ, ಮೂಗಿನ ಮುತ್ತೈದೆತನವನ್ನು

ಕಳೆದುಕೊಂಡು ತಲೆಯ ಮೇಲೆ ಸೆರಗಿನ ಮುಸುಕೆಳೆದು ಮೂಲೆಯಲ್ಲಿ ಕುಳಿತುಕೊಳ್ಳ ಬಾರದು. ಎರಡನೇ ಮದುವೆಯಾಗಿ ಬದುಕು ಸಾಗಿಸಬೇಕು ಎಂಬ ಬಹುಮುಖ್ಯ ಸಂದೇಶವನ್ನು ನೀಡಿರುವುದರಿಂದ ಸಿರಿ ಇಂದಿಗೂ ಮುಖ್ಯವಾಗುತ್ತಾಳೆ ಎಂಬುದು ಕರ್ಗಿಯವರ ಅಭಿಪ್ರಾಯ. ಸಿರಿಯ ಎರಡನೇ ಮದುವೆಯ ಕುರಿತು ಕೇಳಿದಾಗ ಅಂದು ಕುಮಾರನನ್ನು ಬೋಲದ ಕಾಡಲ್ಲಿ ಮಾಯಮಾಡುವಾಗಲೇ ಕುಮಾರನಿಗೆ ಸಿರಿ "ಒಬ್ಬಳು ತಾಯಿಗೆ ಒಂದೇ ಮಗು ಒಳ್ಳೆಯದಲ್ಲ, ಒಂದು ಬಾಳೆಗೆ ಒಂದು ಮರಿಗಿಡ(ಕುರ್ಲೆ) ಒಳ್ಳೆಯದಲ್ಲ. ಹೀಗಾಗಿ ವರ್ಷ ಕಳೆದು ಒಂದು ದಿನದಲ್ಲಿ ನಿನ್ನ ಮುಖದ ಮುತ್ತಿನಂಥ ಬೆವರು, ಬೆನ್ನಿನ ಯಮಧೂಳು ಒರೆಸಲು ನಿನಗೊಬ್ಬಳು ತಂಗಿಯನ್ನು ಹೆತ್ತು ಬರುವೆ" ಎಂಬ ಮಾತನ್ನು ಕೊಟ್ಟಿದ್ದಾಳೆ. ಹಾಗಾಗಿ ಎರಡನೇ ಮದುವೆಯ ಆಲೋಚನೆ ಸಿರಿಯಲ್ಲಿ ಇತ್ತು ಎಂಬ ಅಭಿಪ್ರಾಯವನ್ನು ಕರ್ಗಿಯವರು ನೀಡುತ್ತಾರೆ.

ಕೊನೆಯದಾಗಿ ಕರ್ಗಿಯವರು "ಸಿರಿಯ ಹುಟ್ಟು, ಅವಳ ಮದುವೆ, ವಿಚ್ಛೇದನ, ದೇಶಾಂತರ ಹೋಗುವ ಸ್ಥಿತಿ, ಮರುಮದುವೆ, ಕುಮಾರ ದಾರುವನ್ನು ಮಾಯ ಮಾಡುವ ಪ್ರಸಂಗ ಇವೆಲ್ಲವನ್ನು ಒಟ್ಟಾಗಿ ಗ್ರಹಿಸಿ ಸಿರಿ ಬದುಕಿನುದ್ದಕ್ಕೂ ತುಂಬ ಕಷ್ಟವನ್ನು ಅನುಭವಿಸಿದ್ದಾಳೆ. ಇವಳ ಹುಟ್ಟೇ ಅಜ್ಜನವರು ಸಂತಾನವಿಲ್ಲದ್ದಕ್ಕೆ ಕಣ್ಣೀರು ಹಾಕಿರುವುದರಿಂದ ಅದರ ಪ್ರತಿಫಲವಾಗಿ ಹುಟ್ಟಿದ್ದಾಳೆ. ಹೀಗಾಗಿ ಸಿರಿಯ ಒಟ್ಟು ಬದುಕಿನಲ್ಲಿ ಅವಳೂ ಕಣ್ಣೀರು ಹಾಕುತ್ತಲೇ ಬದುಕಿದವಳು. ಬದುಕಿನಲ್ಲಿ ಹೆಚ್ಚು ಸುಖ ಪಡೆದವಳಲ್ಲ. ಹೀಗಾಗಿ ಸಿರಿ ದರ್ಶನಕ್ಕೆ ನಿಲ್ಲುವ ಯಾವುದೇ ಹೆಂಗಸನ್ನು ನೀವು ಸೂಕ್ಷ್ಮವಾಗಿ ಗಮನಿಸಿ ನೋಡಿ. ಅವಳಲ್ಲಿ ಒಂದಲ್ಲ ಒಂದು ರೀತಿಯ ಕಷ್ಟ ನಿಮಗೆ ಕಂಡೇ ಕಾಣುತ್ತದೆ. ಅವಳಲ್ಲಿ ಭೂಮಿ ಬದುಕು, ಆಭರಣ ಐಶ್ವರ್ಯ, ಉಡಲು ಬೇಕಾದ ಬಟ್ಟೆ, ಉಣ್ಣಲು ಬೇಕಾದ ಆಹಾರ ಇವುಗಳಿಗೆ ಏನೂ ಕೊರತೆಯಿಲ್ಲದಿದ್ದರೂ ಅವಳ ಬದುಕಿನಲ್ಲಿ ಒಂದು ಬಗೆಯ ಆತಂಕ ಇದ್ದೇ ಇರುತ್ತದೆ. ಇದು ಸಿರಿಯ ಮಹಾತ್ಮೆ" ಎಂದು ಮುಕ್ತಾಯಗೊಳಿಸಿದರು (ಸಂದರ್ಶನ 8.11.2013).

ಸಿರಿ ಆಚರಣೆ ಒಂದು ಸಾವಿನ ಆಚರಣೆಯೇ?

ನನ್ನ 'ಸಿರಿಕಾವ್ಯಲೋಕ' ಕೃತಿಯ ವಕ್ತೃವಾದ ಹಿರಿಯ ಸಿರಿ ದರ್ಶನಪಾತ್ರಿ ಶ್ರೀಮತಿ ಕರ್ಗಿ ಶೆಡ್ತಿಯವರನ್ನು ಸಂದರ್ಶನ ನಡೆಸುತ್ತಿದ್ದಾಗ ಒಂದು ಬಾರಿ ಅವರು ಸಿರಿ ಜಾತ್ರೆಯಂದು ಸಿರಿ, ಕುಮಾರ ಹಾಗೂ ಪರಿವಾದವರು ಕೈಯಲ್ಲಿ ಹಿಡಿಯುವ ಪುರ್ಪವನ್ನು ಕುರಿತು ತಿಳಿಸುತ್ತಾ 'ನಾವು ಕೈಯಲ್ಲಿ ಹಿಡಿಯುವ ಹಿಂಗಾರದ ಪುರ್ಪ (ಹೂ) ನೋಡುವ ನಿಮ್ಮ ಕಣ್ಣಿಗೆ ಅದು ಬರಿಯ ಕಂಗಿನ ಹಿಂಗಾರದ ಹೂವಿನಂತೆ ಕಾಣಬಹುದು. ಆದರೆ ನಮಗದು ನಿಜವಾಗಿ ಸಂಕಮಾಲ ಹಾವಿನ ಹೆಡೆ, ಸರ್ಪದ ಪಡಲೆ(ಹೆಡೆ) ಹಾಗೂ ಮಾಲಿಂಗೇಶ್ವರನ ಜಡೆ... ಅಷ್ಟು ಪವಿತ್ರವಾದುದು ನಮಗೆ.

ಅದು ನೋಡುಗನಿಗೆ ಬರಿಯ ಹೂವಾದರೆ ಅದನ್ನು ಹಿಡಿಯುವ ನಮಗೆ ಅಷ್ಟು ಭಾರವಿದೆ. ಅದನ್ನು ಕೈಯಲ್ಲಿ ಹಿಡಿದು ಸಿರಿ ಜಾತ್ರೆಯಂದು ನಾವು ನಡೆಸುವ ಸೇವೆಗೆ ಅಷ್ಟೇ ಮಹತ್ವವಿದೆ" ಎಂಬ ಮಾತನ್ನು ಹೇಳಿದ್ದರು. ಕರ್ಗಿಯವರ ಈ ಮಾತಿನ ಹಿನ್ನೆಲೆಯಲ್ಲಿ ಸಿರಿಜಾತ್ರೆಯನ್ನು ಸ್ವಲ್ಪ ಭಿನ್ನ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. ಮುಖ್ಯವಾಗಿ ಕಾರ್ಕಳ ತಾಲೂಕಿನ ಶ್ರೀ ಅಬ್ಬಗ-ದಾರಗ ಮಹಾಲಿಂಗೇಶ್ವರ ದೇವಸ್ಥಾನ, ಕವತ್ತಾರು, ಶ್ರೀ ಮಹತೋಭಾರ ಶಂಭುಲಿಂಗೇಶ್ವರ ದೇವಸ್ಥಾನ, ದರೆಗುಡ್ಡೆ, ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ನಂದಳಿಕೆ, ಶ್ರೀ ಬ್ರಹ್ಮಲಿಂಗೇಶ್ವರ ಅಬ್ಬಗ-ದಾರಗ ಆಲಡೆ, ಪೇರೂರು - ಈ ನಾಲ್ಕು ಕಡೆಗಳಲ್ಲಿ ಫೆಬ್ರವರಿಯಿಂದ ಮೇ ತಿಂಗಳ 2013-2016ರಲ್ಲಿ ನಡೆಸಿರುವ ಕ್ಷೇತ್ರೀಯ ಅಧ್ಯಯನದಿಂದ ಕಂಡುಕೊಂಡ ಮಾಹಿತಿಗಳ ಆಧಾರದಿಂದ ಹಾಗೂ ಈ ಆಲಡೆಗಳಲ್ಲಿ ಭಾಗವಹಿಸಿದ ಕೆಲವು ಸಿರಿ, ಕುಮಾರರು ಹಾಗೂ ದೇವಸ್ಥಾನಕ್ಕೆ ಸಂಬಂಧಿಸಿದ ಆಡಳಿತದವರು, ಅರ್ಚಕರು, ಇತರ ಸೇವೆಯವರನ್ನು ಸಂದರ್ಶನ ನಡೆಸಿದ ಮಾಹಿತಿಗಳ ಆಧಾರದಿಂದ ಮತ್ತು ಬಂಟರ ಸಾವಿನ ಆಚರಣೆಗೆ ಸಂಬಂಧಿಸಿ ನಾನು ನಡೆಸಿರುವ ಕ್ಷೇತ್ರೀಯ ಅಧ್ಯಯನದ ಮಾಹಿತಿಗಳನ್ನು ಆಧರಿಸಿ "ಸಿರಿ ಆಚರಣೆಯೆಂಬುದು ಸತ್ಯನಾಪುರದ ಅಜ್ಜನವರಿಗೆ ನಡೆಸುವ ಸಾವಿನ ಒಂದು ಆಚರಣೆಯೇ?" ಎಂಬೊಂದು ಊಹೆಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಿದ್ದೇನೆ. ಈ ಅಂಶಗಳನ್ನು ತುಳು ಸಂಶೋಧಕರು ಮುಕ್ತ ಮನಸ್ಸಿನಿಂದ ಗಮನಿಸಬೇಕೆಂಬುದು ಕೂಡ ನನ್ನ ವಿನಂತಿಯಾಗಿದೆ.

ನನ್ನ ಈ ಮೇಲಿನ ಹೇಳಿಕೆಗೆ ಸಂಬಂಧಿಸಿ ಸಿರಿ ಆಚರಣೆಯಲ್ಲಿ ಭಾಗವಹಿಸಿ ಅನೇಕ ವರ್ಷಗಳ ಅನುಭವವಿರುವ ಸಿರಿ, ಕುಮಾರರ ಅಭಿಪ್ರಾಯವನ್ನು ಮೊದಲು ಇಲ್ಲಿ ನೀಡುತ್ತಿದ್ದೇನೆ. 1999ರಲ್ಲಿ ನಾನು ನನ್ನ 'ಸಿರಿಕಾವ್ಯಲೋಕ' ಗ್ರಂಥಕ್ಕೆ ಪೂರಕವಾಗಿ ನಡೆಸಿದ ಸಂದರ್ಶನದ ಸಂದರ್ಭ ವಕ್ತೃವಾದ ಕರ್ಗಿ ಶೆಡ್ತಿಯವರು ಮಾತನಾಡುತ್ತಾ "ಸಿರಿ ಆಚರಣೆ ಎಂಬುದು ವರ್ಷಕ್ಕೆ ಒಂದು ಬಾರಿ ಸಿರಿ ಕುಟುಂಬದವರೆಲ್ಲ ಒಟ್ಟು ಸೇರಿ ಸತ್ಯನಾಪುರದ ಅಜ್ಜನವರಿಗೆ ನಡೆಸುವ ಸಾವಿನ ಆಚರಣೆ" ಎಂಬ ಅಪೂರ್ವ ಮಾಹಿತಿಯನ್ನು ನೀಡಿದ್ದರು. ಇದಕ್ಕೆ ಸಂಬಂಧಿಸಿದಂತೆ ಇನ್ನಷ್ಟು ಪೂರಕ ಮಾಹಿತಿಗಳನ್ನು ನೀಡುತ್ತಾ ಕವತ್ತಾರು ಆಲಡೆಯಲ್ಲಿ ಸಿರಿ ಜಾತ್ರೆಯಂದು 'ತಲವು ಲಪ್ಪುನಿ' ಎಂಬ ಆಚರಣೆ ಇದೆ ಎಂದಿದ್ದರು. ಅಲ್ಲದೆ "ಜಾತ್ರೆಯಂದು ಬೆಳಗ್ಗೆ ಸಿರಿಗಳೆಲ್ಲ ಕುಮಾರನ ಜೊತೆ ದಲಿಯ ಇಳಿದು ಹಿಂಗಾರವನ್ನು ತಲೆಯ ಮೇಲೆ ಹೊತ್ತುಕೊಂಡು ದೇವಸ್ಥಾನ ದಿಂದ ಸ್ವಲ್ಪ ದೂರವಿರುವ ಬಾಕಿಮಾರು ಗದ್ದೆ(ಈಗ ಬೇರೆ ಕಡೆಯೂ ಇದೆ)ಯಲ್ಲಿ ಹಾಕಿರುವ 'ಪಜಿಮಡಲ ಗುಂಡೊ' (ಹಸಿ ಮಡಲಿನಿಂದ ರಚಿತವಾದ ತಾತ್ಕಾಲಿಕ ಗುಡಿಯ ರಚನೆ) ಇಲ್ಲಿಗೆ ಬಂದು ಮೂರುಬಾರಿ ಅಪ್ರದಕ್ಷಿಣೆ ಬಂದು "ಅಜ್ಜೆರೆನ ಸುಡಲೆದ ಕಂಡೊಡು (ಅಜ್ಜನವರನ್ನು ಸುಟ್ಟ ಜಾಗದಲ್ಲಿ) ದುಃಖದ (ಗವನದ) ಪುರ್ಪವನ್ನು ಬಿಡುತ್ತೇವೆ" ಎಂದು ಹೇಳಿ ಹಿಂಗಾರವನ್ನು ವಿಸರ್ಜಿಸುತ್ತೇವೆ ಎಂದಿದ್ದರು.

"ಈಗಿನ ಸಿರಿಗಳಿಗೆ ಇದೆಲ್ಲ ಎಲ್ಲಿ ತಿಳಿದಿದೆ? ಅನಂತರ ಈ ಗದ್ದೆಗೆ ಆ ದಿನದ ಮಟ್ಟಿಗೆ ಯಾರೂ ಇಳಿಯಬಾರದು ಎಂಬ ಕ್ರಮ ಇದೆ. ಅತ್ರಿಜಾಲ್ ಆಲಡೆಯಲ್ಲಿ ಪುರ್ಪ (ಹಿಂಗಾರದ ಹೂ) ಬಿಟ್ಟಾದ ಅನಂತರ ಮೊಕ್ತೇಸರರ (ಜೈನ ಮನೆತನದವರು) ಮನೆಗೆ ಹೋಗಿ ದುಃಖದ ಗಂಜಿ ಊಟ ಮಾಡಬೇಕಿತ್ತು. ಇಂದಿಗೂ ಬನ್ನಿ ಅಂತ ಕರೆಯುತ್ತಾರೆ. ಆದರೆ ಈ ಪದ್ಧತಿಯನ್ನು ನಾವೀಗ ಮರೆತಿದ್ದೇವೆ" ಎಂದರು. ಇದನ್ನು ಯಾಕೆ ಮಾಡುತ್ತಿದ್ದೇವೆ ಎಂದರೆ ಸತ್ಯನಾಪುರದ ಅಜ್ಜನವರು ತೀರಿಕೊಂಡಾಗ ಸಿರಿ ಅವರ ಶವ ಸಂಸ್ಕಾರ ಮಾಡಿ ಮೂರನೇ ದಿನ ಬೂದಿ ಮುಚ್ಚುವ ಕಾರ್ಯ ಮಾಡಿ ಗೋರಿಯ ಮೇಲೆ ಎಳನೀರನ್ನು ಇಟ್ಟು ಬರುತ್ತಾಳೆ. ಅಂದೇ ಸೂಡದಣ್ಣು ಸೆಟ್ಟಿಮಗ ಶಂಕರಾಳ್ವ ಹಾಗೂ ತನ್ನ ಗಂಡ ಕಾಂತುಪೂಂಜ ಮೋಸದ ಪಂಚಾಯತಿಯನ್ನು ಏರ್ಪಡಿಸಿ ಸಿರಿಯನ್ನು ಅಲ್ಲಿಗೆ ಬರಮಾಡಿ ಹೊರಗಿನ ಆಡಳಿತ ಕಾಂತುಪೂಂಜನಿಗೂ ಒಳಗಿನ ಆಡಳಿತ ನಿನಗೂ ಎಂದಾಗ ಸಿರಿ ಪಂಚಾಯತಿಯ ಕಳವನ್ನೇ ಬಹಿಷ್ಕರಿಸಿ ಹೊರಟುಬಂದು ಸತ್ಯನಾಪುರದರಮನೆಯನ್ನು ತನ್ನ ಶಾಪದಿಂದ ಸುಟ್ಟುಭಸ್ಮ ಮಾಡಿ ಹೊರಡುತ್ತಾಳೆ. ಹೀಗಾಗಿ ಅಜ್ಜನವರಿಗೆ ಹದಿಮೂರರಲ್ಲಿ ಆಗಬೇಕಿದ್ದ ಉತ್ತರಕ್ರಿಯೆ (ತುಳುವಿನ ಸಾವುಸುಲಾರ) ಆಗಲಿಲ್ಲ. ಇದನ್ನು ಸಿರಿ ಆಚರಣೆಯಂದು ಸಿರಿ ಕುಟುಂಬ ದವರೆಲ್ಲ ಸೇರಿ ಬಿಳಿಯ ದಲ್ಯದ ಮೇಲೆ ನಿಂತು ಅಜ್ಜನವರ ಸೂಕೆ (ಸ್ಮರಣೆ)ಯೊಂದಿಗೆ ಮಾಡುವುದು ಎಂದಿದ್ದರು. "ಅಜ್ಜನವರ ಸಂತಾನವನ್ನು ಮುಂದುವರಿಸಿಕೊಂಡು ಬಂದ ಸಿರಿಗೆ ಈ ಜವಾಬ್ದಾರಿಯಿದೆ. ಅದನ್ನು ಅವಳು ನೆರವೇರಿಸಿದಳು" ಎಂಬ ಮಾಹಿತಿಯನ್ನು ನೀಡಿದ್ದರು. ಈ ಮಾಹಿತಿಯ ಬೆನ್ನು ಹತ್ತಿ ಮುಂದುವರಿದಾಗ ಈ ವಿಷಯದ ಖಚಿತತೆಯನ್ನು ಗಟ್ಟಿಗೊಳಿಸುವ ಹಲವು ಆಧಾರಗಳು ದೊರೆತುವು. ಅವುಗಳನ್ನು ವಿವರವಾಗಿ ನಿರೂಪಿಸುತ್ತೇನೆ. ಈ ವಿಷಯವು ಕೇವಲ ಊಹೆಯಲ್ಲವೆಂಬುದಕ್ಕೆ ಇವೆಲ್ಲ ಆಧಾರಗಳಾಗುತ್ತವೆಂಬುದನ್ನು ಸಂಶೋಧಕರು ಗಮನಿಸಬೇಕು.

ಕರ್ಗಿಯವರು ಮಾತ್ರವಲ್ಲ ಕವತಾರು ಆಲಡೆಯಲ್ಲಿ ದರ್ಶನ ನಡೆಸುತ್ತಾ ಬಂದಿರುವ 73 ವರ್ಷ ವಯಸ್ಸಿನ ಹಿರಿಯ ಸಿರಿಗಳಾದ ರತಿ ಶೆಡ್ತಿಯವರು ಹಾಗೂ 63 ವರ್ಷದ ಮೀನಾಕ್ಷಿಯವರೂ ಈ ಮಾತನ್ನು ಸಮರ್ಥಿಸಿದ್ದರು . ಹಿರಿಯ ಕುಮಾರ ಪಾತ್ರಿಯಾದ ಶ್ಯಾಮರಾಯ ಶೆಟ್ಟಿಯವರೂ ಇದೊಂದು ಸಾವಿನ ಆಚರಣೆ ಎಂಬುದನ್ನು ಒಪ್ಪಿಕೊಂಡಿದ್ದರು. "ಸಿರಿಗಳಾದ ನಾವು ಸಿರಿ ಆಚರಣೆಯಂದು ರಾತ್ರಿ ಪಿಂಗಾರ (ಹಿಂಗಾರ)ದ ಪುರ್ಪವನ್ನು ಕೈಯಲ್ಲಿ ಹಿಡಿಯುವಾಗ ನಮಗದು ಯವನದ (ಸಂತೋಷ) ಪುರ್ಪವಾಗಿ ಕಾಣಿಸುತ್ತದೆ. ಬೆಳಗ್ಗೆ ದಲಿಯ ಇಳಿದು ಪುರ್ಪವನ್ನು ಹಸಿಮಡಲ ಗುಡಿಯ ಹತ್ತಿರ ಅಜ್ಜನವರನ್ನು ಸುಟ್ಟಗದ್ದೆಯಲ್ಲಿ ಬಿಡುವಾಗ ಅದು ನಮಗೆ ಗವನದ ಪುರ್ಪ (ಬಹಳ ದುಃಖದ ಪುರ್ಪ)" ಎಂದರು. ಕರ್ಗಿಯವರು, ರತಿಶೆಡ್ತಿ, ಮೀನಾಕ್ಷಿ ಹಾಗೂ ಶ್ಯಾಮರಾಯ ಶೆಟ್ಟಿಯವರು ಸಿರಿ ಆರಾಧನೆಯ ಬಗೆಗೆ ನೀಡಿರುವ ಹೊಸ ಬಗೆಯ ಆಲೋಚನೆಯನ್ನು ಕವತಾರು ಆಲಡೆಯ ಪ್ರಧಾನ ಅರ್ಚಕರಾದ

ಶ್ರೀ ಅನಂತ ಪದ್ಮನಾಭ ಭಟ್ಟರೂ ಸಮರ್ಥಿಸಿದರು. ಈ ವಿಚಾರಗಳಿಗೆ ಸಂಬಂಧಿಸಿದ ಇನ್ನೂ ಕೆಲವು ವಿಧಿಗಳನ್ನು ಕವತಾರು ಹಾಗೂ ಪೇರೂರು ಆಲಡೆಗಳಲ್ಲಿ ದಾಖಲಿಸಿ ಕೊಂಡು ಈ ವಿಷಯಕ್ಕೆ ಪೂರಕವಾಗಿ ಇನ್ನಷ್ಟು ಮಾಹಿತಿಗಳನ್ನು ನೀಡಲು ಇಲ್ಲಿ ಪ್ರಯತ್ನಿಸಿದ್ದೇನೆ. ಇಲ್ಲಿನ ಆಚರಣೆಗಳು ಬಂಟರ ಸಾವಿನ ಆಚರಣೆಗಳಲ್ಲಿಯೂ ಕಂಡುಬರುವುದನ್ನು ಗಮನಿಸಿದ್ದೇನೆ.

ಕರ್ಗಿಯವರ ಮೇಲಿನ ಹೇಳಿಕೆಯ ಅಧ್ಯಯನಕ್ಕೆ ಮರುಚಾಲನೆ ದೊರೆತದ್ದು 2013–2017ರ ವರೆಗೆ ಜರ್ಮನಿಯ ವೂರ್ತ್ಸ್‌ಬೂರ್ಗ್ ವಿಶ್ವವಿದ್ಯಾಲಯದ ಇಂಡಾಲಜಿ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಹೈಡ್ರೂನ್ ಬ್ರೂಕ್ನರ್ ಹಾಗು ಪ್ರೊ. ಬಿ.ಎ. ವಿವೇಕ ರೈಯವರು ಜೊತೆಯಾಗಿ ಹಮ್ಮಿಕೊಂಡ ಮೌಖಿಕ ಮಹಾಕಾವ್ಯ ಯೋಜನೆಯಿಂದ. ಈ ಯೋಜನೆಯ ಭಾಗವಾಗಿ ನಾನು ಹಾಗೂ ಜರ್ಮನಿಯ ಸಂಶೋಧನ ವಿದ್ಯಾರ್ಥಿನಿ ಪೌಲೀನೇ ಶೂಸ್ತರ್ ಲ್ಹೋಯೆಲೋ ಇದ್ದೆವು. ಪೌಲೀನೆ ಸಿರಿಯ ಬಗೆಗಿನ ಪಿಎಚ್.ಡಿ. ಅಧ್ಯಯನಕ್ಕಾಗಿ ಮಂಗಳೂರು, ಉಡುಪಿಗೆ ಬಂದಿದ್ದಾಗ ಅವರ ಜೊತೆ ಅನೇಕ ಕಡೆ ಸಿರಿಜಾತ್ರೆಗೆ ಹೋಗುವ ಸಂದರ್ಭ ಒದಗಿಬಂತು. ಈ ಸಂದರ್ಭದಲ್ಲಿ ಕವತಾರಿಗೆ ಹೋಗಿದ್ದಾಗ ಅನೇಕ ಪೂರಕ ಮಾಹಿತಿಗಳನ್ನು ದಾಖಲಿಸಿಕೊಂಡೆ.

ಕವತಾರು ಆಲಡೆ ಮಂಗಳೂರು ತಾಲೂಕಿನ ಪಡುಬಿದಿರೆಯಿಂದ ಕಾರ್ಕಳ ಮಾರ್ಗವಾಗಿ ಸ್ವಲ್ಪ ಮುಂದೆ ಹೋಗಿ ಬಲಗಡೆಗೆ ಸುಮರು 10 ಕಿ.ಮೀ.ನಷ್ಟು ಸಂಚರಿಸಿದಾಗ ಸಿಗುತ್ತದೆ. ಈ ಆಲಡೆಗೆ ಅಬ್ಬಗ–ದಾರಗ ಮಹಾಲಿಂಗೇಶ್ವರ ದೇವಸ್ಥಾನ, ಕವತಾರು ಎಂಬ ಹೆಸರಿದೆ. ಇಂದಿಗೂ ನೂರಾರು ಸಿರಿಗಳು, ಕುಮಾರರು ಬಹು ಸಂಖ್ಯೆಯಲ್ಲಿ ಸೇರುವ ಪ್ರಮುಖ ಆಲಡೆಗಳಲ್ಲಿ ಒಂದು. ತುಳುವಿನಲ್ಲಿ ಸಿರಿ ಆರಾಧನೆಗೆ ಸಂಬಂಧಿಸಿ ಒಂದು ಮಾತಿದೆ. 'ಪುಟ್ಟು ನಂದೊಲ್ಗೆ, ಪೆರಡ್ಕಡ್ ಬುಳೆವು, ಕಬತಾರ್‌ಡ್ ಅಬತಾರೊ' (ನಂದಳಿಕೆಯಲ್ಲಿ ಹುಟ್ಟು, ಹಿರಿಯಡ್ಕದಲ್ಲಿ ಬೆಳವಣಿಗೆ, ಕವತಾರಿನಲ್ಲಿ ಅವತಾರ) ಎಂದು. ಹಾಗೆ ನೋಡಿದರೆ ಸಿರಿ ಕಾವ್ಯದಲ್ಲಿ ಕವತಾರಿನ ಪ್ರಸ್ತಾವ ಬರುವುದಿಲ್ಲ. ಆದರೂ ಕವತಾರು ಅಷ್ಟು ಪ್ರಮುಖ ಆಲಡೆಯಾಗಿ ಯಾಕೆ ಮಾರ್ಪಟ್ಟಿತು ಎಂಬುದೇ ಕುತೂಹಲದ ವಿಷಯ. ಹಾಗೆಯೇ ನೋಡುತ್ತಾ ಮುಂದೆ ಹೋದಂತೆ ಅನೇಕ ಹೊಸ ವಿಚಾರಗಳು ನಮ್ಮ ಕಣ್ಣಮುಂದೆ ಬಂದು ನಿಲ್ಲುತ್ತವೆ. ಇದಕ್ಕೆ ಪೂರಕ ಮಾಹಿತಿ ಯನ್ನು ಒದಗಿಸಿದವರು 73 ವರ್ಷದ ಸಿರಿಪಾತ್ರಿ ರತಿ ಶೆಡ್ತಿ ಮತ್ತು 63 ವರ್ಷದ ಸಿರಿಪಾತ್ರಿ ಮೀನಾಕ್ಷಿ ಎಂಬ ಹಿರಿಯ ಸಿರಿ ದರ್ಶನ ಪಾತ್ರಿಗಳು. ಅವರ ಮಾತುಗಳಲ್ಲಿಯೇ ಹೇಳುವುದಾದರೆ 'ಕವತಾರು ಆಲಡೆ ಸತ್ಯನಾಪುರದ ಅಜ್ಜನವರು ತಮ್ಮ ಪ್ರಾಣವನ್ನು ಬಿಟ್ಟ ಜಾಗ (ಅಜ್ಜೆರ್ ಕಂತಿನ ಜಾಗ್). ಅಲ್ಲಿ ನೋಡಿ ದೇವಾಲಯದ ಒಳಗೆ ಕಾಣಿಸುತ್ತದೆ ಅಜ್ಜನವರ ಗೋರಿ. (ದೇವಾಲಯದ ಒಳಗೆ ಗೋರಿಯಂಥ ಒಂದು ರಚನೆ ಇದೆ. ಈ ಬಗೆಗೆ ದೇವಾಲಯದ ಆಡಳಿತದವರು ಬೇರೆಬೇರೆ ಹೆಸರುಗಳಿಂದ ಕರೆದರೂ ಅಷ್ಟಮಂಗಲ ಪ್ರಶ್ನೆಯಲ್ಲಿ ಅದನ್ನು ಮುಟ್ಟಬಾರದು ಎಂದು ಕಂಡು ಬಂದಿರುವುದರಿಂದ

ಜೀರ್ಣೋದ್ಧಾರದ ಸಂದರ್ಭ ಕೂಡಾ ಈ ರಚನೆಯನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ). ಕವತಾರು ಅಜಿಲ ಮನೆತನದ ಚಾವಡಿಯ ಒಂದು ಪಾರ್ಶ್ವದಲ್ಲಿ ಅಜ್ಜನವರು ಕುಳಿತುಕೊಂಡ ಚಾವಡಿ ಹಾಗೂ ಉಯ್ಯಾಲೆ ಇದೆ (ಉಂದು ಅಜ್ಜೆರೆನ ಚಾವಡಿ. ಅಲೆ ಅಜ್ಜೆರೆನ ಉಜ್ಜಾಲ್). ಅದರಲ್ಲಿ ಅಜ್ಜನವರು ಮಾಯದಲ್ಲಿ ಕುಳಿತು ಕೊಂಡಿದ್ದಾರೆ ಎಂಬುದು ಸಿರಿಗಳ ನಂಬಿಕೆ. "ನಮಗೆ ಸಿರಿಗಳಿಗೆ ಈ ಆಲಡೆ ಬಹಳ ಮುಖ್ಯ. ಯಾಕೆಂದರೆ ನಾವೆಲ್ಲ ಸಿರಿ ಕುಟುಂಬದವರು ಒಟ್ಟು ಸೇರಿ ಅಜ್ಜನವರ ಸಾವಿನ ಆಚರಣೆಯಲ್ಲಿ ಇಲ್ಲಿ ಭಾಗವಹಿಸಲೇ ಬೇಕು. ಇನ್ನು ಸ್ವಲ್ಪ ಹೊತ್ತಲ್ಲಿ(ತಲವು ಲಪ್ಪೆರೆ ಉಂಡು) ತಲವು ಅಳೆಯಲು ಇದೆ" ಎಂದರು. ನನ್ನ ಕುತೂಹಲ ಇನ್ನಷ್ಟು ಹೆಚ್ಚಾಗಿ ಈ ಆಚರಣೆಗಾಗಿ ಕಾಯುತ್ತಾ ಕುಳಿತೆ. ಅವರು ನೀಡಿದ ಈ ಮಾಹಿತಿ ಸಿರಿ ಅಧ್ಯಯನದಲ್ಲಿ ನನಗೆ ಹೊಸ ಆಲೋಚನೆ ಮಾಡಲು ಕಾರಣವಾಯಿತು. ಇದುವರೆಗೆ ಸಂಶೋಧಕರು ಗಮನಿಸದೆ ಇದ್ದ ವಿಷಯದ ಕಡೆಗೆ ಅವರ ಗಮನವನ್ನು ಸೆಳೆಯುವಂತಾಯಿತು.

ತಲವು ಲಪ್ಪುನಿ (ತಲಬು ಅಳೆಯುವುದು)

ವಿಶೇಷವಾಗಿ ಬಂಟರ ಸಾವಿನ ಆಚರಣೆಗಳಲ್ಲಿ 'ತಲವು ಲಪ್ಪುನಿ' ಎಂಬ ಆಚರಣೆ ಇರುವುದನ್ನು ಕಾಣಬಹುದು. ಬಂಟರಲ್ಲಿ ಗುತ್ತುಮನೆತನದ 'ಗಡಿ ಹಿಡಿದ' ಯಜಮಾನ ತೀರಿಕೊಂಡಾಗ ಅವರ ಕಾಷ್ಠದ ನಿರ್ಮಾಣಕ್ಕೆ ಬೇಕಾಗುವ ಮರಗಳನ್ನು ಕಡಿಯಲು ಮೂಲದ ಪರಿಶಿಷ್ಟ ಜಾತಿಯವರು ಬರುತ್ತಿದ್ದರು. ಬಹಳ ಹಿಂದೆ ಈ ಮರ ಕಡಿಯುತ್ತಿದ್ದುದು ಆಚಾರಿಗಳಂತೆ. ಅವರಾಗಿಯೇ ಬಂದು ಈ ಕೆಲಸವನ್ನು ನಿರ್ವಹಿಸಿ ಕೊಡುತ್ತಿದ್ದರು ಎಂಬುದನ್ನು ಹಿರಿಯರು ಬಂಟ ವಕ್ತೃವೊಬ್ಬರು ಬಂಟರ ಜೀವನಾವರ್ತಕ್ಕೆ ಸಂಬಂಧಿಸಿ ನಡೆಸಿದ ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದ್ದರು. ಕ್ರಮೇಣ ಈ ಸಂಪ್ರದಾಯ ಬದಲಾಯಿತು. ಇಂದು ಮರ ಕಡಿಯಲು ಮೊದಲ ಗಡಿ ಇಡಬೇಕಾದುದು ಹಿರಿಯ ಮಗ ಎಂದರೆ ಕ್ರಿಯೆ ಹಿಡಿಯುವ ಕರ್ಮಿ. ಮತ್ತೆ ಮೂಲದವರು ಈ ಕೆಲಸವನ್ನು ಮುಂದುವರಿಸುತ್ತಾರೆ.

ಹೀಗೆ ಮರ ಕಡಿದವರಿಗೆ ಹೆಣ ತೆಗೆದು ಕಾಷ್ಠದಲ್ಲಿಟ್ಟು ಉರಿಸಿ ಕಾಷ್ಠದ ನಡು ಸೇರಿದ ಅನಂತರ ಮನೆಯಯವರು ಬಂದು ಅಂಗಳದ ಮಧ್ಯೆ ಒಲಿಯ ಚಾಪೆ ಹಾಸಿ ಭತ್ತವನ್ನು ಸುರಿದು ಇಂತಿಷ್ಟು ಎಂಬ ಲೆಕ್ಕಾಚಾರದಲ್ಲಿ ಎಡಕೈಯಲ್ಲಿ 'ಪೆದಂಬು' (ಎಡಗೈಯನ್ನು ಎಡಗಡೆಗೆ ತಿರುಗಿಸಿ) ಅಳೆದು ಕೊಡುವುದು ಕ್ರಮ. ಇದನ್ನು 'ತಲವು ಲಪ್ಪುನಿ' ಎಂದು ಕರೆಯುತ್ತಾರೆ. 'ತಲಬು' ಎಂದರೆ ವೇತನ ಎಂಬರ್ಥವಿರುವುದರಿಂದ ಮರಕಡಿದವರಿಗೆ ಭತ್ತದ ರೂಪದಲ್ಲಿ ಕೂಲಿ ಕೊಡುವ ಪದ್ಧತಿ ಎಂದು ಅರ್ಥೈಸಬಹುದು. ಹಿಂದೆ ಮರಕಡಿದ ಆಚಾರಿಗಳೂ ಈ ತಲವು ತೆಗೆದುಕೊಂಡು ಹೋಗುತ್ತಿದ್ದರು ಎಂಬುದು ವಕ್ತೃವೊಬ್ಬರ ಅಭಿಪ್ರಾಯ.

ಈ ಆಚರಣೆಯನ್ನು ನಾವು ಕವತಾರು ಆಲಡೆಯಲ್ಲಿ ಸಿರಿಜಾತ್ರೆಯಂದು ಅಜಿಲ

ಮನೆತನದ ಚಾವಡಿಯಲ್ಲಿ ನಡೆಸುವುದನ್ನು ಕಾಣಬಹುದು. ರಾತ್ರಿಯಾಗುತ್ತಿದ್ದಂತೆ ಅಜಿಲ ಮನೆತನದ ಮುಖ್ಯಸ್ಥರ ಸಮ್ಮುಖ ಚಾವಡಿಯಲ್ಲಿ ಚಾಪೆಯೊಂದನ್ನು ಹಾಸಿ ಅದರ ಮೇಲೆ ಅಕ್ಕಿಯನ್ನು ಸುರಿದು ಎಡಗೈಯಲ್ಲಿ ಪೆದಂಬು ಅಳೆದು ಆರಾರು ಸೇರಿನಂತೆ ಎರಡು ಬಾರಿ ಅಳೆದು ಮನ್ಸ ಜನಾಂಗದವರಿಗೆ, ಆರು ಸೇರಿನಂತೆ ಎರಡು ಬಾರಿ ಅಳೆದು ಕೊರಗ ಜನಾಂಗದವರಿಗೆ, ಎರಡೆರಡು ಸೇರಿನಂತೆ ಎರಡು ಬಾರಿ ಅಳೆದು ಮುಕಾರಿ ಹಾಗೂ ವಾಲಗದವರಿಗೆ ಕೊಡುವ ಪದ್ಧತಿ ಇದೆ. ಹೀಗೆ ಮನ್ಸ ಹಾಗೂ ಕೊರಗ ಜನಾಂಗದವರಿಗೆ ಕೊಡುವಾಗ ಮೊದಲು ಅವರ ಕೈಗೆ ಎಲೆ ಅಡಿಕೆ ನೀಡಿ, ತಲೆಗೆ ಎಣ್ಣೆ ಹೊಯಿದು ಅನಂತರ ಹೊಸ ಬುಟ್ಟಿಯಲ್ಲಿ ಈ ತಲವು ನೀಡುವುದು ಕ್ರಮ. ಇದೇ ರೀತಿಯ ತಲವು ಆಚರಣೆ ಕವತಾರಿಗೆ ಸಮೀಪದ ಪೇರೂರು ಆಲಡೆಯಲ್ಲಿಯೂ ಜರಗುತ್ತದೆ. ಕವತಾರಿನಷ್ಟು ದೊಡ್ಡ ಸಂಖ್ಯೆಯ ಸಿರಿಗಳು ಇಲ್ಲಿ ಸೇರದಿದ್ದರೂ ಇಲ್ಲಿಯ ಸಿರಿ ಆಚರಣೆ ವಿಶೇಷ ವಿಧಿ ವಿಧಾನಗಳಿಗಾಗಿ ಹೆಸರುವಾಸಿ ಯಾಗಿದೆ. ಸಿರಿ ಜಾತ್ರೆಯಂದು 'ತಲವು ಲಪ್ಪುನಿ' ಆಚರಣೆ ಈ ಆಲಡೆಯಲ್ಲಿಯೂ ಇದೆ.

ಪಡುಬಿದಿರೆಯಿಂದ ಬೆಳ್ಮಣ್ಣು ಮಾರ್ಗವಾಗಿ ಸುಮಾರು 12 ಕಿ.ಮೀ. ಸಾಗುವಾಗ ಬೆಳ್ಮಣ್ಣು ದುರ್ಗಾಪರಮೇಶ್ವರಿ ದ್ವಾರದ ಮೂಲಕ ಮುಂದಕ್ಕೆ ಚಲಿಸಿದಾಗ ಸಿಗುವುದೇ ತುಳುವಿನಲ್ಲಿ ಮುಂಡೇರ್ ಎಂದು ಕರೆಯಲ್ಪಡುವ ಮುಂಡ್ಕೂರು. ಮುಂಡೇರಿನಿಂದ ಎಡಮಾರ್ಗವಾಗಿ ಸಾಗುವಾಗ ಜಾರಿಗೆಕಟ್ಟೆ-ಕಡಂದಲೆ ಮಾರ್ಗ ಎದುರಾಗುತ್ತದೆ. ಇದು ಸಚ್ಚೆರಿಪೇಟೆಯನ್ನು ಸಂಪರ್ಕಿಸುವ ರಸ್ತೆಯೂ ಹೌದು. ಇದರ ಮಧ್ಯೆ ಪೇರೂರು ಆಲಡೆ ಇದೆ. ತುಂಬಾ ವಿಶಾಲವಾದ ಜಾಗದಲ್ಲಿ ಸಿರಿ, ಅಬ್ಬಗ ದಾರಗ, ಕುಮಾರ ಗುಡಿ. ಬ್ರಹ್ಮಲಿಂಗೇಶ್ವರ ಗುಡಿ, ವೀರಭದ್ರ ಹಾಗು ನಂದಿಗೋಣ ಗುಡಿಗಳಿವೆ. ಇದರ ಹಿಂದಕ್ಕೆ ಬಲಭಾಗದಲ್ಲಿ ಐವೆರ್(ಐದು) ಭೂತಗಳ ಗುಡಿಯಿದೆ. ಈ ವೀರಭದ್ರ ಗುಡಿ ಹಿಂದೆ ಸುಮಾರು 1965ರ ಕಾಲಕ್ಕೆ ಬರಿಯ ಮುಳಿಹುಲ್ಲಿನ ಹೊದಿಕೆಯ ರಚನೆಯಾಗಿದ್ದು ಒಳಗೆ ಒಂದು ಕಲ್ಲು ಮಾತ್ರ ಸ್ಥಾಪಿಸಿದ್ದ 'ಸತ್ಯನಾಪುರದ ಅಜ್ಜನವರ ಗುಡಿ' ಆಗಿತ್ತು ಎಂಬ ವಿಚಾರವನ್ನು ಇಲ್ಲಿಯ ಆಡಳಿತದವರಲ್ಲಿ ಒಬ್ಬರಾದ ಶ್ರೀಯುತ ಕುಟ್ಟಿಶೆಟ್ಟಿಯವರು ಸಂದರ್ಶನದಲ್ಲಿ ತಿಳಿಸಿದ್ದರು.

ಪೇರೂರು ಆಲಡೆಯ ಆಡಳಿತವನ್ನು ನೋಡುತ್ತಿದ್ದವರು ಪೇರೂರು ಚಾವಡಿ ಮನೆತನದರು. ಇಲ್ಲಿಯ ಗಡಿಹಿಡಿದ ಯಜಮಾನನನ್ನು 'ಮುಕ್ಕಾಲಿ' ಎಂಬ ಗಡಿಯ ಹೆಸರಿನಿಂದ ಕರೆಯುತ್ತಿದರು. ಜಾತ್ರೆಯ ದಿನ ಇವರು ಚಾವಡಿಯಿಂದ ಮೆರವಣಿಗೆಯಲ್ಲಿ ಆಲಡೆಗೆ ಬಂದು ಅಜ್ಜನವರ ಗುಡಿಯ ಎದುರು ತಮ್ಮ ಕೈಯಲ್ಲಿ ಜೋತಿಕೋಲು (ಹಿಡಿಗೆ ಬೆಳ್ಳಿಯ ಕಟ್ಟವಿದ್ದ ವಿಶಿಷ್ಟ ನಾಗಬೆತ್ತ) ಹಿಡಿದುಕೊಂಡು ಕುಳಿತುಕೊಂಡು ಆಡಳಿತ ನಡೆಸುತ್ತಿದ್ದರಂತೆ. ಕ್ರಮೇಣ 'ಅಜ್ಜನವರ ಗುಡಿ' ಹೋಗಿ 'ಗುರುಸಂಕಲ್ಪ' ಎಂದು ಪರಿವರ್ತನೆಯಾಯಿತು. ಆ ನಂತರ ಇದು ಅಜ್ಜನವರ ಯಾವ ಕುರುಹನ್ನೂ

ಉಳಿಸದೆ ವೀರಭದ್ರನ ಗುಡಿಯಾಯಿತು. ಬಹುಶಃ ಅಜ್ಜನವರಿಗೆ (ಸತ್ಯನಾಪುರದ ಅಜ್ಜನವರಿಗೆ) ಗುಡಿ ಇತ್ತು ಎಂದರೆ ಅದು ಪೇರೂರು ಆಲಡೆಯಲ್ಲಿ ಮಾತ್ರ ಎಂದು ತಿಳಿಯಬಹುದು. ಈ ಆಲಡೆ ಸಚ್ಚೆರಿಪೇಟೆಗೆ ಸಮೀಪವಿರುವುದರಿಂದ ಈ ಸಚ್ಚೆರಿಪೇಟೆಯೇ ಹಿಂದೆ ಸಚ್ಚೆರಿಪುರವಾಗಿತ್ತೇ? ರಾಮಕ್ಕ ಅವರ ಪಠ್ಯವು ಸತ್ಯನಾಪುರವನ್ನು 'ಸಂಚನಂಗಡಿ' ಎಂದು ತಿಳಿಸುತ್ತದೆ. ಹೀಗಾಗಿ ಅಂಗಡಿ ಕಾಲಕ್ರಮದಲ್ಲಿ ಪೇಟೆ ಆಯಿತೇ? ಅದಕ್ಕಿಂತಲೂ ಮೊದಲು ಇದು ಪುರವಾಗಿತ್ತೇ? ಅದುವೇ ಸಚ್ಚನಾಪುರವೇ? ಆ ನಂತರ ಇದು ಸತ್ಯನಾಪುರವಾಯಿತೇ? ಇಲ್ಲದಿದ್ದರೆ ಸತ್ಯನಾಪುರದ ಅಜ್ಜನವರಿಗೆ ಈ ಆಲಡೆಯಲ್ಲಿ ಮಾತ್ರ ಯಾಕೆ ಗುಡಿ ಇದೆ? ಅಜ್ಜನವರ ಸಾವಿನ ಆಚರಣೆಯನ್ನು ಕವತಾರು, ಪೇರೂರು ಆಲಡೆಗಳಲ್ಲಿ ಮಾತ್ರ ಯಾಕೆ ಆಚರಿಸುತ್ತಾರೆ? ಅಥವಾ ಒಂದು ಕಾಲದಲ್ಲಿ ಈ ತಲವು ಆಚರಣೆ ಎಲ್ಲ ಆಲಡೆಗಳಲ್ಲಿದ್ದು ಕ್ರಮೇಣ ಮರೆಯಾಯಿತೇ? ಹೀಗೆ ಅನೇಕ ಸಂಶಯಗಳು ನಮ್ಮ ಮನದಲ್ಲಿ ಮೂಡುತ್ತವೆ. ಈ ಕುರಿತಾದ ಸತ್ಯಶೋಧನೆಗೆ ಇನ್ನೂ ಹೆಚ್ಚಿನ ಅಧ್ಯಯನದ ಅಗತ್ಯ ಇದೆ.

ಈ ಆಲಡೆಗೆ ಸ್ವಲ್ಪ ದೂರದಲ್ಲಿ ಪೇರೂರು ಚಾವಡಿ ಇದೆ. ಮೂಲತಃ ಬಂಟ ಮನೆತನದವರಲ್ಲಿದ್ದ ಈ ಚಾವಡಿ ಭೂ ಮಸೂದೆಯ ಕಾರಣದಿಂದ ಸಪಲಿಗ ಮನೆತನದವರ ಪಾಲಾಯಿತು. ಹೀಗಾಗಿ ಇಲ್ಲಿಯ ಆಚರಣೆ ಈ ಮನೆತನದವರ ಭಾಗವಹಿಸುವಿಕೆಯಲ್ಲಿಯೇ ಚಾವಡಿ ಮನೆತನದವರು ಬಂದು ನಡೆಸಿಕೊಡುತ್ತಾರೆ. ಪೇರೂರು ಸಿರಿಜಾತ್ರೆಗೆ ತುಳುವಿನ 'ಪಗ್ಗು ಪದಿನೆಣ್ಮೊ' (ಮೇಷಮಾಸದ ಹದಿನೆಂಟ ರಂದು) ನಿಗದಿಯ ದಿನ. ಇಲ್ಲಿ ಹುಣ್ಣಿಮೆಗೆ ಕಾಯುವ ಕ್ರಮ ಇಲ್ಲ.

ಪೇರೂರು ಆಲಡೆಯಲ್ಲಿ 'ತಲವು ಲಪ್ಪುನಿ'

ರಾತ್ರಿಯಾಗುತ್ತಿದ್ದಂತೆ ಪೇರೂರು ಚಾವಡಿಯವರ ಉಪಸ್ಥಿತಿಯಲ್ಲಿ ಈಗಿನ ಮನೆಯ ಯಜಮಾನಿ ತುಳಸಿಕಟ್ಟೆಯ ಎದುರು ಎರಡು ಮಣೆಗಳನ್ನು ತಂದು ಇರಿಸುತ್ತಾರೆ. ಈ ಸಂದರ್ಭದಲ್ಲಿ ಮೂಲದ ಕೊರಗ ಹಾಗು ಮನ್ಸ ಜನಾಂಗದವರು ಬಂದು ಚೀನಿಕಾಯಿ ಒಪ್ಪಿಸುತ್ತಾರೆ. (ಹಿಂದೆ ಬೂದಿಗುಂಬಳ ಕೊಡುತ್ತಿದ್ದರಂತೆ. ಕುಂಬಳ ಸಾವಿನ ಆಚರಣೆ ಯಲ್ಲಿ ಬಳಕೆಯಾಗುವ ಬಹುಮುಖ್ಯ ತರಕಾರಿಗಳಲ್ಲಿ ಒಂದು. ಹೀಗಾಗಿಯೆ ಇದನ್ನು ಮಂಗಳಕಾರ್ಯಗಳಲ್ಲಿ ಬಳಸುವುದು ನಿಷಿದ್ಧವಾಗಿದೆ.) ಈ ಮಣೆಯ ಮೇಲೆ ಎರಡು ಗೆರಸೆಗಳನ್ನಿಟ್ಟು ಪ್ರತಿಯೊಂದರ ಮೇಲೂ ಎರಡೆರಡು ಬಾಳೆ ಎಲೆಗಳನ್ನು ಹಾಕಿ ಒಂದು ಎಲೆಗೆ ಭತ್ತ ಹಾಗು ಇನ್ನೊಂದರಲ್ಲಿ ಅಕ್ಕಿಯನ್ನು ಎರಡೂ ಕೈಗಳಲ್ಲಿ ತೆಗೆದು ಹಾಕುತ್ತಾರೆ. (ಕವತಾರಿನಲ್ಲಿ ಎಡ ಕೈಯಲ್ಲಿ ಅಳೆಯುವುದು ಕ್ರಮ). ಇದರ ಮೇಲೆ ಎಲೆಅಡಿಕೆ ಹೊಗೆಸೊಪ್ಪು ಇಟ್ಟು ಅನಂತರ ಕೊರಗ, ಮನ್ಸ ಜನಾಂದವರ ತಲೆಗೆ ಎಣ್ಣೆ ಹೊಯ್ದು ಗೆರಸೆಗಳನ್ನು ಹಸ್ತಾಂತರಿಸುತ್ತಾರೆ. ಇದಕ್ಕೆ 'ತಲವು' ಎಂದು ಹೆಸರು. ಈ ಸಂದರ್ಭದಲ್ಲಿ ಕೊರಗ ಜನಾಂಗದವರು ಅಂಗಳದ ಒಂದು ಮೂಲೆಯಲ್ಲಿ ನಿಂತು ಸಾವುಡೋಲು ಬಾರಿಸುತ್ತಿರುತ್ತಾರೆ.

ಈ 'ತಲವುಲಪ್ಪುನಿ' ವಿಧಿಗೆ 'ಸಾವುಬಾರ್ ಲಪ್ಪುನಿ' ಎಂಬ ಹೆಸರೂ ಇದೆ. ಸಾಮಾನ್ಯವಾಗಿ ಈ ವಿಧಿಯನ್ನು ಬಂಟರ ಸಾವಿನ ಸಂದರ್ಭದಲ್ಲಿ ಆಚರಿಸುತ್ತಾರೆ. ಗುತ್ತಿನ ಗಡಿಹಿಡಿದ ಯಜಮಾನ ತೀರಿಕೊಂಡಾಗ ಬೇರೆಬೇರೆ ಜನಾಂಗದವರು ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸಿದ್ದಕ್ಕಾಗಿ ಗುತ್ತಿನ ಮನೆಯಿಂದ ಈ ರೀತಿಯ ಸಂಭಾವನೆ ಅವರಿಗೆ ಸಲ್ಲುತ್ತಿತ್ತು. ಆದರೆ ವಾಸ್ತವವಾಗಿ ಈ ಆಚರಣೆಯ ಹಿನ್ನೆಲೆ ಈ ಎರಡೂ ಆಲಡೆಯವರಿಗೆ ತಿಳಿದಂತೆ ಇಲ್ಲ. ಹೀಗಾಗಿ ಈ ಆಚರಣೆ ತನ್ನ ಮೂಲ ಅರ್ಥವನ್ನು ಕಳೆದುಕೊಂಡು ಬರಿಯ ಆಚರಣೆಯಾಗಿ ಅನೇಕ ಪರಿವರ್ತನೆಗಳೊಂದಿಗೆ ಉಳಿದು ಕೊಂಡಿದೆ.

ಡಾ. ಇಂದಿರಾ ಹೆಗ್ಗಡೆಯವರು 'ತುಳುವರ ಮೂಲತಾನ ಆದಿ ಆಲಡೆ' ಕೃತಿಯಲ್ಲಿ ಆಲಡೆಯ ಆಚರಣೆ ಮತ್ತು ಸಾವಿನ ಆಚರಣೆಯ ಸಾಮ್ಯತೆಯ ಬಗೆಗೆ ತಿಳಿಸುತ್ತ 'ಸಿರಿ ಅಜ್ಜನವರ ಶವವನ್ನು ಸುಟ್ಟು ಸುಡಲೆಯ ಗದ್ದೆಯಿಂದ ಮರಳಿದವಳು ಮತ್ತೆ ಸತ್ಯನಾಪುರದ ಮೆಟ್ಟಲು ತುಳಿಯಲಿಲ್ಲ. ಪತ್ತೇರಿ ಕೂಟದಿಂದ ನೇರವಾಗಿ ಅರಮನೆಯ ಅಂಗಳಕ್ಕೆ ಬರುತ್ತಾಳೆ. ನಲ್ವತ್ತು ದಿನದ ತನ್ನ ಮಗ ಕುಮಾರನನ್ನು ದಾರುವಿನಲ್ಲಿ ಹೊರಿಸಿಕೊಂಡು ಊರು ತೊರೆದು ಹೋಗುತ್ತಾಳೆ. ಹೀಗಾಗಿ ಸಿರಿ ಬಿರಿಯುವುದು 'ಸುಡಲೆಯ ಗದ್ದೆ'ಯಲ್ಲಿ. ಸುಡಲೆಯ ಗದ್ದೆ ಸಿರಿಗಳಿಗೆ ಬಹುಮುಖ್ಯ ಎನ್ನುತ್ತಾರೆ ನಂದಳಿಕೆಯ ಸಿರಿಗಳು............ ಕೊನೆಗೆ ದರ್ಶನ ಪಾತ್ರಿಗಳು ಮಾಯದಿಂದ ಜೋಗಕ್ಕೆ ಬರುವುದು ಪಜ್ಜಿ ಮಡಲ ಗುಂಡದ ಬಾಗಿಲಲ್ಲಿ" ಎನ್ನುತ್ತಾರೆ (ಪುಟ 210).

ಇಂದಿರಾ ಹೆಗ್ಗಡೆಯವರು ಸಿರಿಗಳು ಪುರ್ಪ (ಹಿಂಗಾರ) ಬಿಡುವ ಸ್ಥಳ ಪಜಿಮಡಲ ಗುಂಡ ಹಾಗೂ ಬಂಟರ ಸಾವಿನ ಆಚರಣೆಯಂದು ಬಳಕೆಯಾಗುವ ನೀರ್ ನಿರೆಲ್‌ಗೆ ಇರುವ ಸಾಮ್ಯತೆಯನ್ನು ಗುರುತಿಸುತ್ತಾರೆ. ಕವತಾರು ಆಲಡೆಯ ಆಚರಣೆ ಆಡಳಿತ ಮಂಡಳಿ ಮತ್ತು ಮೂಲತಾನಕ್ಕೆ ಬರುವ ಬೆರ್ಮೆರ ಸಂತಾನದವರ ಪ್ರಕಾರ ನಿಜವಾಗಿ ಆಲಡೆಗಳ ಉತ್ಸವ ಅಂದರೆ ಸಿರಿಗಳಿಗೆ ಬೊಜ್ಜ/ಉತ್ತರಕ್ರಿಯೆ. ಇಲ್ಲಿ ಅಬ್ಬಗ ದಾರಗರ ಮರಣದಿಂದ ಬೊಜ್ಜದವರೆಗೆ ಆಚರಣೆಗಳು ನಡೆಯುತ್ತವೆ (ಪುಟ 212).

ಕವತಾರಿನಲ್ಲಿ ನಡೆಯುವ ಒಟ್ಟು ಸಿರಿ ಆಚರಣೆಗೆ ಪೂರಕವಾಗಿ ನಡೆಯುವ ಆಚರಣೆಗಳನ್ನು ಪರಿಗಣಿಸಿ ಇಂದಿರಾ ಹೆಗ್ಗಡೆಯವರು ಇದೊಂದು ಸಾವಿನ ಆಚರಣೆ ಎಂಬುದಾಗಿ ತಿಳಿಸಿದುದನ್ನು ಒಪ್ಪಿಕೊಳ್ಳಬಹುದಾದರೂ ಮುಖ್ಯವಾಗಿ ಸಿರಿ ಕಟುಂಬದ ಕೊನೆಯ ಕೊಂಡಿಗಳಾದ ಅಬ್ಬಯ-ದಾರಯರಿಗೆ ನಡೆಯುವ ಸಾವಿನ ಆಚರಣೆ ಎಂಬ ಅಭಿಪ್ರಾಯವನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಯಾಕೆಂದರೆ ಪುರ್ಪ ಬಿಡುವಾಗ 'ಅಜ್ಜೇರೆ ಸುಡಲದೆ ಕಂಡೊ' ಎಂಬುದಾಗಿ ಸತ್ಯನಾಪುರದ ಅಜ್ಜನವರನ್ನು ಸುಟ್ಟ ಜಾಗವಿದು ಎಂದು ಪರಿಗಣಿಸಿಯೇ ಪುರ್ಪ ಬಿಡುತ್ತಾರೆ ಎಂಬುದನ್ನು ಗಮನಿಸಬೇಕು. ಈ ಆಚರಣೆಗೆ ಪೂರಕವಾಗುವ ಇನ್ನಿತರ ಅಂಶಗಳನ್ನು ಈ ಕೆಳಗೆ ನೀಡಲಾಗಿದೆ.

ಗಡಿ ದೀಪುನು ಅಥವಾ ಕುಕ್ಕುದ ಮರ ಕಡ್ಪುನು (ಗಡಿ ಇಡುವುದು ಅಥವಾ ಮಾವಿನ ಮರ ಕಡಿಯುವುದು)

ಬಂಟರ ಸಾವಿನ ಆಚರಣೆಯಲ್ಲಿ ಉಪಯೋಗವಾಗುವ ಬಹುಮುಖ್ಯ ಮರಗಳಲ್ಲಿ ಮಾವಿನ ಮರ ಮೊದಲನೆಯದು. ಮಾವಿನ ಎಲೆ, ಹಣ್ಣುಗಳು ಮಂಗಳ ಕಾರ್ಯಗಳಿಗೆ ಮುಖ್ಯವಾದರೆ, ಮಾವಿನ ಮರದ ಕಟ್ಟಿಗೆ ಸಾವಿನಲ್ಲಿ ಮುಖ್ಯವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ವ್ಯಕ್ತಿ ಜೀವಂತವಾಗಿರುವಾಗಲೇ ನಾನು ಸತ್ತರೆ ಸುಡಲು ಇಂಥದ್ದೇ ಮಾವಿನ ಮರವನ್ನು ಕಡಿಯಬೇಕೆಂದು ಮನೆಯವರಿಗೆ ತಿಳಿಸಿರುವ ಉದಾಹರಣೆಗಳೂ ಇವೆ. ಮನೆಯವರು ತೀರಿಕೊಂಡಾಗ ಮಾವಿನ ಮರಕ್ಕೆ ಮೊದಲ ಮೂರು ಗಡಿ ಇಡಬೇಕಾದುದು ತೀರಿಕೊಂಡವರ ಕ್ರಿಯೆಯನ್ನು ಹಿಡಿಯ ಬಲ್ಲಂತ ವ್ಯಕ್ತಿ (ಸಾಮಾನ್ಯವಾಗಿ ಹಿರಿಯ ಮಗ) ಆಗಿರುತ್ತಾನೆ. ಅನಂತರ ಮರ ಕಡಿದು ಕಾಷ್ಠದ ತಯಾರಿಯನ್ನು ನಡೆಸುವವರು ಆ ಮನೆಗೆ ಸಂಬಂಧಿಸಿದ ಮೂಲದವರು. ಸಾಮಾನ್ಯವಾಗಿ ಮೇರ, ಕೊರಗ, ಮನ್ಸ, ಮುಂಡಾಲ ಜನಾಂಗದವರಾಗಿರುತ್ತಾರೆ. ಈ ಮರದ ಚೆಕ್ಕೆಯನ್ನು ಬಿಸಿ ನೀರಿಗೆ ಹಾಕಿ ಹೆಣದ ಮೀಹಕ್ಕೂ ಉಪಯೋಗಿಸುತ್ತಾರೆ. ಅಲ್ಲದೆ ಮಾವಿನ ಗೆಲ್ಲನ್ನು ತಂದು ಸಾವಿನ ಮನೆಯ ಮಾಡಿಗೆ ಕಟ್ಟುವ ಕ್ರಮವೂ ಇದೆ. ಈ ಮನೆಯಲ್ಲಿ ಸಾವು ಸಂಭವಿಸಿರುವುದರಿಂದ ಮದುವೆ ಇತ್ಯಾದಿ ಮಂಗಳ ಕಾರ್ಯಗಳ ಆಮಂತ್ರಣವನ್ನು ನೀಡಬಾರದು ಎಂಬ ಸೂಚನೆಗಾಗಿ ಈ ರೀತಿಯಲ್ಲಿ ಕಟ್ಟಲಾಗುತ್ತದೆ. ಹಿಂದೆ ಗುತ್ತಿನ ಗಡಿಹಿಡಿದ ಯಜಮಾನ ತೀರಿಕೊಂಡಾಗ ಆ ಗ್ರಾಮದ ಆಚಾರಿ ಬಂದು ಮರ ಕಡಿಯಬೇಕಿತ್ತು ಎಂಬುದನ್ನು ಅನೇಕ ಹಿರಿಯರು ಹೇಳುವುದನ್ನು ನನ್ನ ಕ್ಷೇತ್ರೀಯ ಅಧ್ಯಯನದ ಸಂದರ್ಭ ದಾಖಲಿಸಿಕೊಂಡಿರುವುದನ್ನು ಈಗಾಗಲೇ ಹೇಳಲಾಗಿದೆ. ಇವರಿಗೆ ಈ ಕ್ರಿಯೆಗಾಗಿ 'ತಲವೂ' ದೊರೆಯುತ್ತಿತ್ತು. ಆದರೆ ಈ ಕ್ರಮ ಈಗಿಲ್ಲ. ಇತ್ತೀಚೆಗೆ ಉಡುಪಿ ತಾಲೂಕಿನ ಎಲ್ಲೂರು ಸಮೀಪದ ಕುತ್ಯಾರು ಗುತ್ತಿನ ಯಜಮಾನರು ತೀರಿಕೊಂಡಾಗ ಮರಕಡಿಯಲು ವಾಡಿಕೆಯಂತೆ ಆಚಾರಿಗಳು ಬರಬೇಕು. ಅವರು ಈ ಕಾಲದಲ್ಲಿ ಬರಬಹುದೇ ಎಂಬ ಜಿಜ್ಞಾಸೆ ನಡೆದುದರ ಬಗೆಗೆ ವಿದ್ವಾಂಸರಾದ ಶ್ರೀ ಕೆ.ಎಲ್. ಕುಂಡಂತಾಯರು ನನಗೆ ತಿಳಿಸಿದ್ದರು.

ಕವತಾರು ಆಲಡೆಯಲ್ಲಿ ಸಿರಿ ಜಾತ್ರೆಗೆ 14 ದಿನ ಮುಂಚಿತವಾಗಿ (ಸುಗ್ಗಿ) ಮೀನ ಮಾಸದ ಅಮವಾಸ್ಯೆಯಂದು ಸ್ಥಳೀಯ ಆಚಾರಿ ಮನೆತನದವರು ಬಂದು ಮಾವಿನ ಮರವನ್ನು ಕಡಿಯುವ ವಿಧಿ ನಡೆಯುತ್ತದೆ. ದೇವಾಲಯದಲ್ಲಿ ಪ್ರಾರ್ಥನೆ ಮಾಡಿ ದೇವರ ಪ್ರಸಾದವನ್ನು ತಂದು ಮಾವಿನಮರಕ್ಕೆ ಹಚ್ಚಿ ಈ ಮರವನ್ನು ಕಡಿಯಲಾಗುತ್ತದೆ. ಇಂದಿರಾ ಹೆಗ್ಗಡೆಯವರು ಹೇಳುವಂತೆ ಮರಕಡಿದ ದಿನದಿಂದ ಹುಣ್ಣಿಮೆಯವರೆಗೆ ಅಜಿಲ ಮನೆತನದವರಿಗೆ ಹಾಗೂ ಸಂಬಂಧಿಸಿದ ಅಜಲಿನವರಿಗೆ ಸತ್ತ ಸೂತಕ. ಈ ಕಟ್ಟಿಗೆಯನ್ನೂ ಆಲಡೆಯ ಮೂಲ ತಾನದವರು ಮುಟ್ಟಿದರೆ ಸೂತಕ ತಟ್ಟುತ್ತದೆ (ಪುಟ 212). ಸಿರಿ ಜಾತ್ರೆಯ ಹಿಂದಿನ ದಿನ ಇಲ್ಲಿ ಕೊಡಿ(ಧ್ವಜ) ಏರುತ್ತದೆ. ಈ

ದಿನದಂದು ಕಡಿದು ಹಾಕಿದ ಮಾವಿನ ಮರದ ಕಟ್ಟಿಗೆಯಿಂದ ಊಟ ತಯಾರಿಸಬೇಕು. ಇದನ್ನು ಸಾವಿನ ಊಟ ಎಂಬರ್ಥದಲ್ಲಿ ಭಾವಿಸಲಾಗಿದೆ. ಒಟ್ಟಿನಲ್ಲಿ ಮಾವಿನ ಮರ ಕಡಿದು, ತಲವು ಅಳೆದು, ಸಾವಿನ ಊಟ ತಯಾರಿಸಿ ಎಡೆ ಬಡಿಸಿ ನಡೆಸುವ ಈ ಆಚರಣೆಯನ್ನು ಒಂದು ಸಾವಿನ ಆಚರಣೆ ಹೌದು ಎಂಬುದನ್ನು ಇಲ್ಲಿನ ಪ್ರಧಾನ ಅರ್ಚಕರಾದ ಶ್ರೀಯುತ ಅನಂತಪದ್ಮನಾಭ ಭಟ್ಟರು ಅವರ ಜೊತೆ ನಡೆಸಿದ ಸಂದರ್ಶನದಲ್ಲಿ ತಿಳಿಸಿದ್ದಾರೆ (2.7.2014). ಶ್ರೀಮತಿ ಇಂದಿರಾ ಹೆಗ್ಗಡೆಯವರು ಕೆಲವು ಬೆರ್ಮೆರ್ ತಾನಗಳಲ್ಲಿ 16 ಎಡೆಗಳನ್ನು ಬಡಿಸಿ ಪಿತೃಗಳನ್ನು ಆರಾಧಿಸುವ ಕ್ರಮ ಇದೆ ಎಂಬುದಕ್ಕೆ ಅನಂತಾಡಿ ಅಗೆಲ್ತಿಮಾರ್ ನಾಗ ಬನದ ಮುಡಿಂಜದ ಮುಂದೆ ಬಡಿಸಿರುವ 16 ಅಗೆಲುಗಳನ್ನು ಉದಾಹರಿಸಿರುತ್ತಾರೆ. ಇದು ಹಿರಿಯರ ಸಾಲಿಗೆ ಸಂದು ಹೋದವರನ್ನು 16ರಂದು ಎಡೆ ಬಡಿಸಿ ಹಿರಿಯರ ಕುಲದೊಡನೆ ಸೇರಿಸುವ 'ಪದಿನಾಜೆಕ್ ಸೇರ್ಸಾವುನ' (ಹದಿನಾರರ ಕುಲದ ಜೊತೆ ಸೇರಿಸುವ) ಕ್ರಮದಂತೆ ಇದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ (ಪುಟ 212).

ಚೀಂಕ್ರಿ ಪಾಡುನು

ಮಾವಿನ ಮರವನ್ನು ಕಡಿಯುವ ದಿನದಂದೇ 'ಚೀಂಕ್ರಿ ಪಾಡುನು' ಎಂಬ ಆಚರಣೆ ನಡೆಯುತ್ತದೆ. ಇದುವೇ ನಿಜವಾಗಿ ಉತ್ಸವಕ್ಕೆ ಮುಹೂರ್ತವೂ ಹೌದು. ಜಾರಿಗೆ ಮರದ ಎಲೆಗಳನ್ನು ಮೂಲದವರು (ಮೇರ, ಕೊರಗ, ಮನ್ಸ ಜನಾಂಗದವರು) ತಂದು ಕವತಾರು ಮನೆತನಕ್ಕೆ ಕೊಡಬೇಕು. ಈ ಎಲೆಗಳಲ್ಲಿ ಮೂರು ಮೂರು ಎಲೆಗಳನ್ನು ತೆಂಗಿನ ಗರಿಯ ಕಡ್ಡಿ (ತುಳುವಿನ ಚೀಂಕ್ರ್)ಯಿಂದ ಹೆಣೆದು ಒಟ್ಟು ಸೇರಿಸುವ ಕೆಲಸವನ್ನು ಕವತಾರು ಅಜಿಲ ಮನೆತನದ ಪ್ರಧಾನ ಹೆಂಗಸೇ ಮಾಡಬೇಕು. ಪೇರೂರು ಆಲಡೆಯಲ್ಲಿ ಚಾವಡಿಮನೆತನದವರು ಈ ಕೆಲಸವನ್ನು ನಿರ್ವಹಿಸುತ್ತಾರೆ. ಅನಂತರ ಈ ಗ್ರಾಮದಲ್ಲಿ ಬೇರೆ ಉತ್ಸವಗಳು, ಪ್ರಾಣಿಹತ್ಯೆ ಇತ್ಯಾದಿ ನಡೆಯಬಾರದೆಂಬ ನಿಷೇಧವಿದೆ. ಈ ಎಲೆಗಳನ್ನು ಜಾತ್ರೆಯ ದಿನ ತಲವು ಅಳೆದು ಆದ ಅನಂತರ ಮನೆಯ ಚಾವಡಿಯಲ್ಲಿ ಎರಡು ಗೆರಸೆಯಲ್ಲಿ ಬಿಡಿಸಿಟ್ಟು ಅದರ ಮೇಲೆ ಸಂದು ಹೋದವರಿಗೆ ಎಡೆಹಾಕಿ ಅದನ್ನು ಮೇರ, ಕೊರಗ, ಮನ್ಸ ಜನಾಂಗದವರಿಗೆ ನೀಡುವ ಕ್ರಮ ಇದೆ. ಕವತಾರಿನಲ್ಲಿ ತರಕಾರಿ ಎಡೆ ಹಾಕಿದರೆ ಪೇರೂರಿನಲ್ಲಿ ಹಾಲನ್ನ (ಪೇರಗಂಜಿ) ಬಡಿಸುವ ಕ್ರಮ. ಆದರೆ ಈ ಪದ್ಧತಿಯನ್ನೂ ಪೇರೂರಿನಲ್ಲಿ ಈಗ ಕೈ ಬಿಟ್ಟಿದ್ದಾರೆ. ಈ ಒಟ್ಟು ಕ್ರಿಯೆಗೆ 'ಚೀಂಕ್ರಿ ಪಾಡುನು' ಎಂದು ಹೆಸರು.

ಅಗೆಲ್ ಬಲಸುನು (ಎಡೆ ಹಾಕುವುದು)

ತುಳುವರ ನಂಬಿಕೆಯ ಸದ್ಗತಿ ಎಂದರೆ ಆತ್ಮನು ಸ್ವತಂತ್ರನಾಗಿ ತನ್ನ ಕುಲದ ಹಿರಿಯರೊಡನೆ ಸೇರಿಕೊಂಡು ತನ್ನ ಪೀಳಿಗೆಯ ಸಂರಕ್ಷಣೆಯನ್ನು ನೋಡಿಕೊಳ್ಳುವ

ಶಕ್ತಿ ಹೊಂದುವುದು ಎಂದು ಅರ್ಥ. ತನ್ನ ಕುಲದ ಗತಿಸಿದ ಹಿರಿಯರ ಸಾಲಿನಲ್ಲಿ ಆತನಿಗೂ ಸ್ಥಾನ ಸಿಗುವುದು. ಹಾಗೆ ಸದ್ಗತಿ ಹೊಂದಿದ ಅಗಲಿದಾತನನ್ನು ಮನೆಯ ಒಳಕ್ಕೆ ಕರೆಯುವ ವಿಧಿ ಬೊಜ್ಜದ ದಿನ ರಾತ್ರಿ ನಡೆಯುತ್ತದೆ. ಈ ವಿಧಿಗೆ'ಮಡೆಬೊಜ್ಜ' ಅಥವಾ 'ಮೀಂಚಿಲ್'/'ಮೀಚಿಲ್ ಬಳಸುನು' (ಮೀಸಲು ಬಡಿಸುವುದು) ಅಥವಾ 'ಉಲಾಯಿ ಲೆಪ್ಪುನು' (ಒಳಗೆ ಕರೆಯುವುದು) ಇತ್ಯಾದಿ ಹೆಸರುಗಳಿವೆ. ಮಡೆಬೊಜ್ಜಕ್ಕೆ ಹಿಂದೆ 'ಮೊಡಪ್ಪಜೆ' ಎಂದೂ ಹೇಳುತ್ತಿದ್ದರೆಂದು ಒಬ್ಬ ವಕ್ತೃ ಹೇಳಿದ್ದಾರೆ.

ಇದು ಒಂದು ರೀತಿಯಲ್ಲಿ ಮಾಂಸಾಹಾರದ ಸಮಾರಾಧನೆ. ಅದುವರೆಗೆ ಕಳೆದ 13 ದಿನಗಳ ಕಾಲ ವ್ರತಸ್ಥರಾಗಿದ್ದು ಶಾಕಾಹಾರವನ್ನು ಮಾತ್ರ ಸೇವಿಸಿದ್ದ ಮಿಶ್ರಾಹಾರಿಗಳಾದ ಆ ಕುಟುಂಬದವರು ಪುನಃ ತಮ್ಮ ಎಂದಿನ ಆಹಾರ ಶೈಲಿಗೆ ಮರಳುವ ಪ್ರಕ್ರಿಯೆಯನ್ನಾಗಿಯೂ ಇದನ್ನು ಗುರುತಿಸುವುದುಂಟು. ಮಡೆಬೊಜ್ಜಕ್ಕೆ ಕುಟುಂಬದ ಯಜಮಾನ, ಮನೆಯವರು, ಬಂಧುಗಳು, ನೆರೆಹೊರೆಯ ಆಪ್ತೇಷ್ಟರು ಮತ್ತು ಯಜಮಾನರು ಮಾತ್ರ ಸೇರಿಕೊಳ್ಳುತ್ತಾರೆ. ಅಂದು ಹತ್ತು ಕುಡ್ತೆ ಪ್ರಮಾಣದ ಅಕ್ಕಿಯ ಬಂದ(ಅರೆಪು)ದಿಂದ 'ಪುಂಡಿ' (ಕಡುಬು) ತಯಾರಿಸುತ್ತಾರೆ. ಇದನ್ನು ಮಾಡದೆ ಹೋದರೆ ಇಡಿಯ ವರ್ಷ ಆ ಮನೆಯಲ್ಲಿ ಅಕ್ಕಿ ಕಡೆದು ಕಡುಬುಮಾಡುವಂತಿಲ್ಲ.

ಅಂದು ಒಂದು ಎಳೆ ಕೋಳಿ(ಮದ್ಮಲ್ ಲಾಕಿ)ಯನ್ನು ತಂದು ಅದರ ಕಾಲಿಗೂ, ಬಾಯಿಗೂ ನೀರು ಹಾಕಿ, ನಾಲ್ಕು ಕಾಳನ್ನು ಬಾಯಿಗಿಕ್ಕಿ ತಿನ್ನಿಸಿ, ಕುಟುಂಬದವರೆಲ್ಲರ ತಲೆಗೆ ನಿವಾಳಿಸಿ ಪ್ರಾರ್ಥನೆ ಮಾಡುತ್ತಾರೆ. ಮೃತ ವ್ಯಕ್ತಿ ಹೆಂಗಸಾದರೆ ಕೋಳಿ ಗಂಡು ತೆಲಾವು ಆಗಬೇಕು.

'ಮೃತನಿಗೆ ಇಂದು ಮಧ್ಯಾಹ್ನ ಉತ್ತರ ಕ್ರಿಯಾದಿ ಸದ್ಗತಿ ಕಾರ್ಯಗಳನ್ನೆಲ್ಲ ಮಾಡಿದ್ದೇವೆ. ಇದೀಗ ರಾತ್ರಿ ಒಳಗೆ ಕರೆಯುವ ಕಾರ್ಯಕ್ಕೆ ಕೋಳಿ ಕೊಯ್ಯುತ್ತಿದ್ದೇವೆ. ಆತನಿಗೆ ಸದ್ಗತಿ ದೊರೆತು ಈ ಕೋಳಿಯ ಮೃತಶರೀರ ಸರಿಯಾದ ದಿಕ್ಕಿಗೆ ಬೀಳುವಂತಾಗಲಿ' ಎಂದು ಹೇಳಿ ಅದರ ಕುತ್ತಿಗೆ ತಿರುಗಿಸಿ ಕೊಂದು ಎಸೆಯುತ್ತಾರೆ. ಅದು ಸರಿಯಾದ ದಿಕ್ಕಿಗೆ ಬಿದ್ದರೆ ಆತನ ಆತ್ಮಕ್ಕೆ ಸಂತೃಪ್ತಿ ಆಗಿದೆಯೆಂದು ತಿಳಿಯಲಾಗುತ್ತದೆ.

ಪುಂಡಿ, ಕೋಳಿ ಪದಾರ್ಥ ಆದ ಬಳಿಕ ಚೊಕ್ಕ ಮಾಡಿದ ಮನೆಯೊಳಗೆ ಮೂಡುದಿಕ್ಕಿಗೆ ಮುಖ ಮಾಡಿ ಮಣೆಯೊಂದರ ಮೇಲೆ ದೀಪವುರಿಸಿ, ಬದಿಯಲ್ಲಿ ಮಣೆಯ ಮೇಲೆಯೆ ಮೃತನ ಉಡುಗೆ ತೊಡುಗೆ ಮಡಚಿಟ್ಟು ಅಥವಾ ಮೃತಳ ಸೀರೆಯನ್ನಿಟ್ಟು ಅದರ ಮೇಲೆ ಆತನ ಅಥವಾ ಆಕೆಯ ಆಭರಣಗಳನ್ನಿಟ್ಟು ಅಲ್ಲೆ ಭಸ್ಮ, ವೀಳ್ಯ, ಅಡಕೆ ಇರಿಸಬೇಕು.

ಇದರ ಎದುರು ಎಲೆಗಳನ್ನಿಟ್ಟು ಎರಡು ಅಗೆಲುಗಳನ್ನು ಬಡಿಸುತ್ತಾರೆ. ಒಂದು ಪುಂಡಿ ಮತ್ತು ಕೋಳಿ ಪದಾರ್ಥದ ಅಗೆಲು. ಇನ್ನೊಂದು ಅನ್ನ ಮತ್ತು ಮಧ್ಯಾಹ್ನಕ್ಕಾಗಿ ತಯಾರಿಸಿದ ಭಕ್ಷ್ಯಗಳಿಂದ ಮೀಸಲು ತೆಗೆದಿರಿಸಿದ ಎಲ್ಲ ಪದಾರ್ಥಗಳನ್ನು ಬಡಿಸಿದ್ದು. ಈ ಬಡಿಸುವ ಕೆಲಸವನ್ನು ಮೃತನ ಪತ್ನಿಯೇ ಮಾಡಬೇಕು. ಅವಳಿಲ್ಲವಾದರೆ ಮಗಳು

ಅಥವಾ ಅಕ್ಕನ ಅಥವಾ ತಂಗಿಯ ಮಗಳೂ ಬಡಿಸಬಹುದು.

ಆ ಬಳಿಕ ಗುರ್ಕಾರರು ಮತ್ತು ಎಲ್ಲರೂ ಕೈಯಲ್ಲಿ ಅಕ್ಕಿ ಸೇಸೆ ಹಿಡಿದು ಹೊರಗಿನ ಆತ್ಮ ಒಳಗೆ ಬಂದು ಹಾಕಿರುವ ಎಡೆಯನ್ನು ಸ್ವೀಕರಿಸಿ ಈ ಮನೆಯವರಿಗೆ, ಕುಟುಂಬದವರಿಗೆ ನಿಮ್ಮ ಕುರಿತಾದ ದೋಷ ಬರಬಾರದೆಂದು ಪ್ರಾರ್ಥಿಸಿ ಕೊಳ್ಳುತ್ತಾರೆ. ಆ ಬಳಿಕ ಕೈಯಲ್ಲಿರುವ ಅಕ್ಕಿ ಕಾಳನ್ನು ನೆಲಕ್ಕೆ ಹಾಕಿ ಕೈಮುಗಿದು ಎಲ್ಲರೂ ಹೊರಗೆ ಬಂದು ಬಾಗಿಲು ಮುಚ್ಚುತ್ತಾರೆ.

ಅನಂತರ ಗೋಡೆಗೆ ತಾಗಿಕೊಂಡು ಯಾರೂ ನಿಲ್ಲಬಾರದು. ಸುಮಾರು ಹದಿನೈದು ನಿಮಿಷಗಳ ಬಳಿಕ ಹೆಂಗಸೊಬ್ಬಳು ಬಾಗಿಲು ತೆರೆದು ಒಳಹೋಗಿ ಚೆಂಬೊಂದರಲ್ಲಿ ನೀರು ಹಿಡಿದು ಹೊರಬಂದು ಮುಖ್ಯದ್ವಾರದ ಎದುರು ನಿಂತು ಮೂರು ಬಾರಿ ಮಾಡಿಗೆ ನೀರು ಚಿಮುಕಿಸಬೇಕು.

ಅನಂತರ ಎಲ್ಲರೂ ಒಳಹೋಗಿ ಹೆಂಡತಿ ಮಕ್ಕಳು ಬಡಿಸಿದ ಅಗೆಲಿನಿಂದ ಸ್ವಲ್ಪ ಕೋಳಿಯ ಪದಾರ್ಥ ಬಾಯಿಗೆ ಹಾಕಿಕೊಂಡು 'ಪೋಸ ಬುಡ್ಪುನೆ' (ಉಪವಾಸ ಬಿಡುವುದು) ಮಾಡುತ್ತಾರೆ. ಅನಂತರ ಅಲ್ಲಿ ಸೇರಿದವರಿಗೆಲ್ಲ ಕೋಳಿ ಪದಾರ್ಥದ ಜತೆಗೆ ಪುಂಡಿ ಹಾಗೂ ಅನ್ನ, ಮೀನಿನ ಪದಾರ್ಥ, ಭಕ್ಷ್ಯಗಳ ಸಹಿತ ಊಟ ಬಡಿಸುತ್ತಾರೆ.

ಈ ರೀತಿಯ ವಿಧಿ ಕವತಾರಿನ ಸಿರಿ ಜಾತ್ರೆಯ ದಿನ ನಡೆಯುತ್ತದೆ. ತಲವು ಲಪ್ಪುನು ಕಾರ್ಯಕ್ರಮದ ಅನಂತರ ಅಜಿಲರ ಚಾವಡಿಯ ಒಳಗೆ ಒಂದು ಮಣೆಯ ಮೇಲೆ ದೀಪವಿರಿಸಿ ಎರಡು ಗೆರಸೆಗಳನ್ನು ಇಟ್ಟು ಒಂದರಲ್ಲಿ ಭತ್ತವನ್ನೂ ಇನ್ನೊಂದರಲ್ಲಿ ಅಕ್ಕಿಯನ್ನೂ ಹಾಕಿ ಬಿಡಿಸುತ್ತಾರೆ. ಆ ನಂತರ ಚೇಂಕ್ರಿ ಆಚರಣೆಯ ದಿವಸ ಒಟ್ಟು ಸೇರಿಸಿ ಮಾಡಿದ ಜಾರಿಗೆಯ ಎಲೆಗಳನ್ನು ಈ ಎರಡೂ ಗೆರಸೆಗಳಲ್ಲಿ ಇಟ್ಟು ಅದಕ್ಕೆ ಅನ್ನ ಹಾಗೂ ವಿವಿಧ ಬಗೆಯ ಪದಾರ್ಥಗಳ ಜೊತೆಗೆ ಸಿಹಿ ಪದಾರ್ಥಗಳನ್ನೂ ಮನೆಯ ಯಜಮಾನಿ ಬಡಿಸುತ್ತಾರೆ. ಪೂರ್ತಿಯಾಗಿ ಇದು ಸಸ್ಯಾಹಾರದ ಎಡೆಯಾಗಿರುತ್ತದೆ. ಅನಂತರ ಅಜಿಲ ಮನೆತನದವರು ಹಾಗೂ ಸಿರಿ ಬಳಗದವರೆಲ್ಲ ಪ್ರಾರ್ಥಿಸಿಕೊಂಡ ಮೇಲೆ ಮನ್ಸ ಜನಾಂದವರಿಗೆ ಎರಡು ಎಡೆ, ಕೊರಗ ಜನಾಂಗದವರಿಗೆ ಒಂದು ಎಡೆ ಹಾಗೂ ಮುಕಾರಿಗೆ ಒಂದು ಎಡೆಯನ್ನು ಎಲೆ ಅಡಿಕೆ, ಹೊಗೆಸೊಪ್ಪಿನ ಜೊತೆ ನೀಡುತ್ತಾರೆ. ಎಡೆಯನ್ನು ನೀಡುವ ಮೊದಲು ಅವರ ತಲೆಗೆ ತೆಂಗಿನ ಎಣ್ಣೆಯನ್ನು ಸುರಿದು ಆ ನಂತರ ಎಡೆಯನ್ನು ನೀಡುತ್ತಾರೆ. ಈ ಸಂದರ್ಭ ಮೂಲದವರು ಕುಂಬಳ ಕಾಯಿಯನ್ನು ನೀಡುವ ಕ್ರಮ ಇತ್ತು. ಇದೀಗ ಈ ಕ್ರಮ ಇತಿಹಾಸ ಸೇರಿದ ವಿಷಯವಾಗಿದೆ. ಎಡೆಯನ್ನು ಸ್ವೀಕರಿಸಿದ ಇವರು ತಲವು ಹಾಗೂ ಎಡೆಗಳನ್ನು ಪಡೆದುಕೊಂಡು ತಾವು ಆಲಡೆಯಲ್ಲಿ ನಿರ್ವಹಿಸಬೇಕಾದ ಕೆಲಸಗಳಿಗೆ ಹೊರಡುತ್ತಾರೆ. ಈ ಒಟ್ಟು ಆಚರಣೆಯನ್ನು ನೋಡಿದಾಗ ಸಂದು ಹೋದ ಪ್ರೇತಾತ್ಮವನ್ನು ಎಡೆ ಬಡಿಸಿ ಒಳಗೆ ಕರೆಯುವ 'ಉಲಾಯಿ ಲೆಪ್ಪುನು' ಆಚರಣೆಯಂತೆ ಕಂಡುಬರುತ್ತದೆ. ಪೇರೂರಿನಲ್ಲಿಯೂ ಹಿಂದೆ ಈ ರೀತಿಯ ಆಚರಣೆಯಿದ್ದು ಇತ್ತೀಚೆಯ ವರ್ಷಗಳಲ್ಲಿ

ಈ ಪದ್ಧತಿಯನ್ನು ಕೈ ಬಿಟ್ಟಿದ್ದಾರೆ. ಜಾತ್ರೆಗೆ ಒಂಭತ್ತು ದಿನ ಮುಂಚಿತವಾಗಿ ನಡೆಯಬೇಕಿದ್ದ ಚೇಂಕ್ರಿ ಹಾಕುವ ವಿಧಿ ಈಗ ಜಾತ್ರೆಯಂದೇ ನಡೆಯುವ ಮೂಲಕ ಎಲ್ಲ ಆಚರಣೆಗಳು ತಮ್ಮ ಮೂಲ ಅರ್ಥವನ್ನು ಕಳೆದುಕೊಂಡಿದ್ದು ಅದಲುಬದಲಾದಂತೆ ಕಾಣಿಸುತ್ತದೆ. ಕವತಾರಿನಲ್ಲಿ ತರಕಾರಿಯ ಎಡೆ ಹಾಕಿದರೆ ಪೇರೂರಿನಲ್ಲಿ ಹಾಲನ್ನ (ಪೇರಗಂಜಿ) ಬಡಿಸುವ ಕ್ರಮ ಇದೆ. ಇದೂ ಕಾಲಕ್ರಮದಲ್ಲಿ ನಿಂತು ಹೋಗಿದೆ ಎಂಬುದನ್ನು ಶ್ರೀಯುತ ಕುಟ್ಟಿ ಶೆಟ್ಟಿಯವರು ತಿಳಿಸಿದರು.

ಎರುಕೋಲ/ ಕಾಲೇಕೋಲ

ಎರುಕೋಲ ಅಥವಾ ಕಾಲೇಕೋಲವನ್ನು ಗುತ್ತಿನ ಗಡಿಹಿಡಿದ ಯಜಮಾನನ ಉತ್ತರಕ್ರಿಯೆಯ ದಿನದಂದು ನೆರವೇರಿಸಲಾಗುತ್ತದೆ. ಸಾಮಾನ್ಯವಾಗಿ ನಲಿಕೆ ಜನಾಂಗದವರು ಈ ಕಾಲೇಕೋಲಕ್ಕೆ ಕಟ್ಟುತ್ತಾರೆ. ಗಡಿಹಿಡಿದ ಯಜಮಾನನ ಉತ್ತರಕ್ರಿಯೆಯ ದಿನ ಆತನ ದೂಪೆ(ಗೋರಿ)ಯ ಸುತ್ತ ಇತರ ವಿಧಿಗಳೆಲ್ಲ ನೆರವೇರಿದ ಅನಂತರ ಈ ಕಾಲೇಕೋಲದವನು ಕುಣಿಯುತ್ತಾ ದೂಪೆ(ಗೋರಿ)ಗೆ ಸುತ್ತು ಬರುತ್ತಾನೆ. ಮೃತನು ಮತ್ತು ಬಳಗದವರು ದೊಡ್ಡ ಸಿರಿವಂತರಾದರೆ ದೂಪೆಯಿಂದ ನಾಲ್ಕೈದು ಮಾರು ದೂರದಲ್ಲಿ ಗುರುತಿಸಿದ ಗದ್ದೆಯಲ್ಲಿ ಎರಡು ಮುಂಡು (ಗೂಳಿ) ಅಥವಾ ಕೋಣಗಳಿಗೆ ನೊಗ ಕಟ್ಟಿ ಮೂರು ಸುತ್ತು ಉಳುಮೆ ಮಾಡಲು ಇದೆ. ಉಳುವವನು ನಲಿಕೆಯವನು ಅಥವಾ ಮೂಲದವನು ಆಗಿರುತ್ತಾನೆ. ಉಳುತ್ತ ಹೋದಂತೆ ಕುಟುಂಬ ದವರಲ್ಲಿ ಹಿರಿಯರೊಬ್ಬರು ನಾಣ್ಯ ಬಿತ್ತುತ್ತ (ಭತ್ತದಂತೆ ಎಸೆಯುತ್ತ) ಹೋಗುತ್ತಾರೆ. ಆ ನಾಣ್ಯಗಳನ್ನು ಕ್ಷೌರಿಕ ಹೆಕ್ಕುತ್ತಾನೆ. ಮೂರನೆ ಸುತ್ತಿನ ಉಳುಮೆ ಪೂರ್ತಿಯಾದೊಡನೆ ಆ ಎತ್ತುಗಳನ್ನು ಬಲವಾಗಿ ಹೊಡೆದು ಓಡಿಸಲಾಗುತ್ತದೆ. ಹಾಗೆ ಬಿರುಸಾಗಿ ಓಡುವ ಎತ್ತುಗಳನ್ನು ಕ್ಷೌರಿಕ ಮತ್ತು ಬಳಗದವರು ತಡೆದು ನಿಲ್ಲಿಸಿದರೆ ಆ ಎತ್ತು-ನೊಗ ಕ್ಷೌರಿಕನದಾಗುತ್ತದೆ. ಈ ರೀತಿಯ ಅಣಕು ಕಂಬಳದ ವಿಧಿ ಮುಕ್ತಾಯವಾದೊಡನೆ ಕಾಲೆಕೋಲಕ್ಕೆ ಕಟ್ಟಿದವನು ತಾನು ಕಟ್ಟಿರುವ ಸಿರಿ ಒಲಿಗಳನ್ನು ಯಜಮಾನನನ್ನು ಸುಟ್ಟಗದ್ದೆಯಲ್ಲಿ ಬಿಚ್ಚಿಹಾಕುತ್ತಾನೆ.

ಈ ರೀತಿಯ ಒಂದು ಆಚರಣೆ ಸಿರಿ ಜಾತ್ರೆಯಂದು ಪೇರೂರು ಆಲಡೆಯಲ್ಲಿ ನಡೆಯುತ್ತಿತ್ತು ಎಂಬುದನ್ನು ದಾಖಲಿಸಿಕೊಂಡಿದ್ದೇನೆ. ಈ ಆಲಡೆಯ ಗುಡಿಗಳ ಬಲಭಾಗದಲ್ಲಿ ದೊಡ್ಡ ಬಾಕಿಮಾರು ಗದ್ದೆಯಿದೆ. ಜಾತ್ರೆಯಂದು ಬೆಳಗ್ಗೆ ಇಲ್ಲಿ 'ಅಂಬೋಡಿ' ಎಂಬ ಅಣಕು ಕಾಳಗ ನಡೆಯುತ್ತದೆ. ಅನಂತರ ಇಲ್ಲಿ ಕುದುರೆಕೋಲ ನಡೆಯುತ್ತಿತ್ತು ಎಂಬುದನ್ನು ಸಂದರ್ಶನದಲ್ಲಿ ದಾಖಲಿಸಿಕೊಂಡಿದ್ದೇನೆ. ಇತ್ತೀಚೆಯವರೆಗೂ ನಡೆಯುತ್ತಿದ್ದ ಈ ಆಚರಣೆ ಇದಕ್ಕೆ ಕಟ್ಟುವವನು ತೀರಿಕೊಂಡ ಮೇಲೆ ಇದೂ ಇತಿಹಾಸ ಸೇರಿಹೋಗಿರು ವಂತೆ ಕಾಣಿಸುತ್ತದೆ. ಡಾ. ಅರುಣ್ ಕುಮಾರ್ ಎಸ್.ಆರ್. ಅವರ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ 'ಸಿರಿ ಆಲಡೆಗಳು ಆಚರಣೆಗಳು-ಸಾಂಸ್ಕೃತಿಕ ಅಧ್ಯಯನ' ಎಂಬ

ಅಧ್ಯಯನದಲ್ಲಿಯೂ ಈ ಬಗೆಗಿನ ವಿವರಗಳನ್ನು ನೀಡಿದ್ದಾರೆ. ಹೀಗೆ ಸಿರಿ ಆಲಡೆಗಳಲ್ಲಿ ಒಂದು ಕಾಲದಲ್ಲಿ ಇದ್ದಂಥ ಅಪೂರ್ವ ಆಚರಣೆಗಳು ಕಾಲಕ್ರಮದಲ್ಲಿ ಒಂದೊಂದಾಗಿ ಮರೆಯಾಗುತ್ತಾ ಒಟ್ಟು ಆಚರಣೆಯು ಅರ್ಥವನ್ನು ಕಳೆದುಕೊಂಡು ನಡೆಯುತ್ತಿರುವುದು ವಿಷಾದದ ವಿಚಾರವೂ ಹೌದು. ಹೀಗಾಗಿ ಸಿರಿ ಆಚರಣೆಯ ಹಿಂದಿನ ಒಟ್ಟು ಅರ್ಥವನ್ನು ಗ್ರಹಿಸಲು ಈ ಎಲ್ಲ ಅಂಶಗಳು ಸಹಕಾರಿಯಾಗಿವೆ. ಇಂತಹ ಅಂಶಗಳನ್ನು ಒಟ್ಟಿಗಿರಿಸಿ ಚಿಂತಿಸಿದಾಗ ಸಿರಿ ಆಚರಣೆಯೆಂಬುದು ಸಾವಿನ ಆಚರಣೆಯ ಮೂಲ ಸ್ವರೂಪದ ಮೇಲೆ ಬೆಳೆದು ಬಂದುದಾಗಿದೆಯೆಂದು ಖಚಿತವಾಗಿ ಹೇಳುವಂತಿದೆ. ಭೂತಾರಾಧನೆ ಯೆಂಬುದು ಭೂತದ ಶಕ್ತಿಸಾಮರ್ಥ್ಯ ಮತ್ತು ನಂಬಿದವರನ್ನು ರಕ್ಷಣೆ ಮಾಡುವ ಅಭಯಪ್ರದಾನದ ಆಧಾರದಲ್ಲಿ ನಡೆಯುತ್ತದೆ. ಸಿರಿಯ ಆರಾಧನೆಯು ಸಾವಿನ ಆಚರಣೆಯಾದುದರಿಂದಲೇ ಭೂತಾರಾಧನೆಗಿಂತ ಇದು ವಿಭಿನ್ನವಾಗಿ ನಿಂತಿದೆಯೆಂಬು ದನ್ನು ಈ ಸಂದರ್ಭದಲ್ಲಿ ಹೇಳಬಹುದಾಗಿದೆ.

ಅಂಬಿದ ವರಸರಿ

ಕವತಾರು ಆಲಡೆಯಲ್ಲಿ ಸಿರಿ ಜಾತ್ರೆಯ ಮರುದಿನ 'ಅಂಬಿದ ವರಸರಿ' (ಸೆಗಣಿಯ ವರಸರಿ) ಎಂಬ ಆಚರಣೆ ನಡೆಯುತ್ತದೆ. ಇದನ್ನು ಕವತಾರು ಆಲಡೆಯ ಮುಖ್ಯರಾದ ಅಜಿಲ ಮನೆತನದವರೇ ನಡೆಸಿಕೊಡಬೇಕು. ಒಂದು ಬುಟ್ಟಿ ತುಂಬ ನೀರು ಸೆಗಣಿ ತುಂಬಿ ಇದನ್ನು ದೇವಸ್ಥಾನದಿಂದ ಬೀಡಿನವರೆಗೆ ಗುಡಿಸಿಕೊಂಡು ಹೋಗಬೇಕು. ಈ ಕ್ರಿಯೆಯು ಸಾವಿನ ಸೂತಕದಿಂದ ಶುದ್ಧವಾಗುವುದರ ಸಂಕೇತ ಎಂದು ನಂಬಲಾಗಿದೆ.

ಸಿರಿ ಆರಾಧನೆಯನ್ನು ಈವರೆಗೆ ಅಧ್ಯಯನ ನಡೆಸಿದ ವಿದ್ವಾಂಸರೆಲ್ಲ ಸಿರಿಯನ್ನು ಹೆಣ್ಣಿನ ದೌರ್ಜನ್ಯದ ವಿರುದ್ಧದ ಹೋರಾಟ, ಫಲವಂತಿಕೆ, ಸಂತಾನಭಾಗ್ಯದ ಕುರಿತಂತೆ ಇರುವ ನಿರೀಕ್ಷೆ, ಪುರುಷ ಪ್ರಾಧಾನ್ಯವನ್ನು ಎತ್ತಿ ಹಿಡಿಯುವ ಮದುವೆ–ಮರುಮದುವೆಗಳ ಬಗೆಗಿನ ಕಲ್ಪನೆಗಳು, ಸ್ತ್ರೀ ಸಬಲೀಕರಣದ ಹಿನ್ನೆಲೆಯಲ್ಲಿ ಸಿರಿಯನ್ನು ಅರ್ಥೈಸುವ ಬಗೆ, ಸಿರಿ ಆಚರಣೆಯಲ್ಲಿ ಭಾಗವಹಿಸುವ ಜನರ ಮನೋವೈಜ್ಞಾನಿಕ ಹಿನ್ನೆಲೆ – ಹೀಗೆ ಬಹು ಆಯಾಮಗಳಲ್ಲಿ ಸಿರಿಯನ್ನು ಅಧ್ಯಯನ ನಡೆಸಲು ಪ್ರಯತ್ನಿಸಿದ್ದಾರೆ. ನಾನು ನಡೆಸಿರುವ ಸಿರಿಕಾವ್ಯಗಳ ತೌಲನಿಕ ಅಧ್ಯಯನದಿಂದ ಸಿರಿಯ ಬಗೆಗೆ ಈವರೆಗೆ ನಡೆದಿರುವ ಅಧ್ಯಯನಗಳಿಗಿಂತ ಭಿನ್ನವಾಗಿ ನೋಡುವ ಮತ್ತು ಅರ್ಥೈಸುವ ಒಂದು ಸಣ್ಣ ಪ್ರಯತ್ನ ಎಂಬುದನ್ನು ವಿನಮ್ರನಾಗಿ ಹೇಳಬಯಸುತ್ತೇನೆ. ಇನ್ನೂ ಹೆಚ್ಚಿನ ಅಧ್ಯಯನದ ಅವಕಾಶಗಳು ಈ ಸಿರಿಕಾವ್ಯದೊಳಗೆ ಇದ್ದು ಕರ್ನಾಟಕದ ಬೇರೆಡೆಗಳ ಜನಪದಕಾವ್ಯಗಳನ್ನಿರಿಸಿಕೊಂಡು ತುಲನಾತ್ಮಕವಾಗಿ ಅಧ್ಯಯನ ಮಾಡಲೂ ಅವಕಾಶವಿದೆ. ಈ ರೀತಿಯ ಅಧ್ಯಯನ ಇದುವರೆಗೆ ನಡೆದಿಲ್ಲವಾದುದರಿಂದ ಈ ಅವಕಾಶಗಳನ್ನು ನಮ್ಮ ಸಂಶೋಧಕರು ಬಳಸಿಕೊಳ್ಳಬೇಕಾಗಿದೆ. ಪ್ರಾಚೀನ ತುಳುನಾಡಿನ ಜನಜೀವನವನ್ನೂ ಅವರ ಚಿಂತನಕ್ರಮಗಳನ್ನೂ ಆರಾಧನೆಯ ಸ್ವರೂಪಗಳನ್ನೂ ಅಂದಿನವರ ಮಾನಸಿಕ

ತುಮುಲಗಳನ್ನೂ ಅದಕ್ಕೆ ಆ ಕಾಲದಲ್ಲಿ ಅವರು ಕಂಡುಕೊಂಡ ಪರಿಹಾರಗಳನ್ನೂ ಸ್ತ್ರೀ ಜೀವನವೊಂದು ಆಚರಣೆಯಾಗಿ ರೂಪುಗೊಂಡ ಪರಿಯನ್ನೂ ಅರ್ಥ ಮಾಡಿಕೊಳ್ಳುವಲ್ಲಿ ನನ್ನೀ ಅಧ್ಯಯನವು ಸಹಾಯವನ್ನು ನೀಡುವುದೆಂದು ನಾನು ಭಾವಿಸಿದ್ದೇನೆ. ಕರ್ನಾಟಕದ ಇತರೆಡೆಗಳಲ್ಲಿ ಇವು ಹೇಗಿವೆಯೆಂಬುದು ಇನ್ನೂ ವಿಸ್ತೃತವಾದ ಅಧ್ಯಯನ ವಿಷಯ. ಹೀಗೆ ಅಧ್ಯಯನದ ಹರಹನ್ನು ಒಂದಿಷ್ಟು ವಿಸ್ತರಿಸುವ ಅವಕಾಶ ದೊರೆತುದಕ್ಕೆ ಒಂದಿಷ್ಟು ಸಂಭ್ರಮ ನನ್ನ ಮನಸ್ಸಿನಲ್ಲಿದೆಯೆಂಬ ಸತ್ಯವನ್ನು ನಿರೂಪಿಸ ಬಯಸುತ್ತೇನೆ.

ಸಿರಿಕಾವ್ಯಾಲೋಕನದ ವಕ್ತೃಗಳು

ಪಾಡ್ದನಗಾರ್ತಿ ಕರ್ಗಿ ಶೆಡ್ತಿಯವರ ಬದುಕು, ಹಿನ್ನೆಲೆ

ಕರ್ಗಿಯವರು ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲೂಕಿನ ನಾಲ್ಕೂರು ಎಂಬ ಹಳ್ಳಿಯಲ್ಲಿ ರಾಮಣ್ಣ ಶೆಟ್ಟಿ ಸುಂದರಿ ದಂಪತಿಯ ಮೂರು ಗಂಡು ಮೂರು ಹೆಣ್ಣುಮಕ್ಕಳಲ್ಲಿ ಐದನೆಯವರು. ಇವರ ಹುಟ್ಟಿದಾಗ ಮನೆ ಯವರು ಇಟ್ಟ ಹೆಸರು ಶಾರದ. ಆದರೆ ದಲಿಯದ ಹೆಸರು ಕರ್ಗಿ. ಕರ್ಗಿಯವರಿಗೆ ತಾವು ಹುಟ್ಟಿದ ವರ್ಷ, ದಿನಾಂಕ, ನಕ್ಷತ್ರ ತಿಳಿಯದಿದ್ದರೂ ಅತ್ರಿಜಾಲ್ ಮಹಾಲಿಂಗೇಶ್ವರ ಕ್ಷೇತ್ರದಲ್ಲಿ ತನ್ನ ಹದಿನಾಲ್ಕನೇ ವರ್ಷ ಪ್ರಾಯದಲ್ಲಿ ಸಿರಿದಲಿಯದಲ್ಲಿ ನಿಂತ ನೆನಪು. 1999ನೆಯ ಇಸವಿಯಲ್ಲಿ ಆರ್.ಆರ್.ಸಿ. ಮೂಲಕ ಕರ್ಗಿಯವರ ಸಿರಿಕಾವ್ಯದ ದಾಖಲಾತಿ ನಡೆಸುವಾಗ ಪ್ರಕೃತ ವರ್ಷ ಸಿರಿ ದಲಿಯದಲ್ಲಿ ತಮ್ಮದು 32ನೆಯ ವರ್ಷದ ಅನುಭವ ಎಂದಿರುವುದರಿಂದ ಎಲ್ಲ ಲೆಕ್ಕಾಚಾರಗಳಲ್ಲಿ ಕರ್ಗಿಗೀಗ ಹೆಚ್ಚುಕಮ್ಮಿ 63 ವರ್ಷ ಎನ್ನಬಹುದು. ಕರ್ಗಿಯವರು ಶಾಲೆಯ ಬಾಗಿಲು ಹೆಚ್ಚು ನೋಡಿದವರಲ್ಲ. ಮನೆಯ ಆರ್ಥಿಕ ಕಷ್ಟಗಳಿಂದಾಗಿ ವಿದ್ಯಾಭ್ಯಾಸವನ್ನು ಎರಡನೆ ತರಗತಿಗೆ ನಿಲ್ಲಿಸಿದವರು.

ಕರ್ಗಿಯವರಿಗೆ ತಮ್ಮ 13 ವರ್ಷ ಪ್ರಾಯದಲ್ಲೇ ಬೆಳ್ತಂಗಡಿ ತಾಲೂಕಿನ ಅಳದಂಗಡಿ ಬಡಕಾರಂದೂರು ಗ್ರಾಮದ ಒಬ್ಬೆದೊಟ್ಟುವಿನ ನಾರಾಯಣ ಶೆಟ್ಟಿಯವರೊಂದಿಗೆ ವಿವಾಹವಾಯಿತು. ಒಂದು ಅರ್ಥ ದಲ್ಲಿ ಕರ್ಗಿಯವರದು ಸಿರಿಯಂತೆ ಬಾಲ್ಯವಿವಾಹವೂ ಹೌದು. ಆ

ಕಾಲದಲ್ಲಿ ಇದು ಸಾಮಾನ್ಯವಾಗಿತ್ತು. ಆರಂಭದಲ್ಲಿ ರಸ್ತೆ ಕಂಟ್ರಾಕ್ಟುದಾರರಾಗಿದ್ದ ನಾರಾಯಣ ಶೆಟ್ಟಿಯವರು ಆರ್ಥಿಕವಾಗಿ ಸಬಲರಾಗಿದ್ದರು. ಕ್ರಮೇಣ ಅವರ ಆರೋಗ್ಯದಲ್ಲಿ ತೊಂದರೆ ಬಂದುದರಿಂದ ಇಡೀ ಸಂಸಾರದ ಜವಾಬ್ದಾರಿ ಕರ್ಗಿಯವರ ಹೆಗಲ ಮೇಲೆ ಬಿತ್ತು. ಅನ್ಯದಾರಿ ಕಾಣದೆ ಕೂಲಿ ಕೆಲಸ ಮಾಡಿ ಕರ್ಗಿಯವರು ತಮ್ಮ ಸಂಸಾರದ ಹೊಣೆಗಾರಿಕೆಯನ್ನು ನಿರ್ವಹಿಸುವ ಪರಿಸ್ಥಿತಿ ಒದಗಿಬಂತು.

ಕರ್ಗಿಯವರದು ಐವರು ಮಕ್ಕಳ ತುಂಬು ಸಂಸಾರ, ನಾಲ್ವರು ಹೆಣ್ಣು, ಒಬ್ಬ ಗಂಡು. ಬಂಟ ಸಮಾಜದಲ್ಲಿ ಹುಟ್ಟಿದ ಕರ್ಗಿಯವರು ತಮ್ಮ ಬದುಕಿನಲ್ಲಿ ಕಂಡದ್ದೆಲ್ಲ ಬಡತನವನ್ನೇ. ಹೀಗಾಗಿ ಮಕ್ಕಳಿಗೂ ವಿದ್ಯಾಭ್ಯಾಸವನ್ನು ಕೊಡಿಸಲಾಗದ ಸ್ಥಿತಿಯನ್ನು ಮನನೊಂದು ಹೇಳುತ್ತಾರೆ. ಬಂಟ ಮದುವೆಗಳಲ್ಲಿ ಕೊಡಬೇಕಿದ್ದ ವರದಕ್ಷಿಣೆಯ ಕಾರಣದಿಂದ ತಮ್ಮ ಹೆಣ್ಣುಮಕ್ಕಳ ಮದುವೆಗಾಗಿ ತಾವು ಬದುಕಿಗಾಗಿ ಇರಿಸಿದ್ದ ಅರ್ಧ ಎಕರೆ ಜಾಗದಲ್ಲಿ ಸ್ವಲ್ಪ ಸ್ವಲ್ಪವೇ ಮಾರಾಟಮಾಡಿ ಅವರ ಬದುಕಿಗೆ ಬೆಳಕನ್ನು ಕೊಟ್ಟವರು ಇವರು.

ಶಾರದ ಅವರು ಸಿರಿ ದರ್ಶನ ಪಾತ್ರಿಯಾಗಿ ಕರ್ಗಿಯಾದ ಹಿನ್ನೆಲೆ

ಕರ್ಗಿಯವರು ಸಿರಿದರ್ಶನ ಪಾತ್ರಿಯಾಗಿ ಪ್ರವೇಶ ಪಡೆದ ಸಂದರ್ಭ ಬಹಳ ಆಕಸ್ಮಿವಾದುದು. ಆ ಹಿನ್ನೆಲೆಯನ್ನು ಈ ರೀತಿ ಹೇಳುತ್ತಾರೆ. 'ನಮ್ಮ ಕುಟುಂಬದಲ್ಲಿ ಹಿಂದೆ ನನ್ನ ಅಜ್ಜಿ ಸಿರಿಯಾಗಿದ್ದರು. ನನ್ನ ಮದುವೆಯಾದ ಅನಂತರ ನಾನೊಮ್ಮೆ ಅತ್ತೆ, ಗಂಡ, ತಾಯಿ ಹಾಗೂ ಅಣ್ಣನ ಜೊತೆಗೆ ಅತ್ರಿಜಾಲ್ ಸಿರಿಜಾತ್ರೆಗೆ ಹೋಗಿದ್ದೆ. ಜಾತ್ರೆಯಲ್ಲಿ ಹೀಗೆ ತಿರುಗುತ್ತಾ ಬರುವಾಗ ದರ್ಶನಾವೇಶದಲ್ಲಿದ್ದ ಮೂಲಕುಮಾರ ನನ್ನನ್ನೇ ದಿಟ್ಟಿಸಿ ನೋಡಲಾರಂಭಿಸಿದ. ಏನೋ ಆವೇಶದಲ್ಲಿ ನೋಡುತ್ತಿರಬಹುದೆಂದು ತಿಳಿದು ಮತ್ತೂ ಅಲ್ಲೇ ಪಕ್ಕದಲ್ಲಿ ಹೋಗಿ ಕುಳಿತೆವು. ಮತ್ತೆ ಮತ್ತೆ ದಿಟ್ಟಿಸಿ ನೋಡಲು ಶುರು ಮಾಡಿದ. ಆಗ ನನಗೆ ತನ್ನಷ್ಟಕ್ಕೆ ಮೈ ಬೆವರಲಾರಂಭಿಸಿ ಒಂದು ರೀತಿಯಲ್ಲಿ ಉರಿ ಬರಲಾರಂಭಿಸಿದ ಅನುಭವವಾಯಿತು. ಕೂಡಲೇ ಎದ್ದು ನಾನು ಅಲ್ಲಿಗೆ ಹೋಗುತ್ತೇನೆಂದು ತಿಳಿಸಿದಾಗ ನನ್ನಲ್ಲಾದ ದೈಹಿಕ ಬದಲಾವಣೆಗಳನ್ನು ಗಮನಿಸಿದ ಮನೆಯವರು ಅಲ್ಲಿಯೇ ಮರೆಯಲ್ಲಿ ಸ್ವಲ್ಪ ಹೊತ್ತು ಕೂರಿಸಿ ಮನೆಗೆ ಕರೆದುಕೊಂಡು ಹೋದರು.

ಮನೆಗೆ ಬಂದೊಡನೆ ಗಂಡ ಇದು ನಿಮ್ಮ ಮನೆಯ ಕುಲೆಯ ಉಪದ್ರ. ಇದಕ್ಕೆ ಏನಾದರೂ ಪರಿಹಾರ ಮಾಡಬೇಕೆಂದು ಬಲ್ಮೆಯವನಲ್ಲಿಗೆ ಕರೆದುಕೊಂಡು ಹೋದರು. ಅವರು ನನ್ನ ಗಂಡನಲ್ಲಿ ಶೆಟ್ಟರೇ, ಇದು ಇವರು ಸತ್ತು ಹೋಗಬೇಕಲ್ಲದೆ ಜೀವಂತವಾಗಿ ಹೋಗಲಾಡಿಸಲು ಸಾಧ್ಯವಿಲ್ಲ. ಇದಕ್ಕೆ ನೀವು ತೊಂದರೆ ಕೊಟ್ಟರೆ ನಿಮಗೆ ಕೇಡು ಎಂದರು. ಮುಂದಿನ ವರ್ಷ ಸಿರಿ ಜಾತ್ರೆಯಂದೇ ಕುಮಾರನಲ್ಲಿ ತೀರ್ಮಾನಿಸುವುದೆಂದು ನಿರ್ಧರಿಸಿದಾಗ ನನ್ನ ಗಂಡ ಇದೆಲ್ಲ ನಾಚಿಕೆಯ ವಿಷಯ ಎಂದು ಆಕ್ಷೇಪಿಸಿದ್ದೂ ಇದೆ.

ಮುಂದೆ ಎಲ್ಲಾದರೂ ವಾಲಗ, ಬೇಂಡಿನ ಶಬ್ದ ಕೇಳಿದಾಗ ನನಗೆ ತನ್ನಷ್ಟಕ್ಕೆ ಮೈಯಲ್ಲಿ ನಡುಕ ಉಂಟಾಗುತ್ತಿತ್ತು. ಹೀಗಾಗಿ ಸಿರಿ ಜಾತ್ರೆಯಂದು ನನ್ನ ಕುಟುಂಬದವರು ಹಾಗು ಗಂಡನ ಕುಟುಂಬದವರೂ ಒಟ್ಟಾಗಿ ಕುಮಾರನಿಗೆ ಕಾಣಿಕೆ ಇಟ್ಟು ಕೇಳಿದಾಗ ಕುಮಾರ ಬಾಯಿಬಿಟ್ಟು ಇವರು ನನ್ನ ತಾಯಿಯಾದ ಸಿರಿ ಎಂದನು. ಕೂಡಲೇ ನಾನು ಬಾಯಿ ತೆಗೆದು "ನಾರಾಯಣ ಕುಮಾರ, ನಿಲ್ಲಲು ದಲಿಯ, ಹಿಡಿಯಲು ಪುರ್ಪ ಇಲ್ಲ ನನಗೆ. ನನ್ನ ನೆತ್ತಿಯ ಉರಿ, ಕಣ್ಣಿನ ಕಣ್ಣೀರನ್ನು ಏನು ಮಾಡಲಿ" ಎಂದು ಕೇಳಿದೆ. ಅದಕ್ಕೆ ಕುಮಾರ "ಅದೆಲ್ಲವೂ ನನ್ನ ನೆತ್ತಿಯಲ್ಲಿ ಬೆಂಕಿಯಾಗಿ ಅರಳಲಿ" ಎಂದ. ಕೂಡಲೇ ಕುಮಾರನ ಕೈಯಲ್ಲಿದ್ದ ಪುರ್ಪವನ್ನು ಎಳೆದುಕೊಂಡು ಗುಡಿಯೆದುರು ನಿಂತು ತಂತ್ರಿಗಳಲ್ಲಿ ನನಗೆ ಕಲಶ ನೀರು ಸ್ನಾನ ಮಾಡಿಸಿ, ನಿಲ್ಲಲು ದಲಿಯ ಕೊಡಿ ಎಂದು ಕೇಳಿದೆ. ಹೀಗೆ ಕಲಶ ಸ್ನಾನ ಮಾಡಿಸಿ ಧ್ವಜಕಂಬದಡಿಯಲ್ಲಿ ಹಿಂಗಾರ ಕೊಟ್ಟರು. ಈ ಸಂದರ್ಭ ಈಗಿನ ಕುಮಾರನ ತಂದೆಯಾದ ಬಾಬು ಮಡಿವಾಳ ಕುಮಾರ ಪಾತ್ರಿಯಾಗಿದ್ದರು. ಅವರು ನನ್ನ ಕುಟುಂಬದಲ್ಲಿ ನನ್ನ ಅಜ್ಜಿಯಾದ ಗಂಗೆಯ ಅನಂತರ ಯಾರಾದರೂ ಸಿರಿ ಆಗಿದ್ದಾರೆಯೇ ಎಂದು ವಿಚಾರಿಸಿದರು. ನನ್ನ ಮನೆಯವರು ಇಲ್ಲ ಎಂದರು. ಹೀಗಾಗಿ ನನಗೆ ಚಿಕ್ಕಂದಿನಲ್ಲಿ ಅಸೌಖ್ಯತೆಯಿದ್ದಾಗ ಕೊರಗ ಹೆಂಗಸಿನ ಕೈಗೆ ಕೊಟ್ಟು ಅವರು ಮೊಲೆಯೂಡಿಸಿ ಇಟ್ಟ 'ಕರ್ಗಿ' ಎಂಬ ಹೆಸರನ್ನು ದಲಿಯದಲ್ಲಿ ಇಟ್ಟರು. ಅಲ್ಲಿಂದ ಇಂದಿನವರೆಗೆ ಕರ್ಗಿಯಾಗಿ ಸಿರಿಯ ಸೇವೆಯನ್ನು ಮಾಡುತ್ತಾ ಬರುತ್ತಿದ್ದೇನೆ.

ಕರ್ಗಿಯವರ ಕುಟುಂಬದ ಮೂಲ ಆಲಡೆ ಕವತಾರ್. ಆದರೆ ಅವರು ಸಿರಿ ದರ್ಶನಕ್ಕೆ ಮೊದಲು ಪ್ರವೇಶ ಅತ್ರಿಜಾಲ್ ಆಲಡೆಯಲ್ಲಿ ಪಡೆದುದರಿಂದ ಅಲ್ಲಿಯೇ ಸೇವೆ ಮುಂದುವರಿಸಿಕೊಂಡು ಬರುತ್ತಿದ್ದಾರೆ.

ಬಹುಮುಖ ಪ್ರತಿಭೆ ಕರ್ಗಿ

ಕರ್ಗಿಯವರದು ಪಾಡ್ದನದ ಹಾಡುವಿಕೆಯಲ್ಲಿ ಅಸಾಮಾನ್ಯ ಪ್ರತಿಭೆ. ಸುಮಾರು 16–17 ಗಂಟೆಗಳ ಕಾಲಾವಧಿಯ ಸಿರಿಸಂಧಿಯನ್ನು ಹಾಡಿದ್ದಾರೆ. ದಲಿಯದಲ್ಲಿ ನಿಂತ ಪ್ರಾರಂಭದಲ್ಲಿ ಸಂಧಿ ಸ್ವಲ್ಪ ಕಡಿಮೆ ಬಂದರೂ ಅನುಭವ ಬಂದಂತೆ ಇದು ಹಿಡಿತಕ್ಕೆ ಬರುತ್ತದೆಯಲ್ಲದೆ ಇದು ಗುರು ಹೇಳಿ ಕೊಡುವ ವಿದ್ಯೆ ಅಲ್ಲ ಎನ್ನುತ್ತಾರೆ. ಸಂಧಿಯನ್ನು ಕಲಿಯಬೇಕೆಂಬ ತನ್ನ ಉತ್ಕಟವಾದ ಇಚ್ಛೆಗೆ ಸಹಕಾರಿಯಾದುದು ಗದ್ದೆಯ ನಾಟಿ ಸಂದರ್ಭದಲ್ಲಿ ಈ ಸಂಧಿಗಳನ್ನು ಹಾಡುತ್ತಿದ್ದ ತನ್ನ ತಾಯಿಯವರಾದ ಸುಂದರಿ ಹಾಗು ಕೆಲಸಕ್ಕೆ ಬರುತ್ತಿದ್ದ ಮಡಿವಾಳ ಹೆಂಗಸು ಕೂಸಮ್ಮ. ಅವರು ಹಾಡುವುದನ್ನು ಕೇಳುವುದು ಮತ್ತು ರಾತ್ರಿ ಇದನ್ನು ಪುನರಾವರ್ತನೆ ಮಾಡುವ ಮೂಲಕ ಇದು ಕಲಿಯಲು ಸಾಧ್ಯವಾಯಿತು ಎನ್ನುತ್ತಾರೆ. ಒಮ್ಮೆ ದಲಿಯದಲ್ಲಿ ನಿಂತ ಮೇಲೆ ತಾಯಿ ಯಾದವಳಿಗೆ ತನ್ನ ಮಕ್ಕಳು, ಮೊಮ್ಮಕ್ಕಳ ಬಗೆಗೆ ಬೇರೆಯವರು ತಿಳಿಸಿಕೊಡಬೇಕಾದ

ಅವಶ್ಯಕತೆ ಹೇಗೆ ಇಲ್ವೋ ಹಾಗೇ ಇದು ಕೂಡಾ ಎನ್ನುತ್ತಾರೆ. ಇಷ್ಟೊಂದು ದೊಡ್ಡ ಮಹಾಕಾವ್ಯ ಕೊಪ್ಪರಿಗೆಯನ್ನೇ ತಮ್ಮ ಮೈಯೊಳಗೆ, ಮನದೊಳಗೆ ತುಂಬಿಕೊಂಡಿರುವ ಕರ್ಗಿಯವರು ಹಾಡಿದ ಇತರ ಸಂಧಿ ಹಾಗು ಕೆಲಸದ ಹಾಡುಗಳು ಪ್ರತ್ಯೇಕವಾಗಿವೆ. ದೇವುಪೂಂಜ ಸಂಧಿ, ಕೋಟಿ ಚೆನ್ನಯ ಸಂಧಿ, ಪಂರ್ದೆರ್ ಪಾಡ್ದನ, ಕೆಲಸದ ಹಾಡುಗಳಾದ ಹಾ ಲೆಲ್ಲೆ ಹಾಡುಗಳು, ಗೋವಿಂದ ಬದನೆ, ರಾವೋ ರಾವು ಕೊರುಂಗು, ಹೀಜೋ ಮಂಜೊಟ್ಟಿ ಗೋಣ, ಓ ಬೇಲೆ ಹಾಡುಗಳು ಇತ್ಯಾದಿಯಾಗಿ ಸುಮಾರು 35–40 ಗಂಟೆಗಳ ಕಾಲಾವಧಿಯ ಹಾಡುಗಳು ಇವರ ಮಾನಸಿಕ ಪಠ್ಯದಲ್ಲಿವೆ. ಹೀಗಾಗಿ ಪಾಡ್ದನದ ಹಾಡುವಿಕೆಯಲ್ಲಿ ಕರ್ಗಿಯವರು ಮುಂಚೂಣಿಯಲ್ಲಿ ನಿಲ್ಲುವವರು. ಇವರು ಆರ್ಥಿಕವಾಗಿ ಬಡವರಾದರೂ ಸಾಂಸ್ಕೃತಿಕವಾಗಿ ತುಂಬ ಶ್ರೀಮಂತರು. ಕರ್ಗಿಯವರು ಹಾಡಿರುವ ಸಿರಿಕಾವ್ಯವನ್ನು ತುಳುಪಠ್ಯ ಹಾಗು ಕನ್ನಡಾನುವಾದ ಸಹಿತವಾಗಿ ಸುಮಾರು 700 ಪುಟಗಳಲ್ಲಿ ನಾನು ಸಂಪಾದಿಸಿದ್ದೇನೆ. ಇದನ್ನು ಆರ್.ಆರ್.ಸಿ. ಸಂಸ್ಥೆ ಪ್ರಕಟಿಸಿದೆ. ಕರ್ಗಿಯವರು ಜನಪದ ವೈದ್ಯೆಯಾಗಿಯೂ ಊರಲ್ಲಿ ಹೆಸರುವಾಸಿಯಾಗಿದ್ದಾರೆ. ಸ್ತ್ರೀಯರ ಬೇರೆ ಬೇರೆ ಕಾಯಿಲೆಗಳಿಗೆ ನಾಟಿ ಔಷಧಿಯನ್ನು ನೀಡಿ ಗುಣಪಡಿಸಿದವರು. ಆ ಕಾಲದಲ್ಲಿ ಹಳ್ಳಿಯ ಹೆಂಗಸರಿಗೆ ಹೆರಿಗೆಗೆ ಆಸ್ಪತ್ರೆಗಳಿಲ್ಲದ ಕಾಲದಲ್ಲಿ ತಮ್ಮಂತೆಯೇ ಇನ್ನೊಬ್ಬ ಹೆಣ್ಣಿನ ನೋವು ಎಂದು ತಿಳಿದು ಜಾತೀಯ ವ್ಯವಸ್ಥೆಯನ್ನು ಮೀರಿ ಹೆರಿಗೆ ಮಾಡಿಸಿದವರು. ಈವರೆಗೆ ಕರ್ಗಿಯವರು ಸುಮಾರು 350ಕ್ಕಿಂತಲೂ ಹೆಚ್ಚು ಹೆಂಗಸರಿಗೆ ಹೆರಿಗೆ ಮಾಡಿಸಿದ್ದಾರೆ. ಇದಕ್ಕಾಗಿ ಕರ್ಗಿ ಪಡೆದದ್ದು ದೇವಸ್ಥಾನದಲ್ಲಿ ಶುದ್ಧ ಆಗಲು ಒಂದು ಸೇರು ಅಕ್ಕಿ, ಒಂದು ತೆಂಗಿನಕಾಯಿ ಹಾಗೂ ಒಂದೂಕಾಲು ರುಪಾಯಿ ಅಷ್ಟೆ.

ಪ್ರಶಸ್ತಿ ಸಮ್ಮಾನಗಳು

ಕರ್ಗಿಯವರ ಜಾನಪದ ಸೇವೆಯನ್ನು ಪರಿಗಣಿಸಿ ಕರ್ನಾಟಕ ಜಾನಪದ ಅಕಾಡೆಮಿ ಬೆಂಗಳೂರು ಇವರು 2010ರಲ್ಲಿ ಜಾನಪದ ಕಲಾವಿದೆ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಮಂಗಳೂರು ತಾಲೂಕಿನ ಉಳ್ಳಾಲದ ಅಬ್ಬಕ್ಕ ಸಮಿತಿಯವರು ಕರ್ಗಿಯವರ ಸೇವೆಯನ್ನು ಪರಿಗಣಿಸಿ 2011ರಲ್ಲಿ 'ವೀರರಾಣಿ ಅಬ್ಬಕ್ಕ ಪುರಸ್ಕಾರ'ವನ್ನು ನೀಡಿ ಗೌರವಿಸಿದ್ದಾರೆ. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ತಾಯಮ್ಮ ಎಸ್.ಸಿ. ಮಲ್ಲಯ್ಯ ಜನಪದ ಕಲಾವಿದ ಪ್ರಶಸ್ತಿ, 2017ರಲ್ಲಿ ಮೈಸೂರಿನ ರಾಮನಗರದ 'ಜಾನಪದಲೋಕ ಪ್ರಶಸ್ತಿ' ಇವರಿಗೆ ಲಭಿಸಿದೆ. ಇದಲ್ಲದೆ ಅನೇಕ ಸ್ಥಳೀಯ ಸಂಘ ಸಂಸ್ಥೆಗಳು, ಬಂಟ ಸಂಘಟನೆಗಳು ಇವರನ್ನು ಗೌರವಿಸಿ ಸನ್ಮಾನಿಸಿವೆ.

ಸಿರಿಕಾವ್ಯದ ಹಾಡುಗಾರ್ತಿ, ಅಬ್ಬಗ ದರ್ಶನ ಪಾತ್ರಿ ಲೀಲಾ

ಲೀಲಾ ಇವರ ಹುಟ್ಟೂರು ಕಾರ್ಕಳ ತಾಲೂಕಿನ ಕುಕ್ರಟ್ಟೆಯ ಒತ್ತ್ಯಾರ್ ಸಮೀಪದ ಮಾಳ ಎಂಬ ಹಳ್ಳಿ. ಈಗ ಅವರ ವಾಸ ಮಂಗಳೂರು ತಾಲೂಕಿನ ನೆಲ್ಲಿಕಾರು ಸಮೀಪದ ಜ್ಯೋತಿನಗರದಲ್ಲಿ. ಇದು ಇವರು ಮದುವೆಯಾಗಿ ಬಂದ ಊರು. ರೆಂಜಾಳಕ್ಕೆ ಸಮೀಪದ ಸ್ಥಳ. ಲೀಲಾ ಅವರಿಗೆ ಈಗ 63 ವರ್ಷ ವಯಸ್ಸು. ಹೀಗಾಗಿ ಇವರು ಹೆಚ್ಚು ಕಡಿಮೆ 1955ರ ಆಸುಪಾಸಿನಲ್ಲಿ ಹುಟ್ಟಿದವರು. ಇವರ ತಂದೆ ಅಣ್ಣಪ್ಪ ಶೆಟ್ಟಿ, ತಾಯಿ ಲಿಂಗಮ್ಮ ಇವರ ಇಬ್ಬರು ಗಂಡು ಮೂವರು ಹೆಣ್ಣುಮಕ್ಕಳಲ್ಲಿ ಲೀಲಾ ಅವರು ನಾಲ್ಕನೆಯವರು. ತಂದೆಯವರದು ಹಳ್ಳಿಯ ಕೃಷಿ ಕುಟುಂಬದವರಾದರೂ ಆ ಕಾಲದ ಬಡತನದ ಬದುಕಲ್ಲೇ ಜೀವನ ಸಾಗಿಸಿದವರು. ಇವರು ಹೆಚ್ಚು ಓದಿದವರಲ್ಲ. ಮೂರನೇ ತರಗತಿಯಲ್ಲಿ ಓದುತ್ತಿರುವಾಗಲೇ ಅಧ್ಯಾಪಕರು 'ಇದು ಮರ' ಎಂದು ತೋರಿಸಿದಾಗ ಮರವನ್ನೇ ನೋಡಿ ಕುಳಿತದ್ದು ಹೊರತಾಗಿ ಮುಂದಿನದ್ದನ್ನು ಕೇಳಲೇ ಇಲ್ಲ ಎನ್ನುತ್ತಾರೆ. ಹೀಗಾಗಿ ಇವರಿಗೆ ಓದಿನಲ್ಲಿ ಆಸಕ್ತಿ ಕಡಿಮೆಯಾಯಿತಂತೆ.

ಲೀಲಾ ಅವರಿಗೆ ಸಿರಿಯ ಸೂಕೆ (ಆರಂಭ) ತೊಟ್ಟಿಲ ಮಗುವಿದ್ದಾಗಲೇ ಕಾಣಿಸಿಕೊಂಡಿತ್ತಂತೆ. ಬಹುತೇಕ ಸಿರಿ ಕುಮಾರರಲ್ಲಿ ನಿಮಗೆ ಸಿರಿ ಹೇಗೆ ಆರಂಭವಾಯಿತು ಎಂದು ಕೇಳಿದರೆ ಅವರು ಮೊದಲು ನೀಡುವ ಉತ್ತರ ನಮಗೆ ದೇಹಕ್ಕೆ ಸುಖವಿಲ್ಲದೆ ಇತ್ತು, ಮೈಯೆಲ್ಲ ಉರಿ ಬರುವ ಹಾಗೆ ಆಗುವುದು, ಆಗಾಗ ತಲೆಸುತ್ತಿ ಬೀಳುವುದು – ಹೀಗೆ ಒಂದಲ್ಲ ಒಂದು ಕಾರಣಗಳನ್ನು ನೀಡುತ್ತಾರೆ. ಲೀಲಾ ಅವರ ಸಂದರ್ಭದಲ್ಲಿ ತೊಟ್ಟಿಲ ಮಗುವಿಗೇ ಆಗಾಗ ನಡುಕ ಬರುವುದು, ಚಿಹ್ನೆಯ ರೂಪದ ತೊಂದರೆಗಳು ಕಾಣಿಸಿಕೊಳ್ಳುತ್ತಿದ್ದುವಂತೆ. ಸಾಮಾನ್ಯವಾಗಿ ಸಿರಿಗಳು ಹಾಗೂ ದೈವಗಳು ಮೊದಲು ತಮ್ಮ ಇರುವಿಕೆಯನ್ನು ತೋರಿಸಿಕೊಡುವುದು ಹೊಟ್ಟೆಯಲ್ಲಿರುವ ಗರ್ಭಕ್ಕೆ, ತೊಟ್ಟಿಲ ಮಗುವಿಗೆ ಹಾಗೂ ಹಟ್ಟಿಯ ಕರುವಿಗೆ. ತುಳುವಿನಲ್ಲಿ ಒಂದು ಮಾತೇ ಇದೆ 'ಬಂಜಿದ ಗರ್ಭೊಗು, ತೊಟ್ಟಿಲ ಬಾಲೆಗ್, ಕರೆಪಿ ಕಂಜಿಗ್ ಪಾರ ಪಾಡ್ವೆ, ಮೂಂಕು ಸುಲ್ತ್‌ದ್ ಗಜ ಕಂಬೊಗು ಕಟ್ಟುವೆ ಎಂದು' (ಹೊಟ್ಟೆಯ ಗರ್ಭಕ್ಕೆ, ತೊಟ್ಟಿಲ ಮಗುವಿಗೆ, ಕೂಗುವ ಕರುವಿಗೆ ಪಾರ (ಬಂಧನ) ಹಾಕುತ್ತೇನೆ. ಮೂಗುದಾರ ಹಾಕಿ ಗಜಕಂಬಕ್ಕೆ ಕಟ್ಟುವೆನು). ಹೀಗೆ ನಾನಾ ರೀತಿಯ ಕಾಯಿಲೆ, ಅನಾರೋಗ್ಯದ ಮೂಲಕ ಲೀಲಾ ಅವರ ಬದುಕಿನ ದಿನಗಳು, ವರ್ಷಗಳು ಉರುಳಿದವು. ದೈಹಿಕ ಅಸೌಖ್ಯ ಉಲ್ಬಣವಾಗುತ್ತಾ ಹೋಯಿತು. ದೇಹ ಕ್ಷೀಣಿಸುತ್ತಾ ಬರುವುದು, ಒಂದು ತರಹ ಒಬ್ಬರೇ ಕುಳಿತಲ್ಲಿಯೇ ಇರುವುದು ಈ ರೀತಿಯಿಂದ ಇದ್ದು ಕೊನೆಗೆ ನಡೆಯಲಾರದ ಸ್ಥಿತಿಗೆ ಬಂದರಂತೆ.

ತಾಯಿಯವರು ಇವರನ್ನು ಬೇಕಾದಷ್ಟು ಕಡೆ ನಾಟಿ ವೈದ್ಯರಲ್ಲಿಗೆ ಕರೆದುಕೊಂಡು ಹೋಗಿ ಮದ್ದು ಮಾಡಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಎಲ್ಲಿಯವರೆಗೆ ಅಸೌಖ್ಯತೆಯೆಂದರೆ ಮಲಗಿದಲ್ಲಿಯೇ ಇದ್ದು ಎತ್ತಿಕೊಂಡೇ ಆಚೀಚೆ ಹೋಗುವ ಪರಿಸ್ಥಿತಿ ಬಂತು. ಕೊನೆಗೆ ಒಂದು ದಿನ ಇವರ ಮನೆಗೆ ಸಮೀಪದ ಮಾಳದ ಲೀಲಾ ಅವರ ಅಕ್ಕನ ಗಂಡನ ಮನೆಯಲ್ಲಿ ಕುಮಾರದರ್ಶನ ನಡೆಯಿತು. ಅಲ್ಲಿಗೆ ತಾಯಿಯವರು ಕರೆದುಕೊಂಡು ಹೋಗಿ ಕುಮಾರನಲ್ಲಿ ಕೇಳಿದರಂತೆ. ಹೊನ್ನಯ್ಯ ಶೆಟ್ಟರು ಎಂಬವರು ಬಹಳ ಅನುಭವಿ ಕುಮಾರ. ಅವರು ಲೀಲಾ ಅವರ ಸ್ಥಿತಿಯನ್ನು ನೋಡಿ ಇವಳು ಆಲಡೆಯ ನನ್ನ ಸೊಸೆ. ಇವಳಿಗೇನು ತೊಂದರೆ ಕೊಡಬೇಡಿ ಎಂದರಂತೆ. ನಾನು ಸದ್ಯ ಗಂಧ ಹಾಗೂ ಹಿಂಗಾರದ ಪುರ್ಪ (ಹೂ) ಕೊಡುತ್ತೇನೆ. ಇದನ್ನು ಹಾಲಲ್ಲಿ ಅರೆದು ಹೊಟ್ಟೆಗೆ ಹನ್ನೆರಡು ದಿನ ತೆಗೆದುಕೊಳ್ಳಬೇಕು. ಪರಿಹಾರವಾಗುತ್ತದೆ ಎಂದರಂತೆ. ಅಂತೆಯೇ ತೆಗೆದುಕೊಂಡಾಗ ಲೀಲಾ ಅವರ ಅಸೌಖ್ಯತೆ ತಾತ್ಕಾಲಿಕವಾಗಿ ಶಮನವಾಯಿತಂತೆ. ಇದು ಇವರ ಒಂಭತ್ತನೇ ವರ್ಷ ಪ್ರಾಯದಲ್ಲಿ ನಡೆದ ಘಟನೆ. ಹೀಗೆ ಇದ್ದು ಇವರ ಹನ್ನೆರಡನೇ ವರ್ಷ ಪ್ರಾಯದಲ್ಲಿ ಮತ್ತೆ ಅಸೌಖ್ಯತೆ ಮರುಕಳಿಸಿತಂತೆ. ಇವರ ಮೂಲ ಆಲಡೆ ಮಂಗಳೂರು ತಾಲೂಕಿನ ಕಂಡೇವು ಎಂಬುದು ಗೊತ್ತಿದ್ದರೂ ಆ ಕಾಲದಲ್ಲಿ ಅಲ್ಲಿಗೆ ಕರೆದುಕೊಂಡು ಹೋಗುವುದು ಮನೆಯ ಬಡತನದ ಸ್ಥಿತಿಯಿಂದಾಗಿ ಅಷ್ಟು ಸುಲಭವಾಗಿರಲಿಲ್ಲ. ಕೊನೆಗೆ ವಿಧಿಯಿಲ್ಲದೆ ಒಂದು ಬಾರಿ ಮನೆಯಲ್ಲೇ ದಲಿಯ ಹಾಕಿಸಿ ಕೇಳಿದರಂತೆ. ಅನುಭವಿ ಕುಮಾರ ಬಾಬು ಮಡಿವಾಳ ಎನ್ನುವವರು ಇಲ್ಲೆಚ್ಚಿದ ದಲಿಯದಲ್ಲಿಯೂ ಇವಳು ನನ್ನ ಸೊಸೆ ಎಂದರಂತೆ. ಕೊನೆಗೆ ವಿಧಿಯಿಲ್ಲದೆ ಕಂಡೇವು ಮೂಲ ಆಲಡೆಯ ಜಾತ್ರೆಗೆ ಕರೆದುಕೊಂಡು ಹೋದರು. ಅದಕ್ಕಿಂತ ಮೊದಲು ಪ್ರತಿ ವರ್ಷ ತಾಯಿಯವರು ಹೋಗಿ ಹರಕೆ ಹಾಕಿ ಬರುತ್ತಿದ್ದರು. ಆ ಕಾಲದಲ್ಲಿ ದಲಿಯದಲ್ಲಿ ಪೇಂಜರ್ ಬಾಬಣ್ಣ ಎಂಬ ಬಹಳ ಅನುಭವಿ ಕುಮಾರ ಇದ್ದರು. ಅವರಲ್ಲಿ ಕೇಳಿದಾಗ ಅವರು ಮೊದಲು ನನ್ನ ಬಾಯಿ ಬಿಡಿಸಿ ಅಬ್ಬಗ ಎಂಬುದನ್ನು ತಿಳಿಸಿಕೊಟ್ಟರು. ದಲಿಯಕ್ಕೆ ಕೊಡಬೇಕೆಂದು ಕೇಳಿದರು. ಆಗ ನನ್ನ ಜೊತೆ ತಾಯಿ ಬಿಟ್ಟರೆ ಕುಟುಂಬದವರು ಯಾರೂ ಇರಲಿಲ್ಲ. ಕೊನೆಗೆ ಆಗಿನ ಕಂಡೇವು ಬೀಡಿನ ಮುಕ್ಕಾಲ್ದಿಯವರು ಇವಳು ಕಂಡೇವು ಬೀಡಿನದ್ದೇ ಸಂಸಾರ ಎಂದು ಹೇಳಿ ಐದು ರೂಪಾಯಿ ಸ್ಥಳ ಕಾಣಿಕೆ ಕಟ್ಟಿಸಿ ದಲಿಯಕ್ಕೆ ಕೊಟ್ಟರು. ಅನಂತರ ಇವರ ಹದಿನೈದನೇ ವರ್ಷದಿಂದ ದಲಿಯದಲ್ಲಿ ನಿಂತವರು ಇಂದಿನವರೆಗೆ ನಿರಂತರವಾಗಿ ಹೆಚ್ಚು ಕಡಿಮೆ 42 ವರ್ಷಗಳಿಂದ ಅಬ್ಬಯ ದರ್ಶನ ಪಾತ್ರಿಯಾಗಿ ಸೇವೆ ಸಲ್ಲಿಸುತ್ತಾ ಬರುತ್ತಿದ್ದಾರೆ. ಇವರ ಅಕ್ಕ ಲಲಿತಾ. ಇವರಿಗೂ ಆಗಾಗ ಅಸೌಖ್ಯ ಕಾಣಿಸಿಕೊಳ್ಳುತ್ತಿತ್ತಂತೆ. ಆಕೆಯನ್ನು ಕಂಡೇವು ಆಲಡೆಗೆ ಕರೆದುಕೊಂಡು ಹೋದಾಗ ಅಲ್ಲೆ ದರ್ಶನ ಆರಂಭವಾಯಿತು. ಹೀಗಾಗಿ ಲೀಲಾ ಅವರಿಗಿಂತ ಒಂದು ವರ್ಷ ಮೊದಲೇ ಆಕೆಯನ್ನು ದಲಿಯಕ್ಕೆ ಕೊಟ್ಟಿದ್ದರು.

ಲೀಲಾ ಅವರು ಸಿರಿ ದಲಿಯಕ್ಕೆ ಕಂಡೇವು ಹೊರತಾಗಿ ನಂದಳಿಕೆ, ಹಿರಿಯಡ್ಕ,

ಕಾರ್ಕಳದ ಬೆಳುವಾಯಿ ಸಮೀಪದ ಕಾನ, ಬೆಳುವಾಯಿಯ ಮಾಲಾಡಿ, ಬೆಳ್ತಂಗಡಿ ತಾಲೂಕಿನ ನಾಧಾವಿ ಸಮೀಪದ ಮರೋಡಿ, ದೇವೆರೆ ಬಲ್ಲೆ ಮುಂತಾದ ಕಡೆ ಹೋಗುತ್ತಾರೆ. ಕರೆದರೆ ಇಲ್ಲೆಚ್ಚಿದ ದಲಿಯದಲ್ಲೂ ಪಾಲ್ಗೊಳ್ಳುತ್ತಾರೆ. ಲೀಲಾ ಅವರ ಕುಟುಂಬದಲ್ಲಿ ಈ ಹಿಂದೆ ಯಾರೂ ದಲಿಯದಲ್ಲಿ ನಿಂತಿರಲಿಲ್ಲವಂತೆ. ಇವರೇ ಹೇಳುವಂತೆ ಉಳ್ಳಾಯನ ಭಂಡಾರ ಹೋಗುವಾಗ ಕಂಡೇವು ಬೀಡಿನ ಹೆಂಗಸರಿಗೇ ದರ್ಶನ ಆರಂಭವಾಗುತ್ತಿತ್ತಂತೆ. ಆದರೆ ದಲಿಯದಲ್ಲಿ ನಿಲ್ಲುವುದು ಬೀಡಿನ ಘನತೆಗೆ ಕುಂದು ಎಂಬ ದೃಷ್ಟಿಯಿಂದ ಯಾರೂ ನಿಲ್ಲುತ್ತಿರಲಿಲ್ಲವಂತೆ. ಇದರಿಂದಾಗಿ ಬೀಡಿನ ಹೆಂಗಸರಲ್ಲಿ ಅನೇಕರಿಗೆ ಬೇರೆಬೇರೆ ರೀತಿಯ ತೊಂದರೆ ಕಂಡುಬಂದದ್ದಿದೆ ಎನ್ನುತ್ತಾರೆ. ಆದರೆ ನಾವೂ ಕಂಡೇವು ಬೀಡಿಗೆ ಸಂಬಂಧಿಸಿದವರು. ಆದರೆ ಬಡವರಾದ ಕಾರಣ ಸಿರಿ ನಮ್ಮನ್ನು ಬಿಡಲಿಲ್ಲ ಎಂದು ನಗುತ್ತಾ ಹೇಳುತ್ತಾರೆ. ಸಿರಿಯ ಸೂಕೆ ಆರಂಭವಾದ ಪ್ರತಿ ವರ್ಷ ಅವರವರ ಆಲಡೆಗೆ ಹೋಗಿ ಸೇವೆ ಸಲ್ಲಿಸಿದರೆ ಉತ್ತಮ. ಇಲ್ಲದೇ ಹೋದರೆ ಅವರಿಗೂ, ಅವರ ಕುಟುಂಬದವರಿಗೂ ಏನಾದರೊಂದು ತೊಂದರೆಗಳು ಕಾಣುತ್ತಿರುತ್ತವೆ ಎಂಬುದು ಲೀಲಾ ಅವರ ಅಭಿಪ್ರಾಯ. ಆದರೆ ಇತ್ತೀಚಿನ ದಿನಗಳಲ್ಲಿ ಹೆಂಗಸರು ಬಹುತೇಕವಾಗಿ ಸಿರಿಯ ಚಾಕರಿ ಮಾಡಲು ಹಿಂಜರಿಯುತ್ತಿದ್ದು ದಲಿಯದಲ್ಲಿ ನಿಲ್ಲದೆಯೇ ಕೈ ಹರಕೆ ಹಾಕಿ ಹೋಗುವುದನ್ನು ಕಾಣುತ್ತೇವೆ. ಕೈ ಹರಕೆ ಎನ್ನುವುದು ದಲಿಯದಲ್ಲಿ ನಿಲ್ಲಲಾಗದ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಮಾಡಬಹುದಾದ ಒಂದು ಬದಲಿ ವ್ಯವಸ್ಥೆಯೇ ಹೊರತು ಇದು ಖಾಯಂ ಆದ ಒಂದು ಪರಿಹಾರವಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನವರು ಕೈ ಹರಕೆಯನ್ನೇ ಒಂದು ಖಾಯಂ ವಿಧಾನವಾಗಿ ಅನುಸರಿಸುತ್ತಾ ಬರುತ್ತಿರುವುದನ್ನು ನೋಡುತ್ತಿದ್ದೇವೆ. ಹೀಗಾಗಿ ಸಿರಿಜಾತ್ರೆಗಳಲ್ಲಿ ದರ್ಶನಾವೇಶಕ್ಕೆ ನಿಲ್ಲುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಎಷ್ಟು ಕಡಿಮೆಯಾಗಿದೆ ಎಂದರೆ ಇನ್ನೇನು ಕೆಲವು ವರ್ಷಗಳಲ್ಲಿ ಹೀಗೇ ಮುಂದುವರಿದರೆ ಸಿರಿಜಾತ್ರೆ ನಿಂತೇ ಬಿಡುತ್ತದೆ ಎನ್ನುವ ಅನುಮಾನ ಕಾಡುತ್ತಿದೆ. ಸುಮಾರು ಹದಿನೈದು ಇಪ್ಪತ್ತು ವರ್ಷಗಳ ಹಿಂದೆ ನೂರಾರು ಸಿರಿ ಬಳಗದವರು ಸಾಮೂಹಿಕವಾಗಿ ಭಾಗವಹಿಸುತ್ತಿದ್ದ ಸಿರಿಜಾತ್ರೆಗಳಲ್ಲಿ ಇಂದು ಅನೇಕ ಕಡೆ ಎರಡು, ಮೂರು, ಐದು ಸಿರಿಗಳು ಕಂಡುಬರುತ್ತಿದ್ದು ಲೀಲಾ ಅವರು ಹೇಳುವಂತೆ ಅನೇಕ ಸಿರಿಗಳು ದರ್ಶನಕ್ಕೆ ನಿಲ್ಲದೆ ಕೈ ಹರಕೆ ಹಾಕಿ ಹೋಗುವುದೇ ಕಾರಣ ಎನ್ನುತ್ತಾರೆ. ಆದರೆ ಕೈ ಹರಕೆ ಹಾಕಿ ಹೋಗುವವರು ಮತ್ತೆ ಒಂದು ದಿನ ತಿರುಗಿ ಆಲಡೆಗೆ ಬಂದು ದಲಿಯದಲ್ಲಿ ನಿಲ್ಲಲೇಬೇಕು. ಹಾಗೆ ಅವರ ಬದುಕಲ್ಲಿ ಕಷ್ಟಗಳು ಸಿಗುತ್ತಿರುತ್ತವೆ ಎನ್ನುತ್ತಾ ಸಿರಿ ಅವರನ್ನು ಬಿಟ್ಟು ಹೋಗಲು ಸಾಧ್ಯವೇ ಇಲ್ಲ ಎನ್ನುತ್ತಾರೆ.

ಕಳೆದ ನಲ್ವತ್ತು ವರ್ಷಗಳಲ್ಲಿ ಆಲಡೆಗಳಲ್ಲಿ ಆದ ಬದಲಾವಣೆಗಳ ಬಗೆಗೆ ಲೀಲಾ ಅವರಲ್ಲಿ ಕೇಳಿದಾಗ ತುಂಬ ಬದಲಾವಣೆಗಳಾಗಿವೆ ಎನ್ನುತ್ತಾರೆ. ಆಲಡೆಗಳ ಅಭಿವೃದ್ಧಿಯ ದಷ್ಟಿಯಿಂದ ತುಂಬ ಬದಲಾವಣೆಗಳನ್ನು ಕಂಡಿವೆ. ಬಹಳಷ್ಟು ವ್ಯವಸ್ಥೆಗಳು, ಅನೇಕ

ಸುಧಾರಣೆಗಳು ಆಗಿವೆ. ಆದರೆ ಆಚರಣೆಯ ವಿಚಾರಕ್ಕೆ ಬಂದಾಗ ಕಳೆದ ಮೂವತ್ತು ಮೂವತ್ತೈದು ವರ್ಷಗಳ ಹಿಂದೆ ದಲಿಯದಲ್ಲಿ ನಮ್ಮ ನಡುವೆ ಸಣ್ಣ ಪ್ರಾಯದ ಹುಡುಗಿಯರು ಅನೇಕ ಜನ ಇರುತ್ತಿದ್ದರು. ಅನೇಕ ಸಣ್ಣ ಪ್ರಾಯದ ಹುಡುಗಿಯರನ್ನು ಆಲಡೆಗೆ ಕರೆದುಕೊಂಡು ಬಂದು ದಲಿಯಕ್ಕೆ ಒಪ್ಪಿಸುತ್ತಿದ್ದರು. ಆದರೆ ಇತ್ತೀಚಿನ ವರ್ಷಗಳಲ್ಲಿ ಹಳೆ ತಲೆಮಾರಿನವರು ಮಾತ್ರ ಕಾಣಿಸುತ್ತಾರೆಯೇ ವಿನಃ ಹೊಸ ತಲೆಮಾರು ತಯಾರಾಗುತ್ತಿರುವುದು ಕಾಣಿಸುತ್ತಿಲ್ಲ. ಹೆಚ್ಚಿನವರಿಗೆ ಇದಕ್ಕಿಂತ ಧಾರಾವಾಹಿಗಳೇ ಮುಖ್ಯವಾಗಿವೆ. ಕಷ್ಟಗಳು ಬಂದರೆ ಏನೇನೋ ಮಾಡುತ್ತಾ ವೈದ್ಯರಿಗೆ ದುಡ್ಡು ಹಾಕುತ್ತಾ ಇರುತ್ತಾರೆ. ಈಗ ಹಿಂದಿನ ಹಾಗೆ ಕುಮಾರರಲ್ಲಿಯೂ ಕೆಲವರು ನಿಷ್ಠೆಯಿಂದ ಇರುವುದಿಲ್ಲ. ಹೀಗಾಗಿ ಮದುವೆಯಾಗಬೇಕಾಗಿದ್ದ ಹುಡುಗಿಯರನ್ನು ಆಲಡೆಗೆ ಕಳುಹಿಸುವಾಗಲೂ ಹೆತ್ತವರು ತುಂಬ ಆಲೋಚಿಸುತ್ತಾರೆ. ಕೆಲವು ಸಿರಿಗಳೂ ಇದಕ್ಕೆ ಹೊರತಾಗಿಲ್ಲ ಎನ್ನುತ್ತಾರೆ. ಸಿರಿ ಪಾಡ್ದನಗಳ ಬಗೆಗೆ ಕೇಳಿದಾಗ ದಲಿಯದಲ್ಲಿಯೇ ಅನುಭವ ಹೊಂದಿರುವವರನ್ನು ನೋಡುವುದೇ ಬಲು ಅಪರೂಪವಾಗಿದೆ. ಹೊಸ ತಲೆಮಾರಿಗೆ ಪಾಡ್ದನದ ಕಲಿಕೆಯ ಅವಕಾಶವೂ ಇಲ್ಲ, ಅದನ್ನು ಕಲಿಸಿ ಕೊಡುವವರೂ ಇಲ್ಲ. ಹೀಗೇ ಪರಿಸ್ಥಿತಿ ಮುಂದುವರಿದರೆ ಸಿರಿಕಾವ್ಯಗಳು ಒಂದಲ್ಲ ಒಂದು ದಿನ ಮಾಯವಾಗಿ ಬಿಡಬಹುದೇನೋ ಎಂಬ ಅನುಮಾನ ಕಾಡುತ್ತಿದೆ. ಆದರೆ ಸಿರಿಜಾತ್ರೆ ನಿಲ್ಲಿಸಲು ಸಿರಿಗಳು ಬಿಡಲಾರರು ಎನ್ನುತ್ತಾರೆ ಲೀಲಾ.

ಲೀಲಾ ಅವರನ್ನು ಸಿರಿಗೆ ಯಾಕೆ ಅಷ್ಟು ಪ್ರಾಮುಖ್ಯ ತುಳುನಾಡಿನಲ್ಲಿ ಎಂದು ಕೇಳಿದಾಗ ಅವರು ಸಿರಿ ಬದುಕಿನ ಎಲ್ಲ ಕಷ್ಟದ ಸಂದರ್ಭಗಳನ್ನು ಎದುರಿಸಿ ತೋರಿಸಿದವಳು. 'ದೇಸಾಂತರ' ಹೋಗುವ ಹೊತ್ತಿಗೂ ಬಹಳಷ್ಟು ಕಷ್ಟಗಳನ್ನು ಎದುರಿಸಿ ಸ್ವತಂತ್ರವಾಗಬೇಕೆಂದು ಇಚ್ಛಿಸಿದವರು. ಅವರು ಮಾಯದ ಶಕ್ತಿಯ ಹೆಂಗುಸಾದುದರಿಂದ ಅವರಿಗೆ ಬದುಕಿನ ಎಲ್ಲ ಕಷ್ಟಗಳನ್ನು ಎದುರಿಸುವ ಶಕ್ತಿ ಇದೆ. ಈ ಕಾರಣಗಳಿಗಾಗಿ ಸಿರಿ ಇಂದಿಗೂ ಮುಖ್ಯ ಎನ್ನುತ್ತಾರೆ.

ಸಿರಿ ದರ್ಶನಗಳ ಬಗೆಗೆ ಕೇಳಿದಾಗ ಎಲ್ಲ ಸಂದರ್ಭಗಳಲ್ಲಿ ಮೈಮೇಲೆ ಆವೇಶ ಇರುವುದಿಲ್ಲ. ದರ್ಶನ ಪ್ರಾರಂಭವಾಗುವಾಗ ಅದರ ವಿಧಿಯೇ ಬೇರೆ. ಆಗ ನಾವು ನಾವಾಗಿರುವುದಿಲ್ಲ. ಆವೇಶದ ಭಾಗ ಇಡೀ ಜಾತ್ರೆಯಲ್ಲಿ ಸ್ವಲ್ಪ ಮಾತ್ರ ಇರುವುದು. ರಾತ್ರಿಪೂರ್ತಿ ಆವೇಶದಲ್ಲಿ ಇರುವುದಿಲ್ಲ. ಯಾವ ಯಾವ ವಿಧಿಯಲ್ಲಿ ಆವೇಶ ಬರಬೇಕೋ ಆಯಾ ವಿಧಿಯಲ್ಲಿ ಮಾತ್ರ ಬರುತ್ತದೆ. ಹಾಗೆ ಇಡೀ ರಾತ್ರಿ ಆವೇಶದಲ್ಲಿ ಇರುವುದಿಲ್ಲ ಎನ್ನುತ್ತಾರೆ.

ಲೀಲಾ ಅವರು ಸಿರಿಕಾವ್ಯ ಹಾಗು ಇತರ ಪಾಡ್ದನಗಳ ಒಡತಿ

ಲೀಲಾ ಅವರು ಚಿಕ್ಕವರಿರುವಾಗಲೇ ಪಾಡ್ದನಗಳ ಹಾಡುವಿಕೆಗೆ ಆಕರ್ಷಿತರಾದವರು. ಮಾಳದಲ್ಲಿ ಸಿರಿ ದರ್ಶನಕ್ಕೆ ನಿಲ್ಲುತ್ತಿದ್ದ ಬಿಲ್ಲವ ಜನಾಂಗದ ದೇಜು ಹೆಂಗಸು ಎಂಬವರಿಂದ

ಸಿರಿ ಪಾಡ್ದನದ ಮೊದಲ ಕಲಿಕೆ ಆರಂಭ. ಇವರಲ್ಲದೆ ಲೀಲಾ ಅವರ ಅಕ್ಕನ ನಾದಿನಿಯವರೂ ಇವರ ಪಾಡ್ದನ ಕಲಿಕೆಗೆ ಸಹಕರಿಸಿದವರು. ಚಿಕ್ಕಂದಿನಲ್ಲಿ ಶಾಲೆಗಿಂತ ಹೆಚ್ಚಿನ ಆಸಕ್ತಿ ಪಾಡ್ದನ ಕಲಿಕೆಯ ಮೇಲೆಯೇ ಇತ್ತು. ಅವರು ಪಾಡ್ದನಗಳನ್ನು ಹಾಡುವಾಗ ಕಿವಿಕೊಟ್ಟು ಕೇಳುವುದು. ಮನೆಯಲ್ಲಿ ಬಂದು ತಮ್ಮಷ್ಟಕ್ಕೆ ಪುನರಾವರ್ತನೆ ಮಾಡುತ್ತಾ ಕಲಿಯಲು ಪ್ರಯತ್ನಿಸುವುದು. ಹೀಗೆ ಮಾಡುತ್ತಾ ಮಾಡುತ್ತಾ ಪಾಡ್ದನಗಳು ನಿಯಂತ್ರಣಕ್ಕೆ ಬಂದವು ಎನ್ನುತ್ತಾರೆ. ದಲಿಯದಲ್ಲಿ ಆರಂಭದಲ್ಲಿ ನಿಂತಾಗ ಹೆಚ್ಚಿನ ಮಾಹಿತಿಗಳು ಇರುವುದಿಲ್ಲ. ನಾವು ಕುಮಾರನ ಎದುರು ಬಾಯಿ ಬಿಟ್ಟು ನಮ್ಮ ಮೈಮೇಲೆ ಆಕರ್ಷಣೆಯಾಗಿರುವ ಶಕ್ತಿ ಇದು ಎಂದಷ್ಟೇ ಹೇಳುವುದು. ಆ ನಂತರ ಅದರ ವಿಧಿಗಳನ್ನು ನೋಡಿ ಕಲಿತೇ ತಿಳಿದುಕೊಳ್ಳುವುದು. ಯಾವುದೂ ಕಲಿಯದೆ ಅಟೋಮ್ಯಾಟಿಕ್ ಆಗಿ ಬರುವುದಿಲ್ಲ. ಸ್ವಲ್ಪವಾದರೂ ಆಯಾ ಶಕ್ತಿಯ ಹಿಂದಿನ ವಿಧಿಯನ್ನು ಕಲಿಯಬೇಕು. ಉದಾಹರಣೆಗೆ ಸಿರಿ ಎಂದರೆ ಅವಳು ಯಾರು, ಅವಳ ಹುಟ್ಟು ಹೇಗೆ, ಅಜ್ಜನವರ ಮೂಲ, ಅವಳು ಬದುಕಲ್ಲಿ ಪಟ್ಟ ಕಷ್ಟಗಳು ಏನು, ಅವಳ ಅಂತ್ಯ ಇವೆಲ್ಲವೂ ಕಲಿತೇ ಬರಬೇಕು. ಹೋದಲ್ಲಿ ಬಂದಲ್ಲಿ, ಅನುಭವಿಗಳು ಹೇಳುವಾಗ ಗಮನಿಸಿ, ಆಚರಣೆಗಳಲ್ಲಿ ನಿಂತಾಗ ಇತರರನ್ನು ನೋಡಿ, ಗಮನಿಸಿ – ಹೀಗೆ ವಿಧಿಗಳನ್ನು ತಿಳಿದುಕೊಳ್ಳಬೇಕೇ ಹೊರತು ನೇರವಾಗಿ ಬಂದು ನಾನು ಹೇಳುತ್ತೇನೆ ಎಂದರೆ ಹಾಡಲಾಗದು ಎನ್ನುತ್ತಾರೆ. ದಲಿಯದಲ್ಲಿ ನಿಂತು ಹಾಡುವಾಗ ಮೈಮೇಲೆ ಆಕರ್ಷಣೆ ಇರುವುದರಿಂದ ಯಾವುದೇ ಆಲೋಚನೆಗಳು ಮಾಡುವ ಪ್ರಸಂಗ ನಮಗೆ ಬರುವುದಿಲ್ಲ. ನೇರವಾಗಿ ಸರಸರನೆ ಸಂಧಿಯನ್ನು ಹೇಳಿಕೊಂಡು ಹೋಗಲಾಗುತ್ತದೆ. ದಲಿಯದಿಂದ ಹೊರಗೆ ಹಾಡಬೇಕಾದರೆ ಸ್ವಲ್ಪ ಆಲೋಚಿಸಬೇಕು. ಈ ವ್ಯತ್ಯಾಸಗಳು ದಲಿಯದ ಒಳಗೆ ಮತ್ತು ಹೊರಗೆ ಇದೆ.

ಲೀಲಾ ಅವರು ಕಂಡೇವು ಸಿರಿಆಲಡೆಯಲ್ಲಿ ಅಬ್ಬಗ ದರ್ಶನ ಪಾತ್ರಿಯಗಿ ತಮ್ಮ ಅದ್ಭುತ ಪ್ರದರ್ಶನವನ್ನು ನೀಡುವುದನ್ನು ನಾನು ಸುಮಾರು 25 ವರ್ಷಗಳ ಹಿಂದೆಯೇ ಗಮನಿಸಿದ್ದೆ. 1992–93ರ ಕಾಲದಲ್ಲಿ ನಾನು ಪ್ರೊ. ಬಿ.ಎ. ವಿವೇಕ ರೈಯವರ ಮಾರ್ಗದರ್ಶನದಲ್ಲಿ 'ತುಳುನಾಡಿನ ಪ್ರಾಣಿಜಾನಪದ' ಎಂಬ ವಿಷಯದ ಮೇಲೆ ಮಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಸಂಶೋಧನೆಗಾಗಿ ಕ್ಷೇತ್ರಕಾರ್ಯ ಮಾಡುತ್ತಿದ್ದಾಗ ನಂದಿಗೋಣ ಭೂತದ ಕುರಿತಾದ ಮಾಹಿತಿ ಸಂಗ್ರಹಣೆಗಾಗಿ ಕಂಡೇವಿಗೆ ಹೋಗಿದ್ದೆ. ಕಂಡೇವು ಸಿರಿಜಾತ್ರೆಯಂದು ಬೆಳಗಾಗುವ ಹೊತ್ತಿಗೆ ನಂದಿಗೋಣ ಹಾಗೂ ಸಿರಿಗಳ ಭೇಟಿಯ ಅಪೂರ್ವ ಸಂದರ್ಭ ಕಂಡೇವಿನಲ್ಲಿ ಕಾಣಸಿಗುತ್ತದೆ. ಅಲ್ಲಿಂದ ಲೀಲಾ ಅವರನ್ನು ಒಂದು ಬಾರಿ ಭೇಟಿಯಾಗಬೇಕು. ಅವರಲ್ಲಿರುವ ಮಾಹಿತಿಗಳನ್ನು ಸಂಗ್ರಹಿಸಬೇಕೆಂಬ ನನ್ನ ಮಹತ್ವಾಕಾಂಕ್ಷೆಗೆ ಚಾಲನೆ ಸಿಕ್ಕಿದ್ದು 2016ರಲ್ಲಿ. ಜರ್ಮನಿಯ ವುರ್ತ್ಸ್‌ಬೂರ್ಗ್ ವಿಶ್ವವಿದ್ಯಾಲಯದ ಇಂಡಾಲಜಿ ವಿಭಾಗದ ಸಂಶೋಧನ ವಿದ್ಯಾರ್ಥಿನಿ ಪೌಲೀನೇ ಶೂಸ್ತರ್ ಲೋಯ್ಡೋಲೋ ಅವರು ಸಿರಿಯ ಮೇಲಿನ ಸಂಶೋಧನೆಗೆ

ಉಡುಪಿಗೆ ಬಂದಿದ್ದಾಗ ಅವರ ಜೊತೆ ನಾನು ಹಾಗು ಕು.ಶಿ. ಹರ್ಷವರ್ಧನ ಭಟ್ ಅವರು ಲೀಲಾ ಅವರ ಕಾರ್ಕಳದ ಮಾಳದ ಮನೆಗೆ ಹೋಗಿ ಅವರ ಜೊತೆ ಸುದೀರ್ಘ ಮಾತುಕತೆ ನಡೆಸಿದ್ದೆವು. ಬಹಳ ಆತ್ಮೀಯ ವಾತಾವರಣದಲ್ಲಿ ನಡೆಸಿರುವ ದಾಖಲಾತಿಯಲ್ಲಿ ಅವರು ಸಿರಿಲೋಕಕ್ಕೆ ಸಂಬಂಧಿಸಿದ ಅನೇಕ ಮಹತ್ವದ ಸಂಗತಿಗಳನ್ನು ವಿವರಿಸಿದ್ದರು. ಪೌಲೀನೆ ಲೀಲಾ ಅವರಿಗೆ ಪ್ರೀತಿಯ ದ್ಯೋತಕವಾಗಿ ಒಂದು ಸೀರೆಯನ್ನು ಉಡುಗೊರೆಯಾಗಿ ನೀಡಿದ್ದರೆಂಬುದು ನನ್ನ ನೆನಪು.

ಆ ನಂತರ ಲೀಲಾ ಅವರ ಸಿರಿಕಾವ್ಯವನ್ನು ದಾಖಲಿಸಿಕೊಳ್ಳಬೇಕೆಂಬ ನನ್ನ ಆಸೆ ನೆರವೇರಿದ್ದು 2017ರ ನವಂಬರ ತಿಂಗಳಲ್ಲಿ. 2018 ಮೇ 31ಕ್ಕೆ ನನ್ನ ನಿವೃತ್ತಿ ಆರ್.ಆರ್.ಸಿ. ಸಂಸ್ಥೆಯಿಂದ ಎಂದು ತಿಳಿಯುತ್ತಿದ್ದಂತೆ ಈ ಕೆಲಸವನ್ನೊಮ್ಮೆ ಮಾಡಿ ಮುಗಿಸಬೇಕೆಂದು ಲೀಲಾ ಅವರನ್ನು ಎಂಜಿಎಂ ಕಾಲೇಜಿನ ಆರ್.ಆರ್.ಸಿ. ಸಂಸ್ಥೆಗೇ ಬರಹೇಳಿ ಎರಡು ದಿನಗಳ ಕಾಲ ಅವರನ್ನು ಆರ್.ಆರ್.ಸಿ. ಸಂಗ್ರಹಾಲಯದಲ್ಲಿ ಕೂರಿಸಿ ನಾನು ಮತ್ತು ಲಚ್ಚೇಂದ್ರ ಸುಮಾರು 14 ಘಂಟೆಗಳ ಕಾಲಾವಧಿಯ ಸಿರಿಕಾವ್ಯವನ್ನು ದಾಖಲಿಸಿಕೊಂಡೆವು. ಲೀಲಾ ಅವರ ಸಿರಿಕಾವ್ಯದ ವಿಶೇಷತೆ ಮತ್ತು ವ್ಯತ್ಯಾಸಗಳನ್ನು ತೌಲನಿಕ ಅಧ್ಯಯನದಲ್ಲಿ ನೀಡಿರುವುದರಿಂದ ಇಲ್ಲಿ ಪುನರಾವರ್ತಿಸಲು ಹೋಗುವುದಿಲ್ಲ. ಸಿರಿಕಾವ್ಯವಲ್ಲದೆ ಲೀಲಾ ಅವರು ದೇವುಪೂಂಜ ಪಾಡ್ದನ, ಕೋಡ್ದಬ್ಬು ಪಾಡ್ದನ, ಪಂಜುರ್ಲಿ ಪಾಡ್ದನ, ಕಲ್ಲುರ್ಟಿ ಪಾಡ್ದನ, ಸಿರಿಕಿಸ್ಣ ದೇವೆರೆ ಪಾಡ್ದನ, ಬಾಲೆರಕ ಕುಮಾರ್ದಿ ಪಾಡ್ದನ, ಬಾರಗ ದೇವನಡಿಗೆರ್ ಪಾಡ್ದನಗಳಲ್ಲದೆ ಅನೇಕ ಕೆಲಸದ ಹಾಡುಗಳಾದ ಓಬೇಲೆ, ಓಯ್ಯ ಪಾಡುನಿ ಇತ್ಯಾದಿ ಹಾಡುಗಳನ್ನೂ ತಿಳಿದವರಾಗಿದ್ದಾರೆ. ನನ್ನ ನಿವೃತ್ತಿಯ ಅನಂತರ ಕೆಲವು ಕೆಲಸದ ಹಾಡುಗಳನ್ನು ಆರ್.ಆರ್.ಸಿ. ಸಂಸ್ಥೆಯಲ್ಲಿ ಲಚ್ಚೇಂದ್ರ ಅವರು ದಾಖಲಿಸಿಕೊಂಡರೆಂಬುದು ತಿಳಿಯಿತು. ಹೀಗೆ ಸುಮಾರು ಐವತ್ತಕ್ಕೂ ಹೆಚ್ಚು ಘಂಟೆಗಳ ಕಾಲಾವಧಿಯ ಹಾಡುಗಳನ್ನು ತಮ್ಮ ಮಾನಸಿಕ ಪಠ್ಯದಲ್ಲಿ ತುಂಬಿಕೊಂಡ ಅಪೂರ್ವ ಮಹಾಕವಿ ಪ್ರತಿಭೆ ಲೀಲಾ ಅವರದು ಎಂದರೆ ತಪ್ಪಾಗಲಾರದು.

ಲೀಲಾ ಅವರು ತಮ್ಮ ಬದುಕಿನುದ್ದಕ್ಕೂ ಸಿರಿಯನ್ನು ನಂಬಿ ಬದುಕುವವರು. ಹೀಗಾಗಿ ದಿನನಿತ್ಯದ ತನ್ನ ಬದುಕಲ್ಲಿ ತುಂಬ ಕಟ್ಟುನಿಟ್ಟುಗಳನ್ನು ಪಾಲಿಸುತ್ತಾರೆ. ಮಾಂಸಾಹಾರವನ್ನು ಎಂದೂ ಸೇವಿಸಿದ್ದಿಲ್ಲ. ಮಾಂಸಾಹಾರ ಸೇವಿಸುವವರ ಮನೆಗಳಲ್ಲಿ ಊಟ ಮಾಡುವುದಿಲ್ಲ. ಪೂರ್ತಿ ಸಸ್ಯಾಹಾರಿಯಾಗಿರುವ ಇವರು ಸಿರಿಜಾತ್ರೆಯ ವಾರಕ್ಕೆ ಮುಂಚಿತವಾಗಿ ಒಪ್ಪೊತ್ತಿನ ಊಟ ಮಾಡಿ ಕಠಿಣ ಶುದ್ಧಾಚಾರವನ್ನು ಪಾಲಿಸುತ್ತಾರೆ. ಒಂದು ವೇಳೆ ಮಾಂಸಾಹಾರ ಸೇವಿಸುವವರ ಮನೆಗೆ ಹೋದರೆ ಅವರು ಲೀಲಾ ಅವರನ್ನು ತಿಳಿದವರಾದರೆ ನೀರು ಕೂಡಾ ಕೊಡುವುದಿಲ್ಲವಂತೆ. ಲೀಲಾ ಅವರಿಗೆ ಅಬ್ಬಯನ ದರ್ಶನವಲ್ಲದೆ ಮನೆಯಲ್ಲಿ ನಾಗಕನ್ನಿಕೆ ದೇವಿದರ್ಶನವೂ ಇರುವುದರಿಂದ ಇವರು ವಿಶೇಷ ಶುದ್ಧಾಚಾರದ ಪಾಲನೆ ಮಾಡುತ್ತಾರೆ.

ಲೀಲಾ ಅವರ ಬದುಕು, ಮದುವೆ, ವಿಚ್ಛೇದನ ಇತ್ಯಾದಿ

ತುಳುವಿನಲ್ಲಿ 'ಸಾಟೆ' ಎಂಬ ಪದವೊಂದಿದೆ. ಮದುವೆಯ ಸಂದರ್ಭ ಎರಡೂ ಮನೆತನಗಳಿಗೆ ಒಪ್ಪಿಗೆಯಾದರೆ ಒಂದು ಮನೆತನದ ಅಣ್ಣ ತಂಗಿಯನ್ನು ಇನ್ನೊಂದು ಮನೆತನದ ಅಣ್ಣ ತಂಗಿಯ ಜೊತೆಗೆ ಎದುರು ಬದುರಾಗಿ ನಡೆಸುವ ಮದುವೆ ಸಂಬಂಧವನ್ನು 'ಪಗರ್ ಸಾಟೆ' ಎಂದು ತುಳುವಿನಲ್ಲಿ ಕರೆಯುತ್ತಾರೆ. ಲೀಲಾ ಅವರ ಮದುವೆ ಈ ರೀತಿಯ ಪಗರ್ ಸಾಟೆಯಲ್ಲಿ ರೆಂಜಾಳದ ಸುಂದರ ಶೆಟ್ಟಿಯವರ ಜೊತೆ ನಡೆಯಿತು. ಲೀಲಾ ಅವರೇ ಹೇಳುವಂತೆ ನಾವು ಬಂಟ ಜನಾಂಗದಲ್ಲಿ ಬಡವರಾಗಿ ಹುಟ್ಟಿದ್ದು ಬದುಕಿಗೆ ಒಂದು ಶಾಪವಾಗಿ ಪರಿಣಮಿಸಿತು. ಆ ಕಾಲದಲ್ಲಿ ಮದುವೆಯಾಗ ಬೇಕಾದರೆ ವರದಕ್ಷಿಣೆ ಬಹಳವಾಗಿ ಚಾಲ್ತಿಯಲ್ಲಿದ್ದ ಕಾಲವದು. ಹೀಗಾಗಿ ವರದಕ್ಷಿಣೆ ಕೊಡಲಾಗದೆ ಬಂಟ ಮನೆತನದ ಎಷ್ಟೋ ಹೆಣ್ಣುಮಕ್ಕಳ ಬದುಕು ನರಕವಾದದ್ದಿದೆ. ಹೀಗೇ ನನ್ನ ಬದುಕೂ ಆಯಿತು. ನಮ್ಮ ಬಡತನದಿಂದಾಗಿ ಈ ರೀತಿಯ ಮದುವೆಗೆ ಒಪ್ಪಿಕೊಳ್ಳಬೇಕಾಯಿತು. ದಲಿಯದಲ್ಲಿ ಕುಮಾರ ನಿಲ್ಲಬೇಕೆಂದು ಹೇಳಿದಾಗ ಉಡಲು ಸರಿಯಾದ ಸೀರೆಯೂ ಇಲ್ಲದ ಪರಿಸ್ಥಿತಿ ಆ ಕಾಲದಲ್ಲಿ ನನ್ನದು. ಮದುವೆಯಾದ ಆರಂಭದಲ್ಲಿ ಎಲ್ಲವೂ ಸರಿಯಾಗಿದ್ದ ಸಂಸಾರದಲ್ಲಿ ಬರ ಬರುತ್ತಾ ತೊಂದರೆಗಳು ಕಾಣಿಸಿಕೊಳ್ಳಲು ಶುರುವಾಯಿತು. ನನ್ನ ಗಂಡನ ತಂಗಿಗೆ ಎರಡು ವರ್ಷದಲ್ಲಿ ಎರಡು ಹೆರಿಗೆಯಾಯಿತು. ನನಗೆ ಹೆರಿಗೆಯಾಗಲಿಲ್ಲ. ಕೊನೆಗೆ ಗಂಡನ ತಂಗಿ ಬಂದು ತಾಯಿ ಮನೆಯಲ್ಲೇ ಕುಳಿತುಕೊಳ್ಳಲು ಆರಂಭಿಸಿದಳು. ಇದರಿಂದಾಗಿ ಅತ್ತೆಮಾವನವರು ನನಗೆ ಸ್ವಲ್ಪ ಕಷ್ಟ ಕೊಡಲು ಆರಂಭಿಸಿದರು. ಗಂಡನ ಎದುರು ಹೀಯಾಳಿಸಲು ಆರಂಭಿಸಿ ಕೊನೆಗೆ ಗಂಡನಿಂದಲೇ ದೂರ ಮಾಡಿ ಕೊನೆಗೆ ಅವರೇ ಬಿಡುವಂಥ ಪರಿಸ್ಥಿತಿ ಒದಗಿಬಂತು. ಅದರ ಹಿಂದಿನ ಕಥೆಗಳನ್ನೆಲ್ಲ ನಿಮ್ಮಲ್ಲಿ ಹೇಳಲಾರೆ. ಅಷ್ಟು ಕಷ್ಟಗಳು ನನ್ನ ಬದುಕಲ್ಲಿ ಬಂತು. ಕೊನೆಗೆ ಒಂದು ದಿನ ನನಗೆ ಅನ್ನ ಸಹ ಕೊಡದೆ, ನನ್ನ ಮದುವೆಯ ಧಾರೆ ಸೀರೆಯನ್ನು ಗಂಡನೇ ಸುಟ್ಟು ಹಾಕಿ ನನ್ನನ್ನು ತವರುಮನೆಗೆ ಓಡಿಸಿದರು. ಅಲ್ಲಿ ಕೂಲಿನಾಲಿ ಮಾಡಿ ಬದುಕಿ ಕೊನೆಗೆ ಸರಕಾರಕ್ಕೆ ಅರ್ಜಿ ಸಲ್ಲಿಸಿ ಇಲ್ಲಿ ಐದು ಸೆಂಟ್ಸ್ ಜಾಗ ಪಡೆದುಕೊಂಡು ಸಣ್ಣದೊಂದು ಜೋಪಡಿ ನಿರ್ಮಿಸಿ ಗದ್ದೆಯ ಕೆಲಸ, ಬೀಡಿಯ ಕೆಲಸ ಮಾಡಿ ಒಂಟಿ ಜೀವನ ಆರಂಭಿಸಿದೆ. ನನ್ನ ಗಂಡ ಎರಡನೇ ಅನಧಿಕೃತ ಮದುವೆಯಾದರು. ಯಾಕೆಂದರೆ ಅಧಿಕೃತವಾಗಿ ನನಗೆ ವಿಚ್ಛೇದನ ನೀಡದೆ ಎರಡನೇ ಮದುವೆಯಾದರು. ಇದನ್ನೆಲ್ಲ ಪ್ರಶ್ನಿಸುವ ಶಕ್ತಿ ನನ್ನಲ್ಲಿ ಆ ಕಾಲದಲ್ಲಿ ಇರಲಿಲ್ಲ. ಯಾಕೆಂದರೆ ನಾವು ಬಡವರು. ಇತ್ತೀಚೆಗೆ ನನ್ನ ಗಂಡ ಅವರ ಆಸ್ತಿಯನ್ನು ಮಾರಾಟ ಮಾಡುವ ವಿಚಾರ ನನಗೆ ತಿಳಿಯಿತು. ಆಗ ಅವರ ಹೆಂಡತಿಯಾಗಿ ನಾನು ಅವರ ಮೇಲೆ ಕೋರ್ಟು ಕೇಸು ಹಾಕಿದೆ. ಮಾರಾಟವಾದ ಹಣದಲ್ಲಿ ನನಗೂ ಪಾಲು ಸಿಗಬೇಕೆಂದು ಹೇಳಿದೆ. ಕೋರ್ಟು ಕೇಸಲ್ಲಿ ಜಯ ದೊರೆತರೆ ರೆಂಜಾಳದ ಮಾರಿಗೆ ಹಾಗೂ ಅತ್ತೂರಿನ ಚರ್ಚಿಗೆ ಐದೈದು ಸಾವಿರ ರೂಪಾಯಿ ಕೊಡುವೆನೆಂದು ಹರಕೆ

ಯನ್ನೂ ಹೊತ್ತುಕೊಂಡೆ. ಯಾಕೆಂದರೆ ಇವೆರಡೂ ಸ್ಥಳಗಳು ತುಳುವರು ಕಾರಣಿಕ ಇರುವ ಜಾಗವೆಂದು ನಂಬುವವರು. ಆರಂಭದಲ್ಲಿ ನನ್ನನ್ನು ಹೆದರಿಸಲು ನೋಡಿದರು. ಆದರೆ ಈಗ ನನಗೆ ಸಿರಿ ಶಕ್ತಿ ಕೊಟ್ಟಿದ್ದಾಳೆ. ಅವಳ ಹೋರಾಟದ ಮುಂದೆ ನನ್ನದು ಏನೂ ಅಲ್ಲ. ಕೊನೆಗೆ ಕೋರ್ಟಿನಿಂದ ನೋಟೀಸು ಬಂದಾಗ ಅವರೇ ಹೆದರಿದರು. ಕೋರ್ಟಲ್ಲಿ ಎರಡೇ ತಿಂಗಳಲ್ಲಿ ಒಂದೂಕಾಲು ಲಕ್ಷದಷ್ಟು ಹಣ ಕೊಡುತ್ತೇನೆಂದು ಒಪ್ಪಿದರು. ಅಂತೆಯೇ ಅಷ್ಟು ಹಣ ನನಗೆ ಬಂತು. ಇದು ನನ್ನ ಗೆಲುವಲ್ಲ ಸಿರಿಯ ಗೆಲುವು. ಈಗ ಈ ಜಾಗವನ್ನು ಮಾರಿ ಮಾಳದಲ್ಲಿ ಹೋಗಿ ನೆಲೆಸಬೇಕೆಂದಿದ್ದೇನೆ. ಯಾಕೆಂದರೆ ಇಲ್ಲಿ ನನ್ನವರು ಯಾರೂ ಇಲ್ಲ. ಮಾಳದಲ್ಲಿ ನನ್ನ ಸಂಬಂಧದವರೇ ಇರುವುದರಿಂದ ನನಗೆ ಪಾಲಿನಲ್ಲಿ ಬಂದ ಜಾಗದಲ್ಲಿ ಮನೆ ಕಟ್ಟಬೇಕೆಂದಿದ್ದೇನೆ. ಕೈಯಲ್ಲಿರುವ ಸ್ವಲ್ಪ ಹಣ ಬಾವಿ ತೋಡಿಸಲು ಖರ್ಚಾಯಿತು. ಮನೆಯ ಯೋಜನೆಗೆ ನೋಡಬೇಕು.

ಲೀಲಾ ಅವರಿಗೆ ದೊರೆತ ಪ್ರಶಸ್ತಿ, ಸಮ್ಮಾನಗಳು

ಕಳೆದ 42 ವರ್ಷಗಳಿಂದ ಅಬ್ಬಗ ದರ್ಶನವನ್ನು ವಿವಿಧ ಆಲಡೆಗಳಲ್ಲಿ ನಡೆಸುತ್ತಿದ್ದ ಲೀಲಾ ಅವರು ಎಲೆಮರೆ ಕಾಯಿಯಂತಿದ್ದರು. ಉಡುಪಿಯ ಆರ್.ಆರ್.ಸಿ. ಸಂಸ್ಥೆಯ ಮೂಲಕ ಇವರ ಸಿರಿಕಾವ್ಯವನ್ನು ಸಂಗ್ರಹಿಸುತ್ತಿರುವ ಸಂದರ್ಭದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿಗೆ ಅರ್ಜಿಯನ್ನು ಹಾಕಲು ಪತ್ರಿಕೆಯಲ್ಲಿ ಪ್ರಕಟನೆ ಬಂತು. ನಾವೆಲ್ಲ ಇವರಿಗೆ ಸಹಾಯ ಮಾಡಿ ಕೂಡಲೇ ಅರ್ಜಿ ಸಲ್ಲಿಸಲು ಸಹಾಯ ಮಾಡಿದೆವು. ಈ ಸಂದರ್ಭ ಎಸ್.ಎ. ಕೃಷ್ಣಯ್ಯ ಅವರು ನೀಡಿದ ಸಹಕಾರವನ್ನೂ ಇಲ್ಲಿ ಸ್ಮರಿಸಿಕೊಳ್ಳುತ್ತೇನೆ. ಕೊನೆಗೂ ಲೀಲಾ ಅವರಿಗೆ 2016ನೇ ಸಾಲಿನ ಜಾನಪದ ಕಲಾವಿದ ಪ್ರಶಸ್ತಿ ಪ್ರಕಟವಾಯಿತು. ಪ್ರಶಸ್ತಿ ಕುರಿತು ಪತ್ರಿಕೆಯಲ್ಲಿ ವಿಸ್ತೃತ ವರದಿ ಬಂದಾಗ ಹಾಗೂ ಲೀಲಾ ಅವರು ತಡಿಕೆಯ ಬಾಗಿಲಿನ ಮನೆಯಲ್ಲಿ ವಾಸಿಸುವ ಕುರಿತ ವರದಿಯನ್ನು ನೋಡಿದ ಕಾರ್ಕಳ ತಾಲೂಕನ್ನೂ ಪ್ರತಿನಿಧಿಸುತ್ತಿದ್ದ ಉಡುಪಿಯ ಮಹಿಳಾ ಜಿಲ್ಲಾಧಿಕಾರಿಯರಾದ ಮಾನ್ಯ ಫ್ರಾನ್ಸಿಸ್ ಮೇರಿಯವರು ಈ ವಿಚಾರ ತಿಳಿದುಕೊಂಡು ತಹಶೀಲ್ದಾರರನ್ನು ಲೀಲಾ ಅವರ ಮನೆಗೆ ಕಳುಹಿಸಿ ಲೀಲಾ ಅವರ ಜಾಗದಲ್ಲಿ ಸರಕಾರದ ವತಿಯಿಂದ ಮನೆಕಟ್ಟಲು ಬೇಕಾದ ಆರ್ಥಿಕ ಸಹಕಾರವನ್ನು ಆದಷ್ಟು ಬೇಗನೆ ನೀಡುವ ಭರವಸೆಯನ್ನು ನೀಡಿದರು. ಮಾತ್ರವಲ್ಲ ಪ್ರಶಸ್ತಿ ಸ್ವೀಕರಿಸಲು ಹೋಗಲು ಜಿಲ್ಲಾಡಳಿತದಿಂದ ಒಬ್ಬರನ್ನು ಕಳುಹಿಸಿಕೊಟ್ಟು ಸಹಕರಿಸಿದರು. ಇದೀಗ ಲೀಲಾ ಅವರ ಮನೆ ಗೋಡೆಯ ಹಂತದಲ್ಲಿ ಇದೆ. ಇದಕ್ಕೆ ಬೇಕಾದ ಹಣಕಾಸಿನ ನೆರವನ್ನೂ ಸರಕಾರದ ಮೂಲಕ ಕಾರ್ಕಳದ ತಾಲೂಕು ಪಂಚಾಯತು ಒದಗಿಸಿಕೊಟ್ಟಿದೆ. ಈ ಪುಣ್ಯದ ಕೆಲಸಕ್ಕಾಗಿ ಮಾನ್ಯ ಫ್ರಾನ್ಸಿಸ್ ಮೇರಿ ಯವರಿಗೆ ಕೃತಜ್ಞತೆ ಹೇಳಲೇಬೇಕು. ಅನಂತರ ಲೀಲಾ ಅವರನ್ನು ಅನೇಕ ಸಂಘ ಸಂಸ್ಥೆಗಳು ಗುರುತಿಸಲು ಆರಂಭಿಸಿವೆ. ಇದು ಲೀಲಾ ಅವರ ಬದುಕಿನ ಮಹತ್ವದ ತಿರುವು ಎಂದರೆ ತಪ್ಪಾಗಲಾರದು.

ಕುಮಾರ ಪಾತ್ರಿ ಮಾಚಾರು ಗೋಪಾಲ ನಾಯ್ಕ



ಗೋಪಾಲ ನಾಯ್ಕರು ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆ ಸಮೀಪದ ಮಾಚಾರು ಗ್ರಾಮದ ಮಾಪಲ ಮನೆಯವರು. ಕುಮಾರ ಪಾತ್ರಿಯಾದ ಗೋಪಾಲ ನಾಯ್ಕರು 'ಬಡೆಕ್ಕಾಯಿ ಲಂಕೆಲೋಕನಾಡು' ಎಂದೇ ಕರೆಯಲ್ಪಡುವ ನಿಡ್ಗಲ್ಲ್ ಆಲಡೆಯಲ್ಲಿ ಸುದೀರ್ಘವಾದ ಸೇವೆಯನ್ನು ಸಲ್ಲಿಸುತ್ತಾ ಬಂದವರು. ಇವರು ಮೂಲತಃ ಸಣ್ಣ ಕೃಷಿಕರು. ಹೆಚ್ಚು ವಿದ್ಯಾಭ್ಯಾಸ ಬಲ್ಲವರಲ್ಲ. ಆದರೆ ಸಿರಿ ಮತ್ತು ಕೋಟಿ ಚೆನ್ನಯ ದಂತಹ ಮಹಾಕಾವ್ಯಗಾಯನದಲ್ಲಿ ಗೋಪಾಲ ನಾಯ್ಕರು ಅನುಪಮವಾದ ಜ್ಞಾನವನ್ನು ಹೊಂದಿದವರಾಗಿದ್ದಾರೆ. ಮೌಖಿಕ ಕಾವ್ಯಗಾಯನದಿಂದ ಇವರ ಬದುಕು ಸಾಗುತ್ತಿಲ್ಲವಾದರೂ ಸಿರಿಕಾವ್ಯವನ್ನು ಗೋಪಾಲನಾಯ್ಕರು ತಮ್ಮ ಬದುಕಿನ 'ಜೀವಕಲೆ ಮತ್ತು ಆತ್ಮ' ಎಂದೇ ತಿಳಿದವರು. ಸುಮಾರು 80 ಜನ ಹೆಂಗಸರಿರುವ ಸಿರಿಕುಟುಂಬದ ಗುಂಪಿಗೆ ಗೋಪಾಲ ನಾಯ್ಕರು ಮುಖ್ಯರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಗೋಪಾಲ ನಾಯ್ಕರ ಸಿರಿ ಬಳಗದ ವಿಶೇಷತೆಯೆಂದರೆ ತುಳುನಾಡಿನವರು ಮಾತ್ರವಲ್ಲದೆ ಚಿಕ್ಕ ಮಂಗಳೂರು ಭಾಗದ ಅನೇಕ ಮಂದಿ ಸಿರಿಗಳು ಭಾಗವಹಿಸುತ್ತಾರೆ. ಒಟ್ಟಾರೆಯಾಗಿ ಸಿರಿ ಆರಾಧನಾ ವಲಯದಲ್ಲಿ ಒಬ್ಬ 'ಸೇಕ್ರೆಡ್ ಹೀರೋ' ಎಂದು ಗುರುತಿಸಲ್ಪಟ್ಟಿರುವ ಗೋಪಾಲ ನಾಯ್ಕರು ಸಿರಿ ಆರಾಧನೆಯ ಸಂದರ್ಭ ಸಿರಿಯ ಮಗನಾದ ಕುಮಾರನನ್ನು ಮಾಯದಿಂದ ಜೋಗಕ್ಕೆ ಕರೆಯುವಲ್ಲಿಂದ ಹಿಡಿದು ಇಡೀ ಸಿರಿ ಕುಟುಂಬವನ್ನೇ ಮಾಯದಿಂದ ಜೋಗಕ್ಕೆ ಆಮಂತ್ರಿಸಿ ಆಯಾ ಪಾತ್ರಗಳಲ್ಲಿ ಮೈದುಂಬುವಂತೆ ಮಾಡುವ ಕಾರ್ಯವನ್ನು ನಿರ್ವಹಿಸುತ್ತಾರೆ. ಹೀಗಾಗಿ ಗೋಪಾಲ ನಾಯ್ಕರು ತಮ್ಮ ಒಟ್ಟು ಸಿರಿ ಬಳಗವನ್ನು ಆಧ್ಯಾತ್ಮಿಕ ಕುಟುಂಬ ಎಂದು ತಿಳಿದವರು. ಇವರು ಸಿರಿ ಆಚರಣೆಯನ್ನು ಮಾತ್ರವಲ್ಲದೆ ತುಳುನಾಡಿನ ಜನವೈದ್ಯ ಹಾಗೂ ಜನಪದ ಕುಣಿತಗಳ ಬಗೆಗೂ ಅಪಾರವಾದ ಜ್ಞಾನವನ್ನು ಹೊಂದಿದವರಾಗಿದ್ದಾರೆ.

ಮಹಾಕವಿ ಪ್ರತಿಭೆ ಗೋಪಾಲ ನಾಯ್ಕರು

1980–81ರ ಕಾಲಕ್ಕೇ ಗೋಪಾಲ ನಾಯ್ಕರು ಕಾಲೇಜು ವಿದ್ಯಾರ್ಥಿಗಳಿಗಾಗಿ ಸಿರಿಕಾವ್ಯವನ್ನು ಹಾಡಲು ಉದ್ದೇಶಿಸಿದ್ದರು. ಆ ಕಾಲದಲ್ಲಿ ಡಾ. ಚಿನ್ನಪ್ಪ ಗೌಡರು ಉಜಿರೆಯ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ತುಳುನಾಡಿನ ಭೂತಾರಾಧನೆಯನ್ನು ಕುರಿತಾದ ಸಂಶೋಧನೆಯ ಕಾರ್ಯಕ್ಕೂ ಆಕಾಲದಲ್ಲೇ ಅಡಿಪಾಯ ಹಾಕಿದ್ದರು. ಈ ಕುರಿತಾದ ಮಾಹಿತಿಗಳನ್ನು ಕಲೆ ಹಾಕುತ್ತಿರುವ ಸಂದರ್ಭದಲ್ಲಿ ಗೋಪಾಲ ನಾಯ್ಕರು ಆಕಸ್ಮಿಕವಾಗಿ

ಚಿನ್ನಪ್ಪ ಗೌಡರ ಸಂಪರ್ಕಕ್ಕೆ ಬಂದರು. ಅದೇ ಕಾಲೇಜಿನಲ್ಲಿ ವಾಣಿಜ್ಯ ವಿಭಾಗದಲ್ಲಿ ಓದುತ್ತಿದ್ದ ಕುಮಾರಿ ಸುಧಾ ಎನ್ನುವ ವಿದ್ಯಾರ್ಥಿನಿ ಗೋಪಾಲ ನಾಯ್ಕರ ಮನೆಗೆ ಸಮೀಪದವಳು. ಗೋಪಾಲ ನಾಯ್ಕರ ಸಿರಿ ಹಾಡುವಿಕೆಯ ಕುರಿತು ಚಿನ್ನಪ್ಪರಿಗೆ ತಿಳಿಸಿದ್ದಳು. ಆದರೆ ಇವರ ಸಿರಿ ಕಾವ್ಯದ ದಾಖಲಾತಿಗೆ ಚಾಲನೆ ಸಿಕ್ಕಿದ್ದು 1985ರಲ್ಲಿ. ಆ ಕಾಲ ಈಗಿನಂತೆ ದಾಖಲಾತಿಗೆ ಬೇಕಾದ ಆಧುನಿಕ ಯಂತ್ರಗಳು ಸುಲಭದಲ್ಲಿ ಲಭ್ಯವಿಲ್ಲದ ಕಾಲವದು. ಹೀಗಾಗಿ ಗೋಪಾಲ ನಾಯ್ಕರು ಸಿರಿ ಕಾವ್ಯ ಹಾಡುತ್ತಿದ್ದಂತೆ ಸುಧಾ ಅವರು ಅದನ್ನು ಕನ್ನಡ ಲಿಪಿಯಲ್ಲಿ ತುಳು ಪಠ್ಯವನ್ನು ಕೈ ಬರಹದ ಮೂಲಕ ದಾಖಲಿಸಿಕೊಳ್ಳುತ್ತಿದ್ದರು. ಈ ದಾಖಲಾತಿ ಕೆಲಸ ನಿರಂತರವಾಗಿ ಸಾಗದೆ ಹಲವಾರು ಕೂರುಗಳಲ್ಲಿ ಇವರಿಗೆ ಸಮಯ ಸಿಕ್ಕಾಗಲೆಲ್ಲ ನಡೆದು ಕೊನೆಗೂ ಆರು ತಿಂಗಳಲ್ಲಿ 1986ರಲ್ಲಿ ಸುಮಾರು 8538 ಗೆರೆಗಳ 150 ಪುಟಗಳ ಹಸ್ತಪ್ರತಿ ಸಿದ್ಧವಾಯಿತು.

ಗೋಪಾಲ ನಾಯ್ಕರು ಜಾನಪದ ವಿದ್ವಾಂಸರ ಸಂಪರ್ಕಕ್ಕೆ ಬಂದ ಸಂದರ್ಭವನ್ನು ಡಾ. ಚಿನ್ನಪ್ಪ ಗೌಡರು ಈ ರೀತಿ ವಿವರಿಸುತ್ತಾರೆ "ಪ್ರೊ. ಲೌರಿ ಹಾಂಕೋ ಅವರು ತುಳುನಾಡಿನ ಸಂಪರ್ಕಕ್ಕೆ ಬಂದುದು ಒಂದು ಆಕಸ್ಮಿಕವಾದ ಮತ್ತು ತುಳು ಜಾನಪದ ಅಧ್ಯಯನ ಇತಿಹಾಸದಲ್ಲಿ ತಿರುವು ತಂದ ಮಹತ್ವದ ಘಟನೆಯಾಗಿದೆ. ಇದಕ್ಕೆ ನಿಜವಾದ ಕಾರಣಪುರುಷರು ಪ್ರೊ. ಕು.ಶಿ. ಹರಿದಾಸ ಭಟ್ಟರು. 1984ರಲ್ಲಿ ಅವರು ಫಿನ್ಲೆಂಡಿಗೆ ಹೋಗಿದ್ದ ಸಂದರ್ಭದಲ್ಲಿ ಪ್ರೊ. ಲೌರಿ ಹಾಂಕೋ ಅವರನ್ನು ಭೇಟಿಮಾಡಿ ತುಳು ಸಿರಿರಾಜ್ಯಕ್ಕೆ ಅವರನ್ನು ಆಮಂತ್ರಿಸಿದ್ದರು. ಹಾಂಕೋ ಅವರ ಸಿರಿ ಕುಮಾರರ ದರ್ಶನಕ್ಕೆ ಅದು ನಾಂದಿ. ಫಿನ್ಲೆಂಡಿನ ಮಹಾಕಾವ್ಯ ಕಲೇವಾಲಕ್ಕೆ ಸಂಬಂಧಿಸಿದಂತೆ ಉಡುಪಿಯಲ್ಲಿ ನಡೆದ ಉತ್ಸವ (1985), ಉಡುಪಿಯ ಪ್ರಾದೇಶಿಕ ಜಾನಪದ ಅಧ್ಯಯನ ಕೇಂದ್ರದ ಸಾಧನೆಗಳು, ಇಂಡೋ–ಫಿನ್ನಿಶ್ ಜಾನಪದ ಕ್ಷೇತ್ರಕಾರ್ಯ ಮತ್ತು ದಾಖಲಾತಿ ತರಬೇತು ಕಮ್ಮಟ (1989), ಧರ್ಮಸ್ಥಳದ ಧರ್ಮಾಧಿಕಾರಿಯವರ ಆತಿಥ್ಯ–ಇವೆಲ್ಲವುಗಳು ಒಟ್ಟುಸೇರಿ ಪ್ರೊ. ಹಾಂಕೋ ಅವರನ್ನು ತುಳು ಜಾನಪದ ಲೋಕಕ್ಕೆ ಆಕರ್ಷಿಸಿವೆ. ಅಂತಿಮ ಪರಿಣಾಮವಾಗಿ ಸಿರಿ ಮಹಾಕಾವ್ಯದ ದಾಖಲಾತಿಯ ಕೆಲಸವು ಹಂತ ಹಂತವಾಗಿ ನಡೆಯುತ್ತಾ ಬಂತು" (ಸಂಸ್ಕೃತಿ ಸಿರಿ, ಪುಟ 28). ಇದರ ಫಲಶ್ರುತಿಯೇ 20.12.1990ರಿಂದ ಆರಂಭಿಸಿ 28.12.1990ರ ತನಕ 9 ದಿನಗಳ ಕಾಲ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಹಿರಿಯ ಪ್ರಾಥಮಿಕ ಶಾಲೆಯ ಅಧ್ಯಾಪಕ ಶ್ರೀ ದೇವಪ್ಪ ಗೌಡರ ಮನೆಯ ತೆಂಗಿನ ತೋಟದಲ್ಲಿ ಪ್ರೊ. ಲೌರಿ ಹಾಂಕೋ, ಅವರ ಪತ್ನಿ ಅನೆಲಿ ಹಾಂಕೋ, ಮಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಬಿ.ಎ. ವಿವೇಕ ರೈ ಮತ್ತು ಡಾ. ಚಿನ್ನಪ್ಪ ಗೌಡರು ಗೋಪಾಲ ನಾಯ್ಕರಿಂದ ಸುಮಾರು 25 ಗಂಟೆಗಳು ಹಾಡಿಸಿ, ದಾಖಲಿಸಿ 15,683 ಗೆರೆಗಳಲ್ಲಿ 2 ಸಂಪುಟಗಳಲ್ಲಿ ಪ್ರಕಟಿಸಿದ ಕೃತಿ 'The Siri Epic as performed by Gopala Naika , Part 1 and Part 2, ಮತ್ತು 'Textualising the Siri Epic' ಹೀಗೆ ಮೂರು ಸಂಪುಟಗಳು ಹೊರ

ಬಂದವು. ಇದಲ್ಲದೆ ಗೋಪಾಲ ನಾಯ್ಕರು ಕೋಟಿ ಚೆನ್ನಯ ಸಂಧಿ, ಏಕ ಸಾಲ್ಯೆರೆ ಸಂಧಿ, ಮೈಸಂದಾಯ ಸಂಧಿ, ಈಶ್ವರ ಸಂಧಿ, ಕೋಡ್ದಬ್ಬು ಸಂಧಿಗಳಲ್ಲದೆ ದಿಮಿಸಾಲೆ, ಲಕ್ಕ್‌ಲೆಯೆ ಕುಲ್ಲುಲೆಯೆ ದೂಜ ಪೊರ್ಬುಲೇ, ಕುರು ರಾಯೆರ್ ಮಲ್ಲ ಕುರು ರಾಯೆರ್, ಚಯಿಂ ಚುಯಿಂ ಮಾಡಿರೋ ಚನಿಲಣ್ಣ ಇಂತಹ ಕೆಲಸದ ಹಾಡುಗಳನ್ನೂ ಹಾಡುತ್ತಾರೆ. ಇದಲ್ಲದೆ ಗೋಪಾಲ ನಾಯ್ಕರ ನೆನಪಿನ ಕಣಜದಲ್ಲಿ ಹತ್ತಾರು ಜನಪದ ಕತೆಗಳೂ ಇವೆ. ಡಾ. ಚಿನ್ನಪ್ಪ ಗೌಡರು ಈ ಕುರಿತಾಗಿ ಹೇಳುತ್ತಾ ಬಹುಮುಖ ಪ್ರತಿಭೆಯನ್ನು ಹೊಂದಿರುವ ಗೋಪಾಲ ನಾಯ್ಕರದ್ದು 'ಮಹಾಕವಿ ಪ್ರತಿಭೆ' ಎನ್ನದೆ ಬೇರೆ ದಾರಿಯಿಲ್ಲ ಎಂದಿದ್ದಾರೆ (ಸಂಸ್ಕೃತಿ ಸಿರಿ, ಪುಟ 32).

ಗೋಪಾಲ ನಾಯ್ಕರ ಇತರ ವಿವರಗಳು

ಸಿರಿಕಾವ್ಯದಂತೆ ಗೋಪಾಲ ನಾಯ್ಕರು ಕೋಟಿ ಚೆನ್ನಯ ಸಂಧಿಯನ್ನೂ ಹಲವು ಗಂಟೆಗಳ ಕಾಲ ಹಾಡಿದ್ದಾರೆ. ಈ ಸಂಧಿಯನ್ನು ಕಲಿತದ್ದು ಸೇಸಮ್ಮ ಎನ್ನುವ ಮಹಿಳೆಯಿಂದ. ಇವರ ಜೊತೆಗೇ ಈ ಸಂಧಿಗಳನ್ನು ಪೂರ್ತಿಯಾಗಿ ಹಾಡಿರುವುದನ್ನು ಬಿಟ್ಟರೆ ಬೇರೆ ಸಂದರ್ಭಗಳಲ್ಲಿ ಹಾಡಿದ್ದಿಲ್ಲ. ಅನಂತರ ಇವರ ತಲೆಯಲ್ಲಿ ಸಿರಿ ಕಾವ್ಯ ಹಾಗೂ ಆರಾಧನೆಗಳನ್ನು ಕುರಿತ ಮಾಹಿತಿಗಳ ಬಗೆಗೇ ಆಸಕ್ತಿ ಹೆಚ್ಚಾದುದರಿಂದ ಅದನ್ನೇ ಹೆಚ್ಚು ಮುಂದುವರಿದುಕೊಂಡು ಹೋದರು. ಕೋಟಿ ಚೆನ್ನಯ ಸಂಧಿಯ ಉಪಯೋಗ ಕಡಿಮೆ ಆಯಿತು. ಸಿರಿ ಸಂಧಿಯನ್ನು ಗೋಪಾಲ ನಾಯ್ಕರು ಮೊದಲು ಕಲಿತದ್ದು ಸೋಮಯಣ್ಣ ಎನ್ನುವವರಿಂದ.

ಬಹಳ ವರ್ಷಗಳ ಹಿಂದೆ ಕಲಿತಂಥ ಈ ಸಂಧಿಗಳನ್ನು ನೀವು ಇಂದಿಗೂ ನೆನಪಿಟ್ಟುಕೊಂಡು ಇಷ್ಟು ಗಂಟೆಗಳ ಕಾಲಾವಧಿ ಹೇಗೆ ಹಾಡುತ್ತೀರಿ ಎಂದು ಕೇಳಿದಾಗ ಗೋಪಾಲ ನಾಯ್ಕರ ಉತ್ತರ ಅದು ಹೇಗೆ ಎಂಬುದೇ ತಿಳಿಯದು. ನೀವು ಮೊನ್ನೆ ಬಂದು ಈ ಸಂಧಿಗಳನ್ನು ದಾಖಲಾತಿಗೆ ಹೇಳಬೇಕೆಂದು ಕೇಳಿದಾಗ ನನ್ನ ಹೃದಯದಲ್ಲಿ ಆಗಲೇ ಜಿಮು ಜಿಮು ಆಗಲು ಪ್ರಾರಂಭವಾಯಿತು. ಆದರೆ ಆ ಮಂಜುನಾಥನೂ, ಲೋಕನಾಥನೂ ಇದ್ದರೆ ಅವರ ದಯೆಯಿಂದ ಸರಿಯಾಗಿ ಹೋದೀತೆಂದು ಪ್ರಾರ್ಥಿಸಿದೆ. ಹಾಗೇ ಆಯಿತು. ಕೆಲವೊಂದು ಕಡೆಗಳಲ್ಲಿ ಸ್ವಲ್ಪ ನಾಲಿಗೆ ತಡವರಿಸಿರಬಹುದು. ಆದರೆ ಉಳಿದಂತೆ ಏನೂ ತೊಂದರೆಯಿಲ್ಲದೆ ಒಂದೇ ಸವನೇ ಸಂಧಿಯನ್ನು ನನ್ನ ಯೋಚನೆಗಳು ಎತ್ತಿ ಕೊಡುತ್ತಿದ್ದವು. ನಾನು ಹೇಳುವುದೇನೆಂದರೆ ಸಂಧಿಯನ್ನು ಹೇಳುತ್ತಾ ಹೋದಂತೆ ಅದು ಸುರುಳಿಯಂತೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ ಎಂಬುದು. ಆದರೆ ಇಡೀ ಸಂಧಿಯ ಕಥಾನಕ ನೆನಪಲ್ಲಿರಬೇಕಾಗುತ್ತದೆ. ನಾವು ಹಾಡಲು ಕುಳಿತುಕೊಳ್ಳುವಾಗಲೇ ಒಂದು ಕಡೆ ಅಲ್ಲ ಇಪ್ಪತ್ತೈದು ದಿಕ್ಕಿನಿಂದ ಆಲೋಚಿಸುತ್ತಿರಬೇಕು. ಈ ಪ್ರಸಂಗದ ನಂತರ ಇದು ಬರುತ್ತದೆ, ಆ ನಂತರ ಇದು ಬರಬೇಕು. ಹೀಗೆ ಒಂದು ಆಲೋಚನೆ ಬೇಕಾಗುತ್ತದೆ.

ಈ ಸಂಧಿಗಳನ್ನು ಹಾಡುವಾಗ ನೆನಪಲ್ಲಿಟ್ಟುಕೊಳ್ಳಬೇಕಾದುದು ಸಂಧಿಯ ಕತೆಯನ್ನೋ ಅಥವಾ ವಿವರಗಳನ್ನೋ ಎಂದು ಕೇಳಿದಾಗ ಎರಡೂ ನೆನಪಲ್ಲಿ ಬೇಕಾಗುತ್ತದೆ ಎಂದರು. ಈ ಸಂಧಿಯಲ್ಲಿ ಬರುವ ಬೇರೆ ಬೇರೆ ವಿವರಗಳನ್ನು ಕುರಿತು ಹಾಡುವಾಗ ಬೇರೆ ಬೇರೆ ಸಂಧಿಗಳಲ್ಲಿ ಬರುವ ವಿವರಗಳು ಒಟ್ಟಿಗಿದ್ದರೆ ಹಾಡುವಾಗ ಹೆಕ್ಕಿಕೊಳ್ಳಲು ಸುಲಭವಾಗುತ್ತದೆಯೇ ಎಂದು ಚಿನ್ನಪ್ಪ ಗೌಡರನ್ನು ಕೇಳಿದಾಗ ಹಾಗೇನಿಲ್ಲ ಇದರ ವಿವರಗಳು ಇದಕ್ಕೆ, ಅದರ ವಿವರಗಳು ಅದಕ್ಕೆ ಎಂದರು. ಒಂದು ಸಂಧಿಯನ್ನು ಹಾಡುವಾಗ ಇನ್ನೊಂದರ ಬಗೆಗೆ ಆಲೋಚನೆ ಮಾಡಿದರೆ ಇದು ಮುಂದೆ ಹೋಗುವುದಿಲ್ಲ ಎಂದರು. ಈಗ ಒಬ್ಬ ಅತಿಥಿ ಬಂದಾಗ ಏನು ಮಾಡಬೇಕೆಂಬುದು ಸಿದ್ಧವಾದ ಮಾದರಿಯಲ್ಲೇ ಇದೆಯಲ್ಲ ಹಾಗೇ ಹಾಡಬಹುದೇ? ಉದಾಹರಣೆಗೆ ಗಿಂಡ್ಯೆಯಲ್ಲಿ ನೀರು ಕೊಟ್ಟರು, ತಟ್ಟೆಯಲ್ಲಿ ಕಾಯಿಪೂಳು ಕೊಟ್ಟರು ಇತ್ಯಾದಿ ಸಾಧಾರಣ ಎಲ್ಲ ಪಠ್ಯಗಳಲ್ಲಿ ಒಂದೇ ರೀತಿ ಇದೆ ಅಲ್ವ ಎಂದಾಗ ಗೋಪಾಲ ನಾಯ್ಕರು 'ಆ ಕತೆನ್ ನಮೊ ಆಲೋಚನೆ ಮಲ್ಪುವತ್ತೊ ಐತ್ತ ಉಲಯಿಡ್ ಇನಿ ಬತ್ತಿ ಬಿನ್ನಗ್ ದಾಯಿತ್ತ ಕೊರ್ಪುನಾ. ಕುಲ್ಯರ ಮಣೆ ಕೊರೊಡು. ಐಡ್ದ್ ಬುಕ್ಕೊ ನೀರ್ ಕೊರೊಡು. ಮಣೆ ಕೊರಿ ಬೊಕ್ಕೊ ನೀರ್ ಕೊರೊಡುಂದೆ ಅರ್ತೊ ಅತ್ತ ಅಲ್ಪ. ಅಯಿಡ್ದ್ ಬೊಕ್ಕೊ ಒಣಸ್. ಒಣಸ್ ಅಯಿ ಬುಕ್ಕೊ ಬಚ್ಚಿರೆಪೂಳು ಕೊರೊಡುಂದೆ ಪಣ್ಪುನೆ. ಇಂದೆಕ್ ಅರ್ತೊ ಉಂಡು ತೂಲೆ.' (ಅದನ್ನು ನಾವು ಸಂಧಿ ಹೇಳುತ್ತಾ ಹೋಗುವಾಗಲೇ ಆಲೋಚಿಸುತ್ತಾ ಹೋಗಬೇಕು. ಬಂದ ಅತಿಥಿಗೆ ಏನು ಕೊಡುವುದು. ಮೊದಲು ಕುಳಿತುಕೊಳ್ಳಲು ಮಣೆ ಕೊಡಬೇಕು. ಮಣೆ ಕೊಟ್ಟ ಅನಂತರ ನೀರು ಕೊಡಬೇಕೆಂದೇ ಅರ್ಥ. ಅನಂತರ ಊಟ, ಊಟವಾದ ಮೇಲೆ ಎಲೆಅಡಿಕೆ ಕೊಡಬೇಕೆಂದೇ ಅರ್ಥ. ಇದು ಸರಿಯಾದ ಅರ್ಥದಲ್ಲಿ ಬರುತ್ತದೆ ನೋಡಿ.)

ಚಿನ್ನಪ್ಪ ಗೌಡ : ಅವು ಸಹಜವಾದ್ ಬರ್ಪುಂಡು ಈರೆಗ್ (ಅದು ಸಹಜವಾಗಿ ಬರುತ್ತದೆ ನಿಮಗೆ)

ಗೋಪಾಲ ನಾಯ್ಕ್ : ಬರ್ಪುಂಡು ಅವು ಗೊತ್ತಿಪ್ಪುಂಡು. ಆತ್ ಇದ್ದಿಂಡ ಕುಲ್ಯರ ಬಲ್ಲಿ ತೂಲೆ. ಪಣಿಯೆರೆ ಬಲ್ಲಿ.

(ಸಹಜವಾಗಿ ಬರುತ್ತದೆ. ಅಷ್ಟು ಬಾರದಿದ್ದರೆ ಹಾಡಲು ಕುಳಿತುಕೊಳ್ಳಬಾರದು).

ಸೇಸಮ್ಮ ಅವರ ಜೊತೆಗೆ ನೀವು ಸಂಧಿಯನ್ನು ಕಲಿತ ವಿಧಾನ ಹೇಗೆ ಎಂದು ಕೇಳಿದಾಗ ಗೋಪಾಲನಾಯ್ಕರು 'ಸೇಸಮ್ಮಗ್ ಆಲೆಗ್ ಜೋಕುಲಿದ್ಯಾಂಡ್. ಅಪಗ ಯಾನ್‌ಲ ಕೊಂಡಟೊದ ಜೋಕುಲ್ಲೆಕೊ ಇತ್ತೆ. ಆಲೆಗ್‌ಲ ಜೋಕುಲಿದ್ಯಂದ್‌ನಾಲತ್ತ. ಯಾನ್ ನೇಜಿದ ಕಂಡೊಡು ಇಪ್ಪುನಗ ಎಂಕುಲು ಎಲ್ಯೆಡೇ ಬೆನಿಯೆರೆ ಪೋವೊಡು. ಕಂಡೊ ಇದ್ದಿ ಎಂಕ್ಲೆಡ. ಬೆಂದ್‌ದೆ ತಿಂದ್‌ದ್ ಆವೊಡು. ಮಾತೆರ್ಲೆಕೊ ನೇಜಿ ದೆಪ್ಪಿ ತಾಕತ್ತ್ ಎನಡ ಇತ್ತ್‌ಜಿ. ಸೇಸಮ್ಮ ಪಣ್ಪಿ ಪೊಣ್ಣು ಎಡ್ಡೆ ದೆತ್ತೊಂದು ಉಲ್ಲಾಲ್. ಆಲ್ ಪೂಜಾರ್ತಿ. ಆಲ್ ಒಲ್ಪ ನೇಜಿ ದೆಪ್ಪುವಲ್ ಅಲ್ಪ ಯಾನ್ ನೇಜಿಗ್ ಬಗ್ಗುನ. ಎನನ್

ಎಡ್ಡೆ ಮಲ್ತೊಂದು ಆಲ್ ನೇಜಿ ರಡ್ಡ್ ಕೈಟ್ಟ್ ದೆತ್ತ್‌ದ್ ನೇಜಿ ಪಾಡೊಂದು ಪೋವೊಂದುಲ್ಲಲ್. ಸಂದಿಲೆಡ್ ಆಲೆಗ್ ಸಾದರ್ನೊ ಮಾತ ಸಂದಿಲಾ ಬರ್ಪುಂಡು. ಆಲೆನ ಕಂಡನ್ಯಗ್‌ಲಾ ಬರ್ಪುಂಡು. ಬುಕೊ ಆಲೆನ ಪಲೆ ಕೋಟಿ ಚೆನ್ನಯೆರೆಗ್ ಮಾನ್ಯೆರಾದ್ ಬೇತೆ ಬೇತೆ ಕಡೆಟ್ ಉಂತೊಂದು ಇತ್ತೆರ್‌ಗೆ. ಅಂಚ ಅವುಲಾ ಮಂತಾ ಆಲೆಗ್ ಒಂತೆ ಜಾಸ್ತಿ ಉಂಡು. ಈ ಬೈದ್ದೆರ್ಲೆ ಸಂದಿ, ಈಸ್ವರನ ಸಂದಿ ಪನ್ಪುನೆನ್ ಕೇನುನೆ ಪಂಡ ಎಂಕ್‌ಲಾ ಬಾರಿ ಉಲ್ಲಾಸೊ. ನೇಜಿ ದೆಪ್ಪುನ ಎಂಕ್ ದನಿಕ್ಕೆ ಆಪುಜಿ ಅಪಗ. ಈ ಸಂದಿಲೆನ್ ಕೇಣುನಲ ಪ್ರೀತಿ, ಸಂತೊಸೊ, ಉಲ್ಲಾಸೊ ಆಪೆದ್‌ಂಡ್. ಅಂಚ ನೇಜಿಗ್ ಜತ್ತಿ ಪೆಟ್ಟ್‌ಗ್ ಪಣ್ಪುನ ಸೇಸಮ್ಮಕ್ಕ ಸಂದಿ ಪಣ್‌ಂದ್. ಒಯಿನ್ ಪನೊಡು, ಹಾಂ ಈಸ್ವರ ಸಂದಿ ಪಣ್. ಮನದ್ದನಿ ಬುಕೊಂಜಿ ಕಂಡೊಗ್ ಪೋಪುನೆ. ಆಲ್ ಪೋಪುನಾಡೆಗ್ ಏನ್‌ಲಾ ಪೋಪುನೆ. ಹಾಂ ಸೇಸಮ್ಮಕ್ಕ ಇನಿ ಬಂಟೆರೆ ಸಂದಿ (ಬೈದೆರ್ಲೆ ಸಂದಿ) ಪಣ್. ಆನಿ ಬೈದ್ದೆರ್ಲೆ ಸಂದಿ ಪಣ್ಪಲ್. (ನನಗೆ ಕೋಟಿ ಚೆನ್ನಯ ಸಂಧಿಯನ್ನು ಕಲಿಸಿದ ಸೇಸಮ್ಮ ಅವರಿಗೆ ಮಕ್ಕಳಿರಲಿಲ್ಲ. ಚಿಕ್ಕಂದಿನಲ್ಲಿ ನಾನೂ ತುಂಬ ಕೊಂಡಾಟದ ಮಗುವಾಗಿದ್ದೆ. ನಾವು ತುಂಬ ಬಡವರಾಗಿದ್ದ ಕಾರಣ ಚಿಕ್ಕಂದಿನಲ್ಲೇ ಕೂಲಿ ಕೆಲಸಕ್ಕೆ ಹೋಗಬೇಕಾಗಿತ್ತು. ನೇಜಿ ಕೆಲಸಕ್ಕೆ ಹೋಗುತ್ತಿದ್ದರೂ ಎಲ್ಲರಂತೆ ನೇಜಿ ತೆಗೆಯುವ ತಾಕತ್ತು ನನ್ನಲ್ಲಿ ಆಗ ಇರಲಿಲ್ಲ. ಹೀಗಾಗಿ ಸೇಸಮ್ಮ ಎಲ್ಲಿ ತೆಗೆಯುತ್ತಾಳೋ ಅಲ್ಲಿ ಹೋಗಿ ನಾನು ನೇಜಿಗೆ ಬಗ್ಗುವುದು. ನನ್ನಲ್ಲಿ ಪ್ರೀತಿ ತೋರುತ್ತಾ ಅವಳು ಎರಡು ಕೈಯಲ್ಲಿ ಪಕ್ಕಪಕ್ಕನೆ ನೇಜಿ ತೆಗೆದುಕೊಂಡು ಹೋಗುತ್ತಿದ್ದಳು. ಸಂಧಿಗಳಲ್ಲಿ ಸಾಧಾರಣ ಎಲ್ಲ ಸಂಧಿಗಳು ಅವಳಿಗೆ ಬರುತ್ತದೆ. ಅವಳ ಗಂಡನಿಗೂ ಬರುತ್ತಿತ್ತು. ಇವಳ ಅಣ್ಣ ಕೋಟಿಚೆನ್ನಯರಲ್ಲಿ ಪಾತ್ರಿಯಾಗಿ ಬೇರೆ ಬೇರೆ ಕಡೆ ನಿಲ್ಲುತ್ತಿದ್ದನಂತೆ. ಈ ಹಿನ್ನೆಲೆಯೂ ಅವರಿಗಿದೆ. ಬೈದೆರ್ಲೆ ಸಂಧಿ, ಈಶ್ವರ ಸಂಧಿ ಕೇಳುವುದೆಂದರೆ ನನಗೂ ಬಹಳ ಆಸಕ್ತಿ. ನೇಜಿ ತೆಗೆಯುವುದು ಕಷ್ಟ ಅಂತ ಅನಿಸುತ್ತಿರಲಿಲ್ಲ ಆಗ. ಅದನ್ನು ಕೇಳುವ ಸಂತೋಷ, ಉಲ್ಲಾಸ ಬೇರೆಯೇ. ಹೀಗೆ ನೇಜಿಗೆ ಇಳಿದ ಕೂಡಲೇ ಹೇಳುವುದು ಸೇಸಮ್ಮ ಸಂಧಿ ಹೇಳು ಎಂದು. ಇವತ್ತು ಈಶ್ವರಸಂಧಿ ಹೇಳು. ಮರುದಿನ ಇನ್ನೊಂದು ಗದ್ದೆಗೆ ಹೋಗುವುದು. ಅವಳು ಹೋಗುವಲ್ಲಿಗೆ ನಾನು ಹೋಗುವುದು. ಇವತ್ತು ಬಂಟೆರೆ ಸಂಧಿ ಹೇಳು ಎನ್ನುವುದು. ಬೈದೆರ್ಲೆ ಸಂಧಿ ಹೇಳುತ್ತಿದ್ದಳು).

ಚಿನ್ನಪ್ಪ ಗೌಡ : ಆಲ್ ಪನ್ನಗ ಈರ್ ಬಜೀ ಕೇಣ್‌ನೆ ಮಾಂತ್ರೊ (ಅವಳು ಹೇಳುವಾಗ ನೀವು ಬರೇ ಕೇಳುವುದು ಮಾತ್ರ).

ಗೋಪಾಲ ನಾಯ್ಕ್ : ಇದ್ದಿ, ಬುಕೊ ಬುಕೊ ಏನ್‌ಲಾ ಪಣ್ಪೆದೆ. ಆಂಡ ಆಲೆನ ಸೊರೊ ಒಂಜಿ ನಮುನೆ ಇಪ್ಪುಂಡು. ಎನ್ನ ಸೊರೊ ಒಂಜಿ ನಮುನೆ ಇಪ್ಪುಂಡು.

(ಇಲ್ಲ, ಮತ್ತೆ ಮತ್ತೆ ನಾನೂ ಹೇಳುತ್ತಿದ್ದೆ. ಆದರೆ ಹೇಳುವ ಸ್ವರಗಳಲ್ಲಿ ನನಗೂ ಅವಳಿಗೂ ವ್ಯತ್ಯಾಸ ಇತ್ತು)

ಚಿನ್ನಪ್ಪ ಗೌಡ : ಆಲ್ ಪನ್ನೆನ್ ಈರ್ ಪಿರ ಪಣ್ಪುನೆ ಅಂಚಡೊ (ಅವಳು

ಹೇಳಿದ್ದನ್ನು ನೀವು ಪುನರಾವರ್ತನೆ ಮಾಡುವುದು ಹಾಗೆಯೋ?)

ಗೋಪಾಲ ನಾಯ್ಕ್ : ತರ್ತ್‌ಂಡ ಆಲ್ ಪಣ್ಪಲ್. ಅಲ್ಪ ಅವು ಬುಡ್ನ ಆಯಿಜಿ, ಆನಿ ಪಣ್ಬುಜಲ್. ಬುಕೊಂಜಿ ದಿನೊಟ್ಟು ಪಣ್ಪಲ್. ಐನ್ ಬುಡಿಯ, ಈ ಐನ್ ಇಂಚಿತ್ತಿನಾಡೆ ಕೊಂಡ್ರೊಡುಂದು ಪಣ್ಪಲ್. ಅಯಿನ್ ನೆನೆಪು ದೀಡೊಂಡ ಆಂಡ್. ನೆಂಪು ಒರಿಪ್ಪೇದ್‌ಂಡ್ ಆ ಪೊರ್ತುಗು.

(ತಪ್ಪಿದರೆ ಅವಳು ಹೇಳುತ್ತಿದ್ದಳು. ಅಂದು ಹೇಳುತ್ತಿರಲಿಲ್ಲ. ಇನ್ನೊಂದು ದಿನ ಹೇಳುತ್ತಿದ್ದಳು. ನೀನು ಈ ಭಾಗವನ್ನು ಬಿಟ್ಟೆ. ಅದನ್ನು ಇಂಥ ಕಡೆ ತರಬೇಕೆಂದು ಹೇಳುತ್ತಿದ್ದಳು. ಹಾಗೆ ಹೇಳಿದ್ದು ನೆನಪಲ್ಲಿ ಉಳಿಯುತ್ತಿತ್ತು.)

ಹೀಗೆ ಸೇಸಮ್ಮನ ಜೊತೆಗೆ ಇಡೀ ಸಂಧಿಯನ್ನು ಆ ಕಾಲದಲ್ಲಿ ಒಂದುಬಾರಿ ಮಾತ್ರ ಹೇಳಿರಬಹುದು ಅಷ್ಟೆ ಒಂದೇ ಕೂರಿನಲ್ಲಿ ಹೇಳಿದ್ದಲ್ಲ. ಬೇರೆ ಬೇರೆ ಸಂದರ್ಭಗಳಲ್ಲಿ ಹೇಳಿರಬಹುದಷ್ಟೆ. ಸಾಮಾನ್ಯವಾಗಿ ಬೈದೆರ್ಲೆ ಸಂಧಿಯನ್ನು ಹಾಡುವವರು ಗಂಡಸರು ಮಾತ್ರ. ಹೆಂಗಸರು ಹಾಡುವುದು ಕಡಿಮೆ. ಸಿರಿ ಸಂಧಿಯನ್ನಾದರೆ ಹೆಚ್ಚಾಗಿ ಹೆಂಗಸರೂ ಹಾಡುತ್ತಾರೆ. ಗಂಡಸರೂ ಸಮಾನವಾಗಿ ಹಾಡುತ್ತಾರೆ. ಈ ಬೈದೆರ್ಲೆ ಸಂಧಿಯನ್ನು ಗಂಡಸರು ಹೆಚ್ಚಿಗೆ ಯಾಕೆ ಹೇಳುತ್ತಾರೆಂದರೆ ರಾತ್ರಿ ದಾರಿಯಲ್ಲೆ ಹೋಗುವಾಗ ಈ ಸಂಧಿಯನ್ನು ಹೇಳುತ್ತಾ ಹೋದರೆ ಪ್ರೇತಗಳ ಬಾಧೆ ಹತ್ತಿರ ಬರುವುದಿಲ್ಲ ಎಂಬ ನಂಬಿಕೆಯೂ ಇದೆ. ಅದಕ್ಕೆ ಅಂಥ ಒಂದು ಶಕ್ತಿ ಇದೆ. ಈ ಸಂಧಿಗಳನ್ನು ಕಲಿಸುವುದು ಎನ್ನುವ ಕ್ರಮ ಇಲ್ಲ. ನೇಜಿಯ ಗದ್ದೆಯಲ್ಲಿ ಹೇಳುತ್ತಾರೆ. ಅದನ್ನು ಕಿವಿಕೊಟ್ಟು ಕೇಳಿ ಕಲಿಯುವುದು ಅವನವನ ಜ್ಞಾನ ಶಕ್ತಿಗೆ ಬಿಟ್ಟದ್ದು ಎನ್ನುತ್ತಾರೆ.

ಗೋಪಾಲ ನಾಯ್ಕರು ತಮಗೆ ಮೊದಲ ಬಾರಿಗೆ ದರ್ಶನಾವೇಶ ಆರಂಭವಾದುದರ ಬಗೆಗೆ ಹೀಗೆ ಹೇಳುತ್ತಾರೆ. 'ನಮ್ಮ ಮನೆಯ ಸಮೀಪ ಕುಪ್ಪೆಟ್ಯಾರ್ ಸಂಕ ಇದೆ. ಅಲ್ಲಿ ಅಣ್ಣು ಹಾಗೂ ಮತ್ತೊಬ್ಬನ ಹೆಸರು ಮರೆತಿದೆ, ನಾಯ್ಕ ಜನಾಂಗದ ಅವಳಿ ಯುವಕರಿದ್ದರು. ಈಗ ಅವರು ತೀರಿಕೊಂಡಿದ್ದಾರೆ. ಅವರೂ ನಾನೂ ಮುಂಡಾಜೆಯಲ್ಲಿ ಒಬ್ಬರ ಮನೆಗೆ ತೋಟದ ಕೆಲಸಕ್ಕೆ ಹೋಗುತ್ತಿದ್ದೆವು. ಒಂದು ದಿನ ತೋಟದಲ್ಲಿ ಬಿದಿರು ಕಡಿಯುವ ಕೆಲಸ ಮಾಡುತ್ತಿದ್ದಾಗ ಆ ಕಾಲದಲ್ಲಿ ತಮಾಷೆ ಎಲ್ಲ ಸ್ವಲ್ಪ ಜಾಸ್ತಿ ಇತ್ತು. ಬಿದಿರು ಕಡಿಯುತ್ತಿರುವಾಗ ಬೈದೆರ್ಲೆ ಸಂಧಿ ಹೇಳುವುದು, ಯಕ್ಷಗಾನದ ಅರ್ಥ ಹೇಳುವುದು ಇತ್ಯಾದಿ ಎಲ್ಲ ಮಾಡುತ್ತಿದ್ದೆವು. ಒಂದು ದಿನ ನಾನು ಬೈದೆರ್ಲೆ ಸಂಧಿ ಹಾಡುತ್ತಾ ಬಿದಿರು ಕಡಿಯುತ್ತಿದ್ದೆ. ಅವರೂ ಬೇರೆಬೇರೆ ಸಂಧಿಗಳನ್ನು ಹಾಡುತ್ತಿದ್ದರು. ಹೀಗೆ ಹಾಡುತ್ತಿರುವಾಗ ನನ್ನ ಕಾಲಿನ ಮೀನ ಖಂಡ ನಡುಗಲು ಆರಂಭವಾಯಿತು. ಇದೇನು ಕರ್ಮ. ಬಹುಶಃ ದೀರ್ಘಾವಧಿ ಬಿದಿರಿನ ಗಂಟಲ್ಲಿ ಕಾಲಿರಿಸಿದ ಕಾರಣದಿಂದ ಇರಬಹುದೆಂದು ಭಾವಿಸಿದೆ. ಈ ಸಂದರ್ಭ ಅದನ್ನು ಅಷ್ಟಾಗಿ ಗಮನಕ್ಕೆ ತಂದುಕೊಳ್ಳಲಿಲ್ಲ. ಕೆಲಸದಿಂದ ಹಿಂತಿರುಗಿ ಮನೆಗೆ ಬಂದ ಅನಂತರವೂ ಸ್ನಾನಮಾಡಿ ಊಟಮಾಡಿ ಈ ಸಂಧಿ ಹೇಳುತ್ತಿರುವಾಗ ಅಂದೂ ದೇಹದ ಭಾಗ ನಡುಗಲು ಆರಂಭವಾಯಿತು.

ಮರುದಿವಸ ಹಾಡುವಾಗ ಮೈಯಲ್ಲಿ ಜಾಸ್ತಿ ನಡುಕ ಉಂಟಾಯಿತು. ಅಲ್ಲಿಗೆ ಬಿದಿರು ಕಡಿಯುವ ಕೆಲಸವೂ ಮುಕ್ತಾಯವಾಗುತ್ತಾ ಬಂತು. ಆದರೂ ನನ್ನ ದೇಹದಲ್ಲಿ ಮದ್ಯಪಾನ ಮಾಡಿದವನ ಹಾಗೆ ಒಂದು ಅಮಲು ಇರುವುದು ತಿಳಿಯಿತು. ಆದರೂ ಕೆಲಸ ಮಾಡುತ್ತಿದ್ದೆ. ಅಡಿಕೆ ಹೆಕ್ಕುವುದು, ಹಾಳೆ ಮಡಲು ಪೇರಿಸುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಿದ್ದೆ. ಮುಂಡಾಜೆಯಲ್ಲಿ ರಾಮಕೃಷ್ಣ ಭಟ್ರ ಒಂದು ಅಂಗಡಿ ಇತ್ತು. ಈಗಲೂ ಇದೆ. ಒಂದು ದಿನ ಆ ಅಂಗಡಿಯ ಕಿಟಿಕಿ ಹತ್ತಿರ ನಾನು ಕುಳಿತುಕೊಂಡಿದ್ದೆ, ಆ ಕಾಲದಲ್ಲಿ ಅಸ್ಪೃಶ್ಯತೆಯ ಆಚರಣೆ ಸ್ವಲ್ಪ ಹೆಚ್ಚಾಗಿ ಆಚರಣೆಯಲ್ಲಿದ್ದ ಕಾಲವದು. ಒಬ್ಬಳು ಮನ್ಸ ಜನಾಂಗದ ಹುಡುಗಿ ಬಂದು ಹೊರಗಡೆಯಿಂದ ಈ ಕಿಟಿಕಿಗೆ ಒರಗಿ ನಿಂತಿದ್ದಳು. ಅವಳ ತಾಯಿ ಬಂದವಳು ಈ ಮಾದೆರಿ ಬಿಳಲಿನ ಎಳತು ಬೆತ್ತ ಮಾಡಿಕೊಂಡು ಬಂದು ನೀನು ಇಲ್ಲಿ ನಿಂತಿದ್ದಿಯಾ ಎಂದು ಹೇಳಿ ರಪ್ಪನೆ ಅವಳಿಗೆ ಹೊಡೆದಳು. ಆ ಬೆತ್ತ ತುಂಡಾಗಿ ಒಂದು ತುಂಡು ನಾನು ಕುಳಿತಲ್ಲಿಗೆ ಬಂದು ನನ್ನ ಮೈಗೆ ಬಿತ್ತು. ಆಗಲೇ ನನಗೆ ಫಿಟ್ಸ್ ಆರಂಭವಾದಂತೆ ಆಯಿತು. ಕೂಡಲೇ ಹೊರಟುಹೋದೆ. ಆದರೆ ನನಗೆ ಬಿಡಾರಕ್ಕೆ ತಲಪಲು ಬಾರೀ ಕಷ್ಟವಾಯಿತು. ಯಾರನ್ನು ನೋಡಿದರೂ ಕಚ್ಚುವ, ತಿನ್ನುವ ಎನ್ನುವ ಪ್ರವೃತ್ತಿಯಂತೆ ಆಗುತ್ತಿತ್ತು. ಒಟ್ಟಾರೆಯಾಗಿ ಏನೆಲ್ಲ ಆಗಲು ಪ್ರಾರಂಭವಾಯಿತು. ಆಗ ನನ್ನ ಭಾವ, ಅಣ್ಣ ಎಲ್ಲ ಸೇರಿಕೊಂಡು ಅಲ್ಲೆ ಸಮೀಪದ ಸೊನ್ನು ಭಟ್ಟರಲ್ಲಿ ಪ್ರಶ್ನೆಯನ್ನು ಕೇಳಲು ಕರೆದುಕೊಂಡು ಹೋದರು. ಅವರು ಪ್ರಶ್ನೆ ಇಡುವಾಗ ಅವರ ಕೌಡಿಗೆ ಕಾಯಿಗಳಿಗೆ ಕೈ ಹಾಕಿ ಎಳೆದೆ. ಆಗ ಅವರು ಗದರಿಸಿ ಸುಮ್ಮನೆ ಕುಳಿತುಕೊಳ್ಳಬೇಕು ಎಂದರು. ಕೊನೆಗೆ ಮುಂಡಾಜೆಯ ಪರಶುರಾಮ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ತೀರ್ಥಸ್ನಾನ ಮಾಡಿಸಿ ಕರೆದುಕೊಂಡು ಹೋಗಿ. ನಿಮ್ಮ ಭೂತಗಳ ತೊಂದರೆ ಇದ್ದರೆ ಪರಿಹಾರವಾದೀತು ಎಂದರು. ಈ ಸಿರಿಯ ಕುಮಾರನಾಗಿ ದರ್ಶನ ಇರುವವರಿಗೆ ಈ ಕೋಟಿ ಚೆನ್ನಯ ಸಂಧಿ ಸ್ವಲ್ಪ ದೂರ.

ಆ ಕಾಲದಲ್ಲೇ ನನ್ನ ದೇಹದಲ್ಲಿ ಕುಮಾರನ ಸೂಕೆ ಇದ್ದಿರಬೇಕು. ಅದು ನನಗೇನೂ ಗೊತ್ತಾಗಲಿಲ್ಲ. ಅಲ್ಲಿಯವರೆಗೆ ದರ್ಶನ ಎನ್ನುವುದೇ ಇರಲಿಲ್ಲ. ಈ ಬೈದೆರ್ಲೆ ಸಂಧಿಯನ್ನೇ ಹಾಡುತ್ತಿರುವಾಗ ಇನ್ನು ಇದನ್ನೇ ಮುಂದೆಕೊಂಡು ಹೋಗುತ್ತಾನೆ ಎಂದು ಆಯಿತೋ ಏನೋ? ಅಲ್ಲಿಯವರೆಗೆ ಈ ಕುಮಾರನ ಕುರಿತಾಗಿ ನನಗೇನೋ ಗೊತ್ತಿರಲಿಲ್ಲ. ಅಲ್ಲಿಯವರೆಗೆ ನಾನು ಯಾವುದೇ ಸಿರಿ ಜಾತ್ರೆ ನೋಡಿರಲಿಲ್ಲ. ನಿಡ್ಗಲ್ಲಿನ ದೇವಸ್ಥಾನ ಎಲ್ಲ ವೃದ್ಧಿಯಾಗಿರಲಿಲ್ಲ. ಅಲ್ಲಿಯವರೆಗೆ ಕುಮಾರ ಯಾರೆಂಬುದೇ ಗೊತ್ತಿರಲಿಲ್ಲ. ಕುತ್ರೊಟ್ಟು ಆಲಡೆ, ಉರುಂಬಿದೊಟ್ಟು ಆಲಡೆ ಎಲ್ಲ ಇತ್ತೀಚೆಗೆ ಆದುದು. ನಂದಳಿಕೆ, ಜೇರಗುಡ್ಡೆ ಎಲ್ಲ ನಮಗೆ ದೂರ ಆಯಿತು. ಅಷ್ಟು ದೂರ ಹೋಗಿ ನೋಡುವ ಅವಕಾಶಗಳೆಲ್ಲ ತುಂಬ ಕಡಿಮೆ.

ಈ ಸಂಧಿಗಳನ್ನು ಹೇಳುವಾಗ ನೀವು ನಿಮ್ಮದೇ ಆದ ಕೆಲವು ವಿಚಾರಗಳನ್ನು ಸೇರಿಸಿರಬಹುದು. ಕೆಲವನ್ನು ಬಿಟ್ಟಿರಬಹುದು. ಯಾಕೆಂದರೆ ಸಂಧಿ ಚೆನ್ನಾಗಿ ಬರಬೇಕೆಂಬ

ಅಪೇಕ್ಷೆಯಿಂದ. ಹೀಗೆ ಇದು ಗೋಪಾಲ ನಾಯ್ಕರ ಕೊಡುಗೆ ಎಂಬ ರೀತಿಯಲ್ಲಿ ನೀವು ಯಾವುದನ್ನಾದರೂ ನಿಮ್ಮದೇ ಆದ ರೀತಿಯಲ್ಲಿ ಸೇರಿಸಿದ್ದು ಇದೆಯೇ ಎಂಬ ಪ್ರಶ್ನೆಗೆ ಕೋಟಿ ಚೆನ್ನಯ ಸಂಧಿಯಲ್ಲಿ ಕೆಲವು ವಿಚಾರಗಳು ಬಿಟ್ಟಿರಬಹುದೇ ವಿನಃ ನಾನು ಸೇರಿಸಿದ್ದು ಎಳ್ಳಿನ ಏಳು ಭಾಗದಷ್ಟು ಇಲ್ಲ. ಆದರೆ ಸಿರಿ ಸಂಧಿಯಲ್ಲಿ ನಾನು ಸೇರಿಸಿದ್ದು ಇದೆ. ಸಂಧಿಯ ಕೊನೆಯ ಭಾಗ ಅದು ನಾನೇ ಸೇರಿಸಿದ ವಿವರಗಳು. ಸೇರಿಸಿದ್ದನ್ನು ನಾನು ಸೇರಿಸಿದ್ದೇನೆ ಅಂತೇನೆ. ಬೇಕಾದವರು ಅದನ್ನು ಇಟ್ಟುಕೊಳ್ಳಬಹುದು. ಬೇಡದವರು ತೆಗೆಯಬಹುದು. ದೇವರ ವಿಚಾರ ಇರಲಿ ಎಂದು ನಾನು ಸೇರಿಸಿದ್ದೇನೆ ಅಷ್ಟೇ.

ಚೆನ್ನಪ್ಪ ಗೌಡ : ಇತ್ತೆ ಈರ್ ರಡ್ಡ್ ಸಂದಿ ಪಂಡರ್. ಕೋಟಿ ಚೆನ್ನಯ ಬುಕೊ ಸಿರಿ ಸಂದಿ. ರಡ್ಡ್‌ಲ ಪೊರ್ಲುಡೆ ಪಂಡರ್. ಈರ್ ಪನೊಡಿತ್ತೆ ಈ ರಡ್ಡೆಟ್ ಈರ್ ಎಚ್ಚ ಪ್ರೀತಿ ಮಲ್ಪುನ ಸಂದಿ ಒವು. (ನೀವೀಗ ಎರಡು ಸಂಧಿ ಹೇಳಿದಿರಿ, ಕೋಟಿ ಚೆನ್ನಯ ಮತ್ತು ಸಿರಿ. ನೀವೀಗ ಹೇಳಬೇಕು, ಇವೆರಡರಲ್ಲಿ ತುಂಬ ಪ್ರೀತಿ ಮಾಡುವ ಸಂಧಿ ಯಾವುದು?)

ಗೋಪಾಲ ನಾಯ್ಕ್ : ಎಚ್ಚ ಪ್ರೀತಿ ಮಲ್ಪುನ ಸಂದಿ ಇತ್ತೆ ಸಿರಿನವು. ಅವು ಎನ್ನ ಆತ್ಮ, ಎನ್ನ ಜೂವೊಕಲೆ. ಎನ್ನ ಇಲ್ಲಲ್ ಜೋಕುಲು ಒರಿಯೆ ಇತ್ತ್‌ಂಡಲಾ ಸೌಕ್ಯೆ ಇದ್ಯಂದಿತ್ತ್‌ಂಡಲಾ ಬುಡ್ದು ಪೋಪೆ.

(ಹೆಚ್ಚು ಪ್ರೀತಿ ಮಾಡುವ ಸಂಧಿ ಸಿರಿ ಸಂಧಿಯೇ. ಅದು ನನ್ನ ಆತ್ಮ, ನನ್ನ ಜೀವಕಲೆ. ನನ್ನ ಮನೆಯಲ್ಲಿ ಮಕ್ಕಳು ಒಬ್ಬರೇ ಇದ್ದರೂ, ಅಸೌಖ್ಯತೆಯಿಂದ ಇದ್ದರೂ ಅವರನ್ನು ಬಿಟ್ಟು ಸಿರಿಯ ಕೆಲಸ ಎಂದರೆ ಹೋಗುತ್ತೇನೆ.)

ಗೋಪಾಲ ನಾಯ್ಕರಿಗೆ ದೊರೆತ ಪ್ರಶಸ್ತಿಗಳು

ಮಾಚಾರು ಗೋಪಾಲ ನಾಯ್ಕರ ಅನನ್ಯ ಪ್ರತಿಭೆಯನ್ನು ಗುರುತಿಸಿ ಅವರಿಗೆ ಕರ್ನಾಟಕ ಸರಕಾರದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಹಾಗೂ ಕರ್ನಾಟಕ ಸರಕಾರ ಇವರ ಜಾನಪದವನ್ನು ಕುರಿತಾದ ಜೀವಮಾನದ ಸಾಧನೆಯನ್ನು ಗುರುತಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇದಲ್ಲದೆ ಧರ್ಮಸ್ಥಳದ ಧರ್ಮಾಧಿಕಾರಿಗಳಾಗಿರುವ ಪದ್ಮವಿಭೂಷಣ ಡಾ. ವೀರೇಂದ್ರ ಹೆಗ್ಗಡೆಯವರು ಗೋಪಾಲ ನಾಯ್ಕರನ್ನು ಧರ್ಮಸ್ಥಳ, ಉಜಿರೆ, ಬೆಳ್ತಂಗಡಿಗಳಲ್ಲಿ ನಡೆದ ಅನೇಕ ತುಳುವಿಗೆ ಸಂಬಂದಿಸಿಧ ಕಾರ್ಯಕ್ರಮಗಳಲ್ಲಿ ಸಮ್ಮಾನಿಸಿದ್ದಾರೆ.

ಗಿಡಿಕೆರೆ ರಾಮಕ್ಕ ಮುಗ್ಗೇರ್ತಿ

ಶ್ರೀಮತಿ ರಾಮಕ್ಕ ಮುಗ್ಗೇರ್ತಿಯವರು ತುಳುನಾಡಿನ ಹೆಸರಾಂತ ಪಾಡ್ದನ ಕವಿ ಹಾಗೂ ಗಾಯಕಿ. ಅವರು ಹುಟ್ಟಿದ್ದು ಬೆಳೆದದ್ದು ಮಂಗಳೂರು ಸಮೀಪದ ವಾಮಂಜೂರಿನಲ್ಲಿ. ಕರಾವಳಿಯ ಪರಿಶಿಷ್ಟ ಜನವರ್ಗಗಳಲ್ಲಿ ಒಂದಾದ ಮುಗ್ಗೇರ ಸಮುದಾಯಕ್ಕೆ ಸೇರಿದವರು ಅವರು. ಕೂಕ್ರ ಮುಗ್ಗೇರ ಹಾಗೂ ದುಗ್ಗಮ್ಮ ಅವರ ತಂದೆ ತಾಯಿಗಳು. ನಿರಕ್ಷರಿಯಾದ ಅವರು ಅಕ್ಷರಪಠ್ಯ ರಚಕರಲ್ಲವಾದರೂ ಮೂವತ್ತಕ್ಕೂ ಹೆಚ್ಚು ಸುದೀರ್ಘ ಪಾಡ್ದನ ಕಾವ್ಯಗಳನ್ನೂ ಹದಿನೈದಕ್ಕೂ ಹೆಚ್ಚು 'ಕಬಿತ'ಗಳನ್ನು ಮಾನಸಿಕ ಪಠ್ಯ ರೂಪದಲ್ಲಿ ತಮ್ಮಲ್ಲಿ ದಾಖಲಿಸಿಕೊಂಡವರು. ಕಟೀಲಿಗೆ ಸಮೀಪದ ಗಿಡಿಕೆರೆ ಮದುವೆ ಆಗಿ ಬಂದ ಊರು. 17ನೇ ವಯಸ್ಸಿಗೆ ಶ್ರೀ ಕಾಪೀರ ಮುಗ್ಗೇರರ ಜೊತೆ ರಾಮಕ್ಕನ ಮದುವೆ ನಡೆಯಿತು. ಮುಂದೆ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಆ ಊರಲ್ಲಿ ಪಾಡ್ದನ ಕಟ್ಟುವ, ಅದನ್ನು ನಾಟಿಗದ್ದೆಗಳಲ್ಲಿ ಹಾಡುವ ಕೆಲಸ ಅವರಿಂದ ನಡೆಯಿತು.

ರಾಮಕ್ಕ ಅವರಿಗೆ ಪಾಡ್ದನ ನಿರೂಪಣೆ ಬಾಯಿಪಾಠವಲ್ಲ. ಅದು ಪ್ರದರ್ಶನದ ಸಂದರ್ಭದಲ್ಲಿ ಮರುಸೃಷ್ಟಿಗೊಳ್ಳುವ ಕ್ರಿಯೆ. ಮದುವೆಯಾಗಿ ಗಂಡನ ಮನೆಗೆ ಬರುವ ಹೊತ್ತಿಗಾಗಲೇ ಅವರಿಗೆ ಪಾಡ್ದನ ಕಟ್ಟುವ ಕಲೆ ಕರಗತವಾಗಿತ್ತು. ಈ ಬಗೆಗೆ ಅವರು ನೀಡಿದ ವಿವರ ಹೀಗಿದೆ. 'ನನ್ನ ಅಜ್ಜಿ ಪಾಡ್ದನದ ಗೂಡು. ಅವರಿಗೆ ನಾನೆಂದರೆ ಭಾರಿ ಪ್ರೀತಿ. ಅವರು ರಾತ್ರೆ ಊಟವಾದ ಮೇಲೆ ನನ್ನನ್ನು ಅವರು ಮಲಗುವ ಚಾಪೆಯ ಮೇಲೆ ಕುಳ್ಳಿರಿಸಿಕೊಂಡು ಪಾಡ್ದನಗಳನ್ನು ಸ್ವರವೇರಿಸಿ ಹಾಡುತ್ತಿದ್ದರು. ನಾನು ಕಿವಿದೆರೆದು ಅವುಗಳನ್ನು ಕೇಳುತ್ತಿದ್ದೆ. ಆಗ ನನಗೆ ಸುಮಾರು ಐದು ವರ್ಷ ಇರಬಹುದು. ಮೊದಲಿಗೆ ನಾನು ಅವರು ಹೇಳುವ ಪಾಡ್ದನದೊಳಗಿನ ಕತೆಯ ಬಗ್ಗೆ ಮಾತ್ರ ಆಕರ್ಷಿತಳಾಗಿದ್ದೆ. ಅವರು ನಮ್ಮೂರ ನಾಟಿ ಗದ್ದೆಗಳಲ್ಲಿ ಕತೆ ಹೇಳುವುದಕ್ಕೆ ಹೋಗುತ್ತಿದ್ದರು. ನಾನು ಅವರೊಂದಿಗೆ ಹೋದವಳು ಗದ್ದೆ ಅಂಚುಗಳಲ್ಲಿ ಕುಳಿತು ಅವರು ನೇಜಿ ನೆಡುತ್ತಾ ಹಾಡುತ್ತಿದ್ದ ಪಾಡ್ದನಗಳನ್ನು ಕೇಳುತ್ತಿದ್ದೆ. ನನ್ನ ಅಜ್ಜಿ ಪಾಡ್ದನದ ಮೊದಲ ಸಾಲು ಹೇಳಿದಾಗ ಉಳಿದವರು ಅದನ್ನು ಪುನರಾವರ್ತಿಸುತ್ತಿದ್ದರು.

"ನಾನು ಒಬ್ಬಳೇ ಇದ್ದಾಗ ಕೇಳಿದ ಹಾಡುಗಳನ್ನು ನನ್ನಲ್ಲೇ ಗುನುಗುನುಸುತ್ತಿದ್ದೆ. ರಾತ್ರಿ ಹೊತ್ತು ಹಾಡಲು ಗದ್ದೆಯಲ್ಲಿ ಹೇಳಿದ ಪಾಡ್ದನವನ್ನೇ ಮತ್ತೆ ಹೇಳುವಂತೆ ಅಜ್ಜಿಯನ್ನು ಒತ್ತಾಯಿಸುತ್ತಿದ್ದೆ. ಇದರಿಂದ ಹಗಲು ಹೇಳಿದ ಕತೆಯ ವಸ್ತು, ಪಾತ್ರಗಳು ಹೆಸರುಗಳು ನನಗೆ ಖಚಿತವಾಗತೊಡಗಿದವು. ಒಬ್ಬಳೇ ಇದ್ದಾಗ ಒಂದೊಂದೇ ಸಾಲು ಗಳನ್ನು ಹೆಣೆಯತೊಡಗಿದೆ. ಆ ಕಾಲಕ್ಕೆ ನನಗೆ ವಯಸ್ಸು ಸುಮಾರು 10–15

ಆಗಿರಬಹುದು. ನಾನು ಅಜ್ಜಿಯೊಂದಿಗೆ ನನ್ನ ಮನೆಯ ಸಮೀಪದ ಗದ್ದೆಗಳಿಗೆ ನಾಟಿ ಕೆಲಸಕ್ಕೆ ಹೋಗತೊಡಗಿದೆ. ಅಲ್ಲಿ ಇತರ ಹೆಂಗಸರೊಂದಿಗೆ ಸ್ವರ ಎಳೆದು ಹಾಡತೊಡಗಿದೆ. ಕೆಲವೊಮ್ಮೆ ನನ್ನ ಅಜ್ಜಿ "ಮಗ ರಾಮಕ್ಕ, ನನಗೆ ದಣಿವಾಗುತ್ತಿದೆ. ನಾನು ಸುರು ಮಾಡಿದ ಪಾಡ್ದನವನ್ನು ಮುಂದುವರಿಸು" ಎಂದು ಹೇಳುವುದಿತ್ತು. ಆಗ ನಾನು ಪಾಡ್ದನವನ್ನು ಕಟ್ಟುತ್ತಾ ಹೋಗುತ್ತಿದ್ದೆ. ಗದ್ದೆಯಲ್ಲಿಳಿದು ಕೆಲಸ ಮಾಡುವ ಹೊತ್ತಿಗೆ ಬೇರೆಯವರು ಹಾಡುವ ಪಾಡ್ದನಗಳನ್ನು ಕೇಳುತ್ತಿದ್ದೆ. ಅವುಗಳಲ್ಲಿ ಒಳ್ಳೆಯ ಅಂಶಗಳನ್ನು ಹೆಕ್ಕಿಕೊಂಡು ನನ್ನ ಪಾಡ್ದನ ನಿರೂಪಣೆಯಲ್ಲಿ ಸೇರಿಸಿಕೊಳ್ಳುತ್ತಿದ್ದೆ."

"ಪಾಡ್ದನವೊಂದು ಇಷ್ಟೇ ಉದ್ದ ಎಂದು ಹೇಳಲಾಗದು. ಕಟ್ಟಿ ಹೇಳುವ ನಮಗೆ ಉಲ್ಲಾಸವಿದ್ದರೆ ಕತೆ ಬೆಳೆಯುತ್ತದೆ. ನಮ್ಮ ಜೊತೆ ಹಾಡುವವರಿಗೂ ಉಲ್ಲಾಸ ಇರಬೇಕು. ನಮ್ಮ ಜೊತೆಗಾತಿಯರಿಗೆ ಬೇಕಿಲ್ಲವಾದರೆ ಕತೆಯನ್ನು ಅಡಕಮಾಡುವುದು ನನಗೆ ಗೊತ್ತು. ಕೆಲವೊಮ್ಮೆ ನಾಟಿ ಮಾಡುವವರ ಸಂಖ್ಯೆ ಹೆಚ್ಚಿದ್ದರೆ ಕೆಲಸ ಬೇಗನೆ ಕೊನೆಗೊಳ್ಳು ತ್ತಿತ್ತು. ಆಗ ಪಾಡ್ದನದ ಕತೆಯನ್ನು ಸಂಕ್ಷಿಪ್ತಗೊಳಿವುದು ಅನಿವಾರ್ಯವಾಗುತ್ತಿತ್ತು."

ಮನೆಯಲ್ಲಿ ಮಕ್ಕಳ, ಬಂಧುಗಳ ಎದುರು ಹಾಡುವುದಕ್ಕೂ ಗದ್ದೆಗಳಲ್ಲಿ ನಾಟಿ ಮಾಡುತ್ತಾ ಪಾಡ್ದನ ಹಾಡುವುದಕ್ಕೂ ಇರುವ ವ್ಯತ್ಯಾಸವನ್ನು ಕುರಿತು ಕೇಳಿದಾಗ 'ನಾಟಿಗದ್ದೆಗಳಲ್ಲಿ ಹಲವರು ಮಂದಿ ಸಹವಂದಿಗರ ಜೊತೆ ಹಾಡುವುದೇ ಒಂದು ಗಮ್ಮತ್ತು. ಅಲ್ಲಿ ಉಲ್ಲಾಸ ಇರುತ್ತದೆ. ಕಥೆ ನಡೆಸುತ್ತಾ ಹೋಗುವಾಗ ಕೆಲಸದ ಶ್ರಮವೂ ಮರೆತು ಹೋಗುತ್ತದೆ. ಇಲ್ಲಿ ನಿಮಗಾಗಿ ಟೇಪ್ ರೆಕಾರ್ಡರ್ ಎದುರು ಹಾಡಿದಾಗ ಕಥೆಯ ವಿವರಗಳ ಕಡೆಗೇ ನನ್ನ ಧ್ಯಾನ. ಎಲ್ಲವನ್ನೂ ವಿವರವಾಗಿ ಸಾವಧಾನದಿಂದ ಕಟ್ಟುತ್ತಾ ಹೋಗುತ್ತೇನೆ. ಮಧ್ಯೆ ಮಧ್ಯೆ ಹಾಡುವುದನ್ನು ನಿಲ್ಲಿಸುವುದರಿಂದ ಮತ್ತೆ ಮುಂದುವರಿಸುವುದು ಸ್ವಲ್ಪ ತೊಡಕಾಗುವುದೂ ಹೌದು. ಆದರೆ ಅನೇಕ ವರ್ಷಗಳಿಂದ ಈ 'ಕಥೆ'ಯನ್ನು ನಾಟಿಗದ್ದೆಗಳಲ್ಲಿ ಹಾಡಿಕೊಂಡು ಬಂದ ನನಗೆ ಕಥೆಯ ಒಂದೊಂದು ವಿವರವೂ ಸ್ಪಷ್ಟವಾಗಿದೆ. ಅದನ್ನು ಪಾಡ್ದನ ದಾಟಿಗೆ ಹೊಂದಿಸಿ ಕಟ್ಟುತ್ತಾ ಹೊಗುತ್ತೇನೆ.

ರಾಮಕ್ಕ ಮುಗ್ಗೇರ್ತಿ ತಾನು ಪಾಡ್ದನಗಳನ್ನು ಕಟ್ಟುವ ಬಗ್ಗೆ ಅತೀವ ಆತ್ಮವಿಶ್ವಾಸ. ನನ್ನೊಂದಿಗೆ ಮಾತನಾಡುತ್ತ ನನಗೆ ನಿಮ್ಮ ಯಾವುದೇ ಸಿನೆಮಾ ಕತೆಯನ್ನು ಕೊಡಿ. ನಿಮಗೆ ಸ್ವಲ್ಪ ಹೊತ್ತಲ್ಲೇ ನಾನು ಪಾಡ್ದನ ರೂಪದಲ್ಲಿ ಕಟ್ಟಿ ಹೇಳುತ್ತೇನೆ ಎನ್ನುತ್ತಾರೆ. ಇದು ಪಾಡ್ದನ ಕಾವ್ಯ ಸಂಯೋಜನೆ ಪ್ರಕ್ರಿಯೆ ಮೇಲೆ ಹೊಸ ಬೆಳಕು ಚೆಲ್ಲುತ್ತದೆ.

ರಾಮಕ್ಕ ನಾಟಗದ್ದೆಗಳಲ್ಲಿ ಸಿರಿ ಪಾಡ್ದನವನ್ನು ನೂರಾರು ಬಾರಿ ಹಾಡಿರಬಹುದು. ಆದರೆ ಕಾವ್ಯ ರೂಪದಲ್ಲಿ ಸಮಗ್ರವಾಗಿ ದಾಖಲು ಮಾಡಿಕೊಂಡುದು ಇದೇ ಮೊದಲ ಬಾರಿ.

ರಾಮಕ್ಕಗೆ ಈಗ ಸುಮರು 70ರ ವಯಸ್ಸು. ಮಕ್ಕಳು ದೊಡ್ಡವರು ಆಗಿದ್ದರೂ ಮನೆಯಲ್ಲಿ ಇದ್ದರೆ ಅಡುಗೆಯಲ್ಲಿಯ ನಿರ್ವಹಣೆ ಇವರದ್ದೇ. ಇವತ್ತಿಗೂ ಅವರು ನಾಟಿಗದ್ದೆಗೆ ನಾಟಿ ಕೆಲಸಕ್ಕೆ ಹೋಗುತ್ತಾರೆ. ಅದು ಅವರಿಗೆ ಆದಾಯ ಮೂಲವೂ

ಹೌದು. ಮೇಲಾಗಿ ಪಾಡ್ದನ ಕಟ್ಟಿ ಹಾಡುವುದರಲ್ಲಿ ಒಂದು ಸಂತೋಷ ಇದೆ ಎನ್ನುತ್ತಾರೆ ಅವರು. ಪಾಡ್ದನ ಕೇಳುವವರಿದ್ದರೆ ಮನೆಯಲ್ಲಿ ಪಾಡ್ದನ ಹಾಡುವುದುಂಟು. ಇಂದಿನ ಹೊಸ ತಲೆಮಾರಿಗೆ ಪಾಡ್ದನವನ್ನು ಕೇಳುವ ಕಲಿಯುವ ಉತ್ಸಾಹ ಇಲ್ಲದಿರುವ ಬಗ್ಗೆ ಅವರು ವಿಷಾದ ವ್ಯಕ್ತಪಡಿಸುತ್ತಾರೆ (1999, ಸಂಪಾದಕರು: ಎ ವಿ ನಾವಡ, 'ಗಿಡಿಕೆರೆ ರಾಮಕ್ಕ ಮುಗ್ಗೇರ್ತಿ ಕಟ್ಟಿದ ಸಿರಿ ಪಾಡ್ದನ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮುನ್ನುಡಿಯಿಂದ, ಪಾಡ್ದನ ಕವಿ-ಗಾಯಕಿ ರಾಮಕ್ಕ ಮಗ್ಗೇರ್ತಿ).

ಸಿರಿದರ್ಶನ ಪಾತ್ರಿ ರಾಮಕ್ಕ

ಶ್ರೀಮತಿ ರಾಮಕ್ಕ ಅವರು ಸಿರಿಕಾವ್ಯವನ್ನು ಹಾಡುವ ಹೆಸರಾಂತ ಕವಿ. ಇವರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಉಜಿರೆ ಸಮೀಪದ ಕುಂಬಾರ ಕೊಪ್ಪದವರು. ಫಿನ್ಲೆಂಡಿನ ವಿದ್ವಾಂಸರಾದ ಪ್ರೊ. ಲೌರಿ ಹಾಂಕೋ ಅವರ ಮೌಖಿಕ ಮಹಾಕಾವ್ಯ ಯೋಜನೆಯ ಮುಂದುವರಿದ ಭಾಗವಾಗಿ ಬಂಟ ಜನಾಂಗದ ಪುರುಷ ಪಠ್ಯವನ್ನು ನಾವು ದರೆಗುಡ್ಡೆ ಆಲಡೆಯ ಅನುಭವೀ ಮೂಲ ಕುಮಾರ ಶ್ರೀಯುತ ಶ್ಯಾಮರಾಯ ಶೆಟ್ಟಿಯವರು ಹಾಡುವ ಸಿರಿ ಕಾವ್ಯವನ್ನು ಮೂರು ದಿನಗಳಲ್ಲಿ ಅವರ ಮನೆಯ ಪರಿಸರದಲ್ಲಿ ದಾಖಲಿಸಿಕೊಂಡೆವು. ಈ ದಾಖಲಾತಿಯಲ್ಲಿ ಫಿನ್ಲೆಂಡಿನ ಪ್ರೊ. ಲೌರಿ ಹಾಂಕೋ ಹಾಗೂ ಅವರ ಪತ್ನಿ ಅನೇಲಿ ಹಾಂಕೋ ಅವರು ಮೂರೂ ದಿವಸ ಭಾಗವಹಿಸಿದ್ದರು. ಆ ನಂತರ ಬಂಟ ಮಹಿಳಾ ಪಠ್ಯವನ್ನು ಅತ್ರಿಜಾಲ್ ಆಲಡೆಯ ಮುಖ್ಯ ಸಿರಿ ದರ್ಶನ ಪಾತ್ರಿ ಶ್ರೀಮತಿ ಕರ್ಗಿ ಶೆಡ್ತಿಯವರು ಹಾಡಿರುವ ಸಿರಿ ಕಾವ್ಯವನ್ನು ದಾಖಲಿಸಿಕೊಂಡೆವು. ಹಾಂಕೋ ದಂಪತಿ ಈ ಸಂದರ್ಭ ಭಾರತದಲ್ಲಿ ಇಲ್ಲದ ಕಾರಣ ಈ ದಾಖಲಾತಿಯನ್ನು ಆರ್‌ಆರ್‌ಸಿ ತಂಡವೇ ನಿರ್ವಹಿಸಿತ್ತು. ಬಂಟೇತರ ಸಿರಿ ಮಹಿಳೆಗಾಗಿ ನಾವು ಹುಡುಕಾಟ ನಡೆಸುತ್ತಿದ್ದಾಗ ಗೋಪಾಲ ನಾಯ್ಕರ ಶಿಷ್ಯರಾಗಿ ಗುರುತಿಸಿಕೊಂಡಿದ್ದ ಹಿರಿಯ ಮಹಿಳೆ ಶ್ರೀಮತಿ ರಾಮಕ್ಕ ಅವರು ಗೋಪಾಲ ನಾಯ್ಕರ ಮೂಲಕ ನಮ್ಮ ಸಂಪರ್ಕಕ್ಕೆ ಬಂದರು. ಇವರು ಹಾಡಿರುವ ಸಿರಿಕಾವ್ಯವನ್ನು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಪದ್ಮ ವಿಭೂಷಣ ಡಾ. ವೀರೇಂದ್ರ ಹೆಗ್ಗಡೆಯವರ ಸಹಕಾರದಿಂದ ಆರ್.ಆರ್.ಸಿ. ತಂಡ ಉಜಿರೆ ಮುಂಡಾಜೆ ಸಮೀಪದ ಖಾಡಿಲ್ಕರ್ ಅವರ ಮನೆಯ ಆವರಣದಲ್ಲಿ ದಾಖಲಾತಿ ನಡೆಸಿತು. ಮೂರು ದಿನಗಳಲ್ಲಿ ನಡೆದ ನಮ್ಮ ದಾಖಲಾತಿಗೆ ನಮ್ಮ ಆಹಾರ ಪಾನೀಯಗಳಿಂದ ಹಿಡಿದು ಎಲ್ಲ ಅನುಕೂಲಗಳನ್ನು ಈ ಮನೆಯವರು ಕಲ್ಪಿಸಿಕೊಟ್ಟಿದ್ದರು. ಆ ಕಾಲದಲ್ಲಿ ನಡೆದ ದಾಖಲಾತಿಯಲ್ಲಿ ಲೌರಿ ಹಾಂಕೋ ದಂಪತಿ ಎರಡು ದಿನ ಭಾಗವಹಿದ್ದರು. ಈ ಮೂರೂ ಪಠ್ಯಗಳನ್ನು ಅಂತಾರಾಷ್ಟ್ರೀಯ ಮಟ್ಟದ ಧ್ವನಿ ಸಂಕೇತ ಲಿಪಿಯಲ್ಲಿ ಲಿಪೀಕರಣವನ್ನು ನಾನೇ ಮಾಡಿದ್ದೆ.

ರಾಮಕ್ಕ ಅವರ ಮೂಲ ಆಲಡೆ 'ಕಟ್ಟ್ ಬಡೆಕ್ಕಾಯಿ ಲಂಕೆ ಲೋಕನಾಡ್' ಎಂದೇ ಕರೆಯಲ್ಪಡುವ ನಿಡ್ಗಲ್ ಆಲಡೆ. ಈ ಆಲಡೆ ಬಿಟ್ಟು ಬೇರೆ ಆಲಡೆಗಳಿಗೆ

ಇವರು ದರ್ಶನಕ್ಕೆ ಹೋಗುವುದಿಲ್ಲ. ಇವರು ಹೆಣ್ಣು ಹೋಗಿ ಹೆಂಗಸಾಗುವ (ಋತುಮತಿ) ಮೊದಲೇ ಸಿರಿಯ ಸೂಕೆ ಕಾಣಿಸಿಕೊಂಡು ದಲಿಯದಲ್ಲಿ ನಿಂತವರು. ಸುಮಾರು 50 ವರ್ಷಗಳಿಗಿಂತಲೂ ಹೆಚ್ಚು ಕಾಲ ದಲಿಯದಲ್ಲಿ ನಿಂತು ಸೇವೆ ಸಲ್ಲಿಸಿದ ಅಪೂರ್ವ ವ್ಯಕ್ತಿಗಳಲ್ಲಿ ರಾಮಕ್ಕ ಒಬ್ಬರು. ಮದುವೆಯಾಗಲು ಹರಕೆ ಹೇಳಿಕೊಂಡಿದ್ದರಂತೆ. ಹಾಗಾಗಿ ಸಿರಿ ದರ್ಶನ ಆರಂಭವಾದ ಮೂರು ವರ್ಷಗಳ ಅನಂತರ ಇವರ ಮದುವೆಯಾಯಿತು. ಸಿರಿಯ ದರ್ಶನ ಮೊದಲ ಬಾರಿಗೆ ಆರಂಭವಾದುದರ ಬಗೆಗೆ ಕೇಳಿದಾಗ ರಾಮಕ್ಕ 'ನನಗೆ ನಿದ್ದೆ ಮಾಡಿದರೆ ಇಡೀ ದೇಹದಲ್ಲಿ ಒಂದು ರೀತಿಯ ಸಂಕಟವಾಗುತ್ತಿರುವ ಅನುಭವವಾಗುತ್ತಿತ್ತು. ಅದೇ ಹೊತ್ತಿಗೆ ಕಣ್ಣಿಗೆ ಒಂದು ಚಿನ್ನದ ತೊಟ್ಟಿಲು, ಅದರೊಳಗೆ ಅಂದದ ಮಗುವೊಂದು ಮಲಗಿಕೊಂಡಿರುವುದು ಕಾಣಿಸುತ್ತಿತ್ತು. ಅಲ್ಲದೆ ಹೆಂಗಸರೆಲ್ಲ ತಲೆಗೆ ಹಿಂಗಾರ ಮುಡಿದು ಆಭರಣಗಳನ್ನು ಹಾಕಿಕೊಂಡು ಚಂದ ಚಂದದ ಹೆಂಗಸರು ಬಂದಂತೆ ಕಣ್ಣಿಗೆ ಕಾಣಿಸಿಕೊಳ್ಳಲಾರಂಭಿಸಿತು. ಈ ಸಂದರ್ಭ ನನ್ನ ದೇಹದಲ್ಲಿ ಒಂದು ರೀತಿಯ ದರ್ಶನ ಬಂದ ಹಾಗೆ ಆಗುವ ಅನುಭವ ಆಗುತ್ತಿತ್ತು'. ಇದು ಮೊದಲ ಅನುಭವ. ನನ್ನ ತಾಯಿಯವರು ಒಂದು ದಿನ ನನ್ನನ್ನು ಕರೆದು ತಲೆಯ ಸೀರು ಹೇನು ತೆಗೆಯಲು ಹೇಳಿದರು. ಹಾಗೆ ಹೇನು ಎಳೆಯಲು ಸೀರಣಿ ಕೈಯಲ್ಲಿ ಹಿಡಿದದ್ದೇ ತಡ ಕೈ ಗಡಗಡ ನಡುಗಲು ಆರಂಭಿಸಿತು. ಇಡೀ ದೇಹದಲ್ಲಿ ದರ್ಶನವೇ ಆರಂಭ ವಾದಂತಾಯಿತು. ಇದನ್ನು ನೋಡಿ ತಂದೆಯವರು, ಅಣ್ಣನವರೆಲ್ಲ ಇದೇನು ಹೀಗೆ. ಎಲ್ಲಾದರೂ ಕೇಳಿ ನೋಡಬೇಕೆಂದರು. ಆಗ ನಾವು ತುಂಬ ಬಡವರಾಗಿದ್ದೆವು. ಬಡತನ ಮನೆಯಲ್ಲಿ ತುಂಬ ಇತ್ತು. ನನ್ನ ದೊಡ್ಡ ತಂದೆಯವರ ಮಗಳಿಗೂ ಇದೇ ರೀತಿ ಹುಷಾರಿಲ್ಲದಾಗಿತ್ತು. ಹೀಗೆ ನಮ್ಮಿಬ್ಬರನ್ನೂ ನಡ್ವಾಲಿನ ದಲಿಯಕ್ಕೆ ಕರೆದುಕೊಂಡು ಹೋಗಿ ಕುಮಾರನ ಮೂಲಕ ಬಾಯಿ ಬಿಡಿಸಿದರು. ನನಗೆ ಸಿರಿಯ ಸೂಕೆ ಎಂಬುದೂ ಅವಳಿಗೆ ಸೊನ್ನೆಯ ಸೂಕೆ ಎಂಬುದು ತಿಳಿಯಿತು. ಆಗ ಗೋಪಾಲಣ್ಣ ನಡ್ವಲ್ ಆಲಡೆಯಲ್ಲಿ ಕುಮಾರನಾಗಿ ಸೇವೆ ಸಲ್ಲಿಸುತ್ತಿದ್ದರು. ಅವರೇ ನಮ್ಮ ಬಾಯಿ ಬಿಡಿಸಿ ದಲಿಯ ಕೊಟ್ಟದ್ದು'. ನನಗೆ ಸಿರಿಯ ದರ್ಶನಾವೇಶ ಆರಂಭವಾಗುವ ಮೊದಲು ಸಿರಿಜಾತ್ರೆ ಏನೆಂಬುದೇ ಗೊತ್ತಿರಲಿಲ್ಲ. ನಡ್ವಾಲ್ ಎಂದರೆ ಎಲ್ಲಿ ಎಂಬುದು ನನಗೆ ತಿಳಿದಿರಲಿಲ್ಲ. ನಮ್ಮ ಕುಟುಂಬದಲ್ಲಿಯೂ ನನಗಿಂತ ಮೊದಲು ಯಾರಿಗೂ ಈ ಸಿರಿಯ ದರ್ಶನ ಇರಲಿಲ್ಲ. ನಾನೇ ಮೊದಲಿಗಳು. ಈಗ ನನ್ನ ಕುಟುಂಬದಲ್ಲಿ ನನ್ನ ದೊಡ್ಡ ತಂದೆಯವರ ತಂದೆಯ ಮಗಳಿಗೆ ಅಬ್ಬಯ ದರ್ಶನ ಇದೆ.

ಸಿರಿ ಸಂಧಿಯನ್ನು ಕಲಿತ ವಿಧಾನದ ಬಗೆಗೆ ಕೇಳಿದಾಗ 'ಹೇಗೆ ಕಲಿತೆ ಎಂಬುದನ್ನು ದೇವರಲ್ಲಿ ಕೇಳಬೇಕೆಂದರು. ಗೋಪಾಲಣ್ಣನಿಂದಲೇ ಕಲಿತದ್ದು ಹೌದಾದರೂ ನನಗೆ ಈಗ ಅವರು ಹೇಳುವಂತೆ ಒಕ್ಕಣೆಗಳನ್ನು ಸೇರಿಸಿ ಹಾಡಲು ಬರುವುದಿಲ್ಲ. ಆದರೆ ಕಲಿತದ್ದು ಗೋಪಾಲಣ್ಣನಿಂದಲೇ. ನನಗೆ ಇತ್ತೀಚೆಗೆ ಮನೆಯಲ್ಲಿ ಬೇಕಾದಷ್ಟು ಸಮಸ್ಯೆಗಳಿದ್ದರೂ ಈ ಸಂಧಿ ಮಾತ್ರ ನನ್ನನ್ನು ಬಿಟ್ಟು ಹೋಗಲಿಲ್ಲ. ಒಂದೊಂದು

ಬಾರಿ ತಲೆಬಿಸಿಯಿಂದಾಗಿ ನೆನಪು ಕೈಕೊಡುತ್ತದೋ ಎಂಬ ಭಯ ಇದ್ದರೂ ಹೇಳಲು ಕುಳಿತಾಗ ನೀವೇ ನೋಡಿದಿರಲ್ಲ ಸರಾಗವಾಗಿ ಬಿಚ್ಚಿಕೊಳ್ಳುತ್ತಾ ಹೋಯಿತು. ಅದು ದೇವರೇ ಹೇಳಿಸುವುದಾ ಏನೋ ಯಾರಿಗೆ ಗೊತ್ತು ಎಂದರು. ರಾಮಕ್ಕ ಅವರು ಮೊದಲ ಬಾರಿಗೆ ದಾಖಲಾತಿಗಾಗಿ ಇಡೀ ಸಂಧಿಯನ್ನು ಮೂರು ದಿನ ಹಾಡಿದ್ದೇ ಹೊರತು ಬೇರೆ ಸಂದರ್ಭಗಳಲ್ಲಿ ಹಾಡಲಿಲ್ಲ. ಸಿರಿ ಜಾತ್ರೆಯಲ್ಲಿ ಸಂಧಿಯ ಬೇರೆ ಬೇರೆ ಭಾಗಗಳನ್ನು ಸಂದರ್ಭಕ್ಕೆ ತಕ್ಕಂತೆ ಹಾಡಿರಬಹುದಷ್ಟೇ. ಇವರಿಗೆ ಸಿರಿ ಸಂಧಿ ಬಿಟ್ಟರೆ ಬೇರೆ ಯಾವ ಸಂಧಿ, ಕೆಲಸದ ಹಾಡುಗಳೂ ಗೊತ್ತಿಲ್ಲ. ಇದಕ್ಕೆ ಮುಖ್ಯ ಕಾರಣ ನನಗೆ ಸ್ವರ ಇಲ್ಲದ ಕಾರಣ ಅದನ್ನು ಕಲಿಯಲು ಹೋಗಿಲ್ಲ ಎನ್ನುತ್ತಾರೆ. ಸ್ವರ ಇಲ್ಲದವರು ಹಾಡಿದರೆ ಅಷ್ಟು ಚೆನ್ನಾಗಿ ಕೇಳಿಸುವುದಿಲ್ಲ. ಆದುದರಿಂದ ಅದನ್ನು ಕಲಿಯುವ ಗೋಜಿಗೇ ಹೋಗಲಿಲ್ಲ ಎನ್ನುತ್ತಾರೆ. ನನ್ನ ಮನೆಯಲ್ಲಿ ನನ್ನನ್ನು ಬಿಟ್ಟರೆ ಈ ಪರಂಪರೆ ಯನ್ನು ಮುಂದುವರಿಸುವವರು ಯಾರೂ ಇಲ್ಲ. ನಮ್ಮ ಕುಟುಂಬದಲ್ಲಿ ಸದ್ಯ ಇದರ ಸೂಕೆ ಯಾರಿಗೂ ಇಲ್ಲ ಎನ್ನುತ್ತಾರೆ ರಾಮಕ್ಕ. ನಾನು ನಡ್ವಾಲ್ ಆಲಡೆಯಲ್ಲಿ ವರ್ಷಕ್ಕೊಮ್ಮೆ ಸೇವೆ ಸಲ್ಲಿಸುವುದನ್ನು ಬಿಟ್ಟರೆ ಬೇರೆ ಆಲಡೆಗಳಿಗೆ ನೋಡಲೂ ಹೋಗಲಿಲ್ಲ ಎನ್ನುತ್ತಾರೆ. ಇಲ್ಲೆಚ್ಚಿದ ದಲಿಯಗಳಿಗೆ ಗೋಪಾಲ ನಾಯ್ಕರು ಕರೆದರೆ ಹೋಗುತ್ತೇನೆ. ದೂರ ದೂರ ಕರೆದರೆ ಹೋಗುವುದಿಲ್ಲ. ಮಕ್ಕಳೂ ಹೋಗಲು ಬಿಡುವುದಿಲ್ಲ. ಹತ್ತಿರ ಇದ್ದು ಕರೆದರೆ ಹೋಗಿ ಭಾಗವಹಿಸುತ್ತೇನೆ ಎಂದರು.

ರಾಮಕ್ಕ ಅವರು ನಿರ್ವಹಿಸುವ ದಿನನಿತ್ಯದ ಕಸುಬಿನ ಬಗೆಗೆ ಕೇಳಿದಾಗ ಸಿರಿಯನ್ನೇ ನಂಬಿ ದೇವರು ಕೊಡುತ್ತಾರೆಂದು ಕುಳಿತರೆ ದಾರಿಯಲ್ಲಿ ಬೀಳಬೇಕಾದೀತು. ಮನೆಯಲ್ಲಿ ಮಡಿಕೆ ಮಾಡುವ ಕೆಲಸ ಇದೆ. ಅದರಿಂದ ಬದುಕು ಸಾಗುತ್ತಿದೆ ಹೊರತು ಸಿರಿಯಿಂದ ಅಲ್ಲ. ನಾವು ಮನೆಯಲ್ಲಿ ಎಲ್ಲರೂ ಈ ಮಡಕೆಯ ಕೆಲಸವನ್ನು ಮಾಡುತ್ತೇವೆ. ಮಣ್ಣು ಹುಡಿ ಮಾಡುವುದು, ಅದನ್ನು ಗಾಳಿಸುವುದು, ಚಕ್ರ ತಿರುಗಿಸುವುದು, ಬಲೆ ಹಿಡಿಯುವುದು, ನಯಗೊಳಿಸುವ ಕೆಲಸ ಇದೆಲ್ಲ ಹೆಂಗಸಿನದ್ದು. ಮಡಕೆಯನ್ನು ತಟ್ಟುವ ಕೆಲಸ ಗಂಡಸರಿಗೆ ಬಿಟ್ಟದ್ದು. ದಿನಕ್ಕೆ ಬಿಡದೆ ಕೂತರೆ ಇಪ್ಪತ್ತರಿಂದ ಇಪ್ಪತ್ತೈದು ಮಡಿಕೆ ಮಾಡುತ್ತೇವೆ. ಇದನ್ನು ಮಾರಲೂ ಬಹುದೂರ ಹೊತ್ತುಕೊಂಡು ಹೋಗಬೇಕು. ಕೆಲವೊಂದು ಬಾರಿ ಲಾರಿಯಲ್ಲಿ ತುಂಬಿ ಕೇರಳದ ಕಡೆಗೆ ಕೊಂಡು ಹೋಗುತ್ತಾರೆ. ಹಿಂತಿರುಗಿ ಬರುವಾಗ ಹತ್ತು ಹದಿನೈದು ದಿನವೂ ಆಗುತ್ತದೆ. ಈಗಿನ ಸ್ಥಿತಿಯಲ್ಲಿ ಇದರ ಕೆಲಸ ತುಂಬ ಕಷ್ಟವೇ.

ಅಲ್ಲದೆ ನೇಜಿ, ಗದ್ದೆಯ ಕೆಲಸಕ್ಕೂ ಹೋಗುತ್ತೇನೆ. ಆರಂಭದಲ್ಲಿ ನಮಗೆ ಐದಾರು ಮುಡಿಯಷ್ಟು ಗದ್ದೆ ಇತ್ತು. ಕೃಷಿ ಮಾಡುತ್ತಿದ್ದೆವು. ಸರಕಾರದ ಡಿಕ್ಲರೇಶನ್ ಬರುವ ಹೊತ್ತಿಗೆ ನಾವು ಅರ್ಜಿ ಹಾಕದೆ ದಣಿಯವರಿಗೇ ಬಿಟ್ಟುಬಿಟ್ಟೆವು. ಆ ಕಾಲದಲ್ಲಿ ನಾವೂ ಚಿಕ್ಕವರು. ತಂದೆಯವರಿಗೂ ದಣಿಯವರಿಗೆ ಎದುರು ನಿಲ್ಲುವ ಮನಸ್ಸಿರಲಿಲ್ಲ. ಹೀಗಾಗಿ ಅವರಿಗೇ ಗದ್ದೆಗಳನ್ನು ಬಿಟ್ಟುಕೊಟ್ಟೆವು. ರಾಮಕ್ಕ ಅವರಿಗೆ ನಾಲ್ಕು ಗಂಡು, ಎರಡು

ಹೆಣ್ಣುಮಕ್ಕಳು. ಮೂವರು ಗಂಡು, ಎರಡು ಹೆಣ್ಣುಮಕ್ಕಳಿಗೆ ಮದುವೆಯಾಗಿದೆ. ಒಬ್ಬ ಮದುವೆಯಾಗಲು ಬಾಕಿ ಇದ್ದಾನೆ.

ಇಷ್ಟು ದೊಡ್ಡ ಸಂಧಿಯನ್ನು ನೀವು ಹೇಗೆ ನೆನಪಿಟ್ಟುಕೊಂಡು ಹೇಳಿದಿರಿ ಎಂದಾಗ ಇದು ಒಟ್ಟಾರೆಯಾಗಿ ದೇವರೇ ಹೇಳಿಸಿದ್ದು. ಅಲ್ಲದಿದ್ದರೆ ನನಗಿಷ್ಟು ತಲೆಯಲ್ಲಿ ಬೇರೆ ಯೋಚನೆಗಳು, ತಲೆಬಿಸಿ ಕಷ್ಟಗಳು ಇರುವಾಗ ಆ ಜ್ಞಾನ ಎಲ್ಲಿಂದ ಬಂತು ತಿಳಿಯದು. ಇದು ದೇವರೇ ಹಾಡಿಸಿದ್ದು ಎನ್ನುತ್ತಾರೆ. ಯಾವುದೇ ಪೂರ್ವ ತಯಾರಿಗಳಿಲ್ಲದೆಯೇ ಅದರಷ್ಟಕ್ಕೆ ಅದು ಹೇಳುತ್ತಾ ಹೋದ ಹಾಗೆ ಬರುತ್ತದೆ. ಮೊನ್ನೆ ಗೋಪಾಲಣ್ಣ ಬರಬೇಕೆಂದು ಹೇಳಿ ಹೋಗುವಾಗಲೇ ನನಗೆ ಥೇ ಇದು ಸಂದಿಯನ್ನು ಜ್ಞಾಪಿಸಿಕೊಳ್ಳದೆ ಹೇಗೆಂದು ಯೋಚಿಸುತ್ತಿದ್ದೆ. ಮೈಯೆಲ್ಲ ಚಳಿ ಬಂದ ಹಾಗೆ ಆಗುತ್ತಿತ್ತು. ಈಗ ಅಲ್ಲಿ ಹೋಗಿ ಮರ್ಯಾದೆ ಹೋಗುತ್ತದೋ ಎಂದು ಹೆದರಿದ್ದೆ. ಅದಕ್ಕೆ ಮನೆಯ ಹತ್ತಿರವಿರುವ ರಾಜಂದೈವದ ಗುಡಿಗೆ ಹೋಗಿ ಕೈ ಮುಗಿದು ಬಂದೆ. ಬೆಳಗ್ಗೆ ಹೊರಡುವಾಗ ಮನೆ ದೇವರಿಗೆ ಕೈ ಮುಗಿದು ಬಂದೆ ಅಷ್ಟೆ. ಮನೆಯ ಹತ್ತಿರದ ಕಲ್ಲುರ್ಟಿ ಪಂಜುರ್ಲಿ ದೈವಸ್ಥಾನಕ್ಕೂ ಹೊಗಿ ಕೈ ಮುಗಿದು ಬಂದೆ ಎಂದರು. ಮೊದಲನೆ ದಿವಸ ದೈವಗಳಿಗೆ ಕೈ ಮುಗಿದು ಬರುವುದು. ಉಳಿದಂತೆ ಸಂಧಿ ಸುರು ಮಾಡುವ ಹೊತ್ತಿಗೆ ಸ್ಮರಿಸಿಕೊಳ್ಳುವುದು ಅಷ್ಟೆ ಎಂದರು.

ಸಿರಿ ಜಾತ್ರೆಗೆ ಹೋಗುವ ಮುನ್ನ ನಡೆಸುವ ಶುದ್ಧಾಚಾರದ ಬಗೆಗೆ ಕೇಳಿದಾಗ ವಾರದ ಶುದ್ಧಾಚರಣೆ ನಡೆಸುತ್ತೇವೆ. ಇಡೀ ದಿನ ಮಧ್ಯಾಹ್ನ ಒಂದು ಊಟ ಮಾತ್ರ. ರಾತ್ರಿ ಫಲಾಹಾರ. ಸಿರಿ ಜಾತ್ರೆಯ ಮುನ್ನಾ ದಿನ ದೇವಸ್ಥಾನಕ್ಕೆ ಹೋಗಿ ತೀರ್ಥಸ್ನಾನ ಮಾಡಿ ಬರುವುದೂ ಇದೆ.

ಸಿರಿಸಂಧಿಯನ್ನು ನಿಮಗಾಗಿ ಪೂರ್ತಿಯಾಗಿ ಹಾಡಿದ್ದು ಇದು ನನ್ನ ಜೀವಮಾನದ ಸಾಧನೆ ಎಂಬ ಸಂತೋಷ ಆಗುತ್ತಿದೆ. ಇದನ್ನು ಪೂರ್ತಿಯಾಗಿ ಈ ಹಿಂದೆಯೂ ಹಾಡಿಲ್ಲ. ಇನ್ನು ಮುಂದೆ ಹಾಡುವ ಸಾಧ್ಯತೆಗಳು ಕಡಿಮೆ. ಯಾಕೆಂದರೆ ನನ್ನ ಕಂಠ ಪೂರ್ತಿಯಾಗಿ ಬಿದ್ದು ಹೋಗಿರುವುದರಿಂದ ಸ್ವರವೆತ್ತಿ ಹಾಡಲು ಆಗುವುದಿಲ್ಲ. ಈ ಬಾರಿ ಕಷ್ಟಪಟ್ಟು ನಿಮಗಾಗಿ ಹಾಡಿದೆ ಅಷ್ಟೆ ಎಂದರು. ಬರುವಾಗಲೇ ನನ್ನ ಮಗಂದಿರು ಹೇಳಿದ್ದಾರೆ. ನೀವು ಈಗ ಹೋಗಿ ಇದನ್ನು ನಿಮಗೆ ಕೊನೆ ತಲಪಿಸಲಾಗದಿದ್ದರೆ ಮತ್ತೆ ನಾನು ನಿಮಗೆ ಹೇಳಲುಂಟು ಎಂದು ಹೇಳಿದ್ದಾನೆ. ಆಯಿತು, ಈವರೆಗೆ ದೇವರ ಧರ್ಮದಿಂದ ನನಗೆ ಕೊರತೆ ಬರಲಿಲ್ಲ. ಇನ್ನೂ ಕೊರತೆ ಬರಲು ಬಿಡಲಾರರು. ಅವರ ಧರ್ಮದಿಂದ ಒಳ್ಳೆಯದನ್ನು ಕೇಳಿ ಬರುವೆನೇ ಹೊರತು ಕೆಟ್ಟದ್ದನ್ನು ಕೇಳಿ ಬರಲಾರೆ ಎಂದು ಹೇಳಿ ಬಂದಿದ್ದೇನೆ. ಹಾಗಾಗಿ ಎಲ್ಲಾದರೂ ತಪ್ಪಾಗಿದೋ ಎಂಬ ಸಣ್ಣ ಅಳುಕು ನನ್ನೊಳಗೆ ಎಂದರು. ಇದರಲ್ಲಿ ಸರಿತಪ್ಪು ಹುಡುಕುವವರು ಯಾರು ಇಲ್ಲ. ಇದು ನೀವು ನಮಗೆ ಕೊಟ್ಟ ನಿಧಿ. ಇದನ್ನು ನಾವು ಮುಂದಿನ ತಲೆಮಾರಿಗೆ ಕಾಪಾಡಿ ಇಡುತ್ತೇವೆ ಎಂದೆವು (ರಾಮಕ್ಕ ಅವರ ಸಂದರ್ಶನದ ಭಾಗದಿಂದ).

ಹಿರಿಯ ಕುಮಾರ ಪಾತ್ರಿ ಶ್ಯಾಮರಾಯ ಶೆಟ್ಟಿ



ಶ್ಯಾಮಶೆಟ್ಟಿ ಎಂದೇ ಪ್ರಸಿದ್ಧರಾಗಿರುವ ಹಿರಿಯ ಕುಮಾರ ದರ್ಶನ ಪಾತ್ರಿಯವರ ಪೂರ್ತಿ ಹೆಸರು ಶ್ಯಾಮರಾಯ ಶೆಟ್ಟಿ ಎಂಬುದು. ಇವರು ಜನಿಸಿದ್ದು 16.10.1946ರಂದು ಕಾರ್ಕಳ ತಾಲೂಕಿನ ರೆಂಜಾಳದಲ್ಲಿ. ಇವರ ತಂದೆ ಚೆನ್ನಯ್ಯ ಶೆಟ್ಟಿ, ತಾಯಿ ದೀಡು ಶೆಡ್ತಿ. ಈಗ ಇವರು ಇರುವ ಸ್ಥಳ ದರೆಗುಡ್ಡೆ ಸಮೀಪದ ನರಂಗೊಟ್ಟು ಗುತ್ತು. ಇವರ ಮೂಲ ಆಲಡೆ ಕಬತ್ತಾರು ಆದರೂ ಇವರು ಸ್ಥಳದ ಮೂಲ ಕುಮಾರನಾಗಿ ಸೇವೆ ಸಲ್ಲಿಸುತ್ತಾ ಬರುತ್ತಿರುವ ಆಲಡೆ ಕಾರ್ಕಳ ತಾಲೂಕಿನ ದರೆಗುಡ್ಡೆಯಲ್ಲಿ. ಶ್ಯಾಮಶೆಟ್ಟಿಯವರು ಸುಮಾರು ಹದಿಮೂರು ವರ್ಷದ ಹುಡುಗನಾಗಿದ್ದಾಗಲೇ ಅನಾರೋಗ್ಯಪೀಡಿತರಾಗಿದ್ದರು. ಅಲ್ಲಲ್ಲಿ ಬೀಳುವುದು, ಫಿಟ್ಸ್‌ನಂತೆ ಆಗುವುದು ಈ ರೀತಿಯ ಲಕ್ಷಣಗಳು ಮರುಕಳಿಸುತ್ತಿದ್ದವು. ಹಾಗಾಗಿ ದರೆಗುಡ್ಡೆಯ ಕುಮಾರನಲ್ಲಿಗೆ ಕರೆದುಕೊಂಡು ಹೋಗಿ ಕೇಳಿದಾಗ ಅವರು ಇದು ನಮ್ಮದೇ ಸ್ವತ್ತು. ಅದಕ್ಕೇನೂ ತೊಂದರೆ ಕೊಡಬೇಡಿ. ಇನ್ನೊಂದೆರಡು ವರ್ಷಗಳಲ್ಲಿ ಅವನಿಗೆ ಪ್ರಾಯ ಬಂದಾಗ ಅವನಿಗೇ ದರ್ಶನ ಬಂದು ಅವನೇ ಹೇಳಿಕೊಂಡು ಹೋಗುತ್ತಾನೆ ಎಂದರಂತೆ. ಗಂಧ ಕೊಟ್ಟರು. ಅದೇ ಗಂಧದಲ್ಲಿ ಶಮನವಾಯಿತಂತೆ.

ಹೀಗೆ ಒಂದೆರಡು ವರ್ಷ ಕಳೆದು ಶ್ಯಾಮರಾಯ ಶೆಟ್ಟಿಯವರು ಒಂದು ಬಾರಿ ದರೆಗುಡ್ಡೆ ಸಿರಿಜಾತ್ರೆಗೆ ಹೋಗಿದ್ದಾಗ ಅಲ್ಲಿ ಇವರಿಗೆ ಕುಮಾರನ ಆಕರ್ಷಣೆಯಾಗಿ ಏನೇನೋ ಆಗಲು ಶುರುವಾಯಿತಂತೆ. ಆಗ ದರೆಗುಡ್ಡೆಯಲ್ಲಿ ಕುಮಾರನಾಗಿ ಇದ್ದವ ಪಣಪಿಲದ ಬಾಬು ಮಡಿವಾಳ. ಅವ ಇವರನ್ನು ನೋಡಿ ಹೇಳಿದನಂತೆ ಇನ್ನು ಮುಂದಕ್ಕೆ ಇವ ಈ ಜಾಗದಲ್ಲಿ ನಿಂತು ಚಾಕರಿ ಮುಂದುವರಿಸುತ್ತಾನೆ ಎಂದು. ಹೀಗಾಗಿ ತನ್ನ ಹದಿನಾಲ್ಕು, ಹದಿನೈದನೇ ವಯಸ್ಸಿನಲ್ಲಿ ದರೆಗುಡ್ಡೆಯ ಕುಮಾರ ತೀರಿ ಕೊಂಡಾಗ ಮೊದಲ ಬಾರಿಗೆ ಕುಮಾರನಾಗಿ ಆ ಜಾಗದಲ್ಲಿ ನಿಂತ ಬಗೆಗೆ ಹೇಳುತ್ತಾರೆ.

ಶ್ಯಾಮರಾಯ ಶೆಟ್ಟಿಯವರ ಕುಟುಂಬದಲ್ಲಿ ಈ ಹಿಂದೆಯೂ ಸಿರಿಯ ಸೇವೆ ಸಲ್ಲಿಸುವವರು ಇದ್ದರು. ಮುಖ್ಯವಾಗಿ ಇವರ ಸೋದರಮಾವನವರಾದ ಕೊರಗಪ್ಪ ಶೆಟ್ಟಿಯವರಿಗೆ ಕುಮಾರ ದರ್ಶನವಿತ್ತು. ಅಣ್ಣ ಕುಮಾರನಾಗಿ ಸೇವೆ ಸಲ್ಲಿಸಿದ್ದಾರೆ. ಆದರೆ ಒಂದೇ ಮನೆಯಿಂದ ಇಬ್ಬರು ಕುಮಾರರಾಗಿ ಸೇವೆ ಸಲ್ಲಿಸುವುದು ಬೇಡ ಎಂದು ಅಣ್ಣ ಒಂದೇ ವರ್ಷದಲ್ಲಿ ಮುಕ್ತಾಯ ಮಾಡಿದರಂತೆ. ಇವರ ತಾಯಿಯವರಿಗೆ ಸೊನ್ನೆಯ ದರ್ಶನವಿತ್ತು. ಹೀಗಾಗಿ ಶ್ಯಾಮರಾಯ ಶೆಟ್ಟಿಯವರ ಕುಟುಂಬದಲ್ಲಿ ಒಬ್ಬರಿಂದ ಒಬ್ಬರಿಗೆ ಈ ಪರಂಪರೆ ಮುಂದುವರಿಯುತ್ತಾ ಬರುತ್ತಿದೆ. ಶ್ಯಾಮರಾಯ ಶೆಟ್ಟಿಯವರಿಗೆ ಕುಮಾರ ಪಾತ್ರಿಯಾಗಿ ಕುಟುಂಬದಲ್ಲಿ, ಊರಿನಲ್ಲಿ ತುಂಬ ಗೌರವ ಇದೆ. ಇವರನ್ನು

ಬೇರೆ ಬೇರೆ ಕಡೆಗೆ ಸಿರಿ ಸಂಬಂಧಿ ಕೆಲಸಗಳಿಗಾಗಿ ಕರೆಯುತ್ತಾರೆ. ಹೀಗಾಗಿ ಶ್ಯಾಮರಾಯ ಶೆಟ್ಟಿಯವರು ಹೋದ ಕಡೆ ಆಲಡೆಗಳು ಅಭಿವೃದ್ಧಿಯಾಗಿವೆ. ದೇವರ ಭಂಡಾರ ತುಂಬಿದೆ. ಸಿರಿಗಳಿಗೆ ತುಂಬ ಗೌರವ ಬಂದಿದೆ. ಇವೆಲ್ಲದರಿಂದ ಶ್ಯಾಮರಾಯ ಶೆಟ್ಟಿಯವರ ಸಾಮಾಜಿಕ ಗೌರವ ಸಹಜವಾಗಿಯೆ ಹೆಚ್ಚಾಗಿದೆ ಎಂದು ಹೇಳಬಹುದು.

ಶ್ಯಾಮರಾಯ ಶೆಟ್ಟಿಯವರು ಕವತ್ತಾರು, ದರೆಗುಡ್ಡೆಗಳಲ್ಲದೆ, ಬೊಲ್ಯೊಟ್ಟು, ಪಾಂಗಾಳ, ಪಾಜೊಟ್ಟು ಹೆಜಮಾಡಿ, ಬಸ್ತಿಪಡ್ಪು, ಗುಂಡದಪಾಡಿ–ಮುಂತಾದ ಕಡೆ ಮುಖ್ಯ ಕುಮಾರನಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದರೆಗುಡ್ಡೆಯಲ್ಲಿ ಪ್ರತಿ ತಿಂಗಳಿಗೆ ಸಿರಿಗಳ ದರ್ಶನ ಇದೆ. ದೂರ ದೂರದಿಂದ ತಮ್ಮ ಕಷ್ಟಗಳನ್ನು ಕೇಳಿ ಬರುವ ಅನೇಕ ಮಂದಿಗೆ ಇಲ್ಲಿ ಒಂದಲ್ಲ ಒಂದು ರೀತಿಯ ಸಾಂತ್ವನವನ್ನು ನೀಡಲಾಗುತ್ತದೆ. ಪ್ರತಿ ತಿಂಗಳು ಇವರ ಮನೆಯಲ್ಲಿಯೂ ಇಲ್ಲೆಚ್ಚಿದ ದರ್ಶನ ಇರುತ್ತದೆ. ತುಂಬ ದೂರ ದೂರದಿಂದ ಜನ ತಮ್ಮ ತಮ್ಮ ಸಮಸ್ಯೆಗಳನ್ನು ಕೇಳಲು ಬರುತ್ತಾರೆ. ಮಕ್ಕಳಿಲ್ಲದವರು ಮಕ್ಕಳ ಭಾಗ್ಯ ಬೇಕೆಂದು ಕೇಳಲು ಬರುತ್ತಾರೆ. ಗಂಡ ಅತ್ತೆಯರಿಂದ ಹೆಂಡತಿ, ಸೊಸೆಗೆ ಸಿಗದ ಸಮಾಧಾನ ಇಲ್ಲಿ ದೊರೆಯುತ್ತದೆ ಎನ್ನುತ್ತಾರೆ. ಕೆಲವೊಂದು ಬಾರಿ ಅರಮನೆಯಲ್ಲಿ ಕುಳಿತವನಿಗೂ ಮನಸ್ಸಿಗೆ ಸಮಾಧಾನವಿರುವುದಿಲ್ಲ. ಹೀಗಾಗಿ ಮನಸ್ಸಿಗೆ ಸಮಾಧಾನ ಹುಡುಕಿಯೇ ಅನೇಕ ಮಂದಿ ಇಲ್ಲಿಗೆ ಬರುತ್ತಾರೆ ಎನ್ನುತ್ತಾರೆ ಶ್ಯಾಮರಾಯ ಶೆಟ್ಟಿಯವರು. ಕೆಲವೊಂದು ಬಾರಿ ಮದ್ದಲ್ಲಿ ಗುಣವಾಗದ್ದು ಮಾಯದಲ್ಲಿ ಗುಣವಾಗುತ್ತದೆ. ಇದೇ ಇಲ್ಲಿ ಬಹಳ ಮುಖ್ಯ. ಹೀಗೆ ಬೇರೆ ಬೇರೆ ಕಡೆಯಿಂದ ತಮ್ಮ ಕಷ್ಟಗಳನ್ನು ಕೇಳಲು ಬಂದವರಿಗೆ ಒಂದು ರೀತಿಯ ಪರಿಹಾರ, ಸಾಂತ್ವನವನ್ನು ನೀಡುವ ಕೆಲಸವನ್ನು ಇವರು ಮಾಡುತ್ತಾರೆ. ದರೆಗುಡ್ಡೆಯ ಜಾತ್ರೆಯಲ್ಲಿ ಶ್ಯಾಮರಾಯ ಶೆಟ್ಟಿಯವರು ದಲಿಯದಲ್ಲಿ ನಿಲ್ಲದೆ ದೇವರ ಬಲಿಯಲ್ಲಿ ಕುಮಾರನ ದರ್ಶನದಲ್ಲಿ ಇರುತ್ತಾರೆ. ನಾನಾ ಸಮಸ್ಯೆಗಳನ್ನು ಕೇಳಲು ಬಂದವರನ್ನು ವಿಚಾರಿಸಲು ಇವರ ಬಳಗದಲ್ಲಿ ಅನುಭವಿ ಸಿರಿ ಕುಮಾರರಿರು ತ್ತಾರೆ. ಅವರಿಗೆ ನಿರ್ವಹಿಸಲು ಸಾಧ್ಯವಾಗದ ಕೆಲವು ಸಮಸ್ಯೆಗಳಿದ್ದರೆ ಮಾತ್ರ ಸ್ವತಃ ಶ್ಯಾಮರಾಯ ಶೆಟ್ಟಿಯವರೇ ಬಂದು ಪರಿಹರಿಸುವ ಕೆಲಸವನ್ನು ಮಾಡುತ್ತಾರೆ. ಇದಲ್ಲದೆ ಬೇರೆ ಬೇರೆ ಕಡೆಗೂ ಸಿರಿ ಸಂಬಂಧಿ ಸಮಸ್ಯೆಗಳು ಬಂದಾಗ ಶ್ಯಾಮರಾಯ ಶೆಟ್ಟಿಯವರನ್ನು ಬಂದು ಕರೆದುಕೊಂಡು ಹೋಗುತ್ತಾರೆ. ಹೊಸದಾಗಿ ದಲಿಯಕ್ಕೆ ಸೇರ್ಪಡೆಗೊಳ್ಳುವ ನವ ಸಿರಿ ಕುಮಾರರ ಬಾಯಿ ಬಿಡಿಸುವುದರಲ್ಲಿ ಶ್ಯಾಮರಾಯ ಶೆಟ್ಟಿಯವರದು ಬಹಳ ದೊಡ್ಡ ಪಾತ್ರ. ಎಂಥದ್ದೇ ಕ್ಲಿಷ್ಟ ಸಮಸ್ಯೆಗಳನ್ನೂ ಅದು ಆಸ್ತಿಯ ಸಮಸ್ಯೆಯಿಂದ ಹಿಡಿದು, ಗಂಡ ಹೆಂಡಿರ ಸಮಸ್ಯೆ, ಊರಿನ ಸಮಸ್ಯೆ, ಕುಟುಂಬದ ಒಳಗಿನ ಸಮಸ್ಯೆಗಳು – ಹೀಗೆ ಎಲ್ಲದಕ್ಕೂ ತಮ್ಮ ಅನುಭವ ಹಾಗೂ ಚಾಕಚಕ್ಯತೆಯಿಂದ ಕ್ಷಣಮಾತ್ರದಲ್ಲಿ ಪರಿಹಾರ ನೀಡುವ ಶ್ಯಾಮಣ್ಣನನ್ನು ಎಲ್ಲ ಆಲಡೆಗಳಲ್ಲಿಯೂ ತುಂಬ ಗೌರವದಿಂದ ಕಾಣುತ್ತಾರೆ. ಕುಮಾರನಾಗಿ ಶ್ಯಾಮರಾಯ ಶೆಟ್ಟಿಯವರು ಅದರ ಕಟ್ಟುನಿಟ್ಟಿಗೂ ಬಹಳ ಬದ್ಧರಾಗಿದ್ದಾರೆ.

ದಲಿಯದಲ್ಲಿ ಶ್ಯಾಮರಾಯ ಶೆಟ್ಟಿಯವರದು ಬಹಳ ಸುದೀರ್ಘ ಸೇವೆ. ದಲಿಯದಲ್ಲಿ ಸುಮಾರು 52 ವರ್ಷಗಳ ಕಾಲದ ಸುದೀರ್ಘ ಸೇವೆಯನ್ನು ಶ್ಯಾಮರಾಯ ಶೆಟ್ಟಿಯವರು ಸಲ್ಲಿಸಿದ ಬಹಳ ಅಪರೂಪದ ವ್ಯಕ್ತಿತ್ವ. 2017ರಲ್ಲಿ ಅಲ್ಪಕಾಲದ ಅಸೌಖ್ಯತೆಯಿಂದ ಆಕಸ್ಮಿಕವಾಗಿ ತನ್ನ 66ನೇ ವರ್ಷ ವಯಸ್ಸಲ್ಲಿ ಮರಣವನ್ನಪ್ಪಿದ ಶ್ಯಾಮರಾಯ ಶೆಟ್ಟಿಯವರು ಸಿರಿ ಆರಾಧನಾ ಪ್ರಪಂಚದಲ್ಲಿಯೇ ಒಂದು ಶೂನ್ಯವನ್ನು ಸೃಷ್ಟಿಸಿ ಹೋಗಿದ್ದಾರೆ ಎನ್ನಬಹುದು.

ಮಹಾಕಾವ್ಯ ಪ್ರತಿಭೆ ಶ್ಯಾಮರಾಯ ಶೆಟ್ಟಿಯವರು

ಶ್ಯಾಮರಾಯ ಶೆಟ್ಟಿಯವರದು ಸಿರಿಕಾವ್ಯ ಗಾಯನದಲ್ಲಿ ಮಹಾಕವಿ ಪ್ರತಿಭೆ ಎನ್ನಬಹುದು. ಗೋಪಾಲ ನಾಯ್ಕರು ಹಾಡಿರುವ ಸಿರಿಕಾವ್ಯದ ದಾಖಲಾತಿಯ ಅನಂತರ ಪ್ರೊ. ಲೌರಿ ಹಾಂಕೋ ಅವರ ನೇತೃತ್ವದಲ್ಲಿ ನಡೆದ ಎರಡನೇ ಸಿರಿಕಾವ್ಯದ ದಾಖಲಾತಿ ಶ್ಯಾಮರಾಯ ಶೆಟ್ಟಿಯವರದು. ಈ ದಾಖಲಾತಿಯಲ್ಲಿ ಪ್ರೊ. ಲೌರಿ ಹಾಂಕೋ, ಅವರ ಪತ್ನಿ ಅನೆಲಿ ಹಾಂಕೋ ಹಾಗೂ ಆರ್‌ಆರ್‌ಸಿ ತಂಡದಿಂದ ಶ್ರೀ ಎಸ್‌ಎ ಕೃಷ್ಣಯ್ಯ, ಡಾ. ಅಶೋಕ ಆಳ್ವ, ಹರ್ಷವರ್ಧನ್ ಭಟ್ ಹಾಗೂ ಲಚ್ಚೇಂದ್ರ ಅವರು ಭಾಗವಹಿಸಿದ್ದರು. ಶ್ಯಾಮರಾಯ ಶೆಟ್ಟಿಯವರ ಮನೆಯ ಆವರಣದಲ್ಲಿ ಎಪ್ರಿಲ್ ತಿಂಗಳಲ್ಲಿ 6, 7 ಮತ್ತು 11ನೇ ತಾರೀಕು, 1999 ಈ ಮೂರು ದಿನಗಳಲ್ಲಿ ಇವರ ಕಾವ್ಯವನ್ನು ದಾಖಲಿಸಿಕೊಂಡೆವು. ಸುಮರು 14 ಗಂಟೆಗಳ ಕಾಲ ಹಾಡಿರುವ ಶ್ಯಾಮರಾಯ ಶೆಟ್ಟಿಯವರ ಕಾವ್ಯ ಬೇರೆ ಬೇರೆ ಕಾರಣಗಳಿಗಾಗಿ ಮಹತ್ವದ್ದಾಗಿದೆ. ಇವರ ಕಾವ್ಯದ ವೈವಿಧ್ಯವನ್ನು ತುಲನಾತ್ಮಕ ಅಧ್ಯಯನದಲ್ಲಿ ನೀಡಿರುವುದರಿಂದ ಮತ್ತೊಮ್ಮೆ ಇಲ್ಲಿ ನಿರೂಪಿಸುವುದಿಲ್ಲ.

ಶ್ಯಾಮರಾಯ ಶೆಟ್ಟಿಯವರ ತಾಯಿಯವರು ಸೊನ್ನೆ ದರ್ಶನ ಪಾತ್ರಿಯಾಗಿದ್ದರು. ಸಿರಿಕಾವ್ಯವನ್ನೂ ಚೆನ್ನಾಗಿ ಹಾಡುತ್ತಿದ್ದರು. ಹೀಗಾಗಿ ಸಿರಿ ಕಾವ್ಯದ ಕಲಿಕೆಗೆ ಶ್ಯಾಮಣ್ಣನಿಗೆ ಮೊದಲ ಗುರು ತಾಯಿಯೇ. ಶ್ಯಾಮಶೆಟ್ಟಿಯವರು ಒಳ್ಳೆಯ ಮನೆತನದಲ್ಲಿ ಹುಟ್ಟಿ ಬೆಳೆದವರು. ತಕ್ಕ ಮಟ್ಟಿಗೆ ಅನುಕೂಲವಂತರೂ ಹೌದು. ಹೀಗಾಗಿ ಸ್ವಂತ ಜಮೀನಿನಲ್ಲಿ ದುಡಿಮೆಯೇ ಹೊರತು ಬೇರೆ ಕಡೆ ಕೆಲಸಗಳಿಗೆ ಹೋಗುವ ಅಗತ್ಯ ಇರಲಿಲ್ಲ. ಶ್ಯಾಮರಾಯ ಶೆಟ್ಟಿಯವರು ಹೆಚ್ಚು ಕಲಿತವರಲ್ಲ. ಆದರೆ ಸಿರಿ ಆರಾಧನಾ ಕ್ಷೇತ್ರದಲ್ಲಿ ಅವರದು ಮುಂಚೂಣಿಯಲ್ಲಿ ನಿಲ್ಲುವ ಅನುಭವಿ ವ್ಯಕ್ತಿತ್ವ.

ಸಿರಿಕಾವ್ಯವನ್ನು ಕಲಿತ ವಿಧಾನದ ಬಗೆಗೆ ವಿವರಿಸುತ್ತಾ 'ಸಿರಿ ಇಡೀ ಕತೆ ನೆನಪಲ್ಲಿ ಇರುತ್ತದೆ. ಅದನ್ನು ಹೇಳುತ್ತಾ ಹೋದ ಹಾಗೇ ಬೆಳೆಸುತ್ತಾ ಹೋಗುವುದು ನಮ್ಮ ನಮ್ಮ ಸಾಮರ್ಥ್ಯಕ್ಕೆ ಬಿಟ್ಟದ್ದು. ಇದರ ಹಿಂದೆ ಅನುಭವವೂ ಬೇಕು. ಒಂದು ಬಾರಿ ಹಾಡಲು ಕುಳಿತರೆ ಅದು ತನ್ನಷ್ಟಕ್ಕೆ ಸುರುಳಿಯಂತೆ ಬಿಚ್ಚಿ ಕೊಳ್ಳುತ್ತಾ ಹೋಗುತ್ತದೆ. ಅದಕ್ಕೆ ತಕ್ಕಂತೆ ದೇವರ ದಯವೂ ಬೇಕು. ನಾನು ಯಾವಾಗ ಹಾಡಲು ಕುಳಿತುಕೊಳ್ಳು ವಾಗಲೂ ದೇವರಲ್ಲಿ ಕೇಳಿ ಬಂದೇ ಹಾಡುವುದು. ಹಾಡುತ್ತಿರುವಾಗಲೂ ನಮ್ಮ

ಧ್ಯಾನ ಇರುವುದು ಸಿರಿಯ ಮೇಲೆಯೇ. ಹೀಗಾಗಿ ಎಷ್ಟೋ ಸಂದರ್ಭಗಳಲ್ಲಿ ಸಿರಿಯ ಪಾತ್ರಗಳ ಒಳಗಡೆ ಪ್ರವೇಶಿಸಿಬಿಡ್ತೇವೆ. ಹೀಗಾಗಿ ಕಾವ್ಯವನ್ನು ಹಾಡುತ್ತಾ ಹೋದ ಹಾಗೆ ಕೆಲವೊಂದು ಬಾರಿ ಆಕರ್ಷಣೆಗೆ ಒಳಗಾಗಿ ಬಿಡುತ್ತೇನೆ. ಕೆಲವೊಂದು ಬಾರಿ ನಮ್ಮ ಕಾಲೇಜುಗಳಿಂದ ಮಕ್ಕಳಿಗೆ ಸಿರಿಯ ಬಗೆಗೆ ಮಾಹಿತಿ ನೀಡಲು ನನ್ನನ್ನು ಕರೆದದ್ದುಂಟು. ಅಲ್ಲಿಯೂ ಕಾವ್ಯ ಹಾಡುತ್ತಿದ್ದಂತೆ ಆಕರ್ಷಣೆಗೆ ಒಳಗಾಗಿದ್ದೇನೆ. ಒಟ್ಟಿನಲ್ಲಿ ನಾವು ಸಿರಿಯ ಸೇವೆಗೆಂದೇ ಮೀಸಲಿದ್ದವರು.

ಕುಮಾರನಾಗಿ ಶ್ಯಾಮರಾಯ ಶೆಟ್ಟಿಯವರು ತಾಯಿಯ ಜೊತೆಗಿನ ಸಂಭಾಷಣೆಯಿಂದ ಹಿಡಿದು ತಂಗಿಯಂದಿರು ಹಾಗೂ ಸೊಸೆಯಂದಿರ ಜೊತೆಗೂ ಸಂಭಾಷಣೆ ನಡೆಸುತ್ತಾ ಅವರ ಬೇಕು ಬೇಡಗಳಿಗೆ ಉತ್ತರಿಸುವ ಕೆಲಸವನ್ನು ದಲಿಯದಲ್ಲಿ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ಹೊಸ ಕುಮಾರರ ಪ್ರವೇಶ ದಲಿಯಗಳಲ್ಲಿ ಕಡಿಮೆ ಆಗಿದೆ. ಸಂಧಿ ಹೇಳುವವರ ಸಂಖ್ಯೆಯೂ ಕಡಿಮೆಯಾಗುತ್ತಾ ಬಂದಿದೆ. ಈ ಮಾತನ್ನು ಹೇಳುತ್ತಾ ಶ್ಯಾಮಶೆಟ್ಟಿಯವರು 'ನಾನು ನನ್ನ ತಾಯಿಯವರರಿಂದ ಈ ಸಂಧಿಯನ್ನು ಕಷ್ಟಪಟ್ಟು ಕಲಿತೆ. ಅದು ಮುಂದಿನ ಜನಾಂಗಕ್ಕೆ ಉಳಿಯಲಿ. ನನ್ನ ಅನಂತರವೂ ಇದು ಮುಂದಿನ ಜನಾಂಗಕ್ಕೆ ದೊರೆಯುವಂತಾಗಲಿ ಎಂದು ಉಡುಪಿಯವರಿಗೆ ದಾಖಲಾತಿಗೆ ಕೊಟ್ಟೆ. ಆದರೆ ನನ್ನ ಅನಂತರ ಈ ಪರಂಪರೆಯನ್ನು ಮುಂದುವರಿಸುವವರು ಕಾಣಿಸುತ್ತಿಲ್ಲ ಎಂದು ಹೇಳಿದರು. ಇತ್ತೀಚೆಗಿನ ಸಿರಿಜಾತ್ರೆಗಳಲ್ಲಿನ ಬೆಳವಣಿಗೆಗಳ ಬಗೆಗೆ ಕೇಳಿದಾಗ ಸಿರಿಗಳ ಸಂಖ್ಯೆ ಕಡಿಮೆಯಾಗುತ್ತಾ ಬರುತ್ತಿದೆ. ಜಾತ್ರೆಯಲ್ಲಿ ದರ್ಶನಾವೇಶದ ಅವಧಿ ಕಡಿಮೆಯಾಗಿದೆ. ನೋಡಲು ಬರುವವರ ಸಂಖ್ಯೆ ಇಳಿಮುಖವಾಗಿದೆ. ಹೆಚ್ಚಿನವರು ಕೈ ಹರಕೆ ಹಾಕಿ ಹೋಗುತ್ತಿದ್ದಾರೆ. ಆದರೆ ಎಂದಿಗೂ ಅವರನ್ನು ಸಿರಿ ಬಿಡುವುದಿಲ್ಲ. ಒಂದಲ್ಲ ಒಂದು ದಿನ ಅವರು ದಲಿಯಕ್ಕೇ ಬಂದೇ ತೀರಬೇಕು. ಇದೇ ಸ್ಥಿತಿ ಮುಂದುವರಿದರೆ ಸಿರಿಜಾತ್ರೆ ಕೊನೆಗೊಳ್ಳುವ ಸ್ಥಿತಿ ಬರಬಹುದೇ ಎಂದಾಗ ಖಂಡಿತಾ ಇಲ್ಲ. ಸಿರಿ ಭೂಮಿ ಉಂಟಾಗುವಾಗಲೇ ಸಿರಿಯೂ ಉದ್ಭವವಾಗಿದ್ದಾಳೆ. ನಮ್ಮ ಸಂತಾನ ಪರಂಪರೆ ಮುಂದುವರಿಯಬೇಕಾದರೆ ಆದಿ ಆಲಡೆ ಬೇಕೇ ಬೇಕು ಎನ್ನುತ್ತಾರೆ.

ಪರಾಮರ್ಶನ ಸಾಹಿತ್ಯ

1. ಡಾ. ಅಮೃತ ಸೋಮೇಶ್ವರ, 1997 : ತುಳು ಪಾಡ್ದನ ಸಂಪುಟ (ಸತ್ಯನಾಪುರತ ಸಿರಿ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.
2. ಡಾ. ಅಶೋಕ ಆಳ್ವ, 2009, ಸಿರಿ ಕಾವ್ಯಲೋಕ, ಕರ್ನಾಟಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.
3. ಡಾ. ಅಶೋಕ ಆಳ್ವ, ಬಂಟರ ಆಚರಣೆಗಳು, ಅಪ್ರಕಟಿತ.
4. ಡಾ. ಗಾಯತ್ರೀ ನಾವಡ, 2004 : ಸಿರಿಪಂಥ– ಮಹಿಳಾ ಸಬಲೀಕರಣ ಸಮಾಜೋ ಸಾಂಸ್ಕೃತಿಕ ಅಧ್ಯಯನ (ಮಣಿಪಾಲದ ಮಾಹೆ ಡೀಮ್ಡ್ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನ ಮಹಾಪ್ರಬಂಧ).ಅಪ್ರಕಟಿತ.
5. ಡಾ. ಗಾಯತ್ರೀ ನಾವಡ, 1999 : ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ಸಿರಿ ಪ್ರಕಾಶನ ಹೊಸಪೇಟೆ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.
6. ಪ್ರೊ. ನಾವಡ ಎ.ವಿ, 1999: ಗಿಡಿಕೆರೆ ರಾಮಕ್ಕ ಮುಗ್ಗೇರ್ತಿ ಕಟ್ಟಿದ ಸಿರಿ ಪಾಡ್ದನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.
7. ಪ್ರೊ. ನಾವಡ ಎ.ವಿ, 1997: ಅಕ್ಕೆರಸು ಸಿರಿ (ತುಳುವಿನಲ್ಲಿ ಸಿರಿ ಪಾಡ್ದನದ ಕಥಾನಿರೂಪಣೆ), ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.
8. ಪೊಳಲಿ ಶೀನಪ್ಪ ಹೆಗ್ಗಡೆ, 1991: ಪೊಳಲಿ ಶೀನಪ್ಪ ಹೆಗ್ಗಡೆ ಸಮಗ್ರ ಸಾಹಿತ್ಯ (ಅಕ್ಕೆರಸು ಪೂಂಜೆದಿ ಕತೆ), ಪೊಳಲಿ ಶೀನಪ್ಪ ಹೆಗ್ಗಡೆ ಜನ್ಮ ಶತಾಬ್ದ ಸಮಿತಿ.
9. ಬೋಳ ಚಿತ್ತರಂಜನದಾಸ ಶೆಟ್ಟಿ, 2008: ಬಿನ್ನೆದಿ– ತಮ್ಮಲೆ ಅರುವತ್ತ ಕಟ್ಟ್ ಸಿರಿ ಪಾಡ್ದನ (ಸಿರಿ ಕತೆಯನ್ನು ಪಾಡ್ದನ ಶೈಲಿಯಲ್ಲಿ ರಚಿಸಿದ ಸ್ವತಂತ್ರ ಕೃತಿ).
10. ಮ್ಯಾನರ್ ಎ. 1886 : ತುಳು ಪಾಡ್ದನೊಳು, ಬಾಸೆಲ್ ಮಿಶನ್ ಮಂಗಳೂರು.
11. ರಾವ್ ಎಸ್.ವಿ. 1984: ತುಳುನಾಡ ಸಿರಿ (ಸಿರಿ ಕತೆಯನ್ನು ಆಧರಿಸಿ ರಚಿಸಿದ ತುಳು ಕಾದಂಬರಿ), ಪ್ರಗತಿ ಪ್ರಕಾಶನ, ಬೆಂಗಳೂರು.
12. ಡಾ. ಇಂದಿರಾ ಹೆಗ್ಗಡೆ, 2012: ತುಳುವರ ಮೂಲತಾನ ಆದಿ ಆಲಡೆ– ಪರಂಪರೆ ಮತ್ತು ಪರಿವರ್ತನೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
13. ಡಾ. ಇಂದಿರಾ ಹೆಗ್ಗಡೆ, 2004, 2009 : ಬಂಟರು– ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರಕಾರ, ಬೆಂಗಳೂರು.
14. ಡಾ. ಅರುಣ್ ಕುಮಾರ್ ಎಸ್.ಆರ್. 2011 : ಸಿರಿ ಆಲಡೆಗಳು ಮತ್ತು ಆಚರಣೆಗಳು– ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ. ಅಪ್ರಕಟಿತ.
15. ಶೆಟ್ಟಿ, ಕೆ.ಜೆ. ಕಡಂದಲೆ, 1973: ತುಳುನಾಡ ಸಿರಿ, (ಸಿರಿ ಕತೆಯನ್ನು ಆಧರಿಸಿ ರಚಿಸಿದ ಕಾದಂಬರಿ), ಪ್ರಗತಿ ಪ್ರಕಾಶನ, ಬೆಂಗಳೂರು.
16. ಶೆಟ್ಟಿ, ಕೆ.ಜೆ. ಕಡಂದಲೆ, 1997: ಅಬ್ಬಗದಾರಗ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

17. ಪೀಟರ್ ಜೆ.ಕ್ಲಾಸ್ (ಅನುವಾದ: ಎ.ವಿ. ನಾವಡ, ಸುಭಾಶ್ಚಂದ್ರ), 1987: ತುಳುವ ದರ್ಶನ, ಪ್ರಾದೇಶಿಕ ವ್ಯಾಸಂಗ, ಕುಂದಾಪುರ.

18. ಹೆರಂಜೆ ಕೃಷ್ಣ ಭಟ್ ಮತ್ತು ಮುರಳೀಧರ ಉಪಾಧ್ಯ ಹಿರಿಯಡ್ಕ, (ಸಂ) 1995 : ಗೋವಿಂದ ಪೈ ಸಂಶೋಧನ ಸಂಪುಟ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ. ಉಡುಪಿ.

19. ಡಾ. ಉಪಾಧ್ಯಾಯ. ಯು.ಪಿ. (ಸಂ): 1988–1997: ತುಳು ನಿಘಂಟು, ಸಂಪುಟ 1–6, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

ಇಂಗ್ಲಿಷ್ ಕೃತಿಗಳು

20. Lauri Honko, 1998 : The Siri Epic as Performed by Gopala Naika – In collaboration with Chinnappa Gowda, Anneli Honko and Vivek Rai, Part 1 and 2, Folklore Fellows Communication, No 265, Helsenki.

21. Claus, Peter J. (1979) "Spirit Possession and the Spirit Mediumship from the Perspective of Tulu Oral Traditions " Culture, Medicine and Psychiatry, Dordrecht, Holland, and Boston: D. Reidel Publishing Co.

-------- "Terminological Aspects of Tulu Kinship: Kin Sets, and Kin Groups of the Matrilineal Castes," American Studies in the Anthropology of India

-------- "Mayndala: A Legend and Possession Cult of Tulunadu"

-------- "Interview: Folk performers have a dynamic relationship with other traditions…"

-------- "Comments: Mental Text"

-------- "Ritual Transforms a Myth"

------- "The Drama Unfolds: Tuluva Myth and Ritual in its Western Stage"

-------- "Cenne (Mancala) in Tuluva Myth and Cult"

22. Peter J. Clause, 2009, ' Future Research in Tulu Culture', ವ್ಯವಸ್ಥಾಪಕ ಸಮಿತಿ, ವಿಶ್ವ ತುಳು ಸಮ್ಮೇಳನೊ, ಉಜಿರೆ.

23. Heidrum Bruckner and B.A. Viveka Rai (Edited) 2017, Oral Traditions in South India (Essays on Tulu Oral Epics); Harrassowitz Verlag, Wiesbaden

ತುಳು ಯಕ್ಷಗಾನ ಪ್ರಸಂಗಗಳು

1. ತುಳುನಾಡ ಸಿರಿ : ಅಗರಿ ಶ್ರೀನಿವಾಸ ಭಾಗವತ – ಅಪ್ರಕಟಿತ
2. ತುಳುನಾಡ ಸಿರಿ : ನಾರಂಪಾಡಿ ಸುಬ್ಬಯ್ಯ ಶೆಟ್ಟಿ – ಅಪ್ರಕಟಿತ
3. ತುಳುನಾಡ ಸಿರಿ : ಡಿ.ವಿ. ಹೊಳ್ಳ – ಅಪ್ರಕಟಿತ
4. ತುಳುನಾಡ ಸಿರಿದೇವಿ : ಸೀತಾನದಿ ಗಣಪಯ್ಯ ಶೆಟ್ಟಿ – ಅಪ್ರಕಟಿತ

5. ತುಳುನಾಡ ಸಿರಿ : ಶೇಣಿ ಗೋಪಾಲಕೃಷ್ಣ ಭಟ್ ಮತ್ತು ಮಲ್ಪೆ ರಾಮದಾಸ ಸಾಮಗ – ಅಪ್ರಕಟಿತ

ಅಪ್ರಕಟಿತ ಸಿರಿಕಾವ್ಯಗಳು

1. ಶ್ರೀ ಶ್ಯಾಮರಾಯ ಶೆಟ್ಟಿಯವರು ಹಾಡಿರುವ ಸಿರಿಕಾವ್ಯ– 1999. ಆರ್. ಆರ್. ಸಿ. ಸಂಗ್ರಹ (ಶ್ಯಾಮರಾಯ ಶೆಟ್ಟಿಯವರು 2017 ರಲ್ಲಿ ನಿಧನರಾಗಿದ್ದಾರೆ)
2. ಶ್ರೀಮತಿ ರಾಮಕ್ಕ (ಕುಂಬಾರಕೊಪ್ಪ) ಹಾಡಿರುವ ಸಿರಿಕಾವ್ಯ– 2000. ಆರ್.ಆರ್.ಸಿ. ಸಂಗ್ರಹ
3. ಶ್ರೀಮತಿ ಲೀಲಾ ಶೆಡ್ತಿಯವರು ಹಾಡಿರುವ ಸಿರಿಕಾವ್ಯ– 2018, ಆರ್.ಆರ್.ಸಿ. ಸಂಗ್ರಹ.

ಸಂದರ್ಶನ ಮಾಹಿತಿಗಳು

1. ಶ್ರೀಯುತ ಅನಂತಪದ್ಮನಾಭ ಭಟ್, ಪ್ರಧಾನ ಅರ್ಚಕರು, ಶ್ರೀ ಅಬ್ಬಗದಾರಗ ಮಹಾಲಿಂಗೇಶ್ವರ ದೇವಸ್ಥಾನ, ಕವತಾರು , ಮಂಗಳೂರು ತಾಲೂಕು, 2.7. 2014.
2. ಶ್ರೀ ಶ್ಯಾಮರಾಯ ಶೆಟ್ಟಿ, ಮೂಲಕುಮಾರ ದರ್ಶನ ಪಾತ್ರಿ, ದರೆಗುಡ್ಡೆ, ಕಾರ್ಕಳ ತಾಲೂಕು, 19.11.2013.
3. ಶ್ರೀಮತಿ ಕರ್ಗಿ ಶೆಡ್ತಿ, ಮೂಲ ಸಿರಿದರ್ಶನ ಪಾತ್ರಿ, ಅತ್ರಿಜಾಲ್, ಬೆಳ್ತಂಗಡಿ ತಾಲೂಕು, 8. 11. 2013.
4. ಲೀಲಾಶೆಡ್ತಿ, ಅಬ್ಬಗ ದರ್ಶನ ಪಾತ್ರಿ, ಮಂಗಳೂರು ತಾಲೂಕು, 3.3. 2016
5. ಶ್ರೀ ಮುತ್ತಪ್ಪ ಕುಲಾಲ್, ಮೂಲಕುಮಾರ ಪಾತ್ರಿ, ಉರುಂಬಿದೊಟ್ಟು, ಬೆಳ್ತಂಗಡಿ ತಾಲೂಕು. 26.2. 2016
6. ಶ್ರೀಮತಿ ರತಿ, ಸಿರಿಪಾತ್ರಿ, ಕವತಾರು, ಮಂಗಳೂರು ತಾಲೂಕು, 16.4. 2015
7. ಶ್ರೀಮತಿ ಮೀನಾಕ್ಷಿ, ಸಿರಿಪಾತ್ರಿ, ಕವತಾರು , ಮಂಗಳೂರು ತಾಲೂಕು, 16.4.2015
8. ಶ್ರೀಮತಿ ನೀನಾ ನಿತ್ಯಾನಂದ, ಆಡಳಿತ ಮೊಕ್ತೇಸರರು, ಕವತಾರು ಆಲಡೆ, ಮಂಗಳೂರು ತಾಲೂಕು, 12.5.2014.
9. ಶ್ರೀ ಮಾಚಾರು ಗೋಪಾಲ ನಾಯ್ಕ, ಸಂದರ್ಶಕರು : ಡಾ. ಚಿನ್ನಪ್ಪ ಗೌಡ, 1993
10. ಶ್ರೀಮತಿ ರಾಮಕ್ಕ, ಬೆಳ್ತಂಗಡಿ ತಾಲೂಕು, 23. 1. 2000.
11. ಶ್ರೀಯುತ ಕುಟ್ಟಿ ಶೆಟ್ಟಿ, ಆಡಳಿತ ಮೊಕ್ತೇಸರ, ಪೇರೂರು ಆಲಡೆ, ಮಂಗಳೂರು ತಾಲೂಕು, 2016.

ಸಾಂಸ್ಕೃತಿಕ ಪದಕೋಶ

ಅಕಿಲಾಸ	– ದುಃಖ
ಅಗೆಲ್	– ಎಡೆ
ಅಡ್ಕಳ	– ಧಾರ್ಮಿಕ ಸಮಾರಂಭಗಳಲ್ಲಿ ಸಾಮೂಹಿಕ ಊಟದ ಅಡುಗೆಗಾಗಿ ನಿರ್ಮಿಸಿದ ತಾತ್ಕಾಲಿಕ ಅಡುಗೆಮನೆ
ಅಣಿ	– ಭೂತ ಕಟ್ಟುವವನು ಬಟ್ಟೆ, ಹಾಳೆ, ಲೋಹ ಗಳಿಂದ ನಿರ್ಮಿಸಿದ ಬೆನ್ನಿಗೆ ಕಟ್ಟಿಕೊಳ್ಳುವ ವಿಸ್ತಾರವಾದ ಪ್ರಭಾವಳಿಯಂಥ ರಚನೆ.
ಅನ್‌ಸೀರೆ	– ಪಟ್ಟೆಸೀರೆ
ಅರಸ್ತಾನ	– ಆಡಳಿತ, ಅಧಿಕಾರ
ಅರೆಮರೆ	– ಆಸೆ, ಬಯಕೆ
ಅಲ್ಕುಲ್ಕ್	– ಹೆದರಿಕೆ, ಭಯ
ಅಸನಂದಕೋಡಿ	– ಶವ ಸಂಸ್ಕಾರದ ಗದ್ದೆಯ ಒಂದು ತುದಿ
ಅಂಬೊಡಿ	– ಉತ್ಸವದ ಸಂದರ್ಭ ನಡೆಯುವ ಒಂದು ರೀತಿಯ ಅಣಕು ಕಾಳಗ
ಆಲಡೆ	– ಬ್ರಹ್ಮಸ್ಥಾನ, ಸಿರಿಗಳ ಆರಾಧನಾ ಸಂಕೀರ್ಣ. ಸಾಮಾನ್ಯವಾಗಿ ದೇವರು, ಬ್ರಹ್ಮ, ನಾಗ ಹಾಗೂ ಇತರ ದೈವಗಳಿರುವ ಜಾಗ
ಉರಿಸಿರಿ	– ಸುಖಕಷ್ಟ
ಎಣ್ಣೆಬೂಳ್ಯ	– ವೀಳ್ಯ ಹಾಗೂ ಎಣ್ಣೆ. ಸಾಮಾನ್ಯವಾಗಿ ಭೂತಾರಾಧನೆಯ ಸಂದರ್ಭ ನರ್ತಕನು ಭೂತಾರಾಧನೆ ನಡೆಸುವ ಮನೆತನದ ಯಜಮಾನನ ಕೈಯಿಂದ ವೀಳ್ಯ ಹಾಗು ಅಡಕೆಯೊಂದಿಗೆ ಬಟ್ಟಲಿನಲ್ಲಿ ಎಣ್ಣೆಯನ್ನು ಪಡೆದು ದೇಹದ ಮುಖ್ಯ ಭಾಗಗಳಿಗೆ ಸವರಿ ಮಿಂದು ಬರುವ ಪದ್ಧತಿ. ಭೂತಾರಾಧನೆಗೆ ಅನುಮತಿ ನೀಡುವ ವಿಧಿ.
ಎಲತ್ರ	– ಎಲೆವಸ್ತ್ರ, ತಲೆಗೆ ಸುತ್ತಿಕೊಳ್ಳಬಹುದಾದ ಬಣ್ಣದ ಬಟ್ಟೆ
ಒಕ್ಕೆತ್ರಿ	– ಬಂಟಕುಲ
ಒಕ್ಕೊ	– ಸೊಂಟ
ಒಲಿಮದೆಗುಂಡ	– ತೆಂಗಿನ ಮಡಲಿನಿಂದ ರಚಿತವಾದ ತಾತ್ಕಾಲಿಕ ಗುಡಿಯ ರಚನೆ. ಸಿರಿಗಳು ಆರಾಧನೆ ಮುಕ್ತಾಯಗೊಳಿಸುವ ಜಾಗ.

ಒಸಯೊ ಸಂಧಿ	– ಭೂತಕಲಾವಿದನು ಎಣ್ಣೆ ವೀಳ್ಯ ಪಡೆಯುವಾಗ ಅಥವಾ ಸ್ನಾನ ಮಾಡಿ ಬಂದು ಭೂತದ ಭಂಡಾರದ ಎದುರು ನಿಂತು ತೆಂಬರೆ ಬಾರಿಸುತ್ತಾ ಹಾಡುವ ಆವೇಶಭರಿತ ಸಂಧಿ.
ಓಡ ಮುಗ್ಗೇರ್ಲು	– ಮುಗ್ಗೇರ ಜಾತಿಯವರಲ್ಲಿ ಒಂದು ಪಂಗಡ
ಕಟ್ಟಪುಣಿ	– ಗದ್ದೆಯ ಬದಿಯ ಎತ್ತರವಾದ ಮತ್ತು ಅಗಲವಾದ ಅಂಚು, ಬದು
ಕಡಪು	– ಹೊಳೆ ದಾಟುವ ಸ್ಥಳ
ಕಡೆಕುಂಟು	– ಒಳ ಉಡುಪು
ಕವುಲೆ	– ವೀಳ್ಯದೆಲೆಯ ಇಪ್ಪತ್ತೈದರ ಒಂದು ಕಟ್ಟು
ಕಡ್ಸಲೆ	– ದೈವಾರಾಧನೆಯಲ್ಲಿ ಬಳಕೆಯಾಗುವ ಕತ್ತಿ
ಕರ್ಬಾಸ್	– ಒಂದು ತಳಿಯ ಎತ್ತು
ಕರಂಡೆ	– ಆಭರಣ ಪೆಟ್ಟಿಗೆ
ಕಲ್ಲ ಕಲೆಂಬಿ	– ಕಲ್ಲಿನ ಮಂಚದ ರೀತಿಯ ಪೆಟ್ಟಿಗೆ
ಕಲೆಕಾರ್ನಿಕ	– ಸ್ಥಳದ ಮಹಿಮೆ
ಕಲೆಪಿಲೆ	– ಅಪವಾದ, ತೇಜೋವಧೆ
ಕಾಟಿ	– ಕೋಣ, ಕಾಡುಕೋಣ
ಕಾಯ ಬುಡ್ದು ಕೈಲಾಸ ಸೇರುನಿ	– ಶರೀರ ತ್ಯಾಗಮಾಡಿ ಕೈಲಾಸ ಸೇರುವುದು
ಕಾರ್ಲ	– ಕಾರ್ಕಳ
ಕ್ಯಾಕಟಿ ಸೊರ್ಕುನಿ	– ಚೆನ್ನೆಯದ್ದೇ ರೀತಿಯ ಕ್ಯಾಕಟಿ ಎಂಬ ಆಟವಾಡುತ್ತಾ ಕೇಕೆ ಹಾಕಿ ನಗುವುದು
ಕುಡುಮ	– ಧರ್ಮಸ್ಥಳದ ಪ್ರಾಚೀನ ಹೆಸರು
ಕುಡುಂಬೆದಿ	– ಕ್ರಿಶ್ಚಿಯನ್ ಸ್ತ್ರೀ
ಕುದುರು	– ನೀರಿನಿಂದ ಸುತ್ತುವರಿದ ಪ್ರದೇಶ
ಕುರುವಯಿ	– ತೆಂಗಿನ ಎಳಗರಿಗಳನ್ನು ಕೊರೆಯುವ ಕಪ್ಪು ದುಂಬಿ
ಕೆಡ್ಡಾಸ	– ಭೂಮಿತಾಯಿಯ ಮುಟ್ಟಿನ ಆಚರಣೆಯಾಗಿ ತುಳು ನಾಡಿನಲ್ಲಿ ಆಚರಿಸುವ ಹಬ್ಬ
ಕೈ ಪತ್ತಾವುನಿ	– ಗಂಡ ಬಿಟ್ಟವಳಿಗೆ ಅಥವಾ ವಿಧವೆಗೆ ಮಾಡುವ ಮರುಮದುವೆ
ಕೂಟದ ಕಳ	– ವಿಚಾರಣೆ ನಡೆಸುವ ಹತ್ತು ಜನ ಗ್ರಹಸ್ಥರು ಸೇರಿರುವ ಕಳ. ಪಂಚಾಯತಿ ಚಾವಡಿ
ಕೊಜಿ	– ದೈವದ ಮಂಚದಲ್ಲಿ ನೀರಿಡಲು ಉಪಯೋಗಿಸುವ ಹೂಜಿಯಾಕಾರದ ಪಾತ್ರೆ.
ಕೈ ಪರಕೆ	– ಸಿರಿ ಆರಾಧನೆಯಲ್ಲಿ ಸಿರಿಗಳು ದರ್ಶನಾವೇಶಕ್ಕೆ ನಿಲ್ಲಲಾರದ ಸಂದರ್ಭ ಇದರ ತಪ್ಪಿಗಾಗಿ ದೇವರಿಗೆ ಒಪ್ಪಿಸುವ ಕಾಣಿಕೆ, ಹರಕೆ

ಕೊಡಿ	– ಪತಾಕೆ, ಧ್ವಜ
ಕೊಂಡಾಟೊ	– ಅತಿಪ್ರೀತಿ, ವಾತ್ಸಲ್ಯ.
ಕಂಗ್	– ಅಡಕೆ ಮರ
ಕಂಜಣ	– ಬಟ್ಟಲು
ಗದ್ದಿಗೆ	– ಗದ್ದುಗೆ, ಪವಿತ್ರ ಕಲಶ ಇಡುವ ಪೀಠ
ಗಾಲಿಪೇಂಟಿ	– ಒಂದು ವಿಧದ ಆಭರಣ ವಿಶೇಷ
ಗಿಂಡ್ಯೆ	– ಕೊಂಬುಳ್ಳ ಕಂಚಿನ ಪಾತ್ರೆ, ಗಿಂಡಿ
ಗುಂಡ	– ಗುಡಿ, ಸ್ಥಾನ
ಗೌಜಿಗೌನಾರ್	– ಅತಿಸಂಭ್ರಮ
ಚರು	– ಆರಾಧನೆಯ ಸಂದರ್ಭ ಉಪಯೋಗಿಸುವ ಅನ್ನ, ನೈವೇದ್ಯ
ಚಂದ್ರಾಯುದೊ	– ಚಂದಾಯುಧ, ಪಟ್ಟದ ಕತ್ತಿ
ಚಾಕಿರಿ	– ಸೇವೆ, ಚಾಕರಿ
ಚಿತ್ತೇರಿ	– ಬ್ರಹ್ಮಸ್ಥಾನ
ಚಿಲಿಂಬಿ	– ನೀರಿನ ಸಣ್ಣ ಚಿಲುಮೆ
ಜಾತಿ ಸಂಗತರು	– ಜಾತಿ ಸಂಗಾತಿಯರು (ಬಾಂಧವರು)
ಜೋಗೊ	– ಲೌಕಿಕ ಪ್ರಪಂಚ, ನಿಜರೂಪ
ತನುತಂಬಿಲ	– ನಾಗದೇವರಿಗೆ, ಎಳನಿರು, ಹಾಲೆರೆದು ಮಾಡುವ ಪೂಜೆ
ತಮೆರಿ	– ರಕ್ಷಕ
ತರೆತ್ರ	– ತಲೆಗೆ ಸುತ್ತಿಕೊಳ್ಳುವ ವಸ್ತ್ರ
ತೂಂಕನಂದಉಜ್ಜಾಲ್	– ತೂಗುಯ್ಯಾಲೆ
ತೆಂಡೆ	– ಮುಳ್ಳುಗಳಿಂದ ಕೂಡಿರುವ ಒಂದು ಜಾತಿಯ ಬಳ್ಳಿ
ತೊರಪು	– ನಿವಾಳಿಸು
ತಂದೇವು	– ಅಗಲ ಎಲೆಯ ಒಂದು ಜಾತಿಯ ಮರ
ತೆಂಬರೆ	– ಭೂತದ ಮೌಖಿಕ ಸಾಹಿತ್ಯವಾದ ಪಾಡ್ದನವನ್ನು ಹಾಡುವಾಗ ಹಿಮ್ಮೇಳದಲ್ಲಿ ಬಾರಿಸುವ ಚರ್ಮವಾದ್ಯ
ದಲಿಯ	– ಸಿರಿಗಳು ದರ್ಶನಾವೇಶಕ್ಕೆ ನಿಲ್ಲಲು ನೆಲಕ್ಕೆ ಹಾಸುವ ಬಿಳಿಯ ಬಟ್ಟೆ
ದಂಬೆಕಲ್ಲ್	– ದೇವಾಲಯಗಳಲ್ಲಿ ಮರದ ಧ್ವಜಸ್ತಂಭವನ್ನು ಉತ್ಸವ ಸಂದರ್ಭಗಳಲ್ಲಿ ನೆಟ್ಟಗೆ ನಿಲ್ಲಿಸಲು ಅನುಕೂಲವಾಗುವಂತೆ ನೆಟ್ಟಿರುವ ಕಗ್ಗಲ್ಲಿನ ಪೀಠ
ದಿಕ್ಕ್ ಮುತ್ತುನಿ	– ನಿರ್ನಾಮವಾಗುವುದು
ದೂಲೊಪ್ಪ	– ಶವಸಂಸ್ಕಾರ ಮಾಡಿದ ಜಾಗದಲ್ಲಿ ಮೂರು ಅಥವಾ ಐದನೆಯ ದಿನ ಬೂದಿ ಒಟ್ಟುಮಾಡಿ ಪೇರಿಸಿ ಗೋರಿಯಂತೆ ರಚಿಸುವ ವಿಧಿ.

ನೀರಪೆರತ್ತ – ಮೊದಲ ಋತುಮತಿಯಾದುದರ ಆಚರಣೆ
ನೋಕಟೆ – ಕೊಡಕಣೆ ಬಳ್ಳಿ
ಪಗರಿ – ಬಾಣ
ಪಗರ್ ಸಾಟೆ – ಒಂದು ಕುಟುಂಬದ ಅಣ್ಣತಂಗಿಯನ್ನು ಇನ್ನೊಂದು ಕುಟುಂಬದ ಅಣ್ಣತಂಗಿಯ ಜೊತೆಗೆ ಒಪ್ಪಂದದ ಮದುವೆ ಮಾಡುವ ಕ್ರಮ.
ಪಗ್ಗು – ಮೇಷ ಮಾಸ
ಪನೆತತ್ರ – ಹನೆಮರದ ಎಲೆಯಿಂದ ಮಾಡಿದ ಛತ್ರಿ
ಪಾಡ್ದನ – ಭೂತದ ಚರಿತ್ರೆಗಳನ್ನೊಳಗೊಂಡ ಕಥನಕಾವ್ಯ
ಪಾರ – ಕಾವಲು, ಬಂಧನ
ಪಾಲವೆರ್ – ಊರಿನ ಗಣ್ಯರು
ಪಾಲೆ ಪಿಂಗಾರ – ಹಾಳೆ ಹಿಂಗಾರ, ಅಡಿಕೆ ಹೂ
ಪಾವು – ಸೇರಿನ ನಾಲ್ಕನೆಯ ಒಂದು ಭಾಗ
ಪಾಸ್ ಪಲಾರೊ – ಉಪವಾಸದ ಆಚರಣೆ
ಪಿಲೆನೀರ್ – ಮೈಲಿಗೆ ನೀರು
ಪುಲ್ಲೆ – ಜಿಂಕೆ
ಪೆರಿಯ ಮುಂದಿಲ್ – ಮನೆಯ ಮುಂದಿನ ದೊಡ್ಡ ಅಂಗಳ
ಪಂಚಪರ್ವ – ವಿಶಿಷ್ಟ ಪರ್ವದಿನಗಳು
ಪಂಚೊಲಿ – ಪಂಚವಳ್ಳಿ ಎಂಬ ಒಂದು ಜಾತಿಯ ವೀಳ್ಯ
ಫರೆಂಗಿಕೊಡೆ – ಪೋರ್ಚುಗೀಸರಿಂದ ಬಂದಕೊಡೆ
ಪುರ್ಪ – ಪುಷ್ಪ. ಹೂ, ಸಿರಿ ಆರಾಧನೆಯಲ್ಲಿ ಅಡಕೆ ಹಿಂಗಾರಕ್ಕೆ ಈ ಹೆಸರು.
ಪೂವೆ – ಹುಣ್ಣಿಮೆಯ ಹಿಂದಿನ ದಿನ
ಬರ್ಪಣದ ಪಣವು – ಗಂಡನ ಮನೆಗೆ ತೊಟ್ಟಿಲ ಮಗುವನ್ನು ಬರಹೇಳುವ ಮೊದಲು ಹೆರಿಗೆಯ ಹಣವನ್ನು ಗಂಡನ ಮನೆಯವರು ಹೆಂಡತಿಯ ಮನೆಯವರಿಗೆ ನೀಡುವ ವಿಧಿ.
ಬಯಕೆ – ಸೀಮಂತ
ಬರಿಬಂದ್ರ – ಗೋತ್ರ, ವಂಶಾವಳಿ
ಬಲ್ಲೆ – ಪೊದರು
ಬಲ್ಯಾಯ – ಜ್ಯೋತಿಷಿ, ಶಕುನ ಹೇಳುವವ
ಬಳ್ಳ – ಎಂಟು ಕುಡ್ತೆಯ ಅಳತೆಯ ಮಾನ
ಬಾಜಿರ – ಮನೆಯ ಚಾವಡಿಯ ಅಂಚಿನಲ್ಲಿ ಕುಳಿತುಕೊಳ್ಳಲು ಉಪಯೋಗವಾಗುವಂತೆ ಹಾಸಿರುವ ಮರದ ಹಲಗೆ
ಬಾಯಿ – ಕ್ರಿಶ್ಚನ್ ಹೆಂಗಸು
ಬುಗುತಿ – ಬೂದಿ, ಭಸ್ಮ

ಬುಡುದಾರೆ – ವಿಧವೆ ಅಥವಾ ವಿಧುರನ ಮದುವೆ
ಬೂಡು – ಬೀಡು, ಗ್ರಾಮ ಅಥವಾ ಸೀಮೆಯ ಪ್ರತಿಷ್ಠಿತ ಮನೆತನ
ಬೆರ್ಮೆರ್ – ತುಳುನಾಡಿನಲ್ಲಿ ಪ್ರಸಿದ್ಧವಾಗಿ ಆರಾಧಿಸಲ್ಪಡುವ ದೇವರು
ಬೆರಂಬಿಲು – ಬ್ರಾಹ್ಮಣ, ಜ್ಯೋತಿಷಿ
ಬಂಗಬಾರೆ – ಒಂದು ವಿಧದ ಪದಾರ್ಥಕ್ಕೆ ಯೋಗ್ಯವಾದ ಬಾಳೆ, ಮಂಗಬಾರೆ?, ಅವುಂಡಬಾಳೆ
ಮಡಸ್ತನ – ಅಂತಸ್ತು, ಗೌರವ
ಮದಿಪು – ಮಾತು, ಅಹವಾಲು
ಮದ್ಮಾಯೆ – ಮದುಮಗ, ಪತಿ, ಗಂಡ
ಮದ್ಮಲಾಪಿನಿ – ಮೊದಲ ಬಾರಿಗೆ ಮುಟ್ಟಾಗುವುದು
ಮಾಟೆ – ಗುಹೆ, ದೊಡ್ಡ ಪೊಟರೆ
ಮಾಯ – ಕಣ್ಮರೆ, ಮಾಯಕ, ಅದೃಶ್ಯ
ಮುಗ – ಭೂತಾರಾಧನೆಯ ಸಂದರ್ಭ ಕಲಾವಿದನು ಮುಖಕ್ಕೆ ಕಟ್ಟಿಕೊಳ್ಳುವ ಮುಖವಾಡ
ಮುಕ್ಕಾಲ್ದಿ – ಭೂತಸ್ಥಾನದಲ್ಲಿ ಅರ್ಚನೆಯ ಅಧಿಕಾರ ಹೊಂದಿರುವವ.
ಮುತ್ತೇಸನ – ಮುತ್ತೈದೆತನದ ಕುರುಹಾಗಿ ಇರುವ ಕರಿಮಣಿ, ತಿಲಕ, ಕಾಲುಂಗುರ, ಮೂಗುತಿ ಹಾಗು ಕೈಬಳೆ
ಮುಂಡುಮಕ್ಕಲಿಗೆ – ಮೂರು ಕಾಲಿನ ಚಿಕ್ಕ ಸ್ಟೂಲು
ಮೊಜ – ಮೊರ
ಮೋಂದಲೆದೇಸೆ – ಮದುವೆ ಸಂದರ್ಭದಲ್ಲಿ ಮದುಮಗನಿಗೆ ಕ್ಷೌರಿಕ ಮುಖ ಹಾಗು ತಲೆಗೆ ಮಾಡುವ ಕ್ಷೌರದ ವಿಧಿ.
ಮಂಜ – ಮುಸ್ಸಂಜೆಯ ಹೊತ್ತು, ವಿಶೇಷವಾಗಿ ಸಿರಿ ಪರಿವಾರದ ಕುಮಾರ ಹಾಗು ಮುಗ್ಗೇರ್ಲು ದೈವಗಳಿಗೆ ಮುಸ್ಸಂಜೆ ಹೊತ್ತಲ್ಲಿ ಮಾಂಸಾಹಾರದ ಎಡೆ ಒಪ್ಪಿಸುವ ಆಚರಣೆ.
ರಕ್ಕೋಲೆ – ಆಡಳಿತ, ಉಸ್ತುವಾರಿ
ರಾಮಕೆಂಪು – ಒಂದು ಜಾತಿಯ ಮಾಣಿಕ್ಯ
ರುಂಡು – ಶಿರೋಭಾಗ
ರಂಡೆ ಕಳೆದ್ ಮುಂಡೆ ಮುಚ್ಚುನೆ– ಪಾತಿವ್ರತ್ಯ ಕಳೆದು ವಿಧವೆಯಾಗುವುದು
ಸತ್ತ್‌ಗುತ್ತು – ಪ್ರಧಾನ ಗುತ್ತುಮನೆತನಕ್ಕೆ ಪೂರಕವಾಗಿರುವ ಇನ್ನಿತರ ಗುತ್ತುಗಳು
ಸಾಟೆ – ಒಪ್ಪಂದ
ಸಾಯೆತಿಸನ್ನಾಯ – ವಸ್ತು ಪರಿಕರಗಳು

ಸಾಲೊಲಿ	– ಸಾಲುವಳಿ
ಸೀಗೆ	– ಸೀಗೆಕಾಯಿ
ಸುಗ್ಗಿ	– ಮೀನ, ಸೌರಮಾನದ ಹನ್ನೆರಡನೆಯ ತಿಂಗಳು
ಸುಡಲೆದಕಂಡೊ	– ಹೆಣ ಸುಡುವ ಗದ್ದೆ, ಶವಸಂಸ್ಕಾರದ ಗದ್ದೆ
ಸುಡುಸೂಕರಿ	– ಸುಟ್ಟು ಭಸ್ಮ, ಸುಟ್ಟು ಕರಕಲಾಗುವುದು
ಸೂಕೆ	– ದೃಷ್ಟಿ, ನೋಟ
ಸೂಡಿ	– ಬೈ ಹುಲ್ಲು, ಮುಳಿಹುಲ್ಲು, ಭತ್ತದ ಸಸಿ ಮೊದಲಾದವುಗಳ ಕಟ್ಟು.
ಸೂಲ ಬೂರುನಿ	– ನೋವು ಕಾಣಿಸಿಕೊಳ್ಳು, ಋತುಮತಿಯಾಗುವು ದರ ಸೂಚನೆ ಕಾಣಿಸಿಕೊಳ್ಳುವುದು
ಸೆರ	– ಅಂಗೈ
ಸೆರಸ್ರೆ	– ಪರದೆ, ತೆರೆ
ಸಂಗಡಿ	– ಸಹೋದರಿ
ಸಂತಾನದ ಕೊಡಿ	– ಸಂತಾನದ ಕುಡಿ
ಸಂದಿ	– ಗದ್ದೆಯಲ್ಲಿ ನೇಜಿ ನೆಡುವಾಗ ಅಥವಾ ಭೂತಾರಾಧನೆಯ ಸಂದರ್ಭ ಹಾಡುವ ಸಾಹಿತ್ಯ ಭಾಗ
ಹಕ್ಕ್ ಪಕ್ಕ್	– ಹಕ್ಕು, ನಿಯಂತ್ರಣ, ಅಧಿಕಾರ

ಸತ್ಯನಾಪುರದ ಅಜ್ಜನವರ ಪೂರ್ವ ವೃತ್ತಾಂತ;
ಲಂಕೆಲೋಕನಾಡಿನ ಜೀರ್ಣೋದ್ಧಾರ.
ಸಿರಿಯ ಹುಟ್ಟು; ಬಸಲೂರ ಕಾಂತುಪೂಂಜನ
ಜೊತೆಗೆ ಸಿರಿಯ ಮದುವೆಯ ಪ್ರಸ್ತಾವ. ಮದುವೆ;
ಸಿರಿ ಋತುಮತಿಯಾಗುವುದು.
ಗರ್ಭಿಣಿಯಾಗುವುದು. ಸೀಮಂತದ ಆಚರಣೆ;
ಸತ್ಯನಾಪುರದ ಅಜ್ಜನ ಮರಣ....
... ಅಶೋಕ ಆಳ್ವರು ಸಿರಿ ಕಾವ್ಯದ
ಬಹುಪಠ್ಯಗಳನ್ನು ಆಧಾರವಾಗಿ ಇಟ್ಟುಕೊಂಡು.
ಇವುಗಳ ಮೂಲಕ ತೌಲನಿಕ ಅಧ್ಯಯನದ
ಪ್ರಯತ್ನವನ್ನು ಶ್ರದ್ಧಾಪೂರ್ವಕ ಮಾಡಿದ್ದಾರೆ.
ಆಳ್ವರು ಅನೇಕ ಸಿರಿ ಪಠ್ಯಗಳನ್ನು
ಮುಖಾಮುಖಿಯಾಗಿಸಿ. ಸನ್ನಿವೇಶಗಳನ್ನು
ತುಲನೆ ಮಾಡಿರುವ ಕಾರಣ ಅಧ್ಯಯನದ ಹರಹು
ವಿಶಾಲವಾಗಿದೆ ಮತ್ತು ಸಂಕೀರ್ಣವಾಗಿದೆ.
ತುಳುವಿನ ಮೂಲ ಪಠ್ಯದ ಭಾಗಗಳನ್ನು ಕೊಟ್ಟು
ಅವುಗಳ ಕನ್ನಡ ಅನುವಾದವನ್ನು
ಕೂಡಾ ಕೊಟ್ಟಿರುವ ಕಾರಣ. ತುಳು ಮತ್ತು
ಕನ್ನಡದ ಸಂಶೋಧಕರು ಈ ಗ್ರಂಥದ ಅಧ್ಯಯನದ
ಪ್ರಯೋಜನವನ್ನು ಪಡೆಯಲು ಅವಕಾಶ ದೊರೆತಿದೆ.
ಹೀಗೆ ಬಹಳ ಸಮೃದ್ಧ ಮಾಹಿತಿಗಳು ಮತ್ತು
ಭಿನ್ನ ದೃಷ್ಟಿಕೋನಗಳು ಇಲ್ಲಿ ದೊರೆಯುವ ಕಾರಣ.
ಈ ಗ್ರಂಥವು ಮುಂದಿನ ಸಂಶೋಧನೆಗಳಿಗೆ ಮುಖ್ಯ
ಆಕರವಾಗುವ ಶಕ್ತಿಯನ್ನು ಹೊಂದಿದೆ.

ಪ್ರೊ. ಬಿ.ಎ. ವಿವೇಕ ರೈ

ಕರ್ನಾಟಕ
ತುಳು ಸಾಹಿತ್ಯ ಅಕಾಡ

ಬೆಲೆ : ರೂ. 350